ಕರ್ಮವೀರ
ದೀಪಾವಳಿ ಸಂಚಿಕೆ
೧೯೬೭
೨.೫೦
ರೂ.

ನಿಮ್ಮ ದಣಿವನ್ನಾರಿಸಿ
ನವಚೇತನಕ್ಕಾಗಿ
ಬಹುದಿನಗಳಿಂದಲೂ
ಜನಮನದಲ್ಲಿದ್ದ



ದರಬಾರ
ಬೀಡಿಗಳು

ದೀಪಾವಳಿಯು ನಮ್ಮೆಲ್ಲ
ಗ್ರಾಹಕವೃಂದಕ್ಕೆ
ಸುಖಶಾಂತಿ
ಸಂಪದಭಿವೃದ್ಧಿಯನ್ನೀಯಲಿ!

ಎಂ. ಎಲ್. ಖಡೇದ, ದರಬಾರ ಬೀಡಿ ಫ್ಯಾಕ್ಟರಿ, ನಿಪ್ಪಾಣಿ

ನಮ್ಮ ಗ್ರಾಹಕರಿಗೆ ಈ ದೀಪಾವಳಿಯು ಸುಖದಾಯಕವನ್ನೀಯಲಿ!

ಮೈಸೂರು ರಾಜ್ಯದ

ಮಾದರಿ ಆಟೋಮೊಬೈಲ್ ವರ್ಕಷಾಪ್

ಎಂ. ಜಿ. ಆಟೋ ಮೊಬೈಲ್ಸ್

ಆಟೋಮೊಬೈಲ್ ಎಂಜಿನೀಯರ್ಸ್ ಆ್ಯಂಡ್ ಕೋಚ್ ಬಿಲ್ಡರ್ಸ್

ಪಟೇಲ ನಗರ — ಬಳ್ಳಾರಿ

ದೀಪಾವಳಿಯ
ಶುಭಾಶಯಗಳು

ಅಧಿಕೃತ ಉತ್ಪಾದಕರು
ಹುಬ್ಬಳ್ಳಿ ಬಾಟಲಿಂಗ ಕಂ.ಪ್ರಾ.ಲಿ.,
೧೬/ಬಿ. ಗೋಕುಲ ರೋಡ - ಹುಬ್ಬಳ್ಳಿ

ಹತ್ತನೇ ವರ್ಷದಲ್ಲಿ ಕಾಲಿಟ್ಟಿದೆ

ಒಂದು ಲಕ್ಷಕ್ಕೂ ಮಿಕ್ಕಿ ಗ್ರಾಹಕರನ್ನು ತೃಪ್ತಿಪಡಿಸಿದೆ

ಅಶೋಕ ಹೋಟೆಲ್

ಲೆಮಿಂಗಟನ್ ರಸ್ತೆ

ಹುಬ್ಬಳ್ಳಿ

ಅತ್ಯಾಧುನಿಕ ವ್ಯವಸ್ಥೆಯ ಬೋರ್ಡಿಂಗ್ — ಲಾಜಿಂಗ್

• • •

ಸಾರ್ವಜನಿಕರಿಗೆಲ್ಲ

ದೀಪಾವಳಿಯ ಶುಭಾಶಯುಗಳು

• • •

ವಿಶಾಲವಾದ ಕೋಣೆಗಳು • **ಪೂರ್ಣ ಸೌಕರ್ಯಗಳು**

ಅಟಾಚ್ಡ್ ಬಾತ್‌ರೂಮುಗಳು • **ಪಾರ್ಕಿಂಗ್ ವ್ಯವಸ್ಥೆ**

ಫೋನ್: 2271 & 2272

ತಂತಿ: SAMRAT

ashok hotel

LAMINGTON ROAD, HUBLI. PHONE: 2271

ಅಲ ಸಮಯದಲ್ಲಿ
ಅಪಾರ ಜನಮೆಚ್ಚುಗೆಯನ್ನು ಪಡೆದ

ದೀಪಾವಳಿಯು ಸರ್ವರಿಗೂ
ಸುಖ ಸಂಪದಭಿವೃದ್ಧಿಯಾಗಲಿ !

ಅಪ್ಸರಾ

ಬಿನ್ನಿ ಬಟ್ಟೆಗಳ ಶೋ ರೂಮ್

ಬ್ರಾಡವೆ — **ಹುಬ್ಬಳ್ಳಿ** **Phone : 4092**

A SUBSIDIARY OF BINNY & CO (MADRAS) LTD
BANGALORE CITY

ನಮ್ಮಲ್ಲಿ ಬಿನ್ನಿಯ ಉಲನ್ ರಗ್ಗು, ಶಿಲ್ಕ ಶರ್ಟಿಂಗ್, ಟೆರಿಕಾಟ್
ಪ್ಯಾಂಟಿಂಗ್ ಅಂಗೋಲಾ, ಕಾಟ್ಸ್ವೂಲ್, ಟೆರಿವೂಲ್
ಸೂಟಿಂಗ್ ಹಾಗೂ ಬಿಂಟೆಕ್ಸ್

ಈ ಎಲ್ಲ ನಮೂನೆಯ ಬಟ್ಟೆಗಳಿಗಾಗಿ ಒಮ್ಮೆ ಅವಶ್ಯ ಸಂದರ್ಶಿಸಿರಿ !

ನಮ್ಮ ಎಲ್ಲಾ ಪ್ರೋತ್ಸಾಹಕರಿಗೂ ವ್ಯಾಪಾರಿಗಳಿಗೂ ಮತ್ತು ಹಿತೈಷಿಗಳಿಗೂ ಸಂತಸಕರ ದೀಪಾವಳಿ
ಮತ್ತು ಅಭ್ಯುದಯಕರ ಹೊಸ ವರ್ಷವನ್ನು ಕೋರುತ್ತೇವೆ !

ಲಕ್ಷೋಪ-ಲಕ್ಷ ಜನರ ಜನಪ್ರೀಯ
ಅಗರ ಬತ್ತಿಗಳು

ರಾಜಾರವರ ಅರ್ಪಣ್ ಅಮೀರಿ

ಸುಗಂಧ ಪರಿಮಳ ಬೀರುವ

ಅಂಬರ್ ● ರೋಹಿಣಿ
ಪುಷ್ಪತರಂಗ್ ● ರೋಹಿಣಿ

ಅಗರ ಬತ್ತಿಗಳು ಶಾಸ್ತ್ರೋಕ್ತವಾಗಿ ತಯಾರಿಸಲಾಗುತ್ತಿವೆ

ದಿ. ರಾಜಾ ಪರ್ಫ್ಯೂಮರಿ ವರ್ಕ್ಸ್

ಪೋಸ್ಟ್ ಬಾಕ್ಸ್ ನಂ ; 662. ಬೆಂಗಳೂರು—2 **Phone : 25681**

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ

ಕರ್ನಾಟಕ ಬ್ಯಾಂಕ ಲಿ.

ಮುಖ್ಯ ಕಚೇರಿ— ಡೊಂಗರಕೇರಿ, ಮಂಗಳೂರ-೩

– ಶಾಖೆಗಳು –

ಅಜ್ಜಂಪುರ
ಅರಕಲಗುಡ್ಡ
ಬೆಂಗಳೂರು
ಕ್ಯಾವ್ಹೆಲರೀ ರೋಡ
ಚಿಕ್ಕಪೇಟೆ
ಕೆಂಪೆಗೌಡಾ ರೋಡ
ನೆಹರೂನಗರ
ಬಾಳೆಹೊನ್ನೂರ
ಬನಹಟ್ಟಿ
ಬೆಳಗಾವಿ
ವಿಜಾಪೂರ
ಚಿಕ್ಕಮಗಳೂರು
ಚಿತ್ರದುರ್ಗ
ಕುಂದಾಪೂರ
ದಾಂಡೇಲಿ
ದಾವಣಗೆರೆ
ಧಾರವಾಡ
ಗದಗ

ಹರಿಹರ
ಹಾಸನ
ಹೊಳೆನರಸಿಪುರ
ಹೊನ್ನಾಳಿ
ಹೊಸದುರ್ಗ
ಹುಬ್ಬಳ್ಳಿ
ದುರ್ಗದಬೆಲ
ನ್ಯೂ ಕಾಟನ್–ಮಾರ್ಕೆಟ್
ಹುಣಸೂರು
ಜಮಖಂಡಿ
ಜಯಪುರ
ಕಳಸಾ
ಕಮ್ಮರಡಿ
ಕಾರ್ಕಳ
ಕೊಪ್ಪ
ಕೋಟಾ
ಕುಂದಗೋಳ
ಮದ್ರಾಸ

ಮಹಾಲಿಂಗಪೂರ
ಮಂಗಳೂರು
ಡೊಂಗರಕೇರಿ
ಹಂಪನಕಟ್ಟಾ
ಮೈಸೂರ
ನವಲಗುಂದ
ಪಣಂಬೂರ
ಪುತ್ತೂರು
ರಾಮನಗರಂ
ಸವಣೂರು
ಶಿಕಾರಿಪುರ
ಶಿವೊಗ್ಗಾ
ಶ್ರಿಂಗೇರಿ
ಶ್ರೀರಂಗಪಟ್ಟಣ
ಸುಂಟಿಕೊಪ್ಪ
ತಾಳೀಕೋಟಿ
ತರಿಕೆರೆ
ತುಮಕೂರು
ಉಡಿಪಿ

ಎಲ್ಲ ಬಗೆಯ ಬ್ಯಾಂಕಿನ ವ್ಯವಹಾರವನ್ನು ಕೈಕೊಳ್ಳಲಾಗುತ್ತಿದೆ

ಕೆ. ಎನ್. ಶಾಸ್ತ್ರಿ
ಜನರಲ್ ಮ್ಯಾನೇಜರ

ಕೆ. ಎಸ್. ಎನ್. ಅಡಿಗ
ಚೇರಮನ್

INDEX TO ADVERTISERS

Name of Advertisers	Page No.
Akalwadi Book Depot	xxxix
Apsara	iv
Ashok Hotel	iii
Bedekar & Co.	78
Bellary Agricultural Co-op. Marketing Stores Ltd.	134
Bellary Co-op. Stores Ltd.	123
Bharat Electronies Ltd.	34
Bank of India Ltd.	163
Bata Show Co.	171
Bank of Baroda Ltd.	175
Bhute Glass Traders	lx
B. Janardha Praubhu	xviii
Bharat Tile Factory	xxxii
Bangalore Type Foundry	xxvi
Bhide & Sons	xxxi
Bharathi Tile Factory & Saw Mills	xxxii
Bhadra Co-op. Stores Ltd.	xxxi
B. D. Ghodeke & Sons	xxxvi
Canara Bank Ltd.	xxxiii
Continental Shipping & Clearing Agency	xxxii
Canara Banking Corporatiou	105
Chamundeswari Engneering College	101
Carona Sahu Co.	177
C. C. Coffee & Co.	190
C. K. M. S. Ltd.	ix
Cubbanpark Restaurant	129
Diamand Textile Works	xxxvi
Davangere Urbun Co-op. Bank Ltd.	98
Dharwar Electrical Inds. Ltd.	xiii
Desai & Compeny	xv
Fargo Mantle	189
Geoffrey Manners	vi & 141
G. Mahadevappa & Brothers	108
Geeta Treders	vii
General Radio	169
Greenline Motors	xxi
Hubli Bottling Co.	ii
Hotel Gokul	118
H. M. Dasanakoppa & Sons	x
Hotel Gayatri	aii
Huthesha Motor Service	200
Handloom House	xxvi
Hangal Automobiles	xxxiv
Hubli Opticians	xxviii
Hubli Woodland	xxix
Indian Telphone Industries	184
I.A.E.C. (Mysore) Private Ltd.	xxii
Ideal Photo Zinco Works	xxix
Jayamani Enterprises	xxxii
Jgyashri Tackis	xxx
Janata Mill Stores	vii
Kirloskar Electric Co,	48
K. Y. Habib & Co.	73
Karnatak Engineering Works	30
Kale's Transport Service	166
Keshavlal & Co.	xxiii
Kripa Homeopathic	xxx
K. M. Javaraya & Sons	xxx
Kottureshwar Lorry Transport	xxxvi
K. P. C. Investments	xl
Kalleshwar Industrial	xi
Karnatak Bank Ltd.	v
Karnatak Homeopathic College	198
Khadi Gramodyoga	xxvii
K. S. Badri Narayan	xxvii
Lucky Distibutors	40
Lindner & Co.	192
Mysore State Co-op. Union Ltd.	135
Mysore Cental Co-op. Land Development Bank Ltd.	99
Maya Engineerig & Co.	29
M. B. Textile Centre	xv
Mysore Sales International Ltd.	xvi
Mysore Iron & Steel works	xvii
Mafatlal Groups	xiv
M. Ganapaya & Sons	200
M. G. Automobiles	i
Mysore Tea Supplies Co.	xxvi
Manoranjan Enterprices	xxxviii
Navajeevan Dispensary	xxiii
National Flag Perfumary Works	198
Navajecvan Sadi Works	vii
Nayak's Products	xxv
Omsun Engineering Co.	50
Odhavaji Moolaji Dresswala	xxxiv
P. V. S. Beedies	xxx
Parsuram Boarding Home	xxxvi
Paisons Coffee	xi
Prakash Home Industries	xiii
Praahat Studio	xiii
Patanawala E. S.	46
R. M. & Co.	116
Ravi Vegeteable Industries	187
Raja Perfumary Works	iv
Rajashri Picturs	xiv
Roopa Engineering	199
Remi Snow	187
Syndicate Band Ltd.	182
S. D. Meharwade & Sons	76
Shamanur Sangppa & Sons	140
Sovereign Beedi Factory	144
Sainath General Agencies	79
Sathe Biscuits	151
Shamanur Kallappa & Sons	30
Sharada Press	ix
Shri Venkatesh Bhavan	xiv
Srinivas Brothers	200
State Bank of Mysore	197
Sangam Engineering Works	197
Shri Rama Distributors	199
Sukhanivas	199
Shah Stationery Mart	xxv
Satkar Hotel	xxvii
Shri Satyanarayan Stores	xxxiv
Shanthi Agencies	xxxv
Swastik Mill Stores	xxxix
Shri Ramakrishna Oil Mills	155
Suvarna Mandir	xviii
Shankar Pharmacy	vii
The Vaishya Bank Ltd.	xxxix
The Modern Hindu Hotel	viii
Taranath Rasaushadhi	x
Triveni Handloom	xii
Triveni Cloth Stores	xviii
Udaya Cloth Stores	200
Vijaya Fartiliezer & Co.	71
Vijava Traders	xii
Venkatesh Cloth Stores	xxxi
Venkatesh Bhavan	xiv
Vivekanand Handloom Induries	vi
West Cost Paper Mills	75
Yajaman Gujjarappa & Sons	xxxiv

Cover pages

4th Cover: Mysore Govt. Silks
2nd Cover: Darbar Beedi Factory
3rd Cover: Bharat Beedi Works

ದೀಪಾವಳಿಯು ಎಲ್ಲ ಗ್ರಾಹಕರಿಗೂ ಸುಖಪ್ರದವಾಗಲಿ!

ಕಾಮಿನಿಯರ ಒನಪು ಒಯ್ಯಾರಕ್ಕಾಗಿ ಒಳ್ಳೇ ಆಕರ್ಷಕ

೮೦ ನಂಬರಿನ ಮೀನಾ ಪತ್ತಲು

ಭರಪೂರ ಉದ್ದ ಅಗಲಳತೆ ಪಕ್ಕಾ ಬಣ್ಣ-ತಾಳಿಕೆ ಇವುಗಳಲ್ಲಿ ಮಿಗಿಲಾದದ್ದು ವಿವೇಕಾನಂದ ಹ್ಯಾಂಡಲೂಮ್ ಇಂಡಸ್ಟ್ರೀಜ್ & ವೀವ್ಹಿಂಗ್ ಮಿಲ್ಸ್

ಈಚಲಕರಂಜಿ ... (ಕೊಲ್ಹಾಪುರ) ... ಫೋನ್ ೬೮

Vivekanand Handloom & Weaving Mills Ichalkaranji (Kolhapur) Phone: 68

ದೀಪಾವಳಿಯ ಶುಭಾಶಯಗಳು

ಫೋನ್: 74234

ಸೌಂದರ್ಯ ಸಾಧನೆಗಳಲ್ಲಿ
ಅತ್ಯಂತ ಹೆಸರುವಾಸಿಯಾದ
ಮತ್ತು ಬಳಕೆಯಲ್ಲಿರುವ

ನ್ಯಾಷನಲ್ (ರಿ) ರವರ

ನ್ಯಾಷನಲ್‌ರವರ (ರಿ) 'ಕಾಶ್ಮೀರ್' ಸ್ನೋ

ಏಜೆಂಟ್ಸ್:
ಗೀತಾ ಟ್ರೇಡರ್ಸ್
4th ಬ್ಲಾಕ್. ಜಯನಗರ,
ಬೆಂಗಳೂರು - 11

ದೀಪಾವಳಿಯ ಶುಭಾಶಯಗಳು ! | Phone : 140

ಪಾವರಲೂಮ ಹಾಗೂ ಹ್ಯಾಂಡಲೂಮ ಕಾರಖಾನದಾರರಿಗೆ

ನಮ್ಮಲ್ಲಿ ಎಲ್ಲ ಬಗೆಯ ಮಿಲ್ ಸ್ಟೋರ್ಸ್ ಸಾಮಾನುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ:- ಧೋಡಾ, ಪಿಕರ್ಸ, ಮಹಿಸೆಟ್, ತಾರೀ, ಹಾಗು ಸೂತಿಸೆಟ್, ಉತ್ತಮ ಇಂಗ್ಲೀಷ್ ಮತ್ತು ದೇಶೀ ಕಂಪನಿಯ ಪಾವರ ಮಗ್ಗದ ಸ್ಪೇರಪಾರ್ಟ್ಸ, ಕ್ಯಾನವಾಸ, ಲೇದರ ಪಟ್ಟಾ, ಇಂಜಿನ ಮತ್ತು ಬೆಲ್ಟ ಮಗ್ಗಕ್ಕೆ ಬರುವಂಥವು ದೊರೆಯುತ್ತವೆ. ಒಮ್ಮೆ ಖರೀದಿ ಮಾಡಿ ಪರೀಕ್ಷಿಸಿರಿ.

ಜನತಾ ಮಿಲ್ ಸ್ಟೋರ್ಸ್, ಈಚಲಕರಂಜಿ (ಜಿ. ಕೊಲ್ಹಾಪೂರ)

JANATA MILL STORES, ICHALKARANJI (Kolhapur Dt.)

ದೀಪಾವಳಿಯ ಶುಭಾಶಯಗಳು !

ನವಕರ್ನಾಟಕದ ನವಯುವತಿಯರಿಗೆ ಒಂದು ಕಿವಿಮಾತು

ಬೆಡಗುಗಾತಿಯರ ಬೆಡಗನ್ನು ಬೆಳಗಿಸುವ ೮೦ ನಂಬರಿನ ಲೋಕಪ್ರಿಯವಾದ

ಸ್ಕರ್ಟಬಾರ್ಡರಿನ ಪತ್ತಲಂಗಳು ಸಿಗುತ್ತವೆ !

ಭರಪೂರ ಉದ್ದಳತೆ, ಹೊಸ ಡಿಝಾಯಿನ್ ಹಾಗು ಪಕ್ಕಾ ಬಣ್ಣಗಳಿಗೆ

ನವಜೀವನ ಸಾಡಿ ವರ್ಕ್ಸ, ಈಚಲಕರಂಜಿ (ಜಿ. ಕೊಲ್ಹಾಪೂರ)

NAVAJEEVAN SADI WORKS, Ichalkaranji (Kolhapur Dt.)

Office Phone : 67 Factory Phone : 160

ನಮ್ಮ ಗ್ರಾಹಕರಿಗೆ

ದೀಪಾವಳಿಯ | ಶುಭಾಶಯಗಳು

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ

"ನವಜೀವ ಕಲ್ಪಂ" (ರಿ)

ಆಯುರ್ವೇದೀಯ ಟಾನಿಕ್

ಶಕ್ತಿವರ್ಧಕ, ಆರೋಗ್ಯದಾಯಕ, ಉಲ್ಲಾಸಕರ ಟಾನಿಕ್

ಖಾತರಿಯಾದ ಆಯುರ್ವೇದ ಔಷಧಿಗಳಿಗೂ ಮತ್ತು
ಪತ್ರ ವೈದ್ಯಕೀಯ ಸಲಹೆಗೂ ಇವರಿಗೆ ಬರೆಯಿರಿ.

SHANKAR PHARMACY
BHADRAVATI (MYSORE)

		ಪುಟ
ನಮ್ಮ ನುಡಿ		೧
ಟೇಲ್ ಎಾಯ್ ವಿ. ಕರ್ಷಿಯ: ಭೂರ್ಜವೃಕ್ಷಗಳು (ಕಥೆ)	ಶ್ರೀನಿವಾಸ	೨
ಕನ್ನಡವೇ ನಮ್ಮ ಶಿಕ್ಷಣ ಮಾಧ್ಯಮವಾಗಬೇಕು	ರಂಗನಾಥ ದಿವಾಕರ	೫
ಜೀವ ತಳೆದ ಶಿಲಾಪ್ರತಿಮೆ (ಕಥೆ)	ಭಾರತೀಸುತ	೬
ಹದಿನೈದು ವರ್ಷಗಳ ನಮ್ಮ ಗದ್ಯ ಸಾಹಿತ್ಯ	ಯು. ಆರ್. ಅನಂತಮೂರ್ತಿ	೧೨
ಬಾಡೀತು ನಿನ್ನ ಪೂಜೆಯ ಕುಸುಮ (ಕವನ)	ರಾಘವೇಂದ್ರ	೧೩
ಕನ್ನಡ ಸಣ್ಣಕತೆಗಳಲ್ಲಿ ನವ್ಯತೆ	ಶಾಂತಿನಾಥ ದೇಸಾಯಿ	೧೬
ಇತಿಹಾಸ ಬಟರು ನಾವು (ಕವನ)	ಇಟಗಿ ರಾಘವೇಂದ್ರ	೧೯
ಹೊಸ ಕಾವ್ಯದ ಒಗರು-ಹೊಗರು	ಚೆನ್ನವೀರ ಕಣವಿ	೨೦
ವಂಕಿ ಧೃತಿ (ಕವನ)	ಪು. ತಿ. ನ.	೨೨
ಕರ್ನಾಟಕದ ಕೆಲವು ಶಿಲ್ಪಗಳು	ಶಿವರಾಮ ಕಾರಂತ	೨೫
ದಕ್ಷಿಣಭಾರತದಲ್ಲಿ ದೀಪಾವಳಿ (ಸಚಿತ್ರ ಮಾಲಿಕೆ)	ಎಂ. ರಂಗರಾವ್	೩೧
ಶಿವನ ಡಂಗುರ (ಕವನ)	ಸಿಂಪಿ ಲಿಂಗಣ್ಣ	೩೫
ಬೆಳಕಿನ ಹಾಡು (ಕವನ)	ಶ್ರೀ ದೇವದತ್ತ	
ಬೆನ್ನು ಬಿಡದ ಬೇತಾಳ (ಹರಟೆ)	ರಾಮ ಹಾದ್ಲೂರ	೪೦
ಕಲ್ಲಿ (ಕವನ)	ಪೀ. ಪತಿ ರೆಡ್ಡಿ	೪೯
ಕೊಡೆಗಳು (ಕವನ)	ಚಂದ್ರಶೇಖರ ಪಾಟೀಲ	೫೧
ಕನ್ನಡ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ	ಜಿ. ನ ಮಂಗಳಾ	೫೨
ಜೀವ ಜ ದೀಪ (ಕವನ)	ಷಡಕ್ಷರಿ ಹಿರೇಮಠ	೫೯
ದಂಡನ ಫಲ (ಚಿತ್ರರೂಪಕ)	ಎಂ. ಟಿ. ವಿ ಆಚಾರ್ಯ	೬೧
ಟುರೊ ಪೆಟ್ಟಿಗೆ ತೆರೆದ (ಎಸ್ಯಗಾ. ಕಥೆ)	ನಿಸು ಸಂಗಮೇಶ	೬೨
ಹಗಲುಗನಸು	ದಾಮೋದರ ಬಾಳಿಗಾ	೬೪
ರೈಲುಬಂಡಿ (ಕವನ)	ದಿನಕರ ದೇಸಾಯಿ	೬೬
ಕಲಾವಿದನ ದೃಷ್ಟಿಯಲ್ಲಿ ನಾಟಕ ವಿಕಾಸ! (ವ್ಯಂಗ್ಯಚಿತ್ರಮಾಲಿಕೆ)	ಡಿಝು	೬೮
ಪಂಚತಂತ್ರದ ಮಂಗಲ	ಎಸ್. ಎಸ್. ಪ್ರಾಕನಾಳ	೭೦
ವರ್ಷಭವಿಷ್ಯ	ಕೃಷ್ಣಶಾಸ್ತ್ರಿ ಭಿಡೆ	೭೫
ಹಳ್ಳಿಯಿಂದ ದಿಲ್ಲಿಗೆ (ಕಾದಂಬರಿ)	ಸರೋಜ ನಾರಾಯಣರಾವ್	೮೦
ದೇಶದ್ರೋಹಿ (ಏಕಾಂಕ ನಾಟಕ)	ಅಹೋಬಲ ಶಂಕರ	೮೯
ಭಾರತದಲ್ಲಿ ಮೋಟರು ಉದ್ದಿಮೆ	ಎನ್. ಸಿ. ದೇಸಾಯಿ	೯೯
ಆಳು ನುಂಗಿ ನಗು ಒಮ್ಮೆ (ಏಕಾಂಕ ನಾಟಕ)	ಅಪ್ಪಾಸಾಹೇಬ ನಾಯಿಕ	೧೦೬
ಕೈಗಡ (ಹರಟೆ)	ಕೃಷ್ಣಮೂರ್ತಿ ಕಿತ್ತೂರ	೧೪೫
ವಿಶ್ವಸಂಚಾರಿಯ ಆತ್ಮಚರಿತ್ರೆ	ಜಿ. ಟಿ. ನಾರಾಯಣರಾವ್	೧೪೭
ಮೊದಲೇ ತಿಳಿದಿದ್ದರೆ (ಹರಟೆ)	ಶ್ರೀನಿವಾಸ ಕುಲಕರ್ಣಿ	೧೫೨
ತಟ್ಟದ ಶಾಪ (ಕಥೆ)	ವನಮಾಲಾ ಆಚಾರ್	೧೫೬
ಸಾಂಕ್ರಾಮಿಕ ಶೀಮೋಲ್ಲಂಘನ (ಹರಟೆ)	ಶ್ರೀರಂಗ	೧೬೦
ದೀಪಾವಳಿ ಸಂಭ್ರಮ (ವ್ಯಂಗ್ಯಚಿತ್ರಗಳು)	ಕೆ. ಆರ್. ಸ್ವಾಮಿ	೧೬೫
ಧಾರವಾಡದಲ್ಲಿ ದೀಪಾವಳಿ (ಸ್ಮೃತಿಕಥನ)	ಎನ್ಕೆ	೧೬೬
ಕಾಳ್ಗಿಚ್ಚು ಭುಗಿಲ್ಲೆಂದಿತು (ಕಥೆ)	ದ. ಲ. ಕೆರೂರ	೧೬೭
ಹರ್ಷನ ರತ್ನಾವಳಿ (ಚಿತ್ರರೂಪಕ)	ಪಿ. ಆರ್. ಪಿ.	೧೬೮
ಪ್ರಜಾಸತ್ತಾತ್ಮಕ ಸಮಾಜವಾದ	ಕು. ಜೆಗಲ್ ಶ್ರೀನಿವಾಸಶಾಸ್ತ್ರಿ	೧೮೨
ನನ್ನ ನಲ್ಮೆಯ ದೀಪಾವಳಿ	ವಿಜಯಲಕ್ಷ್ಮಿ	೧೮೫
ನಾನು ಬಯಸುವ ದೀಪಾವಳಿ	ಕಲ್ಯಾಣಕುಮಾರ್	೧೮೬
ಜ್ಞಾನದೀಪದ ದೀಪಾವಳಿ	ಆರ್. ಸುದರ್ಶನಂ	೧೮೭
ನನ್ನ ಕನಸಿನ ದೀಪಾವಳಿ	ದೊರೈರಾಜ್	೧೮೮
ಕನ್ನಡ ಚಿತ್ರರಂಗದಲ್ಲಿ ದೀಪಾವಳಿ	ಎಚ್. ಕೆ. ವಿಜಯನಾರಸಿಂಹ	೧೯೧
'ನಾವು ಸಮ ನಿಮಗೆ'- ಆಗ ದೀಪಾವಳಿ	ಎಂ. ಆರ್. ವಿಠ್ಠಲ್	೧೯೨
ಚಿತ್ರರಂಗದಲ್ಲಿ ನೃತ್ಯಗಳು	ಕೃಷ್ಣಕುಮಾರ್	೧೯೬

ಚುಟುಕುಗಳು: ಎಂ ಅಕಬರ ಅಲಿ ಮತ್ತು ಎಸ್ ದಿವಾಕರ

ವ್ಯಂಗ್ಯಚಿತ್ರಗಳು: ಡಿಝು ಮತ್ತು ಕೆ. ಆರ್. ಸ್ವಾಮಿ

ಚಿತ್ರಕಲೆ: ಟಿ.ಕೆ ರಾವ್ ಕೆ ಬಿ ಕುಲಕರ್ಣಿ ಮತ್ತು ಪಿ. ಆರ್ ಪಾಟೀಲ

ಮುಖಪುಟ : ಎಂ. ಟಿ ವಿ ಆಚಾರ್ಯ

Grams : MODERNOTEL

Phone : 24838

Wish you a happy Dipavali

At Bangalore make your stay worthwhile at

THE MODERN HINDU HOTEL

Anand Rao Circle :: Seshadri Road :: Bangalore City

The most reputed residential hotel of Bangalore with over sixty nine years standing

Founder : Sri K. T. Appannah

Propritors : B. A. Ramamurthi & Brothers

ಕರ್ಮವೀರ

ದೀಪಾವಳಿ ಸಂಚಿಕೆ ೧೯೬೭

ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು:
ಎಸ್. ವಿ. ಪಾಟೀಲ

ನಮ್ಮ ನುಡಿ

'ಕರ್ಮವೀರ'ನ ನಚ್ಚಿನ ಓದುಗರಿಗೆ ದೀಪಾವಳಿಯ ಈ ಶುಭಪ್ರದವಾದ ಸಂದರ್ಭದಲ್ಲಿ ಇಪ್ಪತ್ತನೆಯ ದೀಪಾವಳಿ ಸಂಚಿಕೆಯನ್ನು ತುಂಬ ಹರುಷದಿಂದ ಅರ್ಪಿಸುತ್ತಿದ್ದೇವೆ.

ನಮ್ಮ ರಾಷ್ಟ್ರೀಯ ಹಬ್ಬವೆನಿಸಿದ ದೀಪಾವಳಿ ನಕ್ಕು ನಲಿಯುವ ಹಬ್ಬವಾಗಿದ್ದರೂ ದೇಶದಲ್ಲಿ ತಲೆದೋರಿದ ಅಭಾವ ಪರಿಸ್ಥಿತಿ, ದೇಶದ ಗಡಿಗಳ ಮೇಲಿನ ಆಕ್ರಮಣ, ಆಂತರಿಕ ಕ್ಷೋಭೆ ಇವುಗಳಿಂದಾಗಿ ನಾಡಿನ ಜನರಲ್ಲಿ ಮುನ್ನಿನ ಹುರುಪು ಹುಮ್ಮಸ್ಸುಗಳು ಇರುವದಿಲ್ಲ. ಇದ್ದುದರಲ್ಲಿಯೇ ಸಮಾಧಾನದ ಸಂಗತಿಯೆಂದರೆ ಮಳೆರಾಯ ಸಕಾಲದಲ್ಲಿ ಎಲ್ಲ ಕಡೆಗೂ ಕೃಪೆ ಮಾಡಿರುವುದು. ಹುಲುಸಾದ ಬೆಳೆ ಬಂದು ಅಭಾವ ಪರಿಸ್ಥಿತಿ ನೀಗಬಹುದೆಂಬ ನಿರೀಕ್ಷೆ ಇದೆ. ನಮ್ಮ ಆರ್ಥಿಕ ಪರಿಸ್ಥಿತಿಯ ಮೇಲೆಯೂ ಕೆಲಮಟ್ಟಿಗೆ ಇದು ಸುಪರಿಣಾಮವನ್ನು ಬೀರಬಹುದು. ಇದೊಂದು ಆಶಾದಾಯಕವಾದ ಅಂಶವು.

ಇಂಥ ಸುಪ್ರಸಂಗದಲ್ಲಿ ನಮ್ಮ ಓದುಗರ ಸಾಹಿತ್ಯದ ಹಸಿವನ್ನು ತಣಿಸಲು ಸರಸ ಸಾಹಿತ್ಯದ ರಸದೂಟವನ್ನು ಈ ದೀಪಾವಳಿ ಸಂಚಿಕೆಯಲ್ಲಿ ನೀಡಿದ್ದೇವೆ. ಸರಸ ಸಾಮಾಜಿಕ ಕಾದಂಬರಿ, ಕಿರುಗತೆಗಳು, ಕವನಗಳು, ನಕ್ಕುನಗಿಸುವ ಹರಟೆಗಳು, ಎಳೆಯರಿಗಾಗಿ ವಿಶೇಷ ಲೇಖನಗಳು, ತಾರೆಯರು ಕನಸು ಕಂಡ ದೀಪಾವಳಿ ಹೀಗೆ ವಿವಿಧ ರೀತಿಯ ಸಾಹಿತ್ಯವನ್ನು ನಮ್ಮ ಓದುಗರಿಗೆ ಇಲ್ಲಿ ಒದಗಿಸಿದ್ದೇವೆ. ಪ್ರಸಿದ್ಧ ವ್ಯಂಗ್ಯ ಚಿತ್ರಗಾರ ಡಿಝು ಅವರ ವ್ಯಂಗ್ಯ ಚಿತ್ರಗಳು ಈ ಸಲದ ಇನ್ನೊಂದು ವಿಶೇಷವೆನಿಸಿವೆ. ನಮ್ಮ ಓದುಗರು ಎಂದಿನಂತೆ ಸಹೃದಯತೆಯಿಂದ ಈ ಸಂಚಿಕೆಯನ್ನು ಬರಮಾಡಿಕೊಳ್ಳುವರೆಂಬ ಭರವಸೆ ನಮಗಿದೆ.

ಈ ಸಂಚಿಕೆಗಾಗಿ ಸಕಾಲಕ್ಕೆ ಲೇಖನಗಳನ್ನು ಕಳಿಸಿದ ನಮ್ಮ ಲೇಖಕರಿಗೂ ಇದನ್ನು ಸರ್ವಾಂಗ ಸುಂದರವಾಗಿ ಮಾಡಲು ಸಹಾಯ ಸಹಕಾರ ನೀಡಿದ ಇತರರಿಗೂ, ಅದೇ ರೀತಿ ಜಾಹೀರಾತುಗಳನ್ನು ಕೊಟ್ಟು ಸಹಕರಿಸಿದ ಜಾಹೀರಾತುದಾರರಿಗೂ ನಮ್ಮ ಅನಂತ ವಂದನೆಗಳು.

ದೀಪಾವಳಿಯ ಈ ಶುಭ ಸಂದರ್ಭವು ನಮ್ಮ ಓದುಗರಿಗೂ ಇನ್ನಿತರರಿಗೂ ಸರ್ವ ರೀತಿಯಿಂದಲೂ ಮಂಗಳವುಂಟುಮಾಡಲಿ.

— ಸಂಪಾದಕ

ಟಾಲ್‌ಸ್ಟಾಯ್ ಮಹರ್ಷಿಯ ಭೂರಾಜ್ಯ ವ್ಯಥೆಗಳು

ಶ್ರೀನಿವಾಸ

ಶ್ರೀಮಂತರ ಮಗನಾಗಿ [illegible] ತರುಣನ [illegible] ನಡೆಸಿ, ಯೋಧನಾಗಿ ಕೀರ್ತಿ ಪ[illegible] ಉತ್ತಮ ಗ್ರಂಥಗಳನ್ನು ರಚಿಸಿ, ಸಾಹಿತ್ಯ ಕೇಸರಿ ಎಂಬ ಖ್ಯಾತಿಯನ್ನು ಗಳಿಸಿ, ಪಿತ್ರಾರ್ಜಿತವಾದ ಆಸ್ತಿಯ ಒಡೆಯನಾಗಿ ಅದನ್ನು ಅಭಿವೃದ್ಧಿಪಡಿಸಿ, ಸಂಸಾರಿಯಾಗಿ ಬಾಳಸುಖವನ್ನು ಸವಿದು ತಣಿದು, ಪ್ರಭು ಲಿಯೋ ಟಾಲ್‌ಸ್ಟಾಯ್ ಮಧ್ಯವಯಸ್ಸಿನಲ್ಲಿ ತನ್ನ ಜೀವನವನ್ನು ಕುರಿತು ತುಂಬ ಬೇಸರಗೊಂಡನು. ಪ್ರಾಣವನ್ನು ಕಳೆದುಕೊಳ್ಳುವುದು ಒಂದೇ ಸಮಾಧಾನಕ್ಕೆ ಮಾರ್ಗ ಎಂಬ ಮಟ್ಟಿಗೆ ತೀವ್ರವಾದ ವೈರಾಗ್ಯಕ್ಕೆ ತುತ್ತಾದನು.

ಸಂಪ್ರದಾಯದ ಆಸ್ತಿಕ ಮನೋಧರ್ಮದ ಸಂಸಾರದಲ್ಲಿ ಬೆಳೆದ ತರುಣ ವಿದ್ಯೆಯ ದಿನಗಳಲ್ಲಿ ವಿಚಾರದಲ್ಲಿ ತೊಡಗಿ ವಿಚಿಕಿತ್ಸೆಗೆ ಎಡೆಗೊಟ್ಟು ದೇವರಿಲ್ಲ ಎಂಬ ನೆಲೆಗೆ ಬಂದನು. ಈ ನೆಲೆಯಲ್ಲಿ ಜೀವಿಸುವುದು ಅಸಾಧ್ಯವೆಂದು ಮನದಟ್ಟಾಗಿ ಜೀವನದ ವಿಷಯವಾಗಿ ಜನಸಾಮಾನ್ಯರ ಮನೋಧರ್ಮ ಒಂದೇ ಸರಿಯಾದ ಮನೋಧರ್ಮ ಎಂದು ನಿಶ್ಚಯಮಾಡಿಕೊಂಡನು.

ಸಿರಿವಂತ ಸುಖಜೀವಿ ಆರೋಗ್ಯವಂತರಾದ ಜನರು ಅತೃಪ್ತರಾಗಿ ಕಷ್ಟದಲ್ಲಿ ತೊಳಲುತ್ತಿರುವಲ್ಲಿ, ದರಿದ್ರ ಕಷ್ಟಜೀವಿ ಅನಾರೋಗ್ಯವಂತರಾದ ಸಾಮಾನ್ಯ ಜನ ಇದೇ ಜೀವನ ಎಂದು ತಮ್ಮ ಬಾಳುವೆಯನ್ನು ಹರ್ಷದಿಂದ ಒಪ್ಪಿರುತ್ತಾರೆ. ಇದೇ ಸರಿಯಾದ ಮನೋಧರ್ಮ; ಜೀವನವೇ ದೈವ; ಒಪ್ಪಿಗೆಯೇ ಜಾಣ್ಮೆ; ಇದು ಪ್ರಭುವಿಗೆ ನಿತ್ಯ ನಿಶ್ಚಲ ಸತ್ಯ ಎಂದು ಕಂಡಿತು

ಇಂಥ ಸರಳ ಚೇತನರನ್ನು ದಾಸ್ಯದಲ್ಲಿರಿಸಿ ತನ್ನಂತಹ ಸಿರಿವಂತ ಜನ ಅವರ ಬಹುಸಂಖ್ಯೆಯ ದುಡಿಮೆಯನ್ನು ತಮ್ಮಂಥ ಕೆಲವೇ ಜನರ ಉಪಯೋಗಕ್ಕೆ ವಿನಿಯೋಗಿಸುತ್ತ ಈ ಅನ್ಯಾಯ ಸ್ಥಿತವಾಗಲೆಂದು ಆಸ್ತಿ ಮಾಡುವುದು, ಅದನ್ನು ಭದ್ರಪಡಿಸುವುದಕ್ಕೆ ಕಾಯಿದೆಗಳನ್ನು ನಿರ್ಮಿಸುವುದು. ಅದನ್ನು ನಡೆಸಲು ಜಾಣರೂ ಅಲ್ಪಸಂಖ್ಯಾಕರೂ ಆದ ತಮ್ಮದೇ ಸರಕಾರವನ್ನು ರಚಿಸುವುದು, ಅದು ಆಳಲು ಸಾಧ್ಯವಾಗಲೆಂದು ಸೈನ್ಯವನ್ನು ಬಳಸುವುದು; ಈ ರೀತಿ ರಾಷ್ಟ್ರಗಳಾಗಿ, ರಾಷ್ಟ್ರಗಳು ಹಲವದರ ಮಧ್ಯೆ ವಿವಾದ ಬಂದಾಗ ಸಂಗ್ರಾಮಗಳನ್ನು ಆರಂಭಿಸುವುದು: ಈ ಕ್ರಮ ನಾಗರಿಕತೆಯ ವ್ಯಾಧಿಯಾಗ ಬಿಟ್ಟಿದೆ. ಇದು ಕೊನೆಗಾಣದೆ ಮನುಜವರ್ಗಕ್ಕೆ ಕ್ಷೇಮ ಇಲ್ಲ; ಇದು ಪ್ರಭುವಿನ ಕಡೆಯ ನಿರ್ಧಾರವಾಯಿತು.

ಎಂದರೆ, ಆಸ್ತಿ ಮನುಜಕುಲದ ಕ್ಷೇಮಕ್ಕೆ ಅಪಾರದ ಮೊದಲ ಕುತ್ತು.

ಎಂದ ಮೇಲೆ ತಾನು ಇನ್ನು ಮುಂದೆ ತನ್ನ ಪಿತ್ರಾರ್ಜಿತವಾದ ಆಸ್ತಿಯನ್ನು ಬಳಸಬಾರದು. ತಾನು ಗಳಿಸಿದ್ದ ಆಸ್ತಿಯನ್ನಾದರೂ ತನ್ನದೆಂದು ಇರಿಸಿಕೊಳ್ಳಲಾಗದು; ತಾನು ಬರೆದ ಪುಸ್ತಕಗಳನ್ನು ತನ್ನವೆಂದು ಇರಿಸಿಕೊಂಡು ಬೇರೆಯವರು ಅದನ್ನು ಅಚ್ಚು ಮಾಡಲು ಅಡ್ಡಿಯಾಗಬಾರದು, ಮುಖ್ಯ ಇನ್ನು ಮುಂದೆ ಇದು ನನ್ನದು ಎಂದು ಏನನ್ನೇ ಆಗಲಿ ಎಣಿಸಕೂಡದು.

ಈ ನಿಶ್ಚಯಕ್ಕೆ ಬಂದವನೆ ಟಾಲ್‌ಸ್ಟಾಯ್ ಪ್ರಭು, ಈ ಎಲ್ಲ ರೂಪದ ಆಸ್ತಿಯನ್ನೂ ನಾನು ತೊರೆದಿದ್ದೇನೆ ಎಂದನು. ಇದನ್ನು ಲೋಕ ತಿಳಿಯಲಿ ಎಂದು ಪ್ರಕಟ ಮಾಡಿದನು. ತಾನು ಪಾಶ್ಚಾತ್ಯಲೋಕದ ಆಧುನಿಕಯುಗದ ಸಂತನಾದನು. ಪ್ರವಾದಿಯೆನ್ನಿಸಿಕೊಂಡನು ತನ್ನಂತೆ ಇತರ ಆಸ್ತಿವಂತರೂ ನಡೆಯಬೇಕು. ಲೋಕದ ಸ್ಥಿತಿಯನ್ನು ಚೆನ್ನ ಮಾಡಬೇಕು ಎಂದು ಬಯಸಿದನು; ಬಹು ಜನ ಹೀಗೆಯೇ ಮಾಡಿಯಾರು ಎಂದು ನಿರೀಕ್ಷಿಸಿ ಸಮಾಧಾನ ಕಂಡನು.

ಲೋಕದ ವಿಚಾರವಂತ ಜನ ಪ್ರಭುವಿನ ಮನಸ್ಸು ಅಕುಟಿಲ ಎನ್ನುವುದನ್ನು ಕಂಡರು; ಇವನ ಭಾವನೆ ಉದಾತ್ತ ಎಂದು ಒಪ್ಪಿದರು. ಇವನ ತ್ಯಾಗವನ್ನು ಮೆಚ್ಚಿದರು ಹೊಗಳಿದರು ಆದರೆ ಬಹುಜನ ಇವನು ಹಿಡಿದ ದಾರಿಯನ್ನು ಹಿಡಿಯಲಿಲ್ಲ ಜೀವನದಲ್ಲಿ ಈ ನಿಲುವು ವ್ಯಕ್ತಿಗೆ ಸಾಧ್ಯವಾದ ನಿಲುವು ಹೊರತಾಗಿ ಒಂದು ಜನಸಮುದಾಯ ವರಿಸಬಹುದಾದ ನಿಲುವಲ್ಲ. ನನ್ನ ಕೈಯಿಂದ ಹಿಡಿದ ಅನ್ನ ನನ್ನದು ಎನ್ನುವುದು ತಪ್ಪಾದರೆ ಯಾವನೇ ಆಗಲಿ ಊಟ ಮಾಡಬಹುದು ಹೇಗೆ? ಉಳಿದವರು ಹಾಗಿರಲಿ. ಮಹರ್ಷಿಯ ಮನೆಯಲ್ಲೇ ಈ ತತ್ತ್ವ ನೂರಕ್ಕೆ ನೂರು ಪಾಲು ನಡೆಯುವಂತಿರಲಿಲ್ಲ. ಪಿತ್ರಾರ್ಜಿತ ಆಸ್ತಿ ಕೂಡದು. ತಾನು ಗಳಿಸಿದ ಆಸ್ತಿ ಕೂಡದು ತನ್ನ ಪುಸ್ತಕಗಳ ಮೇಲೆ ಸ್ವಾಮ್ಯದ ಕಾಣಿಕೆ ಕೂಡದು. ತನ್ನದು ಎಂದು ಪರಿಮಾಣ ಕೂಡದು. ಮನೆಯೊಳಗಿನ ದಿನದಿನದ ಜೀವನ ನಡೆಯುವುದು ಹೇಗೆ?

ಒಬ್ಬನಿದ್ದರೆ ನಾನು ಹಸಿದುಕೊಂಡಿರುತ್ತೇನೆ ಎನ್ನಬಹುದು. ಟಾಲ್‌ಸ್ಟಾಯ್ ಮನೆಯಲ್ಲಿ ಅದುವರೆಗೆ ಸುಖವಾಗಿ ಬಾಳಿಕೊಂಡು ಬಂದಿದ್ದ ಅವನ ಪತ್ನಿ ಸೋಫಿಯಾತಾಯಿ ಇದ್ದಳು. ಇವರ ಮಕ್ಕಳು ಮೂವರು ತರುಣರು, ಮೂವರು ತರುಣಿಯರು ಇದ್ದರು. ಪುಣ್ಯವಂತ ಮನೆತನಗಳ ವಾಡಿಕೆಯಂತೆ ಆಶ್ರಿತರಾದ ಬಂಧುಗಳು ಇದ್ದರು. ಪ್ರಸಿದ್ಧ ಲೇಖಕನ ಪರಿಚಯದ ಲೇಖಕರು ಬಂದು ಹೋಗುತ್ತಿದ್ದರು. ಇವರಲ್ಲಿ ಹಲವರು ಬಡತನದಿಂದ ಕಂಗೆಟ್ಟ ಜನ; ಈ ನೆರಳ ಸುಖವನ್ನು ಇಲ್ಲಿ ಬಿಟ್ಟರೆ ಬೇರೆ ಕಡೆ

ಣಲಾರದವರು. ಇವರೆಲ್ಲ ದಿನವೂ ಪಾಡಿಕೆಯ ಊಟ ಮಾಡಬೇಕು; ಪಾಡಿಕೆಯ ಸುಖದಲ್ಲಿ ಬಾಳಬೇಕು. ಇದನ್ನು ನಡೆಸಲು ದಾರಿಯೇನು?

ಪ್ರಭುಪತ್ನಿ ಸೋಫಿಯಾದೇವಿ ಗಂಡ ಹೇಳಿದ್ದು ಹೇಳಲಿ, ಈ ಆಸ್ತಿ ಈ ವರಮಾನ ಇಲ್ಲದಿದ್ದರೆ ಇವರು ಯಾರೂ ಉಳಿಯುವಂತಿಲ್ಲ. ಗಂಡನೇ ಬಾಳುವಂತಿಲ್ಲ ಎಂದು ನಿಶ್ಚಯಿಸಿಕೊಂಡಳು. ಇವನು ಆಸ್ತಿ ಬೇಡವೆನ್ನಬಹುದು. ನಾನು ಹಾಗೆಂದಾಯಿತೇ? ಮಕ್ಕಳು ಹಾಗೆ ಎನ್ನಬೇಕೇ? ಹೀಗೆಂದು ಆಕೆ ಗಂಡ ತನ್ನ ಕೈಯಿಂದ ಬಿಟ್ಟುಕೊಟ್ಟ ವ್ಯವಹಾರಸೂತ್ರವನ್ನು ತನ್ನ ಕೈಗೆ ತೆಗೆದುಕೊಂಡಳು. ಮಹರ್ಷಿ ತನ್ನ ದರ್ಶನವನ್ನು ಪ್ರತಿಪಾದಿಸಿ ಅದರಂತೆ ನಡೆಯತೊಡಗಿದ. ಒಡನೆಯೇ ಅವನ ಪ್ರತಿಯಾಗಿ ತಾನು ಆಸ್ತಿಯನ್ನು ರೂಢಿಸಿ ಗಂಡನನ್ನು ಮಕ್ಕಳನ್ನು ಬಂಧುಗಳನ್ನು ಅತಿಥಿ ಮಿತ್ರರನ್ನು ನೋಡಿಕೊಳ್ಳಲು ಮೊದಲು ಮಾಡಿದಳು.



ಈ ಮಿತ್ರರಲ್ಲಿ ಮೂವರು ಚೆರ್ಟ್‌ಕಾಫ್, ಗಾರ್ಕಿ, ಸೂಲರ್ ಜಿಟ್ಸ್‌ಕೀ. ಚೆರ್ಟ್‌ಕಾಫ್ ಅತ್ಯುಗ್ರ ಸಮತಾವಾದಿ. ಆಸ್ತಿ ಸಮಾಜವನ್ನು ಹಾಳುಮಾಡಿರುವ ವ್ಯವಸ್ಥೆ ಎನ್ನುವುದು ಇವನದೂ ದೃಢವಾದ ನಂಬಿಕೆ. ಟಾಲ್‌ಸ್ಟಾಯ್ ಪ್ರತಿಪಾದಿಸಿದ್ದ ಸ್ವಾಮ್ಯ ವಿರುದ್ಧವಾದವನ್ನು ಎತ್ತಿ ಹಿಡಿಯುವವರಲ್ಲಿ ಇವನು ಪ್ರಮುಖ. ಗಾರ್ಕಿ ಸಹ ಆಸ್ತಿಗೆ ವಿರೋಧಿಯೇ. ಆದರೆ ಆಸ್ತಿ ಇರಲಿ ಎನ್ನುವವರು ಆಸ್ತಿಯ ವ್ಯವಸ್ಥೆಯನ್ನು ದುರುಪಯೋಗ ಮಾಡುವಂತೆ ಆಸ್ತಿ ಬೇಡ ಎನ್ನುವ ಈ ಹೊಸಬರೂ ತಮ್ಮ ನೀತಿಯನ್ನು ದುರುಪಯೋಗ ಮಾಡುತ್ತಾರೆ ಎನ್ನುವುದು ಇವನ ನಿಲುವು. ಸೂಲರ್ ಜಿಟ್ಸ್‌ಕೀ ಸ್ವಲ್ಪ ಇತ್ತ ಸ್ವಲ್ಪ ಅತ್ತ ಒಲೆಯುತ್ತ ಈ ಎರಡು ನಿಲುವಿನ ಮಧ್ಯೆ ನಿಂತವನು.

ಪ್ರಭುವಿನ ನಿವಾಸದ ಬಳಿ ಒಂದು ಭೂರ್ಜವನ ಇದ್ದಿತು. ಆ ಸ್ಥಳ ಈ ಮರಗಳಿಗೆ ತುಂಬ ಅನುಕೂಲವಾಗಿದ್ದಿರಬೇಕು. ಟಾಲ್‌ಸ್ಟಾಯ್ ತರುಣನಾಗಿದ್ದ ದಿನಗಳಲ್ಲಿ ಇಲ್ಲಿ ಈ ಮಾಮರ ಕೆಲವು ಇದ್ದವು. ಸ್ಥಳವನ್ನು ಮರಗಳನ್ನು ಅದು ಏಕೋ ಮೆಚ್ಚಿ ಅವನು ಅದೇ ಹೊಲಬಿನಲ್ಲಿ ಆ ದಿನಗಳಲ್ಲೇ ಒಂದೇನೇರು ಮರಗಳನ್ನು ಹಾಕಿಸಿದನು. ಆ ಮೇಲೆ ಅವು ಬೆಳೆಯುವುದನ್ನು ನೋಡಿ ಸಂತೋಷ ಪಡೆದಿದ್ದನು. ಆಸ್ತಿಗೆ ಒಡೆಯನಾದ ಮೇಲೆ ಅಲ್ಲೇ ಇನ್ನೂ ನೂರು ಮರವನ್ನು ನೆಡಿಸಿ ಬೆಳಸಿ ಅದನ್ನು ದಿಟವಾಗಿ ಒಂದು ವನವನ್ನಾಗಿ ಮಾಡಿದ್ದನು. ಈ ವಿಷಯ ಅವನಿಗೆ ಬಹಳ ಹೆಮ್ಮೆ. ಈ ಹಿಂದೆ ಅವನು ಯಾವ ಅತಿಥಿಗಳು ಬಂದರೂ ಅವರನ್ನು ಈ ವನಕ್ಕೆ ಕರೆದುಕೊಂಡು ಹೋಗಿ ತೋರಿಸುವನು; ಅದೆಲ್ಲ ತಾನು ಬೆಳೆಸಿದ ಮರ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವನು. ವಯಸ್ಸಾಗಿ ಕಾಯಿಲೆ ಬಿದ್ದ ಈ ದಿನಗಳಲ್ಲಿ ಕೂಡ ಆಗಾಗ ಸಹಾಯಕರೊಡನೆ ಅಲ್ಲಿಗೆ ಹೋಗಿ ಬರುವನು. ಹೋಗಲಾಗದ ದಿನ ಮನೆಯ ಕೈಸಾಲೆಯಲ್ಲಿ ಕುಳಿತು ವನದತ್ತ ನೋಡುವುದರಲ್ಲಿ ಸಂತೋಷ ಕಾಣುವನು. ಎಲ್ಲ ಪ್ರೇಮವನ್ನು ಬಿಟ್ಟ ಋಷಿಗೆ ಒಂದು ಜಿಂಕೆಯನ್ನು ಕುರಿತು ಕನಿಕರ ಹುಟ್ಟಿ ಅದು ಪ್ರೇಮವಾಗಿ ಬೆಳೆಯಿತೆಂದು ಭಾರತೀಯ ಪುರಾಣ ಹೇಳುವಂತೆ ಸ್ವಾಮ್ಯ, ಅಭಿಮಾನ, ದುಷ್ಟ ಎಂದು ಪ್ರತಿಪಾದಿಸಿದ್ದ ಋಷಿಕಲ್ಪ ಲೇಖಕಾಗ್ರಣಿಗೆ ಈ ಭೂರ್ಜವನದ ವಿಷಯದಲ್ಲಿ ತನ್ನನ್ನೇ ಕಾಣದ ಸ್ವಾಮ್ಯಭಾವ, ಅಭಿಮಾನ ರೂಪುಗೊಂಡವು.

ಮನೆಯ ವೆಚ್ಚಕ್ಕೆ ಹಣ ಬೇಕಾಗಿ ಸೋಫಿಯಾದೇವಿ ಒಮ್ಮೆ ಈ ಮರಗಳಲ್ಲಿ ಹಳೆಯ ಮರ ಹತ್ತನ್ನು ಮಾರುವುದೇ ಎಂದು ಯೋಚನೆ ಮಾಡಿದಳು. ಚೆನ್ನಾಗಿ ಬೆಳೆದು ಚೇಗಾಗಿದ್ದ ಮರಗಳು. ಒಳ್ಳೆಯ ಬೆಲೆ ಬರುತ್ತಿತ್ತು. ಯಾರೋ ಬಂದು ಕೇಳಿಯೂ ಕೇಳಿದರು. ಅಷ್ಟರಲ್ಲಿ ಈ ಸಂಗತಿ ಕಿವಿಗೆ ಬಿದ್ದು ಟಾಲ್‌ಸ್ಟಾಯ್, "ಛೆ, ಎಲ್ಲಾದರೂ ಉಂಟೆ, ಎಂಥಾ ವನ, ಮರವನ್ನು ಮಾರಿ ಅದನ್ನು ಕೆಡಿಸುವುದೇ" ಎಂದನು.

ಇದು ತಿಳಿದು ಸೋಫಿಯಾ ಆ ಯೋಚನೆಯನ್ನು ಬಿಟ್ಟಳು. ಯಜಮಾನ, ಮರವನ್ನು ಹಾಕಿ ಬೆಳೆಸಿದ್ದವನು; ಈಗ ಕಾಯಿಲೆಯಾಗಿದ್ದಾನೆ; ಮರವನ್ನು ನೋಡುವುದರಲ್ಲಿ ಸಂತೋಷ ಕಾಣುತ್ತಿದ್ದಾನೆ; ಇನ್ನು ಎಷ್ಟು ದಿನ ಈ ಸುಖವನ್ನು ಪಡೆಯಬಹುದೋ. ಎಷ್ಟು ಬೇಗ ಜೀವನ ಮುಗಿಯ ಬಹುದೋ ಹೇಳುವಂತಿಲ್ಲ; ಈಗ ಏಕೆ ಈ ಮರಗಳನ್ನು ಕಡಿಸಿ ಈ ಮನಸ್ಸಿಗೆ ನೋವು ಪಡಿಸುವುದು ?

ಇದಾದ ಕೆಲವೇ ದಿನದಲ್ಲಿ ಇವರ ಉಂಬಳಿಯ ಗ್ರಾಮದ ಜೀತದ ಜನ ನೂರು ಮಂದಿ ಬಂದು ಚೆರ್ಟ್‌ಕಾಫ್‌ನನ್ನು ಕಂಡು "ನಮಗೆ ಯಾರಿಗೂ ಮನೆಯಿಲ್ಲ; ಸಣ್ಣ ಸಣ್ಣ ಮನೆಗಳನ್ನು ಕಟ್ಟಕೊಳ್ಳೋಣವೆಂದಿದೇವೆ. ಒಡೆಯರಿಗೆ ಹೇಳಿ ನಮಗೆ ಈ ಭೂರ್ಜವನದ ಮರಗಳನ್ನು ಕೊಡಿಸಿ, ಮನೆ ಕಟ್ಟಿಕೊಳ್ಳುತ್ತೇವೆ; ಅವರು ದೊಡ್ಡ ಮನಸ್ಸು ಮಾಡಿದಾರೆ; ಆಸ್ತಿ ಎನ್ನುವುದು ಬೇಡ ಎನ್ನುತ್ತಿದಾರೆ, ಯಾರಾದರೂ ಬಂದು ಈ ಮರಗಳನ್ನು ಕಡಿದು ಹೊತ್ತುಕೊಂಡು ಹೋದಾರು; ಇವನ್ನು ನಮಗೆ ಕೊಡಿಸಿ," ಎಂದು ಬೇಡಿದರು.

ಚೆರ್ಟ್‌ಕಾಫ್ ಇದನ್ನು ಟಾಲ್‌ಸ್ಟಾಯ್‌ಗೆ ಹೇಳಿದನು. "ಹೇಗೂ ನೀವು ಆಸ್ತಿ ಕೂಡದು ಎನ್ನುವವರು; ಇದು ದಿಟವಾಗಿ ನಿಮ್ಮ ಅಭಿಪ್ರಾಯ. ನಾನು ಬಲ್ಲೆ; ಇದು ಎಲ್ಲರಿಗೂ ತಿಳಿಯುವಂತೆ ಮಾಡುವುದಕ್ಕೆ ಒಳ್ಳೆಯ ಅವಕಾಶ ಒದಗಿದೆ; ಈ ಜೀತದ ಜನರ ಪ್ರಾರ್ಥನೆಯನ್ನು ಸಲ್ಲಿಸಿ" ಎಂದು ಸೂಚಿಸಿದನು.

ಟಾಲ್‌ಸ್ಟಾಯ್ ಒಡನೆ ಏನೂ ಹೇಳಲಿಲ್ಲ. ಚೆರ್ಟ್‌ಕಾಫ್ ಮತ್ತೆ ಈ ಮಾತನ್ನೆತ್ತಿದಾಗ "ಸ್ವಾಮ್ಯ ಕೂಡದು ಎಂದು ಹೇಳಿದ ಮೇಲೆ ನಾನು ಅಪ್ಪಣೆ ಕೊಡುವುದೇನು? ಜೀತ ಉಂಟು ಮರ ಉಂಟು" ಎಂದನು. ಇದು ಅವನು ಸಂತೋಷದಿಂದ ಹೇಳಿದ ಮಾತಲ್ಲ. ಚೆರ್ಟ್‌ಕಾಫ್ ಇದನ್ನು ಬಲ್ಲನು. ಆದರೆ ಅದನ್ನು ಬಳಸಿ ಅವನ ಜೀತದ ಮಂದಿ ಮರ ಕಡಿಯುವುದಕ್ಕೆ ಅಡ್ಡಿ ಇಲ್ಲ ಎಂದು ಮುಂದರಿದನು.

ಇದು ಒಡತಿ ಸೋಫಿಯಾದೇವಿಯ ಗಮನಕ್ಕೆ ಬಂದಿತು. ಆಕೆ, "ಯಜಮಾನರು ಹಾಕಿ ಬೆಳೆಸಿದ ಮರ, ಅದನ್ನು ಕಡಿಸುವುದು ಬೇಡ ಎಂದು ನಾನೇ ಸುಮ್ಮನಾದೆ. ಇದನ್ನು ಯಾರೋ ಬಂದು ಕಡಿಯುವಂತೆ ಮಾಡುತ್ತೀಯಾ?" ಎಂದು ಅಡ್ಡಿ ಹೇಳಿದಳು.

ಚೆರ್ಟ್‌ಕಾಫ್ "ಋಷಿಸಮಾನರಾದ ನಿಮ್ಮ ಯಜಮಾನರ ಔದಾರ್ಯ ನಿಮ್ಮಿಂದ ನಿಷ್ಫಲವಾಗುತ್ತಿದೆ. ನಿಮಗೆ ಇದು ತರವಲ್ಲ" ಎಂದನು.

ಆಕೆ "ಯಜಮಾನರ ಔದಾರ್ಯ ಫಲಿಸಲಿ ಎನ್ನುವುದು ನನಗಿಂತ ನಿನಗೆ ದೊಡ್ಡ ವಿಷಯವಾಯಿತೆ? ಈ ಅಧಿಕಪ್ರಸಂಗ ಬೇಡ. ನೀವೆಲ್ಲ ಇಲ್ಲಿ ಬಂದು ಊಟ ಮಾಡುತ್ತ ಇದ್ದೀರಲ್ಲ. ಸ್ವಾಮ್ಯ ಇಲ್ಲದೆ ಇದನ್ನೆಲ್ಲ ನಡೆಸುವುದು ಹೇಗೆ? ನಮ್ಮ ಮನೆಯ ಮಾತನ್ನು ನಮಗೆ ಬಿಡಿ. ನೀವು ಇದರ ಗೋಜಿಗೆ ಬರಬೇಡಿ" ಎಂದಳು.

ಮಾತಿಗೆ ಮಾತು ಬೆಳೆಯಿತು. ಜಗಳವೇ ಆಯಿತು. ಚೆರ್ಟ್‌ಕಾಫ್, 'ಒಡತಿ ಸೋಫಿ

ಯಾಗಿ ಬಿಟ್ಟಿದ್ದಿ ಕೇಳಿಯಾಗಿಲ್ಲ" ಎಂದು ಶೀವರ್ ನಿಸಿ "ಇವರು ಬೇಕಾದದು ಹೇಳಲಿ; ನಾನು ಒಡೆಯರ ಅಭಿಪ್ರಾಯವನ್ನು ನಡೆಸುತ್ತೇನೆ" ಎಂದನು. ಜೀತದ ಮಂದಿಗೆ "ನೀವು ಬಂದು ಮರಗಳನ್ನು ಕಡಿದುಕೊಂಡು ಹೋಗಿ" ಎಂದನು.

ಜೀತದ ಜನ ಬಂದರು. ಮರಗಳನ್ನು ಕಡಿಯತೊಡಗಿದರು. ಒಡತಿ ಸಂಬಳ ಕೊಟ್ಟು ಬೇರೆ ಜನರನ್ನು ಕರೆಸಿದಳು. ಅವರನ್ನು ತಡೆಯಲು ಏರ್ಪಾಡು ಮಾಡಿದಳು. ಜೀತಕ್ಕೆ ಪೆಟ್ಟಾಯಿತು ಆ ಜನ ಇವಳು ತುಂಬ ಕ್ರೂರಿ ಎಂದು ಇವಳನ್ನು ನಿಂದಿಸಿದರು ಸದ್ಯ ಸುಮ್ಮನಾದರು.

ಸಂಬಳದ ಕಾವಲು ಹಿಂದಿರುಗಿದೊಡನೆ ಇವರು ಮತ್ತೆ ಬಂದರು. ಮರಗಳನ್ನು ಕಡಿದರು. ತೊಲೆ ತೀರು ಕವು ಎಂದು ಎಲ್ಲವನ್ನು ಸಾಗಿಸಿದರು. ಇವರು ಹತ್ತು ಸಲ ಹೀಗೆ ಮಾಡಿ ಆಕೆ ಹತ್ತು ಸಲ ಇವರನ್ನು ತಡೆದು ಆರು ತಿಂಗಳಾಗುವ ವೇಳೆಗೆ ಭೂರ್ಜ ವನ ನೆಲಸಮವಾಯಿತು, ವನ ಇದ್ದದ್ದಕ್ಕೆ ಉಳಿದ ಗುರುತೆಂದರೆ ಗರಗಸದಿಂದ ಕೊಯ್ದು ಬಿಟ್ಟಿದ್ದ ಮರಗಳ ಬಡ್ಡೆ ಮಾತ್ರ.

ಇಷ್ಟೆಲ್ಲ ನಡೆಯುತ್ತಿರುವಲ್ಲಿ ಟಾಲ್‌ಸ್ಟಾಯ್ ಏನನ್ನೂ ಹೇಳಲಿಲ್ಲ ಮರಗಳು ಉಳಿಯಲಿ ಎಂದು ಅವನ ಅಪೇಕ್ಷೆ ಎಂದು ಸೋಫಿಯಾ ದೇವಿ ತಿಳಿದಳು. ಆದರೆ ಅವಳ ಎಲ್ಲ ಯತ್ನ ವ್ಯರ್ಥವಾಯಿತು. ಅವಳು ತೀರ ಹುಚ್ಚಳಂತಾದಳು. ಟಾಲ್‌ಸ್ಟಾಯ್ ಬಾಯಿಂದ ಹೇಳಲಾರದ ಒಂದು ದುಃಖಕ್ಕೆ ಒಳಪಟ್ಟಿದನು. ನವೆದು ಹೋದನು.

ಆ ಮೇಲೆ ಕೆಲವು ತಿಂಗಳಲ್ಲಿ ಒಂದು ದಿನ ಅವನು ಯಾರಿಗೂ ಹೇಳದೆ ಮನೆ ಬಿಟ್ಟು ಎತ್ತಲೋ ಹೊರಟು ಬಿಟ್ಟನು. ಅವನು ಹೊರಟುಹೋದ ಮೇಲೆ ಮನೆ ಮಕ್ಕಳಿಗೆ ಅದು ತಿಳಿಯಿತು. ಅವರು ಅವನ ಹಿಂದ ಜನವನ್ನು ಕಳುಹಿಸಿದರು. ಆ ಜನ ಅವನನ್ನು ಒಂದು ರೈಲ್ವೆ ಸ್ಟೇಷನ್‌ನಲ್ಲಿ ಕಂಡರು. ಟಾಲ್‌ಸ್ಟಾಯ್ ಆ ವೇಳೆಗೆ ತೀರ ದಣಿದಿದ್ದನು. ಸ್ಟೇಷನ್‌ನಲ್ಲೇ ನಿಂತನು. ಅವನು ಅಲ್ಲಿರುವದು ತಿಳಿದು ಅವರು ಇವರು ಬಂದರು. ಅಲ್ಲಿಂದ ಅವನನ್ನು ಬೇರೆ ಕಡೆಗೆ ಒಯ್ಯುವ ಯೋಚನೆ ಮಾಡಿದರು ಇದು ನಡೆಯುವ ಮುನ್ನ ರೈಲ್ವೆ ಸ್ಟೇಷನ್‌ನಲ್ಲಿಯೇ ಅವನು ತೀರಿಕೊಂಡನು.

ಮರ ಹೋದವೆಂಬ ದುಃಖವೇ? ಹೆಂಡತಿ ತನ್ನ ಔದಾರ್ಯಕ್ಕೆ ಅಡ್ಡಿ ಆದಳೆಂಬ ಬೇಸರವೆ? ಸ್ವಾಮ್ಯ ಕೂಡದೆಂದು ಬುದ್ಧಿ ಹೇಳುತ್ತಿರುವಲ್ಲಿ ಮರ ತನ್ನದೆಂಬ ಅಭಿಮಾನ ಕಾಡಿತೆಂಬ ಉದ್ವೇಗವೇ? ಅವನ ಜೀವ ಈ ಭಾವ ಯಾವುದರಲ್ಲಿ ತೊಳಲುತ್ತ ಮುಗಿಯಿತು? ಇಲ್ಲ ಮೂರು ಭಾವ ಆ ಮನಸ್ಸಿನಲ್ಲಿ ಸಾಯುವ ವೇಳೆ ತುಮುಲ ಮಾಡಿದವೋ?

ಇದನ್ನು ಈಗ ಯಾರೂ ಹೇಳುವಂತಿಲ್ಲ.

ವ್ಯಾಪಾರಿ ಮತ್ತು ಸರ್ಕಾರ

ಹೆಂಡತಿಯು ಹೊಡೆಯುತಿದ್ದರು ತಾನೆ ಹೊಡೆವಂತೆ
ಗೌಜು-ಗದ್ದಲ ಮಾಡಿ ಗಂಡನೊಬ್ಬ
ಮಾನ ಮುಚಿಕೊಳ್ಳುವೊಲು ವರ್ತಿಸಿದೆ ಸರ್ಕಾರ
ವ್ಯಾಪಾರಿ ಹೊಡೆತಕೊಳಗಾಗಿ ಅಬ್ಬ !

—ಎಂ. ಅಕಬರ ಅಲಿ

ಧ್ವನಿಶೂಲ !

— ಡಿಝಿ



ಕನ್ನಡವೇ ನಮ್ಮ ಶಿಕ್ಷಣ ಮಾಧ್ಯಮವಾಗಬೇಕು

ರಂಗನಾಥ ದಿವಾಕರ

ಮೊಟ್ಟ ಮೊದಲು ನನ್ನ ದೃಷ್ಟಿ, ವಿಷಯ-ವಿಚಾರಗಳ ಕಡೆಗೆ ನೋಡುವ ನನ್ನ ರೀತಿ ನೀತಿ ಗೊತ್ತಾಗಬೇಕೆಂದು ಎರಡು ಪ್ರಾಸ್ತಾವಿಕ ಮಾತುಗಳನ್ನು ಹೇಳಬೇಕಾಗಿದೆ.

ನಾನು ಕನ್ನಡಿಗ ಎಂದು ಹೇಳಿಸಿಕೊಳ್ಳುವದರಕಿಂತ ಕರ್ನಾಟಕಸ್ಥ ಎಂದು ಹೇಳಿಸಿಕೊಳ್ಳುವುದರಲ್ಲಿ ಹೆಚ್ಚು ಗೌರವ ಹಾಗೂ ಅನ್ವರ್ಥಕತೆ ಇದೆ ಎಂದು ತಿಳಿದಿದ್ದೇನೆ. ಕನ್ನಡ ಇದೊಂದು ಭಾಷೆ; ಕರ್ನಾಟಕ, ಇದು ಒಂದು ರಾಜ್ಯ, ದೇಶ, ಒಂದು ಪ್ರಾಂತ; ಒಂದು ಐತಿಹಾಸಿಕ, ಭೌಗೋಲಿಕ ಭಾರತದ ಭಾಗವಿಶೇಷ ಈಗ ನಮಗೆ ಬೇಕಾದುದು, ಅವಶ್ಯವಿದ್ದುದು ವ್ಯವಹಾರಿಕವಿದ್ದುದು ಭಾರತದ ನಿಷ್ಠೆ, ರಾಷ್ಟ್ರನಿಷ್ಠೆ. ಪರಂಪರೆ ಇತಿಹಾಸ, ಸಂಸ್ಕೃತಿ, ಸ್ಮೃತಿ ಇವುಗಳಿಂದ ಸುಸಂಬದ್ಧವಾದ ಒಂದು ರಾಷ್ಟ್ರ ಈ ಭಾರತ ದೇಶ. ಆದರಲ್ಲಿ ನಾವು ಕರ್ನಾಟಕಸ್ಥರು ಹಲಕೆಲವು ವೈಶಿಷ್ಟ್ಯಗಳನ್ನು ಪಡೆದ ಜನಾಂಗ ಇಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನ ಮುಖ್ಯಸ್ಥಾನ ಇರತಕ್ಕದ್ದು ಎಂಬುದು ಸ್ವಾಭಾವಿಕ; ಆದರೆ ಏಕಮೇವ ಸ್ಥಾನವಲ್ಲ. ಇಲ್ಲಿ ನೆರೆಹೊರೆಯ ಭಾಷೆಗಳನ್ನಾಡುವವರೂ ಇದ್ದಾರೆ. ಇರಬೇಕು. ಅವರೂ ಕರ್ನಾಟಕಸ್ಥರು, ಇಲ್ಲಿಯೇ ನೆಲೆಸಿ ಭಾರತಾಂತರ್ಗತ ಕರ್ನಾಟಕದ ಹಿತ ಸಂಬಂಧಗಳನ್ನು ಬೆಳೆಸಿಕೊಂಡು ಹೋಗಲು ಅವರೂ ಹೊಣೆಗಾರರು.

ಅವರ ನಮ್ಮ ನಡುವೆ ಭಾಷೈಕ್ಯವಿಲ್ಲದಿದ್ದರೂ ಭಾವೈಕ್ಯ ಹಾಗೂ ಹಿತೈಕ್ಯ ಅವಶ್ಯ.

ಹಿತೈಕ್ಯವೇ ಮುಖ್ಯ

ಮೇಲೆ ಐಕ್ಯತ್ರಯವನ್ನು ಕಾಣಿಸಿದ್ದೇನೆ ಮೂರೂ ಇರುವದು ಉತ್ತಮ, ವಧೂವರರ ಕುಂಡಲಿಗಳಲ್ಲಿ ೩೨ ಗುಣಗಳೂ ಕೂಡಿದಂತೆ. ಆದರೆ ಹಿತೈಕ್ಯವೇ ಎಲ್ಲಕ್ಕೂ ಹೆಚ್ಚಿನದು ಮತ್ತು ಮುಖ್ಯ ಎಂದು ಇಲ್ಲಿ ಹೇಳದೆ ಇರಲಾರೆ.

ಯಾಕೆಂದರೆ ಭಾವೈಕ್ಯ, ಭಾಷೈಕ್ಯ ಇಷ್ಟೇ ಅಲ್ಲ, ಧರ್ಮ, ಜಾತಿ, ಕುಲ, ಇವೆಲ್ಲ ಒಂದೇ ಇದ್ದರೂ ಹಿತೈಕ್ಯ (ಇಂಟರೆಸ್ಟ್) ಒಂದೇ ಇಲ್ಲದಿದ್ದರೆ ಮಹಾಭಾರತ (ಮಹಾಯುದ್ಧ) ಆಗುವದು ನಿಶ್ಚಯ!

ಕೌರವ—ಪಾಂಡವರಲ್ಲಿ, ರಜಪೂತರಲ್ಲಿ ಬ್ರಿಟಿಶರು ನಮ್ಮನ್ನು ಗೆದ್ದಾಗ ಭಾರತೀಯರಲ್ಲಿ ಯಾವ ಐಕ್ಯವಿರಲಿಲ್ಲ! ಎಲ್ಲ ಐಕ್ಯಗಳೂ ಇದ್ದವು ಆದರೆ ಹಿತೈಕ್ಯವಿರಲಿಲ್ಲ. ಎಲ್ಲರೂ ತಮ್ಮ ತಮ್ಮ ಹಿತ ಬೇರೆ ಎಂಬ ಭ್ರಮೆಗೆ ಒಳಗಾದರು. ತಮ್ಮತಮ್ಮೊಳಗೆ ಜಗಳಾಡಿ ಪರಕೀಯರಿಗೆ ಆಸ್ಪದ ಮಾಡಿಕೊಟ್ಟರು

೧೫ ನೆ ಅಗಸ್ಟ ೧೯೪೭ ರ ವರೆಗೆ ಹಿತೈಕ್ಯವಿಲ್ಲದೆ ಹೋದುದರ ಪರಿಣಾಮವಾಗಿ ಬ್ರಿಟಿಶರ ಗುಲಾಮಗಿರಿಗೆ ಒಳಗಾಗಿ ತೊಳಲಾಡಿದೆವು

ಬೇರೆಯಾಗುವ ಪರಿಣಾಮ

ನಮಗೆ ಸ್ವಾತಂತ್ರ್ಯ ಬಂದ ಸಂಧಿಗೆ ತ್ರಾವಣಕೋರದಲ್ಲಿ ಶ್ರೀ ಸಿ. ಪಿ. ರಾಮಸ್ವಾಮಿಯವರು ದಿವಾಣರಾಗಿದ್ದರು. ಅವರು ನಾವು ಸ್ವತಂತ್ರರಾಗಿಯೇ ಉಳಿಯುವೆವು ಎಂಬ ಕೂಗನ್ನೆಬ್ಬಿಸಿದರು. ಕೇರಳದಲ್ಲಿ ಕಮ್ಯೂನಿಸ್ಟ ಪಕ್ಷದ ರಾಜ್ಯ ಸ್ಥಾಪಿತವಾದಾಗ ಅವರು ರಶಿಯಕ್ಕೆ ಆಮಂತ್ರಣ ಕೊಡಬಹುದೋ ಏನೋ ಎಂಬ ಸಂಶಯವಿತ್ತು. ಗೋವೆ ಭಾರತದಲ್ಲಿ ಲೀನವಾಗುವ ಪೂರ್ವದಲ್ಲಿ ಅಲ್ಲಿ ಪಾಕಿಸ್ತಾನ ಅಥವಾ ಅಮೇರಿಕಾ ಬಂದು ಠಾಣ್ಯ ಹಾಕಬಹುದೋ ಏನೋ ಎಂಬ ಭಯ ಉಂಟಾಗಿತ್ತು. ಈಗ ಪದೇ ಪದೇ ತಮಿಳರು, ನಾವು ಸಿಡಿದು ಹೋಗುವೆವು, ಎಂಬ ಪಲ್ಲವಿಯನ್ನು ಹಾಡುವರು.

ಭಾರತದಲ್ಲಿ ಒಂದು ಕೊರಿಯಾ, ಅಥವಾ ವ್ಹಿಟ್‌ನಾಮ ನಿರ್ಮಾಣವಾಗಬಾರದು, ಪರಕೀಯರಿಗೆ ಚಂಚುಪ್ರವೇಶ ಮಾಡಲಿಕ್ಕೆ ಆಸ್ಪದ ಕೊಡಕೂಡದು, ಎಂಬುದನ್ನು ಎಲ್ಲರೂ ಮನಗಾಣುವದು ಅವಶ್ಯ. ಚಂಚು ಪ್ರವೇಶೋ ಮುಸಲಪ್ರವೇಶಃ ಅಥವಾ ಎಳೆ ನುಂಗಲು ಆಸ್ಪದ ಕೊಟ್ಟರೆ ಹಚ್ಚಡ ನುಂಗಿ ಬಿಡುವರು, ಎನ್ನುವಂತೆ ಭಾರತದ ಅಥವಾ ಭಾರತದ ಯಾವದೇ ಭಾಗದ ಸ್ಥಿತಿಯಾಗಕೂಡದು.

ಹಿತೈಕ್ಯದ ದೃಷ್ಟಿಯು ದೂರದೃಷ್ಟಿಯ ಮೂಲಕವೇ ಬರಬಲ್ಲದು. ತಾತ್ಕಾಲಿಕ ಸ್ವಾರ್ಥ, ಪರಸ್ಪರ ಸ್ಪರ್ಧೆ, ಅಧಿಕಾರದಲ್ಲಿ ಮೇಲಾಟ, ಇತ್ಯಾದಿಗಳಿಗೆ ಆಸ್ಪದ ಕೊಡದೆ ಭಾರತೀಯರೆಲ್ಲರ ಹಿತೈಕ್ಯ ಒಂದೇ ಇರುವದೆಂಬುದನ್ನು ನಾವು ಕಂಡುಕೊಳ್ಳುವದು ಅವಶ್ಯ.

ಪಾಕಿಸ್ತಾನವು ಸಿಡಿದು ಹೋದುದರಿಂದ ಯಾರಿಗೆ ಹಿತವಾಗಿದೆ? ಪಾಕಿಸ್ತಾನವು ಸುಖದಲ್ಲಿದೆಯೋ? ಭಾರತವು ಸುಖವಾಗಿದೆಯೋ? ಭಾರತದಲ್ಲಿಯ ಮುಸಲ್ಮಾನ ಬಾಂಧವರಿಗೆ ಸುಖವಿದೆಯೋ ಹಿಂದುಗಳಿಗೆ ಸುಖನಿದ್ರೆಯಿದೆಯೋ?

ಹೀಗಿದ್ದು ತಮಿಳು ಬಾಂಧವರು ಬೇರಾಗಿ ಹೋಗುವ ಮಾತನ್ನು ಏಕೆ ಎತ್ತುತ್ತಿರುವರೊ ತಿಳಿಯದು!

ಭಾಷೆಗಳ ವಿಷಯ

ಇಲ್ಲಿ ನಾನು ಇತರ ಭಾಷೆಗಳ ವಿಷಯಕ್ಕೆ ಮಾತಾಡಲು ಇಚ್ಛಿಸುವದಿಲ್ಲ. ಕನ್ನಡದ ಬಗ್ಗೆಯೇ ಮುಖ್ಯವಾಗಿ ಹೇಳಬೇಕೆನ್ನುತ್ತೇನೆ.

ಇಂಗ್ಲೀಷ್ ಭಾಷೆಯ ಬಗ್ಗೆ ನನಗೆ ತುಂಬಾ ಅಭಿಮಾನವಿದೆ. ನಾನು ಅದನ್ನು ಹದಿಮೂರು ವರುಷ ಶಾಲೆ ಕಾಲೇಜುಗಳಲ್ಲಿ ಅಭ್ಯಸಿಸಿದೆನು. ಕನ್ನಡ, ಸಂಸ್ಕೃತ ಈ ಭಾಷೆಗಳನ್ನು ಕೂಡ ಇಂಗ್ಲೀಷಿನ ಮುಖಾಂತರ ಕಲಿತೆನು! ಈ ಎರಡೂ ಭಾಷೆಗಳ ಪ್ರಶ್ನೆಗಳೂ ಇಂಗ್ಲೀಷಿನಲ್ಲಿ, ಅವುಗಳ ಉತ್ತರಗಳೂ ಇಂಗ್ಲೀಷಿನಲ್ಲಿ! ಆ ಮೇಲೆ ಆ ಭಾಷೆಯನ್ನು ಶಾಲೆ ಕಾಲೇಜುಗಳಲ್ಲಿ ಕಲಿಸುವದರಲ್ಲಿಯೂ ನಾನು ಹಲವು ವರುಷಗಳನ್ನು ಕಳೆದಿದ್ದೇನೆ. ಅಲ್ಲದೆ ಇಂಗ್ಲೀಷಿನಲ್ಲಿ ವೃತ್ತಪತ್ರಗಳಲ್ಲಿ ಬರೆಯುವುದಲ್ಲದೆ ಹಲವು ಲೋಕಪ್ರಿಯ ಪುಸ್ತಕಗಳನ್ನೂ ಬರೆದಿರುವೆ. ನೀವು ಇಂಗ್ಲೀಷಿನಲ್ಲಿ ಮಾತಾಡುವದನ್ನು ನಾವು ಕೇಳಬೇಕಾಗಿದೆ, (ಸಂಗೀತವನ್ನು ಕೇಳಿದಂತೆ!)

ಎಂದು ಮಿತ್ರರು ಕೇಳಿಕೊಂಡಾಗ ನಾನು ಅದನ್ನು ಮಾಡಿದ್ದೇನೆ. ಈಗಲೂ ಇಂಗ್ಲೀಷ್ ಬರೆಯುತ್ತಾ ಇರುತ್ತೇನೆ, ಮಾತಾಡುತ್ತಾ ಇರುತ್ತೇನೆ.

ಆದುದರಿಂದ ಇಂಗ್ಲೀಷಿನ ಬಗ್ಗೆ ಅದೇ ರೀತಿ ಹಿಂದೀ ಬಗ್ಗೆ ನನ್ನಲ್ಲಿ ಪ್ರೇಮಾದರಗಳು, ಅವುಗಳ ಉಪಯುಕ್ತತೆಯ ಬಗ್ಗೆ ಸಾಕಷ್ಟು ಮನ್ನಣೆ ಇದೆ. ಆದರೆ-

ಕನ್ನಡಕ್ಕೆ ಪೆಟ್ಟು-ಕನ್ನಡ ಜನಾಂಗಕ್ಕೆ ಅನ್ಯಾಯ

ಅದೇ ಕಾಲಕ್ಕೆ ನಾನು, ನನ್ನಂಥ ಇಂಗ್ಲೀಷ್ ಪಕ್ಷಪಾತಿಗಳು ಕನ್ನಡಕ್ಕೆ ಯಾವ ಪೆಟ್ಟು ಕೊಟ್ಟಿದ್ದೇವೆ, ಕನ್ನಡ ಜನಾಂಗಕ್ಕೆ, ಯಾವ ಅನ್ಯಾಯವನ್ನು ಮಾಡಿದ್ದೇವೆಂಬುದನ್ನು ನೆನೆಸಿಕೊಂಡು ಪಶ್ಚಾತ್ತಾಪ ಪಡುವ ಪ್ರಸಂಗವು ಈಗ ಒದಗಿದೆ. ಆ ಬಗ್ಗೆ ಪ್ರಾಯಶ್ಚಿತ್ತವನ್ನೂ ಪೂರೈಸುವದು ಅವಶ್ಯವಿದೆ.

ಬ್ರಿಟಿಶರ ರಾಜ್ಯವೇನೊ ಇಲ್ಲಿ ಬಲವಂತವಾಗಿ ಸ್ಥಾಪಿತವಾಯಿತು. ಆದರ ಮೆಕಾಲೇ ಮತ್ತು ಉಡ್ ಸಾಹೇಬರು ಇಲ್ಲಿ ಯಾವ ಶಿಕ್ಷಣ ನೀತಿಯನ್ನು ನೆಲೆಗೊಳಿಸಿದರೊ ಅದನ್ನು ಮಾತ್ರ ನಮ್ಮ ಜನ ಅದೂರದೃಷ್ಟಿಯ ಮೂಲಕ, ಸ್ವಾರ್ಥಪರಾಯಣತೆಯಿಂದ ಸ್ವೀಕರಿಸಿದರು. ಸಾಹೇಬರು ಯಾವುದನ್ನೂ ಮುಚ್ಚುಮರೆಯಾಗಿಡಲಿಲ್ಲ. ಶರೀರತಃ ಭಾರತೀಯರಾಗಿದ್ದರೂ ಇಲ್ಲಿಯ ಜನ ಮನತಃ ಯುರೋಪಿಯನ್ನರಾಗಬೇಕು, ಅಂದರೆ ಮಾತ್ರ ತಮ್ಮ ರಾಜ್ಯ ಇಲ್ಲಿ ಸ್ಥಿರಸ್ಥಾವರವಾಗಿ ಉಳಿಯಬಲ್ಲದು ಎಂಬ ಮೆಕಾಲೆ ಸಾಹೇಬರ ಪ್ರಮೇಯವು ಇಂದಿಗೂ ಸತ್ಯವಿದೆ!

ನಮ್ಮ ಸುದೈವವೇನಂದರೆ, ಭಾರತದಲ್ಲಿ ನೂರರಲ್ಲಿ ಎರಡು ಅಥವಾ ಮೂರು ಜನ ಮಾತ್ರ ಆಂಗ್ಲ ಭಾಷಾ ಭಾಷಿಗಳಾಗಿದ್ದಾರೆ. ಉಳಿದ ತೊಂಬತ್ತೇಳು ಜನ ಇನ್ನೂ ತಮ್ಮ ತಮ್ಮ ಭಾಷೆಗಳನ್ನೆ ಆಡುತ್ತ ಇದ್ದಾರೆ.

ಆದರೆ ರಾಜ್ಯ ಮಾಡುವವರು, ಅಧಿಕಾರ ವರ್ಗದವರು, ಸುಶಿಕ್ಷಿತರೆನಿಸಿಕೊಳ್ಳುವವರೆಲ್ಲರೂ ಸುಧಾರಿಸಿದವರೆಲ್ಲರೂ ಆಂಗ್ಲ ಭಾಷೆ ಬಲ್ಲವರು. ಅವರೇ ಶ್ರೇಷ್ಠರು. ಆಂಗ್ಲಭಾಷೆ ಅರಿಯದವರು ಕನಿಷ್ಠರು ಸಾಕಷ್ಟು ಸಭ್ಯತೆ ಇಲ್ಲದವರು. ಆಳಿಸಿಕೊಳ್ಳಲಿಕ್ಕೆಯೇ ಯೋಗ್ಯರು. ಅವರು ಕನ್ನಡದಲ್ಲಿ, ಸಂಸ್ಕೃತದಲ್ಲಿ, ಫಾರಸಿಯಲ್ಲಿ ಎಂಥ ಪಂಡಿತರಿದ್ದರೂ ಅವರು ಪಂಡಿತರೇ. ಪ್ರೊಫೆಸರರಲ್ಲ!

ಇಂಗ್ಲೀಷಿಗೆ ಇಷ್ಟೊಂದು ಮಹತ್ವ, ಅದರ ಬಗ್ಗೆ ಇಷ್ಟೊಂದು ಪ್ರಯತ್ನ. ಅದರ ಪ್ರಸಾರದ ಬಗ್ಗೆ ಮಿಂಶನರಿ ಜನರ ಸಹಾಯ ಸಹಕಾರಗಳು, ಇಷ್ಟೆಲ್ಲ ಇದ್ದರೂ ಅದರ ಹೆಜ್ಜೆ ನೂರರಲ್ಲಿ ಮೂರಕ್ಕೂ ಮೀರಿಲ್ಲ! ಆ ಮೂವರೇ ತೊಂಬತ್ತೇಳು ಜನರನ್ನೀಗ ಆಳುತ್ತಿರುವದು. ಶಾಲೆಕಾಲೇಜುಗಳ ಭಾಷೆ ಅದೇ, ಇಂಗ್ಲೀಷು; ವಿಶ್ವವಿದ್ಯಾಲಯಗಳ ಭಾಷೆ ಅದೇ; ಸರಕಾರೀ ಭಾಷೆ ಅದೇ; ಕೋರ್ಟ್ ಕಚೇರಿಗಳಲ್ಲಿ ವಿಶೇಷತಃ ಹಾಯ್‌ಕೋರ್ಟಿನಲ್ಲಿ ಅದೇ ಭಾಷೆ!

ಭಾರತಕ್ಕೆ ಸ್ವಾತಂತ್ರ್ಯ ಬಂದು ಇಪ್ಪತ್ತು ವರ್ಷಗಳಾದರೂ ನೂರರಲ್ಲಿ ಮೂವರಿಗೆ ಮಾತ್ರ ಬರುವ ಭಾಷೆಯಲ್ಲಿಯೇ ಮುಖ್ಯ ಮುಖ್ಯ ವ್ಯವಹಾರಗಳು ನಡೆಯುವವು. ಇತರರು ಅಶಿಕ್ಷಿತರಂತೆ, ನಿರಕ್ಷರಿಗಳಂತೆ, ಅಜ್ಞರಂತೆ ಅವರ ಬೊಗಸೆಯಿಂದಲೇ ನೀರು ಕುಡಿಯಬೇಕು!

ಇನ್ನೊಂದು ದೃಷ್ಟಿಯಿಂದ ನೋಡಿದರೆ ಇಂಗ್ಲೀಷು ಇದಕ್ಕೂ (ನೂರರಲ್ಲಿ ಮೂರಕ್ಕೂ) ಹೆಚ್ಚು ಬೆಳೆಯುವ ಸಾಧ್ಯತೆ ಕಾಣುವದಿಲ್ಲ. ನಿರರ್ಗಳವಾದ ಆಸ್ಪದವಿದ್ದರೂ ಅದು ಹೆಚ್ಚು ಬೆಳೆಯಲಿಲ್ಲ. ಅಂದ ಬಳಿಕ ಇಂಗ್ಲೀಷು ಇಲ್ಲಿ ಬೇರೂರಿ ನಿಲ್ಲಲು ಸಾಧ್ಯವಿಲ್ಲ ಎಂದೇ ಅದರ ಅರ್ಥ!

ಅದೆಲ್ಲ ಹೇಗೇ ಇರಲಿ. ಕನ್ನಡಕ್ಕೆ, ಕನ್ನಡ ಜನಾಂಗಕ್ಕೆ ಆಸ್ಪದ ಬೇಡವೆ? ಅದೇನು ಕೈಲಾಗದ ಕಾಡು ಭಾಷೆಯೇ? ಅದರಲ್ಲಿ ಭಾವ–ವಿಚಾರಗಳ, ಶಾಸ್ತ್ರ–ಶಾಸನಗಳ, ಜ್ಞಾನ–ವಿಜ್ಞಾನಗಳ, ಸ್ಥೂಲ ಸೂಕ್ಷ್ಮ ಮಾತುಗಳನ್ನು ವ್ಯಕ್ತಗೊಳಿಸುವ ಸಾಮರ್ಥ್ಯವಿಲ್ಲವೆ? ಅದಕ್ಕೆ ಅವಕಾಶವೆಲ್ಲಿ! ಇನ್ನಾದರೂ ತನ್ಮುಖಾಂತರ ಶಿಕ್ಷಣ ಸರ್ವಸ್ವವು ಬೇಡವೇ? ತನ್ಮುಖಾಂತರ ಎಲ್ಲ ವಿಷಯಗಳನ್ನು ನಾವು ಕಲಿಸಲು ಪ್ರಯತ್ನ ಮಾಡದೆ ಅದನ್ನು ಬಂಜೆ ಭಾಷೆ ಎಂಬ ಮುದ್ರೆಯನ್ನು ಅದರ ಮೇಲೆ ಒತ್ತಬಹುದೇ? ವಿವಾಹ ಮಾಡದೆ ಯಾರನ್ನಾದರೂ ಷಂಡನೆಂದು ಅಥವಾ ಬಂಜೆ ಎಂದು ತೀರ್ಪು ಕೊಡಬಹುದೇ?

ಕನ್ನಡದ ಜನಾಂಗವು ಕಾವ್ಯಗಳನ್ನು ಬರೆದಿಲ್ಲವೆ? ವಚನಗಳನ್ನು ಹೇಳಿಲ್ಲವೆ? ಆಯಾ ಭಾಷೆಯಲ್ಲಿ ರಾಜ್ಯವನ್ನು ಆಳಿಲ್ಲವೆ? ಸೈನ್ಯಗಳನ್ನು ಸಮರದಲ್ಲಿ ಆಡಿಸಿಲ್ಲವೆ? ಆಯಾ ಕಾಲಕ್ಕೆ ತಕ್ಕ ಸಾಮರ್ಥ್ಯ ವೈಭವಾದಿಗಳನ್ನು ಕನ್ನಡವು ಮೆರೆಸಿಲ್ಲವೆ? ಕನ್ನಡವನ್ನು ಕೊನೆಯವರೆಗೂ ಬೀದಿಯ ಭಾಷೆಯನ್ನಾಗಿಯೇ ಇಡಬೇಕೆನ್ನುವವರು, ಅದನ್ನು ವಿಶ್ವವಿದ್ಯಾಲಯಗಳ ಮಾಧ್ಯಮವನ್ನು ಮಾಡಲಿಕ್ಕಾಗುವದಿಲ್ಲ ಎನ್ನುವವರು ಕನ್ನಡ ಜನಾಂಗದ ಅಪಮಾನವನ್ನು ಮಾಡುತ್ತಿರುವರು. ಕನ್ನಡವು ಕರ್ನಾಟಕದಲ್ಲಿ ರಾಣಿಯಾಗಿ ಬಾಳಬೇಕು, ಬೆಳೆಯಬೇಕಲ್ಲದೆ ತೊತ್ತಾಗಿ ತೊಳಲಬಾರದೆಂಬುದು ಇನ್ನೂ ನಮಗೆ ಹೊಳೆಯಲೊಲ್ಲದೆ!

ಇದು ಇಡೀ ಕನ್ನಡ ಜನಾಂಗದ ಪ್ರಶ್ನೆ ಇದೆ. ಕರ್ನಾಟಕ ಏಕತಂತ್ರವಾದುದೇಕೆ? ನಾಲ್ಕು ಇಂಗ್ಲೀಷ್ ಬಲ್ಲವರೇ ಅದನ್ನು ಆಳಬೇಕೆಂದೇ? ಏಕತಂತ್ರವಾಗಿ ಹತ್ತು ವರುಷಗಳಾದರೂ ಕನ್ನಡಕ್ಕೆ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ದೊರೆಯಬಾರದೆಂದೇ? ತಿರುಗಿ ಮುರುಗಿ ಕನ್ನಡ ಪಠ್ಯ ಪುಸ್ತಕಗಳಿಲ್ಲ, ಕನ್ನಡ ಕಲಿಸುವವರಿಲ್ಲ ಎಂಬ ಹಾಳು ಕಥೆಯನ್ನೇ ಹೇಳುತ್ತ ಎರಡು ಕೋಟಿ ಕನ್ನಡ ಜನಾಂಗವನ್ನು ಆಧುನಿಕ ಜ್ಞಾನ ವಿಜ್ಞಾನಗಳಿಂದ ದೂರವಿಡುವದು ಯಾವ ನ್ಯಾಯ? ಲಗ್ನವಾಗದೆ ಹುಚ್ಚು ಹೋಗದು ಹುಚ್ಚು ಹೋಗದೆ ಲಗ್ನವಾಗದು ಎಂಬಂತೆ ಈ ಕತೆ!

ಇಂಗ್ಲೆಂಡದಲ್ಲಿ ಮೊದಲು ಪಠ್ಯ ಪುಸ್ತಕಗಳನ್ನು ಬರೆದು ಆ ಮೇಲೆ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಿದರೋ? ಜಪಾನದವರು ಏನು ಮಾಡಿದರು? ನಮ್ಮಲ್ಲಿ ಬ್ರಿಟಿಶರ ರಾಜ್ಯ ಬರದೇ ಇದ್ದರೆ ನಾವು ಅಜ್ಞಾನಿಗಳಾಗಿಯೇ ಉಳಿಯುತ್ತಿದ್ದೆವೊ?

ಐದು ಸಾವಿರ ವರುಷ ಒಂದು ಪ್ರತ್ಯೇಕ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದವರು ನಾವು ಇಂಗ್ಲೀಷಿನಿಂದಲೇ ಬೆಳೆದೆವೊ? ನಮಗೆ ಬ್ರಿಟಿಶರು ಬಡತನವನ್ನು ಕೊಟ್ಟದ್ದಕ್ಕಾಗಿ ನನಗೆ ಅಷ್ಟೊಂದು ದುಃಖವಿಲ್ಲ. ಆದರೆ ಅವರು ನಮ್ಮ ಆತ್ಮವಿಶ್ವಾಸವನ್ನೆ ಚಿವುಟಿದ್ದು ನಮ್ಮ ನಿಜವಾದ ಅಂತರ್ಬಾಹ್ಯ ವಿಕಾಸಕ್ಕೆ ಘಾತುಕವಾದುದು. ಅದೇ ಎಲ್ಲಕ್ಕೂ ಶೋಚನೀಯವು.

ಈಗಲಾದರೂ ಎಚ್ಚರಾಗೋಣ. ಹೀನ ಗಂಡವನ್ನು ಎಸೆದು ಬಿಡೋಣ: ನನಗೆ ಇಂಗ್ಲೀಷು ಬೇಕು ಹಿಂದಿಯೂ ಬೇಕು. ಇತರ ಭಾಷೆಗಳೂ ಬೇಕು. ಆದರೆ ಕನ್ನಡವನ್ನು ಕುಗ್ಗಿಸುವದು ಬೇಡ.

ಭಾಷೆಗಳೆಂದು, ಅತ್ಯಂತ ಮಹತ್ವದ ಭಾಷೆಗಳೆಂದು, ಆವಶ್ಯಕ ಭಾಷೆಗಳೆಂದು ಆ ಎರಡು ಭಾಷೆಗಳನ್ನೂ ಕಲಿಯೋಣ. ಆದರೆ ಕನ್ನಡಕ್ಕೆ ಸ್ವತಂತ್ರ ಮತ್ತು ಸ್ವೈರ ವಿಹಾರ ಮಾಡಲು ವಿಶ್ವವಿದ್ಯಾಲಯಗಳಲ್ಲಿ, ಅರಮನೆ ಗುರುಮನೆಗಳಲ್ಲಿ, ವಿದ್ವತ್ ಸಭೆಗಳಲ್ಲಿ ಪೂರ್ಣವಾದ ಅವಕಾಶವನ್ನು ಕಲ್ಪಿಸಿ ಕೊಡೋಣ.

ಕನ್ನಡವನ್ನೇ ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವದರಿಂದಲೆ ಇದೆಲ್ಲ ಸಾಧಿಸಬಲ್ಲದು.

ಇದು ಇಡೀ ಕನ್ನಡದ ಜನಾಂಗಕ್ಕೆ, ಕರ್ನಾಟಕಕ್ಕೆ ಹೊಸ ಕಳೆ ಕಟ್ಟುವದು. ಕುಗ್ಗಿ, ಮುಗ್ಗಿಸಿ, ದಬ್ಬಿಟ್ಟ, ಕನ್ನಡ ವಾಕ್ ಚೈತನ್ಯಕ್ಕೆ ಪುಟಚೆಂಡಿನಂತೆ ಹಾರಲು ಅವಕಾಶವಾಗುವದು.

ಆದುದರಿಂದ ಆ ಈ ಭ್ರಮಕ್ಕೆ, ಇಲ್ಲದ ಸಲ್ಲದ ಮೋಹಕ್ಕೆ ಒಳಗಾಗದೆ ಕನ್ನಡ ಜನಾಂಗವು, ಇಡೀ ಕರ್ನಾಟಕವು ಒಂದೇ ಒಂದು ಕೂಗಿನಿಂದ, ಒಕ್ಕೊರಲಿನಿಂದ, ಶಿಕ್ಷಣದ ಮಾಧ್ಯಮು ಆಯಾ ದೇಶೀಯ ಭಾಷೆಗಳೇ ಆಗಬೇಕೆಂದು ಕರ್ನಾಟಕದಲ್ಲಿ ಕನ್ನಡವೇ ಆಗಬೇಕೆಂದು ಸಾರುವದು ಅವಶ್ಯ.

ಈ ಸಂದರ್ಭದಲ್ಲಿ, ಭಾಷೆಗಳ ಗೊಂದಲದಲ್ಲಿ, ಸಂಪರ್ಕ ಭಾಷೆ ಅದಾಗಬೇಕು ಇದಾಗಬೇಕು ಎಂಬ ಹೊಡೆದಾಟ ನಡೆದಾಗ. ನಮ್ಮ ಶಿಕ್ಷಣದ ಮಾಧ್ಯಮು ಕನ್ನಡವೇ ಆಗಬೇಕು ಎಂದು ಸಾರಲು ನಾವು ಮರೆಯಕೂಡದು. ಇಂಗ್ಲೀಷ್ ಮಾಧ್ಯಮದ ಮೂಲಕ ನಮಗೆ ಲಾಭವಾಗಿಲ್ಲ ಎಂದಲ್ಲ. ಆಗಿದೆ. ಆದರೆ ಅದು ಹಲವೇ ಜನರಿಗೆ. ಹಾನಿಯಾದುದು ಮಾತ್ರ ಲಕ್ಷಾಂತರ ಜನರಿಗೆ. ಕರ್ನಾಟಕದ ಜನತಾ ಜನಾರ್ದನನು ಜಾಗ್ರತನಾಗಿ ಪ್ರಬುದ್ಧನಾಗಿ ಇತರ ವಿಕಸಿತ ಜನಾಂಗಗಳಿಗೆ ಸರಿಜೋಡಿಯಾಗಬೇಕಾದರೆ ಕನ್ನಡ ಮಾಧ್ಯಮದಿಂದ ಶಿಕ್ಷಣದ ಪ್ರಸಾರವೇ ಮುಖ್ಯಸಾಧನ.

ಜೀವ ತಳೆದ ಶಿಲಾಪ್ರತಿಮೆ

೧೨-೮-೧೯೫-

ನಾನು ಈ ಪಾರ್ಕಿಗೆ ನಾಲ್ಕಾರು ಸಲ ಬಂದು ಅಲೆದಾಡಿದ್ದೇನೆ. ಆ ಮಾವಿನ ಮರದ ಶೀತಲ ಛಾಯೆಯಲ್ಲಿ ಕುಳಿತ ಶಿಲಾಮೂರ್ತಿಯನ್ನು ಈ ತನಕ ನಾನು ಕಂಡಿರಲಿಲ್ಲ. ಇದಾರ ವಿಗ್ರಹ? ವೀಣಾವಾದನದಲ್ಲಿ ನಿಮಗ್ನಳಾದ ಸುಂದರಿಯ ಮೂರ್ತಿ ಇದು. ಶಿಲ್ಪಿ ಈ ಮೋಹನ ಮೂರ್ತಿಯನ್ನು ಕಡೆಯುವುದರಲ್ಲಿ ತನ್ನ ಜಾಣ್ಮೆಯನ್ನೆಲ್ಲ ಬಳಸಿದ್ದಾನೆ.

ದುಂಡಗಿನ ಮಾಟವಾದ ಮುಖಮುದ್ರೆ. ತಾನು ನುಡಿಸುವ ವೀಣೆಯ ಮಧುರಸ್ವರಕ್ಕೆ ಮೆಚ್ಚಿ ಮೈಮರೆದುದನ್ನು ಸೂಚಿಸುವ ಅರೆದೆರೆದ ಕಣ್ಣುಗಳು. ತುಟಿಗಳ ಮೇಲೆ ಮೃದುಹಾಸದ ಮಲ್ಲಿಗೆ ಬಿರಿದಿದೆ. ವೀಣೆಯನ್ನು ನುಡಿಸುತ್ತಿರುವ ಈ ಪ್ರಮದೆ ಆರೆಡೆಗೆ ಈ ನಗೆಯ ಹೂವನ್ನು ಎಸೆಯುತ್ತಿರುವಳೋ? ಕಂಚುಕವು ಮರೆಗೊಳಿಸದ ತುಂಬು ಎದೆ ಆಕೆಯದು. ಎಡದ ಹೆಗಲಿಗೆ ಆನಿಸಿದ ವೀಣೆ ಆಕೆಯ ಪೀವರ ಪಯೋಧರವನ್ನು ಒತ್ತುತ್ತಿದೆ. ಬಲಗೈಯ ಬೆರಳುಗಳು ವೀಣೆಯ ತಂತಿಗಳ ಮೇಲೆ ಆಡುತ್ತಿವೆ. ಆಕೆ ವೀಣೆಯಲ್ಲಿ ಮೌನ ಗೀತವೊಂದನ್ನು ನುಡಿಸುತ್ತಿದ್ದಾಳೆ.

ಈ ಮೋಹನ ಮೂರ್ತಿಯನ್ನು ನೋಡಿದಷ್ಟು ಕಣ್ಣುಗಳ ಆರ್ತಿ ಹಿಂಗಲೊಲ್ಲದು, ನಾನು ಕರವಸ್ತ್ರದಿಂದ ವಿಗ್ರಹದ ಮೈಮೋರೆಗಳಿಗೆ ಅಂಟಿದ ಧೂಳವನ್ನು ತೊಡೆದು ತೆಗೆದೆ. ಕಣ್ಣುಗಳು ಸೋಲುವ ತನಕ ದಿಟ್ಟಿಸಿನೋಡಿದೆ

ಈ ಸುಂದರ ಮೂರ್ತಿಯನ್ನು ಕಡೆದ ಶಿಲ್ಪಿ ಯಾರೊ? ಆ ವಿಗ್ರಹದ ಹಿಂದೆ ಹುದುಗಿರುವ ಕತೆ ಏನೋ?

೧೩—೮—೧೯೫-

ಇಂದು ಕಾಲೇಜಿನಲ್ಲಿ ಪ್ರವಚನ ನಡೆಸಲು ಉತ್ಸಾಹವೇ ಬರಲಿಲ್ಲ. ನಿನ್ನೆ ನಾನು ಪಾರ್ಕಿನಲ್ಲಿ ಕಂಡ ವಿಗ್ರಹದ ರೂಪವೇ ನನ್ನ ಮನಸ್ಸಿನಲ್ಲಿ ತುಂಬಿದೆ. ಚರಿತ್ರೆಯ ಪ್ರಾಧ್ಯಾಪಕರು ಅದು ಹೊಯ್ಸಳರ ಕಾಲದ ಶಿಲ್ಪ; ಅದನ್ನು ಕಡೆದವನು ಗೋಪೋಜನೆಂಬ ಶಿಲ್ಪಿ ಎಂದು ಹೇಳಿದರು ಆ ಗೋಪೋಜನಿಗೆ ಈ ಸುಂದರ ಶಿಲ್ಪವನ್ನು ಕಡೆಯಲು ಸ್ಫೂರ್ತಿಯನ್ನು ಒದಗಿಸಿದ ಸಾಧನವೇನಿರಬಹುದು?

ತಂದೆಯಿಂದ ಕಾಗದ ಬಂದಿದೆ: "ನಿನಗೆ ಪ್ರಾಯ ಮೀರಿತು. ನಾನೊಂದು ಕನ್ಯೆಯನ್ನು ನೋಡಿದ್ದೇನೆ. ವಕೀಲ ಶಾಮಣ್ಣನವರ ಮಗಳು ರಾಜೀವಿ ಇಲ್ಲವೇ? ಅವಳೇ ಆ ಕನ್ಯೆ. ನೋಡಲು ಚಂದವಾಗಿದ್ದಾಳೆ. ನೀನು ದೀಪಾವಳಿ ರಜೆಯಲ್ಲಿ ಬಂದಾಗ ಆಕೆಯನ್ನು ನೋಡಬಹುದು" ಎಂದು ಅವರು ಬರೆದಿದ್ದಾರೆ.

ರಾಜೀವಿ ಪಾರ್ಕಿನಲ್ಲಿರುವ ಆ ಶಿಲಾಮೂರ್ತಿಗಿಂತ ಚೆನ್ನಾಗಿ ಇದ್ದಾಳೆಯೇ?

ಮೌನ ಗೀತವನ್ನು ನುಡಿಸುತ್ತಿರುವ ಆ ಶಿಲಾಕನ್ಯೆ ನನ್ನನ್ನು ಸೆಳೆಯುತ್ತಿದ್ದಾಳೆ. ಇಂದು ಸಂಜೆ ಪಾರ್ಕಿಗೆ ಹೋಗಲೇಬೇಕು.

೧೬—೮—೧೯೫

ಕಳೆದ ಮೂರು ದಿನಗಳಿಂದ ವಾಯು ವಿಹಾರಕ್ಕೆಂದು ಪಾರ್ಕಿಗೆ ಹೋಗಲಾಗಲಿಲ್ಲ.—ಪತ್ರಿಕೆಯ ಸಂಪಾದಕರು ದೀಪಾವಳಿಯ ವಿಶೇಷ ಸಂಚಿಕೆಗೊಂದು ಲೇಖನವನ್ನು ಕೇಳಿದ್ದಾರೆ. ಕಳೆದ ಮೂರು ದಿನಗಳಿಂದ ಲೇಖನ ನಿರ್ಮಾಣಕ್ಕೆ ಕೈ ಹಚ್ಚಿ ಕುಳಿತಿದ್ದೇನೆ.

ಕೋಣೆಯಲ್ಲಿ ಒಂದು ಬಗೆಯ ಮಧುರನಾದ ತುಂಬಿದೆ. ಅದು "ಬಾ. ಬಾ" ಎಂದು ನನ್ನ ಕರೆಯುತ್ತಿದೆ. ಹೀಗೆ ನನ್ನನ್ನು ಕರೆಯುವವರು ಯಾರು?

ಕೋಣೆಯೊಳಗೆ ಕುಳ್ಳಿರಲು ಶಕ್ಯವಿಲ್ಲ ಕೈಯಲ್ಲಿ ಹಿಡಿದ ಪೆನ್ನನ್ನು ಮೇಜದ ಮೇಲೆ ಎಸೆದು ಕೋಟು ಪೇಂಟುಗಳನ್ನು ತೊಟ್ಟುಕೊಂಡು ಹೊರಟಿದ್ದೇನೆ. ನನ್ನ ಕಾಲುಗಳು ನನ್ನನ್ನು ಪಾರ್ಕಿನ ಕಡೆಗೆ ಎಳೆದೊಯ್ಯುತ್ತಿವೆ.

ಮಾವಿನ ಮರದ ನೆರಳಲ್ಲಿ ನಿಂತು ವೀಣೆ ನುಡಿಸುತ್ತಿರುವ ಶಿಲಾಕನ್ಯೆಯನ್ನು ಕಣ್ದಣಿಯೆ ನೋಡಿದೆ. ನನ್ನ ಬೆರಳುಗಳಿಂದ ಆಕೆಯ ಮೈ ಕೈಗಳನ್ನೆಲ್ಲ ತಡವಿದೆ. ಮೂರ್ತಿಯ ಮೈಗೆ ಬೆರಳು ಸೋಂಕಿದಾಗ ನನ್ನ ಎದೆ ದ್ರುತಗತಿಯಿಂದ ತುಡಿದುಕೊಂಡಿತು.

ನಾನು ಹತ್ತು ಮಾರು ಆಚೆ ಹುಲ್ಲಿನ ಹಸೆಯ ಮೇಲೆ ಕುಳಿತು ಆ ಮೂರ್ತಿಯನ್ನು ಕಣ್ಣರಳಿಸಿ ನೋಡಿದೆ. ಆ ಶಿಲಾ ಸುಂದರಿಯ ಚೆಲುವನ್ನು ಮನದಲ್ಲಿ ತುಂಬಿಕೊಂಡೆ. ಕತ್ತಲು ಕವಿಯಿತು. ಆದರೂ ಈ ಉದ್ಯಾನದಿಂದ ಹೆಜ್ಜೆ ಕೀಳಲು ಮನಸ್ಸು ಬರಲೊಲ್ಲದು.

ಮಬ್ಬು ಕವಿಯಿತು. ಈಗ ಮೂರ್ತಿ ಸರಿಯಾಗಿ ಗೋಚರಿಸಲೊಲ್ಲದು. ಆದರೆ ಇದೇನಾಶ್ಚರ್ಯ ? ಆ ಶಿಲಾ ಕನ್ಯೆಯ ಕಣ್ಣುಗಳು ದೀಪ್ತಿಯೊಂದನ್ನು ಮುಕ್ಕಳಿಸಿದುವು. ಆ ನೇತ್ರಗಳಿಂದ ಸ್ಫುರಿಸಿದ ಸೌದಾಮಿನಿ ಬಂದು ನನ್ನ ಮೇಲೆರಗಿತು.

ನನಗೆ ಸುಮ್ಮನೆ ಕುಳಿತಿರಲಾಗಲಿಲ್ಲ. ನಾನು ಆ ವಿಗ್ರಹದ ಹತ್ತಿರ ಸರಿದೆ. ಆ ಕಣ್ಣುಗಳನ್ನು ಪರೀಕ್ಷಿಸಿದೆ. ಆದರೆ ಅಲ್ಲಿ ಪ್ರಕಾಶವಿರಲಿಲ್ಲ, ಯಾವುದೋ ಒಂದು ಬಗೆಯ ಭ್ರಾಂತಿ ಬಂದು ನನ್ನನ್ನು ಮುಸುಕಿತು. ನಾನು ಆ ಶಿಲಾಬಾಲಿಕೆಯ ತುಟಿಗಳನ್ನು ಚುಂಬಿಸಿದೆ.

ವಿಗ್ರಹದ ತುಟಿಗಳ ಬಿಸುಪು ನನ್ನ ತುಟಿಗಳಿಗೆ ತಟ್ಟಿತು. ಮೂಗಿನಿಂದ ಹೊಮ್ಮಿದ ನಿಶ್ವಾಸ ನನ್ನ ಕೆನ್ನೆಯನ್ನು ಸೋಂಕಿತು. ಶಿಲಾಪ್ರತಿಮೆ ಉಸಿರಾಡುವುದೇ? ಈ ಸಂಗತಿಯನ್ನು ಯಾರೂ ನಂಬರು. ಇದು ಬರಿಯ ಭ್ರಮೆ; ಮನಸ್ಸಿನ ಮಾಯೆ.

೧೭—೮—೧೯೫-

ದೇಹಕ್ಕೆ ತುಂಬಾ ಆಯಾಸವಾಗಿದೆ. ಎಂದಿನಂತೆ ಪಾರ್ಕಿನಲ್ಲಿ ವಿಹರಿಸಲು ಹೋಗಲಿಲ್ಲ. ಇರುಳು ಬೇಗನೆ ಹೋಟೆಲಿನಲ್ಲಿ ಊಟ ಮುಗಿಸಿ ಕೋಣೆಗೆ ಬಂದು ಮಲಗಿಕೊಂಡೆ. ನನ್ನ ಮನಸ್ಸು ಹುಚ್ಚು ಕಲ್ಪನೆಗಳ ಜಾಳಿಗೆಯನ್ನು ಹೆಣೆಯತೊಡಗಿತು. ಪಾರ್ಕಿನಲ್ಲಿ ಮಾವಿನ ಮರದಡಿಯಲ್ಲಿ ನೆಲೆಗೊಂಡ ಆ ಶಿಲಾ ಪ್ರತಿಮೆ ಜೀವ ತಳೆದು ಬಂದರೆ !

ಎಂತಹ ಹುಚ್ಚು ಕಲ್ಪನೆ ಇದು !

ನಾನು ಹಾಸಿಗೆಯ ಮೇಲೆ ಎಷ್ಟು ಸಮಯ ನಿದ್ರಿಸಿದೆನೆಂಬುದು ತಿಳಿಯದು. ಒಮ್ಮೆಗೆ ನನಗೆ ಎಚ್ಚರವಾಯಿತು. ಮೇಜದ ಮೇಲಿದ್ದ ಕೈಗಡಿಯಾರವನ್ನು ನೋಡಿದೆ. ಇರುಳು ಒಂದು ತಾಸಾಗಿತ್ತು. ಹೊರಗೆ ಬೀದಿಯಿಂದ ಸುಮಧುರ ವೀಣಾಗಾನದ ತರಂಗಗಳು ಕೋಣೆಯೊಳಗೆ ಹರಿದು ಬರುತ್ತಿವೆ. ಜಾತ್ರೆಯ ಮೆರವಣಿಗೆಯೊಂದು ಬರುತ್ತಿರಬಹುದೆಂದು ನಾನು ಆಲೋಚಿಸಿದೆ. ಆದರೆ ಕೊಂಬು ತಂಬಟೆ ನಗಾರಿಗಳ ಆರ್ಭಟಗಳಿಲ್ಲ. ಜನರ ಸದ್ದು ಗದ್ದಲಗಳಿಲ್ಲ. ಬೀದಿ ನೀರವವಾಗಿದೆ ಆದರೆ ವೀಣಾನಾದ ಮಾತ್ರ ಅಲೆ ಅಲೆಯಾಗಿ ಬಂದು ನನ್ನ

ಕಿವಿಗಳನ್ನು, ಹೊಕ್ಕು ಜೀವವನ್ನು ಅಲ್ಲಾಡಿಸುತ್ತಿದೆ

ನಾನು ಹಾಸಿಗೆಯಿಂದ ಎದ್ದು ಕಿಟಕಿಯ ಬಳಿಗೆ ಬಂದೆ. ಹೊರಗೆ ಇಣುಕಿ ನೋಡಿದೆ. ಬೀದಿ ನಿರ್ಜನವಾಗಿದೆ. ನೀರವತೆಯು ಆಗರವಾಗಿದೆ. ಆದರೆ ವೀಣಾಗಾನ ಮಾತ್ರ ತುಂಡಾಗದೆ ಬರುತ್ತಿದೆ. ಅಕ್ಕಪಕ್ಕದ ಮನೆಯವರು ವೀಣೆಯನ್ನು ನುಡಿಸುತ್ತಿರುವರೇನೋ ಎಂದು ಒಮ್ಮೆ ಆಲೋಚಿಸಿದೆ. ಆದರೆ ನಡುವಿರುಳು ಸಂಗೀತಾಭ್ಯಾಸಕ್ಕೆ ಹೊರಡುವ ಮರುಳರು ಯಾರಿದ್ದಾರೆ? ಪಳಗಿದ ಬೆರಳುಗಳು ವೀಣೆಯ ತಂತಿಗಳ ಮೇಲೆ ಆಡಿದಾಗ ಹೊಮ್ಮುವ ಇನಿದನಿಯದು.

ನಾನು ಬೀದಿಯಿಂದ ಕಣ್ಣುಗಳನ್ನು ಕೀಳಲಿಲ್ಲ. ಆ ವೀಣಾಗಾನವನ್ನು ಸವಿಯುತ್ತಾ ಕಿಟಕಿಯ ಪಕ್ಕದಲ್ಲಿ ನಿಂತೆ. ಬೀದಿಯ ದೀಪದ ಮಬ್ಬು ಬೆಳಕಿನಲ್ಲಿ ಮನುಷ್ಯಾಕೃತಿಯೊಂದು ಬೀದಿಯಲ್ಲಿ ನಡೆದು ಬರುತ್ತಿರುವುದು ನನಗೆ ಗೋಚರಿಸಿತು. ನಡುರಾತ್ರಿಯಲ್ಲಿ ಹೆಣ್ಣುಮಗಳೊಬ್ಬಳು ವೀಣೆಯನ್ನು ನುಡಿಸುತ್ತಾ ಬರುತಿದ್ದಾಳೆ. ಇವಳಾವ ಮರುಳು ಹಿಡಿದ ಹೆಂಗಸು.

ಈಗ ಆಕೆಯ ಆಕೃತಿ ಸುವ್ಯಕ್ತವಾಗಿ ಕಾಣಿಸಿತು. ಕಪ್ಪು ಬಣ್ಣದ ದುಂಡಗಿನ ಮೋರೆ ಆಕೆಯದು. ಆದರೆ ಕಾಂತಿಯುತವಾಗಿದೆ. ಕಣ್ಣುಗಳು ಅಪೂರ್ವವೆನಿಸಿದ ಪ್ರಭಾ ಪುಂಜವನ್ನು ಎರಚುತ್ತಿವೆ. ಸೊಂಟದಿಂದ ಮೇಲೆ ಆಕೆಯ ಮೈಯನ್ನು ವಸ್ತ್ರ ಆವರಿಸಿಲ್ಲ. ಬೆಳದಿಂಗಳಲ್ಲಿ ಆಕೆಯ ಕುಂಭ ಕುಚಗಳು ಎದ್ದು ತೋರುತ್ತಿವೆ. ಹೆಣಲಿಕ್ಕಿದ ಕೇಶರಾಜಿ ಗಾಳಿಗೆ ಸಿಲುಕಿ ಕೆದರಿದೆ. ಎಡದ ಹೆಗಲ ಮೇಲಿರಿಸಿದ ವೀಣೆಯ ತಂತಿಗಳನ್ನು ಬೆರಳುಗಳಿಂದ ಮೀಟುತ್ತಾ ಆಕೆ ಏಕಾಂಗಿನಿಯಾಗಿ ಬೀದಿಯಲ್ಲಿ ಬರುತ್ತಿದ್ದಾಳೆ.

ನಡುವಿರುಳು ಬೀದಿಗಳಲ್ಲಿ ವೀಣೆನುಡಿಸುತ್ತಾ ವಿಹರಿಸ ಹೊರಟ ದಿಟ್ಟೆ ಯಾರೆಂದು ಒಂದು ಕ್ಷಣ ಆಲೋಚಿಸಿದೆ. ಉದ್ಯಾನದಲ್ಲಿ ಮಾವಿನ ಮರದ ಛಾಯೆಯಲ್ಲಿ ಕುಳಿತ ಶಿಲಾಕನ್ಯೆ ಇವಳು ಎಂಬುದು ನನಗೆ ಹೊಲಬಾಯಿತು. ನನ್ನ ಎದೆ ಭಯಾಶ್ಚರ್ಯಗಳಿಂದ ತುಡಿದುಕೊಂಡಿತು ನಿರ್ಜೀವವಾದ ಕಲ್ಲುಗೊಂಬೆ ಎದ್ದು ಬೀದಿಯಲ್ಲಿ ನಡೆದು ಬರುವುದೆಂದರೇನು? ನಾನು ಕಿಟಕಿಯ ಸರಳುಗಳನ್ನು ಹಿಡಿದು ಆಕೆ ದೃಷ್ಟಿಯಿಂದ ಮರೆಯಾಗುವ ತನಕ ನೋಡುತ್ತಾ ನಿಂತೆ.

ವೀಣೆಯ ಸದ್ದು ಅಡಗಿದ ಮೇಲೆ ನಾನು ಹಾಸಿಗೆಯ ಮೇಲೆ ಹೊರಳಿ ಆಲೋಚಿಸಿದೆ. ನಾನು ಹುಡುಗನಾಗಿದ್ದಾಗ ಓದಿದ ಕಿನ್ನರರ ಕತೆಯೊಂದು ನೆನಪಿಗೆ ಬಂದಿತು. ಒಬ್ಬ ಮಾಯಾವಿಯ ಪ್ರಭಾವದಿಂದ ಒಂದು ನಗರದ ಅರಸ - ಅರಸಿಯರು, ಪರಿವಾರದವರು ಮತ್ತು ಪ್ರಜೆಗಳು ಕಲ್ಲುಗೊಂಬೆಗಳಾಗಿ ಹೋದರಂತೆ. ಆದರೆ ಇರುಳು ಹೊತ್ತು ಈ ಪ್ರತಿಮೆಗಳೆಲ್ಲ ಜೀವ ತಳೆದು ಸಂಚರಿಸುತ್ತಿದ್ದುವಂತೆ. ಮಾವಿನ ಮರದ ಅಡಿಯಲ್ಲಿ ನೆಲೆಗೊಂಡ ಈ

ಸುಂದರಿ ಮುನಿಯೊಬ್ಬನ ಶಾಪದಿಂದ ಹಗಲು ಹೊತ್ತು ಶಿಲೆಯಾಗಿ ಹೋಗಿರುವಳೇ? ಇರುಳು ಹೊತ್ತು ಶಾಪದಿಂದ ಬಿಡುಗಡೆ ಹೊಂದಿ ನಗರ ಸಂಚಾರಕ್ಕೆ ಹೊರಟಿರುವಳೆ? ಇದು ನನ್ನ ಊಹೆಗೂ ಎಟಕದ ಸಂಗತಿ

೧೮ – ೮ – ೧೯೫-

ಇಂದು ಕಾಲೇಜಿನಲ್ಲಿ ಫೈನಲ್ ಬಿ. ಎ. ತರಗತಿಯವರಿಗೆ ಕೊಟ್ಟ ಪ್ರವಚನವೆಲ್ಲ ಕೆಟ್ಟು ಹೋಯಿತು. 'ವೆನ್ನಿಸು ನಗರದ ವರ್ತಕ' ಎಂಬ ಶೇಕ್ಸ್‌ಪಿಯರನ ನಾಟಕದಲ್ಲಿ ಷೈಲಾಕನ ಪಾತ್ರ ಸೃಷ್ಟಿಯ ಬಗ್ಗೆ ವ್ಯಾಖ್ಯಾನ ಕೊಡುವುದರ ಬದಲು 'ಮೇಕ್‌ಬೆತ್' ನಾಟಕದಲ್ಲಿ ಬರುವ ಮಾಯಾವಿನಿಯರ ಬಗ್ಗೆ ಪ್ರವಚನ ನಡೆಸಿದೆ. ವಿದ್ಯಾರ್ಥಿಗಳು ಗೊಳ್ಳೆಂದು ನಕ್ಕು ಗದ್ದಲವೆಬ್ಬಿಸಿದಾಗಲೇ ನನಗೆ ಎಸಗಿದ ಪ್ರಮಾದದ ಅರಿವಾದುದು ಪ್ರವಚನಕ್ಕೆ ಆಗತ್ಯವಾದ ಸಿದ್ಧತೆಗಳನ್ನು ಮಾಡಿಕೊಂಡೇ ನಾನು ತರಗತಿಗೆ ಹೋದುದು. ನನ್ನ ಬುದ್ಧಿಗೆ ಹೀಗೇಕೆ ಮಂಕು ಬಡಿದಿತೆಂಬುದು ನನಗೆ ತಿಳಿಯುತ್ತಿಲ್ಲ.

ಸಂಜೆ ಎಂದಿನಂತೆ ನಾನು ಪಾರ್ಕಿಗೆ ಹೋದೆ. ಶಿಲಾಕನ್ಯೆ ಮಾವಿನ ಮರದ ಅಡಿಯಿಂದ ಕದಲಿರಲಿಲ್ಲ. ವಿಗ್ರಹದ ಮೈ ಮೇಲೆ ಬೆರಳಾಡಿಸಿದೆ. ಅದು ನಿರ್ಜೀವ ಶಿಲೆಯಾಗಿತ್ತು. ನಾನು ಆ ಶಿಲಾ ಸುಂದರಿಯ ನೆತ್ತಿಯ ಮೇಲೆ ಬೆರಳಾಡಿಸುತ್ತಾ "ಎಲೆ ಮಾಟಗಾತಿ! ಇರುಳು ವೀಣೆಯನ್ನು ನುಡಿಸುತ್ತಾ ಬೀದಿಯಲ್ಲಿ ಸಂಚರಿಸಿ ನನ್ನನ್ನು ಬೆದರಿಸಿದೆಯಲ್ಲ?" ಎಂದು ಉದ್ಗಾರ ವೆತ್ತಿದೆ. ಶಿಲಾಮೂರ್ತಿ ನನಗೆ ಮಾರುಲಿಯಲಿಲ್ಲ.

ಹೋದ ಇರುಳು ನಾನು ಕಂಡುದು ಬರಿಯ ಭ್ರಮೆ. ಶಿಲಾ ಪ್ರತಿಮೆ ಎಂದಿಗೂ ಜೀವ ತಳೆದು ಬೀದಿಯಲ್ಲಿ ಸಂಚರಿಸದು ಎಂದು ನನ್ನಲ್ಲಿಯೇ ಹೇಳಿಕೊಂಡೆ.

ಆ ಇರುಳು ನಾನು ಮರುದಿನ ತರಗತಿಗಳಲ್ಲಿ ನಡೆಸಬೇಕಾದ ಪಾಠ ಪ್ರವಚನಗಳಿಗೆ ಆಗತ್ಯವಾದ ಸಿದ್ಧತೆಗಳನ್ನು ಮಾಡಿ ಮುಗಿಸಿದಾಗ ಹನ್ನೊಂದು ತಾಸು ಕಳೆದಿತ್ತು. ಹಾಸಿಗೆಯ ಮೇಲೆ ಹೊರಳಿದೆ. ಆದರೆ ನನ್ನ

ಕಣ್ಣುಗಳಿಗೆ ನಿದ್ದೆ ಹತ್ತಲೊಲ್ಲದು. ಡಿ. ಎಚ್. ಲಾರೆನ್ಸನ ಕಾಂಗರೂ ಎಂಬ ಕಾದಂಬರಿಯನ್ನು ಎತ್ತಿಕೊಂಡು ಓದಲು ಪ್ರಯತ್ನಿಸಿದೆ. ಯಾವಾಗ ನನಗೆ ನಿದ್ದೆ ಬಂತೆಂಬುದು ತಿಳಿಯದು. ವೀಣಾವಾದನದ ಮಧುರ ಧ್ವನಿ ನನ್ನನ್ನು ಎಚ್ಚರಿಸಿತು

ಆ ಮೋಹನ ಗಾನವನ್ನು ಕೇಳಿದಾಗ ನನ್ನ ಮೈಯೊಳಗೆ ಮಿಂಚು ಹೊಕ್ಕಂತಾಯಿತು. ನಾನು ಲಗುಬಗೆಯಿಂದ ಹಾಸಿಗೆಯಿಂದ ಎದ್ದು ಕಿಟಕಿಯ ಸರಳುಗಳನ್ನು ಹಿಡಿದು ಇಣಿಕಿ ಬೀದಿಯನ್ನು ನೋಡಿದೆ.

ಶಿಲಾ ಸುಂದರಿ ಉದ್ಯಾನದ ಮಾವಿನ ಹಂದರದ ನೆರಳನ್ನು ತೊರೆದು ನಾನಿರುವ ಮನೆಯ ಮುಂಬಾಗಿಲಿಗೆ ಬಂದಿದ್ದಳು. ಅವಳು ವೀಣೆಯನ್ನು ನುಡಿಸುತ್ತ ಮೆಟ್ಟಲಲ್ಲಿ ನಿಂತಿದ್ದಳು. ಆಕೆಯ ಕಣ್ಣುಗಳೆಸೆದ ಬೆಳಕಿನ ಮಿಡಿನಾಗರ ಹರಿದು ಬಂದು ನನ್ನ ಜೀವವನ್ನು ಬಳಸಿತು.

ವೀಣೆಯ ತಂತಿಗಳು ಸೂಸುತಿದ್ದುದು ಸಂಗೀತವಲ್ಲ, ಜೀವವನ್ನು ಇರ್ಕುಳಿಗೊಳಿಸುವ ಮಾದಕತೆ ತುಂಬಿದ ಮದಿರಾ ಪ್ರವಾಹ. ಆ ಗಾನವನ್ನು ಕೇಳುತಿದ್ದಂತೆಯೇ ನನ್ನ ಜೀವ ಅಮಲಿಗೆ ಒಳಗಾಯಿತು ನಾನು ಸುತ್ತಲಿನ ಜಗತ್ತನ್ನು ಮರೆತೆ; ಸುತ್ತಲಿನ ಜಗತ್ತನ್ನು ಮರೆತ. ಸಂಗೀತದ ಮದಿರೆಯ ಕಡಲಲ್ಲಿ ತೇಲುತ್ತಿರುವ ಶಿಶು ನಾನು!

ನನಗೆ ಪ್ರಜ್ಞೆ ಬಂದಾಗ ವೀಣಾಗಾನ ನಿಂತಿತ್ತು. ಮನೆಯ ಮೆಟ್ಟಲಲ್ಲಿ ನಿಂತ ಶಿಲಾಬಾಲೆಯೂ ಮಾಯವಾಗಿದ್ದಳು ಮೂಡಲಿನ ಬಾನಂಚು ಆಗ ತಾನೇ ಅರುಣ ರಾಗವನ್ನು ತಳೆಯತೊಡಗಿತ್ತು. ಕಿಟಕಿಯಿಂದ ಬೀಸಿಬಂದ ಕುಳಿರೆಲರು ನನ್ನ ಮೈಯನ್ನು ನಡುಗಿಸುತ್ತಿತ್ತು.

೨೧—೮—೧೯೫-

ನಾನೀಗ ಸ್ಥಿರ ಸಂಕಲ್ಪವನ್ನೂ ಮನೋದಾರ್ಢ್ಯವನ್ನೂ ಕಳೆದುಕೊಂಡಿದ್ದೇನೆ ಆ ಅಲೌಕಿಕ ವೀಣಾವಾದನದ ತೊರೆಯಲ್ಲಿ ಮುಳುಗಲು ನನ್ನ ಜೀವ ಚಾದಗೆಯಂತೆ ಚಡಪಡಿಸುತ್ತಿದೆ ಆ ಶಿಲಾಕನ್ಯೆ ಯಾವಾಗ ನನ್ನ ಕೋಣೆಯ ಮುಂದೆ ಬಂದಾಳು; ವೀಣೆಯನ್ನು ನುಡಿಸಿ ನನ್ನ ಮೈಯಲ್ಲಿ ಮಿಂಚಿನ ರಸವನ್ನು ತುಂಬಿಸಿಯಾಳು ಎಂದು ಉತ್ಸುಕತೆಯಿಂದ ಇದಿರು ನೋಡುತ್ತಿದ್ದೇನೆ.

ಈ ಅಲೌಕಿಕ ಅನುಭವವನ್ನು ಗೆಳೆಯರಿಗೆ ಹೇಳಲೇ? ಬೇಡ ತುದಿಗೊಂಬೆಯಲ್ಲಿ ತೂಗುತ್ತಿರುವ ಸೊಗಸಿನ ಕಿತ್ತಳೆ ಹಣ್ಣು ಅದು ಅದನ್ನು ಗೋಪ್ಯವಾಗಿ ನಾನೊಬ್ಬನೇ ಕಿತ್ತು ಆಸ್ವಾದಿಸಬೇಕು ಗೆಳೆಯರಿಗೆ ತಿಳಿಸಿದರೆ, ಅವರು ಈತನಿಗೆ ಮರುಳು ಹಿಡಿದಿದೆ ಎಂದು ಹಾಸ್ಯ ಮಾಡಿಯಾರು!

ಹೌದು ಶಿಲಾಬಾಲಿಕೆಯೊಬ್ಬಳೇ ಬೀದಿಯಲ್ಲಿ ಬರುತ್ತಿದ್ದಾಳೆ. ಆಕೆ ಇಕ್ಕುತ್ತಿರುವ ಹೆಜ್ಜೆಗಳ ಸದ್ದು ನನಗೆ ಕೇಳಿಸುತ್ತಿದೆ. ಅಗೋ, ಬಾಗಿಲಲ್ಲಿ ನಿಂತು ವೀಣೆಯ ತಂತಿಗಳನ್ನು ಮೀಟತೊಡಗಿದ್ದಾಳೆ ನಾನು ಮೈಯೆಲ್ಲ ಕಿವಿಯಾಗಿ ಆ ಗಾನಮದಿರೆಯನ್ನು [illegible].

ಅವಳೇಕೆ ಬಾಗಿಲಲ್ಲಿ ನಿಂತು ವೀಣೆಯನ್ನು ನುಡಿಸುತ್ತಿದ್ದಾಳೆ! ಇಲ್ಲ ನನ್ನ ಸನಿಹಕ್ಕೆ ಬರಬಾರದೆ? ನನ್ನ ಪಕ್ಕದಲ್ಲಿ ಕುಳಿತು ವೀಣೆಯನ್ನು ನುಡಿಸಬಾರದ? ಉದ್ಯಾನದ ಮಾವಿನ ಮರದ ಅಡಿಯಿಂದ ಎದ್ದು ಬಂದವಳು ಉಪ್ಪರಿಗೆಯ ಸೋಪಾನಗಳನ್ನು ಏರಲಾರಳೆ?

"ಏನು ನನ್ನನ್ನು ಕರೆದೆಯಾ?" ಮಂಜುಳ ಧ್ವನಿಯೊಂದು ಕೇಳಿಸಿತು. "ನೀನು ಕರೆಯುವಾಗ ನಾನು ಬಾರದೆ ಇರುತ್ತೇನೆಯೇ?"

ನನ್ನ ಎದೆ ಬಡಿದುಕೊಂಡಿತು ಉಪ್ಪರಿಗೆಯ ಮೆಟ್ಟಲುಗಳನ್ನು ಏರಿ ಬರುವ ಸದ್ದು ಕೇಳಿಸಿತು. ನಾನು ಕೋಣೆಯ ಕದಗಳನ್ನು ತೆರೆಯುವನೆಂದು ಹಾಸಿಗೆಯಿಂದ ಎದ್ದೆ. ಅನಿತರಲ್ಲಿ ಅವಳು ಕದಗಳ ಸಂದಿನಿಂದ ತೂರಿ ಒಳಗೆ ಬಂದಿದ್ದಳು ಆಕೆಯ ನೇತ್ರ ದೀಪ್ತಿ ಕೋಣೆಯೊಳಗೆ ತುಂಬಿದ ಕತ್ತಲನ್ನು ಓಡಿಸಿತು. ಅವಳು ನನ್ನೆಡೆಗೆ ಮಂದಹಾಸದ ಮಂದಾರವೊಂದನ್ನು ಎಸೆದಳು. ಆಕೆಯ ಉಸಿರಿನ ಕಂಪು ನನ್ನ ಮೂಗಿಗೆ ಬಡಿದಿತು. ಇನ್ನೊಂದು ಕ್ಷಣದಲ್ಲಿ ನನ್ನ ದೇಹಕ್ಕೆ ಅಂಟಿದ ನೋವು ಬಳಲಿಕೆಗಳೆಲ್ಲ ನೀಗಿದುವು

"ಬಾ, ಕುಳ್ಳಿರು." ನಾನು ಮಂಚದ ಎಡೆಗೆ ಕೈ ತೋರಿಸಿದೆ

ಆಕೆ ದಿಟ್ಟತನದಿಂದ ಬಂದು ಮಂಚದ ಮೇಲೆ ಆಸೀನಳಾದಳು ಅವಳು ವೀಣೆಯನ್ನು ಹೆಗಲ ಮೇಲೆ ಒರಗಿಸಿ "ನುಡಿಸಲಾ?" ಎಂದು ಕೇಳಿದಳು.

"ಹೂಂ" ಎಂದು ಪಡಿನುಡಿದೆ.

ಅವಳು ತಂತಿಗಳ ಮೇಲೆ ಬೆರಳಾಡಿಸಿದಳು ಸವಿಗಾನದ ಅಮೃತ ವರ್ಷ ಕೋಣೆಯೊಳಗೆ ಜಿನುಗಿತು. ಅವಳು ನಿರ್ಜೀವವಾದ ವೀಣೆಯನ್ನಲ್ಲ ನುಡಿಸುತ್ತಿರುವುದು. ನಾನೇ ಆಕೆಯ ಹೆಗಲಿಗೆ ಆತುಕೊಂಡಿರುವ ವೀಣೆ ಆಕೆ ನನ್ನ ಜೀವ ತಂತಿಯನ್ನು ಮೀಟಿ ನುಡಿಸುತ್ತಿದ್ದಾಳೆ.

೨೪ ೮—೧೯೫-

ಕಳೆದ ಎರಡು ಇರುಳುಗಳಿಂದ ಆಕೆ ತಪ್ಪದೆ ನನ್ನ ಕೋಣೆಗೆ ಬರುತ್ತಿದ್ದಾಳೆ. ವೀಣೆಯನ್ನು ನುಡಿಸಿ ನನ್ನ ಹೃದಯದ ಸಂತಾಪವನ್ನು ಕಳೆಯುತ್ತಿದ್ದಾಳೆ

ಅವಳು ಯಾರು? ಕಲ್ಲುಗೊಂಬೆ ನಡೆದು ಬರುವುದುಂಟೆ? ವೀಣೆ ನುಡಿಸುವುದುಂಟೆ? ಆಕೆಯ ಮೈಯನ್ನು ತಡವಿ ಪರೀಕ್ಷಿಸಬೇಕೆಂದು ನನಗೆ ಅನಿಸುತ್ತದೆ ಆದರೆ ನನಗೆ ಧೈರ್ಯವಾಗದು

ಅವಳು ಬರುವ ವೇಳೆಯಾಯಿತು ಸೋಪಾನವನ್ನೇರುವ ಹೆಜ್ಜೆಗಳ ಸದ್ದು ಕೇಳಿಸುತ್ತಿದೆ ಆ ಹೆಜ್ಜೆಗಳ ತಾಳಕ್ಕೆ ಸರಿಯಾಗಿ ನನ್ನ ಎದೆ ಬಡಿದುಕೊಳ್ಳುತ್ತಿದೆ ಅವಳಿಗೆ ತೊಂದರೆಯಾಗದಿರಲಿ ಎಂದು ಕೋಣೆಯ ಕದಗಳನ್ನು ತೆರೆದೇ ಇರಿಸಿದ್ದೇನೆ

ಅವಳು ಬಂದು ನನ್ನ ಸನಿಹದಲ್ಲಿ ಕುಳಿತುಕೊಂಡಳು ನಾನು ಕೈಯೆತ್ತಿ ಆಕೆಯ ಚೆಲುಮೊಗವನ್ನು ಸವರಿದೆ. ಆಕೆಯ ತುಂಗವಕ್ಷದ ಮೇಲೆ [illegible]. ಬೆನ್ನ ಮೇಲೆ ಕೈಯಾಡಿಸಿದೆ. ಆಕೆ ಬೇಡವೆಂದು ನನ್ನನ್ನು ತಡೆಯಲಿಲ್ಲ. ಆರ್ದ್ರ ತುಂಬಿದ ಕಣ್ಣುಗಳಿಂದ ಅವಳು ನನ್ನನ್ನು ನೋಡುತ್ತಿದ್ದಳು ಅವಳು ಕಲ್ಲುಗೊಂಬೆಯಲ್ಲ. ರಕ್ತಮಾಂಸ ತುಂಬಿದ ಮೈಯುಳ್ಳ ಮಾನವಳು. ಆ ದೇಹದ ಮಾಟ ಮತ್ತು ಸೊಬಗುಗಳು ನನ್ನ ಬಗೆಯನ್ನು ಕದಡಿದುವು. ನಾನು ಆಕೆಯ ಹೆಗಲ ಮೇಲೆ ತೋಳಿರಿಸಿ ಎಷ್ಟು ಹೊತ್ತು ಕುಳಿತಿದ್ದೆನೋ!

"ನೀನು ಯಾರು?" ನಾನು ಪಿಸುದನಿಯಲ್ಲಿ ಕೇಳಿದೆ

"ನಿನಗೆ ತಿಳಿಯದೇ?"

"ಇಲ್ಲ ನಾನು ತಿಳಿಯೆ"

"ನಾನು ಮಾಚಕಬ್ಬೆ"

"ಮಾಚಕಬ್ಬೆ!" ನಾನು ವಿಸ್ಮಯದ ದನಿಯೆತ್ತಿದೆ

"ಹೌದು. ಹೊಯ್ಸಳ ನರಸಿಂಹ ದೇವರ ಮುನ್ನೂರ ಅರುವತ್ತು ರಾಣಿಯರಲ್ಲಿ ನಾನೂ ಒಬ್ಬಳು!"

ಹೊಯ್ಸಳ ನರಸಿಂಹ ದೇವ! ಆತನ ಕಾಲ ಕಳೆದು ಎಂಟು ಶತಮಾನಗಳು ಸಂದಿವೆ. ಎಂಟು ನೂರು ವರ್ಷಗಳ ಹಿಂದಿನ ಹೆಣ್ಣು ಜೀವಂತಳಾಗಿರುವುದು ಅಸಂಭವ ನನ್ನನ್ನು ಬಂಧಿಸಿದ ಬೆರಗು ತುಟಿ ತೆರೆಯಲು ಬಿಡಲಿಲ್ಲ.

"ನೀನೇಕೆ ಮಾತಾಡುವುದಿಲ್ಲ?" ಮಾಚಕಬ್ಬೆ ಕೇಳಿದಳು: "ನೀನು ಯಾರೆಂಬುದನ್ನು ನಾನು ಬಲ್ಲೆ. ಕಳೆದ ಎಂಟುನೂರು ವರ್ಷಗಳಿಂದ ನಾನು ನಿನ್ನನ್ನು ಹುಡುಕುತ್ತಿದ್ದೇನೆ"

"ನಾನು ಯಾರು? ಎಂಟು ಶತಮಾನಗಳಿಂದ ಏಕೆ ಹುಡುಕುತ್ತಿದ್ದೆ?"

"ಒಳ್ಳೆಯ ಮಾತು ಹೇಳುತ್ತಿರುವೆಯಲ್ಲ? ನೀನು ನನ್ನ ಮೂರ್ತಿಯನ್ನು ಕಡೆದ ಗೋಪೋಜನಲ್ಲವೇ? ನಿನ್ನ ಕಲಾಕುಶಲತೆ, ನಿನ್ನ ರೂಪು, ನಿನ್ನ ಮಾತುಗಾರಿಕೆಯ ಸೊಗಸು ಇವುಗಳಿಗೆ ಮಾರುಹೋದ ನಾನು ನಿನಗೆ ನನ್ನ ಹೃದಯವನ್ನೇ ಅರ್ಪಿಸಿದೆ. ನಾನು ಮಾಡಿದ ಅಪರಾಧಕ್ಕೆ ನೀನು ಶೂಲವನ್ನೇರಬೇಕಾಯಿತು!"

ನಾನು ಗೋಪೋಜ; ಮಾಚಕಬ್ಬೆಯ ಪ್ರೇಮವನ್ನು ಅಪಹರಿಸಿದ ಅಪರಾಧಕ್ಕೆ ಶೂಲಾರೋಹಣ! ಇವು ನನ್ನ ಊಹೆಗೂ ನಿಲುಕದ ಸಂಗತಿಗಳು!

"ನಾನು ಗೋಪೋಜ ಹೇಗಾದೇನು?" ಕೊನೆಗೆ ನಾನು ಮಾತಾಡಿದೆ: "ನಾನು ಇಪ್ಪತ್ತನೆಯ ಶತಮಾನದ ಮನುಷ್ಯ."

"ನೀನು ಯಾರೆಂಬುದು ನಿನಗೇ ತಿಳಿಯದು"

ಮಾಚಕಬ್ಬೆ ನಗೆಯ ಮಿಂಚೊಂದನ್ನು ಎಸೆದಳು "ನೀನು ಪುನರ್ಜನ್ಮವೆತ್ತಿ ಬರುವುದನ್ನು ನಾನು ಎಂಟುನೂರು ವರ್ಷಗಳಿಂದ ಕಾಯುತ್ತಿದ್ದೇನೆ ಎಂಟುನೂರು ವರ್ಷಗಳಿಂದ ಅಲೆಯುತ್ತಿದ್ದೇನೆ. ನೀನು ಮರುಹುಟ್ಟನ್ನು ಪಡೆದು ನನ್ನ ಎಡೆಗೆ ಬರುವೆಯೆಂಬ ನಂಬಿಕೆ ನನಗಿತ್ತು. ಅದೀಗ ದಿಟವಾಯಿತು"

"ನೀನೇಕೆ ಪುನರ್ಜನ್ಮ ತಾಳಲಿಲ್ಲ?" ನಾನು ಕೇಳಿದೆ: "ಆಗ ನಿನಗೆ ಎಂಟು

ಕೆತ್ತ ಮಾನಗೆಳೆ ಬೇಗುದಿ ತಪ್ಪುತ್ತಿತ್ತು!"

"ಅದು ಹೇಗೆ ಸಾಧ್ಯ? ನಿನ್ನನ್ನು ಶೂಲಕ್ಕೇರಿಸಿದ ದಿನ ಪೊಯ್ಸಳೇಶ್ವರ ದೇವಾಲಯದಲ್ಲಿ ಕಾರ್ತಿಕೋತ್ಸವವಿತ್ತು. ಅಂದಿನ ಇರುಳು ನಾನು ಸ್ವಾಮಿಗೆ ಸಂಗೀತ ಸೇವೆಯನ್ನು ಸಲ್ಲಿಸಬೇಕಾಗಿತ್ತು. ಅಂದೂ ನನ್ನ ಎದೆ ದುಃಖದಿಂದ ಭಾರವಾಗಿತ್ತು. ಬೇಗುದಿಗೊಂಡ ಮನದೊಡನೆ ಈಶ್ವರನಿಗೆ ಸಂಗೀತ ಸೇವೆಯನ್ನು ಸಲ್ಲಿಸಿದೆ. "ಸ್ವಾಮಿ, ಇನ್ನೊಂದು ಜನ್ಮದಲ್ಲಿಯಾದರೂ ಇನಿಯನನ್ನು ಕೂಡುವ ಕೃಪೆ ಮಾಡು" ಎಂದು ಕೈಮುಗಿದು ಬೇಡಿಕೊಂಡೆ. ಸಂಗೀತ ಸೇವೆಯನ್ನು ಮುಗಿಸಿದ ಮೇಲೆ ನಾನು ಅರಮನೆಗೆ ಮರಳಲಿಲ್ಲ. ಈ ದೇಹದ ಬಂಧನ ಕಳಚಿ ಹಾಕಲು ನಿಶ್ಚಯಿಸಿದೆ. ನಾನು ಸರೋವರದ ಬಸಿರಿಗಿಳಿದು ದೇಹವನ್ನು ನೀಗಿಕೊಂಡೆ. ನನ್ನ

ಜೀವ ಹೋಗಿ ನೀನು ಕೆತ್ತಿದ ಅಂದದ ಶಿಲಾಮೂರ್ತಿಯಲ್ಲಿ ನೆಲೆಗೊಂಡಿತು. ಆ ಪರಮೇಶ್ವರನ ಅನುಗ್ರಹ ಹಿರಿದು. ಇರುಳು ಹೊತ್ತು ನಾನು ಬಯಸಿದಾಗ ಆ ಶಿಲಾಮೂರ್ತಿ ರಕ್ತ ಮಾಂಸಗಳು ತುಂಬಿದ ಮೈಯನ್ನು ತಳೆಯಬಲ್ಲುದು."

ಮಾಚಕಬ್ಬೆಯ ಆತ್ಮವೃತ್ತ ಕಿನ್ನರರ ಕತೆಗಿಂತಲೂ ಸೋಜಿಗವಾದುದು. ಅದನ್ನು ಹೇಗೆ ನಂಬಲಿ? ರೈಡರ್ ಹೆಗ್ಗಾರ್ಡ್ ಬರೆದ She ಎಂಬ ಅದ್ಭುತ ಕಾದಂಬರಿಯ ಕತೆ ನನ್ನ ನೆನಪಿಗೆ ಬರುವುದು. ಆ ಕಾದಂಬರಿಯ ನಾಯಿಕೆ ಆಯೇಷ ಮೃತ್ಯುವನ್ನು ಗೆದ್ದು ತನ್ನ ಇನಿಯನ ಬರವಿಗೋಸ್ಕರ ಸಾವಿರ ಸಾವಿರ ವರ್ಷ ಕಾದಳಂತೆ. ಆ ಆಯೆಷಳಂತೆ ಈ ಮಾಚಕಬ್ಬೆ ಗೋಜೋಜನ ಬರವಿಗೋಸ್ಕರ ಶತಮಾನಗಳಿಂದ ಕಾಯುತ್ತಿರುವಳು! ಈ ಅಮಾನುಷವಾದ ಸೋಜಿಗ ನನ್ನ ಬುದ್ಧಿಯನ್ನು ಮಂಕುಗೊಳಿಸಿದೆ. ನನ್ನ ಧೀಶಕ್ತಿಯನ್ನು ಕುಂಠಿತಗೊಳಿಸಿದೆ.

"ನೀನು ತುಂಬಾ ದಣಿದಿದ್ದೀಯೆ. ನನ್ನೆಡೆಗೆ ಬಾ" ಮಾಚಕಬ್ಬೆ ನನ್ನನ್ನು ತನ್ನ ಎದೆಗೆ ಒತ್ತಿಕೊಂಡು ಬೆನ್ನು ಸವರಿದಳು.

ಈ ತರುಣಿಯ ದೇಹದಲ್ಲಿ ಮಿಂಚು ತುಂಬಿಕೊಂಡಿದೆ. ಆಕೆಯ ಸ್ಪರ್ಶದಿಂದ ಬಿಗಿದುಕೊಂಡಿದ್ದ ನನ್ನ ನರಗಳಲ್ಲೆಲ್ಲ ವಿದ್ಯುತ್ಸಂಚಾರವಾಯಿತು. ಮೈಯೆಲ್ಲ ಹಗುರವಾಯಿತು. ಆಕೆಯ ಎದೆಯ ಆಸರೆಯನ್ನು ಪಡೆದ ಜೀವ ಉಯ್ಯಾಲೆಯನ್ನೇರಿ ತಾರೆಗಳತ್ತ ಧಾವಿಸುತ್ತಿದೆ...ನನ್ನ ಜೀವ ಹೀರುತ್ತಿರುವ ಆನಂದದ ದಿವ್ಯಾನುಭಾವ ನುಡಿಗಳಿಗೆ ನಿಲುಕದು.

"ಇನ್ನು ಬೇಗುದಿಗೊಳ್ಳಬೇಡ" ಮಾಚಕಬ್ಬೆ ರಮಿಸುವ ದನಿಯಲ್ಲಿ ಹೇಳಿದಳು; "ಇನ್ನು ಮುಂದೆ ನಾನು ನಿನ್ನನ್ನು ಬಿಟ್ಟು ಅಗಲುವುದಿಲ್ಲ."

೨೫-೮-೧೯೫೫-

ನನಗೆ ಎಚ್ಚರವಾದಾಗ ಸೂರ್ಯನು ಆಗಲೇ ಎರಡು ಮಾರು ಮೇಲೇರಿ ಬಂದಿದ್ದ. ನಾನು ಕೋಣೆ ತುಂಬಾ ಕಣ್ಣುಗಳನ್ನು ಹರಡಿದೆ. ಆದರೆ ಮಾಚಕಬ್ಬೆ ಕೋಣೆಯೊಳಗೆ ಇರಲಿಲ್ಲ. ನಾನು ಹೋದ ಇರುಳು ನಡೆದ ಘಟನೆಯನ್ನು ನೆನಪಿಗೆ ತಂದು ಮೆಲುಕು ಹಾಕಿದೆ. ಅದು ಅವಾಸ್ತವಿಕತೆಯ ಮೂಟೆಯೆಂದು ನನಗೆ ಅನಿಸಿತು. ಇರುಳು ಕಂಡ ಕನಸು ಅದು ಎಂದು ಹೇಳಿಕೊಳ್ಳುತ್ತಾ ನಾನು ಹಾಸಿಗೆಯಿಂದ ಎದ್ದೆ. ಕೋಣೆಯೊಳಗೆಲ್ಲ ಮಲ್ಲಿಗೆ ಹೂವಿನ ಕಂಪು ತುಂಬಿದೆ. ಈ ಸೌರಭ ಎಲ್ಲಿಂದ ಬಂತು ಎಂದು ಒಂದು ಕ್ಷಣ ಆಲೋಚಿಸಿದೆ. ಹೋದ ಇರುಳು ಮಾಚಕಬ್ಬೆ ಮಲ್ಲಿಗೆ ದಂಡೆ ಮುಡಿದಿದ್ದಳು ಎಂಬುದು ಸ್ಮರಣೆಗೆ ಬಂತು. ನಾನು ರಗ್ಗು ಮತ್ತು ಹೊದಿಕೆಗಳನ್ನು ಕೊಡಹಿ ನೋಡಿದೆ. ಆದರೆ ಆಕೆಯ ತುರುಬಿನಿಂದ ಉದುರಿದ ಒಂದೇ ಒಂದು ಮಲ್ಲಿಗೆಯ ಮುಗುಳು ಹಾಸಿಗೆಯ ಮೇಲಿರಲಿಲ್ಲ.

ನಾನು ಮುಖಕ್ಷೌರ ಮಾಡಿಕೊಳ್ಳುತ್ತಿದ್ದಾಗ ಕನ್ನಡಿಯಲ್ಲಿ ನನ್ನ ಮುಖವನ್ನು ನೋಡಿಕೊಂಡೆ. ಕಣ್ಣುಗಳು ಕೆಂಪಡರಿದ್ದುವು. ಮೋರೆ ನಾಲ್ಕು ದಿನಗಳ ಜ್ವರದಿಂದ ಎದ್ದವರಂತೆ ಬಿಳಿಚಿಕೊಂಡಿತ್ತು. ಆದರೆ ಮನಸ್ಸು ಮಾತ್ರ ಗಾಳಿಗಿಂತ ಹಗುರವಾಗಿದೆ.

ಇಂದು ಚರಿತ್ರೆಯ ಪ್ರಾಧ್ಯಾಪಕ ನಟರಾಜನ್ "ಇಂದು ನನ್ನ ಮಗನ ಹುಟ್ಟು ಹಬ್ಬ. ಇರುಳು ನಮ್ಮ ಮನೆಗೆ ಊಟಕ್ಕೆ ಬನ್ನಿ" ಎಂದು ಒತ್ತಾಯಪಡಿಸಿ ನನ್ನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿದ್ದರು. ಜತೆಯಲ್ಲಿ ಹೋಗುತಿದ್ದಾಗ ಅವರು ನನ್ನ ನಡುಗೆಯನ್ನು ನೋಡಿ ನಕ್ಕರು. "ಇದೇಕೆ ನಗುತ್ತಿದ್ದೀರಿ?" ಎಂದು ಕೇಳಿದೆ. ಅವರು "ಇದೇನು ಮಿಸ್ಟರ್? ಗಾಳಿಯಲ್ಲಿ ತೇಲಿ ಹೋಗುವವರಂತೆ ಹೆಜ್ಜೆ ಹಾಕುತಿದ್ದೀರಲ್ಲ!" ಎಂದು ಅವರು ಕೇಳಿದರು. ನನ್ನ ಜೀವ ಗಾಳಿಗಿಂತಲೂ ಹಗುರವಾಗಿದೆ ಎಂಬುದು ನಿಜ. ಆದರೆ ನನ್ನ ಶರೀರ ಗುರುತ್ವವನ್ನು ಕಳೆದುಕೊಂಡು ಗಾಳಿಯಲ್ಲಿ ತೇಲಬಲ್ಲುದೆ?

ನಟರಾಜನ್ ಮನೆಯಲ್ಲಿ ರುಚಿಕಟ್ಟಾದ ಅಡುಗೆಯನ್ನು ಮಾಡಿಸಿದ್ದರು. ಪುಳಿಯೋಗರೆ, ತೈರೊಡೆ, ಕೇಸರಿಭಾತ್, ಶಾವಿಗೆ ಕೀರು ಹೀಗೆ ಏನೇನೋ ತಿಂಡಿ ತಿನಸುಗಳಿದ್ದುವು. ಆದರೆ ಅವೊಂದೂ ನನ್ನ ನಾಲಿಗೆಗೆ ರುಚಿಸಲೇ ಇಲ್ಲ. ಇಂದು ಬೆಳಗಿನಿಂದ ನನಗೆ ಹಸಿವೆಯೇ ಇಲ್ಲ. ಮಾಚಕಬ್ಬೆಯ ತುಟಿಜೇನಿನಲ್ಲಿ ಅಮೃತವಿದೆಯೆಂದು ತೋರುವುದು.

ನಟರಾಜನ್ "ಇರುಳು ಹೊತ್ತು ಹೋಗುವುದು ಬೇಡ. ನನ್ನ ಮನೆಯಲ್ಲಿಯೇ ಉಳಿದುಕೊಳ್ಳಿ" ಎಂದು ನನ್ನನ್ನು ನಿರ್ಬಂಧಿಸಿದರು. ಅವರ ಮನೆಯಿಂದ ನನ್ನ ಕೋಣೆಗೆ ನಾಲ್ಕು ಮೈಲುಗಳ ಅಂತರವಿದೆ. ಆದರೆ ನನ್ನ ಕೋಣೆಗೆ ಬಂದ ಮಾಚಕಬ್ಬೆ ನಿರಾಸೆಯಿಂದ ಹಿಂದಿರುಗುವಳಲ್ಲ ಎಂಬ ಆಲೋಚನೆ ನನ್ನನ್ನು ಕಾಡಿತು. ನಾನು ನಟರಾಜರನ್ನು ಬೀಳ್ಕೊಂಡು ಆಟೋರಿಕ್ಷಾ ಒಂದನ್ನು ಹಿಡಿದು ನನ್ನ ಕೋಣೆಗೆ ಬಂದೆ.

ನನ್ನ ಎಣಿಕೆ ಹುಸಿಯಾಗಿರಲಿಲ್ಲ. ಮಾಚಕಬ್ಬೆ ಬಂದು ನನ್ನ ಮಂಚದ ಮೇಲೆ ಕುಳಿತು ನನ್ನ ಬರವನ್ನು ಇದಿರು ನೋಡುತಿದ್ದಳು. ನನ್ನನ್ನು ಕಂಡಾಗ ಆಕೆಯ ತುಟಿಗಳ ಮೇಲೆ ಮುಗುಳ್ನಗೆಯೊಂದು ಮಿನುಗಿತು. ಅವಳು ಮಿಂಚು ತುಂಬಿದ ಬೆರಳುಗಳನ್ನು ಆಡಿಸಿ, "ತುಂಟ. ನೀನು ಎಷ್ಟು ಹೊತ್ತು ನನ್ನನ್ನು ಇಲ್ಲಿ ಕಾಯಿಸಿಬಿಟ್ಟೆ" ಎಂದು ಉದ್ಗಾರವೆತ್ತಿದಳು.

"ನೀನು ಬರುವಿಯೆಂದೇ ಗೆಳೆಯ ಒತ್ತಾಯಪಡಿಸಿದರೂ ಅಲ್ಲಿ ಉಳಿಯದೆ ಓಡಿ ಬಂದೆ" ಎಂದು ನಾನು ನುಡಿದೆ.

"ಈ ಸಂಗತಿಯೇ ನೀನು ನನ್ನ ಗೋಪೋಜನೆಂದು ಸಾರಿ ಹೇಳುವುದು."

ಮಾಚಕಬ್ಬೆಯ ಬೆರಳ ಸೋಂಕು ನನ್ನ ಮೈಯದಣಿವನ್ನೆಲ್ಲ ನೀಗಿತು ನಾನು ಆಕೆಯ ವಕ್ಷದಲ್ಲಿ ಮಸ್ತಕವನ್ನಿರಿಸಿ ಆಕೆಯ ಮೊಗದ ಸೊಬಗನ್ನು ಉಂಟಿದೆ. ಮೌನವೇ ನಮ್ಮ ಎದೆಯಾಳದ ಭಾವಗಳನ್ನು ಅಭಿವ್ಯಕ್ತಗೊಳಿಸಲಿರುವ ಭಾಷೆಯಾಯಿತು

"ನೀನು ಹಳೆಬೀಡಿನಲ್ಲಿ ಇದ್ದೆಯೆಂದು ಹೇಳಿದೆಯಲ್ಲ." ಕೊನೆಗೊಮ್ಮೆ, ನಾನು ಬಾಯ್ದೆರೆದೆ:"ನೀನು ಅಲ್ಲಿಂದ ಇಲ್ಲಿಗೆ ಬಂದುದು ಹೇಗೆ?"

"ನನ್ನ ದೊರೆ, ಅದೊಂದು ದೊಡ್ಡ ಕತೆ. ನೀನು ಅಂದರೆ ಗೋಪೋಜ ನನ್ನ ಮೂರ್ತಿಯನ್ನು ಬಹು ಅಂದವಾಗಿ ಕೆತ್ತಿದ್ದ. ಕಡಲಾಚೆಗಿನ ನಾಡಿನಿಂದ ಬಂದ ಪ್ರವಾಸಿಯೊಬ್ಬನ ಕಣ್ಣುಗಳನ್ನು ಆ ಪ್ರತಿಮೆಯ ಸೊಬಗು ಸೆಳೆಯಿತು. ಅವನು ಗುಡಿಯ ಕಾವಲುಗಾರರಿಗೆ ಲಂಚ ಕೊಟ್ಟು ನನ್ನನ್ನು ಅಪಹರಿಸಿ ಇಲ್ಲಿಗೆ ತಂದ. ಅವನು ಹಡಗಿನಲ್ಲಿ ನನ್ನನ್ನು ದೂರದ ನಾಡಿಗೆ ಒಯ್ಯುವನೆಂದು ನನಗೆ ಅರಿವಾಯಿತು. ಹುಟ್ಟು ನಾಡನ್ನು ತೊರೆದು ದೂರ ಹೋಗಲು ನನಗೆ ಇಷ್ಟವಿರಲಿಲ್ಲ. ಅವನು ಹಡಗವನ್ನೇರಿ ಹೋಗಲು ಎರಡು ದಿನಗಳು ಉಳಿದಿದ್ದುವು. ಮುನ್ನಾ ರಾತ್ರಿ ಅವನು ಹೋಟಿಲಿನಲ್ಲಿ ಕುಡಿದು ಅಮಲೇರಿ ಬಿದ್ದಿದ್ದಾಗ. ನಾನು ಕೋಣೆಯಿಂದ ಹೊರಬಿದ್ದೆ. ಆ ಉದ್ಯಾನಕ್ಕೆ ಬಂದು ಮಾವಿನ ಮರದಡಿಯಲ್ಲಿ ಅವಿತುಕೊಂಡೆ. ಆತ ನನ್ನನ್ನು ಅಪಹರಿಸಿ ತಂದುದು ಒಳ್ಳಿತೇ ಆಯಿತು"

"ಏಕೆ?"

"ಇಲ್ಲದಿದ್ದರೆ ನೀನು ನನ್ನ ಕಣ್ಣುಗಳಿಗೆ ಬೀಳುತ್ತಿರಲಿಲ್ಲ"

೫—೯—೧೯೫—

ಕಳೆದ ಹದಿನೈದು ದಿನಗಳಿಂದ ಮಾಚಕಬ್ಬೆ ತಪ್ಪದೆ ನನ್ನ ಕೋಣೆಗೆ ಬರುತ್ತಿದ್ದಾಳೆ. ಇರುಳನ್ನೆಲ್ಲ ನನ್ನ ಜತೆಯಲ್ಲಿ ಕಳೆಯುತಿದ್ದಾಳೆ. ಆಕೆಯ ಸಾನ್ನಿಧ್ಯ ನನ್ನ ಹೃದಯದಲ್ಲಿ ಅಸಾಧಾರಣವೆನಿಸಿದ ಚೈತನ್ಯವನ್ನು ತುಂಬುತ್ತಿದೆ. ನನ್ನ ಬೇನೆ ಬಳಲಿಕೆಗಳನ್ನೆಲ್ಲ ಆಕೆಯ ಮೈಯ ಸೋಂಕು ಇಲ್ಲದಾಗಿಸುತ್ತದೆ. ಆಕೆಯ ಸಾನ್ನಿಧ್ಯದ ಸುಖಕ್ಕೆ ಪ್ರತಿಯಾಗಿ ನನ್ನ ಪ್ರಾಣವನ್ನೇ ಬಿಲೆ ಕೊಟ್ಟರೂ ಅದು ಅಲ್ಪವೆನಿಸುವುದು.

ಬೆಳಗಿನ ಜಾವದಲ್ಲಿ ಅವಳು ಹೊರಟು ಹೋದ ಮೇಲೆ ನನ್ನ ಮೈಕೈಗಳನ್ನು ಆಯಾಸ ಬಾಧಿಸುತ್ತಿದೆ. ಒಡಲಿಗೆ ಅನ್ನವೇ ಸೇರುವದಿಲ್ಲ. ನನ್ನ ಬುದ್ಧಿಗೆ ಮಂಕು ಕವಿದು ಜಡವಾಗಿದೆ. ನಟರಾಜನ್ ಮತ್ತು ಇನ್ನುಳಿದ ಪ್ರಾಧ್ಯಾಪಕರು ನಾನು ಬಹಳ ಸೊರಗಿದ್ದೇನೆ. ಕಡ್ಡಿಯಂತಾಗಿದ್ದೇನೆ ಎಂದು ಹೇಳುತಿದ್ದಾರೆ.

ಮೊನ್ನೆಯ ದಿನ ಸೀನಿಯರ್ ತರಗತಿಯ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿದ್ದಾಗ ನಾನು ತಲೆತಿರುಗಿ ದೊಪ್ಪನೆ ಬಿದ್ದುಬಿಟ್ಟೆ. ಮುಂದೇನಾಯಿತು ಎಂಬುದು ನನಗೆ ತಿಳಿಯದು. ನನಗೆ ಎಚ್ಚರವಾದಾಗ ಸ್ಟಾಫ್ ರೂಮಿನಲ್ಲಿ ಸೋಫಾದ ಮೇಲೆ ಮಲಗಿದ್ದೆ. ನಟರಾಜನ್ ಪಕ್ಕದಲ್ಲಿ ಕುಳಿತು ಗಾಳಿ ಹಾಕುತಿದ್ದರು.

ನಟರಾಜನ್ ಒತ್ತಾಯಪಡಿಸಿ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ಡಾಕ್ಟರರು ಎರಡು ದಿನ ನನ್ನನ್ನು ಆಸ್ಪತ್ರೆಯಲ್ಲಿ ಇರಿಸಿಕೊಂಡು ಬಗೆಬಗೆಯ ಪರೀಕ್ಷೆಗಳಿಗೆ ನನ್ನ ದೇಹವನ್ನು ಒಳಪಡಿಸಿದರು. ನನ್ನನ್ನು ಬಾಧಿಸಿದ ಕಾಯಿಲೆಯೇನು ಎಂದು ಅವರಿಗೆ ಕಂಡುಹಿಡಿಯಲಾಗಲಿಲ್ಲ. ಕೊನೆಗೆ ಅವರು "ಜನರಲ್ ಡೆಬಿಲಿಟಿ" ಎಂದು ಹೇಳಿ ಮೂರು ನಾಲ್ಕು ಬಗೆಯ ಟಾನಿಕ್ಕುಗಳು ಮತ್ತು ಮಾತ್ರೆಗಳ ಹೆಸರುಗಳನ್ನು ಬರೆದು-ಕೊಟ್ಟಿದ್ದಾರೆ.

೧೦—೯—೧೯೫—

ಡಾಕ್ಟರರು ಬರೆದು ಕೊಟ್ಟ ಟಾನಿಕ್ಕು ಮತ್ತು ಮಾತ್ರೆಗಳನ್ನು ಸೇವಿಸುತ್ತಿದ್ದೇನೆ. ಆದರೆ ನನ್ನನ್ನು ಬಾಧಿಸಿದ ಆಲಸ್ಯ ಮತ್ತು ನಿತ್ರಾಣಗಳು ದೂರ ಸರಿಯಲೊಲ್ಲವು. ಕಾಲೇಜಿಗೆ ಹತ್ತು ದಿನ ರಜೆ ಬರೆದು ಹಾಕಿದ್ದೇನೆ.

ಮಾಚಕಬ್ಬೆ ನನ್ನ ಹತ್ತಿರ ಸುಳಿದೊಡನೆ ನನ್ನ ನಿತ್ರಾಣವೆಲ್ಲ ಮಾಯವಾಗುವುದು. ನಾನು ಕಾಯಕಲ್ಪವನ್ನು ಹೊಂದಿದ ಹೊಸ ಮನುಷ್ಯನಾಗುವೆನು. ನನ್ನ ಶರೀರದಲ್ಲಿ ಭೀಮಶಕ್ತಿ ಹರಿದಾಡುವುದು.

ಆ ಹೆಣ್ಣು, ಮಾಚಕಬ್ಬೆ ನನ್ನ ಜೀವರಸವನ್ನೇ ಹೀರಿ ತನ್ನ ತೃಷ್ಣೆಯನ್ನು ತಣಿಸಿಕೊಳ್ಳುತ್ತಿರುವಳೆ? ಆದರೆ ಅವಳು ನನ್ನನ್ನು ಸುಂತಸದ ಹಾಲ್ನೊರೆಗಳ ತೊರೆಯಲ್ಲಿ ನನ್ನನ್ನು ಮೀಯಿಸುತ್ತಿರುವಳಲ್ಲ! ಅವಳಿಂದ ನನಗೆಂದಿಗೂ ಕೇಡಾಗದು. ಅವಳನ್ನು ನೆನೆಯದೆ ಇರಲು ನನ್ನಿಂದ ಆಗದು.

೧೫—೯—೧೯೫.

ನಾಳೆಗೆ ನನ್ನ ರಜೆ ಮುಗಿಯುವುದು. ಟಾನಿಕ್ಕುಗಳ ಸೇವನೆಯ ಪರಿಣಾಮವಾಗಿ ನನ್ನ ಮೈಯಲ್ಲಿ ಹೊಸ ಶಕ್ತಿ ತುಂಬಿದೆ. ನನ್ನನ್ನು ನೋಡಲು ಬಂದ ನಟರಾಜನ್ "ಈಗ ನಿನ್ನ ಆರೋಗ್ಯ ಸುಧಾರಿಸಿದೆ"ಎಂದು ಹೇಳಿದರು.

ಇಂದು ಹುಣ್ಣಿಮೆ. ಹೊರಗೆ ಹಾಲು ಚೆಲ್ಲಿದಂತೆ ಬೆಳದಿಂಗಳು ಪಸರಿಸಿದೆ. ನಾನು ಕಿಟಕಿಯ ಪಕ್ಕದಲ್ಲಿ ಹೊರಗೆ ಹರಿಯುತ್ತಿರುವ ಜ್ಯೋತ್ಸ್ನಪ್ರವಾಹವನ್ನು ನೋಡುತ್ತಿದ್ದೇನೆ. ಪಕ್ಕದಲ್ಲಿ ನನ್ನ ಹೆಗಲ ಮೇಲೆ ಕೈಯಿರಿಸಿ-ಕೊಂಡು ಮಾಚಕಬ್ಬೆ ನಿಂತಿದ್ದಾಳೆ. ತಂಗಾಳಿ ಬೀಸಿ ಬಂದು ಆಕೆಯ ಮುಂಗುರುಳೊಡನೆ ಚಿನ್ನಾಟವನ್ನು ಎಸಗುತ್ತಿದೆ.

"ನೋಡು ಈ ಬೆಳದಿಂಗಳಿನ ಇರುಳು ಎಷ್ಟು ಅಂದವಾಗಿದೆ. ಈ ಜೊನ್ನ ಬೆಳಕಿನಲ್ಲಿ ಉದ್ಯಾನದಲ್ಲಿ ಅಡ್ಡಾಡಲು ಬಲು ಸೊಗಸು" ಎಂದು ನಾನು ಉದ್ಗಾರವೆತ್ತಿದೆ.

"ನೀನು ಜತೆಯಲ್ಲಿ ಬಾ." ಮಾಚಕಬ್ಬೆ ನನ್ನ ತೋಳು ಹಿಡಿದು ಉಸುರಿದಳು. "ನಾವು ಕೈ ಕೈ ಹಿಡಿದು ಉದ್ಯಾನದಲ್ಲಿ ವಿಹರಿಸೋಣ."

"ಯಾರಾದರೂ ಕಂಡರೆ?"

"ನಿನಗೆ ಆ ಭೀತಿ ಬೇಡ." ಮಾಚಕಬ್ಬೆಯ ಕೊರಳಿಂದ ಭರವಸೆಯ ದನಿ ಹೊರಟಿತು. "ನಮ್ಮನ್ನು ಯಾರೂ ನೋಡರು."

ಮಾಚಕಬ್ಬೆಯ ಕಣ್ಣುಗಳಿಂದ ಮಿಂಚಿನ ನೋಟ ಒಂದು ಹೊಮ್ಮಿ ಬಂದು ನನ್ನನ್ನು ಬಳಸಿತು. ಆ ವಿದ್ಯುತ್ಪಾಶ ನನ್ನ ಜೀವವನ್ನು ಬಿಗಿದಿತು. ನನ್ನ ನಿರ್ಧಾರ ಶಿಥಿಲಗೊಂಡಿತು. ನಾನು ಆಕೆಯ ಹೆಗಲ ಮೇಲೆ ಕೈಯಿರಿಸಿ ಹೋಗೋಣ ಎಂದು ಹೇಳಿದೆ.

× × ×

ದಿನಾಂಕ ೧೬—೯—೧೯೫- ದಿನಪತ್ರಿಕೆಗಳಲ್ಲಿ ಬಂದ ಸ್ಥಳೀಯ ಸಮಾಚಾರ.

ದಿನಾಂಕ ೧೬—೯—೧೯೫.

ಇಂದು ಮುಂಜಾನೆ ನಗರದ ಹನಗಲ್ ಪಾರ್ಕಿನಲ್ಲಿ ಪುರುಷನೊಬ್ಬನ ಶವ ದೊರಕಿದೆ. ಮೃತರ ಕಿಸೆಯನ್ನು ಶೋಧಿಸಿದಾಗ ಸಿಕ್ಕಿದ ದಿನಚರಿಯ ಪುಸ್ತಕದಿಂದ ಅವರು... ಕಾಲೇಜಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾದ ರಾಜಮೋಹನ ರಾಯರೆಂಬುದು ತಿಳಿಯಬಂದಿದೆ. ರಾಯರು ಪಾರ್ಕಿನ ಬಡಗು ದಿಕ್ಕಿನಲ್ಲಿರುವ ವೀಣಾವಾದಕಿಯ ಶಿಲಾಪ್ರತಿಮೆಯನ್ನು ಅಪ್ಪಿಕೊಂಡು ಅಸುನೀಗಿದ್ದಾರೆ. ಪೋಸ್ಟ್ ಮಾರ್ಟಂ ಪರೀಕ್ಷೆಯಿಂದ ಅವರು ಹೃದಯವಿಕಾರದಿಂದ ಮಡಿದರೆಂಬುದು ಅರಿವಾಗಿದೆ.

ಹದಿನೈದು ವರ್ಷಗಳ
ನವ್ಯ ಗದ್ಯಸಾಹಿತ್ಯ

[ಒಂದು ವೈಯಕ್ತಿಕ ಪ್ರತಿಕ್ರಿಯೆ]

ಯು. ಆರ್. ಅನಂತಮೂರ್ತಿ

ನನ್ನ ಕಥೆಗಳೆಂದರೆ ಹದಿನೈದು ವರ್ಷಗಳ ಹಿಂದಿನ ನನ್ನ ತಿಳವಳಿಕೆ: ಪ್ರತಿಮಾಮಾರ್ಗದಲ್ಲಿ ಬರೆಯುವುದು ಎಂದು. ಕಥೆಯಲ್ಲಿನ ಕ್ರಿಯೆ ಸಾಂಕೇತಿಕವಾದಲ್ಲಿ ಕತೆಯ ಅರ್ಥದ ವ್ಯಾಪ್ತಿ ಹಿಗ್ಗುತ್ತದೆ ಎಂಬುದು ನಿಜವಾದರೂ, ಈ ಪ್ರತಿಮಾಮಾರ್ಗ ಒಂದು ಚಳುವಳಿಯಾಗಿ ಪರಿಣಮಿಸಿದ್ದರಿಂದ ನನ್ನ ಆಲೋಚನಾವಿಧಾನದಲ್ಲಿ ಅನೇಕ ಆಭಾಸಗಳು ತಲೆದೋರಿದುವು ಮನಸ್ಸಿನ ಭಾವನೆಗಳನ್ನು ನೇರವಾಗಿ ವಿವರಿಸುವದರಿಂದ ಅವು ಕೃತಿಯಲ್ಲಿ ಮೈದಾಳಲಾರವು, ಭಾವನೆ ಕೃತಿಯಲ್ಲಿ ಸಂಭವಿಸುವ ನಾಟಕಕ್ರಿಯೆಯಾಗಬೇಕಾದಲ್ಲಿ ಭಾವನೆಗಳನ್ನು ಪ್ರತ್ಯಕ್ಷಗೊಳಿಸಲು ಶಕ್ತವಾದ ವಸ್ತುಪ್ರತಿರೂಪ ಬೇಕು ಎಂಬ ಎಲಿಯಟ್ಟನ ವಿಚಾರವೇನೋ ಸರಿಯೆ: ಆದರೆ ಈ ವಸ್ತುಪ್ರತಿರೂಪಗಳನ್ನು ಯೋಜಿಸುವುದೇ ಒಂದು ಉದ್ಯೋಗವಾಗಿ ಪರಿಣಮಿಸಿದ್ದರಿಂದ ಕಥೆಗಳಲ್ಲಿ ಕೃತ್ರಿಮ ಸಂಯೋಜನೆಗಳಿಗೆ ಎಡೆಮಾಡಿಕೊಟ್ಟಿತು. ಕೆ ಸದಾಶಿವರ ಕಥೆಯೊಂದರಲ್ಲಿ ಬಿಗಿದುಕೊಂಡಿದ್ದ ಅಂತಃಕರಣ ಮಾಸ್ತೀಯ ಮರುಕದಲ್ಲಿ ಹೊರಹೊಮ್ಮುವುದಕ್ಕೂ ನಿಂತಿದ್ದ ನಲ್ಲಿಯಲ್ಲಿ ನೀರು ಬರುವುದಕ್ಕೂ ಸಂಬಂಧ ಕಲ್ಪಿತವಾಗುವುದೇ ಸಾಂಕೇತಿಕ ಕ್ರಿಯೆಯು ಹೆಗ್ಗುರುತಾಗಿಬಿಟ್ಟಿತು ಈಗಲೂ ಸದಾಶಿವರ "ನಲ್ಲಿಯಲ್ಲಿ ನೀರು ಬಂದಿತು" ನನಗೆ ಪ್ರಿಯವಾದ ಕತೆಯಾಗಿದ್ದರೂ. ನಾನು ಅದನ್ನು ಮೆಚ್ಚಿಕೊಂಡಿದ್ದ ಹಿಂದಿನ ಕಾರಣಗಳನ್ನು ನೆನೆಯಲು ಮುಜುಗರವಾಗುತ್ತದೆ. ಈ ಸಾಂಕೇತಿಕ ಕ್ರಿಯೆಯ ಮಾರ್ಗವನ್ನು ಅತಿಗೆ ತೆಗೆದುಕೊಂಡು ಹೋದ ಕಥೆಯೊಂದನ್ನು ಬರೆದ ಅಪರಾಧಿಯೂ ನಾನೆ: "ಪಂಜರದ ಗಿಣಿ" ಎಂಬ ನನ್ನೊಂದು ಕಥೆಯನ್ನು ಓದುವಾಗ ನನಗೆ ಆಗುವಷ್ಟು ನಾಚಿಕೆ ಇನ್ನು ಯಾವ ಕಥೆಯನ್ನು ಓದಿದಾಗಲೂ ಆಗುವದಿಲ್ಲ ನನ್ನಂತೆಯೇ ಉಳಿದ ಕೆಲವರ ಕಥೆಗಳಲ್ಲಿಯೂ ಸಾಂಕೇತಿಕವಾಗಿ ಭಗ್ನವಾದ ಬುದ್ಧವಿಗ್ರಹಗಳಿಗೆ ಲೆಖ್ಖವಿಲ್ಲ.

ಸಾಂಕೇತಿಕಕ್ರಿಯೆಯಲ್ಲೇ ನವ್ಯತೆಯ [illegible] ಎಂದು ರಾಮಚಂದ್ರಶರ್ಮ ಮತ್ತು ನಾವು ಕೆಲವರು ತಿಳಿಯುವದಕ್ಕೆ ಅಡಿಗರ "ಹಿಮಗಿರಿಯ ಕಂದರ" ಪದ್ಯದ ರಚನಾಕ್ರಮವೂ ಕಾರಣವಿರಬೇಕು. "ಹಿಮಗಿರಿಯ ಕಂದರ"ದ ನಾಯಕ ರೈಲು ಹಿಡಿಯಲು ಹೋಗಿ ವಿಫಲನಾಗುವದು ಅತ್ಯಂತ ಮಾರ್ಮಿಕವಾದ ಸಂಕೇತವಾಗಿ ನನ್ನಂತಹ ಬರಹಗಾರರಿಗೆ ಕಾಣಿಸಿತ್ತು. ಆದರೆ ಪದ್ಯ ಸಾಂಕೇತಿಕ ಕ್ರಿಯೆಯನ್ನು ದಕ್ಕಿಸಿಕೊಂಡಷ್ಟು ಸುಲಭವಾಗಿ ಗದ್ಯ ದಕ್ಕಿಸಿಕೊಳ್ಳಲಾರದೆಂದು ನಾವು ಗ್ರಹಿಸಿರಲಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ. ಜಾಯ್ಸ್‌ನ ಕಥೆಗಳನ್ನು ಓದುತ್ತಿದ್ದಂತೆ—ಮುಖ್ಯವಾಗಿ ಅವನ The Dead ಕಥೆಯನ್ನು ಓದಿದಾಗ ಸಂಕೇತವೂ ಕಥೆಯ ವಾಸ್ತವಶರೀರದ ಅನಿವಾರ್ಯವಾದ ಒಂದಂಗವಾಗಿ ಬಂದಾಗ ಮಾತ್ರ ಅದು ಸಫಲವಾಗುತ್ತದೆ ಎಂಬ ಸಾಮಾನ್ಯ ವಿಚಾರ ನನಗೆ ಸ್ಪಷ್ಟವಾದದ್ದು. ಗದ್ಯವನ್ನು ಕಾವ್ಯಮಯವಾಗಿ ಬರೆಯುವ ಮುಖಾಂತರವಲ್ಲ- ನಿಜವಾದ ಕಾವ್ಯಕ್ರಿಯೆಯಲ್ಲಿ ಕಥೆ ಶರೀರ ಪಡೆದಾಗ ಮಾತ್ರ ಸಾಂಕೇತಿಕತೆ ಗುಪ್ತವಾಗಿ ಬಂದು ಸೇರಿಕೊಳ್ಳುತ್ತದೆ. ಗುಪ್ತವಾಗಿಯೇ ಕಥೆಯ ಮೂಲೆ ಮೂಲೆಯಲ್ಲೂ ಉಸಿರಾಡಿ ಕಥೆಯ ಚೈತನ್ಯವನ್ನು ಉಕ್ಕಿಸುತ್ತದೆ. ಇದು ಬಿಟ್ಟು ಕಣ್ಣಿಗೆ ಹೊಡೆಯುವಷ್ಟು ಸ್ಪಷ್ಟವಾದ ಸಂಕೇತ ಮನಶ್ಶಾಸ್ತ್ರ ಇತ್ಯಾದಿಗಳ ಅಧ್ಯಯನಗಳಿಂದ ಎಳೆದುತಂದಿದ್ದಾದರೆ ಕೃತ್ರಿಮವಾದ ಕಥೆಯ ಅರ್ಥವ್ಯಾಪ್ತಿಯನ್ನು ಹಿಗ್ಗಿಸಲು ಹೋಗಿ ಕಥೆಯ ನೈಜತೆಗೆ ಧಕ್ಕೆ ತರುತ್ತದೆ ಪ್ರಯೋಗಶೀಲತೆಯ ಹುಚ್ಚಿನಲ್ಲಿ ಇಂತಹ ಸಾಮಾನ್ಯ ವಿಚಾರಗಳೂ ಹೊಳೆಯದಿರುವುದು ಸಹಜ. ಜೀವನದಲ್ಲಿ ಆದ್ದರಿಂದ ಸಾಹಿತ್ಯದಲ್ಲಿ- ಆಳವಾದ್ದನ್ನು ಅಪೇಕ್ಷಿಸುವ ಮನೋವೃತ್ತಿ ಬೆಳೆದಾಗ ಮಾತ್ರ ಇದು ಸಾಚ ಇದು ಮೋಸ ಎನ್ನುವ ವಿವೇಚನೆ ಉತ್ಕಟವಾಗುತ್ತದೆ ನೀರು ಸಿಕ್ಕುವವರೆಗೆ ಅಗೆಯಬೇಕೆಂಬ ಅಪೇಕ್ಷೆ. ಅಪೇಕ್ಷೆಗೆ ತಕ್ಕ ಶಕ್ತಿ, ಸಂಯಮಶೀಲತೆ ಇಲ್ಲದಿರುವ ಲೇಖಕ ಅ ಈ ವಸ್ತುಗಳನ್ನು ಕುತೂಹಲಕ್ಕೆ ಕೆದಕುತ್ತಿರುವುದರಲ್ಲೇ, ಹೊಸದನ್ನು ಫ್ಯಾಶನ್ನಿಗಾಗಿ ಬೆನ್ನು ಹತ್ತುವುದರಲ್ಲೇ ತನ್ನನ್ನು ತಾನು ವ್ಯಯಮಾಡಿಕೊಳ್ಳುತ್ತಾನೆ. ಸದಾ ಪ್ರಯೋಗಶೀಲನಾದ ಲೇಖಕ ಈ ಎಚ್ಚರದಿಂದ ನವ್ಯತೆಯ ಅನಿವಾರ್ಯತೆಯನ್ನು ಮನಗಂಡು ಕೃತಿರಚನೆ ಮಾಡಬೇಕಾಗುತ್ತದೆ

ಹದಿನೈದು ವರ್ಷಗಳಾಚೆ ನಿಂತು ಈಗ ನೋಡಿದಾಗ ನನ್ನ ಮೊದಲ ಸಂಗ್ರಹವಾದ ಎಂದೆಂದೂ ಮುಗಿಯದ ಕಥೆಯಲ್ಲಿನ ಬಹು ನನಗೆ ತೀರಾ ಅಪ್ರಬುದ್ಧವಾಗಿ ಕಾಣಿಸುತ್ತದೆ. ನನ್ನ ಮೊದಲಿನ ಕೃತಿಗಿಂತ ಕೆ ಸದಾಶಿವ, ರಾಘವ ಜಿ. ಎಸ್. ಸದಾಶಿವ. ರಾಜಲಕ್ಷ್ಮಿ, ಎನ್. ರಾವ್. ಲಂಕೇಶ ಇವರ ಮೊದಲ ಕೃತಿಗಳೇ ಹೆಚ್ಚು ಪ್ರಬುದ್ಧವಾದವು ಎನ್ನಿಸುತ್ತದೆ. ಇವರಲ್ಲಿ ಕೆಲವರು ನವ್ಯ ಕಥೆ ಪ್ರಬುದ್ಧಾವಸ್ಥೆಗೆ ಬಂದ ನಂತರ ಬರೆಯಲು ಪ್ರಾರಂಭಿಸಿದವರು; ಇನ್ನು ಕೆಲವರು ನನ್ನಂತೆ ರೋಮ್ಯಾಂಟಿಕ್ ಮಾರ್ಗದ ಪ್ರಭಾವದಲ್ಲಿರದೆ ಬರೆಯಲು ತೊಡಗಿದವರಾದ್ದರಿಂದ ನವ್ಯತೆಯನ್ನು ಕಷ್ಟವಿಲ್ಲದೆ ಒಪ್ಪಿಕೊಂಡವರು.

ರೊಮ್ಯಾಂಟಿಕ್ ಕವಿಗಳ ಪ್ರಭಾವದಲ್ಲಿದ್ದು ನಾನು ನವ್ಯ ಕಥೆಗೆ ಬಂದವನಾದರೆ ಕೆ. ಸದಾಶಿವರು ತಮ್ಮ ಕಥೆಗಳಲ್ಲಿ ಚಿತ್ರಿಸುವ ಪ್ರಪಂಚ ಪ್ರಗತಿಶೀಲ ಲೇಖಕರದ್ದು. ಆದರೆ ಪ್ರಗತಿಶೀಲರ ಭಾವಾತಿರೇಕ ಸದಾಶಿವರಲ್ಲಿ ಕಿಂಚಿತ್ತೂ ಇಲ್ಲ. ಸದಾಶಿವರು ತಮ್ಮ ಕಥೆಗಳಲ್ಲಿ ಪ್ರಗತಿಶೀಲರಿಗಿಂತ ಆಳವಾಗಿ ಪ್ರವೇಶಿಸಿ ಆದರೆ ಭಾವವಶರಾಗದಂತೆ ದೂರ ನಿಂತು ತಮ್ಮ ಪಾತ್ರಗಳನ್ನು ಸೃಷ್ಟಿಸುತ್ತಾರೆ

ಟ. ಜಿ. ರಾಘವರ ಮೊದಲ ಸಂಕಲನದಲ್ಲಿ ಸದಾಶಿವರ ಕಲೆಗಾರಿಕೆಯಿಲ್ಲ; ಸದಾಶಿವರಿಗಿದ್ದಂತೆ ಆಕರ್ಷಕವಾಗಿ ಬರೆಯಬೇಕೆನ್ನುವ ಮೋಹವೂ ಇಲ್ಲ. ನಿರಾಡಂಬರವಾಗಿ ಸತ್ಯವನ್ನು ಹೇಳಬೇಕೆನ್ನುವ ರಚ್ಚಿದೆ; ಆದರೆ ಈ ರಚ್ಚಿನಿಂದಲೇ ಮೋಹಿತರಾಗಿ ಬರೆಯುತ್ತಾರೆ ಎನ್ನಿಸುತ್ತದೆ ತೀವ್ರವಾದ ಸ್ವಂತದ ಅಗತ್ಯದಿಂದ ಬರುವ ಇವರ ಎಲ್ಲ ಕತೆಗಳೂ ಸ್ವಗತಗಳಾಗಿವೆ. ತನ್ನ ಮನೋಗತವನ್ನು ಇನ್ನೊಬ್ಬನಿಗೆ ಮುಟ್ಟಿಸಲಾರದ, ಸಂವಾದದ ಸಾಧ್ಯತೆಗಳು ಮುರಿದುಬಿದ್ದ ಪ್ರಪಂಚ ಇವರದ್ದು. ಆದ್ದರಿಂದ ಪರಸ್ಪರ ವಾದಸಂವಾದದಿಂದ ಉದ್ಭವಿಸಿದ ನಾಟಕಕ್ರಿಯೆಗೆ ಬದಲಾಗಿ, ಸ್ವಗತದಲ್ಲಿ ನಡೆಯುವ ದ್ವಂದ್ವದ ನಾಟಕ ಇವರ ಕಥೆಯ ವಸ್ತು. ಆದ್ದರಿಂದಲೇ—ಸದಾಶಿವರಲ್ಲಿ ಕಂಡುಬರುವ ವಿವರಗಳಿಂದ ಕೂಡಿದ ದಟ್ಟವಾದ ಪ್ರಪಂಚ ರಾಘವರಲ್ಲಿ ಕಾಣುವುದಿಲ್ಲ. ಕೆಲವೊಮ್ಮೆ ಬರಹದಲ್ಲಿ ಕಾಣುವ ಅನಾವಶ್ಯಕ ಕೋಪದಿಂದ ಹುಟ್ಟಿದ ತೀವ್ರತೆಯಿಂದಾಗಿ ರಾಘವರು ತಮ್ಮ ವಸ್ತುವಾದ [illegible] ಪ್ರಾಯದ ದುರ್ಬಲತೆಗಳಿಗೆ ಕೊಡಬೇಕಾದ್ದ

ಕ್ಕಿಂತ ಹೆಚ್ಚಿನ ಮಹತ್ವ ಕೊಡುತ್ತಾರೆ ಎನ್ನಿಸುತ್ತದೆ. ಮನೋವಿಜ್ಞಾನದ ತೇಪೆಗಳನ್ನು ಹೊತ್ತಂತೆ ಮೊದಮೊದಲ ಕತೆಗಳಲ್ಲಿ ಪಾತ್ರಗಳು ಬಂದರೂ 'ಸತ್ತವನು' ಕಥೆಯಲ್ಲಿ ಈಚಿನ 'ಶ್ರಾದ್ಧ'ದಲ್ಲಿ ಪಾತ್ರ ರಾಘವರು ನಮ್ಮನ್ನು ಆಳವಾಗಿ ಬಂದು ಮುಟ್ಟುತ್ತಾರೆ. ಈ ಹತ್ತು ವರ್ಷಗಳ ಸಾಹಿತ್ಯದಲ್ಲಿ ವಿಶೇಷವಾದ ವಿಶ್ಲೇಷಣೆಗೆ ಗುರಿಯಾದ ದ್ವಂದ್ವ ವ್ಯಕ್ತಿತ್ವವೇ ರಾಘವರ ವಸ್ತುವೂ ಆಗಿದೆ.

ದ್ವಂದ್ವ ವ್ಯಕ್ತಿತ್ವದಂತೆಯೇ ನಮ್ಮ ಲೇಖಕರನ್ನು ಗಾಢವಾಗಿ ಕಾಡಿರುವ ಸಮಸ್ಯೆ "ಪರಕೀಯ ಭಾವ". ಈ ಪರಕೀಯ ಭಾವ—ನಾನು ತಿಳಿದಂತೆ—ಗಮನಾರ್ಹವಾಗಿ ಮೊದಲು ಕಾಣಸಿಗುವುದು ಅಡಿಗರ 'ಬಳೆತೋಟ' ಗವನದ ನಾಯಕನಾದ ಮಧುರನಲ್ಲಿ. ಅಡಿಗರ ಕಾವ್ಯಮಾರ್ಗ ಬದಲಾದರೂ 'ಭೂಮಿಗೀತ'ದ ನಾಯಕ ಇನ್ನಷ್ಟು ಪ್ರಬುದ್ಧನಾದ 'ಬಳೆತೋಟ'ಯ ನಾಯಕನೆ ಎನ್ನಬಹುದು. ಹೀಗೆ ಕನ್ನಡದಲ್ಲಿ ಪರಕೀಯ ಪ್ರಜ್ಞೆಯ ಅತ್ಯುತ್ತಮ ಕೃತಿಯಾಗಿರುವ 'ಭೂಮಿಗೀತ' ಮೂಲಭೂತ ತತ್ತ್ವಗಳ ಮಟ್ಟದಲ್ಲೂ ಮನುಷ್ಯನ ಪರಕೀಯ ಭಾವವನ್ನು ಚಿತ್ರಿಸುವ ಪ್ರಯತ್ನವಾಗಿದೆ. ನಮ್ಮ ಜನಾಂಗದ ಅನುಭವಕ್ಕೆ ಕೇಂದ್ರವಾದ ಒಂದು ಸಮಸ್ಯೆ ಅಡಿಗರ ಕಾವ್ಯದ ಮುಖ್ಯ ವಸ್ತುವಾಗಿರುವುದು ಅಡಿಗರು ಎಷ್ಟು ಪ್ರಮುಖ ಕವಿಗಳು ಎಂಬುವನ್ನು ಸೂಚಿಸುತ್ತದೆ ಈ ಪರಕೀಯ ಭಾವದ ಹಲವು ಮುಖಗಳನ್ನು ನಾವು ಯಶವಂತ ಚಿತ್ತಾಲ ಮತ್ತು ತೇಜಸ್ವಿಯವರ ಕತೆಗಳಲ್ಲೂ ಕಾಣಬಹುದು.

ಚಿತ್ತಾಲರ ಅಬೋಲೀನ ಕಥಾಸಂಗ್ರಹ ಪ್ರಕಟವಾಗುವ ತನಕ ನಾನು ಅವರನ್ನು ಓದಿಯೇ ಇರಲಿಲ್ಲ. ಆದರೆ ಚಿತ್ತಾಲರ ಕಥೆಗಳನ್ನು ಓದುತ್ತಿದ್ದಂತೆ ನನ್ನ ಬರಹದಲ್ಲಿನ ಅನೇಕ ಕೊರತೆಗಳ ಅರಿವು ನನಗಾಯಿತು. ಚಿತ್ತಾಲರ ಕೃತಿಗಳಂತೆಯೇ ನನ್ನ ಮೇಲೆ ಸೃಷ್ಟ್ಯಾತ್ಮಕವಾದ ಪರಿಣಾಮವನ್ನು ಮಾಡಿದ ಇನ್ನೊಂದು ಪುಸ್ತಕವೆಂದರೆ ಶಾಂತಿನಾಥ ದೇಸಾಯರ ಕಾದಂಬರಿ : **ಮುಕ್ತಿ**. ಉತ್ತರ ಕರ್ನಾಟಕದ ಲೇಖಕರು ಭಾಷೆಯನ್ನು ಉಪಯೋಗಿಸುವ ಕ್ರಮದಲ್ಲಿಯೇ ತಮ್ಮ ಕತೆಗಳನ್ನು ಅಪ್ರಯತ್ನವಾಗಿ ದಟ್ಟವಾಗಿಸುತ್ತಾರೆ. (ಆದರೆ ಈ ಮಾತು ದೇಸಾಯರ ಬಗ್ಗೆ ನಿಜವಲ್ಲ; ಇವರು ತಮ್ಮ ಭಾಷೆಯಲ್ಲಿನ ಕೊರತೆಯನ್ನು ಸೂಕ್ಷ್ಮವಾದ ಮನೋವಿಶ್ಲೇಷಣೆಯ ಮೂಲಕ ಅಥವಾ ಆಕರ್ಷಕ ಕಥೆಯ ಮೂಲಕ ತುಂಬಿಕೊಳ್ಳಬೇಕಾಗುತ್ತದೆ.) ಮುಖ್ಯವಾಗಿ ಚಿತ್ತಾಲರ ಕೃತಿಗಳಲ್ಲಿ ಮತ್ತೆ ಮೊಕಾಶಿಯವರ ಗಂಗವ್ವ-ಗಂಗಾಮಾಯಿ ಕಾದಂಬರಿಯಲ್ಲಿ ಕಾವ್ಯದಲ್ಲಿ ಎಂಬಂತೆ ಭಾಷೆ ಸಜೀವವಾಗಿ ಕೆಲಸ ಮಾಡುವುದನ್ನು ನೋಡುತ್ತೇವೆ. ವಿವರಗಳಿಂದ ಸಾಂದ್ರವಾದ ದೇಹವನ್ನು ಕತೆ ಪಡೆದಿರುವುದು ಅದರ ಸಜೀವತೆಯ ದೃಷ್ಟಿಯಿಂದ ಎಷ್ಟು ಅವಶ್ಯಕ ಎಂಬುದು ಚಿತ್ತಾಲರ ಕತೆಗಳಿಂದ ಮನದಟ್ಟಾಗುತ್ತದೆ. ಯಾವುದು ಕಥೆ, ಯಾವುದು ಪಾತ್ರ, ಪ್ರಾಜ್ಞ್ಯವನ್ನು ಸಂಪೂರ್ಣ ತುಂಬಿಕೊಂಡು

ಯಾವುದು ವಿವರ ಎಂದು ವಿಂಗಡಿಸಲಾರದಂತೆ ಒಂದಕ್ಕೊಂದು ಹೊಸೆದುಕೊಂಡು ಬರಲು ಜಾನಪದದಲ್ಲಿ ಬೇರೂರಿದ, ಆದರೆ ಆಧುನಿಕ ಪ್ರಜ್ಞೆಯ ಸ್ಪರ್ಶದಿಂದ ವಿಶಿಷ್ಟವಾದ ಸಂವೇದನಾಶಕ್ತಿ ಲೇಖನದಲ್ಲಿರಬೇಕು ಕತೆಯಲ್ಲಿ ವ್ಯಕ್ತವಾಗಿರುವ ಲೋಕ ನಮಗೆ ನಿಜವಾದದ್ದು ಎನ್ನಿಸದಿದ್ದಲ್ಲಿ ಕತೆಯ ಮೂಲಕ ಅಚಿಂತ್ಯವಾದ ಅನುಭವಗಳನ್ನು ಸೂಚಿಸುವ ಪ್ರಯತ್ನ ಸಾಧಿಸುವುದಿಲ್ಲ ಈ ದೃಷ್ಟಿಯಿಂದ ಚಿತ್ತಾಲರು "ಪಯಣ"ದ ನಂತರ ಬರೆದ ಈಚಿನ ಕತೆಗಳು ಕನ್ನಡದ ಅತ್ಯುತ್ತಮ ಕೃತಿಗಳಲ್ಲಿ ಕೆಲವಾಗಿವೆ

ನಿಲ್ಲುವ ಈ ಕತೆಗಳು-ಉದಾಹರಣೆಗೆ 'ಆಟ' ಮತ್ತು 'ಸೆರೆ'-ಸೃಷ್ಟಿಯ ಕ್ರಿಯೆ ಸಂಪೂರ್ಣವಾಗಿ ಚಿತ್ತಾಲರಲ್ಲಿ ನಡೆಯುತ್ತದೆ, ಅದಕ್ಕಾಗಿ ಇವರು ತಮ್ಮ ಶಕ್ತಿಗಳನ್ನೆಲ್ಲ ಪ್ರತಿ ಕೃತಿಯಲ್ಲೂ ಕೇಂದ್ರೀಕರಿಸಿ ಕೊಡುತ್ತಾರೆ ಎಂಬುದಕ್ಕೆ ಸಾಕ್ಷಿಯಾಗಿವೆ.

ಆದರೆ ಚಿತ್ತಾಲರ ಬರವಣಿಗೆಯಲ್ಲೇ ಈ ಗುಣವನ್ನು ಮೆಚ್ಚಿಕೊಂಡಾಗಲೂ ಈ ಗುಣಕ್ಕೆ ಅನಿವಾರ್ಯವಾಗಿ ಅಂಟಿಕೊಂಡಿರುವ ಒಂದು ಲೋಪವನ್ನ (ಪ್ರಾಯಶಃ "ಲೋಪ" ಇಲ್ಲಿ ಸರಿಯಾದ ಶಬ್ದವಲ್ಲ) ಹೇಳಬೇಕಾಗುತ್ತದೆ. ಚಿತ್ತಾಲರ ವಸ್ತು ಮನುಷ್ಯನ ಮೂಲಭೂತ

ಒಂದು ವಿಚಾರಸಂಕಿರಣ

ಕನ್ನಡ ಸಾಹಿತ್ಯದಲ್ಲಿ ನವ್ಯಪ್ರಜ್ಞೆ

ಈ ಶತಮಾನದ ಆದಿ ಭಾಗದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿಯ ರೊಮ್ಯಾಂಟಿಕ್ ಸಂಪ್ರದಾಯದಿಂದ ಪ್ರಭಾವಿತವಾಗಿ ಅದೇ ಮಾದರಿಯನ್ನನುಸರಿಸಿಯೆ ಕನ್ನಡ ಸಾಹಿತ್ಯ ಹುಲುಸಾಗ ಬೆಳೆ ಕಂಡಿತು. ಮಾತ್ರವಲ್ಲ ಆಧುನಿಕ ಕನ್ನಡಕ್ಕೆ ಆಕರ್ಷಕವಾದ ಹೊರಾವರಣವನ್ನಲ್ಲದೆ ಪ್ರಾಣವನ್ನೂ ಒದಗಿಸಿತು. ರೊಮ್ಯಾಂಟಿಸಿಜಂ ಒಂದು ರೂಢ ಸಂಪ್ರದಾಯ ಎನ್ನುವಷ್ಟರ ಮಟ್ಟಿಗೆ ಬೆಳೆದಾಗ ನಲ್ವತ್ತರ ದಶಕದಲ್ಲಿ ಮಾರ್ಕ್ಸ್‌ವಾದದ ಪ್ರಚೋದನೆಯಿಂದಾಗಿ 'ಪ್ರಗತಿಶೀಲತೆ' ಒಂದು ಬಗೆಯ ಆಂದೋಲನವಾಗಿ ಬಂದು ಹಳೆಯ ಮೌಲ್ಯಗಳನ್ನು ತಲ್ಲೆಕಳಗೆ ಮಾಡಲೆತ್ನಿಸಿತು. ಈ ಆಂದೋಲನದ ಆರ್ಭಟ ಅದರ ಆವೇಶ-ಕಾವು ಕಡಿಮೆಯಾದಂತೆಯೆ ಅಡಗಿಹೋಯಿತು.

ಆದರೆ ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಕನ್ನಡ ಸಾಹಿತ್ಯ ಹೊಸ ಅವಸ್ಥೆಯಲ್ಲಿ ಕಾಲಿರಿಸಿದೆ. ಇದುವೇ ನವ್ಯತೆ. ಪ್ರಗತಿಶೀಲತೆಯಂತೆ ಪ್ರಾರಂಭದಲ್ಲಿ ನವ್ಯತೆಯೂ ಒಂದು ಆಂದೋಲನದಂತೆಯೆ ಕಂಡುಬಂದರೂ ಆ ಅವಸ್ಥೆಯನ್ನು ಮೀರಿ ಈಗ ಜೀವನ ಮೌಲ್ಯಗಳನ್ನು ಹಿಂದಿಗಿಂತಲೂ ಭಿನ್ನ ದೃಷ್ಟಿಕೋನದಿಂದ ಕಂಡು ಪ್ರತಿಮೆಗಳ ಮೂಲಕ ಅಭಿವ್ಯಕ್ತಿಪಡೆವ ಹೊಸ ಸಾಹಿತ್ಯ ಮಾರ್ಗವಾಗಿ ಪರಿಣಮಿಸಿದೆ.

ಆದರೆ ನವ್ಯತೆಯು ಬರಿ ಒಂದು ತಂತ್ರವೆ ಇಲ್ಲವೆ ಹೊಸ ಪ್ರಜ್ಞೆಯ ಮೂಲಕ ಸಾಹಿತಿಯಲ್ಲುಂಟಾದ ಸಾಮಾಜಿಕ ಅವಶ್ಯಕತೆಯೆ? ಈ ಪ್ರಶ್ನೆಗೆ ಇಲ್ಲಿನ ಮೂರು ಲೇಖನಗಳಲ್ಲಿ ಉತ್ತರ ಬಂದಿದೆ.

'ಹದಿನೈದು ವರ್ಷಗಳ ನವ್ಯ ಗದ್ಯಸಾಹಿತ್ಯ'ವನ್ನು ಅದರ ಎಲ್ಲ ಅವಸ್ಥೆಗಳಲ್ಲೂ ಕಂಡ ಶ್ರೀ ಯು. ಆರ್. ಅನಂತಮೂರ್ತಿಯವರ ಲೇಖನ ಒಂದು ವೈಯಕ್ತಿಕ ಪ್ರತಿಕ್ರಿಯೆಯಾಗಿ ಬಂದಿದೆ. ಸಣ್ಣ ಕತೆಗಳಲ್ಲಿ ನವ್ಯಮಾರ್ಗದ ಪ್ರವರ್ತಕರಲ್ಲಿ ಅವರೊಬ್ಬರು.

'ಕನ್ನಡ ಸಣ್ಣ ಕತೆಗಳಲ್ಲಿ ನವ್ಯತೆ'ಯ ಕುರಿತು ಬರೆದಿರುವ ಶ್ರೀ ಶಾಂತಿನಾಥ ದೇಸಾಯಿ ಸ್ವತಃ ಆ ಮಾರ್ಗವನ್ನೇ ತುಳಿದಿರುವ ಕತೆಗಾರರೂ ಕಾದಂಬರಿಕಾರರೂ ಆಗಿರುವರಾದರೂ ವಿಮರ್ಶಕನಿಗೊಪ್ಪುವ ನಿಷ್ಪಕ್ಷ ತಟಸ್ಥ ದೃಷ್ಟಿಯಿಂದ ವಸ್ತುವನ್ನು ಕಂಡು ಬರೆದಿದ್ದಾರೆ.

'ಹೊಸ ಕಾವ್ಯದ ಒಗರು-ಹೊಗರು' ಸ್ವತಃ ರೊಮ್ಯಾಂಟಿಕ್ ಪರಂಪರೆಯಲ್ಲಿಯೆ ಬೆಳೆದು ಬಂದವರಾದರೂ ನವ್ಯತೆಯಲ್ಲೂ ಪ್ರಯೋಗ ನಡೆಸಿದವರಾದ ಶ್ರೀ ಚೆನ್ನವೀರ ಕಣವಿಯವರ ಲೇಖನ.

ಈ ಮೂರು ಲೇಖನಗಳು ಕನ್ನಡ ಸಾಹಿತ್ಯದಲ್ಲಿನ ನವ್ಯಪ್ರಜ್ಞೆಗೆ ಹಿಡಿದ 'ಕ್ಷ' ಕಿರಣಗಳಾಗಿ ಪರಿಣಮಿಸಿ ಓದುಗರಿಗೆ ಹೊಸ ದೃಷ್ಟಿಕೋನದ ಅರಿವುಂಟುಮಾಡಿಕೊಡುವವೆಂದು ಆಶಿಸಲಾಗಿದೆ.

ಅಸ್ತಿತ್ವಕ್ಕೆ ಸಂಬಂಧಪಟ್ಟದ್ದಾದರೂ. ಈ ವಸ್ತುವನ್ನು ಕಲಾಕೃತಿಯಾಗಿಸಲು ಇವರು ತೋರಿಸುವ ಕಾಳಜಿ ಇವರ ಬರವಣಿಗೆಯಲ್ಲಿ ವ್ಯಕ್ತವಾದಷ್ಟು ಸ್ಪಷ್ಟವಾಗಿ, ವಸ್ತುವಿನ ಬಗ್ಗೆಯೇ ಇವರಿಗೆಷ್ಟು ಕಾಳಜಿಯಿದೆ ಎಂಬುದು ವ್ಯಕ್ತವಾಗುವುದಿಲ್ಲ. ಕಲಾಕೃತಿಯ ನಿರ್ಮಾಣಕ್ಕೆ ಪೂರ್ವದಲ್ಲಿ ಮನುಷ್ಯನ ಅಸ್ತಿತ್ವಕ್ಕೆ ಸಂಬಂಧಪಟ್ಟ ಪ್ರಶ್ನೆಗಳು ಇವರನ್ನು ಕಾಡಿರಬಹುದು; ಆದರೆ ಕಲಾಕೃತಿಯ ನಿರ್ಮಾಣದ ಹೊತ್ತಿನಲ್ಲಿ ಇವರು ಪ್ರಯತ್ನಿಸುವ ಹದ ಕೃತಿಯ ಶಿಲ್ಪಕ್ಕೆ ಮಾತ್ರ ಸಂಬಂಧಿಸಿದ್ದು ಎನ್ನಿಸುತ್ತದೆ. ವಸ್ತುವನ್ನು ಸ್ವಂತಕ್ಕೆ ಅನ್ವಯಿಸಿಕೊಂಡು ಬರೆಯುವ ಲಂಕೇಶ, ರಾಘವ, ತೇಜಸ್ವಿಯವರ ವೈಯಕ್ತಿಕ ತೀವ್ರತೆಯ ಮಾರ್ಗ ಚಿತ್ತಾಲರದ್ದಲ್ಲ. ಇದನ್ನೆ ಮೆಚ್ಚಿಕೆಯ ಮಾತಿನಲ್ಲಿ ಹೇಳುವುದಾದರೆ ಚಿತ್ತಾಲರ ಮಾರ್ಗವನ್ನು 'ಕ್ಲಾಸಿಕಲ್' ಎಂದು ಕರೆಯಬಹುದು. ತಮ್ಮ ಕಥೆಯ ಪ್ರಪಂಚದ ಒಳಗೆ ಸದಾಶಿವ, ಶಾಂತಿನಾಥ ದೇಸಾಯರು ವರದಿಗಾರರಂತೆಯೊ ಚಲನಚಿತ್ರದ ದಿಗ್ದರ್ಶಕರಂತೆಯೊ ನಿಂತರೆ ಚಿತ್ತಾಲರು ಕಲಾವಿದರಂತೆ ನಿಂತು ತಮ್ಮ ಕತೆಗಳಿಗೆ ಕಾವ್ಯರೂಪವನ್ನು ಕೊಡುವದರಲ್ಲಿ ಮಗ್ನರಾಗಿರುತ್ತಾರೆ. ಆದ್ದರಿಂದ ಒಂದಿಷ್ಟು ಬಿರುಕಾಗಲಿ, ಅನವಶ್ಯಕ ಮಾತುಗಳಾಗಲಿ ಇಲ್ಲದಂತೆ ಚಿತ್ತಾಲರು ಬರೆಯುವ ಕತೆಗಳು ನಮಗೆ ಅತ್ಯಂತ ಸಂತೋಷವನ್ನು ತಂದಾಗಲೂ ಕಲಾಕೃತಿಯ ಪೂರ್ಣಾವಿಷ್ಕರಣವೆ ಇವರಿಗೆಲ್ಲಿ ಮೋಹವಾಗಿ ಬಿಡಬಹುದೋ ಏನೊ ಎಂದು ಭಯವಾಗುತ್ತದೆ. ಮೆಲ್ವಿಲ್ಲನು ಒಪ್ಪ-ಓರಣಕ್ಕೆ ಗಮನ ಕೊಡದಂತೆ ಬರೆದ ಮೋಬಿಡಿಕ್ ಒಂದು ಎತ್ತರದ ಕಲಾಕೃತಿ ಎಂಬುದನ್ನು ಸಾಹಿತ್ಯಕ್ಕೆ ಓರಣ ಅವಶ್ಯವೆಂದು ನಾವು ತಿಳಿದಾಗಲೂ ಮರೆಯಬಾರದು. ನಮ್ಮ ಸಾಹಿತ್ಯದಲ್ಲಿ ಕಾಣುವ ಕೃತಿ ನಿರ್ಮಾಣದ ನಿಷ್ಠುರ ಮಾರ್ಗ ಕೆಲವೊಂದು ಅನುಭವಗಳನ್ನು ಕೃತಿಗೆ ಬರಗೊಡದಂತಹ ಸಂಕೋಚವಾಗಿ ಎಲ್ಲಿ ಪರಿಣಮಿಸುತ್ತದೊ ಎಂದು ಅನುಮಾನ ಏಳಲು ಅವಕಾಶವಿದೆ. ಸರ್ವಸಾಕ್ಷಿತ್ವದ ಬರವಣಿಗೆ ಮಾರ್ಗ ಬಿಟ್ಟು ಒಂದು ಕೇಂದ್ರ ಪ್ರಜ್ಞೆಯ ದೃಷ್ಟಿಕೋನದಿಂದಲೇ ಕೃತಿಯನ್ನು ನಿಯೋಜಿಸಿದಾಗ ಪರಿಣಾಮದ ಏಕಾಗ್ರತೆ ಸಾಧಿಸುತ್ತದೆ. ಆದರೆ ಅನುಭವದ ಹರಹು ಕಡಿಮೆಯಾಗುತ್ತದೆ ವ್ಯಕ್ತಿ ಸಮಷ್ಟಿಗೆ ಪರಕೀಯನಾಗುತ್ತ ಬಂದಂತೆಲ್ಲ ಇದು ಕೂಡ ಅನಿವಾರ್ಯವೆ. ಸರ್ವಸಾಕ್ಷಿತ್ವದಿಂದ ಬರೆಯುವುದು ಸಮಷ್ಟಿಪ್ರಜ್ಞೆ ವ್ಯಕ್ತಿಯ ದೃಷ್ಟಿಯಲ್ಲಿ ಜಾಗೃತವಾಗಿ ಕೆಲಸ ಮಾಡುತ್ತಿರುವಾಗ ಮಾತ್ರ ಸಾಧ್ಯವೊ ಏನೊ. ಕಾದಂಬರಿಯಲ್ಲಿ ಕವನಕ್ಕಿರುವ ಏಕಾಗ್ರತೆ ಸಿದ್ಧಿಸಬೇಕೆಂದು ವಾದಿಸುತ್ತಿದ್ದ ಹೆನ್ರಿ ಜೇಮ್ಸ್, ಟಾಲ್‌ಸ್ಟಾಯ್‌ರ ಕಾದಂಬರಿಗಳನ್ನು ಬೃಹತ್ ಕೃತಿಗಳು ಎಂದು ಮೆಚ್ಚಿಕೊಂಡರೂ ಇವು ರೂಪವಿಲ್ಲದ ಅನುಭವದ ಮುದ್ದೆಗಳು ಎಂದು ಟೀಕಿಸುತ್ತಾನೆ. ಹೆನ್ರಿ ಜೇಮ್ಸ್ ಅಪೇಕ್ಷಿಸುವ ಸಾಮರಸ್ಯ ಮತ್ತು ಏಕಾಗ್ರತೆ ಕಾದಂಬರಿಗೆ ಅತ್ಯವಶ್ಯವೆಂದು ನಾವು ಒಪ್ಪಿಕೊಂಡಾಗಲೂ, ಟಾಲ್‌ಸ್ಟಾಯ್ ಬಗ್ಗೆ ಅವನ ಟೀಕೆ ಸರಿ ಎನ್ನಿಸುವುದಿಲ್ಲ.

ಸಾಧಾರಣವಾದದ್ದನ್ನು ವಿಶಿಷ್ಟ ಅನುಭವವಾಗಿ ಒಡಮೂಡಿಸುವುದರ ಜೊತೆಗೇ, ಈ ಒಡಮೂಡಿದ್ದನ್ನು ತತ್ತ್ವದ ನಿಲುವಿನಿಂದಲೂ ಶೋಧಿಸುವ ಪ್ರಯತ್ನವನ್ನು ತೇಜಸ್ವಿಯವರ ಕೃತಿಗಳಲ್ಲಿ ನಾವು ಕಾಣುತ್ತೇವೆ. ಸ್ವತಂತ್ರವಾಗಿ ಆಳವಾಗಿ ವಿಚಾರ ಮಾಡಬಲ್ಲ ನಮ್ಮ ಕೆಲವೇ ಬರಹಗಾರರಲ್ಲಿ ಇವರು ಒಬ್ಬರು. ಇವರು ಮಾತಾಡುವುದನ್ನು ಕೇಳಿದವರಿಗ. ಇವರ ಆಡು ಮಾತಿನಲ್ಲಿ ಕಾಣುವ ಶ್ರೀಮಂತ ಜೀವಂತತನ ಸ್ವರೂಪದಲ್ಲಿ ಮೊದಲ ಬಾರಿಗೆ ವ್ಯಕ್ತವಾಗಿದೆ ಎನ್ನಿಸುತ್ತದೆ. ಈ ಕೃತಿಯಲ್ಲಿ ಇವರು ಉಪಯೋಗಿಸುವ ಗದ್ಯದ ಲಯ ಶೋಧನೆ ಮತ್ತು ನಿರೂಪಣೆ ಎರಡನ್ನೂ ಒಟ್ಟಿಗೇ ನಿರ್ವಹಿಸುತ್ತದೆ. ಸ್ವರೂಪದ ನಾಯಕನ ಅರ್ಥ ಸಮಸ್ಯೆಗಳು ದ್ವಂದ್ವ ವ್ಯಕ್ತಿತ್ವದ ದುರ್ಬಲನೊಬ್ಬನ ವರ್ತನೆಗೆ ಸಂಬಂಧಿಸಿದುವು. ಅಂದರೆ ಬೆಳೆಯುತ್ತಿರುವ ಎಳೆಯನೊಬ್ಬನಿಗೆ ಸಾಮಾನ್ಯವಾದುವು; ಇನ್ನರ್ಥ, ಮನುಷ್ಯನ ಬಾಳ್ವೆಗೇ ಮೂಲಭೂತವಾದುವು. ಕಥೆಯ ನಾಯಕ ಈ ಎರಡನ್ನೂ ಒಂದೇ ತೀವ್ರತೆಯಲ್ಲಿ ಹೇಳಿಕೊಳ್ಳುವುದರಿಂದ ಒಂದು ಸಮಸ್ಯೆ ಏಳುತ್ತದೆ. ಕಥೆಯ ಪೂರ್ವಾರ್ಧದಲ್ಲಿ ಬರುವ ಪ್ರಶ್ನೆಗಳು, ಕಥೆಯ ಉತ್ತರಾರ್ಧ ಸೂಚಿಸುವ ಪ್ರಕಾರ ಒಂದು ಮಟ್ಟವನ್ನು ತಲ್ಪಿರುವ ನಾಯಕನಿಗೆ ಚಿಲ್ಲರೆಯಾಗಿ ಕಾಣಿಸಬೇಕಿತ್ತು ಎನ್ನಿಸುತ್ತದೆ. ಇಷ್ಟಿದ್ದರೂ ತೇಜಸ್ವಿಯವರ ಸ್ವಂತದ್ದೆನ್ನಿಸುವಂತೆ ಬರೆಯುವ ತೀವ್ರತೆಯಿಂದಾಗಿ ಸ್ವರೂಪ ಗಾಢವಾದ ಅನುಭವವನ್ನು ತಂದುಕೊಡುತ್ತದೆ. ಯಾವುದನ್ನೂ ಸ್ಥಾಪಿಸದೆ ಪ್ರತಿಪಾದಿಸದೆ ಕೊನೆಯಲ್ಲೂ ಶೋಧಕನಾಗಿ ಉಳಿದು ಅಸಂಬದ್ಧವೆನ್ನಿಸುವ ವಿಶ್ವದಲ್ಲಿ ವಿಹ್ವಲನಾಗಿ ನಿಲ್ಲುವ ನಾಯಕ ನಮ್ಮ ಜನಾಂಗಕ್ಕೆ ಪ್ರಾತಿನಿಧಿಕ ವ್ಯಕ್ತಿಯಾಗುತ್ತಾನೆ.

ತೇಜಸ್ವಿಯವರ ಸ್ವರೂಪದ ನಾಯಕನ ದುರ್ಬಲ, ಆದರೆ ಸೂಕ್ಷ್ಮಸಂವೇದಿ ಪ್ರಜ್ಞೆ ಈಚಿನ ಕನ್ನಡ ಸಾಹಿತ್ಯದಲ್ಲಿ ಮತ್ತೆ ಮತ್ತೆ ವಿಶ್ಲೇಷಣೆಗೆ ಒಳಗಾದ ವಸ್ತುವಾಗಿದೆ. ರಾಘವರ 'ಶ್ರಾದ್ಧ'ದ ನಾಯಕ, ದೇಸಾಯರ ಮುಕ್ತಿಯ ನಾಯಕ, ವ್ಯಾಸರಾಯ ನಿಂಜೂರರ ಕಥಾನಾಯಕರು, ಮತ್ತು ಮೊಕಾಶಿಯವರ ಗಂಗವ್ವ-ಗಂಗಾಮಾಯಿಯ ನಾಯಕ ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ. ದುರ್ಬಲನೂ ಸೂಕ್ಷ್ಮಸಂವೇದಿಯೂ ಆದ ನಾಯಕನನ್ನು ಕೇಂದ್ರಪ್ರಜ್ಞೆಯಾಗಿ ಮಾಡಿಕೊಂಡಲ್ಲಿ ಕೆಲವೊಂದು ಅನುಕೂಲತೆಗಳಿವೆ ಎಂದು ಲೇಖಕರಿಗೆ ಅನ್ನಿಸಿರಬಹುದೆಂದು ನನ್ನ ಅಭಿಪ್ರಾಯ. ಮುಖ್ಯವಾಗಿ ಇಂತಹ ನಾಯಕ, ಪರಸ್ಪರ ವಿರುದ್ಧವಾದ ಮೌಲ್ಯಗಳ ಘರ್ಷಣೆಗೆ ಸಿಕ್ಕ ನಮ್ಮ ಕಿಂಕರ್ತವ್ಯ ಮೌಢ್ಯದ ಜನಾಂಗಕ್ಕೆ ಪ್ರಾತಿನಿಧಿಕ ಪ್ರಜ್ಞೆಯಾಗಬಲ್ಲ ಎಂಬುದು ಮೇಲು ನೋಟಕ್ಕೇ ಹೊಳೆಯುತ್ತದೆ. ಅಲ್ಲದೆ ಗೋಸುಂಬೆಯಂತೆ ಚಂಚಲವಾದ ಕೇಂದ್ರ ಪ್ರಜ್ಞೆಯ ಮೂಲಕ ಲೇಖಕ ತನ್ನ ಅಸ್ಥಿರವಾದ ಆದರೆ ಶೋಧನಾಪರವಾದ ದೃಷ್ಟಿಯನ್ನು ಒಂದು ನಿರ್ಣಯಕ್ಕೆ ಬಂದು ಮುಟ್ಟುವ ಅವಶ್ಯವಿಲ್ಲದಂತೆ ನಿರೂಪಿಸಬಹುದು ಎಂಬುದೂ ಇಲ್ಲಿ ಗಮನಾರ್ಹ. ಸಾರ್ವತ್ರಿಕವಾದ ಗಟ್ಟಿ ಸತ್ಯಗಳೆಲ್ಲ ನಮ್ಮ ಹಿಂದಿನ ಸಾಹಿತಿಗಳ ಪ್ರತಿಪಾದನಾತ್ಮಕ ಬರಹಗಳಲ್ಲಿ ಕ್ಲೀಶೆ (Clicbe)ಗಳಾಗಿ ಬಿಟ್ಟಿರುವುದರಿಂದ, ಈಗಿನ ಜನಾಂಗ ಬಯಸುವುದು 'ನಿಲುವು'ಗಳನ್ನಲ್ಲ-ಸೂಕ್ಷ್ಮವಾಗಿ ಸ್ಪಂದಿಸುವ ಪ್ರಜ್ಞೆಯನ್ನು. ದುರ್ಬಲ, ಆದರೆ ಸೂಕ್ಷ್ಮ ಸಂವೇದನೆಯ ಪ್ರಜ್ಞೆಯ ಮೂಲಕ ಕಂಡ ಜಗತ್ತು ತನ್ನ ಹಿಂದಿನ ಸ್ಥಿರರೂಪಗಳನ್ನು ಕಳೆದುಕೊಂಡು ಇನ್ನೂ ನಮ್ಮ ಕಣ್ಣೆದುರಿಗೇ ರೂಪಪಡೆಯುತ್ತಿರುವ ದ್ರವ್ಯವಾಗಿದೆ ಎನ್ನಿಸುತ್ತದೆ. ಆದರೆ ಲೇಖಕರು ಕಲೆಯ ಉಪಯೋಗದ ದೃಷ್ಟಿಯಿಂದ ಬೇಕೆಂದೇ ಈ ಸ್ಥಿತಿಯಲ್ಲಿ ನಿಂತುಬಿಟ್ಟರೆ ಬೆಳವಣಿಗೆಯ ಜವಾಬ್ದಾರಿಯನ್ನು ಕಡೆಗಣಿಸಿದಂತಾಗುತ್ತದೆ. 'ಭೂಮಿಗೀತ'ದ ನಾಯಕನ ಪರಕೀಯ ಪ್ರಜ್ಞೆ ದುರ್ಬಲನಾದ 'ಒಳತೋಟಿ' ನಾಯಕನ ಪ್ರಜ್ಞೆಗಿಂತ ಹೆಚ್ಚಾದ ತಾತ್ತ್ವಿಕ ಆಳವನ್ನು ಪಡೆದಿರಲು ಕಾರಣ ಅಡಿಗರು ಸದಾ ಬೆಳೆಯುತ್ತಿರುವ ಲೇಖಕರಾಗಿರುವುದರಿಂದ.

ಮನುಷ್ಯನ ವರ್ತನೆಗೆ ಸಂಬಂಧಪಟ್ಟ ಸಾಚ-ಮೋಸಗಳನ್ನು ಅತ್ಯಂತ ನಿಷ್ಠುರವಾಗಿ ವಿಶ್ಲೇಷಿಸಬಲ್ಲ ಲಂಕೇಶರ ಪ್ರತಿಭೆ ಮುಖ್ಯವಾಗಿ ನೈತಿಕವಾದದ್ದು. ಭಾವನೆಗಳನ್ನು ಮೋಸವಿಲ್ಲದ ಗದ್ಯದಲ್ಲಿ ಪ್ರಾಮಾಣಿಕವಾಗಿ ಚಿತ್ರಿಸಬಲ್ಲ ಇವರು ಕನ್ನಡದಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವ ಲೇಖಕರು. ಇವರ ಪ್ರತಿಭೆಯ ಮುಖ್ಯಗುಣವೇ ನೈತಿಕವಾದದ್ದರಿಂದ ಕತೆಯನ್ನು ತತ್ತ್ವದ ಮಟ್ಟಕ್ಕೆ ಒಯ್ಯಲು ಪ್ರಯತ್ನಿಸಿದಾಗ್ಗೆಲ್ಲ ಇವರು ಸೋಲುತ್ತಾರೆ ಎನ್ನಿಸುತ್ತದೆ. ಆದ್ದರಿಂದ ಸಾಂಕೇತಿಕವಾದ ಇವರ 'ಗೊಮ್ಮಟೇಶ' ಕತೆಗಿಂತ ನನಗೆ ಹೆಚ್ಚು ಪ್ರಿಯವಾದದ್ದು 'ಕುರುಡು ಕಾಂಚಾಣ'ದಂತಹ ಕತೆಗಳು. ವೈಯಕ್ತಿಕವಾದ ಒಂದು ಮಾತನ್ನು ನಾನಿಲ್ಲಿ ಹೇಳಬಹುದಾದರೆ ನಾನು ಲಂಕೇಶರನ್ನು ಮೆಚ್ಚಿಕೊಳ್ಳಲು ಕಾರಣ: ಇವರಷ್ಟು ನಿರ್ದಯವಾಗಿ ನಿಷ್ಠುರವಾಗಿ ನೇರವಾಗಿ ನಾನು ಬರೆಯಲಾರೆ ಎಂಬುದು. ಯಾವ ತತ್ತ್ವಕ್ಕೂ ಗಂಟು ಬೀಳದೆ ಸ್ಪಷ್ಟವಾಗಿ ಇವರು ಜೀವನಕ್ಕೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾರೆ; ಖುದ್ದಾಗಿ ತಮ್ಮ ಅನುಭವಕ್ಕೆ ಸಿಕ್ಕಷ್ಟನ್ನು ಹೇಳುತ್ತಾರೆ. ಆದ್ದರಿಂದಲೇ ಉಳಿದ ಕತೆಗಾರರ ಜಟಿಲವಾದ, ಪ್ರಾಯಶಃ ಹೆಚ್ಚು ವ್ಯಂಜನಾಸಾಮರ್ಥ್ಯ ಪಡೆದ ಕತೆಗಳಿಗಿಂತಲೂ ಲಂಕೇಶರ ಬರವಣಿಗೆಯಲ್ಲಿ ಹೆಚ್ಚು ಜೀವಂತ ತೀವ್ರತೆ ಅಡಗಿರುತ್ತದೆ. ಶಾಕ್ ಮಾಡಬೇಕೆನ್ನುವ ಚಪಲ ಹೆಚ್ಚಿರುವ ಇವರ ನಾಟಕಗಳಿಗಿಂತಲೂ ಇವರ ಕತೆಗಳೇ ಗಟ್ಟಿಯಾದ ಕೃತಿಗಳು ಎಂದು ನನ್ನ ಅಭಿಪ್ರಾಯ.

ಶಾಂತಿನಾಥ ದೇಸಾಯರದು ಒಂದು ವೈಯಕ್ತಿಕ ರೂಪವನ್ನು ಪಡೆಯದ ಅನಿರ್ದಿಷ್ಟವಾದ ಶೈಲಿ. ಆದರೆ ಇದನ್ನೊಂದು ಊನವೆಂದು ಬಗೆಯಬಾರದು. ಈತನಕ ಕಾವ್ಯಶಕ್ತಿಯಿಂದ ಕೂಡಿದ ಸ್ವಂತ ಶೈಲಿ ಉಳ್ಳವರೆಲ್ಲ

ಹಳ್ಳಿಯ ಸಂಸ್ಕೃತಿಯಲ್ಲಿ ಬೇರುಳ್ಳವರು-ಅಲ್ಲದೆ ಹಳ್ಳಿಯ ಜಾನಪದ ಜೀವನದಿಂದಲೇ ದಟ್ಟವಾಗಿ ಬರೆಯುವ ಸೌಲಭ್ಯಕ್ಕಾಗಿ ತಮ್ಮ ವಸ್ತುವನ್ನು ಆರಿಸಿಕೊಳ್ಳುವವರು. ಆದರೆ ದೇಸಾಯರಂತೆ ನಗರಜೀವನವನ್ನೆ ತಮ್ಮ ವಸ್ತುವಾಗಿ ಆರಿಸಿಕೊಳ್ಳುವ ಲೇಖಕ ಅನಿವಾರ್ಯವಾಗಿ ಅನಿರ್ದಿಷ್ಟ ಶೈಲಿಯಲ್ಲಿಯೇ ಬರೆಯಬೇಕಾಗಬಹುದು; ದೇಸಾಯರಂತೆಯೇ ತಮ್ಮ ಗದ್ಯಕ್ಕೆ ಚೆಲುವನ್ನಾಗಲಿ, ಆಕರ್ಷಕತೆಯನ್ನಾಗಲಿ ಬಿಗಿಯನ್ನಾಗಲಿ ತರಲು ಬಂದಿಷ್ಟೂ ಪ್ರಯತ್ನಿಸದೆ ಆಳ್ವಕವಾದ ವಾಕ್ಯಗಳನ್ನೆ ಬರೆಯಬೇಕಾಗಬಹುದು. ರಾಮಚಂದ್ರಶರ್ಮರ ಈಚಿನ ಕವನಗಳಲ್ಲಿನ ಪ್ರಯತ್ನ ಮತ್ತು ದೇಸಾಯರ ಕತೆಗಳು ಈ ದೃಷ್ಟಿಯಿಂದ ಕನ್ನಡದಲ್ಲಿ ಗಮನಾರ್ಹವಾದವು. ಭಾಷೆಯ ಲಘುತ್ವದಿಂದಾಗಿ ದೇಸಾಯರು ತಮ್ಮ ಕಥೆಗಳ ಒಳಗೆ ವರದಿಗಾರರಂತೆ ಕೆಲಸ ಮಾಡಬೇಕಾಗುತ್ತದೆ. ಇದರಿಂದಾಗಿ ವಸ್ತುನಿಷ್ಠತೆಯ ಲಾಭವಿದೆ; ಆದರೆ ಯಾವ ವೈಯ್ಯಕ್ತಿಕ ಅಗತ್ಯದಿಂದ ಇವರು ಬರೆಯುತ್ತಿದ್ದಾರೆಂಬುದು ತಿಳಿಯದೆ ಕಥೆಯ ತೀವ್ರತೆ ಕಡಿಮೆಯಾಗುತ್ತದೆ. ಇಷ್ಟಿದ್ದೂ ಕನ್ನಡ ಭಾಷೆ ಹೊಸ ವಸ್ತುಗಳಿಗೆ ಬಗ್ಗುತ್ತ ಹೋಗುವುದು ಅವಶ್ಯವೆಂಬ ದೃಷ್ಟಿಯಿಂದ ದೇಸಾಯರು ನಮ್ಮ ಅತ್ಯಂತ ಮುಖ್ಯ ಲೇಖಕರಲ್ಲಿ ಒಬ್ಬರು.

× × ×

ನಮ್ಮ ಕತೆಗಾರರು ಎದುರಿಸುತ್ತಿರುವ ಅತ್ಯಂತ ಮುಖ್ಯವಾದ ಸಮಸ್ಯೆ ಭಾಷೆಗೆ ಸಂಬಂಧಿಸಿದ್ದಾಗಿದೆ. ಕನ್ನಡ ಭಾಷೆ ಕಾವ್ಯಶಕ್ತಿಯಿಂದ ಜೀವಂತವಾಗಿರುವುದು ಹಳ್ಳಿಗಳಲ್ಲಿ—ನಗರಗಳಲ್ಲಲ್ಲ. ಆದರೆ ಭಾರತದ ಭವಿಷ್ಯ ಸ್ವರೂಪ ನಿರ್ಧರಿತವಾಗುತ್ತಿರುವುದು ನಗರಗಳಲ್ಲಿ—ಹಳ್ಳಿಗಳಲ್ಲಲ್ಲ ನಮ್ಮ ಜೀವನವನ್ನು ವರ್ತಮಾನಕಾಲದಲ್ಲಿ ವೈಜ್ಞಾನಿಕ ಕೈಗಾರಿಕಾ ಕ್ರಾಂತಿಗಳ ಮೂಲಕ, ವ್ಯಾಪಾರ, ಉದ್ಯಮ, ಉದ್ಯೋಗಗಳ ಮೂಲಕ ಬದಲಿಸುತ್ತಿರುವ ಭಾಷೆ ಇಂಗ್ಲಿಷ್—ಕನ್ನಡವಲ್ಲ. ಆಧುನಿಕ ಪ್ರಜ್ಞೆಯ ಪ್ರಭಾವಕ್ಕೆ ಒಳಗಾಗುತ್ತಿರುವ ಲೇಖಕರು ಬದುಕುತ್ತಿರುವುದು ನಗರಗಳಲ್ಲಿ; ಬೌದ್ಧಿಕ ಪ್ರೇರಣೆಗಳನ್ನು ಪಡೆಯುತ್ತಿರುವುದು ಇಂಗ್ಲಿಷಿನ ಮೂಲಕ. ಆದರೆ ನೆಲದಿಂದ ಬರುವ ಸಂವೇದನೆಗಳು ಏನಿದ್ದರೂ ಅದನ್ನು ತನಗಿಂತ ಬುದ್ಧಿಯ ವ್ಯಾಪಕತೆಯ ದೃಷ್ಟಿಯಿಂದ ಹಿಂದುಳಿದವರಾದ ಜನರು ಆಡುವ ಕನ್ನಡದಿಂದಲೇ ಪಡೆಯಬೇಕು. ಆದ್ದರಿಂದ ನಮ್ಮ ಲೇಖಕರು-ಹಳ್ಳಿಗಳಲ್ಲಿ ಹುಟ್ಟಿ ಬೆಳೆದು ನಗರಗಳಲ್ಲಿ ಉದ್ಯೋಗಕ್ಕೆ ನಿಂತವರಾದರೆ—ಹಳ್ಳಿಗಳಲ್ಲಿ (ಈಗ ತಮ್ಮ ಸ್ಮೃತಿಯಲ್ಲಿ) ಜೀವಂತವಾಗಿರುವ ಕನ್ನಡವನ್ನು ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರೇರಣೆಗೆ ಅನಿವಾರ್ಯವಾಗಿ ತೆರೆದುಕೊಂಡಿರುವ ಪ್ರಜ್ಞೆಯ ಅಭಿವ್ಯಕ್ತಿಗೆ ಉಪಯೋಗಿಸಿಕೊಳ್ಳಲು ಹೆಣಗಬೇಕಾಗುತ್ತದೆ.

ಇಲ್ಲಿ ಒಂದು ಸಮಸ್ಯೆ ಏಳುತ್ತದೆ. ಕನ್ನಡವೇ ನಮ್ಮ ಜನಜೀವನದ ಸರ್ವಸ್ವ ವ್ಯಾಪಾರಗಳನ್ನು ಒಂದೇ ಭಾಷೆಯಲ್ಲಿ ಸಾಧಿಸಲು ಕಣ

ಮಾಧ್ಯಮವಾಗುವತನಕ ನಮ್ಮ ನಗರ-ಗ್ರಾಮ ಪ್ರಜ್ಞೆಯ ಸರ್ವಸ್ವಕ್ಕೆ ಕನ್ನಡವನ್ನು ಉಪಯೋಗಿಸುವುದು ಕೃತಕವಾಗಿ ಕಾಣಿಸುತ್ತದೆಯೇ ಹೊರತಾಗಿ ಅದಕ್ಕೆ ಜೀವನದ ಸಂದರ್ಭದ ನೈಜತೆ ದೊರಕಲಾರದು. ಹಳ್ಳಿಗಳಲ್ಲಿ ಬೇರಿರದ ನಮ್ಮ ಲೇಖಕರು ಬರೆಯುವ ಕನ್ನಡ ನಮಗೆ ಕಾವ್ಯಸತ್ವಹೀನವಾಗಿ ಕಾಣುತ್ತದೆ; ಆದರೆ ನಗರಜೀವನದ ಪ್ರಭಾವಕ್ಕೆ ಒಳಗಾಗದೆ ಬರುವ ಬರಹ ಪ್ರೇರಕ ಶಕ್ತಿಯನ್ನು ಕಳೆದುಕೊಂಡದ್ದಾಗಿ ಕಾಣುತ್ತದೆ. ಕನ್ನಡಕ್ಕಿರುವ ಸಮಸ್ಯೆ ಭಾರತೀಯ ಲೇಖಕರು ಬರೆಯುವ ಇಂಗ್ಲಿಷಿಗೂ ಇದೆ. ಗ್ರಾಮಾಯಣದಂತಹ ಒಂದು ಕಾದಂಬರಿಯನ್ನು ಭಾರತೀಯ ಇಂಗ್ಲಿಷ್ ಲೇಖಕರು ಬರೆದಿಲ್ಲ; ಬರೆಯುವುದು ಸಾಧ್ಯವೂ ಇಲ್ಲ ಎನಿಸುತ್ತದೆ. ಹಾಗೆಯೇ ಇಂಗ್ಲಿಷ್ ಭಾಷೆಯ ಮೂಲಕ ಸಾಧ್ಯವಾದಂತೆ ಕನ್ನಡದಲ್ಲಿ ಆಧುನಿಕ ಪ್ರಜ್ಞೆಯುಳ್ಳ ಎರಡು ಪಾತ್ರಗಳ ಸಂಭಾಷಣೆಯನ್ನು-ಅದು ಬೌದ್ಧಿಕ ಸಂಗತಿಗಳನ್ನು ಎತ್ತುವ ಸಂಭಾಷಣೆಯಾದ್ದಲ್ಲಿ ಕೃತಕವೆನ್ನಿಸದಂತೆ ಬರೆಯುವುದು ಸಾಧ್ಯವಿಲ್ಲ. ಲೇಖಕ ತನ್ನ ಅವಶ್ಯಕತೆಗೆ ಮಾಧ್ಯಮವನ್ನು ಜಗ್ಗುವುದೆಷ್ಟು ನಿಜವೊ, ಮಾಧ್ಯಮವು ಕೂಡ ತನ್ನ ಸಾಧ್ಯತೆಗಳಿಗೆ ತಕ್ಕುದಾದ ಸೃಷ್ಟಿಯ ಕಡೆಗೆ ಲೇಖಕನನ್ನು ಜಗ್ಗುತ್ತದೆಂಬುದು ಅಷ್ಟೇ-ಪ್ರಾಯಶಃ ಹೆಚ್ಚು-ನಿಜ.

ಇದಕ್ಕೆ ಉದಾಹರಣೆ ಅಡಿಗರ ಕಾವ್ಯದಲ್ಲಿ ಸಿಗುತ್ತದೆ. ನಗರಜೀವನದ, ಮತ್ತು ಇಂಗ್ಲಿಷ್ ವ್ಯಾಸಂಗದಿಂದ ನೇರವಾಗಿ ಬಂದ ಪ್ರತೀಕಗಳನ್ನು ಪಡೆದ ಚಂಡೆ ಮದ್ದಳೆಯ ಕೆಲವು ಕವನಗಳು ಆಧುನಿಕ ಪ್ರಜ್ಞೆಗೆ ಸತ್ವಯುತವಾದ ಕನ್ನಡತನವನ್ನು ಕೊಡುವುದರಲ್ಲಿ ಸೋಲುತ್ತವೆ. ಆದರೆ ಆಧುನಿಕ ಪ್ರಜ್ಞೆಯ ಜೀವಂತ ಕನ್ನಡ ಸೃಷ್ಟಿಯಾದ 'ಭೂಮಿಗೀತ' ಕವನದ ಶರೀರ ಮಾತ್ರ ಹಳ್ಳಿ ಜೀವನದ ನಿಸರ್ಗದಿಂದ ಬಂದ ಪ್ರತೀಕಗಳದ್ದಾಗಿದೆ. ಅಂದರೆ 'ಭೂಮಿಗೀತ'ದ ಪ್ರಜ್ಞೆ 'ಆಧುನಿಕ'ವಾದರೂ, ಅದರ ಶರೀರ "ಸಮಕಾಲೀನ"ವಲ್ಲ. ಸಮಕಾಲೀನ ಶರೀರ ಮತ್ತು ಆಧುನಿಕ ಪ್ರಜ್ಞೆ ಎರಡನ್ನೂ ಸಮರ್ಥವಾಗಿ ಕೂಡಿದ 'ವೇಸ್ಟ್‌ಲ್ಯಾಂಡಿ'ನಂತಹ ಕವನ ಕನ್ನಡದಲ್ಲಿ ಇನ್ನೂ ಇಲ್ಲ. ಭಾರತದ ಸಮಷ್ಟಿ ಪ್ರಜ್ಞೆಯಲ್ಲಿ ಬೇರಿಲ್ಲವೇನೊ ಎಂಬಂತೆ ಬರೆದ ಹಳದಿಮೀನಿನ ನವ್ಯತೆ ಆಧುನಿಕವನ್ನೂ ಸಮಕಾಲೀನವನ್ನೂ ಜೀವಂತವಾಗಿ ಕೂಡಿಸುವುದಕ್ಕೆ ಅರ್ಥಪೂರ್ಣವಾದ ಉತ್ತರವಲ್ಲ. ಇದು ಬರೀ ರಾಮಾನುಜನ್ನರ ಮತ್ತು ಇದನ್ನೆ ಬೇರೆ ಬಗೆಗಳಲ್ಲಿ ಪ್ರಯತ್ನಿಸುತ್ತಿರುವ ಶರ್ಮ, ದೇಸಾಯರ ಸೋಲಲ್ಲ: ನಮ್ಮ ನಾಗರಿಕತೆಯ ಈ ಘಟ್ಟದಲ್ಲಿ ಕನ್ನಡ ಭಾಷೆಯ ಮುಂದಿರುವ ಸಮಸ್ಯೆ. ಈ ಸಮಸ್ಯೆಗೆ ಉತ್ತರ ಸಾಹಿತ್ಯದಲ್ಲಿ ಮಾತ್ರವಲ್ಲದೆ ರಾಜಕೀಯದಲ್ಲೂ ಇದೆಯೆಂಬುದನ್ನು ನಾವು ಮರೆಯಬಾರದು. ಎರಡು ಭಾಷೆಗಳಲ್ಲಿ ಎರಡು ಸಂಸ್ಕೃತಿಗಳಲ್ಲಿ ಇಬ್ಬಗೆಯಾಗಿ ಒಡೆದುಕೊಂಡಿರುವ ನಮ್ಮ ದ್ವಂದ್ವ ವ್ಯಕ್ತಿತ್ವದ ಪರಿಪೂರ್ಣ ಅಭಿವ್ಯಕ್ತಿ

ಗುತ್ತಿರುವ ಲೇಖಕ ಸಾಹಿತ್ಯಸೃಷ್ಟಿಗಿಂತಲೂ ಹೆಚ್ಚು ಬೆಲೆಯುಳ್ಳ ಕೆಲಸವನ್ನು ಮಾಡುತ್ತಿದ್ದಾನೆ. ಆದರೆ ಇದು ಸಾಹಿತ್ಯದಲ್ಲ ಮಾತ್ರ ಆಗಲಾರದು; ಸಾಹಿತ್ಯದಲ್ಲಿ ನಡೆಯುತ್ತಿರುವ ಪ್ರಯತ್ನ ಕೂಡ ಇಂಗ್ಲಿಷ್, ಕನ್ನಡ, ಪೂರ್ವ ಪಶ್ಚಿಮಗಳ ದ್ವಂದ್ವಗಳಲ್ಲಿ ಒಡೆದಿರುವ ನಮ್ಮ ಜನಜೀವನದ ಎಲ್ಲ ವ್ಯಾಪಾರಗಳೂ ಒಂದೇ ಭಾಷೆಯಲ್ಲಿ ನಮ್ಮ ಅನುಭವಕ್ಕೆ ನಿಲುಕಬೇಕೆನ್ನುವ ಹೋರಾಟದ ಒಂದು ಮುಖ್ಯ ಅಂಶವಾಗಿದೆ. ಆದ್ದರಿಂದ ನಮ್ಮ ಜೀವನವನ್ನು ಎಷ್ಟರ ಮಟ್ಟಿಗೆ ಕನ್ನಡ ವ್ಯಾಪಿಸಲು ಸಮರ್ಥವಾಗುತ್ತದೊ ಅಷ್ಟರ ಮಟ್ಟಿಗೆ ಸಾಹಿತ್ಯದಲ್ಲಿ ಮಾಡುವ ಪ್ರಯತ್ನವೂ ಸಾರ್ಥಕವಾಗುತ್ತದೆ. ನವಸಾಹಿತ್ಯವನ್ನು ಒಂದು ಹೊಸ ಬಗೆಯ ಕಲಾಪಂಥವೆಂದು ತಿಳಿಯದಿದ್ದವರಿಗೆ ಮಾತ್ರ ಈ ಮಾತುಗಳು ಮನದಟ್ಟಾಗುತ್ತವೆ.

ಕನ್ನಡದಲ್ಲಿ ನವ್ಯಸಾಹಿತ್ಯ ಚಳುವಳಿ ಒಂದು ಹೊಸ ಬಗೆಯ ಕಲಾಪಂಥವಾಗಿ ಮಾತ್ರ ಬರಲಿಲ್ಲವೆಂದು ನನ್ನ ಅಭಿಪ್ರಾಯ. ನವ್ಯಸಾಹಿತ್ಯದ ಹಿಂದೆ ಒಂದು ದೃಷ್ಟಿಯಿದ್ದಲ್ಲಿ ಇದು ಕಲೆಯ ಅಭಿವ್ಯಕ್ತಿಕ್ರಮಕ್ಕಷ್ಟೆ ಪರಿಮಿತವಾದದ್ದಲ್ಲ. ನವ್ಯಸಾಹಿತ್ಯ ಮುಖ್ಯವಾಗಿ ನೈತಿಕ ಕ್ರಾಂತಿಯಾಗಿ ಕನ್ನಡಕ್ಕೆ ಬಂದಿದೆ. ಬರವಣಿಗೆಯ ಕ್ರಮಕ್ಕೂ, ಭಾವಿಸುವ ಕ್ರಮಕ್ಕೂ ಅನ್ಯೋನ್ಯವಾದ ಸಂಬಂಧವಿದೆಯೆಂದು ತಿಳಿದಿರುವುದರಿಂದಲೇ ಇದು ಬರಿಯ ಶೈಲಿಯ ಕ್ರಾಂತಿಯಾಗಿ ಉಳಿಯದೆ ದೃಷ್ಟಿಯಲ್ಲಿನ ಕ್ರಾಂತಿಯಾಗಿಯೂ ಪರಿಣಮಿಸಿದೆ. ನವ್ಯಸಾಹಿತ್ಯದ ಮೂಲಭೂತ ಧೋರಣೆ ಭಾಷೆಯ ಉಪಯೋಗಕ್ಕೆ ಸಂಬಂಧಿಸಿದ್ದು ಎಂಬುದು ನಿಜ. ಆದರೆ ಈ ಧೋರಣೆಯ ಪ್ರಕಾರ ಸಾಹಿತ್ಯದಲ್ಲಿ ಪ್ರತಿಪಾದನೆಗೆಂದು ಉಪಯೋಗಿಸಿದ ಭಾಷೆಗಿಂತ ಶೋಧನೆಗೆಂದು ಬಳಸಿದ ಭಾಷೆ ಹೆಚ್ಚು ಮಹತ್ವವುಳ್ಳದ್ದು ಎಂದು ತಿಳಿಯುವುದರಿಂದ, ನವ್ಯಸಾಹಿತಿ ಜೀವನವನ್ನು ಪರಿಭಾವಿಸುವ ರೀತಿಯೂ ಹಿಂದಿನದಕ್ಕಿಂತ ಬೇರೆ ರೀತಿಯದ್ದಾಗಿದೆ. ಭಾಷೆಯಲ್ಲಿ ಸಂಭವಿಸುವಷ್ಟು ಮಾತ್ರ ನಿಜವಾದ ಸಾಹಿತ್ಯ ಎಂಬ ದೃಷ್ಟಿಯ ಹಿಂದೆಯೆ ಜೀವನಾನುಭವವಾಗಿ ಸಂಭವಿಸುವಷ್ಟು ಆದರ್ಶಮಾತ್ರ ವ್ಯಕ್ತಿಜೀವನದ ದೃಷ್ಟಿಯಿಂದ ನಿಜ ಎಂಬ ರೋಮಾಂಟಿಕ ವಾದದ ನಿಲುವು ಇದೆ. ಭಾಷೆಯ ಬಗ್ಗೆ ಮತ್ತು ಜೀವನದ ಬಗ್ಗೆ ಇಷ್ಟು ನಿಷ್ಠುರವಾದ ನಿಲುವನ್ನು ತಾಳಿ ನವ್ಯಸಾಹಿತಿ ಬರೆಯುವುದರಿಂದಲೇ ಬುದ್ಧಿಪೂರ್ವಕವಾಗಿ ಮಾತ್ರ ಗ್ರಹಿಸಿದ ವಿಚಾರಗಳ ಸಮರ್ಥನೆಗೊ, ಅಥವಾ ಆದರ್ಶಗಳ ಅಭ್ಯಾಸಗತ ನಿರೂಪಣೆಗೊ ಸಾಹಿತ್ಯ ಬರಿಯ ವಾಹಕವಾಗದೆ ಶೋಧನಾಕ್ರಿಯೆಯಾಗಿ ಪರಿಣಮಿಸಿದೆ.

ನವಸಾಹಿತ್ಯ ಮಾರ್ಗ ಗದ್ಯಸಾಹಿತ್ಯದಲ್ಲೂ ಕಾವ್ಯಕ್ರಿಯೆಯ ಗಾಢತೆಯನ್ನು ಮತ್ತು ಧ್ವನಿಶಕ್ತಿಯನ್ನು ಅಪೇಕ್ಷಿಸುವುದರಿಂದ, ಜೊತೆಗೆ ಸಮಕಾಲೀನವಾಗಲೂ ಇಚ್ಛಿಸುವುದರಿಂದ-ಆದರೆ ಸಮಕಾಲೀನ ಸಂವೇದನೆಗಳನ್ನು ಇಂಗ್ಲಿಷ್ ಭಾಷೆ ಹೆಚ್ಚು ಹೆಚ್ಚಾಗಿ ಆಕ್ರಮಿಸುತ್ತಿರುವುದರಿಂದ ಕನ್ನಡ ನವ್ಯಸಾಹಿತಿಯ ಮುಂ

ದಿರುವ ಸಮಸ್ಯೆ ಅಗಾಧವಾದದ್ದಾಗಿದೆ. ಈ ಹದಿನೈದು ವರ್ಷಗಳ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಅತ್ಯಂತ ಆಶಾದಾಯಕವಾದ ಚಿಹ್ನೆ ಎಂದರೆ ಕೆಲವು ಅತ್ಯುತ್ತಮ ಮನಸ್ಸುಗಳು ಕನ್ನಡದಲ್ಲಿ ಕೆಲಸಮಾಡುತ್ತಿವೆ ಎಂಬುದು ಭಾಷಾಪ್ರೇಮದ ಕಾರಣದಿಂದಲ್ಲದೆ ಕನ್ನಡದಲ್ಲಿರುವ ಸಾಹಿತ್ಯವನ್ನು ಬುದ್ಧಿಶಾಲಿಯಾದವನೊಬ್ಬನಿಗೆ ಓದಬೇಕೆನ್ನಿಸುವುದು ಪಾಶ್ಚಿಮಾತ್ಯ ಸಾಹಿತ್ಯದಲ್ಲೆಲ್ಲೂ ದೊರಕಲಾರದಂತಹ ಅನುಭವದ ಪೋಷಣೆ ಇಲ್ಲಿ ದೊರಕುವುದು. ಇಲ್ಲಿ ಸಾಧ್ಯವಾದಾಗ, ಜೀವಂತವೂ, ಶಕ್ತಿಯುತವೂ ಆದ ಪಾಶ್ಚಿಮಾತ್ಯ ಸಾಹಿತ್ಯದ ಬರಿ ಅನುಕರಣೆ ಕನ್ನಡ ನವ್ಯಸಾಹಿತ್ಯವಾದರೆ ಯಾರಿಗೂ ಕನ್ನಡ ಬೇಕೆನ್ನಿಸುವುದಿಲ್ಲ. ಈಚೆಗೆ ಬರುತ್ತಿರುವ ಕನ್ನಡ ವಿಮರ್ಶೆ ಅತ್ಯಂತ ತೀಕ್ಷ್ಣವಾದ ವಿಶ್ಲೇಷಣೆಗೆ ಸಾಹಿತ್ಯವನ್ನು ಗುರಿಮಾಡಿರುವುದು ನಮ್ಮ ಅಪೇಕ್ಷೆಯು ಮಟ್ಟವೂ ಎತ್ತರವಾಗಿದೆ ಎಂಬುದಕ್ಕೆ ದ್ಯೋತಕವಾಗಿದೆ ಶ್ರೀ ಕೀರ್ತಿ ಕೋಟಿ, ರಾಜೀವ ತಾರಾನಾಥ ಎಂ ಜಿ ಕೃಷ್ಣಮೂರ್ತಿ ಮುಂತಾದ ವಿಮರ್ಶಕ ಲೇಖಕರುಗಳು ಒಂದು ಬೆಲೆಯುಳ್ಳ ವಿಮರ್ಶೆಯ ಸಂಪ್ರದಾಯವನ್ನು ಬೆಳೆಸುತ್ತಿವೆ ಇಂತಹ ವಿಮರ್ಶಕರ ಅವಗಾಹನೆಗೆ ಅರ್ಹವಾಗಬಲ್ಲ ಸಾಹಿತ್ಯವೂ ಬೆಳೆಯುತ್ತಿರಬೇಕಾಗುತ್ತದೆ. ಇದು ಬೆಳೆಯುತ್ತಿರುವ ಸಾಹಿತ್ಯವಲ್ಲದಿದ್ದರೆ ತೀಕ್ಷ್ಣ ವಿಮರ್ಶೆಯನ್ನು ಉತ್ತೇಜಿಸುವ ಗುಣವನ್ನೂ ಇದು ಕಳೆದುಕೊಳ್ಳುತ್ತದೆ ನಾಟಕದಲ್ಲಿ ಗಿರೀಶ ಕರ್ನಾಡ; ಸಣ್ಣ ಕತೆ ಕಾದಂಬರಿಗಳಲ್ಲಿ ಚಿತ್ತಾಲ. ಲಂಕೇಶ. ದೇಸಾಯಿ ತೇಜಸ್ವಿ; ನವ್ಯಕವಿತೆಯಲ್ಲಿ ಅಡಿಗ ಮತ್ತು ಈಚೆಗೆ ಬರೆಯುತ್ತಿರುವ ತರುಣರಾದ ಕಂಬಾರ, ಪಾಟೀಲ ಸಿದ್ದಲಿಂಗಯ್ಯ, ನಾಡಿಗ ಚನ್ನಯ್ಯ ಸೃಷ್ಟಿಯ ಕ್ರಿಯೆಯಲ್ಲಿ ಅತ್ಯಂತ ಕಷ್ಟವಾದದ್ದನ್ನು ಸಾಧಿಸಬೇಕೆನ್ನುವ ಛಲ ಉಳ್ಳವರಾಗಿದ್ದಾರೆ. ಅಡಿಗ, ಕಾರ್ನಾಡ ಚಿತ್ತಾಲ, ತೇಜಸ್ವಿ ಲಂಕೇಶರಂತಹ ಬರಹಗಾರರು ಯಾವ ಭಾಷೆಯಲ್ಲಿ ಬರೆದಿದ್ದರೂ ಆ ಭಾಷೆಯ ಸಂಪತ್ತನ್ನು ಹೆಚ್ಚಿಸುವ ಸಾಮರ್ಥ್ಯವುಳ್ಳವರೆಂಬುದನ್ನು ನೆನೆದರೆ; ಈಗಾಗಲೇ ಅಡಿಗರು ಯಾವ ಭಾಷೆಯಲ್ಲಾದರೂ ಎತ್ತರದ ಕೃತಿಗಳೆಂದು ಪರಿಗಣಿತವಾಗುವಂತಹ ಕವನಗಳನ್ನು ಬರೆದಿದ್ದಾರೆಂದರೆ ಈಚೆಗೆ ಬರುತ್ತಿರುವ ಕನ್ನಡ ಸಾಹಿತ್ಯದ ಬಗ್ಗೆ ಗೌರವ ಹುಟ್ಟುತ್ತದೆ

ಯೂರೋಪಿನ ನವ್ಯ ಸಾಹಿತ್ಯದ ಬರೀ ಅನುಕರಣೆಯಾಗಲಿ. ಅಥವಾ ಯೂರೋಪಿನ ನವ್ಯ ಸಾಹಿತ್ಯದ ಪ್ರಯೋಗಗಳಿಗೆ ಮನಸ್ಸನು ಮೆಚ್ಚಿಕೊಂಡು ಬರೆಯುವ ಗ್ರಾಮಜೀವನದ ಕಥೆಗಳಾಗಲಿ ಭಾರತದ ನೈಜಸ್ಥಿತಿಯನ್ನು ವ್ಯಕ್ತಪಡಿಸಲಾರದು. ಭಾರತೀಯನೊಬ್ಬನ ಜೀವನ ಮಧ್ಯಯುಗಕ್ಕೆ ಸಹಜವಾದ ಧಾರ್ಮಿಕ ಆಚಾರಗಳಿಂದಲೂ ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧಕ್ಕೆ ಸಹಜವಾದ ಆರ್ಥಿಕ ಸಂಬಂಧಗಳಿಂದಲೂ ಆದರೆ ಇಪ್ಪತ್ತನೆ ಶತಮಾನದ ಅತ್ಯಾಧುನಿಕ ವಿಚಾರಗಳಿಂದಲೂ ನಿತ್ಯಪ್ರೇರಿತವಾಗುತ್ತಿರುವದರಿಂದ, ಇವುಗಳಲ್ಲಿ ಯಾವೊಂದನ್ನು, ಗೌಣವೆಂದು ಭಾವಿಸುವುದರಿಂದಲೂ ಸಾಹಿತ್ಯಕ್ಕೆ ನಷ್ಟವಾಗುತ್ತದೆ. ಇದು ನವ್ಯ ಸಾಹಿತ್ಯದ ವಿರೋಧಿಗಳು ಹೇಗೋ ಹಾಗೆ ಉತ್ಸಾಹಿಗಳೂ ಎಚ್ಚರಿಕೆಯಿಂದ ಗಮನಿಸಲ್ಪಡಬೇಕಾದ ಅಂಶವಾಗಿದೆ.



ಓ ಗೆಳೆಯ.

ಕರುಣೆಯಿಲ್ಲದ ಕಾಲಗತಿಯ ತಿರುಗಣೆಯಲ್ಲಿ
ತಿರುಗುತಿಹುದೆನ್ನ ಈ ಜೀವನದ ನೌಕೆ!
ಅನ್ಯಳಾಗಿಹೆನು ವಿಧಿಯು ಕೈಸೆರೆಯಾಗಿ
ಎನ್ನ ನೀ ಮರೆತುಬಿಡು ಕೈಮುಗಿದು ಬೇಡುವೆನು
ನನಸು ಕನಸಾಗಿರಲಿ. ಪ್ರೇಮ ಹೃದಯದೊಳಿರಲಿ;
ಮನಸು ಅಸ್ಥಿರವಾಯ್ತು ಕಾಲಗತಿಗನುಸರಿಸಿ
ನಿನದಲ್ಲ ಈ ಸೋಲು; ಮನಸು ಮಣ್ಣಿನ ಮಡಕೆ
ಬಿಸುಟದನು ಒಡೆದುಹೋಗಲಿ ಅದರ ಒಳ ಉಸಿರು;
ಹೊಸ ಮಣ್ಣಿನಲಿ ಮಿಲನವಾಗಲಿ ಜೀವಭಾವ.
ನಿನ್ನ ಹೃನ್ಮಂದಿರದೊಳಗೆ ಹೊಸ ರೂಪಿನಲಿ
ಅವತಾರವಾಗಲಿ ದೇವತೆಯು ಬೇಗ.
ಮಲಿನವಾಗದಿರಲೆನ್ನ ಹಿಂದಿನ ಕರಸ್ಪರ್ಶ ನಿನಗೆ
ಕಣ್ಣೀರ ತರಿಸದಿರಲಿ ಅಂದಿನಾ ನೆನಹುಗಳು
ನನಗಾಗಿ ನೀನಲ್ಲಿ ಬಿಸಿಯುಸಿರ ಎಳೆಯದಿರು
ಜೋಕೆ...! ಬಾಡೀತು ನಿನ್ನ ಪೂಜೆಯ ಕುಸುಮ!

ನಾನಿಂದು ಹೊರಟಿಹೆನು ಬೇರೊಂದು ದಾರಿಯಲಿ
ನೇಹ ತೀರುವ ವರೆಗೆ ಆ ಮನೆಯ ಬೆಳಗಲಿಕೆ.
ನಿಲ್ಲುವೆನು ನಾನಲ್ಲಿ ದೇವರಿಗೆ ತಲೆಬಾಗಿ.
ಕಾಲನಾಣತಿ ಹೊತ್ತು ನಡೆದಿಹೆನು ನಾನೀಗ
ಕರುಣೆ ಬರುವುದು ಎಂದೋ ಕಾಲನಿಗೆ ನಾನರಿಯೆ!
ದಾರಿಕಾರರ ನಡುವೆ ಏಕಾಂಗಿ ನಾನೀಗ...;
ಶರಣುಮಾಡಲಿ ಎನಗೆ ನಿನ್ನ ಕ್ಷಮೆಯು ನಿದಾನ.

ಓ ಗೆಳೆಯ—

ನಿನ್ನ ಬಾಳಿನ ಸುಲಿಗೆ ನಡೆದುಹೋಯಿತೆ ಹೇಳು?
ಬರಿದಾಯಿತೆ ನಿನ್ನೆದೆಯು ತುಂಬಲಾರದೆ ಈಗ?
ಕಲ್ಲಿಗೆರವಾಗಿ ಮರಳುವ ನೀರಿನಲೆಯಂತೆ
ಛಿನ್ನವಾಗಿಹುದು ನಿಜ ಎನ್ನೀ ಅಪಲಾಪ!
ಕೂಡಿದೆವು ದಾರಿಯಲಿ ನಾವಿಬ್ಬರೂ ಬಂದು—
ನಡೆದೆವೆಷ್ಟೋ ದೂರ– ಒಂದೆ ದಾರಿಯ ಹಿಡಿದು
ಸವಿಗನಸ ಜೀಕಿದೆವು ಹಗಲಿರುಳ ಹಗ್ಗವ ಹಿಡಿದು;
ಕನಸು ಹೆಣೆದೆವು ಆಗ ಮನದ ಅಂಚಿನ ಮೇಲೆ
ಗಾಳಿ ಬೀಸಿದ ದಿಕ್ಕು ಹಿಡಿದು ಸಾಗಿದೆವಾಗ.

ಓ ಗೆಳೆಯ,

ನಾಳೆ ನಡೆಯಲಿಹ ನಿನ್ನ ವೈಭವದ
ಅಕ್ಕಿಯಾನೆ...ಉಪ್ಪಿನಾನೆಯ ಅದಲುಬದಲಾಟದಲಿ
ಧೂಳಿ ಮುಸುಕಿದ ಎನ್ನ ಹೃದಯವನು ಬಿಸುಟಬಿಡು.

ನಿನ್ನ ಹೃದಯಪೀಠದ ಮೇಲೆ
ಹೊಸ ಕುಸುಮವರಳಲಿ ಮತ್ತೆ

—ರಾಘವೇಂದ್ರ

ಕನ್ನಡ ಸಣ್ಣ ಕತೆಗಳಲ್ಲಿ ನವ್ಯತೆ

ಶಾಂತಿನಾಥ ದೇಸಾಯಿ

ಸುಮಾರು ೧೯೫೦ ರಿಂದ ಕನ್ನಡ ಸಾಹಿತ್ಯದ ಸರ್ವ ಅಂಗಗಳಲ್ಲಿ ಪ್ರವಹಿಸಲು ಸುರುವಾದ ನವೀನ ಪ್ರಜ್ಞೆಯು ಮೊದಲು ಮೈದೋರಿದ್ದು ಮುಖ್ಯವಾಗಿ ಕಾವ್ಯ ಮತ್ತು ಸಣ್ಣ ಕತೆಗಳಲ್ಲಿ. ಕಾವ್ಯದಂತೆ ಸಣ್ಣ ಕತೆಯೂ ಬಹಳ ಶೀಘ್ರಗ್ರಾಹಿ ಹಾಗೂ ಉತ್ತಮ ಪ್ರಾಯೋಗಿಕ ಮಾಧ್ಯಮವು; ಆದುದರಿಂದ ಪ್ರಜ್ಞೆಯ ಬದಲಾವಣೆಗಳನ್ನು ಕಂಡುಹಿಡಿಯಲು ಕಾವ್ಯದಂತೆ, ಸಣ್ಣ ಕತೆಯೂ ಒಳ್ಳೆಯ ಕ್ಷೇತ್ರವೆನ್ನಬಹುದು. 'ಬದಲಾವಣೆ' 'ನವೀನ ಪ್ರಜ್ಞೆ' ಎಂಬ ಪದಪ್ರಯೋಗಗಳೂ ಮುಖ್ಯವಾಗಿ ಕಾಲಸಾಪೇಕ್ಷವಾದುವುಗಳಾದ್ದರಿಂದ ಇದಕ್ಕಿಂತ ಮುಂಚಿನ ಪ್ರಜ್ಞೆಯ ಸ್ವರೂಪ ಹಾಗೂ ಅದು ವ್ಯಕ್ತವಾದ ರೀತಿಯ ಬಗ್ಗೆ ಮೊದಲು ಕೆಲವು ಸ್ಥೂಲವಾದ ವಿಚಾರಗಳನ್ನು ರೂಪಿಸಿಡಬೇಕಾದದ್ದು ಅವಶ್ಯ.

ಕನ್ನಡ ಸಣ್ಣ ಕತೆಯ ಜನಕರೆಂದು ಕರೆಯಲ್ಪಡುವ ಶ್ರೀನಿವಾಸರಿಂದ ಸುರುವಾದ, ಅವರಿಂದ ಪ್ರಭಾವಿತವಾದ, ಒಂದು ಪರಂಪರೆ ಕನ್ನಡದಲ್ಲಿ ಬಹಳ ಹುಲುಸಾಗಿ ಬೆಳೆದು ಬಂತು. ಒಂದು ಸನ್ನಿವೇಶವನ್ನು ನಯವಾಗಿ, ಸಹೃದಯತೆಯಿಂದ, ಸಹಾನುಭೂತಿಯಿಂದ, ಮನಸ್ಸಿಗೆ ಹಿತವಾಗುವಂತೆ, ಹೃದಯಕ್ಕೆ ಕಚಕುಳಿಯಿಟ್ಟು ನಗಿಸಿ, ಒಮ್ಮೊಮ್ಮೆ ಕರುಣಾರಸದಿಂದ ದ್ರವಿಸ ಹಚ್ಚಿ, ಒಟ್ಟಿನ ಮೇಲೆ ಕಲಾತ್ಮಕ ಆನಂದವನ್ನಿತ್ತು, 'ವಾಹ್, ಅಡ್ಡಿಯಿಲ್ಲ', ಎಂದು ಉದ್ಗಾರ ಹೊರಡಿಸುವ ಕತೆಗಾರಿಕೆ ಕನ್ನಡದಲ್ಲಿ ತುಂಬ ಬೆಳೆದು ಬಂತು. ಈ ಸಂಪ್ರದಾಯ ಕನ್ನಡ ಸಣ್ಣ ಕತೆಗಳ ಪ್ರಪಂಚಕ್ಕೆ ಕೊಟ್ಟ ಕಾಣಿಕೆ ಅಷ್ಟಿಷ್ಟಲ್ಲ. ಶ್ರೀನಿವಾಸರ ಕತೆಗಳೆಂದರೇ ಒಂದು ಮಹಾ ಪ್ರವಾಹ; ಮುಂದೆ ಅದೇ ಪ್ರವಾಹದ ಕವಲುಗಳನ್ನು ಮುಖ್ಯವಾಗಿ ಆನಂದ. ಆನಂದಕಂದ, ಅಶ್ವತ್ಥರ ಕತೆಗಳಿಂದ ಹಿಡಿದು ಹೊಸಬರಾದ ವ್ಯಾಸರಾಯ ಬಲ್ಲಾಳ ಹಾಗೂ ಯಶವಂತ ಚಿತ್ತಾಲರ ಮೊದಲಿನ ಕತೆಗಳ ತನಕ ನಾವು ಕಾಣಬಹುದಾಗಿದೆ. ಈ ಸಂಪ್ರದಾಯಕ್ಕೆ ಪ್ರತಿಯಾಗಿ ಪ್ರಗತಿಶೀಲ ಲೇಖಕರು ಒಂದು ಹೊಸ ದಾರಿ ತುಳಿಯಲೆತ್ನಿಸಿದರು. ಪ್ರಖರವಾದ ಸಮಾಜಪ್ರಜ್ಞೆ, ನಿಷ್ಠುರವಾದ ಶತ್ರುಪ್ರಣಾಲಿ. ಸಮಾಜದ ಕುಂದುಕೊರತೆಗಳನ್ನು ಬಯಲಿಗೆಳೆಯಬೇಕೆಂಬ ಹಟ, ಉದ್ದೇಶಪೂರ್ಣವಾದ ಕಥನ ಕೆಲಸ. ಇವು ಕನ್ನಡ ಕತೆಯನ್ನು ಬೆಚ್ಚಗಿಟ್ಟ [illegible] ಯಿಂದ ಹೊರದೆಗೆದು ಊರಕೇರಿಗಳಲ್ಲಿ ಪಟ್ಟಣದ ಸಂದಿ-ಗೊಂದಿಗಳಲ್ಲಿ, ಮೈಚಳಿ ಬಿಟ್ಟು ತಿರುಗಾಡ ಹಚ್ಚಿದರು. ಈ ಎರಡೂ ಸಂಪ್ರದಾಯಗಳಲ್ಲಿ ವಾಸ್ತವಿಕತೆಗೇನೂ ಕೊರತೆ ಇರಲಿಲ್ಲ. ಆದರೆ ವಾಸ್ತವಿಕತೆಯನ್ನು ನೋಡುವ ದೃಷ್ಟಿ ಮಾತ್ರ ಆ ಕಾಲಧರ್ಮಕ್ಕನುಗುಣವಾದ ಪ್ರಜ್ಞೆಯಿಂದ ಸೀಮಿತವಾಗಿತ್ತು. ಶ್ರೀನಿವಾಸ ಸಂಪ್ರದಾಯದ ಪ್ರಜ್ಞೆಯಲ್ಲಿ ಹಿಂದೂ ಸಂಸ್ಕೃತಿಯಲ್ಲಿ ತುಂಬ ಆದರ-ಗೌರವ. ಆ ಸಂಸ್ಕೃತಿಯಲ್ಲಿಯ ಕುಂದು-ಕೊರತೆಗಳನ್ನು 'ಅಯ್ಯೋ ಪಾಪ' ಎಂದು ಸಹಾನುಭೂತಿಯಿಂದ, ಕಳಕಳಿಯಿಂದ, ನೋಡುವ ಮಾನವೀ ಹೃದಯ ಅವುಗಳ ಬಗ್ಗೆ (ಕೋಮಲ ಮನಸ್ಸಿನ) ಓದುಗರ ಹೃದಯ ಮಿಡಿಯುವಂತೆ ಬರೆಯುವ ಕಲಾಸೌಷ್ಠವ— ಇವು ಮುಖ್ಯವಾದ ಅಂಶಗಳಾಗಿದ್ದವು. ಆ ಪ್ರಜ್ಞೆ ಕೆಲವು ದೃಷ್ಟಿಯಿಂದ ಸಂಕುಚಿತವಾಗಿತ್ತು, ದುರ್ಬಲವಾಗಿತ್ತು. ಈ ಮಾತಿನ ಸತ್ಯತೆಯನ್ನು ಮನಗಾಣಬೇಕಾದರೆ ಶ್ರೀನಿವಾಸರ 'ಕವಿಯ ಬಾಳ ಕೊನೆಯ ದಿನ' ಹಾಗೂ 'ಮೊಸರಿನ ಮಂಗಮ್ಮ' ಕತೆಗಳನ್ನು ನೋಡಬೇಕು. 'ಕವಿಯ ಬಾಳ ಕೊನೆಯ ದಿನ' ದಲ್ಲಿ ಗಯಟೆ ಕವಿಯ ನಿಜಕ್ಕೂ ದ್ವಂದ್ವಮಯವಾದ, ತೊಡಕು-ತೊಡಕಾದ, ಜೀವನದ ಕತೆ ಶ್ರೀನಿವಾಸರ ಕೋಮಲ ಪ್ರಜ್ಞೆಗೆ ತುತ್ತಾಗಿ ನಿಸ್ಸತ್ವವಾಗಿಬಿಟ್ಟಿದೆ. 'ಮೊಸರಿನ ಮಂಗಮ್ಮ' ದಲ್ಲಿ ಮಂಗಮ್ಮನಂಥ ಕುತೂಹಲಕಾರಿ 'ಜೀವಂತ' ಹೆಣ್ಣು ಮಗಳನ್ನು ಕೊನೆಗೆ ಕತೆಯ ಕೊನೆ ಹಿತವಾಗಿರಬೇಕು. ಹಾಯಾಗಿರಬೇಕು, ಎಂಬ [illegible]ಲೋ ಅಥವಾ/ಮತ್ತು ಅವಳನ್ನು ಮೊಮ್ಮಗ-ಮಗ-ಸೊಸೆಯರ ಜೊತೆಗೆ ಒಂದುಗೂಡಿಸಿಬಿಡುವದರಲ್ಲಿ ಹಿಂದೂ ಸಂಸ್ಕೃತಿಯ ಹಿರಿತನವಿದೆಯೆಂಬ ಭಾವುಕ ಕಲ್ಪನೆಯಿಂದಲೋ ಏನೋ, ಅಂತಃಸತ್ವಹೀನಳನ್ನಾಗಿ ಮಾಡಿ ಬರಿಯ ಸೂತ್ರದ ಗೊಂಬೆಯನ್ನಾಗಿಸಿದ್ದಾರೆ ಶ್ರೀನಿವಾಸರು. ಇನ್ನು ಪ್ರಗತಿಶೀಲರ ಬಂಡುಗಾರಿಕೆ. ತಾತ್ವಿಕ ಅರ್ಭಟ, ಹೊಸ ಸಮಾಜ ನಿರ್ಮಿಸಬೇಕೆನ್ನುವ ಉತ್ಸಾಹ, ಇವುಗಳು ಅವರ ಕತೆಗಳಲ್ಲಿ ಬೇರೊಂದು ಬಗೆಯ ಭಾವಾವೇಶಗಳನ್ನು ಸೇರಿಸಿ ವಸ್ತುವಿನ ಸಾಮಾನ್ಯೀಕರಣ ಮಾಡಿದವು ಹಾಗೂ ಅದಕ್ಕೆ ಕೃತಕ ರೂಪ ಕೊಟ್ಟವು. ಈ ಕಥಾವ್ಯಾಪಾರವನ್ನು ನಿರಂಜನರ [illegible] ಸರೋವರದ ಎಲ್ಲ ಕತೆಗಳಲ್ಲಿಯೂ ನೋಡಬಹುದಾಗಿದೆ. ಪ್ರಗತಿಶೀಲ ಪ್ರಜ್ಞೆಯ ಕೊರತೆಗಳು ಏನೇ ಇದ್ದರೂ, ಅದು ಮುಖ್ಯವಾಗಿ ಹಳೆಯ ಸಂಪ್ರದಾಯಗಳ ವಿರುದ್ಧ ಬಂಡೆಬ್ಬಿಸಿ ನವ್ಯಪ್ರಜ್ಞೆಯ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿತು, ಹಾಗೂ ಈ ನವ್ಯಪ್ರಜ್ಞೆಗೆ ಮೂಲ. ಹೀಸತ್ವದ ದೀಕ್ಷೆ ಕೊಡುವುದರಲ್ಲಿ ಪ್ರಮುಖ ಪಾತ್ರವಹಿಸಿತು. ಸ್ವಾತಂತ್ರ್ಯಾನಂತರದ ದಶಕದಲ್ಲಿ ಬಂಡುಗಾರಿಕೆ ಕಡಿಮೆಯಾಗಿ, ಇದ್ದುದನ್ನು ಇದ್ದಂತೆ ಕಾಣುವ ತಿಳಿಗಣ್ಣಿನ ದೃಷ್ಟಿ ಬೆಳೆಯತೊಡಗಿತು; ಭಾವಾವೇಶ ಭಾವುಕತನ ಕಡಿಮೆಯಾಗಿ ನಿಷ್ಠುರವಾದ ತಟಸ್ಥವೃತ್ತಿ ಬೆಳೆಯತೊಡಗಿತು; ಸಮಾಜ ವ್ಯವಸ್ಥೆ ಶೀಘ್ರವಾಗಿ ಬದಲಾಗುತ್ತಿರುವ ಸಂಧಿಕಾಲದಲ್ಲಿ ವೈಫಲ್ಯವೇಹೆಚ್ಚಾಗಿ ವೈಯಕ್ತಿಕ ಅನುಭವಕ್ಕೇ ಅಂಟಿಕೊಳ್ಳುವ ಅವಶ್ಯಕತೆ ನಿರ್ಮಾಣವಾಯಿತು. ನಾನೆಂದರೇನು, ನನ್ನ ಜೀವನವೆಂದರೇನು, ನನ್ನ ಇತರರ ವಿಶ್ವದ ಸಂಬಂಧವೇನು ಎಂದು ಮುಂತಾದ್ದಾಗಿ ಪ್ರಶ್ನಿಸುವ ಅಂತರ್ಮುಖತೆ ಬೆಳೆದು ಬಂತು. ಈ ನವೀನ ಪ್ರಜ್ಞೆಗೆ ಗೊಬ್ಬರವಾಗಿ ಎಲ್ಲ ಬಂಧಗಳನ್ನು ಹರಿದು, ಹತ್ತೂ ದಿಶೆಗಳಲ್ಲಿ ರಭಸದಿಂದ ಮುನ್ನುಗ್ಗತೊಡಗಿದ ಜಾಯ್ಸ್, ಪ್ರೂಸ್ಟ್, ಹೆಮಿಂಗ್ವೆ, ಫಾಕ್ನರ್, ಸಾರ್ತ್ರ, ಕಾಮೂ ಮುಂತಾದವರ ಪಾಶ್ಚಾತ್ಯ ಸಾಹಿತ್ಯ. ಫ್ರಾಯ್ಡ್-ಯೂಂಗ್ ಮುಂತಾದವರ ಮನಸ್ಸಿನಲ್ಲಿಯ ಒಂದು ಹೊಸ ವಿಶ್ವವನ್ನೇ ಬಯಲಿಗೆಳೆದು ತೋರಿಸಿದ ಮಾನಸಶಾಸ್ತ್ರ ಇವು ಸಿಕ್ಕ ಮೇಲೆ ಕೇಳಬೇಕೇ? ನವೀನ ಪ್ರಜ್ಞೆ ನೋಡ ನೋಡುವದರಲ್ಲಿ ಕೈ-ಕಾಲು-ಕಣ್ಣು-ಕಿವಿ-ಮೂಗು ಪಡೆದುಕೊಂಡು ಹಲ್ಲು ಕಿರಿಯತೊಡಗಿತು. (ಅಲ್ಲ, ಆಗಿನ ಓದುಗರಿಗೆ ಹಾಗೆನಿಸಿತು ಹಾಗೆನಿಸಿ 'ಎಲಾ ಇವನ, ಎಂದು ಹಲ್ಲು ಕಡಿಯತೊಡಗಿದರು.)

ಈ ದೃಷ್ಟಿಯಿಂದ ಶ. ರಾ. ಸು. ಅವರ '೦.೦=೦' ಎಂಬ ಕತೆ ನವ್ಯಪ್ರಜ್ಞೆಯ ಕೆಲವು ಅಂಶಗಳನ್ನು ಸ್ಪಷ್ಟವಾಗಿ ಮೂಡಿಸಿದ ಮೊದಲ ಕತೆಯಾಗಿದೆ. ಈ ಕತೆಯಲ್ಲಿಯ ನಾಯಕನನ್ನು-ಆತನಿಗೆ ಹೆಸರಿಲ್ಲ ರಸ್ತೆಯ ಬದಿಯ ಮೈದಾನಿನಲ್ಲಿದ್ದ ಬಾವಿ ತನ್ನ ಹತ್ತಿರ ಕರೆಯುತ್ತದೆ. ಆ ಬಾವಿಯಲ್ಲಿ ಒಂದು ಕರು ಕಾಲು ಜಾರಿ ಬಿದ್ದಿದೆ. ತಾಯಿ ಹಸು ಹುಚ್ಚು ಹಿಡಿದಂತೆ ನೀರಿನ ಅಂಚಿಗೇ ಧಾವಿಸುತ್ತದೆ. ಕರು ನೀರಿನೊಂದಿಗೆ ಹೋರಾಡಿ ಹೊರಗೆ ಬರುತ್ತದೆ. ವ್ಯಕ್ತಿಯ ಮೈ ಕೋಪದಿಂದ ಉರಿಯುತ್ತದೆ. "ಹೀಗೇಕೆ ಬಿಟ್ಟರು ಈ ಭಾವಿಯನ್ನು, ಮುನ್ಸಿಪಾಲಿಟಿಯವರಿಗೆ ಹೇಳಿ ಮುಚ್ಚಿಸಲಿಲ್ಲವೇಕೆ. ಕೊಲೆಪಾತಕರು?...ಕಣ್ಣು ತೆರೆಸಲು ಯಾರಾದರೂ ಸಾಯಬೇಕಿತ್ತು" ಎಂದು ಸಿಡಿಮಿಡಿಗೊಂಡಾಗ ಅವನಿಗೆ ಜೀವನದ ಒಂದು ಸತ್ಯವೇ ಹೊಳೆಯುತ್ತದೆ "ಯಾರಾದರೂ ಸಾಯಬೇಕು....ಮಾನವನ ಕಣ್ಣು ತೆರೆಸಲು ಮಾನವ

ಸಾಯಬೇಕು. ಗುಂಡನೇಟಿನಿಂದ, ಶಿಲುಬೆಯ ಮೇಲೆ, ವಿಷ ಕುಡಿದು, ನೀರಿನಲ್ಲಿ...ಮಾನವನ ಕಣ್ಣು ತೆರಸಲು ಮಾನವ ಸಾಯಬೇಕು..ಮಾನವನ ಕಣ್ಣು...ಅನುಕಂಪ ಸಹಾನುಭೂತಿ.ಸತ್ತು ಸ್ವಾರ್ಥ ಹೊಳೆವ ಕ್ಷುದ್ರ ಕಣ್ಣು.... ತೆರಸಲು ಸಾಯಬೇಕು..." ಜೀವನದ ರೈಲು- ನಿರ್ದಯ ವಾಸ್ತವತೆ-ಶಾಂತಿ, ಪ್ರೇಮ, ತೃಪ್ತಿಯ ನಿಲ್ದಾಣದತ್ತ ಧಾವಿಸುತ್ತದೆ. ಆದರೆ ಬರುವ ನಿಲ್ದಾಣ ವಿಫಲತೆ. ಧ್ಯೇಯಹೀನ, ಅರ್ಥಶೂನ್ಯ, ತರ್ಕಶೂನ್ಯ, ಜಟಿಲ, ಹಿಂಸಾದಾಯಕ ಆಧುನಿಕ ಜೀವನದಲ್ಲಿ ಕಠೋರ ವಾಸ್ತವತೆಯ ಜೋಡಿ ಹಳಿಯ ಮೇಲೆ ಧಾವಿಸುವ ರೈಲಿಗೆ ಸಿಲುಕುವ ನಿಲ್ದಾಣ-ವಿಫಲತೆ... ಸಾಯಬೇಕು, ಕಣ್ಣು ತೆರೆಯಿಸಬೇಕು ಎಂದು ಆ ವ್ಯಕ್ತಿ ನೀರಿಗಿಳಿಯುತ್ತದೆ. ನಂತರ 'ಬಯಲು ಬಯಲಿಗೆ ಕೂಡಿ ಬಯಲಾಗಿತ್ತು.' ಈ ಕತೆಯಲ್ಲಿ ನವೀನ ಪ್ರಜ್ಞೆಯ ಒಂದು ಮುಖ್ಯಾಂಶವಾದ ವಿಫಲ ಭಾವ ಕಾವ್ಯವಾಗಿ, ನಡುನಡುವೆ ಪ್ರಬಂಧವಾಗಿ, ಅಭಿವ್ಯಕ್ತಗೊಂಡಿದೆ. ಹೇಳುವ ರೀತಿಯಲ್ಲಿಯೂ ಹೊಸತನವಿದೆ-ಸಾಂಕೇತಿಕ ನಿರೂಪಣೆಯ ಜೊತೆಗೆ ಭಾಷೆಯಲ್ಲಿ ಕಾವ್ಯದ ಲಯವಿದೆ, ಕಾವ್ಯದ ಧ್ವನಿಯಿದೆ, ಬಿಸಿಯಿದೆ. [ಆದರೆ ಇಷ್ಟೇ—ಸಂಕೇತಕ್ಕೆ ತನ್ನ ಅರ್ಥವನ್ನು ತಾನೇ ಸೂಚಿಸುವದಕ್ಕೆ ಬಿಡದೆ ಕತೆಯಲ್ಲಿಯೇ ಅದಕ್ಕೆ ಅರ್ಥ ಒದಗಿಸುವ ಯತ್ನವಿದೆ.] ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಕತೆಯಲ್ಲಿ ಕಾಣುವ ನವೀನ ದೃಷ್ಟಿ 'ಹಳೆಯ' ಪ್ರಜ್ಞೆಗೆ—ಅಂದರೆ ಭಾವುಕ ಮಾನವತಾವಾದದ ಸಮಾಜಪ್ರಜ್ಞೆಗೆ ಅಂಟಿಕೊಂಡೇ ಬಂತು. ಅನಂತಮೂರ್ತಿಯವರ ಮೊದಲಿನ ಕತೆಗಳಲ್ಲಿ [ಉದಾ: 'ತಾಯಿ'], ರಾಮಚಂದ್ರಶರ್ಮರ 'ಸೆರಗಿನ ಕೆಂಡ'ದಲ್ಲಿ, ಸದಾಶಿವರ 'ನಲ್ಲಿಯಲ್ಲಿ ನೀರು ಬಂತು,' ರಾಜಲಕ್ಷ್ಮಿ ಎನ್. ರಾವ್ ಅವರ 'ಆವೇ ಮೇರಿಯಾ,' ಯಶವಂತ ಚಿತ್ತಾಲರ 'ಪೀ. ಜೆ' ಮುಂತಾದ ಕತೆಗಳಲ್ಲಿ ನವೀನ ಪ್ರಜ್ಞೆ ಇನ್ನೂ ಕಣ್ಣು ತೆರೆಯುವ ಸ್ಥಿತಿಯಲ್ಲಿದ್ದುದನ್ನು ನೋಡಬಹುದು. ಈ ಕತೆಗಳು ವಸ್ತುವಿನ ದೃಷ್ಟಿಯಿಂದ, ತಂತ್ರದ ದೃಷ್ಟಿಯಿಂದ ಹೊಸದಾಗಿ ಪರಿಣಮಿಸಿದವೇ ಹೊರತು ಜೀವನಪ್ರಜ್ಞೆಯ ದೃಷ್ಟಿಯಿಂದಲ್ಲ. ಆಗ ಬೆಳೆಯತೊಡಗಿದ ನವ್ಯಪ್ರಜ್ಞೆಯ ಸಂಪೂರ್ಣ ಆವಿಷ್ಕಾರ ನೋಡಬೇಕಾದರೆ, ಅದರ ವಿವಿಧ ಮುಖಗಳನ್ನು ಕಾಣಬೇಕಾದರೆ, ಅನಂತಮೂರ್ತಿಯವರ ಪ್ರಶ್ನೆಯಲ್ಲಿಯ ಕತೆಗಳನ್ನೂ, ಲಂಕೇಶರ 'ಕೆರೆಯ ನೀರನು ಕೆರಗೆ ಚೆಲ್ಲಿ'ಯಲ್ಲಿಯ ಕತೆಗಳನ್ನೂ. ಚಿತ್ತಾಲರ 'ಅಪರಿಚಿತರು,' 'ಪಯಣ', 'ಸೆರೆ', 'ಆಟ' ಮುಂತಾದ ಕತೆಗಳನ್ನೂ, ಹೊಸ ಕ್ಷಿತಿಜದಲ್ಲಿಯ ಲಂಕೇಶ, ಸದಾಶಿವ, ತೇಜಸ್ವಿ, ರಾಮಚಂದ್ರಶರ್ಮ, ಅನಂತಮೂರ್ತಿ, ಪಿ. ಶ್ರೀನಿವಾಸರಾವ್, ರಾಮಾನುಜನ್ ಮುಂತಾದವರ ಕತೆಗಳನ್ನೂ, ಸಂಕ್ರಮಣದಲ್ಲಿ ಪ್ರಕಟವಾದ ರಾಘವ, ಗಿರಡ್ಡಿ, ಚಂದ್ರಶೇಖರ ಪಾಟೀಲ, ದೇವಾನಾಂಪ್ರಿಯ, ಜಿ. ಎಸ್. ಸದಾಶಿವ ಮುಂತಾದವರ ಕತೆಗಳನ್ನೂ ಓದಬೇಕು. ಇವುಗಳನ್ನು ಓದಿದಾಗ ನವ್ಯಪ್ರಜ್ಞೆ ಒಂದು ನಿರ್ದಿಷ್ಟವಾದ ರೂಪು ತಳೆದು ಬೆಳೆಯುವ ಸ್ಥಿತಿಯಲ್ಲಿದೆ ಎಂದು ಮನದಟ್ಟಾಗುವದು. ಸಾಮಾನ್ಯ ಶಿಕ್ಷಿತರ ಸಲುವಾಗಿಯೇ ಇದ್ದಂಥ ಜನಪ್ರಿಯವಾದ ಕಸ್ತೂರಿ ಕೂಡ ಚಿತ್ತಾಲ, ಪಾಟೀಲ, 'ಸಾಗರತನಯ' ಮುಂತಾದವರ ಕತೆಗಳಿಗೆ ಸ್ವಾಗತಪತ್ರಿಕೆಯೆಂದ ಮೇಲೆ ನವ್ಯತೆಗೆ ಈಗ ಒಂದು ಗಟ್ಟಿಯಾದ ಸ್ಥಾನ ದೊರೆತಿದೆ, ಅದು ಸ್ವಲ್ಪ ಸ್ವಲ್ಪ 'ಜನಪ್ರಿಯ'ವಾಗತೊಡಗಿದೆಯೆಂದಾಯಿತು.

ಅನಂತಮೂರ್ತಿಯವರ ಕತೆಗಳಲ್ಲಿ ನವ್ಯತೆ ಹೇಗೆ ಆವಿಷ್ಕಾರಗೊಂಡಿದೆಯೆಂಬುದನ್ನು ನೋಡಿದಾಗ ನವ್ಯತೆಯ ಬಗ್ಗೆ ಕೆಲವು ಸಂಗತಿಗಳು ಸ್ಪಷ್ಟವಾಗಬಹುದಾಗಿವೆ. ಉದಾಹರಣೆಗಾಗಿ, ಅವರ 'ಘಟಶ್ರಾದ್ಧ' ಕತೆಯಲ್ಲಿಯ ನವ್ಯತೆಯ ಬಗ್ಗೆ ವಿಚಾರ ಮಾಡೋಣ. ಈ ಕತೆಯಲ್ಲಿ ಯಮುನಕ್ಕನ ಭ್ರೂಣಹತ್ಯೆಯ ವಿಷಯದಲ್ಲಿ ನವ್ಯತೆಯಿಲ್ಲ. ಆ ವಿಷಯವನ್ನು ನಾಣಿಯೆಂಬ ಚಿಕ್ಕ ಹುಡುಗನ ಅನುಭವದ ಅಂಗವನ್ನಾಗಿ ಮಾಡಿ ಚಿತ್ರಿಸುವದರಲ್ಲಿ ನವ್ಯತೆ ಬಂದಿದೆ. ಯಮುನಕ್ಕನ ಕತೆಯನ್ನು ನಾಣಿಯ ನೇರ, ನೈತಿಕ ದೃಷ್ಟಿಯಿಂದ ಬಹುಮಟ್ಟಿಗೆ ತಟಸ್ಥ, ದೃಷ್ಟಿಯಿಂದ ನೋಡುವದರಲ್ಲಿ ಹೊಸತನವಿದೆ. ಇಲ್ಲಿ ಲೇಖಕರು ತಮ್ಮ ನವ್ಯಪ್ರಜ್ಞೆಗೆ ನಾಣಿಯ ಪ್ರಜ್ಞೆಯನ್ನು ಒಳ್ಳೆಯ ಮಾಧ್ಯಮವನ್ನಾಗಿ ಮಾಡಿದ್ದಾರೆ... ನಾಣಿಯೆಂದರೆ ಇದ್ದುದನ್ನು ಇದ್ದಂತೆ ನೋಡುವ, ಹೇಳುವ, ಅನುಭವಗಳ ಆಘಾತವನ್ನು ತನ್ನದೇ ಆದ ವೈಯಕ್ತಿಕ ರೀತಿಯಲ್ಲಿ ಎದುರಿಸುವ ನವ್ಯಪ್ರಜ್ಞೆಯ ಪ್ರತೀಕದಂತಿದ್ದಾನೆ... ಈ ಕತೆಯಲ್ಲಿ ಇನ್ನೊಂದು ಗಮನೀಯ ಸಂಗತಿಯೆಂದರೆ ಕತೆಯ ನಿರೂಪಣೆಯಲ್ಲಿ, ನಾಣಿಯ ಮನಸ್ಸಿನ ಚಿತ್ರಣದಲ್ಲಿ ಯಾವದೇ ಬಗೆಯ ಭಾವನಾವಿವಶತೆಯಿಲ್ಲ. ಕೆಲವು ವಿಷಯಗಳು (ಉದಾ: ಕೊನೆಗೆ ಬರುವ ಪಾದರಿಯ ವಿಷಯ, ಉಡುಪರ ಎರಡನೆಯ ಲಗ್ನದ ವಿಷಯ) ಉದ್ದೇಶಪೂರ್ವಕವಾಗಿ ವಿಡಂಬನಾತ್ಮಕವಾಗಿದ್ದರೂ ಒಟ್ಟಿನ ಮೇಲೆ ಕತೆ ಒಂದು ವಿಶಿಷ್ಟ ವಸ್ತುನಿಷ್ಠತೆಯ ಪಾತಳಿಯ ಮೇಲೆಯೇ ಕೆಲಸ ಮಾಡುತ್ತದೆ.

ಇಂಥ ವಸ್ತುನಿಷ್ಠ, 'ತಟಸ್ಥ' ದೃಷ್ಟಿಯನ್ನು ಮಾನಸಶಾಸ್ತ್ರದ ನವೀನ ಜ್ಞಾನದಿಂದ ಚೂಪಾಗಿಸಿ, ಅಂತರಂಗದ ಪದರು ಪದರುಗಳನ್ನು ಬಿಚ್ಚಿ, ಅನುಭವದ ಸೂಕ್ಷ್ಮತೆಯನ್ನು ಹಿಂಜಿ ತೋರಿಸುವ, ಮನಸ್ಸಿನ ವ್ಯಾಪಾರಗಳಲ್ಲಿಯೇ ನಾಟಕೀಯತೆಯನ್ನು ಶೋಧಿಸುವ ಪ್ರವೃತ್ತಿ ನವ್ಯ ಕತೆಗಳಲ್ಲಿ ತುಂಬ ಬೆಳೆದು ಬರುತ್ತಿದೆ. ಅನಂತಮೂರ್ತಿಯವರ 'ಕಾರ್ತೀಕ', ಸದಾಶಿವರ 'ಅಪರಿಚಿತರು', ಲಂಕೇಶರ 'ವಾಮನ', ರಾಘವರ 'ಶ್ರಾದ್ಧ' ಮುಂತಾದ ಕತೆಗಳಲ್ಲಿ ಕಾಣುವ ಸೂಕ್ಷ್ಮತೆ, ಜಟಿಲತೆ, ಸಂಕೀರ್ಣತೆ ಕನ್ನಡ ಕಥಾಪ್ರಪಂಚದಲ್ಲಿಯೇ ಹೊಸದೆನ್ನಬೇಕು. ಮೊದಲಿನಂತೆ ಘಟನೆಗಳ ಮುಖಾಂತರ ಅನುಭವದ ರೂಪರೇಷೆಗಳನ್ನು ಸೂಚಿಸುವ ಮೇಲು ಮೇಲಿನ ಯತ್ನ ಹೋಗಿ ಈಗ ಅನುಭವದ ಕ್ರಿಯೆಯನ್ನೇ ಬಿಸಿಬಿಸಿಯಾಗಿ ನಮ್ಮೆದುರಿಗೆ ಅಷ್ಟು ತೋರಿಸುವ ಕಲಾಕೃತಿ ಬೆಳೆಯುತ್ತಿದೆ. ಹೊಸ ಲೇಖಕರ ಈ ರೀತಿ ಕೆಲವು ಸಲ ಓದುಗರಲ್ಲಿ ತಪ್ಪು ಕಲ್ಪನೆಯನ್ನುಂಟುಮಾಡಿದೆ. ಯಾಕೆಂದರೆ, ಈ ಹೊಸ ಲೇಖಕರಿಗೆ ಜೀವನ ಮೌಲ್ಯಗಳ ಬಗ್ಗೆ ಕಿಮ್ಮತ್ತೇ ಇಲ್ಲವೇನೊ, ಜೀವನವನ್ನು ಮಾಯಕ್ರೋಸ್ಕೋಪಿನ ಕೆಳಗೇ ನೋಡಿ ಏನು ಸಾಧಿಸಬೇಕಾಗಿದೆಯೋ, ಜೀವನದ ಅಸಹ್ಯಾಕತೆಯನ್ನು, ನರಕವನ್ನು, ಮನಸ್ಸಿನಲ್ಲಿಯ ಕ್ಷುದ್ರತ್ವವನ್ನು, ಮನಸ್ಸಿನ ಹಿಂದೆ ಅಡಗಿರುವ ಪಶುತ್ವವನ್ನು ಹೊರಗೆಡುವುವುದರಲ್ಲಿ ಯಾವ ಪ್ರಯೋಜನವಿದೆಯೋ, ಎಂದು ಕೇಳುವ ವಿಮರ್ಶಕರೂ ಇದ್ದಾರೆ. ಜೀವನದ ಸಮ್ಯಗ್ದರ್ಶನ, ಅನುಭವದ ಅಭಿವ್ಯಕ್ತಿ, ಸಾಹಿತ್ಯದ ಕೆಲಸವಿದ್ದುದರಿಂದ ಆ ದರ್ಶನ ಏನೇ ಇದ್ದರೂ- ಸತ್ಯವಾಗಿದ್ದರೆ- ಸಾಹಿತ್ಯದಲ್ಲಿ ಮೂಡಿ ಬರಲು ಅದಕ್ಕೆ ಅಧಿಕಾರವಿದೆ. ಅದು ವೈಯಕ್ತಿಕ ದರ್ಶನವಿದ್ದರೂ ಸರಿ, ಅದರಲ್ಲಿ ಜೀವನಸ್ಪಂದನವಿದ್ದರಾಯಿತು, ಅದಕ್ಕೆ ಸಾಹಿತ್ಯದಲ್ಲಿ ಸ್ವಾಗತವಿದೆ. ಹಾಗೆ ನೋಡಿದರೆ ನವ್ಯ ಕತೆಗಳಲ್ಲಿ ನಡೆದಷ್ಟು ಜೀವನದ ಮೌಲ್ಯಗಳ ಪರೀಕ್ಷೆ, ಶೋಧನೆಗಳು, ಇಷ್ಟು ಸೂಕ್ಷ್ಮವಾಗಿ, ಸಮಗ್ರವಾಗಿ, ಧೈರ್ಯದಿಂದ, ನಿಷ್ಠೆಯಿಂದ, ಹಿಂದೆ ಆದದ್ದು ಸ್ವಲ್ಪ ಕಡಿಮೆಯೆಂದೇ ಹೇಳಬೇಕು. ಅನಂತಮೂರ್ತಿಯವರ 'ಪ್ರಕೃತಿ'ಯಲ್ಲಿ ಬರುವ ಸಂಕಪ್ಪಯ್ಯನವರಲ್ಲಿ ತಮ್ಮ ಮಗಳ ಬಗ್ಗೆ ಇದ್ದ ದ್ವಿಧಾವೃತ್ತಿಯ ಸೂಚ್ಯ ಅಭಿವ್ಯಕ್ತಿ, ಲಂಕೇಶರ 'ವಾಮನ'ದಲ್ಲಿ ನಾಯಕ ಹಾಗೂ ಅಪರಿಚಿತ ಅತಿಥಿಯರ ಸೂಕ್ಷ್ಮ ಸಂಬಂಧದ ಪರೀಕ್ಷೆ, ಚಿತ್ತಾಲರ 'ಅಪರಿಚಿತರು', 'ಪಯಣ', ಕತೆಗಳಲ್ಲಿಯ ಮನುಷ್ಯನ ಆಂತರಿಕ ಪ್ರವೃತ್ತಿಗಳ ಸಾಂಕೇತಿಕ-ನಾಟಕೀಯ ಅಭಿವ್ಯಕ್ತಿ ಮುಂತಾದವುಗಳನ್ನು ನೋಡಿದಾಗ ನವ್ಯ ಲೇಖಕರು ಸೂಕ್ಷ್ಮವಾಗಿ, ಆಳವಾಗಿ, ಜೀವನದ-ಮಾನವನ, ಸಹಜವಾಗಿ ಕೈಗೆ ಸಿಗದ ಆಲೆಗಳನ್ನು ಹಿಡಿಯಲೆತ್ನಿಸುತ್ತಿದ್ದಾರೆ ಎಂಬ ಮಾತು ಸ್ಪಷ್ಟವಾಗುವದು. ಮಾಯಕ್ರೋಸ್ಕೋಪು—ಎಕ್ಸ್‌ರೇ ಮುಂತಾದ ಸಲಕರಣೆಗಳ ಮೂಲಕ ವಿಜ್ಞಾನ ಕಲ್ಪನೆ ಮೀರಿ ಬೆಳೆವಂತೆ, ನವ್ಯತೆಯ ಹರಿತವಾದ, ಸೂಕ್ಷ್ಮವಾದ ದೃಷ್ಟಿಯ ಮೂಲಕ ಜೀವನದ ಎಷ್ಟೋ ಸಂದಿಗ್ಧ ಸಮಸ್ಯೆಗಳು ಪರಿಶೋಧನೆಗೆ ಒಳಗಾಗಿ, ಹೊಸ ಹೊಸ ಅರಿವು ದರ್ಶನ-ಸಾಕ್ಷಾತ್ಕಾರ ಮೂಡಲು ಅವಕಾಶವುಂಟಾಗಿದೆ. ಈ ದೃಷ್ಟಿಯಿಂದ ನವ್ಯತೆ ಸಣ್ಣ ಕತೆಗಳ ಪರಿಮಿತಿಯನ್ನು ತೀರ ದೊಡ್ಡದಾಗಿಸಿದೆಯೆಂದು ಹೇಳಬಹುದು.

ಇಂದಿನ ನವ್ಯ ಕತೆಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ ಮನುಷ್ಯನ ವ್ಯಕ್ತಿತ್ವದ ಬಗ್ಗೆ ಒಂದು ಹೊಸ ಬಗೆಯ ಕಲ್ಪನೆ ಮೂಡುತ್ತಿರುವದು ಕಂಡುಬರುತ್ತದೆ. ಮನುಷ್ಯನ ವ್ಯಕ್ತಿತ್ವ ಖಚಿತವಾದ ಗಟ್ಟಿಯಾದ ಕೆಲವು ಸಾಮಗ್ರಿಗಳ ಒಂದು ಅಖಂಡ ಘಟಕವೆಂಬ ಕಲ್ಪನೆ ಮಾಯವಾಗಿ, ಅದರ ಮೂಲಸ್ವರೂಪ ತರಲವಾದದ್ದೆಂಬ ಕಲ್ಪನೆ ರೂಢವಾಗುತ್ತಿದೆ. ಹೀಗಾಗಿ ವ್ಯಕ್ತಿತ್ವದ ಅಥವಾ ಅನುಭವದ ನಿರೂಪಣೆಯಲ್ಲಿ

ಹೊಸತನ ಬಂದಿದೆ, ಪ್ರಾಯೋಗಿಕತೆ ಬಂದಿದೆ. ತಾಂತ್ರಿಕ ಪ್ರಯೋಗ, ಭಾಷಾಪ್ರಯೋಗಗಳ ದೃಷ್ಟಿಯಿಂದ ಸಣ್ಣ ಕತೆ ಕವಿತೆಗಿಂತ ಒಂದು ಹೆಜ್ಜೆ ಮುಂದೆ ಹೋಗಿದೆಯೇನೋ ಎಂದೆನಿಸುವದು. ಸಂಜ್ಞಾಪ್ರವಾಹ ಕಥನ, ಕಾವ್ಯಾತ್ಮಕ ಕಥನ, ಸಾಂಕೇತಿಕ ತಂತ್ರ, ಚಲಚ್ಚಿತ್ರ ತಂತ್ರ, ಸ್ವಪ್ನಸ್ವರೂಪದ ನಿರೂಪಣೆ- ಮುಂತಾದ ಪ್ರಯೋಗಗಳು ಕನ್ನಡ ಸಣ್ಣ ಕತೆಗಳಲ್ಲಿ ಒಂದೇ ಸವನೆ ನಡೆದೇ ಇವೆ. ಈ ಎಲ್ಲ ತಂತ್ರಗಳ ಉದ್ದೇಶ ತರಲವಾದ ಅನುಭವವನ್ನು ಆದಷ್ಟು ಆಳವಾಗಿ ಪರಿಶೋಧಿಸಿ ಅದರ ಸಾಕ್ಷಾತ್ಕಾರವನ್ನು ಸಾಧಿಸುವದಾಗಿದೆ. ಅನುಭವವನ್ನು ಪರಿಶೋಧಿಸುವದೆಂದರೆ ಜೀವನದ ಮೂಲ್ಯಗಳನ್ನೂ ಶೋಧಿಸುವದೇ. ಆದುದರಿಂದ ಅನುಭವದ ಅನ್ವೇಷಣೆಯಲ್ಲಿ ಮೊದಲು ಮುಚ್ಚಿಡುತ್ತಿದ್ದ ಕ್ಷೇತ್ರಗಳು ಈಗ ಬೆಳಕಿನಲ್ಲಿ ಬಂದರೆ ಅದರ ಉದ್ದೇಶದ ಬಗ್ಗೆ ತಪ್ಪು ಕಲ್ಪನೆ ಮಾಡಿಕೊಳ್ಳದೆ ಆ ಅನ್ವೇಷಣೆಯಲ್ಲಿ ಜೀವನದ ವಿಷಯದಲ್ಲಿ ಸೋದ್ದಿಶ್ಯವಾದ, ಅರ್ಥಪೂರ್ಣವಾದ, ಕುತೂಹಲವಿದೆಯೇ ಅಥವಾ ಓದುಗರ ಕೀಳು ಕುತೂಹಲವನ್ನು ಉತ್ತೇಜಿತಗೊಳಿಸುವ ಕೆಳದರ್ಜೆಯ ಫಾಲತೂ ಉದ್ದೇಶವಿದೆಯೇ ಎಂಬುದನ್ನು ನೋಡಬೇಕು. ಉದಾಹರಣೆಗಾಗಿ, ಅನಂತಮೂರ್ತಿಯವರ 'ಕ್ಲಿಪ್ ಜಾಯಿಂಟ್' ಕತೆಯಲ್ಲಿ ಬರುವ ಲಂಡನ್ನಿನ ನಾಯಿಟ್‌ಕ್ಲಬ್ಬಿನ ವರ್ಣನೆಯನ್ನು ತೆಗೆದುಕೊಳ್ಳಿ. ಕತೆಯ ಸಂದರ್ಭದಲ್ಲಿ ಆ ದೃಶ್ಯ ಎರಡು ಜಗತ್ತುಗಳ ನಡುವೆ ಹೊಯ್ದಾಡುವ ಕೇಶವನ ವ್ಯಕ್ತಿತ್ವದ ಸತ್ಯಹೀನತೆಯನ್ನು ತೋರಿಸಲು ತೀರ ಅವಶ್ಯವಾಗಿದೆಯೆಂದೇ ಹೇಳಬೇಕು. ಅದೇ ರೀತಿಯಾಗಿ ರಾಘವರ 'ಶ್ರಾದ್ಧ'ದಲ್ಲಿ ಬರುವ ನಾಯಕನು ಅರಿವೆಗಳನ್ನು ಕಳಚಿ ಬೆತ್ತಲಾಗುವ ದೃಶ್ಯ ಇತ್ಯಾದಿ ಹಳೆಯ ಸಂಸ್ಕಾರಗಳಲ್ಲಿ ಶ್ರದ್ಧೆಯನ್ನು ಕಳೆದುಕೊಂಡ, ಸತ್ತ ತಂದೆಯ ಬಗ್ಗೆ ಪ್ರೇಮಕ್ಕಿಂತ ದ್ವೇಷಭಾವನೆಯಿದ್ದ, ಆತನ ಮೂಲ- ಹೀನ ಸ್ಥಿತಿಯ ತಳಮಳವನ್ನು ಸಾಂಕೇತಿಕವಾಗಿ ಅಭಿನಯಿಸಿ ತೋರಿಸುವ ಸಫಲ ಯತ್ನವಿದೆ. ಸಂಕೇತಗಳ ಸಮರ್ಥ ಪ್ರಯೋಗದ ದೃಷ್ಟಿಯಿಂದ ಚಿತ್ತಾಲರ 'ಅಪರಿಚಿತರು', 'ಪಯಣ', 'ಸೆರೆ' 'ಆಟ' ಮುಂತಾದ 'ಪುರಾಣ ಕತೆ'ಗಳು ಕನ್ನಡದಲ್ಲಿ ಅತ್ಯಂತ ನವೀನ ಕೃತಿಗಳಾಗಿವೆ. ಚಿತ್ತಾಲರ ಯಶಸ್ಸಿಗೆ ಮುಖ್ಯ ಕಾರಣ ಚಿತ್ತಾಲರು ಮನುಷ್ಯನ ಕೆಲವು ಮೂಲಭೂತ ಆಂತರಿಕ ಪ್ರವೃತ್ತಿಗಳನ್ನೇ ಸಂಕೇತಗಳ ಮುಖಾಂತರ ಮೂರ್ತಗೊಳಿಸಿದ್ದು.

ಕನ್ನಡ ಕತೆಗಳಲ್ಲಿ ಆವಿಷ್ಕಾರ ಹೊಂದುತ್ತಿರುವ ನವ್ಯತೆ ಇನ್ನೂ ಸಾಕಷ್ಟು ರೀತಿಯಲ್ಲಿ, ಸಾಕಷ್ಟು ಶ್ರೀಮಂತವಾಗಿ ರೂಪುಗೊಳ್ಳಬೇಕಾಗಿದೆ. ರೂಪುಗೊಳ್ಳುವದೆಂಬ ಭರವಸೆ ಮಾತ್ರ ತುಂಬ ಇದೆ. ನಮ್ಮ ಹೊಸ ಲೇಖಕರು ತಮ್ಮ ಬಗ್ಗೆ ಹುಟ್ಟಿಸಿದ ಭರವಸೆಯನ್ನು ತೃಪ್ತಿಗೊಳಿಸುತ್ತ, ತಮ್ಮ ಪ್ರಜ್ಞೆಗೆ ವಿಧೇಯರಾಗಿ ಮುನ್ನಡೆದರೆ, ಕನ್ನಡದ ಸಣ್ಣ ಕತೆಗೆ ಭಾರತೀಯ ಕಥಾಪ್ರಪಂಚದಲ್ಲಿ ಒಳ್ಳೆಯ ಗಟ್ಟಿಮುಟ್ಟಾದ ಸ್ಥಾನ ದೊರೆಯದಿರಲಾರದೆಂದು ಖಂಡಿತ ಹೇಳಬಹುದು.



ಹುಲಿಯ ಹಾಲನು ಕುಡಿದು—
ವರ್ಧಿಸಿದ ಇತಿಹಾಸ ಬಂಟರು ನಾವು.
ಕವಣೆಗೆ—
ಹೆಬ್ಬಾವನೇ ಸೆಳೆವ ಹಂಬಲಿಗರು
ಎತ್ತರದ ದನಿಯ ಕೇಕೆಯ ಬೆಂಬಲಿಗರು
ತರತರದ ಕತೆಯ ಕಟ್ಟುತ್ತ
ಗಾದೆಗಳ ಕಟ್ಟುತ್ತ
ಹಗಲು—ರಾತ್ರಿಯ ವೇಷ ಕಟ್ಟಿ
ಪಂಜು ಹಿಲಾಲುಗಳ ರಂಗಿನಲಿ
ದಂಗುಬಡಿಸುವ ಗೊಂದಲಿಗರು !

ಬಿಟ್ಟ ಬಾಣಕೆ ಇಲ್ಲ ಸರಿಸಾಟಿ
ಪಾತಾಳ ಹೊಟ್ಟೆಯನೆ ಬಗಿದು—
ರಾಕ್ಷಸರ ಕೊಂದವರು, ಪುರಾಣದಲಿ ಸಂದವರು
ಮುಷ್ಕರ ಮೆರವಣಿಗೆಯಲಿ ಕಲ್ಲು ತೂರಿ
ಸೀಮೆ ಎಣ್ಣೆಯ ಸುರುವಿ—ಕಡ್ಡಿ ಗೀರಿ
ಬಸ್ಸು, ಟ್ರಾಮು, ರೈಲು, ಅಂಗಡಿಗಳ ಸುಟ್ಟು
ಟಿಯರ್ ಗ್ಯಾಸಿಗೆ ಕಂಗೆಟ್ಟು, ಹೈರಾಣಾದವರು
ಲೆಫ್ಟಿಗೆ ರೈಟು, ರೈಟಿಗೆ ಲೆಫ್ಟು—ನಮ್ಮ ಶಕ್ತಿಯ ಗುಟ್ಟು
ನಮ್ಮ ಈ ದಾರಿಯ ನಮಗೆ ಬಿಟ್ಟುಕೊಟ್ಟು
ನಡೆದರೆ ಸೈ; ಇಲ್ಲವಾದರೆ—ಎಲ್ಲರಿಗೂ ಕೊಡಲಿ ಪೆಟ್ಟು:
ಹೀಗೆ ಶಿಸ್ತು ಭಂಗಿಸಿದವರು

ಕನಸಿನ ಕನ್ನಡಿಯಲ್ಲಿ ಪ್ರತಿಬಿಂಬ ಹೇರಿಸಿದವರು
ಗಂಗೆಯಲಿ ವಿಜಯ ತುರಂಗ ಮೀಯಿಸಿದವರು
ಹಂಗು ಯಾರದು ನಮಗೆ?—ಸ್ವಚ್ಛಂದಕೆ
ಲಗಾಮು ಹಾಕುವವರು
ಇವರು ಯಾರು? ನಮ್ಮ ಜಿಂದಾಬಾದಿನ ಕ್ರೂರ ಹಂತಕರು?
ಎಂಬ ಶಬ್ದಗಳ ಬಿರಸು ಬಾಣದಲಿ ಗಗನ ಭೇದಿಸುವವರು
ಬುದ್ಧಿ ಭ್ರಮಣೆಯಲಿ ದೇಶದ ಬಗೆಯ ಭೇದಿಸುವವರು
ಮತ್ತೆ
—ಹಾಡೆ ಹಗಲೇ ಅರಿವೆಹಾವನು ಕಂಡು—ಹೌ ಹಾರಿದವರು
ಬೆದರಿ
ಕಣ್ಣು ಮುಚ್ಚಿದ ತಡ, ಬಿದ್ದ ಅದ್ಭುತ
ಕನಸಿನಲಿ ಭರ್ಜರಿ ಕಾಡಿನಲಿ ಗರ್ಜಿಸುವ ಸಿಂಹನೊಡನಾಡಿಗಳು.

ಸತ್ಯ- ಧರ್ಮಕೆ ನಮ್ಮ ಜನ್ಮ ತಟ್ಟಿದ ಗಂಗೆ-ಯಮುನೆ
ಹೆಪ್ಪುಗಟ್ಟಿದರು.
ಪ್ರಾಮಾಣಿಕತೆಯೆಮ್ಮ ತೂಗಹೊರಟವರು—ದೊಡ್ಡ
ಚಿಪ್ಪು ತಕ್ಕಡಿಗಳು—
ಹೊನ್ನ ಹನಿ ಬಂಗಾರ ಇಬ್ಬನಿ—ಎಂದೆನುತ
ತಿನುವ ಜೈಡ್ಡಿಗೆ ಟಿಕ್‌ಟ್ವೆಂಟಿಜಾಮು ಸವರಿ
ಕಳ್ಳಪೇಟೆಯಲಿ ಸುಲಭ ಬೆಲೆಗೇ ಮಾರುವವರು
ಇಲ್ಲದ—ರಾಷ್ಟ್ರನಿಷ್ಠೆಗೆ ಅಂಟಿದ ಇತಿಹಾಸ ಬಂಟರು ನಾವು!

—ಇಟಗಿ ರಾಘವೇಂದ್ರ

ಹೊಸ ಕಾವ್ಯದ ಏರು-ಪೇರು

೧

" ವಾಸಿ ಮಾಡಯ್ಯ, ಈ ಜಲೋದರದ ಭಾರದ ಜಡ್ಡ.
ಕಮರು ತೇಗಿನ ಕಪಿಲೆ ಹೊಡೆದು ಹಗಲೂ ಇರುಳು
ತೇಗಿಗೊಂದು ಅಮೋಘ ಸ್ಫೂರ್ತಿಗೀತವ ಕರೆವ
ರೋಗದ ಫಸಲನಾದಷ್ಟು ಸವರೋ ತಂದೆ!
ತಿಂದದ್ದು ಸರಿಯಾಗಿ ರಕ್ತವಾಗುವ ಹಾಗೆ
ಅನುಗ್ರಹಿಸು. "

ಅಡಿಗರ 'ಪ್ರಾರ್ಥನೆ' ಪ್ರಕಟವಾಗಿ ಹತ್ತು ವರುಷಗಳ ಮೇಲಾಯಿತು. ಹೊಸ ಒಲವುಗಳನ್ನು ಪ್ರತಿಬಿಂಬಿಸುವ 'ಸಂಕ್ರಮಣ ಕಾವ್ಯ' ಸಂಕಲನ (೧೯೬೫) ಈ ಕವಿತೆಯೊಂದಿಗೆ ಪ್ರಾರಂಭವಾಗಿರುವದೂ ಒಂದು ದೃಷ್ಟಿಯಿಂದ ಔಚಿತ್ಯಪೂರ್ಣವಾಗಿದೆ. ಕಾವ್ಯಕರ್ಮ ನವಮಾಸ ತುಂಬಿ ಬರುವ ಜೀವಪವಾಡ. ಕವಿತೆ 'ಪರಿಪೂರ್ಣಾವತಾರಿ'ಯಾಗಿ ಹೊರಬರಲಿ ಎನ್ನುವ ಎಚ್ಚರಿಕೆಯನ್ನು ನೂತನ ಪ್ರತೀಕ—ಪ್ರತಿಮೆಗಳ ಮೂಲಕ ಅಡಿಗರು ಈ ಕವನಶಿಲ್ಪದಲ್ಲಿ ಕಂಡರಿಸಿದ್ದಾರೆ. "ಅನೇಕ ತಂತ್ರಗಳಂತ ನವ್ಯತೆಯೂ ಒಂದು ತಂತ್ರ, ಒಂದು ವಿಧಾನ. ಯಾವ ಕವಿಯೂ ಅದನ್ನು ಬಳಸಿಕೊಳ್ಳಬಹುದು" ಎಂಬುದಾಗಿ 'ನವ್ಯಧ್ವನಿ' ಸಂಕಲನದ (೧೯೫೬) ಪೀಠಿಕೆಯಲ್ಲಿ ನುಡಿದು ಗೋಕಾಕರು ನವ್ಯತೆಯ ಬಗ್ಗೆ ಉಂಟಾದ ಗೊಂದಲವನ್ನು ತಿಳಿಗೊಳಿಸಲು ಪ್ರಯತ್ನಿಸಿದ್ದರು. ಈ ಎರಡೂ ಪ್ರಾತಿನಿಧಿಕ ಸಂಕಲನಗಳಲ್ಲಿಯ ಹಲವಾರು ಕವಿತೆಗಳು ಕನ್ನಡ ಕಾವ್ಯ ಹೊಸ ದಾರಿಯಲ್ಲಿ ನಡೆಯುತ್ತಿರುವ ದಿಟ್ಟ ಹೆಜ್ಜೆಗಳನ್ನು ಸ್ಪಷ್ಟವಾಗಿ ತೋರಿಸುತ್ತಿವೆ. ಕನ್ನಡದಲ್ಲಿ ನವ್ಯಕಾವ್ಯದ ಪ್ರಾದುರ್ಭಾವ ಐತಿಹಾಸಿಕ ಆವಶ್ಯಕತೆಯಾಗಿ ಬಂದಿಲ್ಲವೆನ್ನುವ ಕುತರ್ಕಕೋಟಿಯವರು ಅದರ ಉಗಮವನ್ನು ಎರಡು ವೈಯಕ್ತಿಕ ಪರಿಸ್ಥಿತಿಗಳಲ್ಲಿ ಕಂಡುಕೊಂಡಿದ್ದಾರೆ: "ಮೊದಲನೆಯದಾಗಿ ಅದು ವಿನಾಯಕರಂಥ ಹಳೆಯ ತಲೆಮಾರಿನ ಕವಿಗಳ ವೈಯಕ್ತಿಕ ಪ್ರಯೋಗಶೀಲತೆಯ ಫಲವಾಗಿ ಬಂದಿದೆ. ಎರಡನೆಯದಾಗಿ ಅಡಿಗರಂಥ ಹೊಸ ತಲೆಮಾರಿನ ಕವಿಗಳ ವೈಯಕ್ತಿಕ ಪ್ರತಿಕ್ರಿಯೆಯಾಗಿ. ಆಂತರಿಕ ಅವಶ್ಯಕತೆಯಾಗಿ ಬಂದಿದೆ."

ನವ್ಯತೆ ಒಂದು ತಂತ್ರವೆನಿಸಿದರೂ ಅದರ ನಿರ್ವಹಣೆಗೆ ತಕ್ಕ ಪರಿಕರಗಳು ಕವಿಯಲ್ಲಿ ಸಿದ್ಧಗೊಂಡಿರಬೇಕಾಗುತ್ತದೆ. ವೈಯಕ್ತಿಕ ಪ್ರಯೋಗಶೀಲತೆ ಆಂತರಿಕ ಅವಶ್ಯಕತೆಯಿಲ್ಲದೆ ಸತ್ವಪೂರ್ಣವಾಗಿ ನಿಲ್ಲಲಾರದು. ಗೋಕಾಕರ ಮೊದಲಿನ ನವ್ಯ ಕವಿತೆಗಳು ನವ್ಯ ಕಾವ್ಯದ ಲಕ್ಷಣಗಳನ್ನು ಸೂಚಿಸಲು ಮೈದೋರಿದವೆಂದು ಮೇಲು ನೋಟಕ್ಕೆ ತೋರಿದರೂ [illegible] ಪ್ರಾಮಾಣಿಕ ಪ್ರಯತ್ನವನ್ನು ಅವು ಒಳಗೊಂಡಿವೆ. ಎಲ್ಲ ಕವಿಗಳೂ ವೀರಪ್ರತಿಜ್ಞೆಯನ್ನು ಮಾಡಿಯೇ ನವ್ಯತೆಯ ದೀಕ್ಷೆ ಕೊಡಬೇಕೆಂದೇನೂ ಇಲ್ಲ. ಆಯಾ ಕವಿಯ ವಿಶಿಷ್ಟ ವ್ಯಕ್ತಿತ್ವದ ಮೂಲಕ ಅವನ ಅಭಿವ್ಯಕ್ತಿಯ ಶಕ್ತಿಗನುಸರಿಸಿ ಅನುಭವ ಕಾವ್ಯರೂಪವನ್ನು ಪಡೆದಾಗಲೇ ಅದಕ್ಕೆ ಸಹಜತೆಯುಂಟಾಗುತ್ತದೆ. ನವ್ಯತೆ ಒಂದು ಆಭರಣವಲ್ಲ, ಆಲಂಬನವಲ್ಲ. ಕವಿಯ ಅಂತರಂಗದ ಒಂದು ವಿಶಿಷ್ಟ ಆವಿಷ್ಕಾರ.

ಬದುಕಿನ ಅಖಂಡಾನುಭವದ ಅನುಭೂತಿಯನ್ನು ಕಾವ್ಯರೂಪದಲ್ಲಿ ಪಾಕಗೊಳಿಸಿ ನೂತನ ಪ್ರತಿಮಾಧಾರಣೆಯಿಂದ ಅಡಿಗರ ಕಾವ್ಯ ತನ್ನ ವ್ಯಾಪ್ತಿಯನ್ನೂ ಸಾಮರ್ಥ್ಯವನ್ನೂ ಹೆಚ್ಚಿಸಿಕೊಂಡಿದೆ. ಲೈಂಗಿಕ ಪ್ರಜ್ಞೆಯನ್ನೊಳಗೊಂಡ ರಾಮಚಂದ್ರ ಶರ್ಮರ ಕಾವ್ಯ ತನ್ನ ಗಾಢತೆಯನ್ನು ಇನ್ನೂ ಪಡೆಯಬೇಕಾಗಿದೆ.

ಹೀಗೆ ಇಬ್ಬರು-ಮೂವರಿಂದ ಪ್ರಾರಂಭವಾದ ಈ ಹೊಸ ಕಾವ್ಯ ರಚನೆ ಇಂದು ಹಲವರ ಕೈಯಲ್ಲಿ ಹದಗೊಳ್ಳುತ್ತ ನಿರ್ಭಯವಾಗಿ ಮುಂದುವರಿಯುತ್ತಿದೆ. ಏನಿಲ್ಲೆಂದರೂ ಹತ್ತು—ಹದಿನೈದು ಜನ ಹೊಸ ಪೀಳಿಗೆಯ ಕವಿಗಳು ಈ ಹಾದಿಯಲ್ಲಿ ಉತ್ಸಾಹದಿಂದ ಸಾಗಿರುವುದೂ, ಹೊಸ ಸಂವೇದನೆಗಳನ್ನು ರೂಪಿಸುತ್ತಿರುವದೂ ಕಾವ್ಯದ ಬೆಳವಣಿಗೆಯ ದೃಷ್ಟಿಯಿಂದ ಗಮನಾರ್ಹವಾದ ಸಂಗತಿಯಾಗಿದೆ. ಈ ಹೊಸ ಕಾವ್ಯದಲ್ಲಿ ಒಗರಿರುವಂತೆ ತನ್ನತನದ ಹೊಗರೂ ಇದೆ. ಅದರ ರುಚಿಯನ್ನು ತೋರಿಸಿಕೊಡುವದು ಈ ಲೇಖನದ ಉದ್ದೇಶವಾಗಿದೆ.

ಇಷ್ಟು ಜನ ಹೊಸ ಕವಿಗಳು ಈ ಒಂದು ಅವಧಿಯಲ್ಲಿ ತಂತಮ್ಮ ಹಾದಿಯನ್ನು ಹುಡುಕಿಕೊಳ್ಳುತ್ತಿರುವ ಸಾಹಸ, ಅನುಭವಗಳ ಹೊಸ ಕ್ಷೇತ್ರದಲ್ಲಿ ನಡೆದಿರುವ ಈ ಕೃಷಿ, ಅನ್ವೇಷಣೆಯ ಆದಟು ನಿಜಕ್ಕೂ ರೋಮಾಂಚಕಾರಿಯಾಗಿದೆ. ದೋರೆಹಣ್ಣಿನ ರುಚಿ ಈ ರಚನೆಗಳಲ್ಲಿ ಕಂಡುಬಂದರೂ ಪಕ್ವತೆಯನ್ನೂ ಅದು ಕಡೆಗಣಿಸಿಲ್ಲ. ಒಗರು, ಹುಳಿ ಸ್ವಲ್ಪ ಹೆಚ್ಚೆನಿಸಿದರೂ ಅಲ್ಲಲ್ಲಿ ತನ್ನತನದ ಹೊಗರನ್ನೂ ಅದು ಹೊರಹೊಮ್ಮಿಸಿದೆ. ಅಡಿಗೆಯಾಗುವ ಮೊದಲೇ ಉಪ್ಪು ಹಚ್ಚಿ ಗುಗ್ಗರಿಯನ್ನು ತಿಂದಂತೆ, ಮಾಗುವ ಮೊದಲೇ ಕಸುಗಾಯಿಯನ್ನು ಕಡಿದು ನೋಡಿದಂತೆ ಹಸಿಯನ್ನೂ ಬಿಸಿಯನ್ನೂ ತೋರಿಸುವ ಆತುರ ಕೆಲವೆಡೆ ಕಂಡುಬರುತ್ತಿದೆ. ಈ ಕೆಲವರು ಯಾವ ದಿಕ್ಕಿನಲ್ಲಿ ಮುಂದುವರಿಯುತ್ತಿದ್ದಾರೆ ಎಂದು ಈಗಲೆ ಹೇಳುವದು ಕಠಿಣ. ಆದರೆ ಅವರಲ್ಲಿರುವ ದಂಗೆಖೋರತನಕ್ಕೆ ಯಾವ ರಾಜಕೀಯ ಬಣ್ಣವೂ ಇರದಿರುವದು ಒಂದು ಒಳ್ಳೆಯ ಲಕ್ಷಣವೆಂದು ಹೇಳಬಹುದು. ಅತ್ಯಂತಿಕ ವ್ಯಕ್ತಿಸ್ವಾತಂತ್ರ್ಯವನ್ನು (Utmost personal freedom) ಬಯಸುವ ಹೊಸ ಪೀಳಿಗೆ ಯಾವ ಪ್ರತಿರೋಧವನ್ನೂ ಲೆಕ್ಕಿಸದೆ ಮುಂದುವರಿಯುತ್ತಿದೆ. ದಟ್ಟವಾದ ಕಾಡಿನಲ್ಲಿ ಹೊಕ್ಕಿರುವ ಇವರು ಹೊರಬರುವ ಹಾದಿಯನ್ನು ಕಂಡುಕೊಂಡಾಗ ಪಟ್ಟ ಪ್ರಯಾಸ ಸಾರ್ಥಕವೆನಿಸುವದರಲ್ಲಿ ಸಂದೇಹವಿಲ್ಲ.

ಚೆನ್ನವೀರ ಕಣವಿ

೨

ಈ ಸಮಾಲೋಕನದ ಸಂದರ್ಭದಲ್ಲಿ ಮೊದಲ ಸಂಧಿಕಾಲದಿಂದಲೂ ಇಂದಿನಂತೆ ಕಾವ್ಯರಚನೆಯನ್ನು ಮುಂದುವರಿಸಿರುವ ನಾಲ್ಕಾರು ಕವಿಗಳ ಚಿಂತನದ ಹೊಸ ಪರಿಯನ್ನೂ, ಸಮನ್ವಯದ ಆಕಾಂಕ್ಷೆಯನ್ನೂ ಅಲಕ್ಷಿಸುವಂತಿಲ್ಲ.

ಈಗ್ಗೆ ಹದಿನೇಳು ವರ್ಷಗಳ ಹಿಂದೆಯೇ 'ನವ್ಯ ಕವಿತೆಗಳಿ'ಗೆ ವಿನಾಯಕರು ನಾಂದಿ ಹಾಡಿದರು. ಒಂದೊಂದು ನಾಗರಿಕತೆಗೂ ಒಂದೊಂದು ಗರ್ಭಧಾರಣ ಮಾಡಿ ಹಲಿಯುಳಿಯುತ್ತಿರುವ ಬಾಣಂತಿಯ ಪ್ರತೀಕವಾಗಿ ಭೂಮಿತಾಯಿ ಅವರಿಗೆ ಕಂಡಿದ್ದಾಳೆ. ಜೀವನದ ವ್ಯರ್ಥ ಪ್ರಯತ್ನಗಳ ಕ್ರೂರ ಕರುಣೆಯನ್ನು ಕಂಡೂ ಯಾವುದೋ ಒಂದು ಪಿಂಡವನ್ನು ಉಳಿಸಿಕೊಳ್ಳಲು ಹೀಗೆ ಹಲವಳಿಯುತ್ತಿವೆ ಎಂಬ ಆಶೆಯನ್ನು ಅವರ ಕಾವ್ಯ ಉಳಿಸಿಕೊಂಡಿದೆ:

"ಹಲಿಯುಳಿಯುವ ಬಾಣಂತಿಯಂತೆ ಹಲವಳಿದು
ಭೂಮಿತಾಯಿ ಹಾಸಿಗೆ ಹಿಡಿದಿದ್ದಾಳೆ.
ಒಂದೊಂದು ನಾಗರಿಕತೆಯ ಯುಗ
ಒಂದೊಂದು ಗರ್ಭಧಾರಣ.
ಆದರೆ ಜನ್ಮವಾಗುವ ಮೊದಲೇ ಗರ್ಭಸ್ರಾವ!
ಅಕಾಲ ಪಿಂಡವು ಒಮ್ಮೆ ಅಸ್ಪಷ್ಟ ಸಂತತಿ,
ಒಮ್ಮೆ ರಾಕ್ಷಸ,
ಒಮ್ಮೆ ಕಣ್ಣು ನೆತ್ತಿಗೇರಿದ ಪಿಶಾಚಿ!
ಯಾವ ಸನತ್ಕುಮಾರನ ಜನ್ಮ ಬಯಸಿ
ಭೂದೇವಿ ಹೀಗೆ ಬೇನೆ ತಿನ್ನುವಳು?
ಯಾವ ಅದೊಂದು ಉಳಿಯುವದೆಂದು
ಹೀಗೆ ಹಲವಳಿಯಲು ಹಿಂದೆ ಮುಂದೆ ನೋಡಳು?"

['ಹಲವಳಿ']

ನಾವು ಎಷ್ಟು ಬೆಳೆದರೂ ಗಗನ ನಮ್ಮಳತೆ ಮೀರಿ ಆಚೆ ಸರಿಯುತ್ತದೆ. ಇಷ್ಟು ಬೆಳಕಿಗೆ ಇನ್ನೆಷ್ಟು ಕತ್ತಲೆಯೊ! ಎಂದು ಅರಿವಿನಾಳದ ಗಹನತೆಯನ್ನು ಕುರಿತು ಅಚ್ಚರಿಗೊಳ್ಳುತ್ತದೆ ಕೆ. ಎಸ್. ನರಸಿಂಹಸ್ವಾಮಿಯವರು ಕಂಡ ಕವನ. ಈ ಭೂಮಿಯಲ್ಲಿ ಏನರಕೆಯಿದೆ? ಊರ್ಧ್ವಗಮನದಂತೆ ಅಧಃಪಾತವೂ ಇಲ್ಲಿ ಪುಣ್ಯವೆಂದವರನ್ನು ಅವರು ನೆನಪಿಗೆ ತಂದು ಕೊಡುತ್ತಾರೆ. ತುಂಬು ರಕ್ತದ ಹಾಡನ್ನೇ ಇವರೂ ಬಯಸುತ್ತಾರೆ. ಆದರೆ ಹುಟ್ಟಿದ್ದು ಗಟ್ಟಿಯಾಗಲಿ ಬೆಳೆದು ಎನ್ನುವ ಮನೋಧರ್ಮ ಇವರದು:

"ಹುಟ್ಟಿದ್ದು ಗಟ್ಟಿಯಾಗಲಿ ಬೆಳೆದು ಅವರಂತೆ
ತುಂಬು ರಕ್ತದ ಹಾಡು ಕೇಳಿ ಬರಲಿ.
ನೆಲದೊಡಲ ಕೆಂಪು ನೀರೊಡಲ ಹಾವಿನ ಹೊಲಿಗೆ
ಬಾನ ತಳಮಳ ಹೆತ್ತ ನೋವ ಸ್ಮರಿಸಿ."

['ಕುಂಕುಮ ಭೂಮಿ']

ಈ ಭೂಮಿ ಆರಿದೆಯೆಂದರೂ ಒಳಗೆ ಇನ್ನೂ ನಿಗಿನಿಗಿ ಉರಿಯುತ್ತಿದೆ. ಕುದಿಯುವ ಆ ಬಸಿರಿನ ಯಾವುದೋ ರಸವನ್ನು ಹೀರಿ ಆಸೆಗಳು ಹಸುರಾಗಿ ಚಿಮ್ಮುತ್ತಿವೆ. ಮೇಲೆ ಕಣ್ಣಿಟ್ಟ ಕಡೆಗೆಲ್ಲ ಜ್ಯೋತಿರ್ಮಾಲೆ. ಆದರೆ ಮಣ್ಣ ಮಡಿಲಲ್ಲಿ ನಿತ್ಯವೂ ಯಾತನೆಯ ನೆಲಗುಮ್ಮ ನರಳುತ್ತಿರುವುದನ್ನು ಕಣವಿಯವರ ಕಾವ್ಯ ಧ್ವನಿಸಿದೆಯಲ್ಲದೆ ಜೀವನದ ದುಂದು ಮೆರವಣಿಗೆಯನ್ನೂ ಅದು ಕಂಡಿದೆ. ಆದರೆ ಕಾಲದ ಹಾಸುಹೊಕ್ಕಿನ ಎಲ್ಲವೂ ಚೆಲುವು, ಸುಖ ಎನ್ನುವ ಭ್ರಮೆಯೇನೂ ಅವರಿಗಿಲ್ಲ:

"ಈ ಕುದುರೆಯೇರಿ ಲಗಾಮು ಬಿಗಿ ಹಿಡಿದು
ಸವಾರಿ ಮಾಡುವುದಷ್ಟು ಸುಲಭವಲ್ಲ.
ನಮ್ಮೆದೆಯ ಮೇಲೆಯೇ ಕಾಲಿಟ್ಟು ಓಡಿ ಹೋಗುವುದ
ನಾವೆಷ್ಟು ಸಲ ಅನುಭವಿಸಿ?
ಸೆಕೆಂಡು ಮಿನಿಟು ತಾಸುಗಳ ಹಾಸುಹೊಕ್ಕಿನಲಿ
ಅಲ್ಲೊಂದು ಇಲ್ಲೊಂದು ಬಣ್ಣದ ನೂಲು
ಚಿತ್ರಲೆ ಬದುಕ ಸುತ್ತಿ ತೋರಿಸುತ್ತಿದೆ ಡೌಲು"

['ಕಾಲ ನಿಲ್ಲುವದಿಲ್ಲ']

ಜೀವಂತವಿರುವವನಕ ಜೀವನವಿದೊಂದೆ ಗತಿ, ಕೊನೆಯೇರು, ತೊನೆದಾಡು ಮಾಗು, ರಸದುಂಬು ಎಂದು ಒಡನುಡಿದರೂ ಚಿತ್ರಾಲರ ಕಾವ್ಯ ಬಾಳಿನ ಅದ್ಭುತ ವ್ಯೂಹವನ್ನು ಮರೆತಿಲ್ಲ. ವರ್ತಮಾನದಂಗಳದಲ್ಲಿ ಒಕ್ಕದಷ್ಟೂ ಬೆಳೆವ ಭವಿತವ್ಯತೆಯ ಪೈರನ್ನು ಕಂಡೂ ಸೃಜನ ಸಂಹಾರಗಳ ಅಜಗರ್ಭವನ್ನು ಅರ್ಥ ಮಾಡಿಕೊಂಡಿದೆ. ನಿರಂತರದ ಅಂತರವನ್ನು ತುಂಬಿ ನಲಿದೇವು ಎಂಬ ಭರವಸೆ ಅದಕ್ಕಿದೆ. ಅಗಮ್ಯದಲ್ಲಿ ಬೇರೂರಿ ಅಲರಿದ ಸೃಷ್ಟಿಯನ್ನು ಇವರ ಜೀವನದೃಷ್ಟಿ ಸಂಧಿಸಿದೆ; ಹಿಗ್ಗಿದೆ:

"ಈ ಮಹಾದ್ಭುತದ ಉದ್ಭವಿಸಿ ಬಂದಿಹವಲ್ಲ
ಅದೆ ಒಂದು ಹಿಗ್ಗು. ಎಚ್ಚತ್ತು ನಿಂದಿಹವಲ್ಲ
ಅದೆ ಒಂದು ನೆತ್ತರಲಿ ದಿನ ರಾತ್ರಿ ಹರಿವ ಸುಖ"

('ಹರಿವ ಸೀಳದು')

ಮೊದಲು ನಮ್ಮ ಹೃದಯಕ್ಕೆ ಅನಾವರಣವಾಗಬೇಕು. ಅನಾವರಣವಾದ ಮೇಲೆ ಶಿಕ್ಷೆಗೆ ಸಿದ್ಧವಾಗಬೇಕು ಎಂಬ ಪರಿಶುದ್ಧಿಯನ್ನು ಶಿವರುದ್ರಪ್ಪನವರ ಕಾವ್ಯ ಪಡೆಯುತ್ತಿದೆ. ಭಾವನೆಗಳ ಮೇಲು ಹೊದಿಕೆಯನ್ನು ಸರಿಸಿ ನಮ್ಮ ನಡಾವಳಿಯ ವಾಸ್ತವ ಚಿತ್ರವನ್ನು ಕಂಡು ಅದರ ಕಹಿಯನ್ನು ಅನುಭವಿಸಿದಾಗ ಕ್ರೂರ ಸತ್ಯ ಇವರಿಗೂ ಗೋಚರಿಸದೆಯಿಲ್ಲ:

"... ಶುದ್ಧ ರೇಶಿಮೆಗೆ ನುಸಿ-ಹಿಡಿಸಿ
ಮುಸಿ ಬಟ್ಟೆಗುಪಯೋಗಿಸುತ್ತ ಇದರ ಬೆಲೆ
ಇಷ್ಟೇ ಎಂದು ಸಾರುವ ಚಮತ್ಕಾರ:
......................................ನಿತ್ಯವೂ
ಈ ನಿಧಾನ ಕೊಲೆಗಾರಿಕೆಯ ಕಲೆಯಲ್ಲಿ ಸದ್ದಿರದೆ
ಸತ್ತ ಸಾವಿರ ಮುಖದ ಕಣ್ಣೀರ ಪಾತಿಗಳಲ್ಲಿ
ವಿಜೃಂಭಿಸಿದೆ ಈ ಚಾಣಕ್ಯ ಬೀಜದ ಬಳ್ಳಿ"

('ನಿತ್ಯಕಥೆ')

ತಮ್ಮ ಈಚಿನ ಕಾವ್ಯ ಧೋರಣೆಯಲ್ಲಿ ಹಿತಕರವಾದ ಬದಲಾವಣೆಯನ್ನು ತೋರಿಸಿದ ವಿ. ಜಿ. ಭಟ್ಟರು 'ನವ್ಯದೀಕ್ಷೆ ಈ ಪ್ರಾಣಿಗೇಕೆ? ಇದು ಹಳೆಯ ಗೊಡ್ಡು ಬಳಗೆ' ಎಂದುಕೊಂಡರೂ ಅವರ ಕಾವ್ಯದ 'ಒಂಟಿ ಮಹತಿ' ಎದ್ದು ಕಾಣುವಂತಿದೆ. ಯಮದೂತನಾಗಲೂ ಬೇಕು ಚಿತ್ತದ ಶುದ್ಧಿ' ಎಂಬ ಒಳನೋಟವನ್ನು ಅವರು ಕಾವ್ಯವಸ್ತುವಿನ ಮೇಲೆ ಹರಿಸಿದ್ದಾರೆ. ವೈಯಕ್ತಿಕವೆನಿಸಿದರೂ ಸಾಮಾಜಿಕತೆಯ ಅರಿವಿನಿಂದ ಅವರ ಜೀವನದೃಷ್ಟಿ ನಿಚ್ಚಳವಾಗಿದೆ:

"ನಾನಂತೂ ಕೋಣನ ಜಾತಿಯವ
ಬಿದ್ದ ಮೊದ್ದು ಹುಂಬಾ ತಿಳಿಗೇಡಿ
ನೀವಾದರೂ ಈ 'ಲ್ಯಾಫ಼' ಇನಲಿ 'ಶ್ಯಾನ್' ಆಗುವ
'ಒಪೊರ್ಚುನಿಟೀ' ಕಳಕೊಳ್ಳಲೆಬೇಡಿ
ಲಗು ಲಗು ಓಡಿ."

('ಅವಸರ')

೩

ರೋಮ್ಯಾಂಟಿಕ್ ಸಂಪ್ರದಾಯದ ಕವಿಗಳು ಕೊಂಡು ಕೊನೆಯಾಡಿದ ಪ್ರಕೃತಿಯ ಹಾಗೂ ಜೀವನದ ಸೌಂದರ್ಯ, ಗುಣ, ಹಿರಿಮೆಗಳನ್ನು ಇಂದಿನ ತಲೆಮಾರಿನ ಕವಿಗಳು ವಿಭಜಿಸಿ, ವಿಶ್ಲೇಷಿಸಿ, ಅಡ್ಡ ಪ್ರಶ್ನೆಗಳಿಂದ ಗಾಸಿಗೊಳಿಸಿ ನೋಡುತ್ತಿದ್ದಾರೆ. ಅದರ ಬೇರೆ ಮುಖಗಳು ಹಿಂದಿನವರಿಗೆ ಕಂಡಿರಲಿಲ್ಲವೆಂದಲ್ಲ. ಆದರೆ ಬದುಕಿಗೆ ಹಿತವಾದುದೆಂದು ಅದರ ಅತಿಶಯತೆಯನ್ನು ಅವರು ಬಣ್ಣಿಸಿದರು. ಅಂಥ ಭಾವೋದ್ರೇಕಕ್ಕೆ ಬೇಕೆಂದೇ ಪೆಟ್ಟು ಕೊಡುವ ಹವ್ಯಾಸ ಹೊಸ ಕವಿಗಳಿಗೆ:

"ಹಳೆ ಹಸಿರು ಘಡಕಿಯನು ಹಚ್ಚಿಕೊಂಡಿದೆ ಬಿಡೋ ಭೂಮಿ
ಹರಕಿನಲಿ ಕಂಡದ್ದು ಬಿಳಿಯ ತೊಗಲು"

[ಚಂದ್ರಶೇಖರ ಕಂಬಾರ: 'ದೋರಿ']

× × ×

"ಮುಗುನಿನಿಸ್ಸಿಯ ಹಾಗೆ ಮೂಡಣವು ರಟ್ಟಾಗಿ
ಪಿಚ್ಚುಗಣ್ಣಿನ ಸೂರ್ಯ ಮೂಡಿ ಬಂದ"

[ಕಂಬಾರ: 'ಋಷ್ಯಶೃಂಗ']

ಗತಾನುಗತಿಕತೆಗ ಇವರು ಬೇಸರಗೊಂಡಿದ್ದಾರೆ. ಬೆಚ್ಚಿದರೂ ಚಿಂತೆಯಿಲ್ಲ ಚುಚ್ಚಿ ನೋಡಬೇಕೆನಿಸುತ್ತದೆ ಇವರ ಮನಸ್ಸು ಬರಿಯ ಸುಖ ಸಂತೋಷಗಳಿಂದ ಬಾಳಿನ ಪೂರ್ಣತೆಯು ಅರಿವಾಗದು. ಬಂಗಾರ ಶೂಕದಲ್ಲಿ ಬದುಕಿನ ಋಣ ತೀರಿಸಬೇಕಾದರೆ,

"ನನಗ
ನೀಡು ಅಭಾವ, ಗೊಂದಲ, ಶೋಕ
ಪ್ರತಿಯಾಗಿ ಸಮತೂಕದಲ್ಲಿ
ಉತ್ತಮೋತ್ತಮ ಕವಿತೆ ನಿನ್ನಡಿಗೆ ಹಾಕುವೆ"

[ಪಟ್ಟಣಶೆಟ್ಟಿ: 'ರಿಣ']

ಎನ್ನುತ್ತಾರೆ.

ಲೈಂಗಿಕ ಪ್ರಜ್ಞೆ ಕೆಲವರಲ್ಲಿ ಗಾಢವಾಗಿದೆ. ಅದರ ಅನುಭವ ನಿರೂಪಣೆಯಲ್ಲಿ ಅವರಿಗ ಹೆಚ್ಚಿನ ಲವಲವಿಕೆ. ಜೀವನದಲ್ಲಿ ರತಿಯ ಶಕ್ತಿಯಿಂದ ಒದಗುವ ಉತ್ಸಾಹಕ್ಕೆ ಹೊಸ ಕವಿ ಮಾರುಹೋಗಿದ್ದಾನೆ. ಸಹಜ ಪ್ರವೃತ್ತಿಗಳ ಅದಮ್ಯತೆಯನ್ನೂ ನೋವನ್ನೂ ಅತ ಪ್ರಾಮಾಣಿಕವಾಗಿ ಚಿತ್ರಿಸಬಲ್ಲ:

"ಮೈಯೊಳಗೆ ಮಿರುಗುತಿಹ ಮುತ್ತುರತ್ನದ ಹೊರೆಯನೆಲ್ಲಿಳಿಸಲಿ!
ಕಣಕಣದಿ ಹೊಯ್ಲಿಡುವ ಬಿರುಗಾಳಿಗಳನೆಲ್ಲ ಯಾವ ದಾರವ ತಂದು
ಬಿಗಿದು ಬಿಡಲಿ?
ಇಂಥ ಭಾರದ ಜೊತೆಗೆ ಬೀಜ ಮೊಳೆಯುವ ನೋವು, ಚಿಗುರು
ಕೆರಳುವ ನೋವು,
ಮೊಗ್ಗೆಯರಳುವ ನೋವು, ದೋರಗಾಯಿಯು ಬಣ್ಣ ತಿರುಗುವಾಗಿನ
ನೋವು"–

[ಸುಮತೀಂದ್ರ ನಾಡಿಗ: 'ಗುಟ್ಟು']

ಈ ಶಕ್ತಿಯ ಚುರುಕು, ನೆತ್ತರಿನ ತುಡಿತಗಳಲ್ಲಿ ಬಾಳಿನ ಜೀವಂತ ಗತಿಯನ್ನೂ ಸೋಜಿಗವನ್ನೂ ಅವನು ಗುರುತಿಸಿದ್ದಾನೆ. ಲೈಂಗಿಕ ಪ್ರಜ್ಞೆಯ ಪ್ರತಿಮೆಗಳಲ್ಲಿ ಇಡಿಯ ವ್ಯಕ್ತಿತ್ವವನ್ನು ಎರಕ ಹೊಯ್ದು ನಿಲ್ಲಿಸುವ ಕಾರ್ಯವಿನ್ನೂ ನಡೆದಂತಿಲ್ಲ. ಬಿಡಿ ಬಿಡಿ ರೂಪಕಗಳಲ್ಲಿ ಮಾತ್ರ ಅದು ...ಗೊಳಿಸಿದೆ:

"ಗರ್ಭಗುಡಿ ಕತ್ತಲಲಿ
ಪೌರುಷದ ಕಂದೀಲು
ಹಚ್ಚಿ, ಬೆಳಕಿನ ಧ್ವಜವನಲ್ಲಿ ನೆಟ್ಟದ್ದೇನೆ.
— — — — —
ತೂಬನರೆತೆರೆದಾಚೆ ನಿನ್ನ ತೆವರಿನ ನವಿರು
ಪೈರು ಪಚ್ಚೆಗೆ ನೀರ ಹಾಯಿಸಿದ್ದು–
ಇಷ್ಟು ಬೇಗನೆ
ಎಲ್ಲ ಮರೆತೆಯೇನೇ?"

[ನಿಸಾರ ಅಹಮದ್: 'ತಿಂಗಳಾರರ ಮೇಲೆ']

ಪೌರಾಣಿಕ ಪ್ರಸಂಗಗಳನ್ನು ಸಂಕೇತಿಸಿ ತೋರುವಾಗ ಇಂಥ ಮೆಸ್ತುವಿಗೆ ಒಮ್ಮೊಮ್ಮೆ ಅನನ್ಯತೆಯೊದಗುವದುಂಟು:

"ಋಮಧೇನುಗಳ ಕೊಟ್ಟಿಗೆಯಿಂದ ನಿದ್ದೆ ಕಲಕಾಡಿ ಕೆದರಿ
...ಗ್ಗಿ ಬರುತಿದೆ ಗುಟುರು.
ಕಲ್ಪವೃಕ್ಷಗಳ ಕಾಡಿನಲ್ಲಿ ವಿಶ್ರಾಂತ ಹುಂಜದ ಕೂಗು.
ಅಮರಾವತಿಯಿಂದ ನೆಲದವರೆಗೋಡೋಡುತಿಹ
ಪರಪರಗುಟ್ಟಿ ತರಗುಟ್ಟುತಿಹ
ಮದೋನ್ಮತ್ತ ಜಿಡಿಗಣ್ಣೋಟ ನಾಟ ನೆಲದಲ್ಲೆಲ್ಲ ಛಳಿ ನಡುಕ.
— — — — — —
ಹೋಮಗಂಧದ ಮೂಗು ಬಾಯಿಗು ಸೋಮರಸ ನುಗ್ಗಿ
ಲಗ್ಗೊ ಲಗ್ಗೆ..."

[ಜಿ. ಎಸ್. ಸಿದ್ದಲಿಂಗಯ್ಯ: 'ಕೋಳಿ ಕೂಗಿತು']

ಅನುಭವಗಳ ಸರಳತೆಗಿಂತ ಅವುಗಳ ಸಂಕೀರ್ಣತೆಯಲ್ಲಿ ಬಾಳಿಗೆ ಅರ್ಥವನ್ನು ಹುಡುಕುವ, ಸತ್ಯವನ್ನು ಶೋಧಿಸುವ ಹಂಬಲ ಇವರಲ್ಲಿದೆ:

"ಕುಂತಾಗ, ನಿಂತಾಗ ನಿದ್ದೆ ಮೈಥುನದಲ್ಲು
ಒಂದು ಪ್ರಶ್ನೆ:
ಯಾವ ಅರ್ಥವ ತಂದು ತುಂಬಲೀ ಶೂನ್ಯಕ್ಕೆ?
ಒಡಪು ಒಡೆಯಲೆ ಬೇಕು, ಇಲ್ಲದಿದ್ದರೆ ಸಿಗದು
ಯಕ್ಷ ಕಾವಲಿಗಿರುವ ಈ ಕೊಳದ ಪ್ರಾಣಜಲ."

[ಗಿರಡ್ಡಿ ಗೋವಿಂದರಾಜ: 'ಮುರಿಲಿಪ್ತ ದುಸ್ವಪ್ನ']

ಕ್ಷುದ್ರವೆನಿಸಿದರೂ ಸ್ವಾಭಾವಿಕ ವಿಚಿತ್ರಗಳನ್ನು ಹೊಸ ಕವಿ ಹೀಗಳೆಯುವದಿಲ್ಲ. ಬದಲಾಗಿ 'ಈ ವಿಚಿತ್ರಕೆ ನಮಿಸೊ-ಮಂಕುತಿಮ್ಮ' ಎಂದು ಬೇರೊಂದು ತಿರುವಿನಲ್ಲಿ ಅದನ್ನು ಸ್ವೀಕರಿಸುತ್ತಾನೆ. ಆತ್ಮವಿಮರ್ಶೆ ಹಾಗೂ ಅದರ ಪ್ರಾಮಾಣಿಕ ನಿರೂಪಣೆ ಹೊಸ ಕಾವ್ಯದ ಪ್ರಮುಖ ಲಕ್ಷಣಗಳಲ್ಲೊಂದಾಗಿದೆ:

"ಸಿಕ್ಕ ಸಿಕ್ಕಡವಿಯಲಿ ಹಸಿರು ಕಂಡಲ್ಲೆಲ್ಲ
ಬಾಯಿ ಹಾಕಿದ್ದಾಯ್ತು, ಚಿನ್ನಾಟಗರೆದದ್ದಾಯ್ತು.
ಇನ್ನಾದರೂ ನನ್ನ ಸ್ವಂತ ಹಕ್ಕೆಗೆ ಬಂದು
ಬೆಚ್ಚಗೇ ಮಲಗಿ ಮೆಲುಕಾಡಿಸುವ ಬಯಕೆ.
ಬಾ
- - - - - - -
ಕಟ್ಟು ಸಡಿಲಿಸಬೇಡ. ವರ್ತಮಾನದ ಕೊಂಡಿ
ತಪ್ಪಿ ಬಿದ್ದೇನು ನಾ ಭೂತ ಪಾತಾಳಕ್ಕೆ.
ಜಲದೊಡಲ ಗಾಳಿಯನ್ನೆಲ್ಲ ನುಂಗಿದ ಮೇಲೆ
ಮೇಲಿನಂಚಿಗೆ ಬಂದು, ಮೋತಿ ಹೊರಚಾಚಿ
ಬಾಯ್ದೆರೆದ ಹಸಿದೊಡಲ ಮೀನು
ನಾನು."

[ಚಂದ್ರಶೇಖರ ಪಾಟೀಲ: 'ಕಟ್ಟಿಕೊಂಡ ಹೆಂಡತಿಗೆ']

ನಾಗರಿಕತೆಯ ತದ್ರೂಪ ನವಮಾನವನ ಮಾನಸಿಕ ರೂಪವಾಗಿದೆ. ನವ್ಯ ಕವಿತೆಯಂತೆ ನವ್ಯ ಚಿತ್ರವು ಕೂಡ. ಇದು ವಾಸ್ತವತೆಯಲ್ಲಿ ಕಂಡೂ ಕಾಣದ ಕಲೆ:

"ಮುಖಕೆ ಚರ್ಮವಿಲ್ಲ; ಒಳಪದರುಗಳು
ಮೇಲೆ ಕಾಣುತಿವೆ-ಸ್ನಾಯು ನರಗಳು;
ಬೇರುಗಟ್ಟಿವೆ ಒಳಗೆಲ್ಲ, ಭಯ
ನೋವು, ಚಿಂತೆ, ಜ್ವರಗಳು.
ಪುಣೆ ಬೆಂಗಳೂರ ದಾರಿಯಲಿ
ಸರದಾರಜೀಯ ಭಾರಿ ಟ್ರಕ್ಕಿಗೆ ಸಿಕ್ಕು
ಗಜಿಬಿಜಿಯಾದ ದೇಹವೊಂದಕೆ
ಹಿಂದಿರುಗಿದಂತಿದೆ ಪ್ರಾಣ."

[ಅಬ್ದುಲ್ ಮಜೀದಖಾನ್: 'ಒಂದು ನವ್ಯ ಚಿತ್ರ'

ತನ್ನ ಭಾವನೆಗಳನ್ನು ತಾನು ಕಂಡ ವಸ್ತು-ನೋಟದಲ್ಲಿ ...ಂದ್ರೀಕರಿಸಿ ಅದನ್ನೊಂದು ಪ್ರತೀಕವಾಗಿಸಿ ಕವಿತೆಯ ಆಶಯವನ್ನು ...
ಹಿಡಿಯಬಲ್ಲ:

"ಅದೊ ಮಹಾ ಮನೆಯ ತುದಿ
ಗೋಪುರದಿ ಕುಕ್ಕರಿಸಿರುವ
ಕುಕ್ಕುಟ

ಎದೆ ಸೆಟಿಸಿ ವೆುಂಗಿಲ ಮಟ
ಚಿಣ್ಣಾಟವಾಡುತಿದೆ-
ಕಣ್ಣು, ತಲೆ ತಿರುಗಿಸುತ
ಹತ್ತು ದಿಕ್ಕನ್ನಳೆವೆನೆಂದು ಬಗೆಯುತ್ತ!"

[ಅಕಬರ ಅಲಿ: 'ಗಾಳಿ-ಕೋಳಿ']

ಅನ್ಯಾಯುವನ್ನು, ಡಂಬವನ್ನು ವಿಡಂಬಿಸಿ ತೋರಿಸುವಾಗ ಇವನ ಭಾಷೆಗೆ ಎಲ್ಲಿಲ್ಲದ ಬೀಸು, ಆಕ್ರೋಶ:

" ಹಿರಿಯರಿದ್ದಾರೆ—
[ಈ ಭಗಣಿಮರಕಿನ್ನೂರು, ಗೋಣಿಮರಕಾರ್ನೂರು
ಒಂದೊಂದು ಕೋಡುಗಲ್ಲಿಗು ಸಹಸ್ರವರ್ಷಗಳ ಕೀರುತಿ, ಮೇಲ್ಮೆ
ಬೀಳು ಕಾಲಿಗೆ...]
ಮತ್ತೊಮ್ಮೆ ಕುಲಕಸಬನುದ್ಧರಿಪ ಹೊರಟಿದ್ದಾರೆ:
ಆಸ್ತಿ ಹಣ ಜಾತಿ ಜನ್ನಿವಾರ ವಿಭೂತಿ
ದೇಶವನೆ ನುಂಗಿ ನೊಣೆದು, ಬರಿ ಎಂಜಲೆಲೆ ಹಾರಿಸಿದ ಭೂತ ಪ್ರೇತ
ಬೇತಾಳ
ಹಲವು ದೇವಜಾತಿ."

[ಸಣ್ಣಗುಡ್ಡಯ್ಯ : 'ಬೀಸುವದೆ ಚಂಡಪವನ ?']

ನಿಸರ್ಗದ ರಮ್ಯತೆಯನ್ನು ಬಾಳಿಗೆ ಹೃದ್ಯವಾಗಿ ಹೊಂದಿಸಿಕೊಳ್ಳುವ ರೀತಿ ಒಂದು ಬಗೆ. ಆದರೆ ಅದನ್ನು ಸಂಕೀರ್ಣಗೊಳಿಸಿ ಅದರ ಒಡಲಲ್ಲಿ ಸಾಮಾಜಿಕ ಪ್ರಜ್ಞೆಯಿಂದುಂಟಾದ ಅನುಭವದ ಪದರುಗಳನ್ನು ಬಿಚ್ಚುತ್ತ ಹೋಗುವದು ಮತ್ತೊಂದು ಬಗೆ :

"ಇರುಳ ಬೆತ್ತಲೆ ತೆಕ್ಕೆ ಬಿಡಿಸಿಕೊಂಡೆದ್ದ
ಸೂರ್ಯ: ಜಿಬರುಗಣ್ಣೊರಸುತ್ತಾ ಕಳಿಸಿ
ಕೊಬ್ಬಿದಾಡು, ಕುರಿ, ಕೋಳಿ ಸಿಗಿದು ಸೀಳಿ
ಕಂದು ನೀಲಿ, ಬಿಳಿ, ಕೆಂಪು ಖಂಡಗಳ ತೂಗಿಟ್ಟು
ಬಣ್ಣ ಬಣ್ಣದ ಮೂಡಣದ ಮಾಂಸದಂಗಡಿ ತೆರೆದಾಗ
ನಮ್ಮೂರಿನಲಿ ಬೆಳಗಾಯಿತು".

[ಶ್ರೀಕೃಷ್ಣ ಆಲನಹಳ್ಳಿ : 'ಬೆಳಗು']

ಕವಿಯ ಕಲಿಕೆ, ಪ್ರಜ್ಞೆ, ಸ್ಮೃತಿ-ಇವು ಒಂದಿಲ್ಲ ಒಂದು ಬಗೆಯಲ್ಲಿ ಬೇರೊಂದು ರೂಪದಲ್ಲಿ ಕವಿತೆಯಲ್ಲಿ ಒಡಮೂಡುತ್ತವೆ. ಚಿತ್ರಗಾರನಿಗಿಂತ ಚಿತ್ರಗುಪ್ತನ ಕೈವಾಡವೇ ಅಲ್ಲಿ ಹೆಚ್ಚು:

"ಕಲಿಸಿದುದನೆಲ್ಲ ಮರಳಿಸಲು
ಪ್ರಜ್ಞೆಯೇನು ಗ್ರಾಮಫೋನ್ ರೆಕಾರ್ಡೆ?
ಇಟ್ಟದ್ದನೆಲ್ಲ ಇದ್ದಂತೆ ತಿರುಗಿ ಕೊಡಲು
ಸ್ಮೃತಿಯೇನು ಸೇಫ್ ಡಿಪಾಜಿಟ್ ವ್ವಾಲ್ಟೆ?
ನಾಟಕದ ತೆರೆತೆರೆಗಳನ್ನು ಬರೆದು ಬರೆದು
ಸುರುಳಿ ಸುರುಳಿ ಸುತ್ತಿಟ್ಟ ಜೀನುಗಾರನು ನೀನು
ಚಿತ್ರಗಾರನಲ್ಲ, ಚಿತ್ರಗುಪ್ತ."

[ಶಂಕರ ಮೊಕಾಸಿ : 'ಮರೆವು']

ಕವಿತೆಯ ವಸ್ತು ಆತ್ಮೀಯವಾದ ಒಂದು ವ್ಯಕ್ತಿಯನ್ನು ಕುರಿತಿದ್ದಾಗಲೂ ಆ ವ್ಯಕ್ತಿತ್ವದ ಎಲ್ಲ ಮುಖಗಳನ್ನೂ ಪ್ರತಿಬಿಂಬಿಸಿ ಅನುಭವಕ್ಕೆ ಸಮಗ್ರತೆಯನ್ನು ತಂದುಕೊಡುವ ದಿಟ್ಟತನವನ್ನು ಹೊಸ ಕವಿತೆಯಲ್ಲಿ ಕೆಲವೆಡೆ ಕಾಣಬಹುದು. ಅಗಲಿದ ತಾಯಿಯನ್ನು ಕುರಿತು ಬರೆವಾಗಲೂ ಅದು ಬರಿ ಶೋಕಗೀತವಾಗದೆ ಅವಳ ಗುಣಾವಗುಣಗಳನ್ನೂ, ಬದುಕಿದ ಬಗೆಯನ್ನೂ ಮೂರ್ತೀಕರಿಸುವ ರೀತಿ ನವ್ಯಕವಿಯ ಆರೋಗ್ಯಕರವಾದ ಜೀವನದೃಷ್ಟಿಯನ್ನು ಸೂಚಿಸುತ್ತದೆ :

"ಸತ್ತಳು ಈಕೆ :
ಬಾಗು ಬೆನ್ನಿನ ಮುದುಕಿಗೆಷ್ಟು ಪ್ರಾಯ ?
ಎಷ್ಟು ಗಾದಿಯ ಚಂದ್ರ, ಒಲೆಯೆದುರು ಹೋಳಿಗೆಯ ಸಂಭ್ರಮ?
ಎಷ್ಟು ಸಲ ಈ ಮುದುಕಿ ಅತ್ತಳು
ಕಾಸಿಗೆ, ಕೆಟ್ಟ ಸೈರಿಗೆ, ಸತ್ತ ಕರುವಿಗೆ;
ಎಷ್ಟು ಸಲ ಹುಡುಕುತ್ತ ಊರೂರು ಅಲೆದಳು
ತಪ್ಪಿಸಿಕೊಂಡ ಮುದಿಯ ಎಮ್ಮೆಗೆ ?

× × ×

ಮತಿ ಧೃತಿ

ಬರಿ ಮತಿ ಸಾಲದು ನಾಡಿದನತ್ತ
ಬರಿ ಧೃತಿಯೂ ಸಾಕಾಗದು ಮತ್ತ
ಧೃತಿಯಿಲ್ಲದ ಮತಿವಂತಗೆ ಜೋಲು ಮುಖ
ಮತಿಯಿಲ್ಲದ ಧೃತಿವಂತನಿಗೇನು ಸುಖ ?
ಧೃತಿ ಮತಿಗಳನುಳ್ಳವನೇ ಧೀರ
ಆತನ ಕೊರಲಿಗೆ ವಿಜಯದ ಹಾರ.

ಈ ನೆಲದೊಳೊ ಮತಿವಂತರೆ ಬಹಳ
ಅದರಿಂದಾರಿಗೆ ಏನು ಸುಖ ?
ಕಾಲಕಾಲಕೂ ಬರುವನು ದುರುಳ
ಆ ಬಕಗಿದಿರಹುದಾದ ಮುಖ ?
ಭೀಮರಿದ್ದರೂ ಕುಂತಿಯರಲ್ಲಿ
ಮಣಿಮಣಿಯುತಲೇ ಗಲ್ಲವ ಬಡಿವ
ದೈವದೇಯ ನಿರೀಹರೆ ಇಲ್ಲಿ!

ಅಲ್ಪಾಯುಷಿಗೂ ಅಮೃತದ ಕನಸು
ಸ್ವಲ್ಪಾಮಿಷಕೂ ಜೊಲ್ಲುವ ಮನಸು
ತಾನಿರೆ ಜಗವುಂಟೆನ್ನುವ ಜೀವಿಗೆ
ಲೋಕವನತ್ತುವ ಭ್ರಾಂತಿ
ಸೊಲ್ಸೊಲ್ಲಿಗೆ ಸಕಲ ಕ್ರಾಂತಿ !

ಮಾತು ಮಾತಿಗೂ ಹೆರವರ ಸಮ್ಮತ
ಜೋತಾಡುವ ಜನಕಿಲ್ಲ ಮತಿ
ಕೈಬಿಡೆ ಕಮರಿಗೆ ಬೀಳುವವನ್ನುತ
ನೆಲಕಳುಕುವ ಮನಕಿಲ್ಲ ಧೃತಿ
ಮೋಹರಿಸುವ ಪರಚಿತ್ತದ ಗಾಳಿಗೆ
ಕೊರಲಿತ್ತೂತ್ತುಳುವುದೇ ಪ್ರಗತಿ
ತಮ್ಮವರನೆ ತಾವಂಜಿಸಿ ಕಾಡುವ
ಚಿಂತರನಂತಾಯ್ತಮ್ಮ ಸ್ಥಿತಿ.

ಭಾರತೀಯ, ನೀ ಭಾರತೀಯನಾ—
ಗುಳಿದೀ ಬಾಳನು ಹಸಗೊಳಿಸು
ಪರುಷದ ಮಣಿಯನೆ ಹರುಷದ ಗಣಿಯನೆ
ಪುರುಷನಾಗಿ ನಾಡಿದ ಮರಸು
ಸ್ವತಂತ್ರ ಭಾರತ ಸೂರ್ಯನಿದಿರು ಸಿರಿ
ಜೀವನದಮೃತದ ಮಳೆಗರೆಸು
ಆ ತೇಜಃ ಮೂಡುವ ಮಳೆಬಿಲ್ಲೊಳು
ತಾಯ್ನಾಡಿನ ಬಣ್ಣವ ಬಿಡಿಸು.

—ಪು. ತಿ. ನ.

ಬಸನ ಕರದಿಗೆ ನಿಮ್ಮ ಭಗವದ್ಗೀತೆ ಬೇಡ;
ನನ್ನವ್ವ ಬದುಕಿದ್ದ
ಕಾಳುಕಡ್ಡಿಗ ದ ದಿತಕ್ಕೆ ಮಕ್ಕಳಿಗೆ;
ನೇಲೊಂದು ಸೂರು, ಅನ್ನ, ರೊಟ್ಟಿ, ಹಚಡಕ್ಕೆ;
ಸರೀಕರ ಎದುರು ತಲೆಯೆತ್ತಿ ನಡೆಯಲಿಕ್ಕೆ".

[ಲಂಕೇಶ : "ಅವ್ವ"]

ಆಡುನುಡಿ, ಮಾತಿನ ಲಯ ಹೊಸ ಕಾವ್ಯಶೈಲಿಯ ಜೀವನಾಡಿಯಿದ್ದಂತೆ. ಮಾತನ್ನೇ ಕಾವ್ಯವನ್ನಾಗಿ ಮಾಡುವ ಸಹಜ ಸೌಂದರ್ಯ ಅದರದು. ಹೊಸ ಪೀಳಿಗೆಯಲ್ಲಿ ಒಬ್ಬಿಬ್ಬರು ಜಾನಪದ ಭಾಷೆಯ ಸತ್ವವನ್ನೂ ಧಾಟಿಯನ್ನೂ ಸಮರ್ಥವಾಗಿ ಬಳಸಿಕೊಂಡು ಭಾವದ ತೀವ್ರತೆಗೆ ಅಭಿವ್ಯಕ್ತಿ ನೀಡಿದ್ದಾರೆ.

"ಈ ಪ್ರೀತಿ ಹರಿದು ಹರಿಪಲ್ಲೆ ಮಾಡಿ
ಗಾಳ್ಯಾಗ ತೂರಲೇನ
ಗಾಳೀಯ ಹಿಡಿದು ಗಡಿಗ್ಯಾಗ ತುಂಬಿ
ಕಲ್ಲೀಗೆ ಹೇರಲೇನ.
ಚೀಲಕ್ಕ ಹಾಕಿ ಕಚಪಚನ ತುಳಿದು
ಬಾಯೀಯ ಬಿಗಿಯಲೇನ
ಎಣ್ಣೀಯ ಉಗ್ಗಿ ಉರಿಯ್ಯಾಗ ಒಗೆದೆ
ಸುಡಲಿಲ್ಲ ಮಾಡಲೇನ."

[ಸೋಮಶೇಖರ ಇಮ್ರಾಪುರ : "ಪ್ರೀತಿ"]

ಚುಟುಕುಗಳಿಗೆ ಈಗ ನೆರೆ ಬಂದಂತಿದೆ. ಆದರೆ ಅವುಗಳಲ್ಲಿ ಭಾಷೆ ಭಾವ, ಛಂದಸ್ಸಿನ ದೃಷ್ಟಿಯಿಂದ ಚುರುಕಾಗಿರುವಂಥವು ಕಡಿಮೆ. ಆಡುವ ಮಾತು ಸಣ್ಣದಾದರೂ ಅರ್ಥವಲಯವನ್ನು ವಿಸ್ತರಿಸುತ್ತ ಬುದ್ಧಿಯ ಮಿಂಚನ್ನು ಚಿಮುಕಿಸುವ ಇಂಥ ಕಿರುಗವನಗಳಲ್ಲಿ ಹೊಸತನವಿದೆ:

"ಕತ್ತಲೆಯಲ್ಲಿ ಬತ್ತಲೆ ತಿರುಗುತ್ತಿರುವ
ನಮ್ಮ ಶೀಲಕನ್ನಿಕೆಗೆ
ಒಂದು ಬೆಳಕಿನ ಸೀರೆ
ತರುವದಿದೆ—
ಬರುವಿರಾ ?"

(ಚಂದ್ರಕಾಂತ ಕುಸನೂರಕರ : 'ಹಾಯಕು ಪದ್ಧತೀಕವನ')

೪

ಹತ್ತಾರು ಚಿತ್ರ, ಪ್ರತಿಮೆಗಳನ್ನು ಒತ್ತಿ ತುರುಕಿದಂತಿದ್ದರೂ ಮಸ್ತುವಿನ ಮೇಲಿನ ಹಿಡಿತ, ಭಾಷೆಯಲ್ಲಿರುವ ಹದ, ಅಭಿವ್ಯಕ್ತಿಯಲ್ಲಿಯ ಸಂಯಮ, ಅನುಭವ—ಅನಿಸಿಕೆ—ವಿಚಾರಗಳಲ್ಲಿಯ ಆಯಸ್ಕಾಂತದ ಆಕರ್ಷಣೆ, ಆಡುಮಾತಿನ ಲಯದಲ್ಲಿ ಉಸಿರಾಡಿದಷ್ಟು ಸಹಜವಾಗಿ ಕವನವನ್ನು ನಡೆಸಿಕೊಂಡು ಹೋಗುವ ರೀತಿ— ಇವುಗಳಿಂದ ಕೆಲವು ಕವನಗಳ ಶಿಲ್ಪ ಬಂಧುರವಾಗಿದೆ. ಇಡಿಯ ಕವನದ ಭಾವದಲ್ಲಿ ಇವೆಲ್ಲವೂ ಸಾವಯವ ಸಂಬಂಧ ಪಡೆದಿರುವುದರಿಂದ ಕೆಲವೇ ಸಾಲುಗಳನ್ನು ಸೂಕ್ತಿಗಳಂತೆ, ಸುಭಾಷಿತಗಳಂತೆ ಉದಾಹರಿಸಿ ತೋರಿಸುವದು ಕೆಲವು ಸಲ ಮೂಲ ಕವನಕ್ಕೆ ಅಪಚಾರವಾದಂತಾಗಬಹುದು. ಆದರೂ ಅವುಗಳ ರುಚಿ, ವಿಧಾನ, ಶೈಲಿಯನ್ನು ಗುರುತಿಸಲು ಇದುವರೆಗಿನ ಉದಾಹರಣೆಗಳು ಸಹಾಯಕವಾಗಬಹುದು.

ಹೊಸ ಕಾವ್ಯದ ಉತ್ಕರ್ಷವನ್ನು ಸೂಚಿಸುವ ಈಗಿನ ಅವಧಿ ಅನೇಕ ಹೊಸ ಪ್ರಯೋಗಗಳಿಗೆ ದಾರಿ ಮಾಡಿಕೊಟ್ಟಿದೆ. ಇಲ್ಲಿಯೂ ಅನುಕರಣೆಗೆ ಎಡೆಯಿಲ್ಲದೆಯಿಲ್ಲ. ಕೆಲವೊಮ್ಮೆ ಸಂಕೇತಗಳು ತೀರ ವೈಯಕ್ತಿಕವೆನಿಸಿ ಕವಿತೆಯ ಅಂತರಂಗ ಗೂಢವಾಗಿಯೇ ಉಳಿಯುತ್ತದೆ. ಆದರೂ ಒಡೆದು ಹೇಳಬಾರದೆಂದು ಯಾವ ಗುಟ್ಟುಗಳನ್ನು ಹಿಂದಿನ ಕವಿಗಳು ಬಚ್ಚಿಟ್ಟಿದ್ದರೋ ಅವುಗಳನ್ನೆಲ್ಲ ಹೊಸಬರು ಸೇಡಿನಿಂದ ಎಂಬಂತೆ ದರೋಡೆ ಮಾಡಿದ್ದಾರೆ. ಈಚಿನ ಫ್ಯಾಶನ್ ಎನಿಸುವ ಬಿಗಿಯಾದ ಉಡುಪು ತೊಡುವ ಅಂಗಸೌಷ್ಠವವನ್ನು ಒಡೆದು ತೋರಿಸುವದೇನೋ ನಿಜ. ಆದರೆ ಇದ್ದುದನ್ನು ಇದ್ದಂತೆ ತೋರಿಸಿಕೊಳ್ಳುವ ನೆವ ಕೆಲವು ಕವಿಗಳಿಗೆ ಒಂದು ಚಾಪಲ್ಯವಾಗಿಬಿಟ್ಟಿದೆ. ಇದರಿಂದ ಕಾವ್ಯಗುಣಕ್ಕೆ ಧಕ್ಕೆಯುಂಟಾಗುವದೆಂದು ಬೇರೆ ಹೇಳಬೇಕಿಲ್ಲ. Primitivism, instinct, energy, blood—ಇವುಗಳ ಆರಾಧಕರಾದ ಬೀಟ್ನಿಕ್ ಕವಿಗಳ ಛಾಯೆಯನ್ನೂ ಈಚಿನವರ ಕವಿತೆಗಳಲ್ಲಿ ಅಲ್ಲಲ್ಲಿ ಕಾಣಬಹುದು.

ಕನ್ನಡ ಕಾವ್ಯಪ್ರಪಂಚ ತನ್ನ ಪರಿಧಿಯನ್ನು ವಿಸ್ತರಿಸುತ್ತ ಹೊರಟಿರುವದೂ, ''ಜೀವಂತ ಭಾಷೆಯಲ್ಲಿ ಅನುಭವವನ್ನು ಕೆತ್ತುವ ಕಡೆಯುವ ನಿಜವಾದ ಕಸಬುಗಾರಿಕೆ''ಯನ್ನು ತೋರಿಸುತ್ತಿರುವದೂ, ''ನಮ್ಮ ಕಾವ್ಯ ಹೀಗೆ ಮಣ್ಣಿನ ಹಾಡಾಗ ಬಯಸುತ್ತಿರುವದೂ,'' (ಅಡಿಗ) ಒಳ್ಳೆಯ ಬದಲಾವಣೆಯೆಂಬುದು ಒಪ್ಪತಕ್ಕ ಸಂಗತಿಯೆ. ನವ್ಯಕಾವ್ಯದ ವಿಶೇಷ ಲಕ್ಷಣವನ್ನು 'ನಾಗರಿಕ ಪ್ರಜ್ಞೆ'ಯಲ್ಲಿ ಕಂಡ ಶಿವರುದ್ರಪ್ಪನವರು ''ನಾಗರಿಕ ಪ್ರಜ್ಞೆ ಎಂಬುದು ಬಹು ವ್ಯಾಪಕವಾದ 'ಸಾಮಾಜಿಕ ಪ್ರಜ್ಞೆ'ಯ ಒಂದು ಅಂಗ ಮಾತ್ರ; ಅದೇ ಸಾಮಾಜಿಕ ಪ್ರಜ್ಞೆಯ ಸಮಸ್ತವೂ ಅಲ್ಲ" ಎಂದು ಎಚ್ಚರಿಸಿರುವುದು ಸಕಾಲಿಕವಾಗಿದೆ. "ಕಾವ್ಯವನ್ನು ಬರೆಯುವ ಕವಿ, ತಾನು ಈ ಜನತೆಯ ಬಹು ಮುಖ್ಯವಾದ ಅಂಗ. ತಾನು ತನ್ನ ಅನುಭವವನ್ನು ಅವರೊಂದಿಗೆ ಹಂಚಿಕೊಂಡು ಬಾಳುವ ಜವಾಬ್ದಾರಿ ತನಗೆ ಉಂಟೆಂಬುದನ್ನು ನೆನಪಿನಲ್ಲಿಟ್ಟುಕೊಂಡರೆ ಸಾಕು'' ಎಂಬ ಅವರ ಮಾತಿಗೆ ಕಾವ್ಯಪ್ರೇಮಿಗಳೆಲ್ಲರೂ ದನಿಗೂಡಿಸದಿರರು. ''ಅಡಿಗರ ತಲೆಮಾರಿನಿಂದ ಎಷ್ಟೋ ಮುಂದಿನ ಕಾಲದಲ್ಲಿದ್ದ ನಾವು ಕಾವ್ಯದ ಹೊಸ ಪರಿಧಿಯನ್ನು ಹುಡುಕಬೇಕಾಗಿದೆ, ನಿರ್ಮಿಸಬೇಕಾಗಿದೆ ಅವರಂತೆಯೇ ಅವರಾಗುವದನ್ನು. ಅಂಥ ಹಂಬಲವನ್ನು ಶೈಲಿಯನ್ನು ಬಿಟ್ಟು ನಮ್ಮನ್ನು ನಮ್ಮದನ್ನು ಶೋಧಿಸುವ ಕಾಲ ಈಗ ಬಂದಿದೆ'' [ಸಿದ್ಧಲಿಂಗ ಪಟ್ಟಣಶೆಟ್ಟಿ] ಎಂದು ಹೊಸ ಪೀಳಿಗೆಯ ಕವಿಗಳಿಗೆ ಅನಿಸುತ್ತಿರುವದು ಅವರ ಬೆಳವಣಿಗೆಯ ಲಕ್ಷಣವಾಗಿದೆ.

ಈ ನೆಲದ ಮಣ್ಣಿನಲ್ಲಿ ಸಾಕಷ್ಟು ಸತ್ವವಿದೆ. ಬಗೆ ಬಗೆಯ ರೂಪ, ರಸ, ಗಂಧಗಳಿಗೆ ಅದು ಆಗರವಾಗಿದೆ. ಆದರೂ ಹೊಸ ಕವಿಗಳಿಗೆ ಕಾಮುಕಸ್ಫೂರ್ತಿಯೇ ಹೆಚ್ಚು ಪ್ರಿಯವಾಗಿರುವುದು ಸೋಜಿಗವೆನಿಸದಿದ್ದರೂ ಇದರಿಂದ ತಮ್ಮ ಅನುಭವದ ಕ್ಷೇತ್ರವನ್ನು ತಾವೇ ಸೀಮಿತಗೊಳಿಸಿಕೊಳ್ಳುವ ಅಪಾಯಕ್ಕೆ ಬಲಿಯಾಗುವ ಸಂಭವ ಹೆಚ್ಚಿದೆ. ಜೀವನದ ಸಂತೋಷವನ್ನು ಉದ್ದೇಶಪೂರ್ವಕ ಹತ್ತಿಕ್ಕುವದಾಗಲಿ, ಒಂದು ಸಂಪ್ರದಾಯವನ್ನು ವಿರೋಧಿಸುವ ಉದ್ದೇಶದಿಂದಲೇ ಕಾವ್ಯರಚನೆಗೆ ತೊಡಗುವದಾಗಲಿ ಒಳ್ಳೆಯ ಲಕ್ಷಣವೇನೂ ಅಲ್ಲ. ಕಾವ್ಯವನ್ನು ನಿಜವಾದ ಶ್ರದ್ಧೆಯಿಂದ ಅಭ್ಯಸಿಸುವವರಿಗೆ ಕನ್ನಡ ಕಾವ್ಯದ ಇಂದಿನ ಬೆಳವಣಿಗೆ ಮೆಚ್ಚುಗೆಯನ್ನು ಉಂಟುಮಾಡದಿರದು. ಹೊಸ ಬಗೆಯ ಅನುಭವಗಳನ್ನೂ, ಸಂವೇದನೆಗಳನ್ನೂ ಹೊಸ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುವಾಗ ತಂತ್ರದ ಕ್ಲಿಷ್ಟತೆಯುಂಟಾಗುವದು ಅನಿವಾರ್ಯ. ಇವುಗಳನ್ನು ಅರ್ಥ ಮಾಡಿಕೊಳ್ಳುವ ಅಭ್ಯಾಸ ಪ್ರವೃತ್ತಿ ಓದುಗರಲ್ಲಿ ಬೆಳೆಯಬೇಕು ಹೊರತು 'ತಿಳಿಯುವದಿಲ್ಲ' ಎಂಬ ಒಂದೇ ಮಾತಿನಿಂದ ಕೈಜಾಡಿಸಿ ಕುಳಿತುಕೊಳ್ಳಬಾರದು. ಪರಿಶ್ರಮಕ್ಕೆ ತಕ್ಕ ಪ್ರತಿಫಲ ಇಲ್ಲೂ ಉಂಟು. ಬೇರೊಂದು ಸಂದರ್ಭದಲ್ಲಿ ವಿಮರ್ಶಕರೊಬ್ಬರು Willard Thorp! ನುಡಿದ ಮಾತನ್ನು ಇಲ್ಲಿಯೂ ಅನ್ವಯಿಸಬಹುದು: "This may not yet be ... people but it can be if the people will pause to listen."

ನಾಟ್ಯಸರಸ್ವತಿ
ಚನ್ನಕೇಶವ ದೇವಾಲಯ ಬೇಲೂರು

ಕರ್ನಾಟಕದ ಕೆಲವು ಶಿಲ್ಪಗಳು

-ಶಿವರಾಮ ಕಾರಂತ-

ಕಲೆಯನ್ನು ಕುರಿತು ಒಂದೊಂದು ದೇಶವೂ ಬೆಳೆಯಿಸಿಕೊಂಡು ಬಂದಿರುವ ಸಂಪ್ರದಾಯಗಳು ದೊಡ್ಡುವೇ. ಆದರೆ ಯಾವೊಂದು ದೇಶದಲ್ಲೂ ಅಂಥ ಪ್ರವಾಹ ಅವಿರತವಾಗಿ ಹರಿದು ಬಂದಿರುವುದಕ್ಕೆ, ದಾಖಲೆಗಳಿಲ್ಲ. ಒಂದು ದೇಶದಲ್ಲಿ ಒಂದೊಂದು ಕಲೆ ಕೆಲ ಕೆಲವು ಅವಧಿಗಳಲ್ಲಷ್ಟೇ ಉಜ್ವಲ ಸ್ಥಿತಿಗೆ ಮುಟ್ಟಿರುವುದನ್ನು ಕಾಣುತ್ತೇವೆ. ಅಲ್ಲಲ್ಲಿ ದೀರ್ಘಕಾಲ ಅದು ಕಾಣಿಸದೆ ಹೋದುದೂ ಉಂಟು; ತಿರುಗೊಮ್ಮೆ ಚೇತನಗೊಂಡು ಹೊಸ ದಾರಿ, ಹೆಜ್ಜೆಗಳನ್ನು ಇರಿಸಿದುದೂ ಕಾಣಿಸುತ್ತದೆ. ಯಾವುದೇ ದೇಶದ ಒಂದೊಂದು ಕಲೆಯ ಸಮಗ್ರವಾದ ಇತಿಹಾಸವನ್ನು ತಿಳಿದು ಅರ್ಥ ಮಾಡಿಕೊಳ್ಳುವುದರಿಂದ, ವಿಶೇಷ ಪ್ರಯೋಜನವಿದೆ ಆದರೆ ನಮ್ಮಲ್ಲಿ ಅಂಥ ಬರವಣಿಗೆಗಳು ಕಾಣಸಿಗುವುದು ಕಡಿಮೆ. ಒಂದೇ ದೇಶದಲ್ಲಿ, ಕೆಲವು ವೇಳೆ ವಾಸ್ತು ಭರದಿಂದ ಹೆಜ್ಜೆ ಹಾಕಿರುವುದನ್ನು ಕಾಣಬಹುದಾದರೆ, ಇನ್ನೊಮ್ಮೆ ಅಂಥ ಹೆಜ್ಜೆ ಶಿಲ್ಪದಲ್ಲಿ ಕಾಣಿಸಬಹುದು. ಅವೆರಡೂ ನಿದ್ರಿಸಿದಾಗ ಚಿತ್ರಕಲೆ ಸ್ಫುರಿಸುವುದನ್ನೇ ಕಾಣಬಹುದು ಅಂತು ಜನಗಳಲ್ಲಿ ಸುಪ್ತವಾಗಿರುವ ಸೃಷ್ಟ್ಯಾತ್ಮಕ ಚಟುವಟಿಕೆ ಇಂಥ ಕಾಲದಲ್ಲೇ, ಹೀಗೆಯೇ ಕುಡಿಯೊಡೆಯುತ್ತದೆ. ವಿಕಾಸಗೊಳ್ಳುತ್ತದೆ-ಎಂದು ನಿರ್ಧರಿಸುವುದು ಕಷ್ಟದ ಕೆಲಸ. ಕಾಲ ಸರಿದ ಮೇಲೆ ಪುರಾತನ ಕೃತಿಗಳಲ್ಲಿ ಉಳಿಯುವುವು ಸ್ವಲ್ಪವಾದರೆ, ಅಳಿಯುವುವು ಹಲವು. ಇನ್ನು ಹಲವು ಉಳಿಲಬ್ಬ ಕೃತಿಗಳ ತುಲನಾತ್ಮಕ ವಿಮರ್ಶೆಗೆ, ಕಾಲದ ದಾಖಲೆ ಸಿಗುವುದಿಲ್ಲ. ಶಿಲ್ಪದಂತಹ ಒಂದು ಕೃತಿ ಸ್ಥಳಾಂತರಗೊಂಡರೆ, ಅದು ಮೊದಲೆಲ್ಲಿತ್ತು ಅದರ ಕಾಲ ಯಾವುದೋ ಎಂಬುದು ತಿಳಿಯದೆ ಹೋಗುತ್ತದೆ. ಇದರಿಂದ ಕಾಲ, ಕಾರಣಗಳ ಸಂಬಂಧವನ್ನು ಉಳಿಸಿ ವಿಮರ್ಶಿಸುವುದು ಕಷ್ಟದ ಕೆಲಸ.

ಈ ನನ್ನ ಲೇಖನದಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಶಿಲ್ಪವನ್ನೇ ಕುರಿತು ನಾಲ್ಕು ಮಾತುಗಳನ್ನು ಬರೆಯುತ್ತಿರುವೆನಾದರೂ ಅದು ಸಹ ಮೇಲಿನ ಕಾಲ. ಸ್ಥಳ ವಿಪರ್ಯಾಸಗಳಿಗೆ ಗುರಿಯಾದ ಅಂಶಗಳೇ ಆಗಿವೆ. ಸಾಮಾನ್ಯವಾಗಿ ಅಥವಾ ಸ್ಥೂಲವಾಗಿ ಕಾಲ ನಿಷ್ಕರ್ಷೆಯುಳ್ಳ ಮಾದರಿಗಳನ್ನಷ್ಟೇ ನಾನು ಇಲ್ಲಿ ಉದಹರಿಸಲು ಪ್ರಯತ್ನಿಸುತ್ತಿದ್ದೇನೆ

ನಮ್ಮ ನಾಡಿನಲ್ಲಿ ಅನ್ಯ ದೇಶಗಳಂತೆ ಶಿಲ್ಪ ಸ್ವತಂತ್ರವಾಗಿ ಹುಟ್ಟಿದ್ದೂ ಉಂಟು; ವಾಸ್ತುವಿನ ಅಂಗವಾಗಿ ಹುಟ್ಟಿದ್ದೂ ಉಂಟು. ಅದೇ ಸ್ವತಂತ್ರವಾದಾಗ-ಅದು ಆವೆಮಣ್ಣಿಂದ, ಕಂಚಿನಿಂದ ಕಲ್ಲಿಂದ ಮಾಡಿದ ತ್ರಿಮಾನದ (ಅಗಲ, ಎತ್ತರದವು) ಪ್ರತಿಮೆಯಾಗುತ್ತದೆ. ವಾಸ್ತುವಿನ ಅಂಗವಾದಾಗ ಉದ್ದ, ಅಗಲಗಳಿದ್ದರೂ [illegible] ಅಪೂರ್ಣವಾಗಬಲ್ಲುದು. ಅದು ಉತ್ಕೀರ್ಣ ಶಿಲ್ಪ (Bas relief) ಆಗಬಹುದು. ಆದರೂ ಅದು ಬಹುಮಟ್ಟಿಗೆ ಶಿಲ್ಪವೇ.

ಮೇಲೆ ಹೇಳಿದ ಮೂರು ಮಾಧ್ಯಮಗಳಲ್ಲಿ ಕುಂಬ ಸುಲಭ ಮಾಧ್ಯಮ ಆವೆಮಣ್ಣಿನದು. ಅದನ್ನು ಬೇಕಾದಂತೆ ರೂಪಿಸಿ, ಅನಂತರ ಆವಿಯಲ್ಲಿ ಬೇಯಿಸಿ ಚಿರಾಯುವಾಗಿ ಮಾಡಬಹುದು. ಆದರೆ ಅದು ದುರ್ಬಲ ವಸ್ತು. ತುಸು ಅಜಾಗರೂಕತೆಯಿಂದ ಒಡೆದು ಪುಡಿಯಾಗಬಹುದು. ಇಂಥ ಶಿಲ್ಪಗಳು ಮಹೆಂಜೋದಾರದ ಅವಶೇಷಗಳಲ್ಲಿ ಕಾಣಸಿಕ್ಕಿವೆ. ನಮ್ಮಲ್ಲಿ ಕಾಣಸಿಕ್ಕಿಲ್ಲವೆಂದಲ್ಲ—ಸಿಕ್ಕಿದಲ್ಲಿ—ಅವು ಗುಡಿಗೆ ಕುಡಿತೆಗಳ ಅಲಂಕಾರವಾಗಿ ರೂಪಿತಗೊಂಡು ಸಿಕ್ಕಿವೆ. ಅವುಗಳ ಕಾಲನಿರ್ಣಯದಷ್ಟೇ ಸೌಂದರ್ಯಶಾಸ್ತ್ರದ ದೃಷ್ಟಿಯಿಂದ ನಾನು ಅವನ್ನು ಪರಿಶೀಲಿಸಿದ್ದೂ ಇಲ್ಲ.

ಪ್ರತಿಮೆಗಳು ಕನ್ನಡ ನಾಡಿನಲ್ಲಿ ಶಿಲೆ ಮತ್ತು ಕಂಚುಗಳಲ್ಲಿ ಧಾರಾಳವಾಗಿ ಕಾಣಸಿಗುತ್ತವೆ. ಮರದಲ್ಲಿ ಕೆತ್ತಿರುವುವೂ ಸಾಕಷ್ಟಿದೆ. ಕಂಚಿನ ಪ್ರತಿಮೆಗಳಾದರೆ, ಅದನ್ನು ಮೊದಲು ಮೇಣದಿಂದ ರೂಪಿಸಬೇಕು. ರೂಪನೆಯ ಕೆಲಸ ಸುಲಭ. ಅದರಿಂದ ಕೃತಿ ಕಲಾಪೂರ್ಣವಾಗಬಾರದೆಂಬ ನಿಯಮವಿಲ್ಲ. ಇಲ್ಲಿ ಕಷ್ಟದ ಭಾಗವೆಂಬುದು ಎರಕದ ಕೆಲಸ. ಗ್ರೀಸಿನಲ್ಲಿ ನಮಗೆ ಕ್ರಿಸ್ತ ಪೂ. ದ ಕಂಚಿನ ಪ್ರತಿಮೆಗಳೂ ಸಿಗುತ್ತವೆ. ಅವು ಪೂರ್ವದ ಕೃತಿಗಳು ಭಾರತದಲ್ಲಿ ಕಾಣಸಿಕ್ಕಿಲ್ಲ. ಚಿಕ್ಕಪುಟ್ಟ ಲೋಹದ ಕೃತಿಗಳು ಮಹೆಂಜೋದಾರೋದಲ್ಲಿ ಸಿಕ್ಕಿವೆ ನಿಜ.

ನಮಗೆ ಧಾರಾಳವಾಗಿ ಸಿಗುವ ಪ್ರತಿಮೆಗಳು ಕಲ್ಲಿನವು. ಇವುಗಳ ಕೆತ್ತನೆ ಕಷ್ಟದ್ದು. ಕಲ್ಲಿನ ಹರಳಿನ ರಚನೆಯನ್ನು ಹೊಂದಿ ಕೆಲಸ ಸಾಗಬೇಕು. ಇಂಥ ಕಲ್ಲುಗಳಲ್ಲಿ ಹೊಯಿಸಳ ಕಾಲದವರು ಬಳಸದಂಥ ಮಿದುಗಲ್ಲಿನ ಪರಮ ಪ್ರಯೋಜನ ಪಡೆದರು. ಸಾವಿರಾರು ಪ್ರತಿಮೆಗಳನ್ನು ಕೆತ್ತಿದರು. ಕೆತ್ತನೆ ಸೂಕ್ಷ್ಮ ಕೆಲಸಕ್ಕೆ ಬರುತ್ತಿರುವುದರಿಂದಲೇ, ಸೂಕ್ಷ್ಮತೆಯ ಬೆನ್ನು ಹತ್ತಿ ಕಲಾಸೌಂದರ್ಯದ ಸೂತ್ರಗಳನ್ನು ಮರೆತರೆಂದರೂ ಸರಿಯೆ.

ಕೆತ್ತನೆಗೆ ಕಠಿಣ ಮಾಧ್ಯಮ— ಸಾಮಾನ್ಯ [ಶಿಲೆ] ಮತ್ತು ಕಪ್ಪುಶಿಲೆ [ಬಸ್ಸಾಲ] ಅವುಗಳನ್ನು ದೊರಗು, ಸ್ಥೂಲ, ಗಾತ್ರದ ರಚನೆಗಳಲ್ಲಿ ಕನ್ನಡ ನಾಡಿನ ಜನ ಬಳಸಿಕೊಂಡಿರುತ್ತಾರೆ; ಇದಕ್ಕಿಂತ ಸುಲಭವಾದ, ಬಳಪಕ್ಕಿಂತ ಕಠಿಣವಾದೊಂದು ಕಲ್ಲೆಂದರೆ ಮರಳುಗಲ್ಲು. ಈ ಕಲ್ಲು ಧಾರಾಳವಾಗಿ ಸಿಗುವ ಬದಾಮಿ, ಐಹೊಳೆ, ಪಟ್ಟದಕಲ್ಲಿನಂಥ ಪ್ರದೇಶಗಳು ನಮಗೆ ಶಿಲ್ಪದ ಪರಮ ಪ್ರಯೋಜನವನ್ನು ಲಾವಣ್ಯವನ್ನು ತೋರಿಸಿ ಕೊಟ್ಟವೆಯೆಂದರೆ ತಪ್ಪಾಗಲಾರದು.

ಶಿಲ್ಪಕಲೆಗೆ ಪ್ರೇರಣೆ ಯಾವುದು— ಎಂದು ಪ್ರಶ್ನಿಸಬಹುದು ನೀವು. ಯಾವುದೇ ಕಲೆಗೆ ಉಚಿತ ಪ್ರೇರಣೆ ಬೇಕೇಬೇಕು. ಕಸುಬಿಗೆ, ಚಮತ್ಕಾರಕ್ಕೆ ಅದು ಬೇಕಿಲ್ಲ. ಅಲಂಕರಣೆಯ ರೂಪದಲ್ಲಿ ಕಸಬುದಾರರು— ಚಿತ್ರಗಳನ್ನು, ಭಿತ್ತಿಗಳನ್ನು, ಮಂಚಗಳನ್ನು, ಪೀಠಗಳನ್ನು ಮಾಡಿಯೇ ಮಾಡಿದ್ದಾರೆ. ಅವನ್ನು ನಾವು ಉತ್ತಮ ಶಿಲ್ಪಗಳ ಸಾಲಿಗೆ ಸೇರಿಸುವಂತಿಲ್ಲ. ಉತ್ತಮ ಶಿಲ್ಪ ಬೇರೆ. ಸೂಕ್ಷ್ಮಕೆತ್ತನೆ ಬೇರೆ.

ಅನಾದಿಕಾಲದಿಂದಲೂ ಮನುಷ್ಯಸಂಸ್ಕೃತಿಯ ಆರಂಭದಿಂದಲೂ ಅವನನ್ನು-ಎರಡು ವಿಧದ ಶಕ್ತಿಗಳು ಕಾಡಿವೆ. ತನ್ನ ಬಾಹ್ಯ ಜಗತ್ತನ್ನು ನಡೆಯಿಸುವ ಶಕ್ತಿಗಳನ್ನು ಕುರಿತಾದ ಭಯ ವಿಸ್ಮಯ, ಭಕ್ತಿ ಒಂದಾದರೆ, ತನ್ನ ನಿತ್ಯ ಜಗತ್ತಿನ ಹಗೆಗಳನ್ನು ಗೆಲ್ಲುವ ಆಸೆ ಇನ್ನೊಂದು. ಮೊದಲನೆಯ ವರ್ಗದಲ್ಲಿ- ನಮ್ಮ ದೇವಾನುದೇವತೆಗಳೆಲ್ಲರೂ ಸೇರುತ್ತಾರೆ. ಈ ಅತಿಮಾನವ ವ್ಯಕ್ತಿಗಳಿಗೆ ವೈರಿಗಳೂ ಇದ್ದಾರೆ. ಅವರೆಂದರೆ ಅಸುರರು. ಇವರುಭಯತರನ್ನು ಕುರಿತು ಹೆಣೆದ ಸಾವಿರಾರು ಪುರಾಣಕಥನಗಳಿವೆ. ಅವನ್ನು ನಂಬಿ, ನಿಜವೆಂದೇ ತಿಳಿದು ಬಾಳಿದ ಮಾನವರೆಲ್ಲರಿಗೂ- ಆ ಪೌರಾಣಿಕ ವ್ಯಕ್ತಿಗಳೂ ಕಲಾಸೃಷ್ಟಿಗೆ ಪ್ರೇರಣೆ ಕೊಟ್ಟಿದ್ದಾರೆ. ಅವನ್ನು ಸೃಷ್ಟಿಸಿದ ವ್ಯಕ್ತಿಗಳು ಕೆಲವರೇ ಆದರೂ, ಅವರದೇ ಸಂಸ್ಕೃತಿಯಿಂದ ರೂಪುಗೊಂಡ ಮನಸುಳ್ಳ ಅವರ ಜನಸಮುದಾಯದ ಮೆಚ್ಚಿಕೆಗೆ ಅವು ಗುರಿಯಾಗುವ ಕೆಲಸ ಸುಲಭ! ಈ ಸಾಂಸ್ಕೃತಿಕ ಸಂಬಂಧದಿಂದ ಶಿಲ್ಪ ಇಂಥದು ಎಂದು ತಿಳಿಯುವ ಕೆಲಸ ಸುಲಭವಾಗುತ್ತದೆ. ಆದರೆ ಶಿಲ್ಪದ ಸೊಗಸು ತಿಳಿಯಬೇಕಾಗಿಲ್ಲ; 'ವಿನಾಯಕ'ನೆಂದೊಡನೆಯೇ 'ವಿಘ್ನರಾಜಾಯ' ಎಂಬ ಮನಸ್ಸುಗಳಿಗೆ, ಅವರ ಭಕ್ತಿ, ಶಕ್ತಿಗಳ ಆವೇಶದಿಂದಾಗಿ ಶಿಲ್ಪದ ಕುಂದು ಕೊರತೆಗಳು [illegible] ಬಹುದು. ಆದರ ಸೊಗಸೂ ಕಾಣಿಸದಾದೀತು. ನಮ್ಮ ದೇವರುಗಳನೇಕರಿಗೆ ಇದ್ದ ಶಿಲ್ಪಾಕೃತಿ ಸಾಲದೆಂಬುದಕ್ಕೆ, ನವರಾತ್ರಿಯ ದಿನ ದಿನಕ್ಕೊಂದೊಂದು ಅಲಂಕಾರ ಮಾಡಿ ಪೂಜಿಸುವ ಪದ್ಧತಿ, ಈ ಶಿಲ್ಪ ಸೌಂದರ್ಯದ ಪಾಲಿನ ಕುರುಡುತನಕ್ಕೆ ಹಿರಿಯ ಸಾಕ್ಷಿಯೆನ್ನಬಹುದು.

ಇನ್ನೊಂದು ಬಗೆಯ ಶಿಲ್ಪದ ಮಾದರಿಯನ್ನು ನಾವು ಆದಿಮಾನವ ಸಮಾಜಗಳಲ್ಲಿ ಕಾಣುತ್ತೇವೆ. ಗೊಂಬೆ ಜೀವಂತ ಪ್ರಾಣಿಯ ಪ್ರತೀಕ. ಅದೇ ಇದು. ಆದುದರಿಂದ ಅದರ ಚಿತ್ರವನ್ನೋ, ಗೊಂಬೆಯನ್ನೋ ಮಾಡಿ ಇರಿದು, ಕೊಂದರೆ, ನಾಳಿನ ದಿನ ಬೇಟೆಯಲ್ಲಿ ಆ ಪ್ರಾಣಿಯನ್ನು ಗೆಲ್ಲುವುದು ಸುಲಭ- ಎಂಬ ಆತ್ಮವಿಶ್ವಾಸ ಬರುತ್ತದೆ. ಇದೊಂದು ಬಗೆಯ ಪೂಜೆ. ಇದರಲ್ಲಿ ತನ್ನ ಆಹಾರವೋ, ಹಗೆಯೋ ಆದ ಪ್ರಾಣಿಗಳ ಶಕ್ತಿಯ ನಿಕಟ ಪರಿಚಯವಿರುತ್ತದೆ! ಅವನ್ನು ಕುರಿತ ಭಯ, ಅವುಗಳ ಶಕ್ತಿ ಮೊದಲಾದುವುಗಳ ಅನುಭವದಿಂದ ಸೃಷ್ಟಿಗೊಳ್ಳುವ ಗೊಂಬೆಗಳು, ಚಿತ್ರಗಳು ಉತ್ತಮ ಶಿಲ್ಪಗಳಾಗಬಲ್ಲುವು-ಆಗಿವೆ. ಕರ್ನಾಟಕದಲ್ಲೇ ಅಂಥ ಉದಾಹರಣೆಗಳು ಬಹಳ ಸಿಗಲಾರವು. ಆದರೆ ಕಣ್ಣಿಗೆ ಕಾಣಸಿಗವ ಹಗೆಯಾದ 'ಮೈಲಿಗೆ' ರೋಗಕ್ಕೆ ಮಾನವ ಆಕೃತಿಯನ್ನು ಸಲ್ಲಿಸಿ, ಮಾರಿಯನ್ನಾಗಿ ಮಾಡಿ, ಮರದಲ್ಲಿ ಕೆತ್ತಿ, ಊರಿಂದೂರಿಗೆ ಅಟ್ಟುವ ಸಂಪ್ರದಾಯ ಇನ್ನೂ ಉಳಿದಿದೆ. ಕಾಣದ ಹಗೆಯಾದುದರಿಂದ ಈ 'ಮಾರಿ' ಅಂಥ ಬೆದರು ಮಾರಿಯಾಗಿಲ್ಲ.

[illegible] ಭಾವ ಜೀವನ ನಂತೀಯ ಪ್ರೇರಣೆಗಳಿಂದಲೇ ನಮ್ಮ ದೇಶದಲ್ಲಿ ಬಹಳವಾಗಿ ಆಧಿಕ್ಯ ಸಲ್ಲಪಟ್ಟಿದ್ದರೂ ಅನ್ಯಕ್ಷೇತ್ರಗಳನ್ನು ಅದು ಆವರಿಸಿಲ್ಲವೆಂದಲ್ಲ. ವೀರರ ಮತ್ತು ವೀರಪತ್ನಿಯರ ಮೆಚ್ಚಿಕೆಯನ್ನೇ ತೋರಿಸುವುದರಲ್ಲಿ ಅವು ಕಂಡುಬಂದಿವೆ. ಇಂಥ ಸಾವಿರಾರು ವೀರಗಲ್ಲು, ಮಾಸ್ತಿಗಲ್ಲುಗಳಲ್ಲಿ ಸಾಂಕೇತಿಕ ಸ್ವರ್ಗಾರೋಹಣದ ವಿಷಯವೇ ಮುಖ್ಯವಾಗಿ ಬದುಕಿನ 'ವೀರ' ಚಿತ್ರಿತವಾಗದಿರುವ ನಿದರ್ಶನಗಳೂ ಧಾರಾಳ!

ಶಿಲ್ಪ-ಅದ್ದ ಕಸುಬಾಗುವಷ್ಟು ಸುಲಭ ವೃತ್ತಿಯಲ್ಲ; ಅದರಲ್ಲಿಯೂ ಕೆತ್ತನೆಯ ಕೆಲಸ. ಉಳಿ, ಚೇಣಿಗಳ ಮೇಲಿನ ಹತೋಟಿ, ಆಕಾರ ಬರೆಯಬಲ್ಲ ಕೌಶಲ ತುಂಬ ಅಭ್ಯಾಸ, ಪರಿಶೀಲನೆಗಳಿಂದ ಬರುವ ವೃತ್ತಿ. ಅದು ತಿಂಗಳು ತಿಂಗಳು ಹಿಡಿಯಬಹುದಾದ ಕೆಲಸವೂ ಹೌದು. ಹಾಗಾಗಿ, ಅದನ್ನು ಜೀವನದ ವೃತ್ತಿಯಾಗಿ ಮಾಡಿಕೊಂಡು ಬದುಕಲು ಒಬ್ಬನ ಕೃತಿಗಳನ್ನು ಕೊಳ್ಳುವವರು, ಅವನನ್ನು ಮೆಚ್ಚಿ ಮಾಡಿಸುವವರು ಬೇಕು. ಅಂಥ ರಾಜರುಗಳು ಕರ್ನಾಟಕದಲ್ಲಿ ಹಲವಾರು ಮಂದಿ ಆಗಿ ಹೋಗಿದ್ದುದರಿಂದಲೇ ನಮಗೆ ನೂರಾರು ಉತ್ತಮ ಕೃತಿಗಳು ಇಂದಿಗೂ ದೊರೆಯುತ್ತವೆ. ದೇವಾಲಯ ಬಸದಿಗಳನ್ನು ಭಕ್ತಿಯ ಕಾಣಿಕೆಯಾಗಿ ಕಟ್ಟಿಸುವ ಜನಸಮುದಾಯವು ಇತ್ತೆಂದೇ ನಾಡಿನಲ್ಲಿ ಎಲ್ಲಿ ನೋಡಿದರಲ್ಲಿ ಗುಡಿಗಳು ಕಾಣಸಿಗುತ್ತವೆ. ಇಂದೂ ಅಂಥ ಭಕ್ತಿಯಿದೆ. ಇಂದಿನ ಕೊರತೆ— ಆ ಬಗೆಯ ಕಸುಬುದಾರರದು; ಶಿಲ್ಪಿಗಳದ್ದು; ಮತ್ತು, ನಿಶ್ಚಿತವಾದ ಯಾವುದೇ ಶೈಲಿಯ ಅರಿವಿಲ್ಲದೆ ಹೋದುದು.

ದುರ್ಗಾ ದೇವಾಲಯ, ಐಹೊಳೆ

ಕಾಲಮಾನದ ದೃಷ್ಟಿಯಿಂದ ನಾನು ಕಂಡು ಮೆಚ್ಚಿದ ಅತಿಪೂರ್ವದ ಕೃತಿ ಬನವಾಸಿಯ ಮಧುಕೇಶ್ವರ ಗುಡಿಯ ಆವರದಲ್ಲಿದೆ ಕ್ರಿ. ಶ. ೧೫೦ ರ ಸುಮಾರಿನ ಈ ಕೃತಿ ಐದು ಹೆಡೆಯ ನಾಗನದು; ಒಬ್ಬ ಬೌದ್ಧ ರಾಜಕುವರಿ ಅಲ್ಲಿನ ವಿಹಾರಕ್ಕೆ ಕೊಟ್ಟ ಕಾಣಿಕೆ. ನಾಗ ಕನ್ನಡ ನಾಡಿನ ಆದಿದೇವತೆಗಳಲ್ಲೊಂದು; ಅಂತೆಯೇ ಅತಿಪೂರ್ವದ ಬೌದ್ಧ ಡಾಗೋಬಗಳಲ್ಲೂ [ಅಮರಾವತಿಯಲ್ಲಿದೆ] ಅದು ಕಾಣಸಿಗುತ್ತದೆ. ಬನವಸೆಯ ನಾಗನ ಕಲ್ಲಿನ 'ನಾಗ' ಬಲು ಶಕ್ತಿಯುತವಾದ, ಸುಂದರವಾದೊಂದು ಕೃತಿಯೆಂದು ನನಗನಿಸುತ್ತದೆ

ಅಲ್ಲಿಂದ ಶಿಲ್ಪದ ನಂದನವನವೇ ಆಗಿರುವ ಬಾದಾಮಿ, ಪಟ್ಟದಕಲ್ಲು, ಐಹೊಳೆಗಳಿಗೆ ನಾವು ಕಣ್ಣನ್ನು ಹೊರಳಿಸಬೇಕು. ಶಿಲ್ಪದ ಅತಿ ಉಜ್ವಲ ಚರಿತ್ರೆ ಅಲ್ಲಿ ಹಾಸಿ, ಹರಡಿದೆ. ತೀರ ಮೊದಲಿನ ಒಂದು ಕೃತಿ ಮೇಣಬಸದಿಗೆ ಸಮೀಪದ ನೈಸರ್ಗಿಕ ಗುಹೆಯೊಂದರಲ್ಲಿ ಕಾಣಿಸುವ ಭಗ್ನಕೃತಿ—ಪದ್ಮಪಾಣಿ ಬುದ್ಧನದು. ಭಗ್ನಾಂಶ ಅಧಿಕವಾದುದರಿಂದ, ಅದನ್ನು ಕುರಿತು ಹೆಚ್ಚಿಗೆ ಹೇಳಲಾರೆ.

ಅನಂತರ ಐಹೊಳೆ ಮತ್ತು ಬಾದಾಮಿ ಗುಹೆ ದೇವಾಲಯಗಳಲ್ಲಿ ಕಾಣಬಹುದಾದ ನೂರಾರು ಕೃತಿಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಇವುಗಳ ಕಾಲಮಾನದ, ಆರು ಏಳು ಶತಮಾನಗಳ ವ್ಯಾಪ್ತಿಯುಳ್ಳವು. ಇಲ್ಲಿ ನಾವು ಒಂದೇ ಶೈಲಿಯನ್ನು ಕಾಣುವುದಿಲ್ಲ. ಕನಿಷ್ಠ ಆರೇಳು ಶೈಲಿಗಳ ಮಾದರಿಗಳಿವೆ. ಶಿಲ್ಪದ ಗಾತ್ರಗಳನ್ನು ಸಹ ಮೂರು ವಿಭಾಗವಾಗಿ ಮಾಡಬಹುದು. ಸಣ್ಣವು, ಮಧ್ಯಮ ತರಗತಿಯವು, ದೊಡ್ಡವು ಅಲ್ಲಿ ಸೇರಿವೆ. ಮಾಲೆಗಿತ್ತಿ ದೇವಾಲಯದ ಗೋಡೆಗಳ ಉತ್ಕೀರ್ಣ ಶಿಲ್ಪಗಳು ಸಣ್ಣವಕ್ಕೆ ಉದಾಹರಣೆ; ದುರ್ಗಾದೇವಿ [ಐಹೊಳೆ] ಗೋಡೆಯ ಮತ್ತು ಸ್ತಂಭಗಳ ಶಿಲ್ಪಗಳು ಮಧ್ಯಮ ತರಗತಿಯವು; ಬಾದಾಮಿ ಗುಹೆಯ ವಿಗ್ರಹಗಳು ದೊಡ್ಡ ಮಾದರಿಯವು

ಸಣ್ಣ ಭಿತ್ತಿಗಳಲ್ಲಿ—ಮಾಲೆಗಿತ್ತಿ ದೇವಾಲಯದ ಗೋಡೆ ಒಂದರಲ್ಲೇ ಮೂರು ಭಿನ್ನ, ಭಿನ್ನ ಶೈಲಿಗಳನ್ನು ಗುರುತಿಸಬಹುದು. ಹೊರ ಮಗ್ಗುಲ ಆ ಚಿತ್ರಗಳು ಗಾಳಿ ಮಳೆಗಳಿಗೆ ಸವೆದುಹೋಗಿವೆಯಾದರೂ ಅವುಗಳಲ್ಲಿ ಕಂಡು ಬರುವ ರೇಖಾವಿನ್ಯಾಸ, ಪ್ರಬಂಧಗಳು ಅಪೂರ್ವವೆನಿಸುತ್ತವೆ. ಅವುಗಳ ಕೆಳಗಡೆಯಲ್ಲೇ ನಗು ಬರಿಸುವ ಡೊಳ್ಳುಬೆಳೆದ ಕುಬ್ಜರುಗಳ ಚಿತ್ರಾವಳಿಯಿದೆ. ಇದು ಇನ್ನೊಂದು ಮಾದರಿ. ಈ ಮಾದರಿಯನ್ನು ಮುಂದೆ ಪಟ್ಟದಕಲ್ಲಿನಲ್ಲೂ ಕಾಣಬಹುದು.

ಐಹೊಳೆಯಲ್ಲಿ ಪ್ರಾಯಶಃ ಈ ಕಲೆ ಹುಟ್ಟಿಕೊಂಡಿರಬೇಕು. ಅಲ್ಲಿನ ಗುಹಾಲಯದ ಬಳಿ ಬಿದ್ದಿರುವ ಹಾಸುಗಲ್ಲಿನಲ್ಲಿ ಶೇಷಶಾಯಿ ವಿಷ್ಣುವಿನ ಆಕಾರವೊಂದಿದೆ; ಅದರಂತೆ ನಾಲ್ಕು ಕೈಗಳುಳ್ಳ ಹೆಣ್ಣುದೇವತೆಗಳಿಬ್ಬರು ಜತೆಯಲ್ಲಿ ಕುಳಿತ, ಜೀರೊಂದು ಉದಾಹರಣೆಯಿದೆ. ಇವು ಲಾಡಖಾನ ದೇವಾಲಯಕ್ಕಿಂತ ಪೂರ್ವದವು [ಕ್ರಿ. ಶ. ೪೫೦] ಇರಬೇಕು. ಈ ಗಂಭೀರ ಮೂರ್ತಿಗಳಲ್ಲಿ ಸಾಮಾನ್ಯ ಜನ ಬಯಸುವ ಚಂದವಿಲ್ಲ; ಆದರೆ ಶಿಲ್ಪಕ್ಕೆ ಬೇಕಾದ ಶಕ್ತಿ, ಓಜಸ್ಸುಗಳಿವೆ.

ನಟರಾಜ-ಬಾದಾಮಿ

ದುರ್ಗಾದೇವಿ ಗುಡಿಯ ಗೋಡೆ, ಕಂಭಗಳಲ್ಲಿ ಎರಡು ಪ್ರತ್ಯೇಕ ಶೈಲಿಗಳನ್ನು ಕಾಣಬಹುದು. ಒಂದು ಗ್ರೀಕ್ ಶಿಲ್ಪದಂತೆ—ದೇಹ ಸೌಂದರ್ಯ ತರಂಗಿತೆಯಿಂದ ಉಜ್ವಲವಾಗಿ ಕಾಣಿಸುವ—ಸರಳ, ಸುಂದರ, ಶಕ್ತಿಯುತ ವಿಗ್ರಹಗಳು. ಇಲ್ಲಿನ ನಾರಸಿಂಹ, ವರಾಹ ಇತ್ಯಾದಿ ವಿಗ್ರಹಗಳ ಚೆಲುವು ಈ ರೀತಿಯದು.

ಎರಡನೆಯ ಶೈಲಿ-ಸ್ತಂಭಗಳ ಮೇಲೆ ಚಿತ್ರಿಸಿದ 'ಶೃಂಗಾರಪ್ರಿಯರ'ದ್ದು. ಈ ಚಿತ್ರಗಳು ಗೊಡ್ಡಾಗಿ ಕಾಣಿಸುತ್ತವೆ.ಆದರೂ ಭಾವಪೂರಿತವಾದುವೆ. ಇವಗಳ ಮಾದರಿಯನ್ನೇ ಹುಚ್ಚಪ್ಪನ ಮಠದ ಕಂಭಗಳ ಮೇಲೂ ಕಾಣಬಹುದು. ಇವುಗಳಲ್ಲಿ ಶೃಂಗಾರಭಾವಕ್ಕೆ ಅನಿವಾರ್ಯವಾದ ಲಾಲಿತ್ಯ ಕಾಣಿಸದು; ಕಾಮಚೇಷ್ಟೆಯಷ್ಟು ಕಾಣಿಸುತ್ತದೆ.

ರಾವಣ ಗುಹೆ[ಐಹೊಳೆ]ಯ ಉತ್ಕೀರ್ಣ ಶಿಲ್ಪಗಳೇ ದೊಡ್ಡ ಗಾತ್ರದುವು, ಮನುಷ್ಯ ಪ್ರಮಾಣ ಮೀರಿಸಿದುವು; ಶಿವ, ದುರ್ಗೆಯರು ಇಲ್ಲಿ ಚಿತ್ರಿತರಾಗಿದ್ದಾರೆ.ಇವು ಲಲಿತಕ್ಕಿಂತ ಅಧಿಕವಾಗಿ 'ಗಂಭೀರ' ಭಾವದುವು. ಇದೇ ಗುಹೆಯ ಮುಚ್ಚಿಗೆಯಲ್ಲಿರುವ ನವಿಲನ್ನೇರಿದ ಸುಬ್ರಮಣ್ಯನ ಕೆತ್ತನೆ ಅನುಪಮವಾದೊಂದು ಕೃತಿ; ಅದರ ತರಂಗಿತ ಲಹರಿ ವಿಶೇಷ ಸುಂದರವಾದುದು.

ಇದೇ ಐಹೊಳೆಯಲ್ಲಿ ಮೂರು ನಾಲ್ಕು ಬೃಹದಾಕಾರದ ಮುಚ್ಚಿಗೆ ಚಿತ್ರಗಳು ಸಿಗುತ್ತವೆ. ಕೊಂತಿ ಗುಡಿಯಲ್ಲಿ ತ್ರಿಮೂರ್ತಿಗಳ ಚಿತ್ರಗಳಿವೆ; ಒಂದು ಜೈನ ಗುಡಿಯಲ್ಲಿ ಸ್ಥಳಾಂತರಿಸಲ್ಪಟ್ಟ ಶಿವಪಾರ್ವತಿಯರ ಮೆರವಣಿಗೆಯಿದೆ. ಕೊನೆಯದರಲ್ಲಿ-ಚಿತ್ರಗತ ವ್ಯಕ್ತಿಗಳ ಸಂಖ್ಯೆ ಆರೆಂಟಾದರೂ ಇದೆ. ಶಿವ, ಪಾರ್ವತಿ, ನಂದಿ, ಹಾವುಗಳು, ಕುಬ್ಜರು, ದೇವತೆಗಳು ಎಲ್ಲರೂ ಸೇರಿ ಒಂದೇ ರಾಗಾಲಾಪದ ಸ್ವರಮೇಳದಂತೆ ಯೋಜನೆಗೊಂಡ ಸೊಬಗು ಕಾಣಿಸುತ್ತದೆ.

ದುರ್ಗಾಗುಡಿಯ ದ್ವಾರದ ಚೌಕಟ್ಟನಲ್ಲಿ-ಕೆಲ ಕೆಲವು ಲಲಿತವೆನ್ನಲಾಗದ ವಿಗ್ರಹಗಳಿವೆ. ಅವು ಲಲಿತವಾಗಿರದಿದ್ದರೂ ಅವುಗಳ ಗುಂಪಿನಲ್ಲಿ ಕಂಡು ಬರುವ ತೋಲ ಅವುಗಳ ಸರಳ ರೇಖಾಶಕ್ತಿ ಮನಸ್ಸನ್ನು ಮೆಚ್ಚಿಸುತ್ತವೆ.

ಬಾದಾಮಿಯ ಗುಹೆಗಳಲ್ಲಿ ಎರಡನೇ ಮತ್ತು ಮೂರನೇ ಗುಹೆಗಳು ಪ್ರಧಾನವಾದವು. ಅಲ್ಲಿನ ಬೃಹದಾಕಾರದ-ನಟರಾಜ, ವಿಷ್ಣು, ವರಾಹ, ತ್ರಿವಿಕ್ರಮ, ನಾರಸಿಂಹ ವಿಗ್ರಹಗಳ ಭವ್ಯತೆ ಅಸಾಮಾನ್ಯವಾದುದು; ಅವು ಅಷ್ಟೇ ಶಕ್ತಿಯುತವೂ ಆಗಿವೆ

ಇಲ್ಲಿಂದ ಮುಂದೆ ಕಾಣಿಸುವ, ಇದೇ ಶೈಲಿಯ ರಚನೆಗಳನ್ನೇ ನಾವು ಪಟ್ಟದಕಲ್ಲಿನ

ಉಗ್ರ ನರಸಿಂಹ, ಹಂಪಿ

ವಿರೂಪಾಕ್ಷ ದೇವಾಲಯ, ಪಾಪನಾಥನ ಗುಡಿ, ಮಲ್ಲಿಕಾರ್ಜುನ ಗುಡಿಗಳ ಒಳಗೂ, ಹೊರಗೂ ಕಾಣಬಹುದು. ಅವು ಮುಂದಿನ [೮-೯] ಎರಡು ಶತಮಾನದವು. ಅಲ್ಲಿ ಹಲವಾರು ಉತ್ತಮ ಮಾದರಿಗಳಿವೆ ಅವನ್ನು ಕೆತ್ತಿದ ಕೆಲವರ ಹೆಸರುಗಳೂ ಇವೆ. ಅವೆಲ್ಲವೂ ದಕ್ಷಿಣ ದೇಶದ ರೂವಾರಿಗಳ ಕೆಲಸವೆಂದೇ ನಾವು ಭ್ರಮಿಸಬೇಕಿಲ್ಲ. ದುರ್ಗಾಗುಡಿ, ಮಾಲೆಗಿತ್ತಿ ಗುಡಿಗಳಲ್ಲಿ ಕಾಣಿಸದ ಯಾವ ನವೀನ ಶಕ್ತಿಯೂ ಅಲ್ಲಿ ಇಲ್ಲ

ನಾನು ಇಲ್ಲಿನ, ಶಿಲ್ಪಿಗಳು ಪ್ರಕಟಿಸಿದ ಸ್ವಬುದ್ಧಿಯನ್ನು ವಿಶೇಷವಾಗಿ ಮೆಚ್ಚಿದ್ದೇನೆ. ಅವರು ಅನುಸರಣೆಗೆ ಮನಸೋತವರಲ್ಲ. ಒಂದೇ ವಿಷಯವನ್ನೇ ಚಿತ್ರಿಸಿದ ಆರೆಂಟು ಮಂದಿ ಶಿಲ್ಪಿಗಳೂ ತಂತಮ್ಮ ಸ್ವಂತ ಮನೋಭಾವದ ವಿಲಾಸವನ್ನು ತೋರಿಸುವುದು ಇಲ್ಲಿನ ವೈಶಿಷ್ಟ್ಯ. 'ನಾರಸಿಂಹ' ಒಂದೇ ವಿಷಯ. ಅದೇ ನಾರಸಿಂಹನನ್ನೆ ಆರೆಂಟು ಬಗೆಗಳಲ್ಲಿ ತೋರಿಸಿದ್ದಾರೆ ಕುಳಿತು ಹಿರಣ್ಯಕಶಿಪುವನ್ನು ತೊಡೆಯ ಮೇಲೆ ಇರಿಸಿಕೊಂಡ ನಾರಸಿಂಹ ಇದ್ದಾನೆ. ನಿಂತು ಸಿಗಿವವನಿದ್ದಾನೆ; ಅವನ ಭಕ್ತರೊಡನೆ ನಿಂತವನಿದ್ದಾನೆ; ನಾರಸಿಂಹ ಒಬ್ಬನೇ ನಿಂತಿದ್ದಾನೆ; ನಾರಸಿಂಹ ನಿಂತು ವೈರಿಯನ್ನೇ ಉರುಳಿಸಿದ್ದಾನೆ; ವೈರಿಯು ಹಿಂದಿಂದ ಬಂದು ಭುಜಕ್ಕೆ ಕೈಯಿರಿಸಿಯೂ ಇದ್ದಾನೆ-ಗಾತ್ರದಲ್ಲಿ ಚಿತ್ರಣದ ಸನ್ನಿವೇಶದ ಆಯ್ಕೆಯಲ್ಲಿ ಅವರು ತಮಗೆ ಮೆಚ್ಚುವ ಭಂಗಿಗಳನ್ನೇ ಪ್ರದರ್ಶಿಸಿದ್ದಾರೆ.

ಈ ದೃಷ್ಟಿಯಿಂದ-ದುರ್ಗೆ, ನಟರಾಜ ಮೊದಲಾದ ಅನ್ಯ ವಿಷಯಗಳನ್ನೇ ಪರಿಶೀಲಿಸಿದರೂ ನಾವು ಸಮಾಧಾನ ಪಡುವಂತಿದೆ. ಒಂದೇ ವಿಷಯವನ್ನು ಹಲವು ಬಗೆಗಳಿಂದ ಚಿತ್ರಿಸಿದ್ದನ್ನು ಕಾಣುತ್ತೇವೆ

ಮರಳುಗಲ್ಲಿನ ಮಹಾಶಿಲ್ಪಿಗಳ ಕಾಲ ಇಲ್ಲೇ ಪ್ರವರ್ಧಮಾನ ಅವಸ್ಥೆಗೆ ಬಂದು ಹೋಯಿತೋ, ಏನೋ. ಇವರು ಯಾರೂ ತಮ್ಮ ವಿಗ್ರಹಗಳ ಮೇಲೆ ಹೊಯಿಸಳ ಶಿಲ್ಪಿಗಳಂತೆ ಬಳೆ, ಉಡ್ಡಾಣ, ಸರ ಮೊದಲಾದ ಆಭರಣಗಳನ್ನು ತೂಗಿ ತೂಗಿ ಶಿಲ್ಪದ ಶರೀರದ ರೇಖಾವಿನ್ಯಾಸಗಳನ್ನು ಕೆಡಿಸಿದವರಲ್ಲ, ಮಾತ್ರವಲ್ಲ ಹೂವಿನ ಸರ, ಹಾವುಗಳಂಥ ಭೂಷಣಗಳನ್ನು ಬಳಸಿದಾಗ ಅವುಗಳ ರೇಖೆ. ಗತಿಗಳಿಗೂ ದೇಹ ವಿನ್ಯಾಸಗಳಿಗೂ ಮೇಳವನ್ನೇ ತಂದುಕೊಟ್ಟಿದ್ದಾರೆ. ಹಳೇಬಿಡು, ಬೇಲೂರುಗಳಲ್ಲಿ ಇದರ ಅಭಾವ ಬಹಳ.

ಮುಂದೆ ಬಂದ ಬಳಪದಲ್ಲಿನ ಕೆತ್ತನೆಗಳಲ್ಲಿ ನಾವು ಕೌಶಲವನ್ನು ಧಾರಾಳವಾಗಿ ಕಾಣುತ್ತೇವೆ. ಅಲಂಕರಣೆ ಶಿಲ್ಪವನ್ನೇ ನುಂಗಿ ಬಿಟ್ಟುದನ್ನು ಕಾಣುತ್ತೇವೆ. 'ಶಾಸ್ತ್ರ' ಸತ್ವವನ್ನು ಹೀರಿದ ಉದಾಹರಣೆಯೇ ನಮ್ಮ ಎಲ್ಲ ಕಲೆಗಳ ಅವನತಿಯ ಕತೆಯೂ ಆಗಿದೆ

ಶಿಲೆ ಕೆಲಸಕ್ಕೆ ಕಠಿಣವಾದವಸ್ತು-ಎಂದೆ ಶುರು ಮೊದಲು. ಅದನ್ನು ಹಿಡಿಯುವಾತ ಸಂಯಮಶೀಲನಾಗಬೇಕು. ಸ್ಥೂಲದ ಭವ್ಯತೆಯ ಕನಸನ್ನೆ ಕಾಣಲು ಶಕ್ತನಾಗಬೇಕು. ಅಂಥ ಕನಸೊಂದು ದೀರ್ಘ ಕಾಲದ ಬಳಿಕ-ಹಂಪಿಯಲ್ಲಿ ರೂಪುಗೊಂಡುದನ್ನು ಕಾಣಬಹುದು. ಅಲ್ಲಿ ಗಾತ್ರವೂ ಇದೆ; ಓಜಸ್ಸೂ ಇದೆ. ನರಸಿಂಹ, ಲಕ್ಷ್ಮೀಯರ ಭಗ್ನ ಪ್ರತಿಮೆಯೊಂದರಲ್ಲಿ. ಅವಶೇಷಗಳು ನಷ್ಟವಾದ ಭಾಗಗಳ ಲಲಿತ, ಅರ್ಧಪೂರ್ಣ ರೇಖೆಗಳನ್ನು ನಮ್ಮೆದುರಿಗೆ ಈಗಲೂ ತಂದೊಡ್ಡುತ್ತಿವೆ.

ಮಿದುಗಲ್ಲಾದ ಬಳಪದಲ್ಲಿ ಕೆತ್ತಿದ ಶಿಲ್ಪಗಳ ಸಂಖ್ಯೆಗೆ ನಮ್ಮಲ್ಲಿ ಲೆಕ್ಕವಿಲ್ಲ. ಆದರೆ, ಸಂಖ್ಯೆ ಶಿಲ್ಪವಾಗಬೇಕಿಲ್ಲ ಹಳೇಬೀಡು, ಬೇಲೂರು, ಸೋಮನಾಥಪುರದ ದೇವಾಲಯಗಳ ಗೋಡೆಗಳೆಲ್ಲವೂ ಅಡಿಯಡಿಗೂ ಶಿಲ್ಪದಿಂದಲೇ ತುಂಬಿವೆ. ಅಲ್ಲಿನ ವಿಪುಲತೆಗೆ ಸಮನಾಗಿ ವಿಷಯಗಳ ವೈವಿಧ್ಯವಿದ್ದರೂ-ಶೈಲಿಯ, ಶಕ್ತಿಯ, ಸ್ಫೂರ್ತಿಯ ವೈವಿಧ್ಯ ಮಾತ್ರ ಕಾಣಿಸದು. ಸೂಕ್ಷ್ಮ, ಕಸುಬುದಾರಿಕೆಯೇ ಶಿಲ್ಪವೆಂಬ ಭ್ರಮೆಯನ್ನೇ ಇವು ಹುಟ್ಟಿಸುತ್ತವೆ. ಯಾವುದೇ ಶಿಲ್ಪಶೈಲಿಯಾದರೂ ಹೀಗೆಯೇ ಸರಿ. ನಮಗೆ ಬರಿಯ ಅನುಕರಣೆಯೇ ದಾರಿಯಾದರೆ. ಉಳಿದ ವಿಚಾರಗಳು ತಳಕ್ಕೆ ಸರಿಯುತ್ತವೆ. ಈ ಮೂರು ಸ್ಥಳಗಳ ಗೊಂಬೆಗಳ ಸಮುದ್ರದಲ್ಲಿ ಸ್ಫೂರ್ತಿಯುತವಾದ ಕೆಲವೇ ವಿಗ್ರಹಗಳನ್ನು ಹುಡುಕು

ಬುದ್ಧ

ಮಂಜುಶ್ರೀ

ಅವಲೋಕಿತೇಶ್ವರ

ಕದ್ರಿ, ಮಂಗಳೂರು

ವುದಕ್ಕೂ ಪ್ರಯಾಸವಾಗುತ್ತದೆ. ಹೆಜ್ಜೆ ಹೆಜ್ಜೆಗೂ ಕ ಪುರು ಕೆಲಸ, ರೂಪ...ಗಳ ಅನುಕರಣೆ ಕಣ್ಣನ್ನು ಜಡಗೊಳಿಸುತ್ತದೆ. ಸಂಪ್ರದಾಯ. ಕಲಾವಿದರ ಮೇಲಿನ ಹೊರೆಯಾಗಿದೆ ಈ ಸ್ಥಳದಲ್ಲಿ.

ಈಗ ಶಿಲ್ಪ ಮಾಧ್ಯಮದ ದೃಷ್ಟಿಯಿಂದ ನಮ್ಮ ಕಣ್ಣನ್ನು ನಾವು ಕಂಚಿನ ಪ್ರತಿಮೆಗಳ ಕಡೆಗೆ ಹೊರಳಿಸುವ. ಕಂಚುಗಾರಿಕೆಯೂ ನಮ್ಮ ದೇಶದಲ್ಲಿ ದೀರ್ಘಕಾಲದಿಂದಲೂ ಕಸುಬು ಗಾರಿಕೆಯಾಗಿಯೇ ಬಂದಿದೆ. ಪಾತ್ರೆ, ಪರಡಿಗಳ ಜತೆಗೆ ದೇವರ ಪೂಜೆಯ ವಿವಿಧ ರೀತಿಯ ಆರತಿಗಳ ನಿರ್ಮಾಣವು ಅವರ ಕಸುಬಿಗೆ ಸೇರಿದ್ದು. ಇವುಗಳಲ್ಲದೆಯೇ ಮನೆಗಳಿಗೆ, ದೇವಾಲಯಗಳಿಗೆ, ಪೂಜೆಗೆ ಬೇಕಾದ ವಿಗ್ರಹಗಳ ಎರಕವನ್ನು ಅವರು ಹಿಂದಿನಿಂದ ಮಾಡುತ್ತ ಬಂದಿದ್ದಾರೆ. ಇಲ್ಲಿಯೂ ಹೆಚ್ಚಾಗಿ ಅನುಕರಣೆಯನ್ನು ಶಾಸ್ತ್ರದ ಇತಿಮಿತಿಯನ್ನು ಕಾಣಬಹುದು. ಇವು ಹೆಚ್ಚಾಗಿ ಚಿಕ್ಕ ವಿಗ್ರಹಗಳು.

ಕೆಲವೆಡೆ, ದೇವಾಲಯಗಳ ಹೊರಗೆ, ಕಂಚಿನ ದ್ವಾರಪಾಲಕರನ್ನು (ಕೋಟೇಶ್ವರ, ಬಸರೂರು, ಕೊಲ್ಲೂರು) ಕಾಣಬಹುದು. ಇವುಗಳಲ್ಲಿ ಸ್ವತಂತ್ರ ಶೈಲಿಯನ್ನು, ಶಕ್ತಿಯನ್ನು ಗುರುತಿಸಬಹುದಾದ ವಿಗ್ರಹಗಳು ಕಾಣಸಿಗಬಹುದು. ನನ್ನ ದೃಷ್ಟಿಗೆ ಬಿದ್ದ ಕೆಲವು ವಿಗ್ರಹಗಳಲ್ಲಿ—ನಾನು ಮಂಗಳೂರಿನ ಕದ್ರಿ ದೇವಾಲಯದ ಪ್ರತಿಮೆಗಳಿಗೆ ಅತಿ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತೇನೆ. ಇವು ಅಲ್ಲಿ ಹಿಂದೆ ಪೂಜೆಯ ವಿಗ್ರಹಗಳೇ ಆಗಿದ್ದಿರಬೇಕು. ಅಲೂಪ ದೊರೆಯೊಬ್ಬ ಕದರಿ ವಿಹಾರದಲ್ಲಿ ೩ ರಿಂದ ೪ ಅಡಿ ಎತ್ತರದ ಮೂರು ಕಂಚಿನ ವಿಗ್ರಹಗಳನ್ನು ಸ್ಥಾಪಿಸಿದ್ದ. ಇದರಲ್ಲಿ ಮೂರು ತಲೆಯ ಅವಲೋಕಿತೇಶ್ವರ ವಿಗ್ರಹ ಸುಮಾರು ೩½ ಅಡಿ ಎತ್ತರವಾದುದು; ಇನ್ನುಳಿದ ಎರಡು ವಿಗ್ರಹಗಳು ಮಂಜುಶ್ರೀ ಮತ್ತು ಮಣಿಹಸ್ತನಾದ ಬುದ್ಧನವು. ಇವನ್ನು ಕಾಣುವಾಗ ಅವುಗಳ ಸರಳ ಸುಂದರ ರೇಖೆಗಳು, ಗಂಭೀರ ಮುಖಮುದ್ರೆ, ನಮ್ಮ ಮನಸ್ಸನ್ನೇ ಸೆರೆಹಿಡಿಯುತ್ತವೆ. ಇವು ಹತ್ತು ಇಲ್ಲವೆ ಹನ್ನೊಂದನೆಯ ಶತಮಾನದ ಕೃತಿಗಳು. ಇವುಗಳಲ್ಲಿ ಅವಲೋಕಿತೇಶ್ವರ ಪ್ರತಿಮೆಯ ಕಣ್ಣುಗಳಿಗೆ ನೇಪಾಲಿ ಪದ್ಧತಿಯಂತೆ 'ಇನೆಮಲ್' ಮಾಡಿರುವುದನ್ನು ಕಂಡರೆ, ಮತ್ತಷ್ಟು ಆಶ್ಚರ್ಯವಾಗುತ್ತದೆ. ಅಂತು ಈ ಪ್ರತಿಮೆಗಳು ನಾಡಿಗೆ ಹೆಮ್ಮೆ ತರುವಷ್ಟು ಸೊಬಗಿನವು, ಮತ್ತು ಅಪೂರ್ವ ಕೃತಿಗಳೆನ್ನಬಹುದು.

ಅಲ್ಲಿ ಇಲ್ಲಿ, ಹಲವಾರು ಗುಡಿ ದೇವಾಲಯಗಳ ಕತ್ತಲಲ್ಲಿ ಜಡ್ಡು ಹಿಡಿದ ನೂರಾರು ಇತರ ಪ್ರತಿಮೆಗಳೂ ಇರಬಹುದು ಅವುಗಳ ಚಿತ್ರ ಪ್ರತಿಗಳು ಕಾಣಸಿಗುವತನಕ, ನಮಗೆ ಅವು ಇದ್ದೂ ಇಲ್ಲದಂತಾಗಿವೆ.

ಮೂರನೆಯ ಇನ್ನೊಂದು ವರ್ಗ ಮರದ ಪ್ರತಿಮೆಗಳದು. ಹಿಂದೆ ನಮ್ಮ ನಾಡಿನ ಗುಡಿಗಾರ ವರ್ಗ ಮರದ ಕೆಲಸದಲ್ಲಿ ನಿಷ್ಣಾತವಾಗಿತ್ತು. ಈಗಲೂ ಅವರು ಗಂಧ, ದಂತಗಳ ಕೆತ್ತನೆ ಮಾಡುತ್ತಿದ್ದಾರೆ. ಅವರ ಇಂದಿನ ಚಮತ್ಕಾರವೆಲ್ಲ ಸೂಕ್ಷ್ಮತೆ, ಅನುಕರಣೆಗಳಿಗೇ ಮೀಸಲಾಗುತ್ತಿದ್ದು- ಸ್ವಯಂಸ್ಫೂರ್ತಿ. ಸೃಷ್ಟಿಗಳ ಅಂಶ ಕಾಣಸಿಗದಾಗಿದೆ

ನಮ್ಮ ನಾಡಿನ ಹಲವಾರು ಬೃಹತ್ ರಥಗಳಿಗೆ-ಚಿತ್ರಫಲಕಗಳ ಅಲಂಕಾರ ಬೇಕಾಗಿತ್ತು. ಅವುಗಳ ಸಮಗ್ರ ಅಭ್ಯಾಸ ಮಾಡಿದವರು ಕಡಿಮೆ. ಜಿಡ್ಡು ಹಿಡಿದ ಅವುಗಳ ಗೊಂಬೆಗಳ ಮೂಲರೂಪವನ್ನು ಬಿಡಿಸಿತೋರಿಸಬೇಕೆಂಬ ಪ್ರಯತ್ನವನ್ನು ಮಾಡಿದವರಿಲ್ಲ. ಮಾಡಿದ್ದರೆ ಬನವಸೆಯ ರಥವೊ ಮಹಿಷಿಯ ಭಗ್ನರಥವೊ ಪುರಾತನ ತರು- ಶಿಲ್ಪದ ಮಾದರಿಗಳಿಂದ ನಮ್ಮನ್ನು ಬೆರಗುಗೊಳಿಸುವುದು ಸಾಧ್ಯ. ಕನ್ನಡ ಜಿಲ್ಲೆಯ ಹಿರಿಯಡ್ಕ, ಮೇಕೆಕಟ್ಟು ಮೊದಲಾದಲ್ಲಿ ಹಲವಾರು ದೆವ್ವಗಳ, ಬಣ್ಣಸವರಿದ ದೊಡ್ಡ ಗೊಂಬೆಗಳು ಕಾಣಸಿಗುತ್ತವೆ. ಇವುಗಳದೇ ಒಂದು ಶೈಲಿ, ಸಂಪ್ರದಾಯ ಬೆಳೆದು ಬಂದಿದೆ. ಅವುಗಳ ಅನ್ವೇಷಣೆಯಿಂದ ಕೆಲವಾದರೂ ವಿಶಿಷ್ಟ ಕೆತ್ತನೆಯ ಮೂರ್ತಿಗಳನ್ನು ಗುರುತಿಸಲು ಸಾಧ್ಯ.

ಬಹಿರಂಗಕ್ಕೆ ಕಾಣುವ, ಕಾಣಲು ಕಷ್ಟಕರವಾದ ಸನ್ನಿವೇಶದಲ್ಲಿ ಇರಿಸಿದ, ಕೆಲವು ಮರದ ವಿಗ್ರಹಗಳು ಮೂಡಬಿದರೆಯ ಸಾವಿರದ ಕಂಬದ ಬಸದಿಯಲ್ಲಿವೆ. ಇಪ್ಪತ್ತು ಅಡಿಗಿಂತ ಹೆಚ್ಚಿನ ಎತ್ತರದಲ್ಲಿ ಮದನಕೈಗಳಂತೆ ತೂಗಿರುವ ಈ ಗೊಂಬೆಗಳ—ವಸ್ತು ಕೆತ್ತನೆ, ಚೆಲುವುಗಳು ಪ್ರೇಕ್ಷಣೀಯವೂ, ವಿಶಿಷ್ಟವೂ ಆಗಿವೆ. ಅವುಗಳ ನಿಕಟ ಪರಿಶೀಲನೆಗೆ ಅವಕಾಶ ದೊರೆತಿದ್ದರೆ ಚೆನ್ನಾಗಿತ್ತು.

ಕರ್ನಾಟಕದಲ್ಲಿ ಶಿಲ್ಪದ ಪರಿಚಯಕ್ಕೆ ಬೇಕಾದ ಪ್ರಯತ್ನವಾಗಲಿ, ಪ್ರಕಟನೆಗಳಾಗಲಿ ಏನೇನೂ ನಡೆದಿಲ್ಲ. ಅವುಗಳ ಪ್ರಶ್ನೆ ಬಂದಾಗಲೆಲ್ಲ ಆಹಾ ಕಲೆಯ ಬಲೆಯೇ! ಎಂದು ಉದ್ಗಾರ ತೆಗೆಯುತ್ತೇವೆ. ಪ್ರೇಕ್ಷಕ ಕಲೆಯ ಬಲೆಗೆ ಸಿಲುಕಿದ ಹುಳುವಾಗುತ್ತಾನೆ. ಕಲೆಯ ಸಂದೇಶವನ್ನು ತಿಳಿಯಲು ಬೇಕಾದ ಮಾಹಿತಿ ಸಿಗುತ್ತಲಿಲ್ಲ. ನಮಗೆ ಅತಿಶಯೋಕ್ತಿಯ ಉದ್ಗಾರಗಳೇ ಕಲೆ! ನಮ್ಮ ಕಲಾಸೃಷ್ಟಿಗಳಲ್ಲಿ ಕಂಡುಬರುವ ಶೈಲಿಗಳ, ಲಕ್ಷಣಗಳ, ವಿಷಯಗಳನ್ನು ವಿವರವಾಗಿ ಚರ್ಚಿಸಿ ಚಿತ್ರ ಸಹಿತ ಅದರ ಇತಿಹಾಸವನ್ನು ಕೊಡುವ ಪ್ರಯತ್ನವನ್ನು ಮಾಡಿಲ್ಲ ಇದಕ್ಕೆ ಕಾರಣ ನಮಗಿರುವ ಕಲೆಯ ಜ್ಞಾನ ಇನ್ನೂ ಬಾಲಿಶವಾಗಿಯೇ ಉಳಿದಿರುವದು. ಆ ಸ್ಥಿತಿಯನ್ನು ನಮ್ಮ ವಿದ್ವಾಂಸರೂ ದಾಟಿಲ್ಲ. ದಾಟಬೇಕೆಂಬ ಪ್ರಯತ್ನವೂ ನಮ್ಮಲ್ಲಿಲ್ಲ.

ನೂತನ ದೀಪಾವಳಿಯು ನಮ್ಮ ಗ್ರಾಹಕರಿಗೆಲ್ಲ ಸುಖಶಾಂತಿಗಳನ್ನೀಯಲಿ!

ನಿಮ್ಮ ಯಾವತ್ತು ಮಶಿನರಿ ಸಾಮಾನುಗಳು ತ್ವರಿತ ಸಂಗ್ರಹದಿಂದ ಸರಿಯಾದ ಬೆಲೆಗಳಿಗೆ ದೊರೆಯುತ್ತವೆ!

ನಮ್ಮಲ್ಲಿ ಎಲ್ಲಾ ರೀತಿಯ—

- ಕ್ಯಾನ್‌ವಾಸ್ ಬೆಲ್ಟುಗಳು
- ನೀರಿನ ಪೈಪುಗಳು
- ಆಯಿಲ್ ಇಂಜಿನ್ನಿನ ಬಿಡಿ ಭಾಗಗಳು
- ಹಿಟ್ಟಿನ ಗಿರಣಿಯ ಯಂತ್ರೋಪಕರಣಗಳು

ಹೆಚ್ಚಿನ ಸಂಗ್ರಹದಲ್ಲಿವೆ!

Distributors for :

DUNLOP VEE BELTS

Selling Agents for :

"KASSELS" FANS

&

BAJAJ BULBS

ಮಾಯಾ

ಎಂಜಿನಿಯರಿಂಗ್ ಅ್ಯಂಡ್

ಮಶಿನರಿ ಕಂಪನಿ

Phone : 239

ಗಾಂಧಿ ಸರ್ಕಲ್

ದಾವಣಗೆರೆ ಸಿಟಿ

Deepavali Greetings

Gram: Sivashankar
Phone: 116, 130
Res: 451

ಶ್ಯಾಮನೂರ ಶಿವಶಂಕರಪ್ಪ
"ಡಬ್ಬಲ್ ಹಾರ್ಸ್" ಬ್ರಾಂಡಿನ
ಮಿಶ್ರಣ ಗೊಬ್ಬರಗಳ ತಯಾರಕರು
ವಿಜಯಲಕ್ಷ್ಮಿ ರೋಡ, ದಾವಣಗೆರೆ

ಪಾರ್ಟನರ್ : ಶ್ಯಾಮನೂರ ಕಲ್ಲಪ್ಪ ಅ್ಯಂಡ್ ಸನ್ಸ್
ಕಲ್ಲೇಶ್ವರ ಇಂಡಸ್ಟ್ರೀಸ್

ರೈತಬಾಂಧವರಲ್ಲಿ ವಿನಂತಿ

ನಮ್ಮಲ್ಲಿ ತಯಾರಾಗುವ ಉತ್ತಮ ದರ್ಜೆಯ "ಡಬ್ಬಲ್ ಹಾರ್ಸ್" ಬ್ರಾಂಡಿನ ಮಿಶ್ರಣ ಗೊಬ್ಬರಗಳನ್ನು ಉಪಯೋಗಿಸಿ ಹೆಚ್ಚು ಬೆಳೆ ಬೆಳೆಸಿ ಹೆಚ್ಚು ಕೃಷಿ ಉತ್ಪನ್ನಕ್ಕೆ ಸಹಾಯ ಸಲ್ಲಿಸಿರಿ.

ಹೊಸ ದೀಪಾವಳಿಯು ನಮ್ಮ
ಗ್ರಾಹಕರಿಗೆ ಸುಖದ ಸುಗಂಧ ಬೀರಲಿ

Tel: Sivashankar Phone: Shop 116
Res: Ext Res: 451

SHAMANUR KALLAPPA & SONS

General Merchants & Commission Agents
Vijayalaxmi Road, Davangere City

Props

Manjunath Express & Kalleswar Express

Manufacturers

Best Boora Sugar Candy Kalpi

ಶ್ಯಾಮನೂರ ಕಲ್ಲಪ್ಪ & ಸನ್ಸ
ಜನರಲ್ ಮರ್ಚಂಟ್ಸ್ ಮತ್ತು ಕಮೀಶನ್ ಏಜಂಟ್ಸ್
ದಾವಣಗೆರೆ ಸಿಟಿ

ದೀಪಾವಳಿಯ ಹಾರ್ದಿಕ ಶುಭಾಶಯಗಳು!



● ಟ್ರ್ಯಾಕ್ಟರ್ ಟ್ರೇಲರ್ ● ಅವಲಕ್ಕಿ ಮಶಿನ್
● ಒಕ್ಕಲತನದ ಉಪಕರಣಗಳು ವ ಬಿಡಿ ಭಾಗಗಳ ತಯಾರಕರು

ಕರ್ನಾಟಕ ಇಂಜನೀಯರಿಂಗ ವರ್ಕ್ಸ
ಹಳೇ-ಹುಬ್ಬಳ್ಳಿ ಪೂಲಿನ ಹತ್ತರ — ಹುಬ್ಬಳ್ಳಿ Phone: 2152

ದಕ್ಷಿಣ ಭಾರತದಲ್ಲಿ ದೀಪಾವಳಿ

— ಎಂ. ರಂಗರಾವ್

೧ ಕಡುಬಿನ ಸನ್ನಾಹ

ದೀಪಾವಳಿ ಹಬ್ಬವು ಅಶ್ವೀಜ ಕೃಷ್ಣ ತ್ರಯೋದಶಿಯಿಂದಲೇ ಪ್ರಾರಂಭವಾಗುತ್ತದೆ. ಅದಕ್ಕೂ ಮೂರು ದಿನಗಳ ಮೊದಲೇ ದಕ್ಷಿಣ ಕನ್ನಡ ಪ್ರಾಂತದಲ್ಲಿ ಕಡುಬಿನ ಸನ್ನಾಹ ಪ್ರಾರಂಭವಾಗುತ್ತದೆ. ಮುಂಡಕ ಒಲಿಯನ್ನು ತಂದು, ಮುಳ್ಳುಕೆರೆಸಿ, ಬೆಂಕಿಯಲ್ಲಿ ಬಾಡಿಸಿ ಮೂಡೆ ಸೆಟ್ಟು ಇಟ್ಟುಕೊಳ್ಳುತ್ತಾರೆ. 'ಕಡುಬು ಕಾಯಿ ಹಾಲು' ದೀಪಾವಳಿ ಅಮಾವಾಸ್ಯೆಯಂದು ಮಾಡುವ ಮುಖ್ಯ ಫಳಾಹಾರವಾಗಿದೆ.

ಧನಿಕರು ವಿವಿಧ ಸಿಹಿಭಕ್ಷ್ಯಗಳಿಂದ ಹಬ್ಬ ಮಾಡಿದರೂ 'ಕಡುಬು ಕಾಯಿ ಹಾಲು ಮಾಡಿಕೊಳ್ಳದ ಬಡವರಿಲ್ಲ.

೨ ಜಲ ಪೂರಣ

ತ್ರಯೋದಶೀ ದಿನ ಸಂಜೆಗೆ ಹಂಡೆಗೆ ನೀರು ತುಂಬಿಸುವುದರೊಂದಿಗೆ ಹಬ್ಬವು ಪ್ರಾರಂಭವಾಗುತ್ತದೆ. ಬಚ್ಚಲು ಮನೆಯನ್ನು, ಬಿಸಿ ನೀರು ಹಂಡೆಗಳನ್ನು ಅಲಂಕಾರ ಮಾಡಿ, ಗಂಟೆ ತಾಳ ಮೇಳಗಳೊಂದಿಗೆ ನೀರು ಸೇದಿ ತಂದು ಹಂಡೆಗೆ ತುಂಬಿಸುತ್ತಾರೆ.

೩ ನರಕಾಸುರ ದಹನ

ಆಂಧ್ರದೇಶದಲ್ಲಿ ಇದೊಂದು ಪ್ರತ್ಯೇಕತೆ. ನರಕಚತುರ್ದಶಿಯಂದು ಒಂದು ರಥದಲ್ಲಿ ಸತ್ಯಭಾಮಾ ಕೃಷ್ಣರ ಚಿತ್ರಪಟವನ್ನಿಟ್ಟು ಮೆರವಣಿಗೆ ಸಾಗುತ್ತದೆ. ಕಟ್ಟಕಡೆಗೆ ರಾತ್ರಿಯ ಕೊನೇಜಾವದಲ್ಲಿ ನರಕಾಸುರ ದಹನ ನಡೆಯುತ್ತದೆ. ದೊಡ್ಡದೊಂದು ಕಂಬಕ್ಕೆ ನರಕಾ

ಸುರನ ಬೊಂಬೆಯನ್ನು ಕಟ್ಟಿ, ಭಾರಿ ಗದ್ದಲದಿಂದ ಆ ಬೊಂಬೆ ಶವದ ಮೆರವಣಿಗೆ ಸಾಗಿಸಿ ಅದನ್ನು ಚಿತೆಯಲ್ಲಿಟ್ಟು ಅಗ್ನಿಸಂಸ್ಕಾರ ಮಾಡಿಬಿಡುತ್ತಾರೆ. ಆಗ ಹುಡುಗರ ಉತ್ಸಾಹ ಗಲಾಟೆ ಹೇಳತೀರದು.

೪ ದೀವಿಟಿಗೆ ಹೊಡೆಯುವುದು

ಆಂಧ್ರ ಪ್ರಾಂತದಲ್ಲಿರುವ ಇನ್ನೊಂದು ವಿಶೇಷವೇನೆಂದರೆ, ಮಕ್ಕಳೆಲ್ಲರೂ ದೀವಿಟಿಗೆ ಹೊಡೆಯುವುದು.

ದೀಪಾವಳಿ ದಿನ ಸಂಜೆಯಾದಾಗ ದೀವಿಟಿಗೆ ಹೊಡೆತ ಪ್ರಾರಂಭವಾಗುತ್ತದೆ. ಉದ್ದವಾದ "ಗೋಂಗೂರ" ಎಂಬ ಹುಳಿಸೊಪ್ಪಿನ ಗಿಡದ ಗಂಟು ಗಂಟುಗಳಿಗೂ ಎಣ್ಣೆಯಲ್ಲಿ ಅದ್ದಿದ ಬಟ್ಟೆಯನ್ನು ಸುತ್ತಿ ಬೆಂಕಿ ಹಚ್ಚುತ್ತಾರೆ. ಅದು ಉರಿಯುವಾಗ, ಅದನ್ನು ಗಿರಿಗಿರಿ ಸುತ್ತಿ ಸುತ್ತಿ ನೆಲಕ್ಕೆ ಬಡಿಯುತ್ತಾರೆ. ಬಡಿಯುವಾಗ "ದಿಬ್ಬು ದಿಬ್ಬು ದೀಪಾವಳೀ ಪಂಡುಗಾ ಮಳ್ಳೀ ವಚ್ಚೇ ನಾಗುಲ ಚವಿತೀ" ಎಂದು ಹಾಡುತ್ತಾರೆ. ಚಿಕ್ಕಮಕ್ಕಳಿಂದ ಹಿರಿಯರೇ ದೀವಿಟಿಗೆ ಹೊಡೆಸುತ್ತಾರೆ. ನಾಗುಲ ಚವಿತಿಗೂ ಇದಕ್ಕೂ ಸಂಬಂಧವಿದೆಯಂತೆ.

೫ "ಶಿವೋಹಂ"

ಆಂಧ್ರದೇಶದಲ್ಲಿ ಈ ಹಬ್ಬದ ಸಡಗರ ಕುಟುಂಬದಲ್ಲಿರುವ ಎಲ್ಲರಿಗೂ ಆಗುವಂತಿದೆ. ರಾತ್ರಿ ಎಲ್ಲರ ಹಬ್ಬದ ಗಲಾಟೆ ಮುಗಿದಮೇಲೆ ಮನೆಯ ಹೆಂಗುಸೊಬ್ಬಳು ಒಂದು ಮೊಳ ಉದ್ದದ ಮಯಣದ ಬತ್ತಿಯನ್ನು ಬೆಳಗಿಸಿ ಹಿಡಿದುಕೊಳ್ಳುತ್ತಾಳೆ. ಆ ಜ್ಯೋತಿಯ ಮೇಲೆ ಎಲ್ಲರೂ ಗುಗ್ಗುಳದ ಪುಡಿಯನ್ನು ಚೆಲ್ಲುತ್ತಾರೆ. ಮುಖ್ಯವಾಗಿ ಈ ಗುಗ್ಗುಳ ಪುಡಿ ಹಾಕುವವರು ವಿಧವೆಯರು. ಹಾಕುತ್ತಾ ಅವರು "ಶಿವೋಹಂ, ಶಿವೋಹಂ" ಎಂದು ಮೂರು ಸಾರಿ ಹೇಳುತ್ತಾರೆ. ಗುಗ್ಗುಳ ಪುಡಿ ಬೀಳುತ್ತಲೇ ಜ್ಯೋತಿಯಿಂದ ರೇಖೆಗಳಂತೆ ಕೆಂಗಿಡಿಗಳೇಳುತ್ತವೆ.

೬ ನಾಗುಲಚವಿತಿ

ದೀಪಾವಳಿಯಾದ ನಾಲ್ಕೈದು ದಿನಗಳೂ ತೆಲುಗಿನವರಿಗೆ ಹಬ್ಬವೇ. ಮಕ್ಕಳ ಕ್ಷೇಮಕ್ಕಾಗಿ ಚೌತಿಯ ದಿನ ಈ ಪರ್ವವು ಏರ್ಪಟ್ಟಿದೆ. ಆ ದಿನ ಬಗೆಬಗೆಯ ಉಂಡೆ ಕಜ್ಜಾಯಗಳನ್ನು ಮಾಡಿ, ನಾಗನ ಹುತ್ತಕ್ಕೆಕೊಂಡೊಯ್ದಿಟ್ಟು, ನೈವೇದ್ಯ ಮಾಡಿ, ಹೂವೇರಿಸಿ. ಹುತ್ತದೊಳಗೆ ಹಾಲು ಸುರಿಯುತ್ತಾರೆ. ಕೆಲವು ಹೆಂಗಸರು ಕಳಕಳವಾದ "ನಾಗುಲ ಬಟ್ಟ" ಎಂಬ ವ್ರತದ ವಸ್ತ್ರವನ್ನುಟ್ಟುಕೊಂಡು ಪೂಜಿಸುತ್ತಾರೆ. ಹುತ್ತಕ್ಕೂ ಅಂತಹ ಬಟ್ಟೆಯ ತುಂಡನ್ನು ಸಮರ್ಪಿಸುತ್ತಾರೆ. ಪೂಜೆಯಾದ ಮೇಲೆ ಹುತ್ತದ ಮಣ್ಣನ್ನೇ ಪ್ರಸಾದವಾಗಿ ಮನೆಗೆ ಒಯ್ಯುತ್ತಾರೆ. ಎಲ್ಲರೂ ಅದನ್ನು ಹಣೆಗೆ ಹಚ್ಚಿಕೊಳ್ಳುತ್ತಾರೆ ಈ ಮಣ್ಣು ಪ್ರಸಾದಕ್ಕೆ "ಪುಟ್ಟ ಬಂಗಾರಂ" ಎಂದೇ ಹೇಳುತ್ತಾರೆ

೭ ಬಲಿಪೂಜೆ-ಬೆಳೆಪೂಜೆ

ದಕ್ಷಿಣ ಕನ್ನಡದ ಕರಾವಳಿ ಪ್ರದೇಶದಲ್ಲಿ ಅಮಾವಾಸ್ಯೆಯ ದಿನ ರಾತ್ರಿ ಕಡುಬು ಕಾಯಿ ಹಾಲುಗಳನ್ನು ಮಾಡಿ, ಗದ್ದೆಯ ಹುಣಿಯ ಮೇಲಿಟ್ಟು, ಹಣತೆ ಹಚ್ಚಿ, ಬಲಿ ಚಕ್ರವರ್ತಿಗೆ ನಿವೇದಿಸುತ್ತಾರೆ.

ವರುಷಕ್ಕೊಂದಾವರ್ತಿ ಈ ಸಮಯದಲ್ಲಿ ಬಲಿ, ತನ್ನ ರಾಜ್ಯವನ್ನು ನೋಡುವುದಕ್ಕೆ ಬರುತ್ತಾನಂತೆ "ಬಲಿಯೀಂದ್ರ ಬಂದಾ ನಮ್ಮ ರಾಜ್ಯಕ್ಕೆ ಬಂದಾ, ಬಲಿಯಾ ಕೊಟ್ವಾ, ಹೊಲಿಯಾ ತಕೊಂಡಾ ಕೋ..." ಎಂದು ಕೊನೆಗೆ ಗಟ್ಟಿಯಾಗಿ ಕೂಗುತ್ತಾರೆ.

೮ ಯಮದ್ವಿತೀಯಾ

ಇದನ್ನು 'ಭಾವಬಿದಿಗೆ' ಎಂತಲೂ ಕರೆಯುತ್ತಾರೆ. ಈ ದಿನ ಯಮಧರ್ಮನಿಗೆ ತರ್ಪಣ ಕೊಡಬೇಕೆಂಬ ವಿಧಿಯಿದೆ.

ಮನೆಯ ಹೆಣ್ಣು ಮಕ್ಕಳನ್ನು ಮರೆಯದಿರಬೇಕೆನ್ನಲು, ಯಮನೇ ಆ ದಿನ ತನ್ನ ತಂಗಿಯಾದ ಕಾಳಿಂದಿಯ ಮನೆಗೆ ಹೋಗಿ ಊಟ ಮಾಡಿದನಂತೆ. ಉಡುಗೊರೆ ಕೊಟ್ಟನಂತೆ. ಅಂತೆಯೇ 'ಭಾವ ಬಿದಿಗೆ'ಯಂದು ಅಕ್ಕ ತಂಗಿಯರ ಮನೆಗೆ ಅಣ್ಣ ತಮ್ಮಂದಿರು ಹೋಗಿ ಆದರ ಸತ್ಕಾರ ಪಡೆಯುತ್ತಾರೆ.

ಗಾತ್ರ ಕುಗ್ಗುತ್ತಿದೆ!

ಎಲೆಕ್ಟ್ರಾನಿಕ್ ಸಾಧನೆಗಳನ್ನು ಅನೇಕ ವಿಧಗಳಲ್ಲಿ ಉಪಯೋಗಿಸಲಾಗುತ್ತಿರುವುದರಿಂದ ಸ್ಥಳದಲ್ಲಿ ಮತ್ತು ಶಕ್ತಿಯ ವಿನಿಯೋಗದಲ್ಲಿ ಉಳಿತಾಯ ಮಾಡಲು ಮತ್ತು ಉಪಕರಣಗಳ ಭಾರವನ್ನು ಕಡಿಮೆ ಮಾಡಲು ಟ್ರಾನ್ಸಿಸ್ಟರಗಳನ್ನು ಉಪಯೋಗಿಸುವ ಪ್ರವೃತ್ತಿ ಅಧಿಕವಾಗುತ್ತಿದೆ.

BELನಲ್ಲಿ ನಾವು ಈ ಪ್ರವೃತ್ತಿಗಳಿಗನುಸಾರವಾಗಿ ಮುನ್ನಡೆಯುತ್ತಿದ್ದೇವೆ. ನಮ್ಮ ಅನೇಕ ವಾಯರ್‌ಲೆಸ್ ಸಾಧನಗಳಲ್ಲಿ, ಮುಖ್ಯವಾಗಿ ಪೋಲಿಸ್ ಮತ್ತು ರಕ್ಷಣ ವಿಭಾಗಗಳಲ್ಲಿ ಬಳಸುವ ಸಾಧನಗಳಲ್ಲಿ ಟ್ರಾನ್ಸಿಸ್ಟರುಗಳ ಬಳಕೆ ಹೆಚ್ಚುತ್ತಿದೆ.

ಇದರಿಂದಾಗಿ ಈ ಸಾಧನಗಳ ಭಾರ ಕಡಿಮೆಯಾಗುವುದು, ಖಾತ್ರಿ ಕಾರ್ಯಕ್ಷಮತೆ ಹೆಚ್ಚುವುದು ; ಬೆಲೆಯೂ ಕಡಿಮೆಯಾಗುವುದು.

ಬಿಇಎಲ್ — ರಾಷ್ಟ್ರಪ್ರಗತಿಯ ಖಾತರಿ ಸೂಚಿ

BEL

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ :
ಜಾಲಹಳ್ಳಿ — ಬೆಂಗಳೂರು-19

ಶಿವನ ಡಂಗುರ

ಕೇಳಿ ಶಿವನ ಡಂಗುರ । ಬಾಳು ಕ್ಷಣದ ಭಂಗುರ ॥
ಸಂತೆಯಲಿ ಸಾವಿರ ಸದ್ದು ಗಲವಿಲಿಯಲ್ಲವನು ಸೀಳಿ
ದೇಶದೇಶದ ಸುದ್ದಿ ಬಿತ್ತರಿಪ ಬಾನುಲಿಯ ಗದ್ದಲವ ಹೂಳಿ
ಯುದ್ಧ ಕೋಲಾಹಲದ ಕೋವಿ ಸಿಡಿಗುಂಡುಗಳ ಗರ್ಜನೆಯ ಕೊರೆದು
ಕಿವುಡುಗಟ್ಟಿಸುವ ವ್ಯರ್ಥಾಲಾಪಗಳ ಗಜಬಿಜಿಯೆಲ್ಲವನು ಮುರಿದು
ಅದೊ ! ಕೇಳಿಬರುತಿದೆ ಶಿವನ ಡಂಗುರದ ಪ್ರಾಚೀನತಮ ಸೊಲ್ಲು
ಕೇಳು ! ಕಿವಿಗೊಟ್ಟು ಕೇಳು. ಕೇಳದಿರು ಇನ್ನುಳಿದ ಗುಲ್ಲು.
ಮೃತ್ಯುಮುಖದಲಿ ನಿಂತು ಉಯ್ಯಲಿಡುತಿದೆ ಅಖಿಲ ಭಾರತದ ಬಾಳ್
ಎದಗೊಟ್ಟು ಹೋರಾಡಿ ಗೆಲುವುದಕೆ ಆಲಿಸದನೇ ಮೊದಲು.

"ಓ ! ಪಾಪಕರ್ಮ ಗೆಯ್ದವನೆ, ಒಲಿದೊಮ್ಮೆ ಶಿವ ಎನು
ಕಳಚಿಬೀಳ್ವವು ನಿನ್ನ ಸರ್ವ ಪಾಪಂಗಳೆಲ್ಲ.
ಇನ್ನೊಮ್ಮೆ ಆ ಪಾಪ ಮಾಡನೆನ್ನು."
ಪರಿಶುದ್ಧರಾಗದಿರೆ ಉಳಿಗಾಲವೆಮಗಿಲ್ಲ
ತಪ್ಪುಗಳನೊಪ್ಪದಿರೆ ಪರಿಶುದ್ಧಿ ಮೊದಲಿಲ್ಲ ॥
ಒಪ್ಪು, ಜೀವವೆ ಒಪ್ಪು, ದೇವನಿದಿರಲಿ ಒಪ್ಪು
ಕ್ಷಮಿಸಿತ್ತ ಬೆಂಬಲವ ಹೃದಯಪೂರ್ವಕ ಅಪ್ಪು ॥

"ಮಂಗತನ ಬಯತಿಟ್ಟು ಸಭ್ಯರ ವೇಷತೊಟ್ಟೆವು ಮೊದಲಿಗೆ
ಸಂಪ್ರೊಯೊಂದರ ಸೂತ್ರವಹಿಸುತ ಕೆಡಹಿದೆವು ಕಡುಹದಿಲಿಗೆ ॥
ಕೇರಿಕೇರಿಗು ಕದನವೆಬ್ಬಿಸಿ ತೀರ್ಪ ಹೇಳಲು ಬಂದೆವು
ಲೆಕ್ಕವಿಲ್ಲದ ಕಳವು ಮಾಡಿಸಿ ನಾವೆ ದಕ್ಕಿಸಿಕೊಂಡೆವು !

ಪಲವು ನಿಷ್ಪಾಪಿಗಳ ಕೊಲ್ಲಿಸಿ ದೋಚಿದೆವು ಅಪರಾಸ್ತಿಯ
ತಪ್ಪಿತಸ್ಥರನುಳಿಸಿಕೊಳ್ಳಲು ಹೀರಿದೆವು ಉಳಿದಾಸ್ತಿಯ ॥
ಶಾಲೆಸೇತುವೆ ಬಾವಿಕೆರೆಗಳ ಕಟ್ಟುವರೆ ಪಾಲ್ಗೊಂಡೆವು
ತಗಡು ಸಕ್ಕರೆ ಸುಳ್ಳು ಹೆಸರಲಿ ನಾವೆ ದೊರಕಿಸಿಕೊಂಡೆವು ॥

ಕಳ್ಳಪೇಟೆಯ ಉದ್ಯಮಗೆ ಪರ್ಯಾಯದಲಿ ನಾವ್ ಕಾರಣ
ರಾಷ್ಟ್ರರಕ್ಷಣ ನಿಧಿಯು ನಮ್ಮಲಿ ತುಂಬಿಹೋಯಿತು ಬೊಕ್ಕಣ ॥
ಕುಡಿದು ಕುಣಿದೆವು ತಿಂದು ತಣಿದೆವು ಗ್ರಾಮಸ್ವರ್ಗಕೆ ಇಂದ್ರರು
ಕಣ್ಣುಹರಿಯಿಸಿ ಹೆಣ್ಣು ತಂದೆವು ರೂಪದಲಿ ಹೊಸ ಚಂದ್ರರು ॥

ಹಿಂದಿನೆಂದೋಲನದ ಪರಿಹಾರವನು ಕಬಳಿಸಿ ಸೆಡೆದೆವು
ಧಾನ್ಯಕಾಳಿನ ಸಂಗ್ರಹಕೆ ಮನದಣಿಯ ದಾರಿಯ ಬಡೆದೆವು ॥
ದೀನದಲಿತರ ದತ್ತಿಯಲಿ ಮುಕ್ಕಾಲುಪಾಲಿಗೆ ಬಾಧ್ಯರು
ಗ್ರಾಮರಕ್ಷಕರಾಗಿ ಬೆದರಿಕೆ ತೋರಿ ಮೆರೆವ ಕುಚೋದ್ಯರು ॥

ದುಡಿಮೆಗಳಿಕೆಗಳಿಲ್ಲ 'ರಾಷ್ಟ್ರದ ಸೇವೆ'ಯಲಿ ಸಿರಿವಂತಿಕೆ
ವಿದ್ಯೆಯೊಂದನು ಬಿಟ್ಟು ಇನ್ನುಳಿದೆಲ್ಲವೂ ಕಾಲ್ಮಂಚಿಕೆ ॥
ಇಂಥ ನರಕುನ್ನಿಗಳ ಸಾವಿರ ತಪ್ಪುಗಳ ನೀ ಮನ್ನಿಸಾ
ಮುಂದೆ ಮಾಡಿದ ಒಂದು ತಪ್ಪಿಗು ರೌರವಕೆ ನೀ ನೂಕಿಸಾ ॥"

ಇಂತು ಬಿನ್ನಹ ಪತ್ರವನು ಬರೆಬರೆದು ಅಂಕಿತವಿಕ್ಕುವಾ
ಭಾರತಾಂಬೆಯ ಪದಕೆರಗಿ ಕ್ಷಮೆಯಾಗಿದು ಸೇವೆಯಲಿಕ್ಕುವಾ
ನಮ್ಮ ಸೈನ್ಯದ ಬೆನ್ನಿಗಿದು ಬಲಭೀಮರಕ್ಷೆಯ ನೀಡಲಿ
ನಮ್ಮ ದೇಶದ ವಿಜಯದೃಷ್ಟಿಗೆ ಕಾಮರಕ್ಷೆಯನೂಡಲಿ

—ಸಿಂಪಿ ಲಿಂಗಣ್ಣ

ಶ್ರೀ ಅರವಿಂದೋಂ ಸಾಕ್ಷಾತ್ಕಾರದ ತಿಂಗಳದೀ ಹಾಡು
ಸುಪ್ರಮಾನಸದ ಮಾನಸಜೀವಿಯ ಆನಂದದ ಬೀಡು
ಕಾರ್ತಿಕೋತ್ಸವದ ವಾರ್ತಿಕ ಬರೆಯುವ ಬೆಳಕಿನದೀ ಗೂಡು
ನರಕುಲದಾರೋಹಣಕೇ ದೈವೀ ಅವತರಣವು ನೋಡು.

-೨-

"ಮಾಸಾನಾಂ ನಾ ಮಾರ್ಗಶೀರ್ಷ" ಬರಲಿದೆ ಮುಂದಿನ ಹೆಜ್ಜ
"ಏಕಾಂಶೇನ ಸ್ಥಿತೇ ಜಗತ್" ಎಂದವನ ಕಾಲಗೆಜ್ಜ
ಜೀವನ ಧಾರಾ ಸೇರಿ ಸಾಗರವ ನಭಕೆದ್ದಿದೆ ಚೈತ್ಯ
ಪಾವನಗೊಳಿಸುವ ಕಾರ್ಯದಿ ತತ್ಪರ ಭಗವಾನ್ ಆದಿತ್ಯ.

-೩-

ಮಣ್ಣ ಮೊಳಕೆಯೊಡೆದದ್ದು ಧಾನ್ಯಧನ ಸಂಪದದಭಿವೃದ್ಧಿ
ಮಣ್ಣ ಮಲರಿ ಸೌಗಂಧ ಸೂಸುತಿದೆ ಪೃಥಿವಿ ಗಂಧವತಿ ಸಿದ್ಧಿ.
ಗೀತಾಪತಿ ಈ ನೆಲದ ತುಲಸಿಯನು ಹೃದಯಕಪ್ಪಿಕೊಂಡ
ಬಲಿಯ ತುಳಿದು ಪಾತಾಳಕಿಳಿಸಿದರು ಮನೆ ಬಾಗಿಲ ಕಾಯ್ದ

-೪-

ಸರ್ವ ಧರ್ಮಗಳ ಪರಿತ್ಯಜಿಸಿ ಪರಮಾತ್ಮಗೆ ಶರಣೆನ್ನ
ಸರ್ವಾರ್ಪಣ ಶರಣೋದ್ಧಾರವು ನಿಜ, ನಿಜ ಕ್ಷಿಪ್ರದಲೇನೇ.
ಗೀತೋಪನಿಷತ್ ಬ್ರಹ್ಮಸೂತ್ರಗಳ ಪ್ರಸ್ಥಾನತ್ರಯಿಯು
ಉತ್ಥಾನವ ನೀಡಿದೆ ಪ್ರತಿ ಚೇತನ ಚಿನ್ಮಯಿ ಸನ್ಮಯಿಯು

-೫-

ಹಳದಿ ನೆಲದ ಗುಣ, ನೀಲ ನಭದ ಗುಣ, ಸಾಂತನಂತ ಭಾವ
ಪೀತಾಂಬರಧರ ಶ್ಯಾಮಲ ವರ್ಣದ ಘನಶ್ಯಾಮ ದೇವ
ಅನನ್ಯ ಭಕುತರಿಗೇನೇ ಶಕ್ಯವು ವಿಶ್ವರೂಪ ದೃಶ್ಯ
ಸರ್ವಾರ್ಪಣವಾ ಶರಣರಿಗೇ ಸಚ್ಚಿದಾನಂದ ವಶ್ಯ !

—ಶ್ರೀದೇವಜ

"ನಿಮಗೇನು ಚಿಂತೆರೀ ರಾಯರೇ ಕೈತುಂಬ ಹಣ, ಮನೆ ತುಂಬ ಜನ ಆರಾಮ ಇದ್ದೀರಿ ನಿಮ್ಮ ಹಾಗೆ ನಿಶ್ಚಿಂತೆಯಿಂದ ಜೀವನ ಸಾಗಿಸಲು ದೇವರಲ್ಲಿ ಬೇಡಿ ಬಂದಿರಬೇಕು'' ಎಂದು ನನ್ನ ಮಿತ್ರ ಉದ್ಗಾರ ತೆಗೆದ.

ಬೇರೆ ಸಮಯದಲ್ಲಾಗಿದ್ದರೆ ನಾನೂ ಈ ಮಾತನ್ನು ಅನುಮೋದಿಸುತ್ತಿದ್ದೆನೋ ಏನೋ. ಆದರೆ ಇಂದು ನಾನು ಬೆಳಗಿನಿಂದ ಎದುರಿಸಿದ ಪ್ರಸಂಗಗಳಿಂದ ನನ್ನ ವಿಚಾರದ ಓಘ ಚಿಂತೆ ಇಲ್ಲದ ಮನುಷ್ಯ ಈ ಜಗತ್ತಿನಲ್ಲಿ ಯಾರಾದರೂ ಇದ್ದಾರೆಯೆ? ಎಂಬ ಪ್ರಶ್ನೆಯತ್ತ ಹರಿದಿತ್ತು. ಸಜೀವ ಮನುಷ್ಯನಿಗೆ ಉಸಿರಾಟ ಹೇಗೆ ಅನಿವಾರ್ಯವೋ ಹಾಗೆ ಚಿಂತೆಯೂ ಅನಿವಾರ್ಯ ಎಂಬ ಸಿದ್ಧಾಂತಕ್ಕೆ ನಾನು ಬಂದು ಬಿಟ್ಟಿದ್ದೆ. ಮಿತ್ರನ ಮಾತಿಗೆ ಮುಗುಳು ನಗೆಯ ಸಮ್ಮತಿ ಸೂಚಿಸುವ ಮನಸ್ಥಿತಿಯಲ್ಲಿ ನಾನಿರಲಿಲ್ಲ.

"ನನ್ನ ತಲೆಯ ಮೇಲಿರುವ ಕೂದಲುಗಳ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ನನ್ನ ತಲೆಯಲ್ಲಿ ಚಿಂತೆಗಳು ತುಂಬಿವೆ. ನಿಶ್ಚಿಂತ ಪುರುಷ ನಾನಲ್ಲ. ಈ ಜಗತ್ತಿನಲ್ಲಿ ಚಿಂತೆಯ ಹುಳ ಕೊರೆಯದ ತಲೆ ಹೊತ್ತ ವ್ಯಕ್ತಿ ಇದ್ದಾನೆ ಎಂದು ನಾನು ನಂಬುವದೂ ಇಲ್ಲ'' ಎಂದು ಹೇಳಿದ್ದು ಕೇಳಿ ಅವನು ಅವಾಕ್ಕಾದನು.

"ಛೇ ಈ ಮಾತನ್ನು ನಾನು ನಂಬಲಾರೆ' ಎಂದು ಉದ್ಗಾರ ತೆಗೆದನು

"ನೀವು ನಂಬಲಾರಿರಿ. ನೀವ್ಯಾಕೆ ನನ್ನ ಕೈ ಹಿಡಿದ ಅರ್ಧಾಂಗಿಯೂ ನನ್ನ ಮಾತನ್ನು ನಂಬುವದಿಲ್ಲ. ಇದನ್ನು ನಾನು ಬಲ್ಲೆ. ಆದರೂ ಉಸಿರಾಟವು ಜೀವಿಸಿರುವ ಮಾನವ ಪ್ರಾಣಿಗೆ ಅನಿವಾರ್ಯವಾಗಿರುವಂತೆ ಚಿಂತೆಯೂ ಅನಿವಾರ್ಯ ಎಂಬ ಸಿದ್ಧಾಂತಕ್ಕೆ ನಾನು ಬಂದಿದ್ದೇನೆ ಸಿದ್ಧಾಂತವೆಂದರೆ ತ್ರಿಕಾಲಾಬಾಧಿತ ಸತ್ಯ ಅದನ್ನು ಅವರಿವರು ನಂಬುವದರ ಮೇಲೆ ಅದರ ಸತ್ಯಾಸತ್ಯ ಅವಲಂಬಿಸಿರುವದಿಲ್ಲ'' ಎಂದು ಹೇಳಿದೆ

...ನು ಹೀಗೆ ಹೇಳಿದರೆ? ನಾಳಿನ ಚಿಂತೆ ನಮ್ಮಂಥ ಸಣ್ಣ ಸಂಬಳದ ದೊಡ್ಡ ಸಂಸಾರದ ಜನರಿಗೆ ಅನಿವಾರ್ಯ. ಆದರೆ ಬ್ಯಾಂಕಿನಲ್ಲಿ ಹಣ ಇಟ್ಟು ಚಕ್ಕಂದವಾಡುವ ಜನರಿಗೆ ಚಿಂತೆಯ ಗಾಳಿಯೂ ಸೋಂಕದು. ಇದು ಗೊತ್ತಿದ್ದ ನಾನು ನಿಮ್ಮ ಮಾತು ಒಪ್ಪುವದು ಹ್ಯಾಗೆ ಸಾಧ್ಯ?" ಎಂದು ಪ್ರಶ್ನೆಯ ಬಾಣ ಬಿಟ್ಟು ನನ್ನ ಉತ್ತರವನ್ನು ಪ್ರತೀಕ್ಷಿಸುವ ರೀತಿಯಿಂದ ಕುಳಿತನು.

"ದುಡ್ಡು ಇದ್ದರೆ ಚಿಂತೆಗೆ ಕಾರಣವಿಲ್ಲವೆಂಬ ಭ್ರಮೆಯಿದ್ದಂತೆ ನಿಮ್ಮ ಮಾತಿನಿಂದ ಅನಿಸುವದು. ಆದರೆ ದುಡ್ಡು ಹೆಚ್ಚಾಗಿದ್ದಷ್ಟು ಹೆಚ್ಚಿನ ಚಿಂತೆಗೀಡಾಗುವರೆಂಬ ಸತ್ಯ ಮನಗಾಣಬೇಕಿದ್ದರೆ ನಮ್ಮ ಶ್ರೀಪತಿ ಸಾಹುಕಾರರನ್ನು ಕಂಡು ಮಾತಾಡು. ಬ್ಯಾಂಕಿನ ರಾಷ್ಟ್ರೀಕರಣದ ಸುದ್ದಿಯನ್ನು ಓದಿ ತಲೆ ಕೆಡಿಸಿಕೊಂಡು 'ಬ್ಯಾಂಕಿನಲ್ಲಿ ನೀವು ಇಟ್ಟ ಹಣ ಠೇವಿನ ಮುದ್ದತು ಮುಗಿದ ನಂತರ ಮರಳಿ ಸಿಗುವದಿಲ್ಲವೆ? ಹಾಳು ಸರಕಾರ ಸಾವುಕಾರಿಕೆ ನಿಯಂತ್ರಣ ಕಾನೂನುಮಾಡಿತು. ಸಾಲ ಕೊಟ್ಟ ಹಣ ಮುಳುಗಿತು. ಬ್ಯಾಂಕಿನಲ್ಲಿ ನೀವು ಇಟ್ಟರೆ ಸುರಕ್ಷಿತ ಅಂತ ಬ್ಯಾಂಕಿನಲ್ಲಿ ಹಣ ಇಟ್ಟದ್ದು ಬ್ಯಾಂಕಿನ ರಾಷ್ಟ್ರೀಕರಣದಿಂದ ನುಂಗಿ ಬಿಟ್ಟರೆ ನನ್ನ ಗತಿ ಏನು?' ಅಂತ ಮೊನ್ನೆ ಗೋಳಾಡಿದರು. ಲಕ್ಷಾಂತರ ರೂಪಾಯಿ ಕೂಡಿಸಿ ಇಟ್ಟ ಅವರಿಗೆ ಇರುವಷ್ಟು ಚಿಂತೆ ನಿರ್ಧನಿಕರಿಗಿರಲಾರದು. ಆದಾಯಕರ ಅಧಿಕಾರಿಗಳೆಂದರೆ ಅವರಿಗೆ ಸಿಂಹಸ್ವಪ್ನ. ಮಾರಾಟಕರ ಅಧಿಕಾರಿಗಳೆಂದರೆ ಅವರಿಗೆ ಭಯ. ವಾರಸಾಕರ ಕೊಡುವದನ್ನು ತಪ್ಪಿಸಿಕೊಳ್ಳಲು ಮಕ್ಕಳಿಗೆ ತಮ್ಮ ಸಂಪತ್ತನ್ನು ಹಂಚಿ ಕೊಡಬೇಕೋ ಹೇಗೆ? ಎಂದು ವಕೀಲರಿಂದ ಕಾಯದೆ ಸಲಹೆ ಕೇಳುವಲ್ಲಿ ಅವರ ಹಣ, ವೇಳೆ, ವ್ಯಯವಾದಷ್ಟು ಅವರ ಕುಟುಂಬದ ಪೋಷಣೆಗೆ ಆಗುವದಿಲ್ಲ. ಕಳ್ಳರ ಭಯದಿಂದ ನಿದ್ರೆ ಇಲ್ಲ. ಕರಭಾರ ಬೀಳುವದೆಂಬ ಚಿಂತೆಯಿಂದ ಕೊರಗಿ ಸೊರಗುವದು ತಪ್ಪಿಲ್ಲ. ಅವರು ನಿಶ್ಚಿಂತರೆಂದು ಹೇಳುವದು ಹಾಸ್ಯಾಸ್ಪದವಾದೀತು" ಎಂದು ಮಿತ್ರನ ಪ್ರಶ್ನೆಯನ್ನು ಅವನಿಗೇ ತಿರುಗಿಸಿದೆ.

"ಹೋಗಲಿ ಬಿಡು. ಕವಡಿ ಕವಡಿ ಕೂಡಿಸಿ ದೊಡ್ಡ ಬಂಡವಲ ಮಾಡಿದ ಜಿಪುಣ ಶಿಖಾಮಣಿ ಶ್ರೀಪತಿರಾಯ ಅವನಿಗೆ ತಲೆ ತುಂಬ ಚಿಂತೆ ಇದ್ದಿರಬಹುದು. ಆದರೆ ಕರಭಾರ ಬಿದ್ದಷ್ಟು ಜೀಳಲಿ; ಕೊಟ್ಟು ನಿಶ್ಚಿಂತರಾದರಾಯಿತು ಅನ್ನುವ ಜನರೇ ಇಲ್ಲ ಅಂತ ತಿಳೀಬ್ಯಾಡ. ಅವರಿಗೇನು ಚಿಂತೆ ಬರಬೇಕು ?"

"ಅವರಿಗೆ ಹೆಜ್ಜೆ ಹೆಜ್ಜೆಗೆ ಚಿಂತೆಯ ಕಾಟ ಬಿಟ್ಟದ್ದಲ್ಲ. ಇನ್ನೊಬ್ಬರ ಮಾತು ಯಾಕೆ? ನನಗೇ ನಿತ್ಯ ಕಾಡುವ ಚಿಂತೆಗಳ ಯಾದಿಯನ್ನು ಸಾದರಪಡಿಸುವೆ ಕೇಳು. ಆಮೇಲಾದರೂ ನನ್ನ ಸಿದ್ಧಾಂತ ಸರಿ ಎಂದು ಒಪ್ಪುವಿ. ಬೆಳಿಗ್ಗೆ ಎದ್ದ ಕೂಡಲೇ ಚಹಾ ಬೇಕು. ಹಾಲು ತರಬೇಕು. ಸರಕಾರೀ ಡೇರಿಯ ಹಾಲು ಕ್ಯೂದಲ್ಲಿ ನಿಂತ ನನ್ನ ನಂಬರು ಬರುವದರಲ್ಲಿ ತೀರಿಹೋದರೆ ಹೇಗೆ? ಇಡೀ ದಿನ ಹಾಲಿನ ಅಭಾವ. ಅದನ್ನು ಹ್ಯಾಗಾದರೂ ಎದುರಿಸಬಹುದು. ಸದ್ಯಕ್ಕೆ ಚಹಾ ಸಿಗದಂತಾಗುವದಲ್ಲ ಎಂಬ ಚಿಂತೆಯನ್ನು ಹೊತ್ತೇ ಮನೆಯಿಂದ ಹೊರಬೀಳುವದು. ರೇಶನ್ನಿನಲ್ಲಿ ಈ ವಾರ ಸಕ್ಕರೆ ಹಂಚುವರೋ ಇಲ್ಲೋ? ಹಂಚದಿದ್ದರೆ ಸಕ್ಕರೆ ಹ್ಯಾಗೆ ದೊರಕಿಸಬೇಕು ? ಈ ಬಗ್ಗೆ ಕಳ್ಳಪೇಟೆಯಲ್ಲಿ ಸಕ್ಕರೆ ಸಿಗುವ ವರೆಗೆ ತಲೆ ಕೆಡಿಸಿಕೊಳ್ಳುವ ಕಾರಣವಿಲ್ಲ ಅಂತಾ ಸಮಾಧಾನ ಹಚ್ಚಿಕೊಂಡು ಬೆಳಗಿನ ಪೇಪರನಲ್ಲಿ ಹಣಿಕಿ ಹಾಕಿ ಸುದ್ದಿ ನೋಡಿದಾಗ ಎದೆ ಒಡೆಯುವಂಥ ಸುದ್ದಿ. ನಾವೆ ಮುಳುಗಿ ಹಲವರ ಮರಣ. ರೇಲ್ವೆಗಾಡಿ ಕುಸಿದು ಬಿದ್ದ ವಾರ್ತೆ. ನಮ್ಮ ಹುಡುಗ ಅಂದೇ ಹುಬ್ಬಳ್ಳಿಯಿಂದ ಹೊರಟು ಬರುವದಾಗಿ ಬರೆದ ಪತ್ರದ ಸ್ಮರಣೆ. ಹುಡುಗನೇನಾದರೂ ನಾವೆಯ ದುರಂತದಲ್ಲಿ ಸಿಕ್ಕಿದ್ದರೆ...ಮಗಳು ಅಳಿಯ ಇಬ್ಬರೂ ಡೆಕ್ಕನ್ ಎಕ್ಸಪ್ರೆಸ್‌ನಿಂದ ಬರುವ ನಿರೀಕ್ಷೆ. ಅದೇ ಗಾಡಿಗೆ ಅಪಘಾತ. ಹೀಗೆ ಪ್ರಾರಂಭವಾದ ಚಿಂತೆಯ ಚಕ್ರ ಕ್ಷಣದಿಂದ ಕ್ಷಣಕ್ಕೆ ಹೆಚ್ಚು ತೀವ್ರಗತಿಯಿಂದ ತಿರುಗುತ್ತಲೇ ಇರುವದು ಸಂಸಾರಿಗರಿಗೆಲ್ಲ ಇರುವ ಅನುಭವ."

"ಇವೇನೋ ಮಾಮೂಲಿ ಮಾತು. ಇವಕ್ಕೆಲ್ಲ ಚಿಂತಿ ಅಂದರೆ ಹ್ಯಾಂಗ? ದೊಡ್ಡ ಬಿರುಗಾಳಿಗೂ ಪಂಖಾದಿಂದ ಬರುವ ಗಾಳಿಗೂ ಅಂತರ ಇಲ್ಲ ಅಂತೀ ಏನು ? ಪಂಖಾದ ಗಾಳಿ ಬಂದ ಮಾಡೂದು ನಮ್ಮ ಕೈಯಾಗ ಇರತದ. ಹಾಂಗ ಈ ಚಿಲ್ಲರೆ ಮಾಮೂಲಿ ಅಡಚಣೆ ದೂರು ಮಾಡಿಕೊಳ್ಳೂದು ನಮ್ಮ ಕೈಯಾಗಿನ ಮಾತು. ನಮ್ಮ ನಿಯಂತ್ರಣದಲ್ಲಿ ಇಲ್ಲದ ಮಾತಿ

ಗಾಗಿ ಕೊರಗುವದೇನದಲ್ಲಾ ಅದಕ್ಕೇ ಚಿಂತಿ ಅನ್ನಬೇಕು. ಅಂಥಾದ್ದು ನಿತ್ಯ ಜೀವನದಲ್ಲಿ ಎಲ್ಲಿ ಬರತ್ತದ ಹೇಳು."

"ಪಂಜಾಬದ ಗಾಳೀನೇ ಬಡೀಲಿ; ಬಿರುಗಾಳಿನೇ ಬಡೀಲಿ. ಎರಡೂ ಗಾಳಿನೇ ಹೌದಲ್ಲೋ. ಗಾಳಿಯಿಂದ ದೇಹದ ಮೇಲೆ ಆಗಬೇಕಾದ ಪರಿಣಾಮ ಎರಡರಿಂದಲೂ ಆಗುತ್ತವೆ. ಪಂಜಾಬಂದ ಮಾಡೂದು ನಮ್ಮ ಕೈಯಾಗಿನ ಮಾತು ಒಪ್ಪಿದೆ. ಆದರೆ ನಿತ್ಯ ಜೀವನದಲ್ಲಿ ಮನಸ್ಸಿನ ಶಾಂತಿಯನ್ನು ಕಲಕಿಬಿಡುವ ಮಾತುಗಳು ಈಗಿನ ಪರಿಸ್ಥಿತಿಯಲ್ಲಿ ನಮ್ಮ ಅಳವು ಮೀರಿದವುಗಳಾಗಿ ಬಿಟ್ಟವೆ. ಈ ಮಾತು ನಿನಗೆ ಮನದಟ್ಟಾಗಲು ಆಹಾರ ಧಾನ್ಯದ ಪ್ರಶ್ನೆಯನ್ನೇ ತಗೋಬಹುದು. ನಮ್ಮ ಗ್ರಾಮದಲ್ಲಿಯ ಭೂಮಿಯಲ್ಲಿ ಬೆಳೆದ ಕಾಳನ್ನು ತಂದು ತಿನ್ನುವ ಅವಕಾಶ ಇಲ್ಲ. ಜಿಲ್ಲಾಬಂದಿ ಆರ್ಡರ್ ರೇಶನ್‌ನಲ್ಲಿ ಸಿಕ್ಕಷ್ಟು ತಿನ್ನುವ ಪ್ರಸಂಗ ನಾಳಿನ ದಿನಕ್ಕೆ ಅಕ್ಕಿ ಇಲ್ಲ. ಅತಿಥಿಗಳು ಬರುವರು ಅವರ ಊಟದ ವ್ಯವಸ್ಥಾ ಹೇಗೆ ಆಗಬೇಕು? ಇದು ನಮ್ಮ ಅಳವಿನಲ್ಲಿ ಇದ್ದ ವಿಷಯ ಅನಿಸಿದರೂ ಇಂದು ಅಳವು ಮೀರಿದ ಮಾತೇ ಆಗಿ ಬಿಟ್ಟದೆ. ಹೌದಲ್ಲೋ?

"ಸರಕಾರದವರು ಎಲ್ಲಾ ಕ್ಷೇತ್ರದಲ್ಲೂ ಹಸ್ತಕ್ಷೇಪ ಮಾಡತಾರಂತ ಇವು ನಮ್ಮ ಅಳವು ಮೀರಿದ ವಿಷಯಗಳಾಗಿವೆ ಆದರೆ ಇದು ತಾತ್ಕಾಲಿಕ. ದೇಶವು ಆಹಾರ ಸ್ವಾವಲಂಬಿ ಆದ ಮ್ಯಾಲೆ ಇದು ತಾನೇ ನಿವಾರಣೆ ಆಗುವದು. ಅಲ್ಲಿಯ ವರೆಗೆ ಪರಿಸ್ಥಿತಿಗೆ ಹೊಂದಿಕೊಂಡು ಹೋಗಬೇಕಾಗತದ ಈ ತಿಳಿವಳಿಕೆ ಇದ್ದರೆ ತಲಿ ಕೆಡಿಸಿಕೊಳ್ಳುವ ಕಾರಣವೇ ಇಲ್ಲ."

"ಸ್ವಾತಂತ್ರ್ಯ ಸಿಕ್ಕು ೨೦ ವರ್ಷಗಳಲ್ಲಿ ಆಹಾರ ಸ್ವಾವಲಂಬನ ಸಾಧಿಸುವದು ಆಗಿಲ್ಲ. ಇನ್ನು ಒಂದೆರಡು ವರ್ಷದಲ್ಲಿ ಸಾಧ್ಯ ಆದೀತೆ? ಅನ್ನೂದು ಒಂದು ಚಿಂತೆ ಬೆನ್ನ ಬಿಟ್ಟದ್ದಿಲ್ಲ ನೋಡು."

"ಊರ ಉಸಾಬರಿ ಮಾಡಿ ಉಪವಾಸ ಬಿದ್ದಂತೆ ಗಾದೀ ಮಾತು ಕೇಳಿದೀ ಇಲ್ಲೋ? ಹಳ್ಳಿಗೆ ಹೋಗಿ ಇದ್ದುಬಿಡಬೇಕು. ರೇಶನ್ನದ ಕಾಟ ತಾನೇ ತಪ್ಪಿಹೋಗತದ. ಇಲ್ಲಿ ಶಹರದಲ್ಲಿಯೇ ಇರು ಅಂತ ನಿನಗ್ಯಾರೂ ನಿರ್ಬಂಧ ಪಡಿಸಿಲ್ಲ!"

"ಯಾರೂ ನಿರ್ಬಂಧ ಪಡಿಸಿಲ್ಲ. ಆದರೆ ಮಕ್ಕಳ ಶಿಕ್ಷಣ ಹಳ್ಳಿಯಲ್ಲಿ ಸಾಧ್ಯ ಇಲ್ಲ. ಶಹರನಲ್ಲಿ ಶಿಕ್ಷಣ ಸಂಸ್ಥೆ, ಉದ್ಯೋಗ ವ್ಯವಹಾರ, ಔಷಧೋಪಚಾರ ಸೌಕರ್ಯ. ನೀರು, ದೀಪಗಳ ಸೌಲಭ್ಯ, ಹಳ್ಳಿಗಳಲ್ಲಿ ದೊರೆಯುವ ಪರಿಸ್ಥಿತಿ ಬರುವ ವರೆಗೆ ಶಹರದಲ್ಲಿ ಬಂದು ನೆಲೆಸಲು ಅಪ್ರತ್ಯಕ್ಷ ನಿರ್ಬಂಧಪಡಿಸಿಧಾಂಗ ಆದ. ಶಹರದಲ್ಲಿದ್ದವರಿಗೆ ಮಾತ್ರ ಚಿಂತೆಯ ಕಾಟ ತಪ್ಪಿದ್ದಿಲ್ಲ. ಹಳ್ಳಿಗಳಲ್ಲಿದ್ದವರಿಗೆ ಇಲ್ಲ ಅಂತ ನಿನ್ನ ಅಭಿಪ್ರಾಯ ಇದ್ದರೆ ಅಲ್ಲಿ ಹೆಚ್ಚಿನ ಕಾಟ ಅನುಭವಿಸಬೇಕಾಗತದ ಅಂತ ತಿಳಕೋ"

"ಹಳ್ಳಿಗೆ ಹೋಗಿ ನೆಲೆಸಿದರೆ ಹೆಚ್ಚಿನ ಕಾಟ ನನಗೆ ಅನುಭವಿಸಬೇಕಾಗಬಹುದು ಅಂತ ಒಪ್ಪಿದರೂ ಅಲ್ಲಿ ಇರುವವರಿಗೆಲ್ಲ ಹೆಚ್ಚಿನ ಕಾಟ ಅನ್ನು ಮಾತು ಸರಿಕಾಣೂದಿಲ್ಲ. ಅಲ್ಲಿ ಜನರು ತಮ್ಮ ಭೂಮಿ ಸಾಗುವಳಿ ಮಾಡಿಕೊಂಡು ತಮ್ಮ ಆಹಾರ ತಾವು ಬೆಳೆದುಕೊಂಡು ಆರಾಮ ಇರತಾರ. ಅವರಿಗ್ಯಾತರ ಚಿಂತಿ?"

"ಮಂತ್ರಿಗಳು ಹೇಳಿಧಾಂಗ ಹೇಳತಿ ನೀರಿತು. ಹಳ್ಳಿಯಲ್ಲಿ ಇರುವವರಿಗೆಲ್ಲ ತಮ್ಮ ಉಪಜೀವನಕ್ಕೆ ಸಾಲುವಷ್ಟು ಕಾಳು ಬೆಳೆದು ಜೀವಿಸಲು ಭೂಮಿ ಅದ ಅಂತ ನಿನ್ನ ತಲೆಯಲ್ಲಿ ಯಾವ ಮಹಾತ್ಮ ತುಂಬಿರುವನೋ ದೇವರೇ ಬಲ್ಲ. ಹಳ್ಳಿಯಲ್ಲಿ ಭೂಮಿ ಇಲ್ಲದವರೂ ಬಹಳ ಜನರಿದ್ದಾರೆ. ಇದ್ದ ಭೂಮಿಯಲ್ಲಿ ಬೆಳೆದದ್ದು ಕೆಲವೇ ತಿಂಗಳು. ಸಾಲುವಷ್ಟು ಭೂಮಿ ಇದ್ದವರೂ ಇದ್ದಾರೆ. ತಮಗೆ ಸಾಕಾಗಿ ಊರಿಗೆ ಸಾಕಾಗುವಷ್ಟು ಬೆಳೆ ಬರುವ ಭೂಮಿಯುಳ್ಳವರೂ ಇದ್ದಾರೆ ಇವರೆಲ್ಲರಿಗೂ ಅವರವರ ಚಿಂತೆ ಬೆನ್ನ ಬಿಟ್ಟಿಲ್ಲ ಭೂಮಿ ಹೆಚ್ಚಿಗಿದ್ದವನಿಗೆ ಸರಕಾರ ಹೆಚ್ಚಿನ ಭೂಮಿ ಕಸಿದುಕೊಳ್ಳುವ ಕಾಯಿದೆ ಮಾಡಿದೆ ಭೂಮಿ ಕೈಬಿಡುವದು ಅಂತ ಚಿಂತಿ. ಭೂಮಿ-

ಇಲ್ಲದವರಿಗೆ ಸಾಗುವಳಿಗೆ ಗೇಣು ಭೂಮಿಯೂ ಸಿಗದಂತೆ ಕಾನೂನು ಕಾಯುದೆ ಮಾಡಿ ಸರಕಾರ ತಮ್ಮನ್ನು ರಸಾತಳಕ್ಕೆ ಮೆಟ್ಟಿದೆ. ಉದ್ಧಾರ ನೆಂತು ಎಂಬ ಚಿಂತೆ. ಹೆರವರ ಭೂಮಿ ಸಾಗುವಳಿಗೆ ಹಿಡಿದ ರೈತರಿಗೆ ಭೂಮಿ ಉಳಿಯುವದೋ ಕೈಬಿಡುವದೋ ಉಳಿಯಬಹುದಾದರೆ ಎಷ್ಟು ಹಣ ತುಂಬಬೇಕಾಗಿ ಬರುವದೋ ಹಣ ತುಂಬಿ ಬಾಳ್ವೆ ಮಾಡುವದು ಸಾಧ್ಯವಾಗಬಹುದೋ ? ಎಂಬ ಚಿಂತೆ ಕೊರೆಯುತ್ತದೆ. ಕಾಲಕಾಲಕ್ಕೆ ಮಳೆ ಬೀಳದೆ ಅನಾವೃಷ್ಟಿ, ಅತಿವೃಷ್ಟಿಯ ಭೀತಿ ಎಲ್ಲರನ್ನೂ ಪೀಡಿಸುವದು. ಪುಂಡರ ಕಾಟ, ಪಕ್ಷಪಂಗಡಗಳ ಉಪಟಳ. ಬಡತನ, ನಿರುದ್ಯೋಗಗಳ ಪೀಡೆ. ರೋಗರುಜಿನಗಳ ಬಾಧೆ, ಇವುಗಳಿಂದ ಚಿಂತೆಯು ಎಲ್ಲರಿಗೂ ಬೆನ್ನಟ್ಟಿದ ಬೇತಾಳವಾಗಿದೆ."

"ಹಳ್ಳಿಗಳು ಭಾರತದ ಬೆನ್ನೆಲುಬು. ಅವುಗಳ ಸ್ಥಿತಿ ಸುಧಾರಣೆಗೆ ಸರಕಾರ ಹೇರಳ ಹಣ ಖರ್ಚು ಮಾಡುತ್ತಿದೆ. ಅವರ ಸ್ಥಿತಿ ಕ್ರಮೇಣ ಸುಧಾರಿಸುವದು. ಈ ವಿಶ್ವಾಸ ಬೇಕು. ಅದಿಲ್ಲವೆ ತಾತ್ಪೂರ್ತಿಕ ತೊಂದರೆಗಳೇ ದೊಡ್ಡದೆಂದು ಭಾವಿಸಿದರೆ ಹೇಗೆ? ನಮ್ಮ ಎಂ. ಎಲ್. ಎ. ಗಳೂ ಮಂತ್ರಿಗಳೂ ಹಳ್ಳಿಗಳನ್ನು ಕಡೆಗಣಿಸಿದ್ದಾರಂತೀಯೇನು?"

"ಅವರು ಕಡೆಗಣಿಸಿದ್ದರೆ ಯಾವ ತೊಂದರೆಯೂ ಇರಲಿಲ್ಲ. ಅವರಿಗೆ ಹಳ್ಳಿಗರ ಮತಗಳ ಮೇಲೆ ಕಣ್ಣು. ಅಂತೆಯೇ ಹಳ್ಳಿಗರ ಹಿತ ಸಾಧಿಸುವ ಚಾಪಲ್ಯ. ಹಳ್ಳಿಗರ ಅನಂತ ಸಮಸ್ಯೆಗಳಿಗೆ ಅನೇಕಾನೇಕ ಚಿಂತೆಗಳಿಗೆ ಅವರು ಕಾರಣಕರ್ತರಾಗಿದ್ದಾರೆ. ಪಾಪ ಎಂ. ಎಲ್. ಎ ಗಳೂ ಮಂತ್ರಿಗಳು, ಎಲ್ಲರಿಗಿಂತ ಹೆಚ್ಚಿನ ಚಿಂತೆಯ ಬಾಧೆಗೀಡಾದ ವ್ಯಕ್ತಿಗಳಾಗಿರುವರು."

"ಏನೋ ಹಳ್ಳಿಗರು ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿದ್ದು ಅನೇಕ ಚಿಂತೆಗಳ ಬಾಧೆಗೀಡಾಗಿರಬಹುದು. ಮಂತ್ರಿಗಳೋ ಪ್ರಭು ಸಂಪತ್ತಿ ಅವರದಾಗಿರುವದರಿಂದ ಅವರಿಗೇತರ ಚಿಂತೆ?"

"ಮಹಾರಾಯಾ, ಅವರ ಭವಣೆಯನ್ನು ಅವರೇ ಬಲ್ಲರು. ಚುನಾವಣೆಯಲ್ಲಿ ಗೆಲ್ಲಲು ಮಾಡಬೇಕಾದ ಕೃಷ್ಣ ಕಾರಸ್ಥಾನದಲ್ಲಿ ಅವರ ಕರ್ರಗಿನ ತಲೆ ಬೆಳ್ಳಗಾಗುವದು. ಸೋಲು ಗೆಲುವುಗಳ ತೂಗು ಕತ್ತಿ ಅವರ ತಲೆಯ ಮೇಲೆ ನೇತಾಡುವಾಗ ಅನಿಶ್ಚಿತ ಪರಿಸ್ಥಿತಿಯ ಭೀಕರ ಚಿಂತೆ ಅವರ ರಕ್ತವನ್ನೇ ನೀರುಮಾಡುವದು. ಚುನಾವಣೆಯಲ್ಲಿ ಗೆದ್ದ ಸಂತೋಷಕ್ಕಿಂತ ಅಧಿಕಾರಸ್ಥಾನ ಗಿಟ್ಟಿಸುವ ಕನಸು ನನಸಾಗಬೇಕೆಂಬ ಚಿಂತೆಯು ಅವರನ್ನು ಮುಂದಿನ ಕಾರ್ಯಪ್ರವೃತ್ತರನ್ನಾಗಿಸುವದು. ಅಧಿಕಾರಸ್ಥಾನ ಲಭಿಸಿದ ದಿನದಿಂದ ಅದನ್ನು ಉಳಿಸಿಕೊಳ್ಳುವ ಹೆಚ್ಚಿನ ಚಿಂತೆಯಲ್ಲಿ ಬೀಳುವರು. ಆ [illegible] ದಿನ ದಿನಕ್ಕೆ ಹೆಚ್ಚು[illegible] ಅವರು ನಿಶ್ಚಿಂತ ಪುರುಷರು, ಸು[illegible] ಕೃತಾರ್ಥರು ಎಂದು ಅವರ ಪೆರಿಗಳು ಮಾತ್ರ ಹೇಳಬಹುದು."

"ಇತ್ತೀಚೆಗೆ ಮಂತ್ರಿಮಂಡಲಗಳ ಮೇಲೆ ಗ್ರಹಗಳ ವಕ್ರದೃಷ್ಟಿ ಹೆಚ್ಚಿದೆ. ಮಂತ್ರಿಗಳ ಬಗ್ಗೆ ನಿನ್ನ ಮಾತು ನಿಜ ಅನಿಸಬಹುದು. ಆದರೆ ಎಂ. ಎಲ್. ಎ. ಗಳಿಗೇತರ ಚಿಂತೆ?"

"ಮಂತ್ರಿಗಳಿಗಿಂತ ಎಂ. ಎಲ್. ಎ. ಗಳ ಚಿಂತೆ ಹೆಚ್ಚಿನದು. ಮತದಾರರನ್ನು ಬರುವ ಚುನಾವಣೆಯಲ್ಲಿ ಪುನಃ ಎದುರಿಸಬೇಕಾಗುವದೆಂಬುದು ಅವರ ಎದೆಯಲ್ಲಿ ಕಲೆಯುತ್ತಿರುವದು. ಮಂತ್ರಿಗಳು ಹೇರುವ ಕರಭಾರ, ಆಡಳಿತಾಧಿಕಾರಿಗಳ ಅಂದಾದುಂದಿ ಕಾರಭಾರ ಜನತೆಯ ಕಷ್ಟಕಾರ್ಪಣ್ಯ ಸ್ಥಿತಿ ಪರಿಹಾರ ಮಾಡುವಲ್ಲಿ ಅಸಹಾಯ ಪರಿಸ್ಥಿತಿಯಲ್ಲಿ ತಾವಿರುವ ಕಲ್ಪನೆ, ವಿರೋಧಿ ಪಕ್ಷಗಳು ತೋರುವ ಅವಿಷಕ್ಕೊಳಗಾಗದಂತೆ ಇರಬೇಕಾದ ಪಕ್ಷನಿಷ್ಠೆಯ ನಿರ್ಬಂಧ, ಸ್ವಂತ ಅಸ್ತಿಯನ್ನು ಉಳಿಸಿಕೊಳ್ಳುವ ಬೆಳೆಸಿಕೊಳ್ಳುವ ಪ್ರವೃತ್ತಿಯು ಬೈಲಿಗೆ ಬೀಳದಂತೆ ನೋಡಿಕೊಳ್ಳುವ ಗುರುತರ ತತ್ವ ನಿಷ್ಠೆಯ ರಕ್ಷಾಕವಚ ಧಾರಣೆ, ಇವೆಲ್ಲ ತಂತಿಯ ಮೇಲೆ ನಡೆಯುವ ಡೊಂಬರಾಟದಂತೆ ಸಂಯಮ, ಚಾಕಚಕ್ಯತೆ, ಚಾಣಾಕ್ಷತನ ಈ ಗುಣಗಳ ವಿಕಾಸವನ್ನವಲಂಬಿಸಿರುವದರಿಂದ ಅವರ ಚಿಂತೆ ಘನವಾದುದು."

"ಹೋಗಲಿ ಬಿಡರಿ. ಮತದಾರರನ್ನು ಎದುರಿಸುವ ಪ್ರಸಂಗವೇ ಬಾರದ ನೌಕರಶಾಹೀ ವರ್ಗವಾದರೂ ನಿಶ್ಚಿಂತ ಪುರುಷರ ವರ್ಗವೆಂದು ಒಪ್ಪುವಿರಲ್ಲವೆ? "

"ಅವರ ಬಾಳು ಅತ್ತೇಮನೆಯ ಸೊಸೆಯ ಬಾಳಿನಂತೆ ಬಲು ಕಷ್ಟಪ್ರದವಾದುದು. ಮಂತ್ರಿಗಳ ಕೃಪಾಪೋಷಿತರಾಗಿರಬೇಕಾದರೆ ಅವರ ಮನಸ್ಸಿನ ಒಲವು ಅರಿತುಕೊಂಡು ತಮ್ಮ ನಡೆನುಡಿಗಳನ್ನು ರೂಪಿಸಿಕೊಳ್ಳಬೇಕು. ಅತ್ತಿಗೆ-ನಾದನಿಯರಂತೆ ಇರುವ ಎಂ. ಎಲ್. ಎ., ಎಂ. ಪಿ. ಗಳ ಪ್ರೀತಿ, ವಿಶ್ವಾಸ ಉಳಿಸಿಕೊಳ್ಳಬೇಕು. ಅತ್ತೆಯ ಕಳುಹಿನಿಂದ ಕೈಗೆ ಎಟಕುವ ಗಂಟು ಮಾಡಿಕೊಳ್ಳಬೇಕು. ಇದರಲ್ಲಿ ಒಂದು ಹೆಜ್ಜೆಯನ್ನು ಪ್ರಮಾದವಶರಾಗಿ ತಪ್ಪಾಗಿ ಇಟ್ಟರೆ ಅತ್ತೆಯ ಮನೆಯ ಸೊಸೆಯು ತನ್ನ ಸ್ಥಾನಮಾನಗಳಿಗೆರವಾಗಿ ಗಂಡಬಿಟ್ಟ ಗೈಯಾಳಿ ಎನಿಸಿಕೊಳ್ಳುವಂತೆ ನೌಕರಶಾಹಿಯ ಗತಿಯಾಗುವದು. ಕೈಕೆಳಗಿನ ಅಧಿಕಾರಿಗಳು ಅವರು ಯಾರಿಗೆ ಬೇಕಾದವರಾಗಿರುವರೋ ಅವರ ಸ್ಥಾನಮಾನಗಳನ್ನು ಲಕ್ಷಿಸಿ ಅವರು ಅವಿಧೇಯರಾಗಿದ್ದರೂ ವಿಧೇಯರೆಂದೂ, ಲಂಚಬಡಕರಾಗಿದ್ದರೆ ಪ್ರಾಮಾಣಿಕರೆಂದೂ ಶುಂಭರಾಗಿದ್ದರೆ ಅತ್ಯಂತ ಮೇಧಾವಿ ದಕ್ಷ ಅನುಭವಿಕರೆಂದೂ ಶಿಫಾರಸು ಮಾಡುತ್ತ ತಮ್ಮ ಸ್ಥಾನಮಾನ ಉಳಿಸಿಕೊಳ್ಳುವ ಕಲೆಯ ಅನುಷ್ಠಾನದ ಚಿಂತೆ ಅಸಾಮಾನ್ಯವಾದುದು. ನೌಕರಶಾಹಿಯ ಬಾಳು ನಾಯಿಯ ಬಾಳಿಗೂ ಕೀಳು ಎಂದು ತಾವು ನಂಬಿದ ಮಂತ್ರಿಮಂಡಲವು ಅಧಿಕಾರದಿಂದ ಪತನ ಹೊಂದಿ ವಿರೋಧಿ ಪಕ್ಷಗಳ ಮಂತ್ರಿಮಂಡಲ ಅಧಿಕಾರಕ್ಕೆ ಬಂದ ಕಾಲಕ್ಕೆ ಅವರಿಗೆ ಅನಿಸದಿರದು. ಸಾಕಿದವನನ್ನು ಕಂಡಾಗ ಬಾಲಗುಂಡಾಳಿಸಿ ಪರಕೀಯರನ್ನು ಕಂಡಾಗ ಬೊಗಳಿ ಸ್ವಾಮಿನಿಷ್ಠೆಯನ್ನು ವ್ಯಕ್ತಪಡಿಸುವ [illegible] ನ್ನು ಗೂಡಿಸಿಕೊಳ್ಳುವದು [illegible] ಗೆ ಅಲ್ಪಾವಧಿಯಲ್ಲಿ ಸಾಧ್ಯವಾಗಬೇಕೆಂಬುದು ದೊಡ್ಡ ಚಿಂತೆಯು ಬೇಗುದಿಯಲ್ಲಿ ಬೇಯುವ ಅತ್ಮಗಳ ತಳಮಳದ ಕಲ್ಪನೆ ನಮ್ಮಂಥವರಿಗೆ ಬರಲಾರದು."

"ಯಾರೂ ನಿಶ್ಚಿಂತರಲ್ಲ ಎಂಬ ನಿಮ್ಮ ಅಭಿಪ್ರಾಯದ ತಳಹದಿ ಏನೋ ಭದ್ರವಾದಂತೆ ತೋರುವದು. ಆದರೂ ವಕೀಲರು, ಡಾಕ್ಟರರು, ವರ್ತಕರು, ಉದ್ಯೋಗಪತಿಗಳಿಗೆ ನಿಮ್ಮ ಸಿದ್ಧಾಂತ ಅನ್ವಯಿಸಲಾರದು."

"ಪಕ್ಷಕಾರನ ಅನಂತ ಅಪರಾಧಗಳನ್ನು ಸಮರ್ಥಿಸಿ ಸತ್ಯದ ಕೊಲೆಮಾಡಲು ತನ್ನ ಬುದ್ಧಿಶಕ್ತಿಯನ್ನು ಬಳಸುವ ವ್ಯಕ್ತಿಗೆ ಮನಃಶಾಂತಿ ಸಾಧ್ಯವೆನಿಸೀತೆ? ಪಕ್ಷಕಾರರನ್ನು ಉಳಿಸಿಕೊಳ್ಳುವ ಚಿಂತೆ ಅವರ ಬೆನ್ನು ಬಿಡದ ಭೂತ. ಡಾಕ್ಟರರಿಗಂತೂ ನಿತ್ಯ ಜೀವನ-ಮರಣಗಳೊಡನೆ ಕುಸ್ತಿ. ವರ್ತಕರಿಗಂತೂ ಪರಮಿಟ್, ಲಾಯಸೆನ್ಸ್ ದೊರಕಿಸುವ, ದೊರಕಿದ ಪರಮಿಟ್ ಗಳ ಸದುಪಯೋಗವಾಗಿದೆ ಎಂದು ಸಿದ್ಧಪಡಿಸುವ, ವಾಣಿಜ್ಯಕರ, ಪೋಲೀಸ ಅಧಿಕಾರಿಗಳ ಕೃಪಾಪೋಷಿತರಾಗಿರಬೇಕಾದ, ಸಮಸ್ಯೆಗಳನ್ನು ಇತರ ಸ್ವವೃತ್ತಿ ಬಾಂಧವರ ಸ್ಪರ್ಧೆಯನ್ನು ಎದುರಿಸುವ ಪ್ರಶ್ನೆಯನ್ನು ಬಿಡಿಸುವ ಚಿಂತೆ ಬೆನ್ನುಬಿಟ್ಟಿದ್ದಲ್ಲ. ಉದ್ಯೋಗಾಧಿಪತಿಗಳಿಗಂತೂ ಕಾರ್ಮಿಕರ ಅವಿಧೇಯತೆ, ಸಂಪಿನ ಬ್ರಹ್ಮಾಸ್ತ್ರವನ್ನು ಬಳಸುವ ಬೆದರಿಕೆ, ಘೇರಾವೊ ಚಲ್ಲಾಟದ ಭೀತಿ, ಕಚ್ಚಾ ಮಾಲಿನ ಪೂರೈಕೆಯ ಬಗ್ಗೆ ಅನುಸರಿಸಬೇಕಾದ ವಾಮ ಮಾರ್ಗ, ಗ್ರಾಹಕರಿಗೆ ಆಕರ್ಷಕವೆನಿಸುವಂತೆ ಸರಕುಗಳನ್ನು ಪೂರೈಸಿ ಪೇಟೆಯ ಸ್ಪರ್ಧೆಯಲ್ಲಿ ಗೆಲ್ಲುವ ಸಾಹಸ, ಇವುಗಳಲ್ಲಿ ಸಾಕುಬೇಕಾಗಿ ಹೋಗುವದು. ಅವರ ಚಿಂತೆ ಇತರರಿಗಿಂತ ಹೆಚ್ಚು ಘನವಾದುದೂ ಸುದೀರ್ಘ ಕಾಲ ಉಳಿಯುವಂಥವೂ ಆಗಿದೆ."

"ಸಂಸಾರದಲ್ಲಿ ಯಾರೂ ನಿಶ್ಚಿಂತರಲ್ಲ ಎಂಬ ಸಿದ್ಧಾಂತವನ್ನು ನಿಮ್ಮ ವಾದದಿಂದ ಸಮರ್ಥಿಸಿದಿರಿ. ಆದರೆ ಈ ಚಿಂತೆಯ ಭೂತದಿಂದ ಬಿಡುಗಡೆಯ ಮಾರ್ಗದ ಬಗ್ಗೆ ನೀವು ವಿಚಾರ ಮಾಡಿರುವಿರಾ?"

"ಹಿಂದೆ ಪುರಂದರದಾಸರೇ ಈ ಮಾತಿನ ವಿಚಾರ ಮಾಡಿ ಮಾರ್ಗದರ್ಶನ ಮಾಡಿರುವರು. ಚಿಂತೆಯಾಕೋ ಬಯಲುಭ್ರಾಂತಿ ಯಾಕೋ, ಕಂತುಪಿತ ಶ್ರೀ ಪುರಂದರ ವಿಠಲನ್ನ ನೆನೆವಗೆ" ಎಂದು ಅವರು ಹೇಳಿರುವರು. ಅಹಂಭಾವ ಬಿಟ್ಟು ದೇವರ ಪ್ರೇರಣೆಯಂತೆ ನಡೆಯುವ ನಿರ್ಧಾರಕ್ಕೆ ಅಂಟಿಕೊಂಡು ದೇವರು ಮೆಚ್ಚುವಂತೆ ಸನ್ಮಾರ್ಗದಲ್ಲಿ ನಡೆಯುವ ಸದಾಚಾರ ಸಂಪನ್ನಶೀಲವೃತ್ತಿ ಬೆಳೆಸಿಕೊಂಡಂತೆ ಚಿಂತೆಯ ಬಾಧೆ ತಗ್ಗುವದು ಆದರೆ ಇಂದಿನ ಜೀವನದ ಪ್ರೇರಕಶಕ್ತಿ, ಸ್ವಾರ್ಥಸಾಧನೆ, ಪ್ರಚೋದಿತ ಕರ್ಮಪ್ರವೃತ್ತಿ, ದೇವರ ಅಸ್ತಿತ್ವವನ್ನೇ ಮರೆತು ವರ್ತಿಸುವ ಅಹಂಭಾವ. ಇವುಗಳೇ ಆಗಿರುವಾಗ ಇವುಗಳನ್ನು ಅವಲಂಬಿಸಿರುವವರಿಗೆ ಚಿಂತೆ ಬಿಟ್ಟಿದ್ದಲ್ಲ ಪುರಂದರದಾಸರು ಬೋಧಿಸಿದ ಅಧ್ಯಾತ್ಮ ಪ್ರವೃತ್ತಿಯು ಜಾಗ್ರತವಾಗುವ ವರೆಗೆ ಚಿಂತೆಯು ಬೇತಾಳ ಬೆನ್ನುಬಿಟ್ಟದ್ದಲ್ಲ.

ಕಲ್ಕಿ

ಮಳಲ ನಾವೆಯನೇರಿ, ಮೃಗಜಲದ ಸಾಗರದಿ
ಮಂಜು ನಂಜಿನ ಹಾಯಿ ಜಡಿದು ಬಿಗಿದು,
ಸಾಗಿಹೆನು ನಾನು,
ಕಲ್ಕಿ !
(ಹಿಂದು ಮುಂದಿನದಲ್ಲವ ಕಲಕಿ).
ನಾವೆಯಲಿ ತುಂಬಿಹವು ಏನೆಲ್ಲ ಬೇಕು
ಅಂದೊಮ್ಮೆ ಮನುವಾಗಿ ಒಯ್ದುದುವ ಸಾಕು !
ನಾವೆಯಲಿ ಬಂಧಿತರು ಅವರೂ ಇವರೂ
ವಸುದೇವ ದೇವಕಿಯರೂ,

ಅಜ್ಜ ಗುಡಿಲಲಿ ಕೊರೆದ ಹೀಚುಗೆರೆ ಗೀಚುಗೆರೆ,
ಕಂಡಾನು ನಕ್ಕ !
ನಾ ಬರೆದವು ಅದಕಿಂತಲು ಚೆಲುವಿನದು ಎಂದ !
ಏಸುವಿನ ಹೆಗಲಿಗೆ ಏರಿಸಿದ ಶಿಲುಬೆ,
ಮುದುಕನೆದೆಗುಂಡಿಗೆಯ ಗುಂಡಿನಲಿ ನೆರೆಸುಟ್ಟು
ನುಡಿಸಿದನು 'ಹಾಯ್ ರಾಮ'
ಪೂರ್ವದಿಕ್ಪಾಲಕನ ಹಳದಿಯೆದೆಯಾಳದಲಿ
ಕೀಳದಾ ಮೊಳೆ ಹೊಡೆದ
ಶಿಲುಬೆಯಾಕಾರದಾ ಪುಷ್ಪಕವನೇರಿ !
ಕರುಣಾಳು ಬಾ ಬೆಳಕೆ ಎಂದವನು ನಾನೇನೆ

ಕಿಂಡಿಯನು ಮುಚ್ಚುತ್ತ, ಜಡಿದವನು ನಾನೇನೆ,
ಅದೂ ಇದೂ ಗೈದವನು ನಾನೇನೆ,
ಅಹಂ, ಬ್ರಹ್ಮಾಸ್ಮಿ !
ವ್ಯಾಸನಾಗುತ ಖಾಸಗೀತೆಯೊಂದನು ಬರೆದೆ
"ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ"

ದಿಕ್ಸೂಚಿಯ ಕೆಮ್ಮುಳ್ಳು ಓಡುತಿದೆ ನಿಲ್ಲದಲೆ
D-Day ಯ H-hour ಧ್ರುವದ ಬಳಿಗೇ.
ಚುಂಬಕವೆ ಅಲ್ಲಿರಲು ಮುಳ್ಳು ತಾ ನಿಲುವುದೇ ?

ಮಂಜು ಸರಿಸರಿಯುತಲೆ ಕಂಡೆನದೊ
ಸೊಟ್ಟ ಮುಖ ಚಂದ್ರ,
(ಮಡಿವಳನ ಶಾಪಕ್ಕೆ [illegible] ರಾಮಚಂದ್ರ !
ಮಡಿವಳನು ನಾನೇನೆ ಆಗಿದ್ದನೋ ಎನಿಸುತಿದೆ.)
ಇದುವೇನು ವ್ಯಮರವು, ಕಳೆದುದರ ಮಥನದಲಿ,
ಬುಟ್ಟಿ ತಲೆಯೊಳಗಿಟ್ಟು ನೀರಿಗಿಳಿದವರು ಯಾರೋ !
ಅಯ್ಯೋ,
ವಸುದೇವನೇ ?
ಧ್ರುವವಿನಿತು ಸನಿಹವಿರೆ ಏನಾಯ್ತು, ಶಿವನೇ !
ಎಂದೆನುತ ಮುಖ ಮುಚ್ಚಿ ಬಾಗಿರಲು ಕಂಡೆ
ಪಡಿನೆಳಲು, ಹೊಡನೆಳಲು,
ನನ್ನ ನಾನೇ ಕಂಡೆ –
ಮೈತುಂಬ ರೋಮ, ಓರಾಂಗ್ ಓತಾಂಗ್ ಮಂಡೆ !
ಓರಾಂಗ್ ಓತಂಗ್ ? !
ಎಲ್ಲಿಯದೂ ಕೇಳುತಿದೆ ಬ್ರೇಕು ಜಡಿದವೊಲು
ಕಿರಿಚು ದನಿ,
ರೊ Wrong ! ಓ ತಂಗ್ !
ಅದರೇನು,
ತಂಗುವೆನೆ ನಾನು ?
ನಾನು ಕಲ್ಕಿ !

—ಸಕುಪತಿ ರೆಡ್ಡಿ

ದೀಪಾವಳಿಯು ನಮ್ಮೆಲ್ಲ ಗ್ರಾಹಕರಿಗೂ ಇಷ್ಟಮಿತ್ರರಿಗೂ ಶುಭದಾಯಕವಾಗಲಿ

ಮುಂದಿನ ಲಕ್ಷಾಧಿಕಾರಿ ಯಾರು?

ಬಾರಾಬತಿ ರ್‍ಯಾಫಲ ಮೂಲಕ

ಎ. ಕೆ. ಲಿಂಗಪ್ಪಗೌಡ	ಅಜ್ಜನಹಳ್ಳಿ	ರೂ.	1,10,000
ಬೋರೇಗೌಡ,	ಕೂಡಿಗೆ	ರೂ.	27,500
ಪದ್ಮಾವತಿಯಮ್ಮ,	ಕೋಲಾರ.	ರೂ.	27,500
ಎಸ್. ಬಿ. ಮಾಣಿಕ್ಯರಾಜು.	ಚಿಕ್ಕಮಗಳೂರು.	ರೂ.	13,7 50
ಕೆ. ಬಿ. ರಂಗನಾಥರಾವ್,	ಬೆಂಗಳೂರು.	ರೂ.	13,750
ಹೆಚ್. ವಿ. ಗಣೇಶಯ್ಯ,	ದೇವರಹಳ್ಳಿ.	ರೂ.	5 50 0

ಕೆ. ಸಿ. ರ್‍ಯಾಫಲ್ ಮೂಲಕ

ಶಿವಶಂಕರ್,	ಸಾಗರ.	ರೂ.	1,10,000
ಡಾ॥ ರವಿಶಂಕರ್,	ಕಡೂರು.	ರೂ.	40,000
ಮುನಿಸ್ವಾಮಿ,	ಬೆಂಗಳೂರು.	ರೂ.	33,000
ಹನುಮಾನ್ ಜಿ. ಪಾಟೀಲ,	ಭದ್ರಾವತಿ	ರೂ.	30,000
ಮಂಜುಲಾಂಬ,	ತಿಪಟೂರು.	ರೂ.	10,000
ಅಬ್ದುಲ್ ಖಾದರ್,	ಸಿರಸಿ	ರೂ.	1,000

ಇವರುಗಳು ಈ ದೊಡ್ಡ ಬಹುಮಾನಗಳನ್ನು ಪಡೆದಿರುದಲ್ಲದೆ ಇನ್ನೂ ಅನೇಕರು ರಾಜ್ಯದಾದ್ಯಂತ ಅನೇಕ ಬಹುಮಾನಗಳನ್ನು ಪಡೆದಿರುತ್ತಾರೆ.

ನಮ್ಮಿಂದ ಪಡೆದಿರುವ ಟಿಕೆಟ್ಟಿಗೆ ಕೇವಲ 1 ರೂ. ಗೆ ಪ್ರಥಮ ಬಹುಮಾನ 1,10,000 ರೂ. ಗಳನ್ನು ಗಳಿಸಿದ ಅಜ್ಜನಹಳ್ಳಿಯ ನಿವಾಸಿಶ್ರೀ ಎ. ಕೆ. ಲಿಂಗಪ್ಪಗೌಡರಿಗೆ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು ಬಹುಮಾನದ ಚೆಕ್ಕನ್ನು ನೀಡುತ್ತಿರುವ ಸಂದರ್ಭದಲ್ಲಿ ತೆಗೆದ ಚಿತ್ರ

ಅಂದಿನ ವಿಶೇಷ ಸಮಾರಂಭದಲ್ಲಿ ರಾಜ್ಯದ ಅತ್ಯಂತ ಅದೃಷ್ಟವಂತ ಹಂಚಿಕೆದಾರರೆಂದು ಮನ್ನಣೆ ಪಡೆದ ಶ್ರೀ ಎಂ. ಎ. ಹನ್ನಾನ್ ಲಕ್ಕಿ ಡಿಸ್ಟ್ರಿಬ್ಯೂಟರ್ಸ್ ೧೯೨. ಬಳೇಪೇಟೆ ಮೈನ ರೋಡ್, ಬೆಂಗಳೂರು-2 ಇವರಿಂದಲೇ [illegible]ಏನೂ ಪ್ರತಿಯೊಂದು ದಲ್ಲಿಯೂ ಅನೇಕರು ಅತ್ಯಂತ ದೊಡ್ಡ ದೊಡ್ಡ ಬಹುಮಾನಗಳನ್ನು ಪಡೆಯುತ್ತಿದ್ದಾರೆ.

ಮುಂದೆ ನಡೆಯಲಿರುವ ಲಾಟರಿಯಲ್ಲಿ ನೀವೂ ಸಹ ರೂ. 1,10,000 ಗೆಲ್ಲಬಹುದು.

ಈಗ ನಮ್ಮಲ್ಲಿ ದೊರೆಯುವ, ಟಿಕೆಟ್‌ಗಳು:— ಕೆ. ಸಿ. ಚಾರಿಟೀಸ್ ಫಂಡ್, ಬಾರಾಬತಿ ರ್‍ಯಾಫಲ್ ಶ್ರೀ ನಾರಾಯಣ ಹಾಲ್ ಫಂಡ, ಮುನ್ಸಿಪಲ್ ಸ್ಟೆಡಿಯಂ ರ್‍ಯಾಫಲ್, ಸೇಂಟ್, ಗ್ರೆಗೋರಿಯಸ್ ಕಾಲೇಜ್ ರ್‍ಯಾಫಲ್, ಡಿ. ಬಿ. ಚಾರಟೀಸ್ ಮತ್ತು ರೆಡ್‌ಕ್ರಾಸ್ ಮೊದಲಾದ ಎಲ್ಲಾ ಟಿಕೆಟ್‌ಗಳಿಗೆ ರೂ. 9 ಗಳನ್ನು ಕಳಿಸಿದರೆ ಟಿಕೆಟ್‌ಗಳನ್ನು ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳಿಸಲಾಗುತ್ತದೆ.

1. ನಮ್ಮಲ್ಲಿ ದೊರೆಯುವ ಎಲ್ಲಾ ಲಾಟರಿ ಟಿಕೆಟುಗಳು ವಿವಿಧ ರಾಜ್ಯಸರ್ಕಾರಗಳಿಂದ ಮಾನ್ಯತೆ ಪಡೆದಿರುತ್ತವೆ. ಮತ್ತು ಎಲ್ಲಾ ಟಿಕೆಟುಗಳು ಮೊದಲೇ ಹಣ ಪಾವತಿ ಮಾಡಲ್ಪಟ್ಟಿರುವದರಿಂದ ಟಿಕೆಟುಗಳು ಬೇಕಾದವರು ಹಣವನ್ನು ಮನಿಯಾರ್ಡರ ಮೂಲಕ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಅಥವಾ ಬ್ಯಾಂಕ್ ಡ್ರಾಫ್ಟ್ ಮೂಲಕ ನಮ್ಮ ವಿಳಾಸಕ್ಕೆ ಮಾತ್ರ ನೇರವಾಗಿ ಕಳುಹಿಸಿ, ಟಿಕೆಟುಗಳನ್ನು ಪಡೆಯಿರಿ.
2: ಲಾಟರಿಯಾದನಂತರ ಬಹುಮಾನ ವಿಜೇತರಿಗೂ ಮತ್ತು ಏಜೆಂಟರುಗಳಿಗೂ ನೇರವಾಗಿ ತಿಳಿಸಲ್ಪಡುತ್ತದೆ.
3. ಏಜಂಟರುಗಳಿಗೆ ಧಾರಾಳವಾದ ಹಾಗೂ ಆಕರ್ಷಣೀಯವಾದ ಕಮಿಷನ್ ಕೊಡಲು ನಿರ್ಧರಿಸಲಾಗಿದೆ. ಇಂದೆ ನಮ್ಮಲ್ಲಿ ವ್ಯವಹರಿಸಿರಿ.
4. ಲಾಟರಿ ಕಮಿಟಿಯು ವಿಶೇಷ ಆಹ್ವಾನದ ಮೇಲೆ ಕಮಿಟಿಯ ಸದಸ್ಯರಾಗಿ ನಿಮ್ಮೆಲ್ಲರ ಪ್ರತಿನಿಧಿಯಾಗಿ ಲಾಟರಿ ನಡೆಯುವ ಸ್ಥಳಕ್ಕೆ ಪ್ರತಿಸಲವೂ ನಾವು ಹೋಗುತ್ತಿರುವ ವಿಷಯ ನಿಮಗೆಲ್ಲರಿಗೂ ಚೆನ್ನಾಗಿ ತಿಳಿದೇ ಇದೆ.
5. ನಿಮಗೆ ಕಂಪನಿಯಿಂದಾಗಲಿ ಇತರ ಏಜಂಟರುಗಳಿಂದಾಗಲೀ ಬಂದಿರುವ ಖಾಲಿ ಫಾರಮುಗಳನ್ನು ಭರ್ತಿ ಮಾಡಿ ಹಣದೊಂದಿಗೆ (ರಿಯಾಯತಿ ದರದಂತೆ) ನಮಗೆ ಕಳುಹಿಸಿ ಟಿಕೆಟು ಪುಸ್ತಕಗಳನ್ನು ಪಡೆಯಬಹುದು.

ಎಲ್ಲಾ ವಿವರಗಳಿಗೂ ರಾಜ್ಯದ ಏಕಮಾತ್ರ. ಪ್ರಧಾನ ಹಂಚಿಕೆದಾರರಾದ : **ಎಂ. ಎ. ಹನ್ನಾನ್**

ಲಕ್ಕಿ ಡಿಸ್ಟ್ರಿಬ್ಯೂಟರ್ಸ್

192, ಬಳೇಪೇಟೆ ಮೇಯಿನ್ ರೋಡು — ಬೆಂಗಳೂರು-2

ಇವರೊಂದಿಗೆ ವ್ಯವಹರಿಸಿರಿ ! Phone : 26272

ಕೊಡೆಗಳು

ಗಿಡ, ಗುಡ್ಡ, ಮನೆ. ಮಠ
ಅಷ್ಟೇಕ ನೆಲ, ಮುಗಿಲು –
ಎಲ್ಲದಕ್ಕೂ ಬಿಗಿದು ಎಂಥದೋ ಕಣ್‌ಕಟ್ಟು
ಹೆಣೆಯುತಿದ ಮಳೆ ಬೂದಿನೀರ ಜಾಲಕಟ್ಟು.
ಬಿದ್ದ ಹೆಜ್ಜೆಯು ತಗ್ಗಿನಲ್ಲಿ ಹೊಕ್ಕಿದ ನೀರು.
ಎದುರು, ಅಚೆ, ಈಚೆ
ಹನಿ ಬಿದ್ದು ಪುಟದೆದ್ದ ಇಷ್ಟಿಷ್ಟೆ ಆರತಿ.

ನನ್ನ ಕೊಡೆ ಕೆಳಗೆ
ಹೊರಟಿರುವೆ, ಹಿಡಿಕಿ ಗರಗರ ತಿರುವಿ,
ಛತ್ರಪತಿ:
ನಾನೆ. ನಾನೊಬ್ಬನೆ.

ಹೀಗೆ ಹೊರಟಾಗ-
ಎದುರು, ಅಚೆ ಈಚೆ.
ಕೊಡೆ ತೇಲಿ ಹೋದಂಥ ತೇಲುಭಾವ.
ಬರುದೊಮ್ಮೊಮ್ಮೆ ಒಂದೊಂದು
ಸಮಿಸಮೀಪ.
ಹಲೋ.... ನಮಸ್ಕಾರ...
ಕೊಡೆ ಕಡ್ಡಿ ಕೊಡೆ ಕಡ್ಡಿ ಬೆರಳ ಅಮುಕಿ
ಕಣ್ಣು ಕಣ್ಣಲಿ ಧುಮುಕಿ
ಬಾಯಿ ಉಸುರಿದ ಪ್ರಶ್ನೆಗಿನ್ನೊಂದು ಉತ್ತರ ಉಸುರಿ...
ಹೀಗೆಯೇ ನೀರು ಅಂಗಾಲ ಕೊರೆದು...

ದಯಮಾಡಿ... ಸ್ವಲ್ಪ...
ನಿಮ್ಮ ಕೊಡೆ ಬಗಲೊಳಗೆ ಮಡಿಚಿಟ್ಟುಕೊಂಡು

ಈ ಕೊಡೆಯು ಕೆಳಗೆ
ಈ ಕೊಡೆಯು ಒಳಗೆ
ಈ ನನ್ನ ಬಳಿಗೆ
ಬರುವಿರ ?
ಅಥವ,
ನನ್ನ ಕೊಡೆ ಬಗಲೊಳಗೆ ಮಡಿಚಿಟ್ಟುಕೊಂಡು
ನಿಮ್ಮ ಕೊಡೆ ಕೆಳಗೆ
ನಿಮ್ಮ ಕೊಡೆಯೊಳಗೆ
ಅಥವ...
ನಾನೆ ಬರಲೆ ?
ಐದಾರು ಹೆಜ್ಜೆ, ಅಷ್ಟೆ. ಒಂದೆರಡು ಮಿನಿಟು.

"ಕ್ಷಮಿಸಿ ನಾವು ನಿಂತದ್ದು ಕತ್ತರಿದಾರಿ.
ಬೇಕೆಂದರಿಲ್ಲಿಯೇ ಕಾಲು ಹುಗಿದು
ತಾಸುಗಟ್ಟಲೆ ನಾವು ಹರಟೆ ಕೊಚ್ಚೋಣಂತ.
ನಿಮ್ಮ ಕೊಡೆ ನಿಮಗಿರಲಿ.
ನಿಮ್ಮದು, ನಮಗೆ."

ಸರಿ. ಹಾಗಾದರೆ ಎಲ್ಲ ಕ್ಷೇಮವಷ್ಟೇ ?
ನೋಡೋಣ. ಇನ್ನೊಮ್ಮೆ ಕೂಡಿದರೆ ಕೂಡೋಣಂತ

ಮತ್ತೆ
ಹೆಜ್ಜೆ ಕಿತ್ತಿರುವೆ.
ಕೊಡೆಯು ಒಜ್ಜೆ ಹೊತ್ತಿರುವೆ,
ಛತ್ರಪತಿ—
ನಾನೆ.
ನಾನೊಬ್ಬನೆ.

-ಚಂದ್ರಶೇಖರ ಪಾಟೀಲ

ಕನ್ನಡ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ

— ಚಿ.ನ. ಮಂಗಳಾ

ಕನ್ನಡ ಮಹಿಳೆಯರು ವಿಕ್ರಮಾರ್ಜುನ ವಿಜಯವನ್ನಾಗಲಿ, ಗದಾಯುದ್ಧವನ್ನಾಗಲಿ ಹರಿಶ್ಚಂದ್ರ ಕಾವ್ಯವನ್ನಾಗಲಿ, ಭರತೇಶ ವೈಭವವನ್ನಾಗಲಿ, ಕುಮಾರವ್ಯಾಸ ಭಾರತವನ್ನಾಗಲಿ, ಜೈಮಿನಿ ಅಶ್ವಮೇಧವನ್ನಾಗಲಿ, ರಾಮಾಯಣ ದರ್ಶನವನ್ನಾಗಲಿ ಕೊಟ್ಟಿಲ್ಲ. ಪಂಪ, ರನ್ನ, ಜನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ ಇವರ ಉಜ್ವಲ ಪರಂಪರೆ ಮಹಿಳೆಯರಿಗಿಲ್ಲ. ಯಾವ ದೇಶದಲ್ಲೇ ಆಗಲಿ ಸಾಹಿತ್ಯ ರಚನೆಗೆ ಕೈಹಾಕಿದ ಮಹಿಳೆಯರು ಕಡಿಮೆ. ಅದರಲ್ಲೂ ವಿಶ್ವದ ಸಾಹಿತ್ಯರತ್ನಗಳಲ್ಲಿ ಮಹಿಳೆಯರು ಇಲ್ಲವೆಂದೇ ಹೇಳಬೇಕು. ಹೋಮರ್, ವರ್ಜಿಲ್, ಷೇಕ್ಸ್‌ಪಿಯರ್, ಮಿಲ್ಟನ್, ಕಾಳಿದಾಸ, ಇವರ ಸಾಲಿನಲ್ಲಿ ನಿಲ್ಲಬಲ್ಲ ಮಹಿಳೆಯರು ಇನ್ನೂ ಹುಟ್ಟಬೇಕು. ಆದರೆ ರಾಜಶೇಖರ ತನ್ನ ಕಾವ್ಯ ಮೀಮಾಂಸದಲ್ಲಿ ಹೇಳಿರುವ ಹಾಗೆ "ಪುರುಷರಂತೆ ಮಹಿಳೆಯರೂ ಕವಯಿತ್ರಿಯರಾಗಬಲ್ಲರು. ರಾಜಕುಮಾರಿಯರು, ಮಂತ್ರಿಕುಮಾರಿಯರು, ದೇವದಾಸಿಯರು, ಶಾಸ್ತ್ರವಿಶಾರದರಾಗಿ, ಕಾವ್ಯಕೋವಿದೆಯರಾಗಿರುವುದಾಗಿ ಕೇಳಿಬರುವುದರ ಜೊತೆಗೆ ಪ್ರತ್ಯಕ್ಷವಾಗಿ ಕಂಡುಬರುವುದು" ಎಂದಿದ್ದಾನೆ. ಹತ್ತನೆಯ ಶತಮಾನದ ಕಾವ್ಯ ವಿಮರ್ಶಕನೊಬ್ಬನಿಂದ ಈ ಮಾತು ಬರಬೇಕಾದರೆ ಹತ್ತನೆಯ ಶತಮಾನದಲ್ಲೂ, ಅದರ ಹಿಂದಿನ ಶತಮಾನಗಳಲ್ಲೂ ಕವಯಿತ್ರಿಯರು ಇದ್ದಿರಬೇಕು. ಅವರಲ್ಲನೇಕರ ಬಗ್ಗೆ ನಮಗೆ ವಿವರಗಳು ಗೊತ್ತಿಲ್ಲ. ಮಹಿಳೆ ಹೆಚ್ಚಾಗಿ ಕಾವ್ಯಸ್ಫೂರ್ತಿಯಿತ್ತವಳಾಗಿದ್ದಾಳೆ. ಕಾವ್ಯ ಶಕ್ತಿಯಾಗಿದ್ದಾಳೆ. ಕಾವ್ಯದ ಪಾತ್ರವಾಗಿದ್ದಾಳೆ. ಆದರೆ ತಾನೇ ಕಾವ್ಯ ರಚನೆಗೆ ಹೊರಟಿರುವುದು ಕಡಿಮೆ. ರಾಜಶೇಖರ ಬರೆದಿರುವ ಹಲವಾರು ಶ್ಲೋಕಗಳಲ್ಲಿ ಕರ್ನಾಟಕ ದೇಶದವಳೆಂದು ಹೇಳಲಾದ ವಿಜಯಾಂಕ, ವಿಜ್ಜಿಕಾ ಅಥವಾ ವಿಜ್ಜಾ ಎಂಬುವಳು ಬಹಳವಾಗಿ ಹೊಗಳಲ್ಪಟ್ಟು ಕಾಳಿದಾಸನ ಸರಿಸಮಾನಳೆಂದೂ ಸರಸ್ವತಿಯ ಅವತಾರವೆಂದೂ ಕೊಂಡಾಡಲ್ಪಟ್ಟಿದ್ದಾಳೆ. ಈಕೆ ಕಾವ್ಯ ರಚಿಸಿದ್ದು ಸಂಸ್ಕೃತದಲ್ಲಿ ವಿಜಯನಗರದ ಕುಮಾರ ಕಂಪಣನ ಪತ್ನಿ ಗಂಗಾದೇವಿಯು ಬರೆದ, ಮಧುರಾ ವಿಜಯಮ್ ಎಂಬ ಕಾವ್ಯವು ಕಾವ್ಯವಸ್ತುವಿನ ಗಾಂಭೀರ್ಯಕ್ಕೂ, ಶೈಲಿಯ ಮಾಧುರ್ಯಕ್ಕೂ ಹೆಸರಾಗಿದೆ. ಇವರಿಬ್ಬರನ್ನೂ ಬಿಟ್ಟರೆ ಕನ್ನಡ ನಾಡಿಗೆ ಮಹಿಳೆಯರ ಕಾಣಿಕೆ ಆರಂಭವಾದದ್ದು 'ಕಂತಿ'ಯಿಂದ. ಕಂತಿ ಸುಮಾರು ೧೧೦೦ ರಲ್ಲಿ ದ್ವಾರಸಮುದ್ರ ಬಲ್ಲಾಳರಾಯನ ಆಸ್ಥಾನದಲ್ಲಿ 'ಅಭಿನವ ವಾಗ್ದೇವಿ' ಎಂಬ ಬಿರುದಾಂಕಿತಳಾಗಿ ಅಭಿನವ ಪಂಪನು ಕೊಟ್ಟ ಸಮಸ್ಯೆಗಳನ್ನು ಪೂರ್ಣಗೊಳಿಸುತ್ತಿದ್ದಳೆಂದು ತಿಳಿದುಬರುತ್ತದೆ. ವಿಜಯನಗರದ ಅಚ್ಯುತರಾಯನ ಆಸ್ಥಾನದಲ್ಲಿದ್ದ ತಿರುಮಲಾಂಬೆ ಖ್ಯಾತನೆತ್ತ ಕವಯಿತ್ರಿಯಾಗಿದ್ದಾಳೆ. 'ವರದಾಂಬಿಕಾ ಪರಿಣಯ' ಎಂಬುದು ಈಕೆ ಸಂಸ್ಕೃತದಲ್ಲಿ ಬರೆದಿರುವ ಚಂಪೂಗ್ರಂಥ. ಮೈಸೂರಿನ ಅರಸರಾಗಿದ್ದ ಚಿಕ್ಕದೇವರಾಜ ಒಡೆಯರ ಓಲಗದಲ್ಲಿದ್ದ 'ಹೊನ್ನಮ್ಮ'ನ ಹೆಸರನ್ನು ಕೇಳದವರಾಗಲಿ, ಈಕೆ ರಚಿಸಿದ 'ಹದಿಬದೆಯ ಧರ್ಮ'ದ ಸತ್ವಪೂರಿತವಾದ, ಸತ್ಯದರ್ಶಕವಾದ ಕರೆಗೆ ಓಗೊಡದ ಕನ್ನಡಿಗರಿಲ್ಲ.

'ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ ।
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು ।
ಕಣ್ಣು ಕಾಣದ ಗಾವಿಲರು ॥
ಕುವರನಾದರೆ ಬಂದ ಗುಣವೇನದರಿಂದ ।
ಕುವರಿಯಾದೊಡೆ ಕುಂದೇನು
ಇವರೀರ್ವರೊಳೇಳಿಗೆ ಪಡೆದವರಿಂದ ।
ಸವನಿಪುದಿಹಪರಸೌಖ್ಯ ।

ಹೀಗೆ ಸತ್ವದ ಮಾತಾಡಿ ಹೆಂಗಸೆಂದರೆ ಶಾಪವೆಂದು ತಿಳಿದು ಅಜ್ಞಾನದಲ್ಲಿ ಹೆಣ್ಣಿನ ಬಾಳನ್ನು ಕಣ್ಣೀರಿನ ಹೊನಲಾಗಿ ಮಾಡಿದ್ದ ಕಣ್ಣಿಲ್ಲದ ಸಮಾಜದ ಕಣ್ಣು ತೆರೆದಳು ಹೊನ್ನಮ್ಮ.

ಹೊನ್ನಮ್ಮನಿಗಿಂತ ಹಿಂದಿನವರಾದ ಅಕ್ಕಮಹಾದೇವಿ, ಹೆಳವನಕಟ್ಟೆ ಗಿರಿಯಮ್ಮ, ಸೋಳಿಗೆ ಮಾರಯ್ಯನ ಹೆಂಡತಿ ಮಹಾದೇವಿ ಇವರ ಕಾವ್ಯದಲ್ಲಿ ಭಕ್ತಿ ಪರವಶತೆಯ ಔನ್ನತ್ಯವನ್ನು ಕಾಣುತ್ತೇವೆ.

ಬರಹದ ಈ ಪರಂಪರೆ ಇಪ್ಪತ್ತನೆಯ ಶತಮಾನದಲ್ಲೂ ಮುಂದುವರಿದಿದೆ. ಸ್ವಾತಂತ್ರ್ಯದ ಪೂರ್ವವೂ ಅದರ ಅನಂತರವೂ ಕಾವ್ಯವನ್ನು ಬರೆದ ಮಹಿಳೆಯರು ಕಡಿಮೆ. ಆದರೆ ಇಪ್ಪತ್ತನೆಯ ಶತಮಾನದಲ್ಲಿ ಜನಾದರವನ್ನು ಪಡೆದು ಪ್ರಾಮುಖ್ಯತೆಗೆ ಬಂದಿರುವ ಕಾದಂಬರಿ, ಸಣ್ಣಕತೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಮಹಿಳೆಯರೂ ಕೃಷಿ ಮಾಡಿದ್ದಾರೆ. ಬೆಳೆ ಹುಲುಸಾಗಿದೆ.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿಯೇ ಭಾಷಾ ಸೇವೆಯ ಉತ್ಸಾಹದಿಂದ ಧೈರ್ಯವಾಗಿ ಮುಂದೆ ಬಂದು ಗ್ರಂಥ ರಚನೆ ಹಾಗೂ ಪ್ರಕಾಶನ ಕಾರ್ಯ ಕೈಗೊಂಡವರು ನಂಜನಗೂಡಿನ ಶ್ರೀಮತಿ ತಿರುಮಲಾಂಬ ಅವರು. ಅಖಿಲ ಕರ್ನಾಟಕದಲ್ಲಿ ಏಕಮೇವ ಪ್ರಮುಖ ಗ್ರಂಥ ಪ್ರಕಾಶಿಕೆಯಾಗಿದ್ದ ಇವರು ಈ ದೃಷ್ಟಿಯಿಂದ ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಇವರು 'ಕರ್ನಾಟಕ ನಂದಿನಿ' ಹಾಗೂ "ಸನ್ಮಾರ್ಗ ದರ್ಶಿನಿ" ಎಂಬ ಮಾಸಪತ್ರಿಕೆಗಳನ್ನು ಹೊರಡಿಸಿದರು. ಮಹಿಳೆಯರು ಮನೆಯಿಂದ ಅಡಿಯಿಡಲೂ ಸಾಧ್ಯವಿಲ್ಲದ ಕಾಲದಲ್ಲಿ ಅವರು ಮನೆಯಲ್ಲೇ ಇದ್ದು ಹೃದಯದ ಭಾವಗಳನ್ನು ಬರಹದಲ್ಲಿ ಮೂಡುವ ಅವಕಾಶ ಕಲ್ಪಿಸಿ ಅವರ ಬರಹಗಳಿಗೆ ಬಹುಮಾನಗಳನ್ನು ಕೂಡ ನೀಡುತ್ತಿದ್ದ ಶ್ರೀಮತಿ ತಿರುಮಲಾಂಬ ಅವರ 'ಸತೀಹಿತೈಷಿಣಿ 'ಗ್ರಂಥ ಮಾಲೆ'ಯ ಕಾರ್ಯ ನಿಜವಾಗಿಯೂ ಸ್ತುತ್ಯವಾದದ್ದು. ಇವರು ಮಹಿಳೆಯರ ಏಳಿಗೆಗಾಗಿಯೇ ಗ್ರಂಥ ರಚನೆ ಮಾಡಿದ್ದರಿಂದ ಇವರ ಸಾಹಿತ್ಯ ಸ್ವಲ್ಪ 'ಉಪದೇಶ'ವಾಗಿದೆ. ಇವರು ಸುಶೀಲೆ, ಚಂದ್ರವದನೆ, ವಿವೇಕೋದಯ, ಅಜಾಮಿಳೋಪಾಖ್ಯಾನ, ಅಬಲಾ ದೌರ್ಜನ್ಯ, ಗಿರಿಜಾಬಾಯಿ, ದಕ್ಷಕನ್ಯಾ, ಸಭ್ಯಾ, ನಿಶಾಕಾಂತ, ಪೂರ್ಣಕಲಾ, ಭದ್ರಗೀತಾವಳಿ, ಭಾರ್ಗವ ಗರ್ವಭಂಗಂ, ಮಣಿಮಾಲೆ, ಮಾತೃನಂದಿನಿ, ರಮಾನಂದ, ವಿಧವಾತತ್ವ, ವಿರಾಗಿಣಿ, ಸುಮುಖೀ ವಿಜಯಂ, ಸೇವಾ ವಿಚಾರ, ಹರಿಣಿ, ಮೊದಲಾದ ಅನೇಕ ನಾಟಕ, ಕಾದಂಬರಿ ಇವನ್ನು ಬರೆದ

ಪ್ರಸಿದ್ಧವಾಗಿದ್ದಾರೆ. ಒಂದು ಪಾತ್ರ ಇನ್ನೊಂದು ಪಾತ್ರವನ್ನು ಕುರಿತು ಮಾತಾಡುವ ಮಾತುಗಳೂ, ಅಸಂಭವ ಸಂಗತಿಗಳೂ, ಕೃತಕ ಆಲಂಕಾರಿಕ ಶೈಲಿ ಇವುಗಳಿಂದ ತಿರುಮಲಾಂಬನವರ ಕೃತಿಗಳು ಹೆಚ್ಚು ಕಲಾತ್ಮಕವಾಗಿಲ್ಲವಾದರೂ ಬರಹ ಒಂದು ಧ್ಯೇಯ ಸಾಧನೆಗಾಗಿ ಬರೆಯಲ್ಪಟ್ಟುದಾದುದರಿಂದ ಮಹಿಳಾ ಸಾಹಿತ್ಯದ ಒಂದು ಮೈಲುಗಲ್ಲಾಗಿದೆ.

ಸ್ತ್ರೀಯರ ಏಳಿಗೆಗಾಗಿ ವೃತ್ತಪತ್ರಿಕೆಯನ್ನು ಹೊರಡಿಸಿ, ಅವರಿಗಾಗಿ ಗ್ರಂಥಗಳನ್ನು ಬರೆದು ಅಖಿಲ ಕರ್ನಾಟಕ ಮಕ್ಕಳ ಕೂಟದ ಅಧ್ಯಕ್ಷಣಿಯಾಗಿ ಅವಿಶ್ರಾಂತವಾಗಿ ದುಡಿದ ಶ್ರೀಮತಿ ಆರ್. ಕಲ್ಯಾಣಮ್ಮನವರು ಸ್ವಾತಂತ್ರ್ಯ ಪೂರ್ವ ಮಹಿಳಾ ಬರಹಗಾರರಲ್ಲಿ ಹಿರಿದಾದ ಸ್ಥಾನವನ್ನು ಪಡೆದಿದ್ದಾರೆ. ಅನೇಕ ವರ್ಷ ಕಾಲ "ಸರಸ್ವತಿ" ಎಂಬ ಮಾಸಪತ್ರಿಕೆಯನ್ನು ಸ್ತ್ರೀಯರ ಏಳಿಗೆಗಾಗಿ ಅವರ ಅಭಿರುಚಿಗೆ ತಕ್ಕಂತೆ ಹೊರಡಿಸುತ್ತಿದ್ದರು. ಬ್ಯಾರಿಸ್ಟರ್ ರಾಮಚಂದ್ರನ್, ಇಂದಿರೆ, ಇಪ್ಪತ್ತನೆಯ ಶತಮಾನದ ಅಳಿಯ, ರಣಕೇಸರಿ ಅಥವಾ ರಾಜಭಕ್ತಿ, ಸತಿಪದ್ಮಿನಿ, ನಿರ್ಮಲ, ಸುಖಲತಾ, ಎಲ್ಲಾ ಒಳ್ಳೇದಕ್ಕೆ ಮೊದಲಾದ ಕಾದಂಬರಿ, ನಾಟಕಗಳನ್ನು ಬರೆದಿದ್ದಾರೆ. ತಿರುಮಲಾಂಬನವರಂತೆ ಕಲ್ಯಾಣಮ್ಮನವರೂ ಸ್ತ್ರೀಯರ ಏಳಿಗೆಗಾಗಿ ಟೊಂಕಕಟ್ಟಿ ನಿಂತವರಾದ್ದರಿಂದ ಇವರ ಬರಹದಲ್ಲೂ "ಉಪದೇಶ" ಪ್ರಾಮುಖ್ಯವಾಗಿ ಮೂಡಿ ಬಂದಿದೆ. ಆಧುನಿಕ ಜೀವನದಲ್ಲಿ ಆಳವಾಗಿ ಬೇರೂರಿರುವ ಅಂಥ ಆಂಗ್ಲ ವ್ಯಾಮೋಹವನ್ನು ಖಂಡಿಸಲು ಮಾಡಿರುವ ಪ್ರಯತ್ನ ಸ್ತುತ್ಯವಾಗಿದೆ

ಕವಯಿತ್ರಿಯಾಗಿ, ನಾಟಕಕಾರರಾಗಿ, ವಿಮರ್ಶಕರಾಗಿ, ಸಂಗೀತ ವಿದುಷಿಯಾಗಿ, "ಭಾರತಿ" ಎಂಬ ಕಾವ್ಯನಾಮದಿಂದ ಕೃತಿ ರಚನೆ ಮಾಡುತ್ತಿರುವ ಶ್ರೀಮತಿ ತಿರುಮಲೆ ರಾಜಮ್ಮನವರು ಕನ್ನಡ ಸಾಹಿತ್ಯಕ್ಕೆ ಹಿರಿದಾದ ಕಾಣಿಕೆ ಸಲ್ಲಿಸುತ್ತಿದ್ದಾರೆ. ಅರವತ್ತನ್ನು ದಾಟಿರುವ ಇವರು ತಮ್ಮ ೨೦ ನೆಯ ವಯಸ್ಸಿನಿಂದಲೇ ಸಾಹಿತ್ಯ ಸೇವೆ ಮಾಡುತ್ತ ಬಂದಿದ್ದಾರೆ. ಆರಂಭದಲ್ಲಿ ಶ್ರೀ ರವೀಂದ್ರನಾಥ ಟಾಗೂರ್ ಅವರ ಗ್ರಂಥವನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದ ಮಾಡಿದರು. ವಿಧವಾ ವಿವಾಹದ ಬಗ್ಗೆ ಬೂಟಾಟಿಕೆಯ ಮಾತಾಡುವವರನ್ನು ಕುರಿತು ಬರೆದ "ಕಪಟನಾಟಕ" ಎಂಬ ಸಾಮಾಜಿಕ ನಾಟಕಕ್ಕೆ ಅಮೆಚೂರ್ ಡ್ರಮ್ಯಾಟಿಕ್ ಅಸೋಸಿಯೇಷನ್ ಅವರು ನೀಡುತ್ತಿದ್ದ ಬಹುಮಾನ ಬಂದಿತು. ಮೊದಲನೆಯ ವರುಷದ ಬಹುಮಾನ ಕೈಲಾಸಂ ಅವರ 'ಟೊಳ್ಳುಗಟ್ಟಿ'ಗೆ ಸಂದು, ಎರಡನೆಯ ವರ್ಷದ ಬಹುಮಾನ ಮಹಿಳೆಯೊಬ್ಬರ ನಾಟಕಕ್ಕೆ ದೊರೆತದ್ದು ಅಭಿಮಾನದ ವಿಷಯ. ಗಾಂಧೀಜಿ ಅವರನ್ನು ಸಮುದ್ರತೀರದಲ್ಲಿ ನೋಡಿದಾಗ 'ಭಾರತಿ' ಅವರ ಮೊದಲ ಕವನ ರಚಿತವಾಯಿತು. ಅಲ್ಲಿಂದ ಇಂದಿನ ವರೆಗೆ ನೂರಾರು ಹಾಡುಗಳನ್ನೂ, ಬಿಡಿ ಕಬ್ಬಗಳನ್ನೂ, ಚಾಟು ಪದ್ಯಗಳನ್ನೂ ರಚಿಸಿದ್ದಾರೆ. ಇವರು ಬರೆದಿರುವ ವೀಣೆ ಶೇಷಣ್ಣನವರ ಜೀವನ ಚರಿತ್ರೆ ಕನ್ನಡ ಜೀವನ ಚರಿತ್ರಾ ಸಾಹಿತ್ಯಕ್ಕೆ ಒಂದು ಅರ್ಥಪೂರ್ಣ ಕಾಣಿಕೆ. ಭಾರತಿ ಅವರ ಎರಡು ಪದ್ಯ ನಾಟಕಗಳಾದ "ಮಹಾಸತಿ" ಹಾಗೂ ತಪಸ್ವಿನಿ ಇವು ಕನ್ನಡದಲ್ಲಿ ಎಂದಿಗೂ ಉಳಿಯುವ ಕೃತಿಗಳು. 'ತಪಸ್ವಿನಿ' ರಾಮಾಯಣದಲ್ಲಿ ಕವಿಯ ಅನಾದರಕ್ಕೆ ಪಾತ್ರವಾಗಿರುವ ಊರ್ಮಿಳೆಯನ್ನು ಕುರಿತ ಕಾವ್ಯನಾಟಕ. 'ಮಹಾಸತಿ' ಮುಗು ನಾಡಧಿಪತಿ ರವಿಗನ



ರಾಜಕಾರಣಿ ಹೇಳಿದ್ದು

ನಾನಲ್ಲ ಸರಹದ್ದು ಕಾಯುವ ಸಿಪಾಯಿ
ಯಾರದೋ ಕಿಸೆಯೊಳಗೆ ಇಹುದೆನ್ನ
ಕೈಯಿ

ಸುಳ್ಳೇನು ಜೊಳ್ಳೇನು
ನಿಜನುಡಿಯ ಸೊಲ್ಲೇನು
ತಲೆಗೆ ಹೊಳೆದದ್ದನ್ನು ಬೊಗಳುವುದು
ಬಾಯಿ !

—ಎಸ್. ದಿವಾಕರ್

ಸಂಗಳು ದೇಕಬ್ಬೆ ಪತಿಯ ಮರಣ ವಾರ್ತೆ ಕೇಳಿ ವೀರಸತಿಗೆ ಉಚಿತವಾದ ಮಾರ್ಗವನ್ನು ಹಿಡಿದ ಮಹಾಸತಿಯೊಬ್ಬಳ ಜೀವನ ನಿರೂಪಣೆ. ಭಾರತಿ ಕಾವ್ಯ ಬದುಕಬಲ್ಲ ಕಾವ್ಯ.

ಯಾವ ದೇಶದಲ್ಲೇ ಆದರೂ, ಯಾವ ಭಾಷೆಯಲ್ಲೇ ಆದರೂ ಕಾವ್ಯವನ್ನು ರಚಿಸಿದ ಮಹಿಳೆಯರು ಕಡಿಮೆ. ಆ ಕೆಲವು ಕನ್ನಡ ಕವಯಿತ್ರಿಯರಲ್ಲಿ ದಿವಂಗತ ಬೆಳಗೆರೆ ಜಾನಕಮ್ಮನವರ ಕಾವ್ಯ ಎಂದಿಗೂ ಉಳಿಯುವ ಕಾವ್ಯ. ಇವರು ಬರೆದ 'ಕಲ್ಯಾಣ' ಎಂಬ ಕಾವ್ಯ ಸಂಕಲನದಲ್ಲಿನ ಕವನಗಳನ್ನು ಅವರೇ ಅನೇಕರಿಗೆ ಓದಿ ತೋರಿಸಿದರು. ಆದರೆ ಅವರ ಕವನಗಳು ಪುಸ್ತಕ ರೂಪದಲ್ಲಿ ಪ್ರಕಟವಾಗುವ ಮೊದಲೇ ಇವರು ಕಾಲವಾದರು. ಕನ್ನಡ ನಾಡು ಪ್ರತಿಭಾಶಾಲೀ ಕವಿಯಿತ್ರಿಯೊಬ್ಬರನ್ನು ಕಳೆದುಕೊಂಡಿತು. ವಿಶ್ವಲೀಲೆ, ಪ್ರಕೃತಿ, ರೂಪ, ದಿಗ್ವಿಜಯ, ಪ್ರೇಮ, ಸಂಗೀತ, ಬೇಂದ್ರೆ, ಹಳ್ಳಿಯ ಜೀವನ, ಗಂಗಜ್ಜಿ, ಗುಬ್ಬಿ ಮೊದಲಾದ ಅನೇಕ ಕವನಗಳಲ್ಲಿ ಜಾನಕಮ್ಮ ಜೀವನದ ವಿವಿಧ ನೋಟಗಳನ್ನು ಹಾಡಾಗಿ ಹರಿಸಿದ್ದಾರೆ. ನಿರಾಡಂಬರವಾದ ಶೈಲಿ, ಮಧುರವಾದ ಛಂದೋಬಂಧ. ಇವು ಜಾನಕಮ್ಮನವರ ಕಾವ್ಯಕ್ಕೆ ಮೆರಗುಕೊಟ್ಟಿವೆ. ಕನ್ನಡ ಕಾವ್ಯಕ್ಕೆ ಹಿರಿಯ ಕಾಣಿಕೆಯನ್ನೀಯುತ್ತಿರುವ ಕವಯಿತ್ರಿಯೆಂದರೆ ಶ್ರೀಮತಿ ಜಯದೇವಿತಾಯಿ ಲಿಗಾಡೆ ಅವರೆನ್ನಬಹುದು. ಜಯದೇವಿ ತಾಯಿಯವರ 'ತಾಯಿಯ ಪದಗಳು' ಕನ್ನಡಕ್ಕೆ ಹೊಸ ಕಾಣಿಕೆ, ನಾಡಿನ ತಾಯಂದಿರು ಹಾಡಿರುವ ಜಾನಪದ ಗೀತಗಳ ಶೈಲಿಯಲ್ಲಿ ಬರೆದವು ಇವು. ಇಲ್ಲಿ ಜೀವನವಿದೆ, ಅನುಭವವಿದೆ, ಮಿಗಿಲಾಗಿ ಅನುಭಾವವಿದೆ.

"ನಯಬೇಕು ನುಡಿಯಲ್ಲಿ ಭಯಬೇಕು
ನಡೆಯಲ್ಲಿ
ದಯಬೇಕ ಸಕಲ ಜೀವರಲಿ
ಜೀವರಲಿ ತಾಯವ್ವ
ಲಯಬೇಕ ಶಿವನ ನೆನೆವಲ್ಲಿ"

'ತಾಯಿಯ ಪದಗಳು' ಹಾಗೂ ಶ್ರೀ ಸಿದ್ಧರಾಮೇಶ್ವರನ ಚರಿತ್ರೆ ಇವು ಶ್ರೀಮತಿ ಜಯದೇವಿ ಅವರ ಆಧ್ಯಾತ್ಮಿಕ ಪ್ರವೃತ್ತಿಗೆ ಉತ್ತಮ ಉದಾಹರಣೆಗಳು.

ಶ್ರೀಮತಿ ಎಲ್ ಜಿ. ಸುಮಿತ್ರ ಅವರು ತಮ್ಮ 'ಮುತ್ತಾಲ ಮಡು' ಹಾಗೂ 'ಕಾವ್ಯ ಕಾವೇರಿ' ಕವನ ಸಂಕಲನಗಳಲ್ಲಿ ಪ್ರಕೃತಿಯ ಬಗ್ಗೆ ಅನೇಕ ಗೀತೆಗಳನ್ನು ರಚಿಸಿದ್ದಾರೆ.

ಕನ್ನಡದಲ್ಲಿ ಅನೇಕರು ಹಾಡುಗಳನ್ನೂ ಕವನಗಳನ್ನೂ ಬರೆದಿದ್ದಾರೆ. ಕಥೆಗಾರ ಶ್ರೀ ಗೋಪಾಲಕೃಷ್ಣರಾಯರ ಧರ್ಮ ಪತ್ನಿ ಶ್ರೀಮತಿ ಸುಶೀಲಮ್ಮನವರ 'ಶ್ರೀ ಗುರುರಾಜ ಚರಿತೆ' ಒಂದು ಉತ್ತಮ ಭಕ್ತಿಕವನ. ಇವರಂತೆಯೇ ಇನ್ನೂ ಅನೇಕರು ಕಾವ್ಯ ರಚಿಸಿದ್ದಾರೆ. ಆದರೆ ಅವರ ಕಾವ್ಯ ಬೆಳಕಿಗೆ ಬರಲು ಅವಶ್ಯಕವಾದ ವಾತಾವರಣ ಇನ್ನೂ ಸೃಷ್ಟಿಯಾಗಬೇಕು.

ಆಧುನಿಕ ಕಥಾಸಾಹಿತ್ಯಕ್ಕೆ ಕೊಡಗಿನ ಗೌರಮ್ಮನವರ ಕಾಣಿಕೆ ಬಹಳ ಹಿರಿದು. 'ಕಂಬನಿ' ಹಾಗೂ "ಚಿಗುರು" ಅವರ ಎರಡು ಕಥಾ ಸಂಕಲನಗಳು. ಆದರೆ ಅವರು ತಮ್ಮ ಇಪ್ಪತ್ತೇಳನೆಯ ವಯಸ್ಸಿನಲ್ಲಿ ಅವರ ಕಥಾ ಸಂಕಲನಗಳು ಪ್ರಕಟವಾಗುವ ಮೊದಲೇ ಕಾಲವಾದರು. ಕಂಬನಿಯೊಳಗಿನ ಹನ್ನೆರಡು ಕಥೆಗಳು ಅವರ ಜೀವಿತದ ಕೊನೆಯ ಏಳು ವರುಷಗಳಲ್ಲಿ ಬರೆದುವು. 'ಹೆಣ್ಣು' ಗೌರಮ್ಮನವರ ಕಥೆಗಳ ಪ್ರಧಾನ ವಸ್ತುವಾದರೂ ಸಂನ್ಯಾಸಿಯಾಗಿಯೇ ಉಳಿಯುತ್ತೇನೆಂದು ರತ್ನ ವಾಣಿಯ ಸಂಗೀತಕ್ಕೆ ಮಾರು ಹೋದ ಕತೆ ಸನ್ಯಾಸಿ ರತ್ನ, ತನ್ನ ಪ್ರೇಮದ ಪುಷ್ಪವನ್ನು

ದೊರಕಿಸಿಕೊಳ್ಳಲಾರದೆ ಹುಚ್ಚನೆಲ್ಲದಿದ್ದರೂ ಹುಚ್ಚನಂತೆ ಹುಚ್ಚಾಸ್ಪತ್ರೆಯಲ್ಲಿ ಮೂವತ್ತು ವರುಷಗಳನ್ನು ಕಳೆದು ಕೊನೆಗೊಂದು ದಿನ ರೈಲಿನಲ್ಲಿ ಪ್ರಯಾಣಿಕರಿಗೆ ತನ್ನ ಕತೆ ಹೇಳಿ ರೈಲಿನಿಂದ ಹಾರಿ ಪ್ರಾಣಬಿಟ್ಟವನ ಕತೆ 'ಹೋಗಿಯೇ ಬಿಟ್ಟದ್ದ.' ಇವುಗಳಲ್ಲಿ ಕತೆಗಾರ್ತಿ ಗಂಡಿಸಿನ ಮನೋವಿಶ್ಲೇಷಣೆಯನ್ನು ಯಶಸ್ವಿಯಾಗಿ ಮಾಡಿದ್ದಾರೆ. 'ವಾಣಿಯ ಸಮಸ್ಯೆ' ಪತಿಯಿಂದ ತಿರಸ್ಕರಿಸಲ್ಪಟ್ಟು ಸಿನಿಮಾ ತಾರೆಯಾಗಿ ಅಣ್ಣನ ಆಸರೆಯಲ್ಲಿ ಬಾಳುದೂಡುತ್ತಾ ನಿಂತವಳೊಬ್ಬಳ ಕತೆ. ಪುನರ್ವಿವಾಹ, ಆಹುತಿ, ಒಂದು ಪುಟ್ಟ ಚಿತ್ರ, ಈ ಕತೆಗಳಲ್ಲೆಲ್ಲಾ "ಆಕ್ರೋಶಕ್ಕೆಳಿಯದೆ ಕಾರುಣ್ಯದ ಹದವನ್ನು ಅರಬಲ್ಲ ಕತೆಗಾರ್ತಿಯ ಕೌಶಲ, ರಸಪಾಕದ ಜಾಣ್ಮೆ, ಸಮತೂಕದ ನೀತಿ" ಇವು ಮೂಡಿಬಂದಿವೆ. ಗೌರಮ್ಮನವರ ಕತೆಗಳಲ್ಲಿ ರಚನಾವೈವಿಧ್ಯ ವಿಪುಲವಾಗಿದೆ. ದ. ರಾ. ಬೇಂದ್ರೆಯವರು ಹೇಳಿರುವಂತೆ ಗೌರಮ್ಮನವರ ಕತೆಗಳು 'ಶ್ರೀನಿವಾಸ'ರ ಆನಂದರ ಕತೆಗಳ ಸಾಲಿನಲ್ಲಿ ನಿಲ್ಲಬಲ್ಲವಾಗಿವೆ.

ನಂಜನಗೂಡಿನ ತಿರುಮಲಾಂಬನವರಿಂದ ಕೊಡಗಿನ ಗೌರಮ್ಮನವರ ವರೆಗಿನ ಸ್ವಾತಂತ್ರ್ಯ ಪೂರ್ವ ಮಹಿಳಾ ಸಾಹಿತ್ಯವನ್ನು ವಿವೇಚಿಸಿದಾಗ ನಮಗೆ ಮುಖ್ಯವಾಗಿ ಕಾಣುವುದು ವಸ್ತುವಿನ ಆಯ್ಕೆಯಲ್ಲಿ, ಬರವಣಿಗೆಯ ಶೈಲಿಯಲ್ಲಿ, ಆಗಿರುವ ಅಗಾಧ ಮಾರ್ಪಾಟು ಸಾಹಿತ್ಯ ಹೆಚ್ಚು ಕಲಾತ್ಮಕವಾಗಿದೆ

ಸಾಹಿತ್ಯದ ಹೊಳೆ ಮುಂಬರುತ್ತಲೇ ಇದೆ. ಶ್ರೀಮತಿ ಜಯಲಕ್ಷ್ಮಿ, ಆರ್. ಶ್ರೀನಿವಾಸನ್' ಸ್ವಾತಂತ್ರ್ಯದ ಪೂರ್ವದಿಂದಲೇ ಕತೆಗಳನ್ನು ಬರೆಯುತ್ತಿದ್ದಾರೆ. ಮನೆಮಾತು ತಮಿಳಾದರೂ ಕನ್ನಡದಲ್ಲಿ ಇವರ ಶೈಲಿ ಚೆನ್ನಾಗಿದೆ. "ಚಿನ್ನದ ಬಳೆ ಮತ್ತಿತರ ಕತೆಗಳು" "ಕಲಾವಿದನ ತ್ಯಾಗ ಮತ್ತಿತರ ಕತೆಗಳು" ಇಲ್ಲಿ ನಾವು ಸಾಂಸಾರಿಕ ಚಿತ್ರಗಳನ್ನು ಕಾಣುತ್ತೇವೆ. ಗೃಹಕೃತ್ಯಕ್ಕೆ ಸಂಬಂಧಿಸಿದಂತೆ ಇವರು ಅನೇಕ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ದಿವಂಗತ ಕುಂತಳಮ್ಮನವರ 'ಪೀಣೆ ಭವಾನಿ ಮತ್ತು ಇತರ ಕತೆಗಳು' ಒಂದು ಉತ್ತಮ ಕಥಾ ಸಂಕಲನ.

ರವೀಂದ್ರನಾಥ ಟಾಗೂರರ ಕಾದಂಬರಿಗಳನ್ನು ಅನುವಾದಿಸಿ "ನೌಕಾಘಾತ" "ಗೋರಾ" "ಮನೆ" "ಜಗತ್ತು" ಇವುಗಳನ್ನು ಕನ್ನಡಿಗರಿಗೆ ಅರ್ಪಿಸಿರುವ ಶ್ರೀಮತಿ ಎಚ್. ವಿ. ಸಾವಿತ್ರಮ್ಮ, ಇವರ "ನಿರಾಶ್ರಿತೆ", "ಮರುಮದುವೆ" ಹಾಗೂ "ಸರಿದ ಬೆರಳು" ಕಥಾಸಂಕಲನಗಳು ಕನ್ನಡ ಕಥಾ ಪ್ರಪಂಚಕ್ಕೆ ವೈಶಿಷ್ಟ್ಯಪೂರ್ಣ ಕಾಣಿಕೆಗಳು. ಸಣ್ಣ ಕತೆಗಾರ ಒಂದೇ ಒಂದು ಸಾಲಿನಲ್ಲಿ, ಒಂದೇ ಒಂದು ಮಾತಿನಲ್ಲಿ, ಒಂದು ಸಣ್ಣ ಘಟನೆಯಲ್ಲಿ ವಸ್ತು ಸಮಗ್ರವನ್ನು, ಅದರ ವಿಶೇಷ ಭಾವವನ್ನೂ ಓದುಗನ ಮುಂದಿಡಬೇಕು. ಈ ಕಲೆ ಶ್ರೀಮತಿ ಸಾವಿತ್ರಮ್ಮನವರಿಗೆ

ತಿರುಗುಬಾಣ

— ಡಿಝು



ಚೆನ್ನಾಗಿ ಸಾಧಿಸಿದೆ. ಹುಟ್ಟು ಕತೆಗಾರರಾದ ಅವರು ಯಾವುದೋ ಮೋಡಿ ಮಾಡಿ ಒಂದು ವಾಕ್ಯದಲ್ಲಿ ಕಥೆಯ ಭಾವವನ್ನೆಲ್ಲಾ ಓದುಗ ಅನುಭವಿಸುವಂತೆ ಮಾಡಿಬಿಡುತ್ತಾರೆ. ಇದಕ್ಕೆ ಉತ್ತಮ ಉದಾಹರಣೆ, ಅವರ ನಿರಾಶ್ರಿತೆ ಸಂಕಲನದಲ್ಲಿನ ಕತೆ 'ಬಹಿಷ್ಕೃತೆ'. ಜಯ ತಮ್ಮ ಮಗಳೆಂದು ಅರಿಯದೆ ಅವಳನ್ನು ಹಡೆದ ತಾಯಿಯೇ ಅವಳನ್ನು ಬಹಿಷ್ಕರಿಸಿದರು. ಈ ಬಹಿಷ್ಕೃತೆಯನ್ನು ಡಾ. ಥಾಮಸರ ಮಗ ಜಾರ್ಜ್ ಮದುವೆಯಾಗಲೊಪ್ಪಿದ. ಹಿಂದೂ ಹುಡುಗಿ ಹಿಂದುವಾಗಿಯೇ ಉಳಿಯಬೇಕೆನ್ನುವ ಡಾ. ಪುಟ್ಟಣ್ಣನ ಕನಸು ಕನಸಾಗಿಯೇ ಉಳಿಯಿತು. ಡಾ. ಥಾಮಸ್ "ಏನು ಪುಟ್ಟಣ್ಣ ಕಡೆಗೂ ನಿಮ್ಮ ಹುಡುಗಿ ನಮ್ಮ ಮತಕ್ಕೆ ಸೇರುವಂತಾಯಿತಲ್ಲ" ಎಂದರು. ಕಥೆಗೆ ಎಂತಹ ಮಾರ್ಮಿಕ ಮುಕ್ತಾಯ! ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಅನೇಕ ಪ್ರಶ್ನೆಗಳು ಸಾವಿತ್ರಮ್ಮನವರ ಕತೆಗಳಲ್ಲಿ ಮೂಡಿ ಬಂದಿವೆ. ಪಶ್ಚಾತ್ತಾಪ, ಜಾತಿಯ ಬಲಿ, ಕಲ್ಯಾಣ, ಗುರುಪೀಠ, ಇವೆಲ್ಲಾ ಕಥನ ಕಲೆಗೆ ಉತ್ತಮ ನಿದರ್ಶನಗಳು. ಮರುಮದುವೆ ಒಂದು ಹೃದಯಸ್ಪರ್ಶಿಯಾದ ಕತೆ. ಹೆಂಗಸರು ಗಂಡಸರ ವ್ಯಕ್ತಿತ್ವವನ್ನು ಯಶಸ್ವಿಯಾಗಿ ಚಿತ್ರಿಸಲಾರರು ಎನ್ನುವವರು ಈ ಕತೆಯ ಕೃಷ್ಣಪ್ಪನ ಪಾತ್ರವನ್ನು ನೋಡಬೇಕು ಎಂದಿದ್ದಾರೆ ವಿಮರ್ಶಕರೊಬ್ಬರು.

ಸ್ವತಂತ್ರ ಕೃತಿಗಳ ಜೊತೆಗೆ ಸಾವಿತ್ರಮ್ಮನವರು ಅನೇಕ ಆಂಗ್ಲ ಕೃತಿಗಳನ್ನು ಅನುವಾದಿಸಿದ್ದಾರೆ. ಲೂಯಿಫಿಷರ್ ಬರೆದ ಮಹಾತ್ಮಾ ಗಾಂಧಿಯವರನ್ನು ಕುರಿತ ಕೃತಿ ಒಂದು ಉತ್ತಮ ಅನುವಾದ. ಎಚ್. ವಿ. ಸಾವಿತ್ರಮ್ಮನವರ ಕಥಾ ಹಾಗೂ ಕಾದಂಬರಿ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಒಂದು ವೈಶಿಷ್ಟ್ಯಪೂರ್ಣ ಕೊಡುಗೆ.

ಕಾಲನ ಕೈವಾಡದಿಂದ ಕನ್ನಡಿಗರು ಅನೇಕ ಜನಪ್ರಿಯ ಬರಹಗಾರರನ್ನು ಕಳೆದುಕೊಂಡ ದುರ್ದೈವಿಗಳಾಗಿದ್ದಾರೆ ಬೆಳಗೆರೆ ಜಾನಕಮ್ಮ, ಕೊಡಗಿನ ಗೌರಮ್ಮ, ಬೆಂಗಳೂರಿನ ಕುಂತಳಮ್ಮ, ಮೈಸೂರಿನ ತ್ರಿವೇಣಿ, ಕರಗಡದ ಜಯಲಕ್ಷ್ಮಿ. ಹಣ್ಣೆಲೆಯನ್ನೂ ಚಿಗುರಿಸಬಲ್ಲ ಶಕ್ತಿಯಿದ್ದ ಇವರು ಇನ್ನೂ ಚಿಗುರೆಲೆಗಳಾಗಿದ್ದಾಗಲೇ ಕಣ್ಮರೆಯಾದುದು ತುಂಬಿ ಬರದ ಕೊರತೆ.

'ತ್ರಿವೇಣಿ' ಇಂದು ಕನ್ನಡಿಗರಷ್ಟೆ ಅಲ್ಲದ ನಮ್ಮ ನೆರೆನಾಡಿನಲ್ಲೂ ಮನೆಮಾತಾಗಿದ್ದಾರೆ. ತ್ರಿವೇಣಿಯ ಕಾದಂಬರಿಗಳು ಸುಪ್ತ ಚೇತನದ ಬಹಳ ಪರಿಣಾಮಕಾರಿ ಅಧ್ಯಯನ. ಮನಶ್ಶಾಸ್ತ್ರದ ನಿಷ್ಣಾಂತ ವಿದ್ಯಾರ್ಥಿನಿ, ತ್ರಿವೇಣಿ. ಮಾನವನ ಹಲವಾರು ಭಾವ ರಾಗಗಳ ಅರಿವು ಆಕೆಗಿತ್ತು. ಪ್ರೇಮದ ನೂರು ವಿನ್ಯಾಸಗಳನ್ನು ಚಿತ್ರಿಸಬಲ್ಲ ಶಕ್ತಿಯಿತ್ತು. ಸ್ತ್ರೀಯ ಅಸಂಖ್ಯ ಸೂಕ್ಷ್ಮ ಸಮಸ್ಯೆಗಳ ಆತ್ಮೀಯ ವಿಮರ್ಶಕಿಯಾಗಿದ್ದಳು ಆಕೆ. ತನ್ನ ಹತ್ತು ವರುಷಗಳ ಸಾಹಿತ್ಯವೃತ್ತಿಯಲ್ಲಿ ಆಕೆ ಇಪ್ಪತ್ತು ಕಾದಂಬರಿಗಳನ್ನು ಬರೆದರು. ಮೂರು ಕಥಾ ಸಂಕಲನಗಳನ್ನು ಪ್ರಕಟಿಸಿದರು. 'ಅವಳ ಮನೆ' ಹಾಗೂ 'ಸಮಸ್ಯೆಯ ಮಗು' ಕಾದಂಬರಿಗಳು ಮೈಸೂರು ರಾಜ್ಯ ಸರಕಾರದ ಬಹುಮಾನಕ್ಕೆ ಪಾತ್ರವಾದವು. ಬೆಕ್ಕಿನ ಕಣ್ಣಿನಲ್ಲಿ ತಾಯಿಒಲವಿನ ಹಸಿವಿನ ಪದರು ಪದರುಗಳನ್ನು ತೆರೆದು ತೋರಿದ್ದಾರೆ. 'ದೂರದ ಬೆಟ್ಟ'ದಲ್ಲಿ ಬಾಹ್ಯ ವ್ಯಕ್ತಿತ್ವದೊಡನೆ ಮಾನವನ ಆಂತರಿಕ ಶಕ್ತಿಯ ಪ್ರಬಲ ಹೋರಾಟವನ್ನು ಕಾಣುತ್ತೇವೆ. 'ಮುಚ್ಚಿದ ಬಾಗಿಲ' ಅಂತರ್‌ಮನೋವ್ಯಾಪಾರದ ಒಂದು ವಾಸ್ತವಿಕ ಚಿತ್ರಣ. ಹುಚ್ಚರನ್ನು ಕಂಡು ಜಗತ್ತು ನಗುತ್ತದೆ. ಆದರೆ ಜಗತ್ತನ್ನು ಕಂಡು ಹುಚ್ಚರು ನಗಬೇಕಾದ ಪ್ರಸಂಗಗಳು ಎಷ್ಟಿಲ್ಲ? ಮಾನಸಿಕ ಸಮಸ್ಯೆಗಳು ಮಾತ್ರವಲ್ಲದೆ ಹೆಣ್ಣಿನ ಬದುಕಿನ ವಿವಿಧ ಮುಖಗಳು ಆಕೆಯ ಬರವಣಿಗೆಯ ವಸ್ತುಗಳಾಗಿವೆ. 'ಅಪಸ್ವರ' 'ಕಂಕಣ' 'ವಸಂತಗಾನ' 'ಹೃದಯ ಗೀತೆ' 'ತಾವರೆ ಕೊಳ' 'ಕಾಶೀಯಾತ್ರೆ' 'ಶರಪಂಜರ' ಇವು ಹೆಣ್ಣಿನ ಜೀವನದ ವಿವಿಧಾಂಶಗಳ ಚಿತ್ರಣವಾಗಿವೆ. ತ್ರಿವೇಣಿಯ ಕಥೆ, ಕಾದಂಬರಿಗಳಲ್ಲಿ ಸರಳವಾದ ನಿರೂಪಣೆ, ರಸವತ್ತಾದ ಸಂಭಾಷಣೆ ಆತ್ಮೀಯವಾದ ಅರಿವು ತುಂಬಿವೆ. 'ಚಿನ್ನದ ಸರ' ಹೆಣ್ಣಿನ ಕಣ್ಣೀರಿನ ಬಾಳನ್ನು ಹೃದಯಂಗಮವಾಗಿ ಚಿತ್ರಿಸಿರುವ ಕತೆ. ಹಿತಮಿತವಾದ ಹಾಸ್ಯ, ಮಿಂಚು ಮಾತು, ಎಲ್ಲದಕ್ಕೂ ಮಿಗಿಲಾಗಿ ಮನುಷ್ಯನ ಭಾವ ವಿಶ್ಲೇಷಣೆ, ಸರಳ ಸುಂದರ ಕಾವ್ಯಮಯತೆ 'ತ್ರಿವೇಣಿ'ಯನ್ನು ಕನ್ನಡದ ಕಣ್ಮಣಿಯನ್ನಾಗಿ ಮಾಡಿವೆ.

ಕಾದಂಬರಿ ಕ್ಷೇತ್ರದಲ್ಲಿ ಯಶಸ್ವಿಯಾಗಿ ಕೃತಿ ರಚನೆ ಮಾಡಿರುವವರಲ್ಲಿ 'ವಾಣಿ' ಅನುಪಮಾ ನಿರಂಜನ, ಎಂ. ಕೆ ಜಯಲಕ್ಷ್ಮಿ, ಉಷಾದೇವಿ, ಎಂ. ಕೆ. ಇಂದಿರಾ ಇವರು ಪ್ರಮುಖರಾಗಿದ್ದಾರೆ. ಕಾದಂಬರಿ ಕ್ಷೇತ್ರ ಅನೇಕ ಮಹಿಳಾ ಬರಹಗಾರರನ್ನು ಆಕರ್ಷಿಸಿದೆ. ಪ್ರೇಮಾ ಭಟ್, ಆರ್ಯಾಂಬ ಪಟ್ಟಾಭಿ ನೀಳಾದೇವಿ, ಸಾವಿತ್ರಿದೇವಿ ನಾಯುಡು, ಎಂ. ಸಿ. ಪದ್ಮ, ಎಚ್. ಆರ್. ಇಂದಿರಾ, ಶಾರದಾ ಮೊದಲಾದ ಅನೇಕರು ಕಾದಂಬರಿಗಳನ್ನು ರಚಿಸಿದ್ದಾರೆ. ವಾಣಿ, ಅನುಪಮ, ಎಂ. ಕೆ. ಇಂದಿರಾ ಇವರ ಕೃತಿಗಳಿಗೆ ರಾಜ್ಯ ಸರಕಾರದ ಬಹುಮಾನ ದೊರಕಿದೆ. ಒಂದೆರಡು ಕೃತಿಗಳನ್ನು ಬಿಟ್ಟು ಉಳಿದೆಲ್ಲ ಕೃತಿಗಳಿಗೂ ಮಧ್ಯಮ ವರ್ಗದ ಕುಟುಂಬ ಜೀವನವೇ ವಸ್ತು. ವಾಣಿಯವರ ಕಾದಂಬರಿಗಳಾದ 'ಬಿಡುಗಡೆ' 'ಚಿನ್ನದ ಪಂಜರ' 'ಎರಡು ಕನಸು' 'ಮನೆ ಮಗಳು' 'ಶುಭ ಮಂಗಳ' ಇವೆಲ್ಲವೂ ಕುಟುಂಬ ಜೀವನವನ್ನು ಓದುಗರಿಗೆ ವಿವಿಧ ರೀತಿಯಲ್ಲಿ ಪರಿಚಯ ಮಾಡಿಕೊಡುತ್ತವೆ. ವಾಣಿಯವರ ಕಾದಂಬರಿಗಳಲ್ಲಿನ ಓಟ ಎಲ್ಲಿಯೂ ಕುಂಟದೆ ಓದುಗರನ್ನು ಒಂದು ವಿರಸ ಸರಸ ಪ್ರೇಮಮಯ ವಾತಾವರಣದಲ್ಲಿ ತೇಲಿಸುತ್ತದೆ. ಯಾವ ರೀತಿಯ ಕ್ಲಿಷ್ಟ ರಚನಾತಂತ್ರವಿಲ್ಲದ ವಾಣಿಯವರ ಕಾದಂಬರಿಗಳು ತಮ್ಮ ಸುಮಧುರ ವಸ್ತು ನಿರೂಪಣೆಯಿಂದ ಮನರಂಜಕವಾಗಿವೆ

ವೈದ್ಯಕೀಯ ರಂಗದಲ್ಲಿ ವಿಶಿಷ್ಟವಾದ ಸೇವೆ ಸಲ್ಲಿಸುತ್ತಿರುವ ಡಾ|| ಅನುಪಮಾ ನಿರಂಜನ ಅವರು ಸಾಹಿತ್ಯರಂಗದಲ್ಲೂ ಅಷ್ಟೇ ವಿಶಿಷ್ಟವಾದ ಸೇವೆ ಸಲ್ಲಿಸುತ್ತಿದ್ದಾರೆ. 'ಸಂಕೋಲೆಯೊಳಗಿಂದ' ಮತ್ತು ಶ್ವೇತಾಂಬರಿ ಕಾದಂಬರಿಗಳಲ್ಲಿ ವೈದ್ಯಕೀಯ ಕ್ಷೇತ್ರದ ಓರೆಕೋರೆಗಳು ಹಾಗೂ ಉದಾತ್ತತೆ ಸ್ವಾನುಭವದಿಂದ ಪ್ರಾಮಾಣಿಕವಾಗಿ ಕಲಾತ್ಮಕವಾಗಿ ಚಿತ್ರಿಸಲ್ಪಟ್ಟಿವೆ. ಸಂಕೋಲೆಯೊಳಗಿಂದ ಕಾದಂಬರಿಯಲ್ಲಿ ಸ್ತ್ರೀ ಸ್ವಾತಂತ್ರ್ಯದ ಅರ್ಥವೇನು ಎಂಬುದರ ಮೇಲೆ 'ಕ್ಷ' ಕಿರಣ ಬೀರಲಾಗಿದೆ. ಹಿಮದ ಹೂ, ನೂಲು ನೆಯ್ದ ಚಿತ್ರ ಇವುಗಳಲ್ಲೂ ಕೆಲವೊಂದು ಸಣ್ಣ ಕತೆಗಳಲ್ಲೂ ಅನುಪಮಾಅವರ ತಂತ್ರದ ಶೈಲಿಯ ಹೊಸತನ್ನು ಕಾಣಬಹುದು. ಹಳ್ಳಿಯ ಬಾಳಿನ ಕಷ್ಟನಷ್ಟಗಳ ಚಿತ್ರ 'ನೂಲು ನೆಯ್ದ ಚಿತ್ರ'. ವೈದ್ಯರಾಗಿ ಜನರ ಮಾನಸಿಕ, ದೈಹಿಕ ಕಾಯಿಲೆಗಳನ್ನು ಗುಣಪಡಿಸುತ್ತಿರುವ ಇವರು ಸಮಾಜದ ಕಾಯಿಲೆಗಳಿಗೆ ಸಾಹಿತ್ಯದಲ್ಲಿ ಶಾಶ್ವತ ಪರಿಹಾರವನ್ನು ಹುಡುಕಲು ಮಾಡುತ್ತಿರುವ ಕಾರ್ಯ ಅಭಿನಂದನಾರ್ಹ. ರೂವಾರಿಯ ಲಕ್ಷ್ಮಿ, ಏಳು ಸುತ್ತಿನ ಕೋಟೆ, ಕಣ್ಮಣಿ ಇವರ ಕಥಾಸಂಕಲನಗಳು

ಹಲವು ಕಾದಂಬರಿಗಳನ್ನು ಬರೆದು ಜನಪ್ರಿಯರಾಗಿದ್ದ ಶ್ರೀಮತಿ ಎಂ. ಕೆ. ಜಯಲಕ್ಷ್ಮಿ ಅವರು ಚಿಕ್ಕ ವಯಸ್ಸಿನಲ್ಲೇ ಕಾಲವಾದರು. ಕೌಟುಂಬಿಕ ಜೀವನದ ಸಮಸ್ಯೆಗಳೇ ಇವರ ಕಾದಂಬರಿಗಳಿಗೂ ವಸ್ತು. ನಿಂದೆಯ ನಳಿ, ಮಾಯದ ಬಲೆ ಮೊದಲಾದ ಕಾದಂಬರಿಗಳನ್ನು ಓದಿದವರಿಗೆ ಇವರ ಕಾದಂಬರಿಗಳಲ್ಲಿನ ಪ್ರಸಂಗಗಳ ಸಂಖ್ಯೆಯೂ ಪಾತ್ರಗಳ ಸಂಖ್ಯೆಯೂ ಕಡಿಮೆಯಾಗಿದ್ದಿದ್ದರೆ ಒಳ್ಳೆಯದಾಗುತ್ತಿತ್ತೇನೋ ಎನಿಸುತ್ತದೆ. ಬಾಳು ಬೆಳಗಿತು, ಮೋಡ ಚದುರಿತು ಇವರ ಇನ್ನೆರಡು ಕಾದಂಬರಿಗಳು. ಉತ್ತಮ ಭವಿಷ್ಯವಿದ್ದ ಇವರೂ ಕಾಲವಾದದ್ದು ನಾಡಿನ ದೌರ್ಭಾಗ್ಯ.

'ಉಷಾದೇವಿ'ಯವರ 'ಧೂಮಕೇತು' 'ಮೊಗ್ಗಿನ ಜಡೆ' ಈ ಎರಡೂ ಕಾದಂಬರಿಗಳು ಒಂದೇ ತತ್ವದ ಎರಡು ಮುಖಗಳನ್ನು ಚರ್ಚಿಸಿವೆ. ಹೆಣ್ಣನ್ನು ಹೆಣ್ಣಿನಂತೆಯೇ ಬೆಳೆಸಬೇಕು ಎಂಬ ತತ್ವದ ಆಧಾರದ ಮೇಲೆ ರಚಿತವಾದ ಕಾದಂಬರಿ 'ಧೂಮಕೇತು'. ಹೆಣ್ಣಿನ ವೇಷದಲ್ಲಿ ತಿರುಗಾಡುತ್ತಿದ್ದ ಗಂಡಿನ ಕತೆ 'ಮೊಗ್ಗಿನ ಜಡೆ' ಮನೋವಿಕಾರವೊಂದರ ಮನಮುಟ್ಟುವ ಚಿತ್ರಣ

ತಮ್ಮ ಮಧ್ಯ ವಯಸ್ಸಿನಲ್ಲಿ ಕಾದಂಬರಿ ರಚನೆಗೆ ತೊಡಗಿದ್ದರೂ ಅತ್ಯಲ್ಪ ಕಾಲದಲ್ಲೇ ಉತ್ತಮ ಕಾದಂಬರಿಗಳನ್ನು ರಚಿಸಿ ಜನರ ಮನ್ನಣೆಗೆ ಪಾತ್ರರಾಗಿ ರಾಜ್ಯಸರಕಾರದ ಬಹುಮಾನವನ್ನೂ ಪಡೆದಿರುವ ಕಾದಂಬರಿಗಾರ್ತಿ ಶ್ರೀಮತಿ ಎಂ. ಕೆ. ಇಂದಿರ. ಮಲೆನಾಡಿನ ಕುಟುಂಬ ಜೀವನವನ್ನು ಚಿತ್ರಿಸಿ ಅದಕ್ಕೆ ಸರಿ ಹೊಂದುವ ಪಾತ್ರಗಳನ್ನು ಸೃಷ್ಟಿಸಿ, ಅದಕ್ಕೆ ಹೊಂದುವ ಶೈಲಿಯನ್ನೇ ಉಪಯೋಗಿಸಿ ತಮ್ಮ 'ತುಂಗ—ಭದ್ರೆ' ಕಾದಂಬರಿಯನ್ನು ಯಶಸ್ವಿಯಾಗಿಸಿದ್ದಾರೆ.

ಅವಳು
ಸೌಂದರ್ಯವತಿಯಲ್ಲವೇ ?
ಹೌದು
ಅವಳು ಸುಂದರಿ !



ಅವಳು ಅಫಘಾನ ಸ್ನೋ ಸೌಂದರ್ಯ ಸಾಧನಗಳಿಗೆ ಕೃತಜ್ಞಳಾಗಿದ್ದಾಳೆ. ಇದು ಸೌಂದರ್ಯಕ್ಕೆ ಸಹಾಯಕವಾಗಿದೆ. ಇದು ಲಕ್ಷಾಂತರ ಕುಮಾರಿಯರಿಗೆ ಅವರ ಸೊಬಗು ಮತ್ತು ಪ್ರಭಾವಶಾಲಿ ಲಾವಣ್ಯವನ್ನು ವೃದ್ಧಿಸಲು ಸಹಾಯಕವಾಗಿದೆ.

ಅಫಘಾನ ಸ್ನೋ:- ಸೌಂದರ್ಯ ಸಹಾಯಕ್ಕೆ ಒಂದು ಅತ್ಯುತ್ತಮ ಸಾಧನ.

ಅಫಘಾನ ಸ್ನೋ:- ಮುಡಿಮೆಗಳ ಮತ್ತು ನಿರಿಗೆಗಳ ನಾಶಕ್ಕೆ ಇದೊಂದು ಉತ್ತಮ ಚರ್ಮದ ಟಾನಿಕ್. ಎಲೆಯ ಸದೃಶವಾದ ಮೃದು ಚರ್ಮವನ್ನು ಕಾಯುತ್ತದೆ. ೪ ನಮೂನೆಗಳಲ್ಲಿ ಲಭ್ಯವಿವೆ.

ಅಫಘಾನ ಫೇಸ ಪೌಡರ:- ನ್ಯೂನತೆ ಇಲ್ಲದ ಮತ್ತು ಮೃದುತ್ವವುಳ್ಳ ೪ ಶೇಡುಗಳಲ್ಲಿ ಲಭ್ಯವಿದೆ.

ಅಫಘಾನ ಲಿಪ್‌ಸ್ಟಿಕ್:- ನಿಮ್ಮ ತುಟಿಗಳನ್ನು ಮಿನುಗುವಂತೆ ಮತ್ತು ಆರ್ದ್ರತೆಯಿಂದಿರುವಂತೆ ವಿಶಾಲವಾದ ಶ್ರೇಣಿಗಳಲ್ಲಿ.

ಅಫಘಾನ ನೇಲ್ ಪಾಲಿಶ್:- ಪ್ರತಿಯೋರ್ವರ ರುಚಿಗನುಗುಣವಾಗಿ ಬೆಡಗಿನ ಬಣ್ಣಗಳಲ್ಲಿ ಸುಲಭವಾಗಿ ಒಡೆಯುವ ಉಗುರುಗಳನ್ನೂ ಇದು ರಕ್ಷಿಸುತ್ತದೆ.

ಅಫಘಾನ ಕ್ರೀಮ ಕೇಕ್:- ಕೈ ಹಿಡಿಕೆಯಲ್ಲಿ ಬರುವಂತೆ ರಚಿಸಿದ ಕ್ರೀಮ ಬೆಂಡೆದ ಪೌಡರ. ಯಾವುದೇ ಮೇಕ್‌ಪ್ಗಿಗೆ ಮೃದುವಾದ ಒನಪು ಬರುವ ತಾತ್ಕಾಲಿಕ ಸೌಂದರ್ಯ ಸಾಧನ

ಅಫಘಾನ ಸ್ನೋ

ಸೌಂದರ್ಯ ಸಾಧನಗಳು

ಈ. ಎಸ್. ಪಾಟನವಾಲಾ
ಮುಂಬಯಿ-೨೨ (ಭಾರತ)

ಹಂಚ್ಚಿಕುರುಡಿಯುರನ್ನು ಜೀವಂತವಾಗಿಸಿರುವ ಕೃತಿ ಇದು. 'ಸದಾನಂದ'ನಂತಹ ಆದರ್ಶ ಕಾದಂಬರಿಯ ಕರ್ತೃ ಶ್ರೀಮತಿ ಇಂದಿರಾ ಅವರ ಕಾದಂಬರಿಗಳು ಕುಟುಂಬ ಜೀವನದ ಚಿತ್ರಗಳಾಗಿ ಸರಸ ಸುಂದರವಾಗಿವೆ. ಗೆಜ್ಜೆ ಪೂಜೆ, ಹೆಣ್ಣಿನ ಆಕಾಂಕ್ಷೆ, ಬ್ರಹ್ಮಚಾರಿ ಮೊದಲಾದ ಕೃತಿಗಳಿಂದ ಈಗಾಗಲೇ ಪ್ರಸಿದ್ಧ ಕಾದಂಬರಿಗಾರ್ತಿಯಾಗಿರುವ ಇವರು ರಾಮಾಯಣದ ಸ್ತ್ರೀ ಪಾತ್ರಗಳನ್ನು ಕುರಿತು ಒಂದು ಬೃಹತ್ ಗ್ರಂಥವನ್ನು ಬರೆಯುವ ಯೋಜನೆ ಮಾಡಿದ್ದಾರೆ.

ಇತ್ತೀಚಿನವರೆಗೂ ಕಾದಂಬರಿಯ ರಚನೆಗೆ ಕೈಹಾಕದೆ ಕಥಾಸಾಹಿತ್ಯದಿಂದಲೇ ಕನ್ನಡಿಗರ ಹೃದಯವನ್ನು ಗೆದ್ದ ಕತೆಗಾರ್ತಿ ಗೀತಾ ಕುಲಕರ್ಣಿ. ಶ್ರೀಮತಿ ಗೀತಾ ಕುಲಕರ್ಣಿಯವರು ಶ್ರೀಯುತ ದ. ಬಾ, ಕುಲಕರ್ಣಿ ಅವರು ಹೇಳಿರುವಂತೆ 'ಪುಟ್ಟ ಗೌರಮ್ಮ'ನೇ ಸರಿ. ಇವರ ಕಥಾ ಸಂಕಲನಗಳಾದ 'ತೇಲಿ ಹೋದ ಮೋಡ' ಮತ್ತು 'ಮೌನ ಸಂಧಾನ' ಇವೆರಡೂ ನಾರೀ ಜೀವನದ ಮಾರ್ಮಿಕ ವರ್ಣನೆಗಳು. ದ. ರಾ. ಬೇಂದ್ರೆಯವರು ಮುನ್ನುಡಿ ಬರೆಯುತ್ತ "ಈ ಕಥಾ ಸಂಕಲನದ ಉದ್ದಕ್ಕೂ ಸ್ತ್ರೀ ಹೃದಯದ ವಿವಿಧ ಭಂಗಿಗಳನ್ನೂ ವಿವಿಧ ವಿಕಾರಗಳನ್ನೂ ವಿಲಾಸಗಳನ್ನೂ ಕಾಣುತ್ತೇನೆ. ಕತೆಗಾರ್ತಿಯ ಮುಖ್ಯ ಕೌಶಲ ವಾಸ್ತವ ಚಿತ್ರಗಳನ್ನು ಮೂರ್ತಿಮತ್ತಾಗಿ ಬರೆಯುವುದರಲ್ಲಿದೆ" ಎಂದಿದ್ದಾರೆ. ಇದು ಸತ್ಯ. ಮೌನ ಸಂಧಾನ ಅತ್ಯಂತ ಮಧುರವಾದ ಸಾಂಸಾರಿಕ ಚಿತ್ರ. ಈಚೆಗೆ ಅವರು ಕಾದಂಬರಿಗಳನ್ನು ಬರೆಯುತ್ತಿದ್ದಾರೆ. ಇಲ್ಲಿಯೂ ಅವರು ಜನಪ್ರಿಯರಾಗಿದ್ದಾರೆ.

ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್, ಆಧುನಿಕ ಸಂಕೇತಗಳನ್ನು ಬಳಸಿ, 'ನವ್ಯಕತೆ'ಯನ್ನು ಬರೆಯುವರಲ್ಲಿ ನಿಪುಣರು. 'ಸಂಗಮ' ಒಂದು ನವ್ಯ ಕಥಾ ಸಂಗ್ರಹ. ಆದರೆ ಆಂಗ್ಲ ಸಾಹಿತ್ಯದ ಹಾಗೂ ಇತರ ಸಾಹಿತ್ಯಗಳ ಸಂಕೇತಗಳ, ಪಾತ್ರಗಳ ಪರಿಚಯವಿಲ್ಲದ ವಾಚಕರಿಗೆ ಇವರ ಕತೆಗಳು ನೇರವಾಗಿ ಅರ್ಥವಾಗುವುದಿಲ್ಲ. ಅರ್ಥವಾಗುವವರಿಗೆ ಇವರ ಕತೆಗಳ ಆಳ, ಗಾಂಭೀರ್ಯ ಅರ್ಥವಾಗಿ ಪ್ರಯೋಗದ ಯಶಸ್ಸಿನ ಬಗ್ಗೆ ಮೆಚ್ಚುಗೆಯೆನಿಸುತ್ತದೆ.

ಸುಖದುಃಖ, ಸರಸ, ವಿರಸ, ವ್ಯಂಗ್ಯ, ಭ್ರಾಂತಿ, ಇವುಗಳಿಗೆ ವಿಕಾರ ರೂಪ ಕೊಡದೆ ಸಾಮರಸ್ಯದಿಂದ ನೋಡಿ ಸುಂದರ ಕತೆಗಳನ್ನು ಹೆಣೆದು 'ಬೆಳದಿಂಗಳ ರಾತ್ರಿ, ಎಂಬ ಕಥಾ ಸಂಕಲನವನ್ನು ಕನ್ನಡಿಗರಿಗೆ ನೀಡಿ ಈಗ 'ಗುಲಾಬಿ' ಎನ್ನುವ ಮತ್ತೊಂದು ಕಥಾ ಸಂಕಲನವನ್ನು ಅಚ್ಚಿಗೆ ಸಿದ್ಧಮಾಡಿರುವ ಕತೆಗಾರ್ತಿ ಶ್ರೀಮತಿ ರಾಜೇಶ್ವರಿ ನರಸಿಂಹಮೂರ್ತಿ. ಶ್ರೀ ವಿ. ಸಿ. ಅವರು ಹೇಳಿರುವಂತೆ ಇವರ ಕತೆಗಳಲ್ಲಿ ಜೀವನ ತಿಳಿಯಾಗಿ ನಿಷ್ಕಪಟವಾಗಿ ಮರ್ಯಾದೆ ಮೀರದೆ ಇದೆ.

ಶ್ರೀಮತಿ ಭುವನೇಶ್ವರಿ ಅವರು ಉತ್ತಮ ಕತೆಗಳನ್ನು ಬರೆಯಬಲ್ಲ ಕತೆಗಾರ್ತಿ. ಉಪಾಧ್ಯಾಯ ಜೀವನದ ಬಗ್ಗೆ ಮನಮುಟ್ಟುವ ಕತೆಗಳನ್ನು ಬರೆದಿದ್ದಾರೆ. ಸಂಕಲನಕ್ಕೆ ಹರಕೆಯ ನುಡಿ ಬರೆದಿರುವ ದ. ರಾ. ಬೇಂದ್ರೆಯವರು 'ಇಲ್ಲಿನ ಕಥನ ಶೈಲಿಯು ಸಮಕಾಲಿನ ಸಾಹಿತ್ಯ ಸಂಸ್ಕೃತಿಗಳಿಂದ ರಂಜಿತವಾಗಿದೆ. ಹೃದಯ ವಿಸ್ತಾರವಂತೂ ನವಯುಗದ ಬಾಗಿಲು ತೆರೆದು ರಂಗವಲ್ಲಿ ಹಾಕಿದಂತಿದೆ. ಸುಸ್ವಾಗತಕ್ಕೆ ಎಂದಿದ್ದಾರೆ. ಈ ಸಂಕಲನವೇ 'ಕರುಳಿನ ಕರೆ' 'ಕಾಯಕಾಣದ ಜೀವ' ಸಂಕಲನವನ್ನು ಕೊಟ್ಟ ಸೌ॥ ಭುವನೇಶ್ವರಿ ಅವರ ಎರಡನೆಯ ಸಂಕಲನ ಇದು. ಪಾತ್ರ ಸೃಷ್ಟಿ ಅನುಭವದಿಂದ ಪಕ್ವಗೊಂಡು ಜೀವಂತವಾಗಿದೆ, ಇವರಿಂದ ಇನ್ನೂ ಪರಿಪೂರ್ಣ ಕತೆಗಳನ್ನು ನಿರೀಕ್ಷಿಸಬಹುದು. ಶ್ರೀಮತಿ ಶಾಂತಾದೇವಿ ಕಣವಿ ಅವರು ಕೆಲವು ಉತ್ತಮ ಕತೆಗಳನ್ನು ಬರೆದಿದ್ದಾರೆ. ಅವರ ಒಂದು ಕಥಾಸಂಕಲನ ಇದೀಗ ಪ್ರಕಟವಾಗಿದೆ.

ಕಥೆಗಳನ್ನು ಬರೆಯುವ ಬಳಗ ಹೆಚ್ಚಿದೆ. ಮಲ್ಲಿಗೆ, ಸುಧಾ, ಕರ್ಮವೀರ, ಮುಂತಾದ ವಾರಪತ್ರಿಕೆಗಳು ದಿನಪತಿಕೆಗಳ ವಿಶೇಷಾಂಕ, ಸಾಪ್ತಾಹಿಕಗಳೂ ಮಹಿಳಾ ಬರಹಗಾರರಿಗೆ

ಕೇಶಧಾರಿ!



- ಡಿಕ್ಷಿ

ಉತ್ತೇಜನೆ ಕೊಟ್ಟಿವೆ. ನೀಳಾದೇವಿ ಅವರ ಕಾದಂಬರಿ ಧಾರಾವಾಹಿಯಾಗಿ ಸುಧಾದಲ್ಲಿ ಪ್ರಕಟವಾಗುತ್ತಿದೆ. ಶ್ರೀಮತಿ ಗೀತಾ ಕುಲಕರ್ಣಿ ಅವರ ಧಾರಾವಾಹಿ ಈಗ ಕರ್ಮವೀರದಲ್ಲಿ ಪ್ರಕಟವಾಗುತ್ತಿದೆ ಒಟ್ಟಿನಲ್ಲಿ ಕನ್ನಡ ಕಥಾ ಸಾಹಿತ್ಯಕ್ಕೂ, ಕಾದಂಬರಿ ಸಾಹಿತ್ಯಕ್ಕೂ ಮಹಿಳೆಯ ಕಾಣಿಕೆ ಮೆಚ್ಚುವಂತಿದೆ

ನಾಟಕಗಳನ್ನು ಅದರಲ್ಲೂ ಹಾಸ್ಯ ನಾಟಕಗಳನ್ನೂ, ಹಾಸ್ಯ ಲೇಖನಗಳನ್ನೂ ಬರೆದು, ಆಡಿ, ಓದಿ ಜನರಿಗೆ ಮನರಂಜನೆಯನ್ನು ಒದಗಿಸಿ ಅದರ ಜೊತೆಗೇ ಸಮಾಜದ ಹುಳುಕು ಸೊಗಸನ್ನು ತೋರಿಸುತ್ತಿರುವ ನಾಟಕ ಕರ್ತ್ರಿ ಶ್ರೀಮತಿ ಟಿ. ಸುನಂದಮ್ಮನವರು. 'ದೀಪಾವಳಿ – ಧೂಪಾವಳಿ' 'ಆದರ್ಶದ ಆಡಂಬರ, 'ಸಾಮೂಹಿಕ ಪಾಠಶಾಲೆ' ಇವರ ಪ್ರಕಟಿತ ನಾಟಕಗಳಲ್ಲಿ ಕೆಲವು. ವಿಡಂಬನೆ, ಹಾಸ್ಯಮಯ ಶೈಲಿ, ಹಾಸ್ಯ ಪ್ರಧಾನ ಪ್ರಕರಣಗಳು ಸುನಂದಮ್ಮನವರ ನಾಟಕಗಳು ರಂಗದ ಮೇಲೆ ಯಶಸ್ವಿಯಾಗುವಂತೆ ಮಾಡಿವೆ

ಎಚ್ ಎಚ್ ಪಾರ್ವತಿ ಅವರ 'ಹೆಣ್ಣು ಹೃದಯ ಮತ್ತು ಇತರ ಕತೆಗಳು' ಸಾವಿತ್ರಿ ದೇವಿ ನಾಯಡು ಅವರ 'ವಿರಾಗಿಣಿ' 'ಕೆಸರಿನ ಕಮಲ' ಕಾದಂಬರಿಗಳು, ಆರ್ಯಾಂಬ ಪಟ್ಟಾಭಿ, ಲಲಿತಾಂಬ ಚಂದ್ರಶೇಖರ್ ಸುಶೀಲ ಕೊಪ್ಪರ, ಎಚ್ ಎಸ್. ಕಾತ್ಯಾಯನಿ, ಆನಂದ ಸದಾಶಿವರಾವ್ ಪ್ರತಿಭಾ, ಕೆ. ಸರಸ್ವತಿ, ಮೊದಲಾದ ಅನೇಕರ ಕತೆಗಳು, ಕಾದಂಬರಿಗಳು ಜನರ ಮೆಚ್ಚಿಗೆ ಗಳಿಸಿವೆ.

ಆದರೆ ವಿಚಾರ, ವಿಮರ್ಶಾತ್ಮಕ ಸಾಹಿತ್ಯ ಮಾತ್ರ ಇಲ್ಲವೆಂದೇ ಹೇಳಬೇಕು. ಶ್ರೀಮತಿ ಸರೋಜಿನಿ ಮಹಿಷಿ ಅವರ 'ಕನ್ನಡ ಕವಯಿತ್ರಿಯರು' ಈ ದಿಸೆಯಲ್ಲಿ ಒಂದು ಉದ್ಗ್ರಂಥ. ಶ್ರೀಮತಿ ಶಾಂತಾದೇವಿ ಮಾಳವಾಡ ಅವರೂ ಶ್ರೀಮತಿ ಮಹಿಷಿ ಅವರೂ ಗುರುದೇವಿ ಹಿರೇಮಠ, ಶ್ರೀಮತಿ ಶಾಂತಾ ದಿವಾಕರ, ಶ್ರೀಮತಿ ಶಕುಂತಲಾ ನಾಡಿಗ ಅವರೂ ವಿಮರ್ಶಾತ್ಮಕ ಹಾಗೂ ವಿಚಾರ ಸಾಹಿತ್ಯದ ಬಗ್ಗೆ ಗಮನ ಹರಿಸಿರುವುದು ಸಂತೋಷದ ವಿಷಯ. ಶ್ರೀಮತಿ ಮಾಳವಾಡರ 'ಗೃಹಾಲಂಕಾರ' ಗುರುದೇವಿ ಹಿರೇಮಠರ 'ಶಿವಶರಣೆಯರು', ಶ್ರೀಮತಿ ಸರೋಜಿನಿ ಮಹಿಷಿ ಅವರ 'ಕಸೂತಿ ಕಲೆ' ಮೊದಲಾದ ಪುಸ್ತಕಗಳು ವಿಚಾರ ಸಾಹಿತ್ಯದ ಕೊರತೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿವೆಯಾದರೂ ಈ ದಿಸೆಯಲ್ಲಿ ನಡೆದಿರುವ ಕಾರ್ಯ ಏನೇನೂ ಸಾಲದು. ಶ್ರೀಮತಿ ವನಮಾಲಾ ಆಚಾರ್ ಅವರು ಬಾಲ ಸಾಹಿತ್ಯ ರಚಿಸಿದ್ದಾರೆ. ಎಳೆಯರಿಗಾಗಿ ಬರೆದ ಅವರ ಪೌರಾಣಿಕ ಜಾನಪದ ಕತೆಗಳು ಮೆಚ್ಚುಗೆ ಗಳಿಸಿವೆ. ಆದರೂ ಮಕ್ಕಳನ್ನು ಲಾಲಿಸಿ, ಪೋಷಿಸಿ, ಬೆಳೆಸುವ ಹೆಣ್ಣುಮಕ್ಕಳು ಬಾಲ ಸಾಹಿತ್ಯಕ್ಕೆ ಯಾವ ಗಮನಾರ್ಹ ಕಾಣಿಕೆಯನ್ನೂ ಸಲ್ಲಿಸದಿರುವುದು ವಿಷಾದಕರ

ಮಹಿಳೆಗೆ 'ಮನೆ'ಯೇ ಬಹುಮಟ್ಟಿಗೆ ಜಗತ್ತು. ನಿಜ ಆದರೆ ಇಂದಿನ ಪರಿಸ್ಥಿತಿಯಲ್ಲಿ ಮಹಿಳೆ ತನ್ನ ದೃಷ್ಟಿಯನ್ನು ಸ್ವಲ್ಪ ಹೆಚ್ಚು ವಿಸ್ತರಿಸಿಕೊಳ್ಳಬೇಕು. ಕುಟುಂಬ ಜೀವನ ಚಿತ್ರಗಳ ಜೊತೆಗೆ ಇಂದು ಜೀವನವನ್ನು ಎದುರಿಸುತ್ತಿರುವ ಅನೇಕ ಪ್ರಾದೇಶಿಕ, ರಾಷ್ಟ್ರೀಯ, ಮತ್ತು ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಅರಿತು ಚರ್ಚಿಸಬೇಕು. ಪ್ರಿಯ-ಪ್ರೇಯಸಿ. ಗಂಡ-ಹೆಂಡತಿ, ಮುದುಕರು-ಮಕ್ಕಳು ಇವರನ್ನು ಎದುರಿಸಿ ಬೃಹದಾಕಾರವಾಗಿ ಬೆಳೆದಿದೆ ಬಾಳಿನ ಸಮಸ್ಯೆ ಮತ್ತು ಹೊರ ಜಗತ್ತು ಮಹಿಳಾ ಲೇಖಕಿಯರು ಬರಿ ಪ್ರೇಮದ ಕತೆಗಳನ್ನೇ ಆಗಲಿ ಅಥವಾ ಸಾಂಸಾರಿಕ ಚಿತ್ರಗಳನ್ನೇ ಕೊಟ್ಟು ತೃಪ್ತರಾಗಬಾರದು ಮನೆ, ಕುಟುಂಬ ಇದು ಮೂಲ ನಿಜ ಆದರೆ ಇದಕ್ಕೆ ಹೊರಗೆ ಇರುವ ಬೃಹತ್ ಪ್ರಪಂಚದ ಕಡೆ ಮಹಿಳೆಯರ ಗಮನ ಹರಿಯಬೇಕು

ಕಥೆ, ಕಾದಂಬರಿ ಕ್ಷೇತ್ರ ಮಹಿಳೆಯರನ್ನು ಚಾಗಿ ಆಕರ್ಷಿಸಿದೆ. ಅನೇಕ ಹೊಸ ಬರಹಗಾರ್ತಿಯರನ್ನು ಆಕರ್ಷಿಸಿದೆ. ಈ ಲೇಖನದಲ್ಲಿ ಇವರೆಲ್ಲರ ವಿಷಯವನ್ನಾಗಲಿ, ಹೆಸರಿಸಿರುವ ಎಲ್ಲರ ವಿಷಯವನ್ನು ವಿಸ್ತಾರವಾಗಿ ಆಗಲಿ ಹೇಳಲು ಸಾಧ್ಯವಿಲ್ಲ. ಇಂದು ಬರಹಗಾರ್ತಿಯರ ಸಂಖ್ಯೆ ಹೆಚ್ಚಿದೆ ಆದರೆ ಬರಹದಲ್ಲಿ ವೈವಿಧ್ಯ ಹೆಚ್ಚಾಗಬೇಕು ಅದು ವಿಸ್ತಾರವಾಗಬೇಕು. ಆಳವಾಗಬೇಕು. ಕೌಟುಂಬಿಕ ಚೇತನವಾದ ಮಹಿಳೆ ನಾಡ ಶಕ್ತಿಯಾಗಬೇಕು. ರಾಷ್ಟ್ರಶಕ್ತಿಯಾಗಬೇಕು. ವಿಶ್ವಚೇತನವಾಗಬೇಕು. ಅಂತಹ ಕೊಡುಗೆಯನ್ನು ಕನ್ನಡ ಮಹಿಳೆಯರಿಂದ ಅಪೇಕ್ಷಿಸುತ್ತಾಳೆ ಕನ್ನಡ ನಾಡ ತಾಯಿ, ಕರ್ನಾಟಕದೇವಿ.

With best compliments from:

Wish you Happy Deepavali

KIRLOSKAR ELECTRIC CO. LTD..

Manufacturers of

Electric Motors,
Transformers, Alternators,
Welding Generators
D. C. Motors etc.

POST BOX NO. 1017. BANGALORE-3

ಜೀವ ಪ್ರದೀಪ

ತಿಳಿ ನೀಲಿ ನಸು ನಗೆಯ ಮುಸುಕಿನಲ್ಲಿ
ಇಣುಕುತಿವೆ ಅರುಣ-ಕಿರಣ
ತಾಯ ಸೆರಗನು ಸರಿಸಿ ಅಚೆ-ಈಚೆ
ಕೂಸು ಚಾಚಿದ ಹಾಗೆ ತನ್ನ ಚರಣ!
ಬೆಳಗಾಗುತಿದೆ ಪೂರ್ಣ!

ಕಾಳ ರಾತ್ರಿಯ ಗರ್ಭದಲ್ಲಿಯೇ ಬೆಳೆದಿಹುದು
ಬೆಳಕಿನೀ ಮಗುವು
ಝುಗ್ಗೆಂದು ಹೊಳೆ ಹೊಳೆದು
ನಕ್ಕಿಹುದು ಬುವಿಯಗಲ;
ಜನುಮ ಜನುಮದ ನಂಟು
ನಿನಗು ನನಗೂ ಉಂಟು :
ಈಗ ನಮ್ಮಲ್ಲೆಲ್ಲ ಬೆಳಗು ಪರಿಪೂರ್ಣ !

ಮುಗಿಲ ಗಂಗಾಳದಲ್ಲಿ ಸೂರ್ಯದೀಪ
ಪೃಥ್ವಿದೇವಿಯು ಹಿಡಿದ ಪಂಚಾರತಿ
ಎಂದೆಂದು ಬೆಳಗುತಿದೆ ಜೀವ ಪ್ರದೀಪ!
ಹಾಡುತಿವೆ ಪಕ್ಷಿಗಳು ಶುಭಕೀರುತಿ.
'ಕೂಹುಃ ಕೂಹೂಃ ಕೂಹುಃ
ಬದುಕು ಬೆಲ್ಲಾ-ಬೇವು!'

'ಗೋವುಗಳ ಕೆಚ್ಚಲಲಿ
ಹಾಲಿನೊರತಿ
ಜೀವ ಜೀವ ಸಂಪ್ರೀತಿ
ಹಾಡಿದನಿತೂ ಕೊರತಿ
ಹೊಸ ಬಾಳ ಹಾಡು
ಹಿಡಿದು ನಾದದ ಜಾಡು
ಹಾಡು... ಹಾಡು....!

-ಪಂಚಾಕ್ಷರಿ ಹಿರೇಮಠ



HINDUSTAN DIESEL

35 H.P. & 50 H.P. TRACTORS



HINDUSTAN Diesel Tractors are specially designed to meet the rigorous demands of farming, industry and mining. They are a perfect blend of power, economy and usefulness. Designed and built by men who introduced tractors into Indian agriculture forty years ago, the HINDUSTAN Diesel Tractors combine permanence with perfection to give you trouble-free service.

Distributors For Mysore State:

OMSUN ENGINEERING COMPANY

JAYACHAMARAJENDRA ROAD, BANGALORE - 2

PHONE: **26646** :: GRAMS: **OMSUN**

ಎಳೆಯರಿಗಾಗಿ...

ದುಡುಕಿನ ಫಲ
ಒಂದೂರಿನಲ್ಲಿ ಒಬ್ಬ ರಾಜ. ಆತ ದಯಾಳು. ಆದರೆ ಒಂದು ದುರ್ಗುಣವಿತ್ತು. ಕೋಪ ಬಂದಾಗ ದುಡುಕಿ ಆಜ್ಞಾಪಿಸುತ್ತಿದ್ದ. ಇದರಿಂದ ನಾಕರರಿಗೆ ಕಷ್ಟವಾಗುತ್ತಿತ್ತು. ಅತಿಮುದ್ದಾದ ಜಿಂಕೆಯೊಂದು ಆತನಲ್ಲಿತ್ತು....
1
ಅದನ್ನು ರಾಜ ಅತಿಯಾಗಿ ಪ್ರೀತಿಸುತ್ತಿದ್ದ
2
ಒಂದು ದಿನ ಜಿಂಕೆಗೆ ಸ್ವಸ್ಥವಿಲ್ಲವೆಂದು ತಿಳಿದು ಬೇಸರದಲ್ಲಿದ್ದಾಗ....
3
ಪ್ರಭೋ! ಜಿಂಕೆಗೆ ಜ್ವರ ಜಾಸ್ತಿಯಾಗಿದೆ. ಏನೂ ತಿನ್ನುವುದಿಲ್ಲ.
ಹಾಳಾಗಲಿ ಹೋಗು! ಸತ್ತಿತೆಂದು ಹೇಳಿದವರ ತಲೆ ಕಡಿಯುತ್ತೇನೆ.
ಒಂದು ದಿನ ಜಿಂಕೆ ಸತ್ತುಹೋಯಿತು. ರಾಜನಿಗೆ ಸುದ್ದಿ ತಿಳಿಸಲು ಎಲ್ಲರಿಗೂ ಭಯ..
4
ಈ ಸುದ್ದಿ ತಿಳಿಸಪ್ಪ! ತಮ್ಮಾ!
ಏನು! ನನ್ನ ತಲೆ ಹೋಗಲೆಂದೆ? ನಾ ಒಲ್ಲೆ.
ಜಾಣನೊಬ್ಬ ಹೋಗಲೊಪ್ಪಿದ.
5
ಪ್ರಭೋ, ಮನ್ನಿಸಿ! ಜಿಂಕೆ ಇದ್ದಲ್ಲಿಯೇ ಬಿದ್ದಿದೆ. ಕಣ್ಣು ಮುಚ್ಚಿದೆ. ಚಲಿಸಲಾರದು. ತಿನ್ನಲಾರದು. ಉಸಿರಾಡುವುದಿಲ್ಲ.
ಹಾಗಾದರೆ, ಸತ್ತಿತು ಅಲ್ಲವೆ?
6
ನಿಜ.. ಈಗ ತಾವೇ ಸತ್ತಿತೆಂದು ಹೇಳಿದವರು...
ರಾಜನಿಗೆ ತನ್ನಾಜ್ಞೆಯಿಂದ ನಾಚಿಕೆಯಾಗಿ ಮುಂದೆ ಹಾಗೆ ಮಾಡಲಿಲ್ಲ.

‘ಸಿಸು’ ಸಂಗಮೇಶ

ಟಾರೊ ಪೆಟ್ಟಿಗೆ ತೆರೆದ

ಟಾರೊಗೆ ಈಗ ಎಂಟು ವರುಷ. ಅವನು ಸುಂದರ ಹುಡುಗ. ಒಂದು ದಿನ ಒಬ್ಬನೇ ಸಾಗರತೀರದ ಮಳಲಲ್ಲಿ ಹೊರಟಿದ್ದನು. ಸಾಗರದಲ್ಲಿ ದೊಡ್ಡ ದೊಡ್ಡ ತೆರೆಗಳು ಏಳುತ್ತಿದ್ದವು. ತೆರೆಯ ನೀರು ಮಳಲಲ್ಲಿ ದೂರದ ವರೆಗೆ ಬರುತ್ತಿದ್ದವು. ತಿರುಗಿ ಸಾಗರ ಸೇರುತ್ತಿದ್ದವು. ತೆರೆಗಳು ಟಾರೊನ ಪಾದ ತೊಳೆದು ತಿರುಗುತ್ತಿದ್ದವೇನೊ! ದಂಡೆಗೆ ಅಪ್ಪಳಿಸುವ ತೆರೆಗಳನ್ನು ನೋಡುತ್ತ, ಮಳಲಲ್ಲಿ, ಕಾಲಿನಿಂದ ಗೆರೆ ಕೊರೆಯುತ್ತಾ ಸಾಗಿದ್ದನು.

ದೂರದಲ್ಲಿ ಕೆಲ ಹುಡುಗರ ಗುಂಪು ಕಂಡಿತು. ಅವರು ಕೇಕೆ ಹಾಕುತ್ತಿದ್ದರು, ಜಿಗಿದಾಡುತ್ತಿದ್ದರು. ಟಾರೊ ಅಲ್ಲಿಗೆ ಬಂದನು. ನೋಡುತ್ತಾನೇನನ್ನು! ಒಂದು ದೊಡ್ಡ ಆವೆ, ಅದರ ಮೇಲೆ ಕೆಲವರು ಜಿಗಿದಾಡುತ್ತಾರೆ. ಕೆಲವರು ಅದನ್ನು ನೂಕುತ್ತಾರೆ. ಒಬ್ಬನು ಅದರ ಮುಖ ಹಿಡಿದು ಜಗ್ಗುತ್ತಾನೆ, ಆವೆಯನ್ನು ಪೀಡಿಸುವದರಲ್ಲಿಯೇ ಅವರಿಗೆ ಹಿಗ್ಗು. ಇದನ್ನು ಕಂಡು ಟಾರೊ ಮರುಗಿದನು. ಪಾಪ! ಬಡಪಾಯಿ ಆವೆ. ಅದಕೆಷ್ಟು ತೊಂದರೆಯಾಗಿರಬಹುದು! ಎಂದು ವಿಚಾರಿಸಿದನು. “ಗೆಳೆಯರೆ, ಪಾಪ ಅದನ್ನೇಕೆ ಪೀಡಿಸುತ್ತೀರಿ? ಅದೇನು ತೊಂದರೆ ಕೊಟ್ಟಿದೆ ನಿಮಗೆ? ನಿಮ್ಮಂತೆಯೇ ಅದಕ್ಕೂ ಜೀವವಿದೆ. ನಿಮ್ಮ ಚೆಲ್ಲಾಟ ಅದಕ್ಕೆ ಪ್ರಾಣಸಂಕಟ! ಸುಮ್ಮನೆ ಅದನ್ನು ಪೀಡಿಸಬೇಡಿರಿ” ಎಂದು ಹೇಳಿ ಆವೆಯನ್ನು ಅವರ ಕೈಯಿಂದ ಪಾರು ಮಾಡಿದನು.



ಆವೆಗೆ ಆನಂದವಾಯಿತು. ನಮಸ್ಕರಿಸಿ ಹೇಳಿತು: “ನೀನು ಆ ದುಷ್ಟ ಬಾಲಕರಿಂದ ನನ್ನ ಜೀವ ಉಳಿಸಿದೆ. ನಾನು ನಿನ್ನ ಉಪಕಾರವನ್ನು ಮರೆಯಲಾರೆ. ನನ್ನ ಬೆನ್ನ ಮೇಲೆ ಏರು. ನಿನ್ನನ್ನು ಪಾತಾಳಲೋಕಕ್ಕೆ ಸಾಗರ ರಾಜನ ಹತ್ತಿರ ಕರೆದೊಯ್ಯುತ್ತೇನೆ” ಎಂದು ಹೇಳಿತು. ಟಾರೊ ಆವೆಯ ಬೆನ್ನ ಮೇಲೆ ಏರಿದನು. ಆವೆ ಸಾವಕಾಶವಾಗಿ ಸಾಗಿತು. ನೀರಲ್ಲಿ ಈಜುತ್ತಾ ಈಜುತ್ತಾ ಬಹಳ ಆಳಕ್ಕೆ ಇಳಿಯಿತು. ಟಾರೊ ಬೆನ್ನ ಮೇಲೆ ಗಟ್ಟಿಯಾಗಿ ಕುಳಿತಿದ್ದನು. ಮರಿ ಮೀನ–ಹಿರಿ ಮೀನ, ಹಾವು ಮೀನ, ಜಲ್ಲಿ–ಕಲ್ಲಿ ಇನ್ನೂ ಎಂಥೆಂಥವೊ ಜಲಚರಗಳು ಸರಕ್–ಬರಕ್ ಎಂದು ಮಗ್ಗುಲು ಹಾಯ್ದು ಹೋದವು. ಕೆಲ ಕೆಲವಂತೂ ಅವನ ತೋಳಿಗೆ ತಟ್ಟಿ ಹೋದವು. ಟಾರೊ ಗಾಬರಿಯಾದನು. ಆವೆ–“ಟಾರೊ, ಅಂಜಬೇಡ ನಾನಿದ್ದೇನೆ. ಅವು ನಿನಗೇನೂ ಮಾಡುವದಿಲ್ಲ” ಎಂದು ಧೈರ್ಯ ಹೇಳಿತು.

ಇನ್ನೂ ಆಳದಲ್ಲಿ ಇಳಿದರು. ಇಳಿದೇ ಇಳಿದರು. ದೂರದಿಂದಲೇ ಅರಮನೆ ಕಾಣಿಸಿತು. ಟಾರೊ ಹಿರಿ ಹಿರಿ ಹಿಗ್ಗಿದನು. ಬಣ್ಣ ಬಣ್ಣದ ಕಳಸಗಳು, ಗೋಪುರಗಳು ಮನಸ್ಸನ್ನು ಹಿಡಿದವು. ಆವೆಯು ಟಾರೊನನ್ನು ಕೂಡಿಕೊಂಡೇ ಮಹಾದ್ವಾರ ದಾಟಿತು. ಹಾಗೆಯೇ ಸಭಾಮಂದಿರದ ವರೆಗೂ ಹೋಯಿತು. ಅರಸನ ಮುಂದೆ ಇಳಿಸಿತು. ಟಾರೊ ತನ್ನನ್ನು ದುಷ್ಟ ಬಾಲಕರಿಂದ ಉಳಿಸಿದ ಕಥೆಯನ್ನು ಹೇಳಿತು. ಅದು ಅರಸನ ಪ್ರೀತಿಯ ಮಗಳ ಆವೆ. ಕಥೆ ಕೇಳಿ ಅರಸನೂ–ಅರಸುಕುವರಿಯೂ ಸಂತೋಷಪಟ್ಟರು. ತನ್ನ ಆವೆಯನ್ನು ಉಳಿಸಿದ್ದಕ್ಕಾಗಿ ಕುಮಾರಿ ಟಾರೊನ ಬಗ್ಗೆ ಹೆಮ್ಮೆಪಟ್ಟಳು. ಅಲ್ಲಿಯೇ ಇರಲು ಹೇಳಿದಳು. ಅರಸನೂ ಒಪ್ಪಿದನು. ಸುಂದರ ಬನ, ಸುಂದರ ಜನ, ಸುತ್ತಲೂ ಬೆಳೆದ ಹಸಿರು ಪೊದೆ, ಈಜಾಡುವ ಬಣ್ಣ ಬಣ್ಣದ ಮೀನ, ಮೀನದಂತಹ ಕಣ್ಣಿನ ಅರಸುಕುವರಿ ಕಂಡು ಇರಲು ಸಮ್ಮತಿಸಿದನು.

ಅರಸುಕುವರಿ ಟಾರೊ ಜೊತೆಯಾಗಿ ಆಡುತ್ತಿದ್ದರು. ಜೊತೆಯಾಗಿ ಉಣ್ಣುತ್ತಿದ್ದರು. ಇಬ್ಬರೂ ಆಮೆಯನ್ನೇರಿ ಸಾಗರದಲ್ಲಿ ದೂರ–

ದೂರದವರೆಗೆ ಹೋಗುತ್ತಿದ್ದರು. ಅಲ್ಲಿ ಮುತ್ತು ರತ್ನಗಳನ್ನು ಆಯ್ದು ಆಡುತ್ತಿದ್ದರು ಹೀಗೆಯೇ ದಿನಗಳು ಕಳೆದವು.

ಒಂದು ದಿನ ಸಾಗರದ ತೆರೆಯ ಮೇಲೆ ಏರಿಳಿದು ಆಡುತ್ತಿದ್ದರು. ದೂರದಲ್ಲಿ ತೇಲುವ ನಾವು 'ಅಲ್ಲಿಯ ನಾವಿಕರನ್ನು ಕಂಡು ಒಮ್ಮಿಂದೊಮ್ಮೆ ಟಾರೊಗೆ ಮನೆಯ ನೆನಪಾಯಿತು. ತನ್ನ ಮನೆಗೆ ಹೋಗುವದಾಗಿ ಹೇಳಿದನು. ಅರಸನಿಗೂ ಅರಸುಕುವರಿಗೂ ಬಹಳೇ ಕೆಡಕೆನಿಸಿತು. ಅವರು ಅಲ್ಲಿಯೇ ಇರಲು ಹೇಳಿದರು. ಆದರೂ ಟಾರೊ ಮನೆಗೆ ಹೋಗಲು ಹಟ ಹಿಡಿದನು.

ಟಾರೊ ಹೊರಟು ನಿಂತನು. ಅರಸುಕುವರಿ ತನ್ನ ನೆನಪಿಗೆಂದು ಒಂದು ಪೆಟ್ಟಿಗೆಯನ್ನು ಕೊಟ್ಟಳು. ಅದನ್ನು ಎಂದೂ ತೆರೆಯಬಾರದೆಂದು ಹೇಳಿದಳು. ಟಾರೊ ಎಲ್ಲರಿಗೆ ನಮಸ್ಕರಿಸಿ ಆವೆಯನ್ನೇರಿದನು.

ಆವೆ ಟಾರೊನನ್ನು ಹೊತ್ತು ತಂದಿತು. ಸಾಗರದ ದಡದಲ್ಲಿ ಮೊದಲು ಅವನಿದ್ದ ಸ್ಥಳದಲ್ಲಿ ಇಳಿಸಿತು. ನಮಸ್ಕರಿಸಿ ತಿರುಗಿ ಹೋಯಿತು.

ಟಾರೊ ಬೆಳೆದು ದೊಡ್ಡವನಾಗಿದ್ದನು. ಇಲ್ಲಿ ಎಲ್ಲವೂ ಬದಲಾಗಿದ್ದಿತು. ಅವನನ್ನು ಯಾರೂ ಗುರುತಿಸಲಿಲ್ಲ. ಅವನ ಗೆಳೆಯರು ಯಾರು? ಮನೆ ಯಾವುದು? ಒಂದೂ ಗುರುತು ಸಿಗದಂತಾಗಿತ್ತು. ಟಾರೊ ಗಾಬರಿಯಾದನು. ತನ್ನ ಮನೆ ಎಲ್ಲಿದೆ? ತಂದೆ ತಾಯಿಗಳು ಎಲ್ಲಿದ್ದಾರೆ? ಯಾವವೂ ಹೊಳೆಯದಂತಾಯಿತು. ಏನು ಮಾಡಬೇಕು ತಿಳಿಯದಂತಾಯಿತು. ಅಲ್ಲಿಯೇ ಮಳಲಲ್ಲಿ ಕುಸಿದು ಕುಳಿತನು. ಕೈಯಲ್ಲಿ ಪೆಟ್ಟಿಗೆ ಇತ್ತು. ಅದನ್ನು ತೆರೆಯಬೇಕೆಂದು ಮನಸ್ಸಾಯಿತು. "ಎಂದೂ ತೆರೆಯಬಾರದೆಂದು ಅರಸುಕುವರಿ ಹೇಳಿದ್ದಾಳೆ. ತೆರೆಯಲೊ ಬೇಡವೊ ಎಂದು ವಿಚಾರಿಸತೊಡಗಿದನು. ಅದರಲ್ಲಿ ಏನಿದೆಯೋ ಯಾರು ಬಲ್ಲರು? ನನ್ನ ತಂದೆ ತಾಯಿಗಳಿಲ್ಲ. ಗೆಳೆಯರಿಲ್ಲ ಇದರಲ್ಲಿ ಏನಿದ್ದರೇನು? ಎಂದು ಪೆಟ್ಟಿಗೆ ತೆರೆದನು.

ಒಮ್ಮೆಲೇ ಪೆಟ್ಟಿಗೆಯಿಂದ ಹೊಗೆಯ ಮೋಡವೇ ಹೊರಬಂದಿತು. ಮುಗಿಲನ್ನು ಮುತ್ತಿತು. ಅವನನ್ನು ಸುತ್ತಿತು. ಹೊಗೆಯಲ್ಲಿ ಮುಳುಗೆಬಿಟ್ಟನು. ಏನೂ ಕಾಣಿಸದಂತಾಯಿತು.

ಬಿರುಗಾಳಿ ಬಂದು ಹೊಗೆಯನ್ನು ಹಾರಿಸಿಕೊಂಡು ಹೋಯಿತು. ನೋಡುತ್ತಾನೇನನ್ನು? ಟಾರೊ ಮುಪ್ಪಾನುಮುದುಕನಾಗಿದ್ದಾನೆ. ಕೈ ಕಾಲು ನಿರಿಗೆಗಟ್ಟಿವೆ. ಬೆನ್ನು ಬಾಗಿದೆ. ಬಿಳಿಯ ಗಡ್ಡ ಎದೆಯ ಮೇಲೆ ಜೋತಾಡುತ್ತಿವೆ. ಬೆಳ್ಳಿಯಂತಹ ಜಡೆ ಪಾದದವರೆಗೆ ಎಳೆದಾಡುತ್ತಿವೆ.

ಹೇಳಿದ ಮಾತನ್ನು ಕೇಳಲಿಲ್ಲ. ಪೆಟ್ಟಿಗೆಯನ್ನು ತೆರೆಯದಿದ್ದರೆ ಏನಾಗುತ್ತಿತ್ತೊ ಏನೋ!

[ಜಪಾನದ ಜಾನಪದ ಕಥೆಯ ಆಧಾರ]

ಹಗಲು

"ಏ, ಏ ಗಿರೀ! ಸೋಮಾರಿ ಗಿರಿ! ಮನೆಯವರದೆಲ್ಲಾ ಕಾಫಿ ಆಯಿತು. ಹೊರಗಿನ ಕೆಲಸದವರ 'ನಾಸ್ತಾ'ನೂ ಮುಗಿಯಿತು. ಇನ್ನೂ ಕೆಸರಲ್ಲಿ ಹೂತುಕೊಂಡ ಕೋಣನಂತೆ ಹಾಸಿಗೆಯಲ್ಲಿಯೇ ಬಿದ್ದುಕೊಂಡಿದ್ದೀಯಾ! ಓ ಪೆದ್ದ, ಆಲಸಿನ ಮುದ್ದೇ ಏಳೋ ಏಳೋ" ಎಂದು ಗಿರಿಯ ತಾಯಿ ಗಟ್ಟಿಯಾಗಿ ಗದರಿಸಿದಳು. ಆಗಲೇ ಮನೆ ಗಡಿಯಾರ "ಢಣ್ ಢಣ್ ಢಣ್ ಟಿನ್" ಎಂದು ಒಂಭತ್ತು ಬಾರಿಸಿತು. ಗಿರಿ ಮಾತ್ರ "ಝಿರ್ ಝಿರ್ ಬಿತ್ತು ಮಳೆ" ಎಂದು ಗೊಣಗುತ್ತಾ ಹೊದ್ದುಕೊಂಡ ದುಪ್ಪಟಿಯನ್ನು ಇನ್ನಷ್ಟು ಭದ್ರಪಡಿಸಿ ಹಾಗೆಯೇ ಅಂಗಾತ ಬಿದ್ದುಕೊಂಡ; ಜೀಪ್, ಜೀಪ್! ಮೋಜಾಗಿ ಅತ್ತಿತ್ತ ಹೊರಳಾಡಿದ.

ಮುಂಜಾವಿನಿಂದಲೇ "ಝಿರ್‌ಝಿರ್" ಮಳೆ ಬೀಳತೊಡಗಿತ್ತು. ಗಂಟೆ ಎಂಟಾದರೂ ಗಿರಿ ಹಾಸಿಗೆಯಿಂದ ಎದ್ದಿರಲಿಲ್ಲ. ಅಲ್ಲಿಯೇ ಆಚೆ ಈಚೆ ಹೊರಳಾಡುತ್ತಿದ್ದ. ಅವನಿಗೆ ನಿದ್ರೆಯು ಬರೀ ಜೋಂಪು ಕೂಡಾ ಇದ್ದಿರಲಿಲ್ಲ. ಆದರೆ ಕೇವಲ ಆಲಸ್ಯ. ಶುದ್ಧ ಸೋಂಬೇರಿತನ, ಪ್ರಯತ್ನ ಮಾಡಿ ಹಾಸಿಗೆಗೇ ಅಂಟಿಕೊಂಡ ಆತ.

ಮಳೆಯು ಒಂದೇ ಸವನೆ ಸುರಿಯುತ್ತಿತ್ತು.

"ಝಿರ್ ಝಿರ್ ಬಿತ್ತು ಮಳೆ!
ಸುತ್ತ ಮುತ್ತಲಾಯ್ತು ಕೊಳೆ;
ತುಂಬಿ ತುಳುಕಿಹೋಯ್ತು ಹೊಳೆ!"
ಝಿರ್ ಝಿರ್ ಬಿತ್ತು ಮಳೆ,-
ಝಿರ್, ಝಿರ್ ಬಿತ್ತು ಮಳೆ!"

ಎಂದು ಒಂದು ಮಳೆಯ ಪದವನ್ನು ಚೆನ್ನಾಗಿ ಹೊರಡಿಸಿಯೇ ಬಿಟ್ಟ ಗಿರಿ.

ಸ್ನಾನ ಮುಗಿಸಿ ಆಫೀಸಿಗೆ ಹೊರಟ ಗಿರಿಯ ಅಪ್ಪಯ್ಯ ಗಿರಿಯನ್ನು ಬಹಳ ಗದರಿಸಿ, ಹಾಸಿಗೆಯಿಂದ ಹೊರಕ್ಕೆ ಎಳೆದೇಬಿಟ್ಟರು. ಆ ಮೇಲೆ ಅವನನ್ನು ನೇರಾಗಿ ಗಡಿಯಾರದ ಸಮ್ಮುಖಕ್ಕೆ ಒಯ್ದು "ಏ ಮುಠ್ಠಾಳ, ನೋಡೋ!-ಗಂಟೆ ಎಷ್ಟಾಯಿತು? ಸಮಯ ಏನು ನಿಲ್ಲುತ್ತಾ? ಅದು ಹೋಗ್ತಾ ಇದೆ ಕಣೋ! ನಿನ್ನ ಓದು ಬರಹ ಹೇಗೆ ಹೇಗೆ ಸಾಗಬೇಕು? ನಾಳೆಯಿಂದ ಆರು ಗಂಟೆ ಮೇಲೆ ನೀನು ಹಾಸಿಗೆ ಮೇಲೆ ಹೊರಳಾಡಿಕೊಂಡು ಇದ್ದೀ, ನೋಡು! ಆ ಮೇಲೆ-ಹುಶ್ಯಾರ್, ಹುಶ್ಯಾರ್-ಹುಶ್ಯಾರ್ ತಿಳಿಯಿತೆ?" ಎಂದು ಭಾರಿ ಗದರಿಸಿದರು.

ಗಿರಿಯ ಅಪ್ಪಯ್ಯ ತವಕದಿಂದ ಆಫೀಸಿಗೆ ಹೊರಟುಹೋದರು. ಗಿರಿ ಒಮ್ಮೆಗೆ ತಬ್ಬಿಬ್ಬಾದರೂ ಆ ಮೇಲೆ ಸಾವಕಾಶ ಹಾಸಿಗೆಯಲ್ಲಿ ಬಿದ್ದುಕೊಂಡು ಆಚೆ ಈಚೆ ಹೊರಳಾಡಿದ. ಅಷ್ಟರಲ್ಲಿಯೇ ಗಿರಿಗೆ ಪುನಃ ಜೋಂಪು ಹತ್ತಿತು. ಆ ಅರೆನಿದ್ರೆಯಲ್ಲಿ ಆತ ಕನವರಿಸಿದ.

ಗಿರಿಗೆ ಶೋಕ ಕ್ರೋಧ, ಸಿಟ್ಟು, ಕೋಪ, ಲಜ್ಜೆ ನಾಚಿಕೆ ಎಲ್ಲವೂ ಒಮ್ಮೆಗೇ ಬಂದುಬಿಟ್ಟವು: ಬೇಕೋ ಬೇಡವೋ ಎಂದು ಮುಖಮಾರ್ಜನ

ಗನಸು

—ದಾಮೋದರ ಬಾಳಿಗಾ

ಮುಗಿಯಿತು ಕಾಫಿ ಉಪಚಾರ ತಾಯಿಯ ಒತ್ತಾಯಕ್ಕೆ ಮಾಡಿಕೊಂಡ. ಗಿರಿಯ ತಲೆಯಲ್ಲಿ ಎಲ್ಲಾ ಭಾರಿ ಯೋಚನೆಗಳು!! ಗಾಢ ವಿಚಾರಗಳು! ಹೊರಗಿನ ಮಳೆಯ "ಝಿರ್ ಝಿರ್" ಒಳಗಿನ ಗಡಿಯಾರದ 'ಟಿಕ್ ಟಿಕ್' ಈ ಎರಡೂ ಶಬ್ದಗಳ ನಡುವೆ ಅವನ ತಾಕಲಾಟ ಸಾಗುತ್ತಿತ್ತು. ಮನಸ್ಸಿನಲ್ಲೇ ಸಿಟ್ಟು ನಾಚಿಕೆ ನಡುವೆ ವಿವಿಧ ವಿಚಾರಗಳು!! ಅಲ್ಲ, ಈ ತನ್ನ ಅಪ್ಪಯ್ಯ, ದೊಡ್ಡ ಹೊಣ್ಣಪ್ಪನ ಹಾಗೆ ಆಳು ಮೇದಿಯ

ಮುಂದೆ ಗದರಿಸಿ ಬೈಯ್ಯಬಹುದಿತ್ತೇ?! ಅಯ್ಯೋ, ಗಿರಿಗೆ ಭಾರಿ ನಾಚಿಕೆ ಆಗಿತ್ತು. ಒಳಗೊಳಗೆ ಬೇರೆ ಬೇರೆ ಯೋಚನೆಗಳ ತೂರಾಟ ಭರದಿಂದ ಸಾಗುತ್ತಿತ್ತು.

ಈ ಕಾಲಚಕ್ರ—ಗಡಿಯಾರ, ಅಲ್ಲವೆ! ಊರಿಗೆಲ್ಲಾ ಸಮಯ ಹೇಳಿ, ಇಲ್ಲದ ಫಜೀತಿ ಮಾಡುವದು. ಗಡಿಯಾರದ ಅಂತರ್ಯ ತಿಳಿದು ಅದರ ಕಾಲಾಟ ಒಲಿಸಿಯೋ, ಕಲಿಸಿಯೋ ನಿಲ್ಲಿಸಬೇಕೆಂದೇ ಅವನ ಮಹತ್ವಾಕಾಂಕ್ಷೆ. ಅತ್ತ, ಇತ್ತ, ಸುತ್ತಲೂ ನೋಡಿದ. ಅಕ್ಕಪಕ್ಕದಲ್ಲಿ ಯಾರೂ ಇರಲಿಲ್ಲ. ಎಲ್ಲರೂ ಎಲ್ಲೆಲ್ಲಿಯೋ ಅವರವರ ಕಾರ್ಯ ಕರ್ತವ್ಯಗಳಲ್ಲಿಯೇ ನಿರತರಾಗಿದ್ದರು. ಗಿರಿ ಗಡಿಯಾರದ ಮುಖ ದಿಟ್ಟಿಸಿದ. ಗಡಿಯಾರ ನಿರ್ಭೀತಿಯಿಂದ "ಟಿಕ್ ಟಿಕ್" ಎನ್ನುತ್ತ ತನ್ನ ಸಹಜ ಕರ್ತವ್ಯವನ್ನು ಸಾಗಿಸುತ್ತಿತ್ತು. ಹತ್ತಿರದ ಮೇಜಿನ ಮೇಲೆ ಕುರ್ಚಿ, ಕುರ್ಚಿಯ ಮೇಲೆ ಸ್ಟೂಲು, ಸ್ಟೂಲಿನ ಮೇಲೆ ಕಾಲ್ಕಾಸೆ ಇರಿಸಿ ಏರಿಯೇ ಬಿಟ್ಟ ಗಿರಿ. ದೇವರಿಗೆ ಕೈ ಮುಗಿದ. ಊರ ಗಡಿಯ ಆಂಜನೇಯನ ಧ್ಯಾನ ಮಾಡಿದ. ಇದ್ದ ಇಲ್ಲದ ದೈವ ಭೂತಗಳಿಗೆ ಹರಕೆ ಹೇಳಿಕೊಂಡ.

ಆ ಮೇಲೆ ಒಂದು ಇಸ್ಕ್ರೂರು ಉಳಿ, ಒಂದು ಚಿಕ್ಕ ಹಿಡಿದು ಗಡಿಯಾರ ತೆರೆದು ತೂಗು ಗುಂಡನ್ನು ಹಿಡಿದು ನಿಲ್ಲಿಸಿದ. ಆ ಮೇಲೆ ಇನ್ನೇನನ್ನೋ ಮಾಡತೊಡಗಿದ. ಆಚೆ ಸ್ಪ್ರಿಂಗನ್ನು ಬಿಡಿಸಿದ, ಈಚೆ ಸ್ಪ್ರಿಂಗನ್ನು ಬಿಗಿಯಾಗಿ ಕಾಯಿಸಿದ. ಆಗ—ಅಬ್ಬಬ್ಬ—ಗಡಿಯಾರದೊಳಗಿಂದ ಅಚ್ಚು ಗಾಲ; ಕಚ್ಚು ಚಕ್ರ ಸನ್ನೆಗಳಿಂದ ನಿಬಿಡವಾದ ಆಕಾರ ಒಂದು ಸರ್ರಕ್ಕನೆ ಹೊರಕ್ಕೆ ಸರಿಯಿತು. "ಸೂರೂ ಸೂರ್ರೂ, ಗಿರ್ರೋ ಗಿರ್ರೂ, ಕೊಚ್ಚ ಕಚ್ಚೊ" ಎಂದು ಗಿರಿಣಿಯ ಭಾರಿ ಯಂತ್ರಗಳಂತೆ ಭೋರ್ಗರೆದು ದಟಕ್ಕನೆ ಭಾರಿ ವೇಗದಿಂದ, ಕಿಟಕಿಯ ಹೊರಕ್ಕೆ ಸಿಡಿಯಿತು. ಆ ಆಕಾರ ಅಲ್ಲಿ ಭೂತಾಕಾರವಾಯಿತು. ಒಡನೆ ಭೂತಾಕಾರ ಬೃಹದಾಕಾರ ತಾಳಿತು. ಆ

ಬೃಹದಾಕಾರ ವಿರಾಟಸ್ವರೂಪವಾಗಿ ಆಕಾಶ ಪಾತಾಳಕ್ಕೂ ಹಬ್ಬಿಕೊಂಡಿತು. ಆಗ–ಎಲ್ಲವೂ ಸ್ತಬ್ಧ; ನಿಶ್ಯಬ್ಧ !

ಗಿರಿ ಬೆಚ್ಚಿ ಬೆರಗಾದ ! ದಂಗುಬಡಿದು ಆತ ಸ್ತಬ್ಧವಾದ ! ಮಳೆಯ ಝಿರ್ ಝಿರ್ ಇಲ್ಲ! "ಟಿಕ್ ಟಿಕ್" ಅಂತೂ ಇಲ್ಲವೆ ಇಲ್ಲ. ಎಲ್ಲವೂ ನಿಶ್ಯಬ್ದ. ಎಲ್ಲೆಲ್ಲೂ ನೀರವ. ಸರ್ವವೂ ತಟಸ್ಥ. ನಳ್ಳಿ ತೆರೆದರೆ ನೀರು ಹರಿಯಲಿಲ್ಲ. ರೇಡಿಯೊ ಅವಾಕ್ಕಾಗಿತ್ತು. ಅಂದರೆ ವಿದ್ಯುತ್ ಹರಿಯುತ್ತಿರಲಿಲ್ಲ. ಗಾಳಿಯೂ ಬೀಸದೆ ಅಂತೆ ಸುಮ್ಮನಾಗಿತ್ತು. ರೈಲು ಬಂಡಿ, ಮೋಟಾರು ಗಾಡಿ, ವಿಮಾನ, ಜಹಜು, ಹಡಗು ಎಲ್ಲ ವಾಹನಗಳು ಅಲ್ಲಲ್ಲೆ ಹೂತಂತೆ ನಿಶ್ಚಲವಾಗಿದ್ದುವು. ಗಿರಿಯ ಭೀತಿಯು ದ್ವಿಗುಣಿತವಾಯಿತು. "ಅಯ್ಯೋ ನನ್ನ ಅಚಾತುರ್ಯದಿಂದ ಏನು ಗಂಡಾಂತರವಾಯಿತು ?" ಎಂದು ಆ ತುಂಟ ಗಿರಿ ಭಯಭ್ರಾಂತನಾದ. ಏನಾದರೂ ಉಪಶಮನ ಮಾಡಬೇಕೆಂದು ತಡಪಡಿಸಿದ.

ತರಳ ಗಿರಿ ದೇವರನ್ನೇ ಮರೆಹೊಕ್ಕು ಕ್ಷಮಿಸಬೇಕೆಂದು ದೈನ್ಯದಿಂದ ಪ್ರಾರ್ಥಿಸಿದ. ತನ್ನಿಂದಾದ ಈ ಅನಾಹುತಕ್ಕೆಲ್ಲ ಮನೆಯವರು, ಹೊರಗಿನವರು, ನೆರೆಕರೆಯವರು, ಊರವರು ಎಲ್ಲರೂ ರೇಗಿ ಇಡೀ ದೇಶದ ಉದ್ದಗಲ–ಏಕೆ ಇಡೀ ಭೂಲೋಕವೇ ತನ್ನ ಮೇಲೆ ಜರಿದು ಬಿದ್ದು ಏನೇನು ಶಾಸ್ತಿ ಮಾಡುವರೋ ಎಂದು ಹೆದರಿದ; ಅಂಜಿದ. ಒಮ್ಮೆಗೇ ಅವನ ಜೀವವೇ ಹಾರಿ ಹೋದಂತಾಯಿತು. ಗಿರಿ ಬಿಕ್ಕಿ ಬಿಕ್ಕಿ ಅಳುವುದಕ್ಕಾರಂಭಿಸಿದ. ಕಣ್ಣೀರು ಹೊರಕ್ಕೆ ಹರಿಯಲಿಲ್ಲ. ಅಲ್ಲೇ ಕೂಡಿಕೊಂಡಿತು. ಅದರಿಂದಾಗಿ ಕಣ್ಣುಗಳೂ ಚೆನ್ನಾಗಿ ಊದಿಗೊಂಡಿದ್ದುವು. ಆಗ ಎಲ್ಲವೂ ತಟಸ್ಥ, ನಿಶ್ಯಬ್ದ; ನಿಸ್ತೇಜ ! ಎಲ್ಲವೂ ಭಯಂಕರ ! ಮಸಣ ಸ್ವರೂಪ.

ಮನಸಾರೆ ಇದಿರಿನಲ್ಲೆ ವಿರಾಟರೂಪನಾಗಿ ನಿಂತಿದ್ದ ಕಾಲಪುರುಷನನ್ನು ಅಂಗಲಾಚಿ ಬೇಡಿಕೊಂಡ : "ಹೇ ಮಹಾತ್ಮಾ ! ತರಳನ ಪ್ರಮಾದವನ್ನು ಕ್ಷಮಿಸಿ ಬಿಡು. ಇನ್ನೆಂದೆಂದಿಗೂ ಈ ಬಗೆಯ ಹವ್ಯಾಸಕ್ಕೆ ಕೈ ಹಚ್ಚುವುದಿಲ್ಲ. ಈ ಭಯಂಕರ ಸ್ವರೂಪ ತೊರೆದು ನಿನ್ನ ನಿಜ, ಸಹಜ ಆಕಾರದಲ್ಲೇ ಇದ್ದು ಇಡೀ ಲೋಕವನ್ನು ಧರ್ಮದಲ್ಲಿ ತೊಡಗಿಸಿ ಬಿಡು ದಮ್ಮಯ್ಯಾ !"

ಕಾಲಪುರುಷ "ತರಳನಾದ ಗಿರಿಯೇ ! ಸೋಂಬೇರಿಯಾಗಿ ಕಾಲ ಕಳೆಯದಿರು. ಸಮಯದ ಬೆಲೆ ಅಷ್ಟಿಷ್ಟಲ್ಲ. ಈ ಭೀಕರ ವಿರಾಟ ಸ್ವರೂಪ ಬಿಟ್ಟು ನನ್ನ ನಿಜರೂಪ ತಳೆಯುವೆನು" ಎಂದು ಅಭಯ ಕೊಟ್ಟನು.

ಸಾವಿರಾರು ಕಾರ್ಯನಿರತ ಗಿರಣಿಗಳ ಆರ್ಭಟವನ್ನು ಮಿಗಿಸಿಬಿಡುವ ತೀವ್ರ ಶಬ್ದವಾಯಿತು. ವಿರಾಟಸ್ವರೂಪ ಬೃಹದಾಕಾರವಾಯಿತು. ಬೃಹದಾಕಾರ ಭೂತಾಕಾರಕ್ಕಿಳಿಯಿತು. ಭೂತಾಕಾರ ಸೌಮ್ಯರೂಪದಿಂದ ಕಚ್ಚುಗಾಲಿಗಳ ಉರುಳು ಚಕ್ರಗಳ ಚೊಕ್ಕವಾದ ಒಕ್ಕೂಟವಾಗಿ, ಸರಕ್ಕನೆ ಕಿಟಕಿಯಿಂದ ನುಸುಳಿ ಬಂದು ಗಡಿಯಾರದ ಅಂತರ್ಯದಲ್ಲಿ ಕೂಡಿಕೊಳ್ಳುವಾಗ ಸೌಮ್ಯವಾಗಿ

ಕಿರಿದಿಹುದು ಆಯುಷ್ಯ
ಬರಿದೆ ಕಳೆಯದೆ ಕಾಲ
ಹಿರಿಯ ಕೆಲಸಗಳನೆಸಗೆಲವೊ ಬಾಲ

ಎಂದು ಮೃದು ಮಧುರವಾಗಿ ಉಲಿಯಿತು. ಆಗ ಎಲ್ಲವೂ ಹಿಂದಿನಂತೆಯೆ ಯಥಾರ್ಥವಾಯಿತು. ಕಾಲಧರ್ಮ ಪುನಃ ನೆಲೆಗೊಂಡಿತು.

ಎಂಥ ವಿಚಿತ್ರ ಹಗಲುಗನಸಿದು. ಸೋಂಬೇರಿ ಗಿರಿಗೆ ಹೊಟ್ಟೆ ಹಸಿವಾಗಿ ತಳಮಳ ಆಯಿತು. ಅವನು ಧಡಕ್ಕನೆ ಎದ್ದು ಮುಖ ತೊಳೆದು ತಾಯಿ ಮಾಡಿಟ್ಟಿದ್ದ, ಮಡಗಿದ, ತಣಿದ ಕಾಫಿ ತಿಂಡಿಗಳನ್ನು ಗಬಗಬನೆ ಮುಗಿಸಿದ. ಗಡಿಯಾರ ಢಣ ಢಣ ಎಂದು ಹತ್ತು ಹೊಡೆಯಿತು. ಅವಸರ ಅವಸರವಾಗಿ ಪುಸ್ತಕಗಳನ್ನು ತುಂಬಿಕೊಂಡು ಗಿರಿ ಶಾಲೆಗೆ ಹೊರಟು ಹೋದ.



—ದಿಝು

ಕನಸಿನ ಪಾಠ ಅವನ ಮನಸ್ಸಿನಲ್ಲಿ ಚೆನ್ನಾಗಿ ಊರಿತ್ತು. ಅವನು ಅಂದಿನಿಂದ ಸಮಯದ ಬೆಲೆಯನ್ನು ಚೆನ್ನಾಗಿ ಅರಿತುಕೊಂಡು ತನ್ನ ದಿನಚರಿಯನ್ನು ಕ್ರಮಬದ್ಧವಾಗಿ ನಿರ್ವಹಿಸತೊಡಗಿದನು.

- ೧ -

ಬೆರಳಾಯಿತು ಸಂಚಾರದ ಮೈಲು.
ನೆರಳಾಯಿತು ವಿಸ್ತಾರದ ಬೈಲು.
ಇದಕೆಂಬರು ಸಾಹೇಬರು ರೈಲು.
ಬುಗು ಬುಗು ಬಂಡಿಯ ನೋಡವ್ವಾ.

- ೨ -

ಕುದಿಯುವ ನೀರಿಗೆ ಕದಲುವ ಬಂಡಿ.
ಹೊಗೆಯಾಡಿಸಿ ನಗೆಯಾಡುವ ಚೆಂಡಿ.
ಯಂತ್ರ ಯುಗಾದಿಗೆ ಇದು ಚಾಮುಂಡಿ.
ಬುಗು ಬುಗು ಬಂಡಿಯ ನೋಡವ್ವಾ.

- ೩ -

ಇಂದ್ರನ ತೇಜಿಗೆ ಸೋಲದ ಗಾಡಿ.
ಭೂಮಿಗೆ ಬಿಟ್ಟವರಾರಿದ ನೋಡಿ.
ಮಾಡಿದನವ್ವಾ ಗಾರುಡಿ ಮೋಡಿ.
ಬುಗು ಬುಗು ಬಂಡಿಯ ನೋಡವ್ವಾ.

- ೪ -

ಭಟ್ಟರು ಹೇಳಿದರೇನೇ ಮಂತ್ರ?
ಬುಗು ಬುಗು ಬುಗು ಬುಗು ನಡೆವುದು ಯಂತ್ರ!
ದೆವ್ವ ಭೂತಗಳು ಹೂಡಿದ ತಂತ್ರ!
ಬುಗು ಬುಗು ಬಂಡಿಯ ನೋಡವ್ವಾ.

- ೫ -

ಹಿಂದಕೆ ಮುಂದಕೆ ಸಾವಿರ ಚಕ್ರ.
ಡೊಂಕು ದಾರಿಯಲಿ ಗಿರಿ ಗಿರಿ ವಕ್ರ.
ಭೀಮಸೇನನಿಗೆ ಮೀರಿದ ಗಾತ್ರ.
ಬುಗು ಬುಗು ಬಂಡಿಯ ನೋಡವ್ವಾ.

- ೬ -

ಮುಗಿಲಿನ ವರೆಗೂ ಏರಲು ಧೂಮ
ಸೂರ್ಯದೇವನಿಗೆ ಭಸ್ಮದ ನಾಮ!
ನೋಡ ಬನ್ನಿರೇ, ಅಯ್ಯೋ ರಾಮಾ!
ಬುಗು ಬುಗು ಬಂಡಿಯ ನೋಡವ್ವಾ.

- ೭ -

ಯಾವ ಹೊತ್ತಿಗೂ ಒಂದೇ ದಾರಿ.
ಅಡ್ಡ ಹಾದಿಯನು ಹಿಡಿಯದು, ನಾರಿ.
ಲೇಸು! ಲೇಸು! ನಾ ಮೆಚ್ಚಿದೆ ಭಾರಿ!
ಬುಗು ಬುಗು ಬಂಡಿಯ ನೋಡವ್ವಾ.

- ೮ -

ಎತ್ತು ಕುದುರೆ ಈ ಗಾಡಿಗೆ ಸಲ್ಲ.
ಹೇಗೆ ಕಟ್ಟುವರೊ? ದೇವರೆ ಬಲ್ಲ!
ಇಂಥ ಗಾಡಿ ನಾ ನೋಡಿರಲಿಲ್ಲ!
ಬುಗು ಬುಗು ಬಂಡಿಯ ನೋಡವ್ವಾ.

— ದಿನಕರ ದೇಸಾಯಿ



ಕಲಾವಿದನ ದೃಷ್ಟಿಯಲ್ಲಿ

'ನಾಸಿಕ ವಿಕಾಸ!'







• ಡಾರ್ವಿನ್ ಮಂಗನಿಂದ ಮಾನವ ಎಂದು ಹೇಳಿದ; ಆದರೆ ಅವನ ವಿಕಾಸವಾದ ಅಭ್ಯಾಸವನ್ನೇ ಮುಂದುವರಿಸಿದ 'ಡಿಝು' ಹೇಳುತ್ತಾರೆ, ಕಪ್ಪೆಯಿಂದ ಮಾನವನ ಮೂಗು ಎಂದು.





ನೀರು ಮತ್ತು ಎಣ್ಣೆ

ಬಹುದಿನಗಳ ನಂತರ ಒಮ್ಮೆ ನೀರು ಮತ್ತು ಎಣ್ಣೆ ದೇವಸ್ಥಾನದ ಪೂಜಾ ಸಮಾರಂಭದಲ್ಲಿ ಸಂಧಿಸಿದುವು. ದೊಡ್ಡ ಪರಾತದಲ್ಲಿ ನೀರು ಹಾಕಿ ನಡುವೆ ಸಮೆ ಇಟ್ಟು ನಂದಾದೀಪ ಹಚ್ಚಿಡಲಾಗಿತ್ತು. ನೀರನ್ನು ಕಂಡ ಕೂಡಲೆ ಎಣ್ಣೆಗೆ ತನ್ನ ಕಷ್ಟ ನೆನಪಿಗೆಬಂದು ಒಮ್ಮಿಂದೊಮ್ಮೆಗೆ ದುಃಖ ಉಮ್ಮಳಿಸಿಬಂತು.

"ತಂಗೀ, ಏನಾಯಿತು ?" ಅಕ್ಕರೆಯಿಂದ ಕೇಳಿತು ನೀರು.

"ಅಕ್ಕಾ, ಏನು ಹೇಳಲಿ ನನ್ನ ಕಥೆ. ಮೊದಲು ನಾನೆಷ್ಟು ಸುಖವಾಗಿದ್ದೆ. ಗಿಡಮರಗಳಲ್ಲಿ ತೊನೆದಾಡುತ್ತಿದ್ದೆ. ತಂಗಾಳಿಗೆ ಮೈಯೊಡ್ಡಿ ನಲಿಯುತ್ತಿದ್ದೆ. ಮರಕ್ಕೆ ಶೋಭೆಯಾದ ನನ್ನನ್ನು ಒಂದು ದಿನ ಕೀಳಿ ನೆಲಕ್ಕೆಳೆದರು. ನನ್ನ ಮೈಸೀಳಿ ತುಂಡು ತುಂಡು ಮಾಡಿ ಹಾಕಿದರು. ಬಿಸಿಲಿನಲ್ಲಿ ಕಾಯಿಸಿದರು. ಮತ್ತೆ ಗಾಣದಲ್ಲಿ ಹಾಕಿ ಜಜ್ಜಿ ಜಜ್ಜಿ ಹಿಂಡಿ, ದೇಹದ ಸಾರವನ್ನು ಹೀರಿದರು. ಅಷ್ಟೂ ಸಾಕಾಗದೆ ಈಗ ನನ್ನನ್ನು ನಿರಂತರ ಸುಡತೊಡಗಿದ್ದಾರೆ. ನಿಧಾನವಾಗಿ ನನ್ನ ಮೈ ಸುಟ್ಟುಕೊಂಡು ಈ ಬತ್ತಿಯು ದೀಪ ಉರಿಸಬೇಕು. ಅಕ್ಕಾ, ಯಾವ ಪಾಪಕ್ಕೆ ಈ ಫಲ" ಎಣ್ಣೆ ಗೋಗರೆಯಿತು.

ಆಗ ನೀರು ಕನಿಕರಪಟ್ಟು, "ಅಯ್ಯೋ ಹುಚ್ಚಿ, ಭಗವಂತನು ನಮ್ಮನ್ನು ಸೃಷ್ಟಿಸಿರುವುದೇ ಈ ತ್ಯಾಗಕ್ಕೆ. ನಾನೂ ನಿನ್ನಂತೆಯೆ ಸ್ವೇಚ್ಛಾಜೀವಿಯಾಗಿದ್ದೆ. ಆಕಾಶದಲ್ಲಿ ಮೋಡಗಳನ್ನೇರಿ ಸ್ವಚ್ಛಂದವಾಗಿ ವಿಹರಿಸುತ್ತಿದ್ದೆ. ಸುಂದರ ಗುಡ್ಡಕೊಳ್ಳಗಳನ್ನು ನೋಡಿ ನಲಿಯುತ್ತಿದ್ದೆ. ಮಂದಮಾರುತದ ಸಂಗೀತ ಸವಿಯುತ್ತಿದ್ದೆ. ಆದರೇನು, ಭೂಮಿಯ ಮೇಲೆ ಗಿಡಮರ, ಸಸಿಬಳ್ಳಿ, ಪಶುಪಕ್ಷಿಗಳ ಬಾಡಿದಮುಖನೋಡಿ ನನಗೆ ಕನಿಕರಬಂತು. ಅವರ ಬವಣೆ ನೋಡಲಾಗದೆ ಕೆಳಗಿಳಿದು ಬಂದೆ. ಆ ಮೇಲಿನ ನನ್ನ ಪಡಿಪಾಟಲು ಏನು ಕೇಳುತ್ತೀ. ಕೊಳೆ, ಕೊಚ್ಚೆಯಲ್ಲಿ ಉರುಳಾಡಬೇಕಾಯಿತು. ಕಲ್ಲು-ಬಂಡೆಗಳಿಗೆ ಹಾಯ್ದು ಮೈ ಜರ್ಜರಿತವಾಯಿತು. ದಿಕ್ಕು ದಿಶೆಯಿಲ್ಲದೆ ಸಂಚರಿಸಿದೆ. ನೋವು ಸಹಿಸದೆ ಭೂಗರ್ಭ ಸೇರಿದೆ. ಮತ್ತೆ ನನ್ನನ್ನು ಬಗಿದು ತೋಡಿ, ಈಗ ಇಲ್ಲಿ ತಂದು ಶೇಖರಿಸಿದ್ದಾರೆ. ತ್ಯಾಗ ಮತ್ತು ಸೇವೆಗೆ ಸಹನೆ ಬೇಕು ತಂಗೀ, ಅಂದರೇನೇ ಅದರ ಹಿರಿಮೆ ತಿಳಿಯುವುದು" ಎಂದು ಹೇಳಿತು.

ಎಣ್ಣೆಗೆ ಸಮಾಧಾನವಾಯಿತು. ಅಕ್ಕನ ಮಾತು ಕೇಳಿ, ಈಗ ಈ ಪುಣ್ಯದ ಕೆಲಸಕ್ಕೆ ಇಷ್ಟು ನಾನು ಉರಿಯದಿದ್ದರೆ ಹಾಹಾಕಾರವೇಎದ್ದುಬಿಡುವುದು. ಭಕ್ತಿ ಮತ್ತು ಸೇವೆಗೆ ನಾನು ಕಿರೀಟಪ್ರಾಯಳಾಬೇಕು ಎಂದು ಕೊಂಡಿತು.

ಪಂಚತಂತ್ರದ ಮೂಲ

—ಎಸ್. ಎಸ್. ಬ್ಯಾತನಾಳ

ಭಾರತಕ್ಕೆ ನೀತಿಕಥೆಗಳು ಬಹು ಪ್ರಾಚೀನ ಕಾಲದಿಂದಲೂ ಪರಿಚಿತ, ಪ್ರಚಲಿತ. ವೇದಗಳಲ್ಲಿ (ಸು. ಕ್ರಿ. ಶ. ಪೂ. ೨,೦೦೦ದಿಂದ ೧,೦೦೦ ದ ವರೆಗೆ) ಉಪನಿಷತ್ತುಗಳಲ್ಲಿ (ಸು ಕ್ರಿ.ಶ.ಪೂ. ೧,೦೦೦ ದಿಂದ ೬೦೦ರ ವರೆಗೆ) ಪುರಾಣಗಳಲ್ಲಿ (ಸು ಕ್ರಿ.ಶ.ಪೂ. ೪೦೦ ರಿಂದ ಕ್ರಿ.ಶ ೧೦೦ರ ವರೆಗೆ) ಮಹಾಭಾರತದಲ್ಲಿ ಸು. ಕ್ರಿ.ಶ.ಪೂ. ೩೦೦) ನೀತಿಕತೆಗಳು ತಲೆದೋರುತ್ತಿವೆ.

ಬೌದ್ಧಸಾಹಿತ್ಯದ ಉಗಮವನ್ನು ನಿರ್ದಿಷ್ಟವಾಗಿ ಹೇಳಲುಬಾರದಿದ್ದರೂ ಗೌತಮಬುದ್ಧನ ಮರಣಾನಂತರ[ಬುದ್ಧನಿರ್ಾಣ–ಸು ಕ್ರಿ.ಶ.ಪೂ. ೪೮೩] ಸುಮಾರು ಒಂದು ಶತಮಾನದ ಅವಧಿಯಲ್ಲಿ 'ತ್ರಿಪೀಟಕ' ಪೂರ್ತಿಯಾಗಿರಬೇಕೆಂದು ತಿಳಿಯುತ್ತಿದೆ. ಭಾರತವೇ ಬೌದ್ಧಸಾಹಿತ್ಯದ ಜನ್ಮಭೂಮಿಯೆಂಬಲ್ಲಿ ಸಂದೇಹವಿಲ್ಲ. ಸಿಲೋನ, ಟಿಬೇಟ, ಚೀನ ಮೊದಲಾದ ದೇಶಗಳಲ್ಲಿಯ ಬೌದ್ಧಸಾಹಿತ್ಯ ಅನಂತರದ್ದು. ಬೌದ್ಧಸಾಹಿತ್ಯದಲ್ಲಿಯ 'ಮಹಾವೈಪುಲ್ಯ' ಸೂತ್ರಗಳು; 'ಇತ್ಯುಕ್ತ', 'ವ್ಯಾಕರಣ'ಗಳೆಂಬ ಪ್ರಾಚೀನ ಸಂಸ್ಕೃತ ಗದ್ಯರೂಪದ ದಂತಕತೆಗಳು ಗಮನಾರ್ಹವಾಗಿವೆ. ಪುರಾಣ, ಬ್ರಾಹ್ಮಣಗಳಲ್ಲಿಯ 'ಉಪದೇಶ', 'ನಿದಾನ'ಗಳನ್ನೇ ಹೇಳುವ ಅದ್ಭುತ ಧರ್ಮ ಚಿತ್ರಣದ ಕತೆಗಳು, ಮಹಾಭಾರತದಲ್ಲಿಯ ಗದ್ಯರೂಪದ 'ಆರಣ್ಯ'ಗಳು ಬೌದ್ಧಸೂತ್ರಗಳ ಶೈಲಿಯನ್ನೇ ಹೋಲುತ್ತಿವೆ. ಋಗ್ವೇದದಲ್ಲಿಯ ಮನುಷ್ಯ ಮತ್ತು ಮೀನದ ಕತೆ, ಇಂದ್ರನು 'ಮರ್ಕಟ' ಮತ್ತು 'ಕಪಿಂಜಲ'ಗಳಾದ ಕತೆ; ಛಾಂದೋಗ್ಯೋಪನಿಷತ್ತಿನಲ್ಲಿ ಆಹಾರ ಸಂಶೋಧನೆಗಾಗಿ ಮುಂದಾಳುವನ್ನಾರಿಸುವ ನಾಯಿಗಳ ವಿಡಂಬನೆ, ರೇವಕನ ಲಕ್ಷ್ಯ ಸೆಳೆಯುವ 'ಫ್ಲಾಮಿಂಗೋ' ಪಕ್ಷಿಗಳ ಪ್ರತಿಕ್ರಿಯೆ; ಗುಣಾಢ್ಯನ ಬೃಹತ್ಕಥೆ ಮೊದಲಾದವು ಭಾರತೀಯ ಸಾಹಿತ್ಯ ಪ್ರಪಂಚದಲ್ಲಿ ನೀತಿಕತೆಗಳ ಪ್ರಾಚೀನತೆ ಮತ್ತು ವಿಪುಲತೆಗಳನ್ನು ಎತ್ತಿ ತೋರುತ್ತಿವೆ.

ನೀತಿಕತೆಗಳು ಪ್ರಪ್ರಥಮವಾಗಿ ಯಾವ ದೇಶದಲ್ಲಿ, ಯಾವ ಭಾಷೆಯಲ್ಲಿ ರಚಿಸಲ್ಪಟ್ಟವು? ಹಾಗೆ ಹುಟ್ಟಿದ ದೇಶ, ಭಾಷೆಗಳಿಂದ ಬೇರೆ ಬೇರೆ ದೇಶ, ಭಾಷೆಗಳಿಗೆ ಹರಡಿದ ಕ್ರಮವೆಂತು? ಭಾರತೀಯ ಸಾಹಿತ್ಯಗಳಲ್ಲಿಯೇ ಸಂಸ್ಕೃತದ ಪಂಚತಂತ್ರ ಮೊದಲೊ? ಬೌದ್ಧಜಾತಕ ಕತೆಗಳು ಮೊದಲೋ? ಗ್ರೀಸ್ ದೇಶದ ಇಸೋಪನ ನೀತಿಕತೆಗಳೇ ಮೂಲವೇ? ಇಸೋಪನ ನೀತಿಕತೆ, ಬೌದ್ಧಜಾತಕ ಕತೆಗಳು ಮತ್ತು ಪಂಚತಂತ್ರದ ಕತೆಗಳಿಗೆ ಯಾವುದೇ ಬಗೆಯ ಸಂಬಂಧವಿದೆಯೇ? ಮುಂತಾದ ಸಮಸ್ಯೆಗಳು ಇನ್ನೂ ಸಮಸ್ಯೆಗಳಾಗಿಯೇ ಉಳಿದಿವೆ. ಹಲವಾರು ಪ್ರಶ್ನೆಗಳ ಜಂಜಡದಲ್ಲಿ ಪಂಚತಂತ್ರ ರಚಿತವಾದುದೆಂದು? ಎಂಬುದನ್ನು ಪರಿಶೀಲಿಸುವುದೇ ಈ ಲೇಖನದ ಮುಖ್ಯ ಉದ್ದೇಶ. ಕ್ರಿ. ಶ. ೧೮೫೯ ರಲ್ಲಿ 'ಥಿಯೋಡೋರ ಬೆನ್‌ಫೆ' ಅವರು ಮೂಲ ಸಂಸ್ಕೃತದಿಂದ ಜರ್ಮನ್ ಭಾಷೆಗೆ ಪಂಚತಂತ್ರವನ್ನು ಭಾಷಾಂತರಿಸಿದರು. ಕ್ರಿ. ಶ. ೧೯೦೮ ರಲ್ಲಿ 'ಜೆ. ಹರ್ಟೆಲ್' ರವರು ಹಾರ್ವರ್ಡ ವಿಶ್ವವಿದ್ಯಾಲಯದ ಓರಿಯಂಟ್‌ಲ್ ಸೀರೀಜದಲ್ಲಿ ಕ್ರಿ. ಶ ೧೯೧೯ ರಲ್ಲಿದ್ದ ಪೂರ್ಣಭದ್ರನ ಪಂಚತಂತ್ರವನ್ನು ಪ್ರಕಟಿಸಿದರು ಕ್ರಿ. ಶ. ೧೯೨೪ ರಲ್ಲಿ 'ಫ್ರಾಕಲಿನ್ ಎಡ್ಗರಟನ್' ಎಂಬ ಆಂಗ್ಲ ಪಂಡಿತನು ಸಂಸ್ಕೃತ ಮೂಲ ಪ್ರತಿಗಳನ್ನು ಪರಿಶೋಧಿಸಿ ಒಂದು ಪ್ರತಿ ಸಿದ್ಧಗೊಳಿಸಿದನು. ನಾಲ್ಕು ಸಂಸ್ಕೃತ ಹಸ್ತಪ್ರತಿಗಳ ಆಧಾರದಿಂದ 'ಕೋಶೆಗಾರ್ಟನ್' ಎಂಬ ಜರ್ಮನ್ ಪಂಡಿತನು 'ಪಂಚಾಖ್ಯಾನಕ' ಎಂಬ ಪ್ರತಿ ತಯಾರಿಸಿದ. ಮುಂಬಯಿಯ ನಿರ್ಣಯಸಾಗರ, ಕಲಕತ್ತೆಯ ಜೀವಾನಂದ ವಿದ್ಯಾಸಾಗರ ಮತ್ತು ಪುಣೆಯ ಅಗ್ನಿಹೋತ್ರಿ ಅವರ ಸಂಸ್ಕೃತ ಪ್ರತಿಗಳೂ ಇವೆ. ಇಂದಿನ ಮಹಾರಾಷ್ಟ್ರದಲ್ಲಿ 'ಕೋಶೆಗಾರ್ಟನ್'ರ ಪ್ರತಿಯ ಮರಾಠಿ ಅನುವಾದವೇ ಪ್ರಚಲಿತವಾಗಿದೆ.

ಸಂಸ್ಕೃತದ ನೀತಿಕತೆಗಳೇ ಹಿಂದುಸ್ತಾನದಿಂದ ಚೀನಾ, ಟಿಬೇಟ, ಪರ್ಶಿಯಾ, ಗ್ರೀಸ್ ದೇಶಗಳಿಗೂ ತಲುಪಿರಬೇಕೆಂಬ ಅಭಿಪ್ರಾಯವೂ ಬಂದಿದೆ. ಯಾಕೆಂದರೆ, ಇಸೋಪನ ನೀತಿಕತೆಗಳಿಗೂ, ಪಂಚತಂತ್ರದ ಕತೆಗಳಿಗೂ ಕೆಲಮಟ್ಟಿನ ಹೋಲಿಕೆ ಕಂಡುಬರುತ್ತಿದೆ ಇಸೋಪನ ನೀತಿಕತೆ ಮತ್ತು ಪಂಚತಂತ್ರಗಳೇ ಇಂದು ಉಪಲಬ್ಧವಿದ್ದ ಪ್ರಾಚೀನ ಗ್ರಂಥಗಳು–

"Antiquity of fable traced by some to Aesop or the Pancatantra by Vishnuvarma are the two oldest colletions preserved. No earlier record is possessed·"

—Encyclopaedia of Britanica

ಜೆ ಹರ್ಟೆಲ್‌ರವರು, "The Pancatantra is not only the oldest extant work of Hindu artistic fiction, but it is also the one which has exercised a greater influence than any other work of India upon the literature of the world—"

ಎಂದು ವಿಶ್ವಸಾಹಿತ್ಯದಲ್ಲಿ ಪಂಚತಂತ್ರ ಬೀರಿದ ಪ್ರಭಾವಾನ್ವಿತ ಪರಿಣಾಮವನ್ನು ಒತ್ತಿ ಹೇಳಿದ್ದಾರೆ. ಹರ್ಟೆಲ್‌ರವರ ಅಭಿಪ್ರಾಯದಲ್ಲಿ ಪಂಚತಂತ್ರದ ಸಂಪ್ರದಾಯ ಮೂಲಗಳು ಎರಡು ಬಗೆಯಾಗಿವೆ. ಮೊದಲನೆಯದಾಗಿ. 'ತಂತ್ರಾಖ್ಯಾಯಿಕಾ' ಮತ್ತು 'K' ಪ್ರಕಾರದ ಮೂಲ ಮತ್ತು ಸಂಪ್ರತಿಗಳು; ಎರಡನೆಯದಾಗಿ ದಕ್ಷಿಣ ಭಾರತ. . ಮತ್ತು ನೇಪಾಳಿ ಮೂಲಗಳು ಮತ್ತು ಹಿತೋಪದೇಶ ಮೊದಲಾದುವು ಹೊಂದಿಕೊಳ್ಳುವ ಅಂತರ್ವರ್ತಿಯಾದ ಮೂಲಪ್ರತಿ ಆದರೆ ಆಂಗ್ಲಪಂಡಿತ ಎಡ್ಗರಟನ್‌ರು ಈ ಮತವನ್ನು ಒಪ್ಪುತ್ತಿಲ್ಲ ಅವರು ಪಂಚತಂತ್ರದ ಸಂಪ್ರದಾಯದ ಶಾಖೆಗಳು ನಾಲ್ಕುಬಗೆಯಾಗಿವೆಯೆಂದೂ ಆ ಎಲ್ಲ ಶಾಖೆಗಳಿಗೂ ಅತಿ ಪ್ರಾಚೀನವಾದ ಒಂದೇ ಒಂದು ಮೂಲವಿರಬೇಕೆಂದೂ ಹೇಳುವರು

ಈ ನಾಲ್ಕು ಶಾಖೆಗಳು ಇಂತಿವೆ :

೧. ಸೋಮದೇವ [ಕ್ರಿ.ಶ. ೧೧ನೆಯ ಶತಮಾನ], ಕ್ಷೇಮೇಂದ್ರರು [ಕ್ರಿ. ಶ. ೧೧ ನೆಯ ಶತಮಾನ] ಅನುಸರಿಸಿದ ದಕ್ಷಿಣ ಬೃಹತ್ಕಥಾ.
೨. ತಂತ್ರಾಖ್ಯಾಯಿಕಾ
೩ ದಕ್ಷಿಣದ ಪಂಚತಂತ್ರ.
೪. ಪೆಹಲ್ವಿ ಭಾಷೆಯ ಪ್ರತಿಯು ಮೂಲ. ಇಂದು ಉಪಲಬ್ಧವಿಲ್ಲದ ಈ ಮೂಲ ಪ್ರತಿಯು ಪೂರ್ಣಭದ್ರನ ಪ್ರತಿ, ತಂತ್ರಾಖ್ಯಾಯಿಕೆ ಮತ್ತು ದಕ್ಷಿಣ ಭಾರತದ ಪಂಚತಂತ್ರ ಪ್ರತಿಗಳ ಮೂಲಗಳ ಸಂಗಮವಾಗಿರಬೇಕಲ್ಲವೇ ?

ಪಂಚತಂತ್ರದ ತಲೆಬರಹ, ಮೂಲಸ್ಥಾನ, ಗ್ರಂಥಕರ್ತ, ಕಾವ್ಯದ ಪ್ರಾಚೀನತೆ ಹೀಗೆ ಒಂದೊಂದೂ ಚರ್ಚಾಸ್ಪದವೇ ಆಗಿದೆ ಶ್ರೀ ಎಂ. ಎನ್. ಶ್ರೀನಿವಾಸ ಅಯ್ಯಂಗಾರವರು ಕಾಶ್ಮೀರ ಮೂಲಪ್ರತಿಯ ಹೆಸರು 'ತಂತ್ರಾಖ್ಯಾಯಿಕಾ' ಎಂದೂ 'ಪಂಚತಂತ್ರ'ವೆಂಬುದು ಅನಂತರದ ಹೆಸರೆಂದು ಹೇಳುವರು. ಎ. ಬಿ. ಕೀಥ ಮೊದಲಾದ ವಿದ್ವಾಂಸರೂ 'ಪಂಚತಂತ್ರ'ವೇ ಮೂಲ ಹೆಸರಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ 'ತಂತ್ರಾಖ್ಯಾಯಿಕಾ', ಮತ್ತು 'ಪಂಚತಂತ್ರ' ಇವೆರಡರಲ್ಲಿಯೂ 'ತಂತ್ರ' ಪದ ಸಾಮಾನ್ಯವಾಗಿದೆ ಆದರೆ ಈ ಪದದ ಅರ್ಥ ಮಾತ್ರ ಅಸ್ಪಷ್ಟವಾಗಿಯೇ ಉಳಿದಿದೆ -'ತಂತ್ರ' ಎಂದರೆ ಕೇವಲ 'ಗ್ರಂಥ'ವೆಂದರ್ಥವೇ? ಅಥವಾ 'ತಂತ್ರ' ಎಂದರೆ 'ಯುಕ್ತಿ'ಯೆ? ನಡತೆಯ ತೀವ್ರತೆಯ ವೈಶಿಷ್ಟ್ಯವೇ? ನೈತಿಕ ಅಥವಾ ಅಧಿಕಾರಯುತ ಪ್ರಬಂಧನೇ ? ಹಾಗೆಯೇ, 'ತಂತ್ರಾಖ್ಯಾಯಿಕಾ' ಎಂದರೆ ಐದು ಪುಸ್ತಕ ಅಥವಾ ಐದು ವಿಭಾಗಗಳನ್ನೊಳಗೊಂಡ-ಕಥಾರೂಪ ನೀತಿಶಾಸ್ತ್ರವೇ? ಅಥವಾ, ಆಖ್ಯಾಯಿಕಾ ರೂಪದ ರಾಜನೀತಿಯನ್ನು ನಿರೂಪಿಸುವ ಅಧಿಕಾರವಾಣಿಯುಳ್ಳ ಗ್ರಂಥವೆಂದೇ? 'ಉಪದೇಶಾತ್ಮಕ.' ಅಥವಾ 'ನೀತಿಬೋಧಕ' ಕತೆಗಳುಳ್ಳ ಪಠ್ಯವೇ? ಯಾವುದನ್ನೂ ನಿರ್ದಿಷ್ಟವಾಗಿ ಹೇಳಲು ಬಾರದಾಗಿದೆ. ಲಾಕ್ಷಣಿಕರು ಈ ಪದಗಳ ಅರ್ಥವನ್ನು ನಿರ್ದೇಶಿಸದಿರುವುದೇ ನಮಗಿರುವ ಪ್ರಬಲ ತೊಂದರೆ 'ಪಂಚತಂತ್ರ' ಪದದ ಅರ್ಥ ಮೂಲತಃ 'ಐದು ವಿಷಯಗಳು' ಅಥವಾ 'ಐದು ವಿಷಯಗಳನ್ನೊಳಗೊಂಡ ಗ್ರಂಥದ ತಲೆಬರೆಹ' ಎಂದಿರಬೇಕು.

"'tantra'='case-of-one good sense.'"

'Pancatantra'='The five cases of good-sense.' —Hertel

ಪಂಚತಂತ್ರವು ರಚಿತವಾದುದು ಉತ್ತರ ಭಾರತದಲ್ಲಿ—ಕಾಶ್ಮೀರದಲ್ಲಿಯೇ ? ಅಥವಾ, ದಕ್ಷಿಣ ಭಾರತದಲ್ಲಿಯೇ ?

"The native land of the 'Tantrākhyāyikā' was probably Kashmir. Its author was a Vishnuvite Brahmin whose name and date we do not know. It purports to be the work of an octogenarian brahman sage named Vishnusharman." —Hertel

"ಮೂಲ ಲೇಖಕನ ಹೆಸರನ್ನು ಖಚಿತವಾಗಿ ಹೇಳುವಂತಿಲ್ಲ. ವಿಷ್ಣುಶರ್ಮನೇ ಕರ್ತೃವೆನ್ನುವದು ಪಂಚತಂತ್ರದ ಕತೆಗಳಲ್ಲಿಯ ಪ್ರಾಣಿಗಳ ಹೆಸರಿನಂತೆಯೇ ಕಾಲ್ಪನಿಕವೆಂದೇ ತೋರುವದು. ಪಂಚತಂತ್ರದಲ್ಲಿ ಎಲ್ಲಿಯೂ ಗ್ರಂಥಕಾರನ ಬಗ್ಗೆ ಹೇಳಿಲ್ಲ ವಿಷ್ಣುಶರ್ಮನ ಹೆಸರು ಚಾಣಕ್ಯನ ಅರ್ಥಶಾಸ್ತ್ರದಲ್ಲಿದೆಯೆಂದು ಹೇಳುವರು; ಇದೂ ಸಾಧಾರವಿಲ್ಲ. ಜೈನ ಮತ್ತು ಬೌದ್ಧಮತಗಳ ಬಗೆಗೆ ಬರುವ ಪಂಚತಂತ್ರದಲ್ಲಿಯ ಉಲ್ಲೇಖಗಳೂ ಇದಕ್ಕೆ ವಿರೋಧವಾಗಿವೆ ವಿಷ್ಣುಶರ್ಮನೇ ಕರ್ತೃವೆನ್ನುವುದಾದಲ್ಲಿ ಅವನೊಬ್ಬ ಸನಾತನ ಹಿಂದುವೂ, ಬುದ್ಧಿವಂತನೂ, ಸಂಸ್ಕೃತ ಭಾಷಾ ಪಂಡಿತನೂ ಆಗಿರಬೇಕು."

—ಮರಾಠಿ ಭಾಷಾಂತರದ ಮುನ್ನುಡಿ

"ಕ್ರಿ. ಶ. ೧೨೦೦ ನೆಯ ವರುಷದ ಮೊದಲಿನ ಪಂಚತಂತ್ರದ ಪಾಠಭೇದಗಳನ್ನು ಪ್ರಾಚೀನವೆಂದೂ, ೧೨೦೦ ರಿಂದ ಈಚಿನವು ಅರ್ವಾಚೀನವೆಂದೂ ವ್ಯವಹರಿಸುವದಾದರೆ, ಈ ವ್ಯವಹಾರಕ್ಕನುಸಾರವಾಗಿ ಪಂಚತಂತ್ರದ ಪ್ರಾಚೀನ ಪಾಠಭೇದಗಳಲ್ಲಿ ವಿಷ್ಣುಶರ್ಮನ ಹೆಸರು,

೧. ಕಾಶ್ಮೀರ ಪಂಚತಂತ್ರ.
೨ ಲಾಟೀಯ ಪಂಚತಂತ್ರ.
೩. ಲಾಟೀಯ ಪಂಚತಂತ್ರದ ಬೃಹತ್ ಪಾಠ.
೪. ದಾಕ್ಷಿಣಾತ್ಯ ಪಂಚತಂತ್ರ
೫. ದಾಕ್ಷಿಣಾತ್ಯ ಪಂಚತಂತ್ರದ ಒಂದು ಬೃಹತ್ ಪಾಠ.
೬. 'ಕಲಿಲ ಮದನ್ನ' ಹೆಸರಿನಿಂದ ಅರಬ್ಬೀ ಭಾಷೆಯಲ್ಲಿ ಪ್ರಸಿದ್ಧವಾದ ಪಂಚತಂತ್ರದ ಪ್ರಭೇದಗಳಿಗೆ ಮೂಲವಾದ ಪೆಹಲ್ವಿ ಪಂಚತಂತ್ರ

ಈ ಆರು ಪಂಚತಂತ್ರಗಳಲ್ಲಿ ಹೇಳಲ್ಪಟ್ಟಿರುವುದು" ಎಂದು ಡಾ ಎ. ವೆಂಕಟಸುಬ್ಬಯ್ಯನವರು ಅಭಿಪ್ರಾಯಪಟ್ಟಿರುವರು.

ಇಂದು ಉಪಲಬ್ಧವಿದ್ದ ಪ್ರಾಚೀನ ಪಂಚತಂತ್ರಗಳ ಹೆಚ್ಚಿನ ಪ್ರತಿಗಳಲ್ಲಿ 'ವಿಷ್ಣುಶರ್ಮ'ನ ಹೆಸರೇ ಉಲ್ಲಿಖಿತವಾಗಿರುವುದರಿಂದ 'ವಿಷ್ಣುಶರ್ಮ'ನೆಂಬ ಸಂಸ್ಕೃತ ಪಂಡಿತನೇ ಮೂಲ ಪಂಚತಂತ್ರದ ಮೂಲ ಗ್ರಂಥಕರ್ತನೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ— ವಿಷ್ಣುಶರ್ಮನು ಶ್ರುತಿ, ಸ್ಮೃತಿ, ಪುರಾಣ, ಇತಿಹಾಸಗಳನ್ನು ಅರಿತವನು

ಮನವೇ ವಾಚಸ್ಪತಯೇ ಶುಕ್ರಾಯ
ಪರಾಶರಾಯ ಸಸುತಾಯ ।
ಚಾಣಾಕ್ಯಾಯ ಚ ವಿದುಷೇ ನಮೋಽಸ್ತು
ನಯಶಾಸ್ತ್ರ ಕರ್ತೃಭ್ಯಃ ॥

ಸಕಲಾರ್ಥ ಶಾಸ್ತ್ರಸಾರಂ ಜಗತಿ
ಸಮಾಲೋಕ್ಯ ವಿಷ್ಣುಶರ್ಮೇದಂ ।
ತಂತ್ರೈಃ ಪಂಚಭಿರೇತಚ್ಚಕಾರ
ಸುಮನೋಹರಂ ಶಾಸ್ತ್ರಂ ॥ ೧ ॥

ದಾಕ್ಷಿಣಾತ್ಯದಲ್ಲಿ ಮಹಿಳಾರೋಪ್ಯವನ್ನಾಳಿದನೆಂದು ಹೇಳುವ ಅಮರಶಕ್ತಿ ಅರಸನಿಗೆ ಐಶ್ವರ್ಯ, ಆರೋಗ್ಯ, ಕೀರ್ತಿ, ಜನಪ್ರಿಯತೆ, ರಾಜವೈಭವಗಳೆಲ್ಲವೂ ಇದ್ದರೂ, ತನ್ನ ಮೂವರು ಮಕ್ಕಳಾದ 'ಬಹುಶಕ್ತಿ' 'ರುದ್ರಶಕ್ತಿ' 'ಅನಂತಶಕ್ತಿ' ಇವರು ಮಹಾ ಮೂರ್ಖರೆಂಬ ಚಿಂತೆಯಿಂದ ಬಳಲುತ್ತಿದ್ದನು. ತನ್ನ ಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡುವ ಉಪಾಯವೇನೆಂದು ತನ್ನ ಆಪ್ತ ಮಂತ್ರಿಗಳನ್ನಾಲೋಚಿಸಿದಾಗ ಅವರು ಸರ್ವಶಾಸ್ತ್ರಗಳ ಸಾರವನ್ನು ಸಂಕ್ಷಿಪ್ತವಾಗಿ, ಅರ್ಥವತ್ತಾಗಿ, ಪರಿಣಾಮಕಾರಿಯಾಗಿ ಹೇಳುವ, ರಾಜಕುಮಾರರನ್ನು ಬುದ್ಧಿವಂತರನ್ನಾಗಿಸುವ ಶಕ್ತಿ ವಿಷ್ಣುಶರ್ಮನಿಂದಲೇ ಸಾಧ್ಯವೆಂದು ಸಲಹೆಯಿತ್ತರು ಅಂತೆಯೇ ವಿಷ್ಣುಶರ್ಮನು ಪಂಚತಂತ್ರವನ್ನು ರಚಿಸಬೇಕಾದ ಅವಕಾಶ ಒದಗಿತು.

ಎ. ಬಿ. ಕೀಥ್‌ರವರು "ಅಮರಶಕ್ತಿ ದಕ್ಷಿಣದವನು 'ತಂತ್ರಾಖ್ಯಾಯಿಕಾ' ದಕ್ಷಿಣ ಭಾರತದ ಪಶ್ಚಿಮಕ್ಕಿದ್ದ ಪುಷ್ಪಮೂಕ ಪರ್ವತವನ್ನು ಹೆಸರಿಸಿದೆ ದಕ್ಷಿಣ ಭಾರತವೇ ಮೂಲಸ್ಥಾನವಿರಬೇಕೆಂದೂ—

"Hertel thinks of Kashmir origin, for neither the tiger nor the elephant plays a part in the original while the camel is known This argument is inconclusive."

ಎಂದೂ ಹೇಳುವರು.

ದಕ್ಷಿಣದಲ್ಲಿ, ಪ್ರಮುಖವಾಗಿ ಕಂಡು ಬರುವ ಆನೆ, ಹುಲಿಗಳು ಪಂಚತಂತ್ರದ ಕಥೆಗಳಲ್ಲಿ ಹೆಚ್ಚಾಗಿ ಕಾಣುತ್ತಿಲ್ಲವೆಂಬ ಮತ್ತು ಉತ್ತರ ಹಿಂದುಸ್ತಾನದಲ್ಲಿ ಕಾಣುವ ಒಂಟೆಯೇ ಪ್ರಧಾನ ಪಾತ್ರ ವಹಿಸಿದೆಯೆಂಬ ಕಾರಣದಿಂದ ಕೃತಿಯ ಮೂಲಸ್ಥಾನ ಕಾಶ್ಮೀರವೆಂದು ಹೇಳುವ ಹರ್ಟೆಲ್‌ರವರ ಅಭಿಪ್ರಾಯ ಏಕದೃಷ್ಟಿಯದಾಗಿದೆ. ಅದೇ ಪಂಚತಂತ್ರದಲ್ಲಿ ಪುಷ್ಕರ, ಗಂಗಾದ್ವಾರ, ಪ್ರಯಾಗ, ವಾರಣಾಶಿ ಮೊದಲಾದ ದಕ್ಷಿಣ—ಉತ್ತರಗಳಲ್ಲಿಯ ಯಾತ್ರಾಸ್ಥಳಗಳ ಉಲ್ಲೇಖವಿದೆ. ಇದಕ್ಕೇನು ಸಮಾಧಾನ? ಒಂದು ಕಾಲದ ಕವಿ ತನ್ನ ಹಿಂದಿನ ಕವಿಪ್ರಯೋಗಗಳನ್ನು ಉಪಯೋಗಿಸುವುದಾಗಲಿ, ತಾನಿದ್ದ ಪ್ರದೇಶವನ್ನು-ಅದು ತತ್ಕಾಲೀನ ದೇಶದ ಸ್ಥಳಗಳ, ಪ್ರಾಣಿಗಳ, ಜನತೆಯ, ಜೀವನದ ಸಮಗ್ರ ಚಿತ್ರವನ್ನು ಚಿತ್ರಿಸುವುದಾಗಲಿ, ಹೆಸರಿಸುವುದಾಗಲಿ ಅಸಂಭವವೇನಲ್ಲ. ಪಾತ್ರವರ್ಗವಾಗುಳ್ಳ ಪ್ರಾಣಿಗಳ ಹೆಸರಿನ ಆಧಾರದಿಂದ ಕೃತಿರಚನೆಯ ಸ್ಥಾನವನ್ನು ನಿರ್ಧರಿಸಲೆತ್ನಿಸುವುದು ಸಾಹಸದ ಮಾತಾದೀತು.

"ದಾಕ್ಷಿಣಾತ್ಯದಲ್ಲಿರುವುದಾಗಿ ಹೇಳಿರುವ 'ಮಹಿಳಾಪುರ'ವನ್ನು ಅಮರಶಕ್ತಿ ಭೂಪಾಲನು ಆಳಿದ ವಿಚಾರವಾಗಿ ಚರಿತ್ರಾಧಾರಗಳು ದೊರೆತಿಲ್ಲ. 'ಮಹಿಳಾಪುರ'ಕ್ಕೆ ಬದಲಾಗಿ 'ಪಾಟಲೀಪುತ್ರ'ವೆಂದೂ, 'ಅಮರಶಕ್ತಿ'ಯ ಬದಲು 'ಸುದರ್ಶನ'ರಾಜನೆಂದೂ ಕನ್ನಡ ಪಂಚತಂತ್ರದಲ್ಲಿ ಹೇಳಿದೆ." ಆದುದರಿಂದ ಒಂದು ಕೃತಿಯು ಎಲ್ಲಿ ಹುಟ್ಟಿತೆಂಬ ಪ್ರಾದೇಶಿಕ ವಾದದ ಸೆಳವಿನಲ್ಲಿ ಸಿಕ್ಕು ಕೊಚ್ಚಿ ಹೋಗುವುದಕ್ಕಿಂತ ಆ ಕೃತಿ ಭಾರತದಲ್ಲಿಯೇ ಹುಟ್ಟಿದ್ದೆಂದು ತೃಪ್ತಿಪಟ್ಟುಕೊಂಡರೆ ಸಾಲದೇ! ಅಂತೆಯೇ ಪಂಚತಂತ್ರದ ಮೂಲಸ್ಥಾನದ ವಿಷಯವಾಗಿ—

"So we must leave the place of composition open" ಎಂಬ ಕೀಥರವರ ಮತವೇ ವಿಹಿತವೆಂದೆನಿಸುತ್ತಿದೆ.

ಪಂಚತಂತ್ರದ ಕಾಲನಿರ್ಣಯವೂ ತುಂಬಾ ವಿವಾದಾಸ್ಪದ. ಈ ವಿಷಯವಾಗಿ ಈ ವರೆಗಿನ ವಾದ-ವಿವಾದಗಳನ್ನು ಹೇಳುವುದರ ಜೊತೆಗೆ ಅವುಗಳನ್ನು ಪರೀಕ್ಷಿಸಿ ನೋಡಿ ಯಾವುದೊಂದು ನಿಲುಗಡೆಗೆ ಬರಲು ಸಾಧ್ಯವೇ ? ಎಂಬ ದಿಶೆಯಲ್ಲಿ ಇದೊಂದು ಸಾಹಸ. ಒಂದು ಕೃತಿಯ ಕಾಲನಿರ್ಣಯ ಮಾಡುವಾಗ ಆಂತರಿಕ ಮತ್ತು ಬಾಹ್ಯಕಾರಣಗಳನ್ನು ಗಮನಿಸುವುದು ಸ್ವಾಭಾವಿಕ.

ಮೊದಲನೆಯದಾಗಿ, ಪಂಚತಂತ್ರದ ಬೇರೆ ಬೇರೆ ಸಂಪ್ರತಿಗಳ ಬಗೆಗೆ ಹರ್ಟೆಲ್‌ರು ಕಾಶ್ಮೀರದ 'ತಂತ್ರಾಖ್ಯಾನ' ಅಥವಾ 'ತಂತ್ರಾಖ್ಯಾಯಿಕಾ' ಮೂಲವೆಂದು ಭಾವಿಸುವರು.

"It is the only version which contains the unabreviated and not intentionally altered language of the author, which no other Indian Pancatantra version has preserved while the Pahlvi translation distorts it by numerous misunderstandings."

—M. Krishnamachari

ಆದರೆ ಎಡ್ಗರಟನ್‌ರು ಈ ಭೇದಗಳು ಮೂಲಭೂತವಾದುವಲ್ಲವೆಂದೂ, ಹೆಚ್ಚುಕಡಿಮೆ ಪ್ರಮಾಣದಲ್ಲಿ ಮಾತ್ರ ಇವೆಯೆಂದೂ, ದಕ್ಷಿಣದ ಪಂಚತಂತ್ರವು 'ತಂತ್ರಾಖ್ಯಾಯಿಕಾ'ಕಿಂತಲೂ ಮೇಲಾದುದೆಂದೂ ಹೇಳುವರು. ದಕ್ಷಿಣದ ಪಂಚತಂತ್ರ ಉಪಲಬ್ಧವಿಲ್ಲ.

"We may agree with Hertel in thinking that the South Indian Pancatantra and the completed text on which the Nepalese is based, were not identical, nor directly derived one from the other, but that they are closely related, off-shoots of the same arch-type." —Edgerton

ಬೇರೆ ಬೇರೆ ಸಂಪ್ರತಿಗಳಲ್ಲಿ ಪಾಠಭೇದಗಳು ಕಾಣುವುದು ಸಹಜವೇ. ಕೇವಲ ಪಾಠಭೇದಗಳ ಆಧಾರದಿಂದಲೇ ಕಾಲನಿರ್ಣಯಕ್ಕೆ ಕೈಹಾಕುವುದು ಸಾಹಸದ ಮಾತೇ ಸರಿ. ಪಾಠಾಂತರಗಳು ಈ ದೃಷ್ಟಿಯಿಂದ ಅಷ್ಟೊಂದು ಸಬಲ ಆಧಾರವೆಂದು ಗಣಿಸಲಾಗದು.

ಎರಡನೆಯದಾಗಿ, ಭಾರತೀಯ ಸಾಹಿತ್ಯದಲ್ಲಿ ನೀತಿಕತೆಗಳು ಮೊದಲು ಕಂಡುದು ಸಂಸ್ಕೃತದಲ್ಲಿಯೇ ? ಬೌದ್ಧ ಸಾಹಿತ್ಯದಲ್ಲಿಯೇ ? ಬೌದ್ಧ ಜಾತಕ ಕತೆಗಳಿಗೂ, ಪಂಚತಂತ್ರದ ಕತೆಗಳಿಗೂ ಹೋಲಿಕೆ ಇದೆ ಬೌದ್ಧ ಸಾಹಿತ್ಯದ ಪ್ರಾರಂಭ ಗೌತಮ ಬುದ್ಧನ ಮರಣಾನಂತರ [ನಿರ್ವಾಣ ಸು. ಕ್ರಿ ಶ. ಪೂ ೪೮೭] ಸುಮಾರು ಒಂದು ಶತಮಾನದ ಅವಧಿಯಲ್ಲಿ 'ತ್ರಿಪಿಟಕ' ಪೂರ್ತಿಯಾಗಿರಬೇಕೆಂದು ಹೇಳಬಹುದಾಗಿದೆ.

ಪಂಚತಂತ್ರದ ಕತೆಗಳ ಹೋಲಿಕೆಯನ್ನು ಕೇವಲ ಬೌದ್ಧಜಾತಕ ಕತೆಗಳಲ್ಲಿಯೇ ಕಂಡ 'ಬೆನ್‌ಫೇ' ಅವರು ಮೂಲತಃ ಪಂಚತಂತ್ರವು ಬೌದ್ಧ ಗ್ರಂಥವಾಗಿರಬೇಕೆಂದೇ ಗ್ರಹಿಸಿರುವರು. ಬೆನ್‌ಫೆರವರ ಗ್ರಹಿಕೆ ಬೌದ್ಧ ಗ್ರಂಥಗಳ ಕಾಲವನ್ನು ಅತಿಯಾಗಿ ಮೇಲೇರಿಸಿದುದೂ, ಮತ್ತು ಬೌದ್ಧ ಧರ್ಮವು ಎಷ್ಟರ ಮಟ್ಟಿಗೆ ಭಾರತೀಯವಾದುದೆಂದು ಪರಿಪೂರ್ಣ ಕಲ್ಪನೆ ಇಲ್ಲದಿರುವುದೂ ಕಾರಣಗಳಾಗಿವೆ. ತದ್ವಿರುದ್ಧವಾಗಿ ಬೌದ್ಧ ಜಾತಕದ ಎಷ್ಟೋ ಕತೆಗಳು ಮೂಲ ಪಂಚತಂತ್ರದಿಂದಲೇ ಬಂದುವೆಂದೂ ಹೇಳಲು ಸಾಧ್ಯ. ಆದುದರಿಂದ ಒಂದರಿಂದ ಮತ್ತೊಂದು ಎರವು, ಇಲ್ಲವೆ ನೆರವು ಪಡೆದಿದೆಯೆಂದು ಹೇಳುವುದು ಕಷ್ಟಸಾಧ್ಯ.

ಮೂರನೆಯದಾಗಿ, ಪಂಚತಂತ್ರದ ಗ್ರಂಥಕಾರನಿಗೆ ಮಹಾಭಾರತ ಗೊತ್ತಿದೆ. ಮಹಾಭಾರತವಿಂದಲೇ ಹಲವು ಕತೆಗಳು ಪಂಚತಂತ್ರದಲ್ಲಿ ಸೇರಿಕೊಂಡಿವೆ. ಅರ್ಥಾತ್, ಮಹಾಭಾರತದ ನಂತರವೇ ಪಂಚತಂತ್ರ ರಚಿತವಾಗಿರಬೇಕು. ಮಹಾಭಾರತ ಕಾವ್ಯ ರಚನಾಕಾಲವಿನ್ನೂ ಸರ್ವಸಮ್ಮತವಾದ ಒಪ್ಪಂದಕ್ಕೆ ನಿಲುಕಿಲ್ಲ. ಕುಮಾರಿಲ (ಕ್ರಿ. ಶ. ೭೦೦); ಬಾಣ (ಕ್ರಿ. ಶ ೬೦೦-೬೫೦) ರಿಗೆ ಮಹಾಭಾರತದ ಪರಿಚಯವಿದ್ದಿತು. ಅಂದರೆ ಮಹಾಭಾರತವು ಕ್ರಿ. ಶ. ೭-೮ ನೆಯ ಶ. ಮಾ. ಗಳಿಗಿಂತ ಮೊದಲಿನದೆಂದಾಯಿತು.

"Mahabharata cannot have received its present form earlier than 4th Cent. BC. and not later than 4th cent. A-D."

—M. Winternitz

ಸುಮಾರು ೮೦೦, ವರುಷಗಳ ಸುದೀರ್ಘ ಕಾಲಾವಧಿಯಲ್ಲಿ ಮಹಾಭಾರತದ ಕಾಲ ಹೊಯ್ದಾಡುತ್ತದೆ. ಈ ಮಹಾಕಾವ್ಯದ ಬಗೆಗೆ ಸಾಂಪ್ರದಾಯಿಕ ಕಲ್ಪನೆಗಳೇನೇ ಇರಲಿ; ಐತಿಹಾಸಿಕ ದೃಷ್ಟಿಯಿಂದ ನೋಡಿದಾಗಲೂ, ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿಲ್ಲದಿಲ್ಲ. ಆದರೆ ಸಾಮಾನ್ಯವಾಗಿ, ಐತಿಹಾಸಿಕವಾಗಿ ಮಹಾಭಾರತ ಯುದ್ಧದ ಕಾಲ ಸು. ಕ್ರಿ. ಶ. ಪೂ. ೧,೫೦೦ ಎಂದೂ, ಮಹಾಭಾರತ ಕಾವ್ಯ ರಚನೆಯ ಕಾಲ ಸು ಕ್ರಿ. ಶ. ಪೂ. ೩೦೦ ಎಂದೂ ತಿಳಿಯುತ್ತಿದೆ.

"We are however in these matters of originality, reduced to conjectures." —Keith

ಮೇಲಿನ ಎರಡನೆಯ ಮತ್ತು ಮೂರನೆಯ ವಾದಗಳನ್ನು ಒಟ್ಟಾಗಿ ಪರಿಶೀಲಿಸಿದಾಗ ಬೌದ್ಧ ಸಾಹಿತ್ಯ ಮೊದಲೋ ? ಮಹಾಭಾರತ ಕಾವ್ಯ ಮೊದಲೋ ? ಎಂಬ ಮತ್ತೊಂದು ಜಟಿಲ ಸಮಸ್ಯೆ ತಲೆಯೆತ್ತುತ್ತಿದೆ. ಸು. ಕ್ರಿ. ಶ. ಪೂ. ೩೮೦ ರಲ್ಲಿ ಬೌದ್ಧ ಸಾಹಿತ್ಯ ಪ್ರಾರಂಭವಾದರೆ, ಮಹಾಭಾರತದ ಕಾಲ ಕ್ರಿ. ಶ. ಪೂ. ೩೦೦ ಇವೆರಡರಲ್ಲಿಯ ಅಂತರ ಸುಮಾರು ೮೦-೧೦೦ ವರುಷಗಳಷ್ಟು ಮಾತ್ರ. ಜಾತಕ ಕತೆಗಳ ಕಾಲವನ್ನು ಯಾವುದೇ ದೃಷ್ಟಿಯಿಂದ ಕ್ರಿ. ಶ. ಪೂ. ೩ ನೆಯ ಶ ಮಾ. ಕ್ಕಿಂತ ಹಿಂದೂಡಲು ಬರುವಂತಿಲ್ಲ. ಆದುದರಿಂದ ಪ್ರಕೃತ ಉಪಲಬ್ಧವಿದ್ದ ಆಧಾರಗಳ ಮೇಲಿಂದ ಬೌದ್ಧ ಜಾತಕ ಮತ್ತು ಮಹಾಭಾರತ ಕಾವ್ಯಗಳು ಸ್ವಲ್ಪ ಹೆಚ್ಚುಕಡಿಮೆ ಸಮಕಾಲೀನವೆಂದೇ ಹೇಳಲು ಸಾಧ್ಯ.

"....it can be concluded that the position of the Jataka book is probably no different from that of Mahabharata" —Macdonell

ಪಂಚತಂತ್ರಕಾರನಿಗೆ ಮಹಾಭಾರತ ಪರಿಚಿತವಾಗಿದ್ದುದರಿಂದ ಜಾತಕ ಕತೆಗಳು ಪಂಚತಂತ್ರಕ್ಕಿಂತ ಪ್ರಾಚೀನವೆಂದೇ ಸಿದ್ಧವಾಗುತ್ತಿದೆ. ಇವೆರಡು ಕಥಾ ಸಾಹಿತ್ಯಗಳಲ್ಲಿ ಅಲ್ಲಲ್ಲಿ ಕಾಣುವ ಸಮಾನತೆ ಸಂಪ್ರತಿಕಾರರ ಮೂಲಕ ಕಾಲಾಂತರದಲ್ಲಿ ಸೇರಿಕೊಂಡಿರುವುದು ಅಸಂಭವವೇನಲ್ಲ. ಆದುದರಿಂದ ಪಂಚತಂತ್ರಕ್ಕಿಂತ ಬೌದ್ಧ ಜಾತಕಗಳೇ ಮೊದಲಿನವೆಂದೂ, ಪಂಚತಂತ್ರವು ಮಹಾಭಾರತದ ನಂತರದಲ್ಲಿ ರಚಿಸಲ್ಪಟ್ಟಿತೆಂದೂ ಸ್ಪಷ್ಟವಾಗುತ್ತಿದೆ. ಮುಂಬರುವ ಪ್ರಶ್ನೆ ಮಹಾಭಾರತಕ್ಕೂ, ಪಂಚತಂತ್ರಕ್ಕೂ ಇರಬಹುದಾದ ನಡುವಣ ಕಾಲಾವಧಿ ಎಷ್ಟು ಎಂಬುದು.

ನಾಲ್ಕನೆಯದಾಗಿ, ಪಂಚತಂತ್ರಕಾರನು ಗ್ರಂಥದ ಆದಿಯಲ್ಲಿ ಸರಸ್ವತಿ ಪ್ರಾರ್ಥನೆ ಅಲ್ಲದೆ ಮನು, ವಾಚಸ್ಪತಿ, ಪರಾಶರ, ವ್ಯಾಸ, ಚಾಣಕ್ಯ ಮುಂತಾದ, ತನ್ನ ಪೂರ್ವಜರನ್ನು ಹೆಸರಿಸಿರುವನು. ತಂತ್ರಕಾರನು ಅರ್ಥಶಾಸ್ತ್ರಕ್ಕೆ ಋಣಿಯಾಗಿದ್ದಾನೆ. 'ಪ್ರಕೃತಿ' ಶಬ್ದಕ್ಕೆ 'ಮಿತ್ರ' ಅಥವಾ 'ವೈರಿ' ಎಂಬರ್ಥದಲ್ಲಿ ಪ್ರಯೋಗಿಸಿರುವುದು ಗಮನಾರ್ಹ. ಮಿತ್ರ ಪ್ರಕೃತಿ; ಅರಿಪ್ರಕೃತಿ, ಅಭ್ಯಂತರ ಪ್ರಕೃತಿ (ಒಂದು ಪ್ರದೇಶದೊಳಗಿನ ಮಿತ್ರ ಅಥವಾ ವೈರಿ) ಬಾಹ್ಯ ಪ್ರಕೃತಿ (ಒಂದು ಪ್ರದೇಶದ ಹೊರಗಿನ ಶತ್ರು ಅಥವಾ ಮಿತ್ರ) ಎಂದು ಪದ ಪ್ರಯೋಗಗಳಿವೆ. ಚಾಣಕ್ಯನು ತಂತ್ರ ಯುಕ್ತಿಯು ಎನೆಯ ಪುಸ್ತಕದಲ್ಲಿ 'ಪ್ರಕೃತಿ' ಶಬ್ದ ತನ್ನದೇ ಎಂದು ಹೇಳಿಕೊಂಡಿರುವುದರಿಂದ ಚಾಣಕ್ಯನ ನಂತರದ ತಂತ್ರಕಾರನು 'ಅರ್ಥಶಾಸ್ತ್ರ' ದಿಂದಲೇ ಈ ಪದ ತೆಗೆದುಕೊಂಡಿರಬೇಕೆಂಬಲ್ಲಿ ಸಂದೇಹವಿಲ್ಲ.

ಚಾಣಕ್ಯನ ಅರ್ಥಶಾಸ್ತ್ರದ ಕಾಲ ಖಚಿತವಾಗಿ ತಿಳಿದಿಲ್ಲ. 'ಅರ್ಥಶಾಸ್ತ್ರ'ದ ಕಾಲ ಕ್ರಿ. ಶ. ಪೂ. ೪ ನೆಯ ಶ. ಮಾ.ವೆಂದು ಕೆಲವರೂ, ಕ್ರಿ. ಶ. ೩ ನೆಯ ಶ. ಮಾ.ವೆಂದೂ ಕೆಲವರೂ ಹೇಳುವರು. ಈ ವಿಷಯವಾಗಿರುವ ಚರ್ಚೆಯನ್ನು ತೂಗಿ ನೋಡಿದಾಗ ಮೌರ್ಯರ ಕಾಲದಲ್ಲಿಯೇ ರಚಿತವಾಯಿತೆಂಬ ಮತವೇ ಹೆಚ್ಚು ಸರಿ ಎನಿಸುತ್ತಿದೆ. ಚಾಣಕ್ಯನು 'ನೃಪಶಾಸ್ತ್ರ' ಅಥವಾ 'ನೀತಿ ಶಾಸ್ತ್ರಕಾರ' ನೆಂಬ ಸ್ಪಷ್ಟವಾದ ಉಲ್ಲೇಖವೂ ದೊರೆಯುವದು.

'ಅರ್ಥಶಾಸ್ತ್ರ'ದಲ್ಲಿ ಗ್ರೀಕ್‌ನಾಣ್ಯ 'ದೀನಾರ'ದ ಉಲ್ಲೇಖವಿಲ್ಲದಿರುವುದರಿಂದ ಅದು ಪ್ರಾಚೀನ ಅಥವಾ ಕ್ರಿಸ್ತ ಶಕಕ್ಕಿಂತ ಪೂರ್ವದ್ದೆಂದೂ, ಪಂಚತಂತ್ರದಲ್ಲಿ 'ದೀನಾರ' ಪದ ಕಂಡುಬರುವುದರಿಂದ ಅದು ಕ್ರಿಸ್ತಶಕ ಪ್ರಾರಂಭದ ನಂತರದ್ದೆಂದೂ ಹೇಳುವುದು ಸಮಂಜಸವೆಂದು ತೋರುವುದಿಲ್ಲ. ಈ ವಿಷಯವನ್ನು ಈ ಮುಂದೆ ಚರ್ಚಿಸಲಿರುವೆ. ಅರ್ಥಶಾಸ್ತ್ರವು ಪಂಚತಂತ್ರಕ್ಕಿಂತ ಮೊದಲಿನದಲ್ಲವೆಂದರೆ, ಇವೆರಡೂ ಕೃತಿಗಳಿಗೆ ಸಾಮಾನ್ಯವಾಗಿರಬಹುದಾದ ಬೇರೆ ಯಾವುದೋ ಮೂಲವಿರಬೇಕೆಂದು ಹೇಳಬೇಕಾಗುವುದು. ಆದರೆ ಈ ಹೇಳಿಕೆಗೆ ಸಾಧಾರಗಳ ಪುಷ್ಟಿ ಇಲ್ಲ. ಆದುದರಿಂದ, ಜೆ. ಹರ್ಟೆಲ್‌ರು—

"....reference to Chāṇakya in stanza '2' as Chaṇakya the great', Chanakya otherwise known as Kauṭilya or Vishṇugupta was the primeminister of the 1st king of the Mauryan dynasty King Chandragupta of Pāṭaliputra (321-297 B.C.) at whose court Magasthenes lived as ambassador. The earliest time limit for the Tantrākhyayika could accordingly be about 300 B. C." ಎಂದಿರುವುದು ಹೆಚ್ಚು ಸೂಕ್ತವೆಂದೆನಿಸದಿರದು.

ಅರ್ಥಶಾಸ್ತ್ರವು ಪಂಚತಂತ್ರಕ್ಕಿಂತ ಸ್ವಲ್ಪ ಕಾಲ ಹಿಂದೆಯೇ ರಚಿತವಾಗಿರಬೇಕು; ಇಲ್ಲವೆ ಇವೆರಡು ಕೃತಿಗಳು ಸಮಕಾಲೀನವಾಗಿರಬೇಕು. ಆದುದರಿಂದ ಪಂಚತಂತ್ರವು ಕ್ರಿಸ್ತ ಶಕ ಪ್ರಾರಂಭಕ್ಕಿಂತ ಮೊದಲೇ ರಚಿತವಾಗಿರಬೇಕೆಂಬ ನಮ್ಮ ಮುಂದಿನ ವಾದವೇ ಧೃಡಪಡುತ್ತಿದೆ.

ಐದನೆಯದಾಗಿ, ವಿಷ್ಣುಶರ್ಮನು ಅಮರಶಕ್ತಿಯ ಮಕ್ಕಳಾದ ಮೂಢ ತ್ರಿಮೂರ್ತಿಗಳನ್ನು ಬುದ್ಧಿವಂತರನ್ನಾಗಿಸಲೆಂದೇ ಕೃತಿ ರಚನೆ ಕೈಕೊಂಡನು. ರಾಜಕುಮಾರರಿಗೆ ಕಲಿಸುವ ಕಾಲ ಸಂಸ್ಕೃತವು ಮಾಧ್ಯಮವಾಗಿದ್ದ ಕಾಲ. ಆದುದರಿಂದ ಪಂಚತಂತ್ರವು ಕ್ರಿಸ್ತ ಶಕದ ನಂತರ ಗುಪ್ತರಕಿಂತ ಸ್ವಲ್ಪ ಮೊದಲು ಅಥವಾ ಗುಪ್ತರ ಕಾಲದಲ್ಲಿಯೇ ರಚಿತವಾಗಿರಬೇಕೆಂದು ಕೆಲವರ ಮತ.

ಆದರೆ ಸಂಸ್ಕೃತ ಸಾಹಿತ್ಯ, ಭಾಷೆಗಳ ಇತಿಹಾಸ ಮೇಲಿನ ಅಭಿಪ್ರಾಯದಲ್ಲಿ ಹುರುಳಿಲ್ಲೆಂದು ತೋರಿಸುತ್ತಿದೆ.

"No one now doubts that the Bhāshā of Pāṇini was the spoken language of his days. The colloquialisms....precise instructions....of forms used when addressing people at some distance etc-all point to a spoken language and not a mere literary medium.

"....Sanskrit became more and more a literary language and its sphere as a spoken language gradually decreased with the result that after the begining of the Christian era, classical Sanskrit ceased to develop as a language and assumed a stylized form." —M. A. Mehendale

ಪಾಣಿನಿಯಿಂದ ಕ್ರಿಸ್ತ ಶಕ ಪ್ರಾರಂಭದವರೆಗೂ ಸಂಸ್ಕೃತವು ಮಾತನಾಡುವ ಭಾಷೆಯಾಗಿತ್ತು. ಕ್ರಿ. ಶ. ಪ್ರಾರಂಭದ ನಂತರ ಸಂಸ್ಕೃತ ಸಾಹಿತ್ಯ ವಿಪುಲವಾಗಿ ಬೆಳೆದಿದ್ದರೂ, ಅದು ಕವಿಗಳ, ಪಂಡಿತರ ಸೊತ್ತಾಗಿ ಮೆರೆಯುತ್ತಿದೆ. ಅಂತೆಯೇ ಸಂಸ್ಕೃತವು ಜನಸಾಮಾನ್ಯರು ಮಾತನಾಡುವ ಭಾಷೆಯಾಗಿರುವ ಕಾಲದಲ್ಲಿಯೇ ಮೂರ್ಖ ರಾಜಕುಮಾರರಿಗೆ ಸಂಸ್ಕೃತ ಮಾಧ್ಯಮದಲ್ಲಿಯೇ ವಿಷ್ಣುಶರ್ಮನು ಕಲಿಸಿದನೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಆದುದರಿಂದಲೇ ಪಂಚತಂತ್ರದ ಕಾಲ ಕ್ರಿಸ್ತ ಶಕದ ನಂತರವಲ್ಲ.

ಆರನೆಯದಾಗಿ, ಇರಾಣದ ಅರಸು 'ಖೋಸ್ರುನ್ ಅನೋಶರ್ವನ್' ನ ಕಾಲದಲ್ಲಿ (ಕ್ರಿ. ಶ. ೫೩೧-೭೯) ಪರ್ಶಿಯದ ಡಾ. ಬರ್ಜೋಯಿ ಭಾರತಕ್ಕೆ ಬಂದನು. ಇವನು ಪಂಚತಂತ್ರವನ್ನು 'ಪೆಹ್ಲವಿ' ಭಾಷೆಯಲ್ಲಿ ಭಾಷಾಂತರಿಸಿ ಇರಾಣಕ್ಕೆ ಒಯ್ದನು. ಹೀಗೆ ಭಾಷಾಂತರಿಸುವಾಗ ಕತೆಗಳ ಸ್ವರೂಪ, ತಲೆಬರಹಗಳಲ್ಲಿ ಬದಲಾವಣೆ ಕಂಡುಬರುತ್ತಿದೆ. 'ಬುದ್'ನು ಸಿರಿಯಾಕ್ ಭಾಷೆಯಲ್ಲಿ 'ಪೆಹ್ಲವಿ' ಮೂಲದಿಂದ ಮಾಡಿದ ಭಾಷಾಂತರ ಕೃತಿ (ಕ್ರಿ. ಶ. ೫೭೦) ಉಪಲಬ್ಧವಿದೆ. ಡಾ. ಬರ್ಜೋಯಿ ಮೂಲ ಕಥಾವಸ್ತುವನ್ನು ಪಂಚತಂತ್ರದಿಂದಲೇ ನೇರವಾಗಿಎತ್ತಿಕೊಂಡಿದ್ದರೂ ಆ ಕಾಲದ ಇರಾಣ ಪರ್ಶಿಯಾಗಳಲ್ಲಿರಬಹುದಾದ ಜಾನಪದ ಕಥೆಗಳು ಅಥವಾ ಜನತೆಯ ನಂಬುಕೆಗಳಿಗೆ ಸರಿಹೊಂದುವಂತೆ ಹಲವು ಮಾರ್ಪಾಟುಗಳನ್ನು ಮಾಡಿಕೊಂಡಿರುವದು ಸಹಜ. 'ಪಂಚತಂತ್ರ'ವೆಂಬ ಗ್ರಂಥದ ಹೆಸರು ಪೆಹ್ಲವಿಯಲ್ಲಿ 'ಕರಟಕ ಮತ್ತು ದಮನಕ' ವೆಂದು ಬದಲಾಗಿದೆ. ಅನಂತರವೂ ಭಾರತದ ನೆರೆಹೊರೆಯ ಪೌರ್ವಾತ್ಯ ರಾಷ್ಟ್ರಗಳಾದ ಅರೇಬಿಯಾ, ಪರ್ಶಿಯಾಗಳ ಗ್ರಂಥಕಾರರು ನೀತಿಕತೆಗಳ ನಿರೂಪಣೆಯ ಶೈಲಿಯನ್ನು ಭಾರತದಿಂದಲೇ ತೆಗೆದುಕೊಂಡಿರುವರು. ಈ ಬಗೆಯ ಅನುಕರಣೆ, ಅನುಸರಣೆಗಳ ರೀತಿಯನ್ನು ತಮ್ಮ ಸ್ವತಂತ್ರ ಕೃತಿಗಳಲ್ಲಿ ಬಳಸಿಕೊಂಡಿದ್ದಾರೆ. ಇದಕ್ಕೆ ಅತ್ಯುತ್ತಮ ಉದಾಹರಣೆ 'ಅರೇಬಿಯನ ನೈಟ್ಸ.'

'ಪೆಹ್ಲವಿ' ಭಾಷೆಯ ಪ್ರತಿ ಇಂದು ದೊರೆತಿಲ್ಲ.

"At what time this collection first assumed definite shape, it is impossible to say. We know, however, that it existed in the 1st half of the 6th cent. A. D. Since it was translated by the order of the king 'Khosru Anushiruan' (531-29 A. D.) into Pahlvi, the literary language of Persia at that time, we may indeed assume that it was known in the 5th cent. A.D., for a considerable time might have elapsed before it (Pancatantra) become so famous that a foreign king desired its translation.." —Macdonell.

ಆದುದರಿಂದ ಪಂಚತಂತ್ರವು ಕ್ರಿ. ಶ. ೫ನೆಯ ಶ. ಮಾ. ಕ್ಕಿಂತ ಮೊದಲಿನದು. ಹರ್ಟೆಲ್‌ರು ಇದೇ ಆಧಾರದ ಮೇಲೆಯೇ ಪಂಚತಂತ್ರವು ಕ್ರಿ. ಶ. ಪೂ. ೩೦೦ ರಲ್ಲಿ ರಚಿತವಾಗಿರಬೇಕೆಂದಿರುವರು.

'ಕರಟಕ ಮತ್ತು ದಮನಕ' ಕೃತಿಯು ನೇರವಾಗಿ ಪಂಚತಂತ್ರದಿಂದಲೇ ಹುಟ್ಟಿಕೊಂಡಿತೇ? ಅಥವಾ ಪಂಚತಂತ್ರಕ್ಕೂ ಇದಕ್ಕೂ ಇಂದು ದೊರೆಯದ ಯಾವುದಾದರೂ ಮೂಲವಿತ್ತೇ? ಎಂಬ ಪ್ರಶ್ನೆಯೂ ವಿಮರ್ಶಕರನ್ನು ಕೆಣಕದಿಲ್ಲ. ಪಂಚತಂತ್ರಕ್ಕೆ ಮೂಲವಾದ ಯಾವುದೇ ಭಾಷೆಯಲ್ಲಿ ಯಾವುದೇ ಒಂದು ಕೃತಿ ಇತ್ತೆಂದು ಊಹಿಸಲು ಆಸ್ಪದವಿಲ್ಲ.

"Not possible to speak of a Prākrit fable literature as being the precursor of the Pancatantrā.. Indian tradition is as positive as regarding the Prakrit original of collections of Māchenas as it is silent on the existence of any Parkrit source of Pancatantra" —Keith.

'ಪೆಹ್ಲವಿ' ಭಾಷಾಂತರ ಪಂಚತಂತ್ರವನ್ನೇ ಅವಲಂಬಿಸಿದುದೆಂದು ಸಾಧಾರವಾಗಿ ತಿಳಿಯುತ್ತಿದೆ. ಕ್ರಿ. ಶ. ೫ನೆಯ ಶ. ಮಾ ದಲ್ಲಾದ ಈ ಭಾಷಾಂತರದಿಂದಲೇ ಪಂಚತಂತ್ರವೂ ಕ್ರಿ. ಶ. ೪-೫ ಶ. ಮಾ.ಗಳಲ್ಲಿಯೇ ಹುಟ್ಟಿರಬೇಕೆಂಬ ಕೆಲವರ ಮತ ಸ್ವೀಕಾರಾರ್ಹವಾದುದಲ್ಲ. ಪರ್ಶಿಯಾ-ಭಾರತಗಳಲ್ಲಿಯ ಸಂಬಂಧ ಕ್ರಿ. ಶ. ಪೂ. ೨-೩ನೆಯ ಶತಮಾನಗಳಿಂದಲೇ ಪ್ರಾರಂಭವಾಗಿದ್ದರೂ, ಒಂದು ದೇಶದ ಕೃತಿ ಮತ್ತೊಂದು ದೇಶದ ಅರಸನ ಲಕ್ಷ್ಯ ಸೆಳೆಯುವಷ್ಟು ಜನಪ್ರಿಯವಾಗಲು ಬಹುಕಾಲ ಕಳೆದಿರಬೇಕು. ಅಂತೆಯೇ, ಕ್ರಿ. ಶ. ಪೂರ್ವದ ಪಂಚತಂತ್ರವು ಪರದೇಶದ ಭಾಷೆಗೆ ಪರಿವರ್ತಿತವಾಗುವಲ್ಲಿ ೫೦೦ ೬೦೦ ವರುಷಗಳು ಉರುಳಿರುವುದು, ಸಕೃದ್ದರ್ಶನಕ್ಕೆ ಅತಿ ಹೆಚ್ಚೆಂದು ಕಂಡುಬಂದರೂ, ಅಸಂಭಾವ್ಯವಲ್ಲ. ಇದರಿಂದ ಪಂಚತಂತ್ರದ ರಚನೆಯ ಕಾಲಾವಧಿ ಕ್ರಿ. ಶ. ಪೂ. ೩೦೦ ರಿಂದ ಕ್ರಿ. ಶ. ೫ನೆಯ ಶ. ಮಾ ದ ಪ್ರಾರಂಭದ ಹರದಿನಲ್ಲಿ ಹರಡಿದಂತಾಯಿತು.

ಏಳನೆಯದಾಗಿ, ಪಂಚತಂತ್ರದಲ್ಲಿ ಗ್ರೀಕ ನಾಣ್ಯ 'ದೀನಾರ'ದ ಉಲ್ಲೇಖವಿದೆ. ಈ ನಾಣ್ಯಗಳ ಪರಿಚಯ ಭಾರತಕ್ಕೆ ಕ್ರಿ ಶ. ೨ನೆಯ ಶ. ಮಾ ಕ್ಕಿಂತ ಮೊದಲಿರಲಿಲ್ಲವೆಂದೂ, ಆದುದರಿಂದಲೇ ಪಂಚತಂತ್ರದ ಕಾಲ ಕ್ರಿ ಶ. ೨ನೆಯ ಶ ಮಾ.ದಿಂದೀಚೆಗೆ, ಕ್ರಿ ಶ ೫ನೆಯ ಶ.ಮಾ. ಕ್ಕಿಂತ ಮೊದಲು ಎಂದು ಹಲವರ ವಾದ. ಆದರೆ,

"It is not sufficient to assign it to the 2nd Cent. A. D. at the earliest."

ಎಂಬ ಕೀಥರ ಮಾತಿನಲ್ಲಿ ಹುರುಳಿಲ್ಲದಿಲ್ಲ.

ಪಂಚತಂತ್ರದಂತೆಯೇ ಗ್ರೀಸ್ ದೇಶದ ಇಸೋಪನ ನೀತಿಕತೆಗಳೂ ಜಗತ್ಪ್ರಸಿದ್ಧ; ಜನಪ್ರಿಯ ಇಸೋಪನ ನೀತಿಕತೆಗಳನ್ನು ಸಾಕ್ರೆಟಿಸನು (ಕ್ರಿ ಶ ಪೂ ೪೭೦-೩೯೯) ನೋಡಿದ್ದನು ಇಸೋಪನ ಕತೆಗಳ ನಂಬಲರ್ಹವಾದ, ಅಧಿಕಾರಯುತ ಪ್ರತಿಯನ್ನು ಗ್ರೀಸದ 'ಬೇಬ್ರಿಯಸ್'ನು ಸಿದ್ಧಗೊಳಿಸಿರುವನು ಈ ಬೇಬ್ರಿಯಸ್‌ನ ಕಾಲವೂ ನಿಶ್ಚಿತವಾಗಿಲ್ಲ ಸರ್ ಜಿ ಸಿ ಲುಯಿಸ್‌ರು ಬೇಬ್ರಿಯಸ್‌ನ ಕಾಲ ಕ್ರಿ ಶ. ಪೂ ೨೫೦ ರಿಂದ ಕ್ರಿ. ಶ. ೨೫೦ ರ ಗಡಿಯಲ್ಲಿ ಎಂದಿರುವರು. ಸಾಕ್ರೆಟಿಸನಗಿಂತ ಪೂರ್ವದಲ್ಲಿ ಅಂದರೆ ಕ್ರಿ. ಶ. ಪೂ ೬ನೆಯ ಶ ಮಾ. ದಲ್ಲಿ ಇಸೋಪನಿದ್ದನೆಂದು ಗ್ರಹಿತ

ವಿಷ್ಣುಶರ್ಮ ಮತ್ತು ಇಸೋಪನ ಕತೆಗಳಲ್ಲಿ ಅಲ್ಲಲ್ಲಿ ಕಾಣುವ ಹೋಲಿಕೆ ಅನೇಕ ಸಮಸ್ಯೆಗಳಿಗೆ ಎಡೆಗೊಟ್ಟಿದೆ. ಇಸೋಪನು ಅರೇಬಿಯದ ತತ್ವಜ್ಞಾನಿ 'ಲುಕ್‌ಮನ್'ನ ಸಮಕಾಲೀನನೆಂಬ ಪ್ರತೀತಿಯಿದೆ 'ಲುಕ್‌ಮನ್'ನು ಗಾದೆಮಾತುಗಳನ್ನು ನೀತಿಕತೆಗಳನ್ನು ಬರೆದಿದ್ದನೆಂದೂ, ಅವನು ಬಡಿಗ, ಗುಲಾಮ, ನ್ಯಾಯಾಧೀಶ ಆಗಿದ್ದನೆಂದೂ, ಅವನ ದೇಶ ಇಜಿಪ್ತ, ನುಬಿಯಾ, ಇಥೋಪಿಯಾ ಎಂದೂ ಒಂದಕ್ಕೊಂದು ಸಂಬಂಧವಿಲ್ಲದ ವಿವರಣೆಗಳು ಕೇಳಬರುತ್ತಿವೆ 'ಲುಕ್‌ಮನ್'ನ ಬಗೆಗೆ ಎಲ್ಲವೂ ಊಹೆಯ ಮೇಲೆ ನಿಂತಿದೆ ಆದುದರಿಂದ ಇಸೋಪನ ಕಾಲ ನಿರ್ಣಯಕ್ಕೆ ಸಹಾಯಕವಾಗಿಲ್ಲ.

ಇವೆರಡು ಕೃತಿಗಳಲ್ಲಿಯ ಸಮಸ್ಯೆ ಏನೇ ಇರಲಿ. ಭಾರತ ಮತ್ತು ಗ್ರೀಸ್ ದೇಶಗಳಲ್ಲಿ ರಾಜಕೀಯ. ವಾಣಿಜ್ಯ, ಸಾಹಿತ್ಯಕ, ತತ್ತ್ವಜ್ಞಾನ, ಧಾರ್ಮಿಕ ರಂಗಗಳಲ್ಲಿ ಬಹು ಪ್ರಾಚೀನ ಕಾಲದಿಂದಲೇ ನಿಕಟವಾದ ಸಂಬಂಧ, ಸಂಪರ್ಕ ಬೆಳೆದುಬಂದಿರುವುದು ಐತಿಹಾಸಿಕ ಸತ್ಯ

"The only permanent result of Alexandria's campaign (326 B. C.) was that it opened up communication between Greece and India and paved the way for a more intimate intercourse between them."

– Radha Kumud Mookerji.

ಚಾಣಕ್ಯನು ಅರ್ಥಶಾಸ್ತ್ರದಲ್ಲಿ ಗ್ರೀಕ್ ನಾಣ್ಯ 'ದೀನಾರ್'ವನ್ನು ಹೇಳಿಲ್ಲ; ಆದರೆ ಪಂಚತಂತ್ರಕಾರನು ಹೇಳಿರುವನು. ಇದಕ್ಕೆ ಸಮಾಧಾನವೇನು? ಚಾಣಕ್ಯನ ಕಾಲದಲ್ಲಿ ಅಲೆಕ್ಸಾಂಡರನ ದಾಳಿಯಿಂದ ಭಾರತ-ಗ್ರೀಸ್‌ಗಳ ಸಂಬಂಧ ಪ್ರಾರಂಭವಾಗಿರುತ್ತದೆ ಅಲೆಕ್ಸಾಂಡರನ ನಂತರದಲ್ಲಿ ಭಾರತದಲ್ಲಿ ನೆಲೆಸಲು ಯತ್ನಿಸಿದ ಗ್ರೀಕರು ತಮ್ಮ ಹೆಸರಿನಲ್ಲಿ ನಾಣ್ಯಗಳನ್ನು ಹೊರಡಿಸಲು ಪ್ರಾರಂಭಿಸಿದರು. ಗ್ರೀಕ್ ನಾಣ್ಯಗಳು ಭಾರತದಲ್ಲಿ ಚಲಾವಣೆಯಲ್ಲಿ ಬಂದ ಕಾಲದಲ್ಲಿ ಚಾಣಕ್ಯನಿರಲಿಲ್ಲವೆಂದು ಇತಿಹಾಸದಿಂದ ತಿಳಿಯುವುದು. ಆದುದರಿಂದ ಚಾಣಕ್ಯನು ತನ್ನ ಗ್ರಂಥದಲ್ಲಿ 'ದೀನಾರ್'ವನ್ನು ಉಲ್ಲೇಖಿಸದಿರುವುದು ಸಹಜ; ಸ್ವಾಭಾವಿಕ. ಆದರೆ 'ಅರ್ಥಶಾಸ್ತ್ರ'ದ ನಂತರ ರಚಿತವಾದ ಪಂಚತಂತ್ರಕಾರನು 'ದೀನಾರ್'ವನ್ನು ಉಲ್ಲೇಖಿಸುವುದೂ ಅಷ್ಟೇ ಸ್ವಾಭಾವಿಕವಾಗಿದೆ.

ಎನ್ ಆರ್. ಡೇ ಹಾಗೂ ಡಿ ಪಿ. ಸರ್ಕಾರ ಅವರ ಹೇಳಿಕೆಗಳಿಂದ ಗ್ರೀಕ್ ನಾಣ್ಯಗಳು ಭಾರತದಲ್ಲಿ ಕ್ರಿ ಶ ಪೂ ೧ನೆಯ ಶ. ಮಾ. ದಿಂದಲೇ ಬಳಕೆಯಲ್ಲಿದ್ದವೆಂದು ಗೊತ್ತಾಗುತ್ತದೆ. ಪಂಚತಂತ್ರದಲ್ಲಿ 'ದೀನಾರ'ದ ಹೆಸರು ಕಾಣುವುದೆಂದ ಮಾತ್ರಕ್ಕೆ ವಿಷ್ಣುಶರ್ಮನ ಕಾಲ ಕ್ರಿ ಶ. ೨-೩ ನೆಯ ಶ ಮಾನಗಳಲ್ಲಿಯೆಂದು ಹೇಳುವುದು ಸಮಂಜಸವಲ್ಲ ಚಾಣಕ್ಯನ ಅರ್ಥಶಾಸ್ತ್ರದ ನಂತರದ್ದಾದ ಪಂಚತಂತ್ರ ಕ್ರಿ ಶ ಪೂ ೧ನೆಯ ಶ ಮಾನದಲ್ಲಿಯೇ ಉತ್ತರ ಭಾರತದಲ್ಲಿ ಉಪಯೋಗದಲ್ಲಿ ಬಂದ ಗ್ರೀಕ್ ನಾಣ್ಯ 'ದೀನಾರ್'ವನ್ನು ಹೇಳಿರುವುದು ಕವಿಯ ತತ್ಕಾಲೀನ ಸ್ಥಿತಿಯನ್ನು ಕಾಣುವ ಸೂಕ್ಷ್ಮದೃಷ್ಟಿಯ ನಿದರ್ಶನವೇ ಸರಿ

ಕೊನೆಯದಾಗಿ, ಶ್ರೀ ಎಂ. ಎನ್. ಶ್ರೀನಿವಾಸ ಅಯ್ಯಂಗಾರವರು ಕ್ರಿ. ಶ. ೫ ನೆಯ ಶ ಮಾನದಲ್ಲಿದ್ದ ಭರ್ತೃಹರಿಯ ಸುಭಾಷಿತದಲ್ಲಿಯ ಅನೇಕ ಶ್ಲೋಕಗಳು ಪದಭೇದದಿಂದ ಪಂಚತಂತ್ರದಲ್ಲಿ ಕಾಣುವುದರಿಂದ ವಿಷ್ಣುಶರ್ಮನು ಕ್ರಿ. ಶ. ೫ ನೆಯ ಶ ಮಾನದಲ್ಲಿ, ಅಂದರೆ ಭರ್ತೃಹರಿಯ ಅನಂತರ ಇದ್ದಿರಬೇಕೆಂದು ಹೇಳುವರು. ಆದರೆ ಈ ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಸಬಲ ಕಾರಣಗಳನ್ನೇಕೆ ಹೇಳಿಲ್ಲವೋ ತಿಳಿಯದು. ಶ್ರೀ ಅಯ್ಯಂಗಾರವರ ಅಭಿಪ್ರಾಯಕ್ಕೆ ಪ್ರತಿಯಾಗಿ ಭರ್ತೃಹರಿಯೇ ಪಂಚತಂತ್ರದಲ್ಲಿಯ ಶ್ಲೋಕಗಳನ್ನು ಪದಭೇದ ಮಾಡಿಕೊಂಡು ತನ್ನ ನೀತಿಶತಕಗಳಲ್ಲಿ ಸೇರಿಸಿಕೊಂಡಿರುವದು ಹೆಚ್ಚು ಸಂಭವನೀಯವೆನಿಸುತ್ತಿದೆ ವಿಷ್ಣುಶರ್ಮನು ಸಂಸ್ಕೃತ ಭಾಷಾ ಪಂಡಿತ. ಸಕಲ ಶಾಸ್ತ್ರಗಳನ್ನರಿತವ. (ಶಾಸ್ತ್ರ, ಪುರಾಣ, ಆಗಮಗಳ ಸಾರವನ್ನು ಭಟ್ಟಿ ಇಳಿಸಿ ನೀತಿಬೋಧಕ ಗ್ರಂಥ ರಚಿಸುವುದೇ ಅವನ ಹಿರಿಯ ಗುರಿ ವಿಷ್ಣುಶರ್ಮನು ಕೇವಲ ಕತೆಗಾರನಲ್ಲ; ಕವಿಯೂ ಆಹುದು) ಕತೆಗಳ ತಿರುಳನ್ನು ಕಥಾರಂಭದಲ್ಲಿ ಪದ್ಯರೂಪದಲ್ಲಿ ಹೇಳುವುದು ನೀತಿಕತೆಗಳ ವೈಶಿಷ್ಟ್ಯಗಳಲ್ಲೊಂದಾಗಿದೆ ಪದ್ಯಗಳು ಕಥಾ ಮಧ್ಯ ಅಥವಾ ಅಂತ್ಯಗಳಲ್ಲಿ ಬರುವುದೂ ಉಂಟು ತನ್ನ ಕಥಾ ವಿವರಣೆಗೆ ಪೋಷಕವಾಗುವ ಅನೇಕ ಶ್ಲೋಕಗಳನ್ನು ಪಂಚತಂತ್ರಕಾರನೇ ರಚಿಸಿದನೆಂಬುದು ಒಪ್ಪತಕ್ಕ ಮಾತು. ವಿಷ್ಣುಶರ್ಮನು ಕ್ರಿ. ಶ. ಪ್ರಾರಂಭದ ಮೊದಲೇ ಇದ್ದನೆಂಬುದು ಈ ವರೆಗಿನ ವಿವರಣೆಯಿಂದ ಸ್ಪಷ್ಟವಾಗಿದೆ. ಆದುದರಿಂದ ನೀತಿಶತಕಗಳನ್ನೇ ರಚಿಸುವ ಮುಖ್ಯ ಉದ್ದೇಶವನ್ನಾರಿಸಿಕೊಂಡ ಭರ್ತೃಹರಿಯೇ ಪಂಚತಂತ್ರದಲ್ಲಿಯ ಶ್ಲೋಕಗಳಿಗೆ ಮಾರುಹೋಗಿ, ಅವುಗಳಿಂದ ಪ್ರಭಾವಿತನಾಗಿ ಅಲ್ಲಲ್ಲಿ ಪದಭೇದಗಳನ್ನು ಮಾಡಿಕೊಂಡು ತನ್ನ ಕೃತಿಯಲ್ಲಿ ಸೇರಿಸಿಕೊಂಡಿರುವನೆಂದೇ ನಮಗೆ ಅನಿಸುತ್ತಿದೆ. ಆದುದರಿಂದ ಕ್ರಿ ಶ ೫ ನೆಯ ಶ ಮಾನದಲ್ಲಿ ವಿಷ್ಣುಶರ್ಮನಿದ್ದನೆಂಬ ಶ್ರೀ ಅಯ್ಯಂಗಾರರ ಮತ ಸೂಕ್ತವೆನಿಸುತ್ತಿಲ್ಲ

ಈ ವರೆಗೆ ಚರ್ಚಿಸಿದ ವಾದಗಳನ್ನೆಲ್ಲ ಮಥಿಸಿ, ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಕೆಳಗಿನ ಕಾರಣಗಳ ಮೂಲಕ, ಪಂಚತಂತ್ರವು ಕ್ರಿ. ಶ. ಪೂ. ೧-೨ ನೆಯ ಶ. ಮಾನಗಳಲ್ಲಿ ರಚಿತವಾಯಿತೆಂದು ಅನಿವಾರ್ಯವಾಗಿ ನಿರ್ಣಯಿಸಬೇಕಾಗುತ್ತಿದೆ

೧ ಸಂಪ್ರತಿಗಳಲ್ಲಿ ಕಾಣುವ ಪಾಠಭೇದಗಳಿಂದಲೇ ಕೃತಿಯ ಕಾಲನಿರ್ಣಯ ಮಾಡುವುದು ಸಮಾಧಾನಕರವಲ್ಲ.

೨-೩ ಬೌದ್ಧಜಾತಕ, ಮಹಾಭಾರತಗಳ ರಚನೆ ಮತ್ತು ಪಂಚತಂತ್ರದ ರಚನೆಯ ಕಾಲಾವಧಿ ೬೦೦-೭೦೦ ವರುಷಗಳಷ್ಟು ಸುದೀರ್ಘವಾಗಿಲ್ಲ ಹೆಚ್ಚೆಂದರೆ ೧೦೦-೧೫೦ ವರುಷಗಳ ಅಂತರ ಮಾತ್ರ

೪. ಚಾಣಕ್ಯನ ಅರ್ಥಶಾಸ್ತ್ರವು ಪಂಚತಂತ್ರಕ್ಕಿಂತ ಸ್ವಲ್ಪ ಮೊದಲಿನದು; ಇವೆರಡು ಕೃತಿಗಳಲ್ಲಿಯ ಅಂತರ ಹೆಚ್ಚೆಂದರೆ ೧೦೦ ವರುಷಗಳ ಅವಧಿ

೫ ಸಂಸ್ಕೃತವು ಜನತೆ ಮಾತನಾಡುವ ಭಾಷೆಯಾಗಿ ಬಳಕೆಯಲ್ಲಿದ್ದುದು ಕ್ರಿ. ಶ ಕ್ಕಿಂತ ಮೊದಲು; ಕ್ರಿ ಶ. ಪ್ರಾರಂಭದ ನಂತರವಲ್ಲ.

೬ ಇರಾಣ, ಪರ್ಶಿಯಗಳವರೆಗೆ ಪಂಚತಂತ್ರದ ಕೀರ್ತಿ ಹಬ್ಬಿ, ಭಾರತೀಯ ಕೃತಿಯನ್ನು 'ಪೆಹಲ್ವಿ'ಗೆ ಭಾಷಾಂತರಿಸುವ ಆವಶ್ಯಕತೆ ಕಂಡುದು ಪರದೇಶಗಳ ದಾಳಿಗಳ ರಾಜಕೀಯ ವಿಪ್ಲವ ಒಂದು ನೆಲೆಗೆ ನಿಂತಕಾಲ ಆದುದರಿಂದ ಪಂಚತಂತ್ರ ರಚನೆಗೂ, ಪೆಹಲ್ವಿ ಭಾಷಾಂತರಕ್ಕೂ ೫೦೦-೬೦೦ ನೂರು ವರುಷಗಳ ಅಂತರವಿರುವುದು ಅಸಂಭವವಲ್ಲ

೭ ಗ್ರೀಕ್ ನಾಣ್ಯ 'ದೀನಾರ' 'ದಮ್ಮ'ಗಳು ಕ್ರಿ ಶ ಪೂ. ೧ ನೆಯ ಶ. ಮಾನದಲ್ಲಿಯೇ ಭಾರತಕ್ಕೆ ಪರಿಚಿತ ತತ್ಕಾಲೀನ ನಾಣ್ಯದ ಹೆಸರನ್ನು ವಿಷ್ಣುಶರ್ಮನು ಬಳಸಿಕೊಂಡಿರುವುದು ಸಹಜ.

೮ ಭರ್ತೃಹರಿಯೇ ಪಂಚತಂತ್ರದ ನೀತಿಪರ ಶ್ಲೋಕಗಳಿಗೆ ಮಾರುಹೋಗಿ ಪದಭೇದಗಳಿಂದ ತನ್ನ ಸುಭಾಷಿತಗಳಲ್ಲಿ ಉಪಯೋಗಿಸಿಕೊಂಡಿರುವನೆಂಬುದೇ ಹೆಚ್ಚು ಸಮಂಜಸ.

೯ ಪಂಚತಂತ್ರದ ಶೈಲಿ, ಬಳಸಿರುವ ಭಾಷೆ ಕೃತಿಯ ಪ್ರಾಚೀನತೆಯನ್ನೇ ಎತ್ತಿ ತೋರುವವು

ಆದುದರಿಂದ ಪಂಚತಂತ್ರಕಾರ ವಿಷ್ಣುಶರ್ಮನ ಕಾಲ ಕ್ರಿ ಶ ಪೂ ೧-೨ ನೆಯ ಶ. ಮಾ ಗಳಲ್ಲಿಯೇ ವಿನಾ ಕ್ರಿ ಶ ಪ್ರಾರಂಭದ ನಂತರವಲ್ಲ.

ಶ್ರೀವಿಕ್ರಮ ಸಂವತ್ ೨೦೨೪ರ ಭವಿಷ್ಯ. ಅಂದರೆ ಶ್ರೀಶಕೆ ೧೮೮೯ ಕಾರ್ತಿಕ ಶುದ್ಧ ಪ್ರತಿಪದೆ ಶುಕ್ರವಾರದಿಂದ ೧೮೯೦ ಆಶ್ವಿನ ಬಹುಳ ಅಮಾವಾಸ್ಯೆ ಸೋಮವಾರದ ವರೆಗಿನ, ಅರ್ಥಾತ್ ೧೯೬೭ ನೆಯ ನವೆಂಬರ್ ೩ ರಿಂದ ೧೯೬೮ ನೆಯ ಅಕ್ಟೋಬರ್ ೨೧ ರ ವರೆಗಿನ ಒಂದು ವರ್ಷದ ಭವಿಷ್ಯ.

(ಈ ದೀಪಾವಳಿಯಿಂದ ಮುಂದಿನ ದೀಪಾವಳಿಯ ವರೆಗೆ)

ಸೂಚನೆ: ಈ ವರ್ಷಭವಿಷ್ಯವು ಸ್ಥೂಲವಾದದ್ದು. ಅವರವರ ಜನ್ಮಕುಂಡಲಿಯ ಮೇಲಿಂದ ಭವಿಷ್ಯ ಹೇಳಿದರೆ ಮಾತ್ರ ಅದು ಪೂರ್ಣ ಸತ್ಯವಾಗಿ ಪರಿಣಮಿಸ ಬಲ್ಲದು. ಆದರೂ ಈ ಭವಿಷ್ಯದಿಂದ ಆಯಾ ರಾಶಿಯವರಿಗೆ ಆಗಬಹುದಾದ ದುಷ್ಟ ಸುಷ್ಟ ಪರಿಣಾಮಗಳ ಕಲ್ಪನೆ ಮಾತ್ರ ನಿಶ್ಚಿತ ಬರಬಹುದು. ಜನ್ಮ ರಾಶಿಯಂತೆಯೇ ಜನ್ಮಲಗ್ನದಿಂದಲೂ ಭವಿಷ್ಯ ಹೇಳಿದರೆ ಅದು ಹೆಚ್ಚು ನಿಜವಾಗಿ ಪರಿಣಮಿಸಿದ್ದು ಕಂಡು ಬರುವದು. ಅದರಂತೆಯೆ, ಸ್ತ್ರೀಯರ ಭವಿಷ್ಯವನ್ನು ಅವರ ನೈಸರ್ಗಿಕ ದೇಹ ಭೇದಾನುಸಾರ ಫಲ ತಾರತಮ್ಯವನ್ನು ಗಮನದಲ್ಲಿಟ್ಟುಕೊಂಡು ನೋಡಬೇಕಾಗುವದು.

ವರ್ಷ ಭವಿಷ್ಯ

ಮೇಷ

ಈ ವರ್ಷವು ಈ ರಾಶಿಯವರಿಗೆ ಒಟ್ಟಿನಲ್ಲಿ ದ್ರವ್ಯಲಾಭಕ್ಕೆ ಸಾಮಾನ್ಯವೆನಿಸಿದರೂ ಭಾವೀಸುಖಕ್ಕೆ, ಉತ್ಕರ್ಷಕ್ಕೆ ವಿಶೇಷ ಪೋಷಕವಾಗುವಂತಹ ಘಟನೆಗಳು ಜರಗುವುದಕ್ಕೆ ಅನುಕೂಲವಾಗಿರುವುದರಲ್ಲಿ ಸಂದೇಹವೆಷ್ಟೂ ಇಲ್ಲ.

ಈ ರಾಶಿಗೆ ಕಳೆದ ವರ್ಷದಂತೆಯೆ ಈ ವರುಷವೂ ಸಾಡೇಸಾತಿಯಿರುವುದರಿಂದ ಹಾಗೂ ಅದಕ್ಕೆ ಕಾರಕನಾದ ಶನಿಯು ೧೨ ನೆಯವನಾಗಿ ವ್ಯಯಸ್ಥಾನದಲ್ಲಿರುವುದರಿಂದ ಪ್ರತಿಯೊಂದು ಕೆಲಸದಲ್ಲೂ ಅಂದಾಜಿಗಿಂತ ಹೆಚ್ಚು ವೆಚ್ಚ ಮತ್ತು ವಿಲಂಬವಾಗುತ್ತಲೇ ಇರುವುದಲ್ಲದೆ ಕೊನೆಗೆ ಅದು ಮನಸ್ಸಿನಂತೆಯೆ ಕೈಗೂಡುವುದೆಂದೂ ಇಲ್ಲ. ಅದರಂತೆಯೆ ಮಕರ ಸಂಕ್ರಮಣ ವರೆಗೆ ದೇಹಸ್ಥಾನದಲ್ಲಿರುವ ರಾಹುವು ಅಲ್ಲಿಯ ವರೆಗೆ ಆರೋಗ್ಯಕ್ಕೆ ಉಷ್ಣವಾತದಿಂದ ತುಸು ಕ್ಲೇಶವನ್ನುಂಟುಮಾಡುತ್ತಲೇ ಇರುವನು. ಆದರೂ ಸುಮಾರು ವರ್ಷವಿಡಿ ಇದೇ ರಾಶಿಯಲ್ಲಿರುವ ೫ ನೆಯ ಗುರುವಿನ ಪೂರ್ಣ ದೃಷ್ಟಿ ಈ ರಾಶಿಯ ಮೇಲಿರುವುದರಿಂದ, ಹಾಗೂ ರಾಶಿಸ್ವಾಮಿ ಮಂಗಳ ವರ್ಷಾರಂಭದಲ್ಲಿ ಆರೋಗ್ಯಸ್ಥಾನವಾದ ನವಮದಲ್ಲಿದ್ದು ಗುರುವಿನಿಂದ ದೃಷ್ಟನಾಗಿರುವುದಲ್ಲದೇ ಮೃತ್ಯುಸ್ಥಾನವಾದ ಅಷ್ಟಮದ ಸ್ವಾಮಿಯೂ ಆಗಿರುವುದರಿಂದ ಹಾಸಿಗೆ ಹಿಡಿಯುವಷ್ಟು ತೀವ್ರವಾದ ಯಾವುದೇ ಅನಾರೋಗ್ಯದ ಭಯ ಮಾತ್ರ ಇಲ್ಲ.

ಭಾರ್ಯಾಸ್ಥಾನದಲ್ಲಿ ವಕ್ರೀ ಬುಧ ಮತ್ತು ವಕ್ರೀ ಪಾಪಗ್ರಹ ಕೇತು ಇರುವರಲ್ಲದೆ ಭಾರ್ಯೇಶ ಶುಕ್ರನು ತನ್ನ ನೀಚರಾಶಿಯಾದ ಕನ್ಯಾದಲ್ಲಿ ಹಾಗು ರೋಗಸ್ಥಾನವಾದ ಷಷ್ಠದಲ್ಲಿರುವುದರಿಂದ ಹೆಂಡತಿಯ ಆರೋಗ್ಯವು ಡಿಸೆಂಬರ್ ೧ ರ ವರೆಗೆ ತೀರ ಕೆಟ್ಟಿರುವುದಾದರೆ ಅನಂತರ ಜನೆವರಿ ೧೨ ರ ವರೆಗೆ ಸಾಧಾರಣ ಕೆಟ್ಟಿರುವುದು; ಆದರೆ ಅನಂತರ ಮಾತ್ರ ಚೆನ್ನಾಗಿ ಸುಧಾರಿಸುವುದು. ಜನೆವರಿ ೧೨ ರ ನಂತರ ಪರಸ್ಪರರಲ್ಲಿ ಹಿಂದಿನಕಿಂತಲೂ ಒಳ್ಳೆಯ ಸಾಮರಸ್ಯ ಕಂಡು ಬರುವುದು. ಬೇನೆ-ಬೇಸರಗಳಿಗಿಂತ ಅವಳಿಗೆ ಮಾಟ-ಮಂತ್ರ, ಭೂತಬಾಧೆ ಅಥವಾ ದೈವೀ ಪ್ರಕೋಪದ ಭಯವೇ ಹೆಚ್ಚಾಗಿರುವ ಸಂಭವವಿದೆ.

ಈ ರಾಶಿಯ ಅವಿವಾಹಿತರ ವಿವಾಹವಾಗುವುದಿದ್ದರೆ ವರ್ಷವಿಡಿ ಒಳ್ಳೆಯ ಬಾಸಿಂಗಬಲವಿರುವುದರಿಂದ ಅದು ಅಲ್ಪಾಯಾಸದಿಂದ ಆಗಬಹುದಾಗಿದೆ. ಅದರಲ್ಲೂ ಜನೆವರಿ ೨೧ ರಿಂದ ಫೆಬ್ರುವರಿ ೧೪, ಮಾರ್ಚ ೧೦ ರಿಂದ ಎಪ್ರಿಲ್ ೨, ಎಪ್ರಿಲ್ ೨೭ ರಿಂದ ಮೇ ೨ ಮತ್ತು ಜೂನ್ ೧೪ ರಿಂದ ಜುಲೈ ೯ರ ಅವಧಿಯಲ್ಲಿ ವಿಶೇಷ ಉತ್ತಮವಿದೆ. ವಧು ಇಲ್ಲವೆ ವರ ರೂಪದ ದೃಷ್ಟಿಯಿಂದ ಅಷ್ಟೊಂದು ಮನವೊಪ್ಪುವಂತಿರದಿದ್ದರೂ ಗುಣದ ದೃಷ್ಟಿಯಿಂದ ತೀರ ಉತ್ತಮವೆನಿಸುವಂತಿರುವರು. ಅದರಂತೆಯೆ, ಈ ರಾಶಿಯವರ ಮಗ ಅಥವಾ ಮಗಳ ಮದುವೆ ಮಾಡುವುದಿದ್ದರೆ ಅದನ್ನು ಹೊಂದಿಸಬೇಕಾದರೆ ಕಲ್ಪನೆಗೆ ಮೀರಿದಷ್ಟು ಪ್ರಯತ್ನಪಡಬೇಕಾಗುವದಾದರೂ ಕೊನೆಗೆ ಆಗುವುದು ಮಾತ್ರ ನಿಶ್ಚಿತ. ಅದರಲ್ಲಿಯೆ ಡಿಸೆಂಬರ್ ೧೬ ರಿಂದ ಜನೆವರಿ ೧೪, ಫೆಬ್ರುವರಿ ೧೩ ರಿಂದ ಮಾರ್ಚ ೧೩, ಎಪ್ರಿಲ್ ೧೩ ರಿಂದ ಮೇ ೧೪, ಜೂನ್ ೧೪ ರಿಂದ ಜುಲೈ ೧೬ ಹಾಗು ಅಗಸ್ಟ ೧೬ ರಿಂದ ಸಪ್ಟೆಂಬರ್ ೧೬ ರ ಅವಧಿಯಲ್ಲಿ ಕಡಿಮೆ ಶ್ರಮದಿಂದ ಸಾಧ್ಯವಾಗಬಹುದು. ಸೊಸೆ ಅಥವಾ ಅಳಿಯ ರೂಪಕ್ಕಿಂತ ಗುಣದಲ್ಲಿಯೆ ಹೆಚ್ಚು ಒಳ್ಳೆಯರಿರುವರು. ಈ ಸಲ ಗುರುವು ಸಂತತಿಸ್ಥಾನದಲ್ಲಿರುವುದರಿಂದ ಮಕ್ಕಳ ಉನ್ನತಿಗೆ ಈ ವರ್ಷ ಬಹಳ ಉತ್ತಮವಾಗಿದೆ. ಅವರಲ್ಲೊಬ್ಬನಿಗೆ ಅಂತಾರಾಷ್ಟ್ರೀಯ ಖ್ಯಾತಿಯೂ ದೊರೆಯಬಹುದಾಗಿದೆ. ಪುತ್ರಿಯರಿಗಿಂತ ಪುತ್ರರಿಂದಲೇ ಹೆಚ್ಚು ಸುಖ ಸಿಕ್ಕುವುದು.

ಉದ್ಯೋಗದಲ್ಲಿ ಈ ವರ್ಷವು ಹನ್ನೆರಡನೆಯ ಶನಿಯಿಂದಾಗಿ ಪ್ರತ್ಯಕ್ಷ ದ್ರವ್ಯಲಾಭಕ್ಕೆ ಅಷ್ಟೊಂದು ಅನುಕೂಲವಾಗಿಲ್ಲವಾದರೂ ಭಾಗ್ಯೇಶ ಗುರು ಪಂಚಮನು ಅರ್ಥಾತ್ ದೈವೀ ಕೃಪೆಯ ಛಾಯೆಯನ್ನಿಡುವ ಸ್ಥಾನದಲ್ಲಿರುವುದರಿಂದ ಅವನ ಪೂರ್ಣ ದೃಷ್ಟಿಯು ಪ್ರಥಮ, ನವಮ ಮತ್ತು ಏಕಾದಶ ಅಂದರೆ ಅನುಕ್ರಮವಾಗಿ ದೇಹ, ಭಾಗ್ಯ ಮತ್ತು ಲಾಭಸ್ಥಾನಗಳ ಮೇಲೆ ಬಿದ್ದು ಉತ್ತಮ ಮಾನಸಿಕ ಧೈರ್ಯ, ಉತ್ಸಾಹ ಹಾಗು ಆಶಾವಾದಿ ಮನೋವೃತ್ತಿ ಉಳಿಯುವವು. ಅಲ್ಲದೆ ಭಾವೀ ಭಾಗ್ಯೋದಯಕ್ಕೆ ಹಾಗು ಲಾಭಕ್ಕೆ ಅತ್ಯನುಕೂಲವಾದ ಘಟನೆಗಳು ಜರಗುವವು. ಹಳಬರಿಗಿಂತ ಹೊಸ ಮಿತ್ರರೇ ಹೆಚ್ಚು ಉಪಯುಕ್ತರೆನಿಸುವರು. ಉದ್ಯೋಗಸ್ಥರಿಗೆ ಫೆಬ್ರುವರಿ ೮ರ ವರೆಗೆ ಹಾಗು ನಂತರ ಮಾರ್ಚ ೧೯ ರಿಂದ ಜುಲೈ ೨೭ರ ವರೆಗಿನ ಕಾಲವು ಹೆಚ್ಚು ಉತ್ಸಾಹಕರವೂ ಕೀರ್ತಿ, ಪ್ರತಿಷ್ಠೆಗಳನ್ನು ಹೆಚ್ಚಿಸುವಂತಹದೂ ಆಗಿರುವುದು. ನೌಕರದಾರರಿಗೆ ಡಿಸೆಂಬರ್ ೩೧ ರಿಂದ ಫೆಬ್ರುವರಿ ೯ ಇಲ್ಲವೆ ಮಾರ್ಚ ೧೯ ರಿಂದ ಎಪ್ರಿಲ್

ಜ್ಯೋತಿಷಿ :
ಶ್ರೀ ಕೃಷ್ಣಶಾಸ್ತ್ರಿ ಭಿಡೆ
ಭವಿಷ್ಯಕಥನ ಕಾರ್ಯಾಲಯ
ಮತ್ತೀಕೊಪ್ಪ ಕಟ್ಟಡ
ಕಪಿಲೇಶ್ವರ ಬೀದಿ, ಬೆಳಗಾಂವಿ

೨೮ ರ ವರೆಗಿನ ಅವಧಿಯಲ್ಲಿ ನಿಶ್ಚಿತ ಬಡತಿಯ ಯೋಗವಿದೆಯಲ್ಲದೆ ಬದಲಿಯಾದರೆ ಅದು ವೆಚ್ಚದ ದೃಷ್ಟಿಯಿಂದ ತುಸು ಜಡವೆನಿಸಿದರೂ ಕೆಲಸದ ಮತ್ತು ನೀರು, ಹವೆಗಳ ದೃಷ್ಟಿಯಿಂದ ಬಹಳ ಉತ್ತಮ ಸ್ಥಳಕ್ಕೆಯೆ ಆಗುವುದು. ಕೈ ಕೆಳಗಿನವರಿಗಿಂತ ವರಿಷ್ಠರಿಂದಲೇ ಹೆಚ್ಚು ಸುಖ ದೊರೆಯುವುದು. ಈ ಸಲ ದ್ರವ್ಯ ಅಥವಾ ಉಚ್ಚ ವಸ್ತುಗಳ ಸಂಗ್ರಹ ಸಾಧ್ಯವಾಗದಿದ್ದರೂ ಹೊಸ ಸಾಲ ಮಾತ್ರ ಆಗುವುದಿಲ್ಲವಿಷ್ಟೇ ಅಲ್ಲ, ಹಳೆಯ ಸಾಲವಿದ್ದರೆ ಅದು ಬಹಳ ಮಟ್ಟಿಗೆ ತೀರುವುದು. ಫೆಬ್ರುವರಿ ೧೨ ರಿಂದ ಮಾರ್ಚ್ ೧೩ರ ಅವಧಿಯಲ್ಲಿ ಧಾರ್ಮಿಕ ಅಥವಾ ಮಂಗಲ ಕಾರ್ಯವೊಂದು ಇಲ್ಲವೆ ಒಂದು ಯಾತ್ರೆ ಜರುಗುವ ಸಂಭವವಿದೆ.

ದಾವೆ, ಖಟ್ಲೆ ಹಾಗು ಖಾಸಗಿ ಸ್ವರೂಪದ ಸ್ಪರ್ಧೆಗಳಲ್ಲಿ ತೀರ್ಪು ಜನೆವರಿ ೧೪ ರ ವರೆಗಾದರೆ ಪ್ರತಿಪಕ್ಷಿಗೆ ವಿಜಯ ದೊರೆಯುವುದಾದರೆ, ಅನಂತರವಾದರೆ ಕನಿಷ್ಠ ಮುಕ್ಕಾಲುಪಾಲು ಯಶ ಈ ರಾಶಿಯವರಿಗೆ ದೊರೆಯುವುದು.

ಈ ರಾಶಿಯ ಗರ್ಭಿಣಿಯರು ಜನೆವರಿ ೧೪ ರ ವರೆಗೆ ಪ್ರಸೂತರಾದರೆ ಪುತ್ರಜನನವಾಗುವುದಾದರೆ ಅನಂತರ ಅಕ್ಟೋಬರ್ ೧೦ ರ ವರೆಗಾದರೆ ಕನ್ಯೆ, ಹಾಗು ಅದರ ನಂತರವಾದರೆ ಪುತ್ರಜನನದ ಯೋಗ ವಿಶೇಷವಾಗಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಅಕ್ಟೋಬರ್ ೧೦ ರ ವರೆಗಾದರೆ ನೂರಕ್ಕೆ ೬೦ ಪಾಲು ಯಶಸ್ಸು ದೊರೆಯುವುದಾದರೆ ಡಿಸೆಂಬರ್ ೧೬ ರಿಂದ ಜನೆವರಿ ೧೪, ಫೆಬ್ರುವರಿ ೧೩ ರಿಂದ ಮಾರ್ಚ್.೧೩, ಎಪ್ರಿಲ್ ೧೩ ರಿಂದ ಮೇ ೧೪ ಮತ್ತು ಅಗಸ್ಟ್ ೧೬ ರಿಂದ ಸಪ್ಟೆಂಬರ್ ೧೬ ರ ವರೆಗಿನ ಅವಧಿಯಲ್ಲಾದರೆ ಕನಿಷ್ಠ ದ್ವಿತೀಯ ಶ್ರೇಣಿಯಾದರೂ ದೊರೆಯುವುದು ನಿಶ್ಚಿತ.

ವೃಷಭ

ಈ ವರ್ಷವು ಈ ರಾಶಿಯವರಿಗೆ ಒಟ್ಟಿನಲ್ಲಿ ಉದ್ಯೋಗದಲ್ಲಿ ಯಶಸ್ಸಿಗೆ ಮತ್ತು ಲಾಭಕ್ಕೆ ಎಷ್ಟು ಉತ್ತಮವಾಗಿದೆಯೋ ಪ್ರಾಪಂಚಿಕ, ಶಾರೀರಕ ಹಾಗು ಮಾನಸಿಕ ಸುಖಕ್ಕೆ ಅಷ್ಟೊಂದು ಅನುಕೂಲವಿಲ್ಲವೆಂದೇ ಹೇಳಬೇಕು.

ರಾಶಿಸ್ವಾಮಿ ಶುಕ್ರನು ವರ್ಷಾರಂಭದಲ್ಲಿಯೆ ಬೌದ್ಧಿಕಸ್ಥಾನವಾದ ಪಂಚಮದಲ್ಲಿರುವುದರಿಂದ ಆಗಾಗ ನಿಮ್ಮ ಬುದ್ಧಿಮತ್ತೆಯ ಪ್ರಶಂಸೆಯು ಸರ್ವತ್ರ ಕೇಳಿಬರಬಹುದಾದರೂ ಅವನು ಕನ್ಯೆಯಲ್ಲಿ ನೀಚನಾಗಿರುವುದರಿಂದ ಮನಸ್ಸಿನಲ್ಲಿ ಆಗೀಗ ತೀರ ಕೆಟ್ಟ ವಿಚಾರಗಳು ಸುಳಿಯಬಹುದಾಗಿದೆ. ನವೆಂಬರ್ ೧೩ರ ವರೆಗೆ ಎಂಟನೆಯವನೂ, ನಂತರ ಮಾರ್ಚ್ ೧೯ರಿಂದ ಎಪ್ರಿಲ್ ೨೮ರ ವರೆಗೆ ಹನ್ನೆರಡನೆಯವನೂ, ಸಪ್ಟೆಂಬರ್ ೧೫ರ ನಂತರ ನಾಲ್ಕನೆಯವನೂ ಆಗಿರುವ ಗೋಚರಿಯ ಮಂಗಳನು ಆರೋಗ್ಯಕ್ಕೆ ಉಷ್ಣಜನ್ಯ ವಿಕಾರಗಳಿಂದ ತುಸು ಕಷ್ಟವೀಯುವನಾದರೂ ಅಷ್ಟಮೇಶನಾಗಿರುವ ಅರ್ಥಾತ್ ಮೃತ್ಯುಸ್ಥಾನದಲ್ಲಿರುವ ಗುರುವಿನ ಪೂರ್ಣ ದೃಷ್ಟಿ ಈ ಸ್ಥಾನದ ಮೇಲಿರುವುದರಿಂದ ಗಂಡಾಂತರದ ಭಯ ಮಾತ್ರ ಇರುವುದಿಲ್ಲ. ಅಲ್ಲದೆ ವರ್ಷಾರಂಭದಲ್ಲಿಯೆ ಮಂಗಳ ಹತ್ತು ಸಾವಿರ ಮತ್ತು ಗುರುವಿನ ಹತ್ತೊಂಭತ್ತು ಸಾವಿರ ಜಪ ಮಾಡಿಟ್ಟರೆ ಅನಾರೋಗ್ಯವುಂಟಾಗುವ ಭಯವೂ ಇಲ್ಲ. ಇತರ ಅವಶ್ಯಕ ವಿಷಯಗಳಲ್ಲಿ ದೇಹಸುಖಕ್ಕೆ ಈ ವರ್ಷವು ಸಾಧಾರಣ ಚೆನ್ನಾಗಿಯೇ ಇರುವುದಾದರೂ ಅಕ್ಟೋಬರ್ ೧೦ರ ವರೆಗಿರುವ ನಾಲ್ಕನೆಯ ಗುರು ಪ್ರಾಪಂಚಿಕಸುಖಕ್ಕೆ ಹಾಗು ಪರಸ್ಪರರಲ್ಲಿಯ ಸಹಮತಕ್ಕೆ ಅಷ್ಟೊಂದು ಅನುಕೂಲನಾಗಿಲ್ಲ. ಮನೆಯಲ್ಲಿಯ ಬಹುತರ ಎಲ್ಲರೂ ವಿರುದ್ಧವೇ ವರ್ತಿಸುವರು.

ಸ್ತ್ರೀಸುಖದಲ್ಲಿ ಈ ವರ್ಷ ಅನೇಕ ಬಾರಿ ಅನಿರೀಕ್ಷಿತ ವ್ಯತ್ಯಯ ಬರಬಹುದಾಗಿದೆ; ಅರ್ಥಾತ್ ಪತಿ-ಪತ್ನಿಯರ ಸ್ಥಳಾಂತರದಿಂದಾಗಿ ಸಹವಾಸದಲ್ಲಿ ವ್ಯತ್ಯಯವುಂಟಾಗಬಹುದು. ಅಲ್ಲದೆ ಹೆಂಡತಿಯ ಬಗೆಗೆ ಆಸ್ಥೆ, ಆದರಗಳೂ ಮೊದಲಿನಂತೆ ಉಳಿಯಲಿಕ್ಕಿಲ್ಲ. ಅವಳಿಗಿಂತಲೂ ಉಳಿದವರ ನೀತಿ ನಡಾವಳಿ ಮತ್ತು ಮಾತುಕತೆಗಳ ಮೇಲೆಯೆ ಹೆಚ್ಚು ನಂಬಿಕೆಯುಂಟಾಗಬಹುದು.

ಈ ರಾಶಿಯ ಅವಿವಾಹಿತರ ವಿವಾಹವಾಗುವುದಿದ್ದರೆ ಅದಕ್ಕೆ ವರ್ಷವಿಡಿ ಬಾಸಿಂಗಬಲವಿಲ್ಲವೆಂದರೂ ಸಲ್ಲುವುದು. ಇದ್ದುದರಲ್ಲಿಯೆ ಬಹಳ ಪ್ರಯತ್ನಪಟ್ಟರೆ ನವೆಂಬರ್ ೨೩ ರಿಂದ ಡಿಸೆಂಬರ್ ೨೧, ಫೆಬ್ರುವರಿ ೮ ರಿಂದ ಮಾರ್ಚ್ ೧೯ ಹಾಗೂ ಎಪ್ರಿಲ್ ೨೮ ರಿಂದ ನವೆಂಬರ್ ೨೩ರ ಅವಧಿಯಲ್ಲಿ ಕೆಲಮಟ್ಟಿಗೆ ಕಾರ್ಯಸಿದ್ಧಿಗೆ ಪೂರಕ ಯೋಗವಿದೆ. ವಧು ಅಥವಾ ವರ ರೂಪದಿಂದ ಎಷ್ಟೊಂದು ಉತ್ತಮವಿರುವರೊ ಗುಣದಿಂದ ಅಷ್ಟೊಂದು ಇರಲಿಕ್ಕಿಲ್ಲ. ಅದರಂತೆಯೆ, ಈ ರಾಶಿಯವರ ಮಗ ಅಥವಾ ಮಗಳ ವಿವಾಹ ಮಾಡುವುದಿದ್ದರೆ ಅವರಿಗೂ ಬಾಸಿಂಗಬಲವಿಲ್ಲವೆಂದೇ ಹೇಳಬೇಕು. ಯಾಕೆಂದರೆ, ಹಲವರ ವಿವಾಹ ನಿಶ್ಚಿತವಾದಾಗ ಸಹ ಕೊನೆಯ ಗಳಿಗೆಯಲ್ಲಿ ಅನಿರೀಕ್ಷಿತ ಅಡೆತಡೆಗಳು ಪ್ರಾಪ್ತವಾಗಿ ವಿವಾಹ ಮುರುಗಡೆಯಾಗಿಬಿಡಬಹುದಾಗಿದೆ. ಆದರೂ ಇದ್ದುದರಲ್ಲಿಯೆ ಡಿಸೆಂಬರ್ ೧ ರಿಂದ ೧೦, ಜನೆವರಿ ೨೩ ರಿಂದ ಫೆಬ್ರುವರಿ ೧೧ ಹಾಗು ಅಕ್ಟೋಬರ್ ೧೦ರ ನಂತರದ ಕಾಲ ಅನುಕೂಲವಾಗಿದೆ. ಆಳಿಯ ಇಲ್ಲವೆ ಸೊಸೆ ಜನ್ಮತಃ ಜಾಣರೆನಿಸಿದ್ದರೂ ಶಿಕ್ಷಣದಲ್ಲಿ ಅಷ್ಟಕಷ್ಟೆ ಇರಬಹುದಾಗಿದೆ. ಮಕ್ಕಳ ವರ್ತನೆ ಸುಖಕ್ಕೆ ಬದಲು ಕಷ್ಟ ಅಥವಾ ಖೇದದಾಯಕವೇ ಇರಬಹುದು. ಅದರಂತೆಯೆ ಯಾರ ಉತ್ಕರ್ಷ ನಿಶ್ಚಿತವೆನಿಸುತ್ತಿರುವುದೊ ಅವರ ಬದಲು ಯೋಗ್ಯ ವರ್ತನೆಯಿಲ್ಲದವರ ಉತ್ಕರ್ಷವೇ ಆಗುವುದು ಕಂಡು ಬರುವುದು. ಒಟ್ಟಿನಲ್ಲಿ ಎಲ್ಲ ವಿಷಯಗಳಲ್ಲಿ ಅಂದಾಜು ತಿರುವು-ಮುರುವಾದ ಅನುಭವ ಬರದಿರದು.

ಉದ್ಯೋಗದಲ್ಲಿ ಈ ವರ್ಷ ಭಾಗ್ಯ ಮತ್ತು ಕರ್ಮಾಧಿಪತಿ ಶನಿಯು ಹನ್ನೊಂದನೆಯವನಾಗಿ ಲಾಭಸ್ಥಾನದಲ್ಲಿರುವುದಲ್ಲದೆ, ಅವನ ಜೊತೆಗೆ ಜನೆವರಿ ೧೨ ರಿಂದ ರಾಹುವೂ ಕೂಡಿಕೊಳ್ಳುವುದರಿಂದ ಕಲ್ಪನಾತೀತ ಪ್ರಗತಿ, ಪತ್ತು-ಪ್ರತಿಷ್ಠೆಗಳಲ್ಲಿ ಭಾರಿ ಹೆಚ್ಚಳ ಹಾಗು ವಿಪುಲ ದ್ರವ್ಯ ಲಾಭ ಉಂಟಾಗುವುದು. ಅದರಂತೆಯೆ, ಅಷ್ಟಮೇಶ ಗುರುವು ನಾಲ್ಕನೆಯವನಾಗಿರುವುದರಿಂದ ಮತ್ತು ಅವನ ಪೂರ್ಣ ದೃಷ್ಟಿ ಅಷ್ಟಮದ ಮೇಲಿರುವುದರಿಂದ ಗುಪ್ತ ಅಥವಾ ಅನಿರೀಕ್ಷಿತ ಲಾಭದ ಯೋಗವೂ ವಿಶೇಷವಾಗಿದೆ. ಆದರೂ ನಾಲ್ಕನೆಯ ಗುರು ಹಾಗು ವರ್ಷಾರಂಭದಲ್ಲಿಯೆ ಧನೇಶ ಬುಧ ಮತ್ತು ಸುಖೇಶ ರವಿ ಆರನೆಯವನಾಗಿರುವುದರಿಂದ ವ್ಯರ್ಥ ವೆಚ್ಚ ಕೂಡ ವಿಪರೀತವಾಗುವುದು. ಅಣ್ಣತಮ್ಮಂದಿಕೆಯ ಬಾಧೆಯೂ ವಿಶೇಷ ತಟ್ಟುವುದಲ್ಲದೆ ಮನೆಯ ಜನರು ಹಾಗು ನಿಕಟವರ್ತಿ ಆಪ್ತರು ಸಹ ಉದ್ದೇಶಪೂರ್ವಕ ತೊಂದರೆ ಕೊಡುವುದಲ್ಲದೆ ಮೋಸವನ್ನೂ ಮಾಡುವರು. ಮಿತ್ರರಲ್ಲೂ ಕೆಲವರು ಕೈ ತೋರಿಸುವರು. ಅಲ್ಲದೆ ನಿಸರ್ಗಕೋಪದಿಂದಾಗಿ ಉತ್ಪನ್ನದಲ್ಲಿಯೂ ಪೂರ್ಣ ಹಾನಿ ತಟ್ಟುವ ಸಂಭವ. ನೌಕರದಾರರಿಗೆ ಸಹ ಹಣ ಬೇಕಾದಷ್ಟು ದೊರೆಯುವುದಾದರೂ ವಿವಿಧ ರೀತಿಯಲ್ಲಿ ಎದುರಾಗುವ ವೆಚ್ಚದೆದುರು ತಲೆ ತಗ್ಗಿಸಬೇಕಾಗುವುದು. ಕೈ ಕೆಳಗಿನವರು ಅನೇಕ ಸಲ ಭಯದ ವಾತಾವರಣ ನಿರ್ಮಿಸಿ ಮೋಸಗೊಳಿಸುವರು. ವಾಹನಗಳಿದ್ದರೆ ಅವುಗಳಿಂದ ಸುಖಕ್ಕಿಂತ ಕಷ್ಟವೇ ಹೆಚ್ಚುವುದು. ಕೆಲವು ವಸ್ತುಗಳು ಕಳವಾಗಿ ಹೋದರೆ ಇನ್ನು ಕೆಲವನ್ನು ಬೇಡಿ ಒಯ್ದಿದ್ದವರು ಮರಳಿ ಕೊಡುವುದಿಲ್ಲ. ಆದರೂ ಇದ್ದುದರಲ್ಲಿಯೆ ಜನೆವರಿ ೨೬ ರಿಂದ ಫೆಬ್ರುವರಿ ೧೧, ಮಾರ್ಚ್ ೧೧ ರಿಂದ ಎಪ್ರಿಲ್ ೧, ಮೇ ೩ ರಿಂದ ಜೂನ್ ೧೧, ಜುಲೈ ೪ ರಿಂದ ೧೬, ಅಗಸ್ಟ್ ೨೯ ರಿಂದ ಸಪ್ಟೆಂಬರ್ ೨೦ ಹಾಗು ಅಕ್ಟೋಬರ್ ೫ರ ಮುಂದಿನ ಕಾಲ ಈ ಅವಧಿಯು ಸಾಕಷ್ಟು ಮನಃಸ್ವಾಸ್ಥ್ಯಕ್ಕೆ ಅನುಕೂಲವೇ ಆಗಿದೆ. ವಿಪುಲ ದ್ರವ್ಯಲಾಭವಾದರೂ ತುಸುವೂ ಸಂಗ್ರಹ ಸಾಧ್ಯವಾಗುವುದಿಲ್ಲ. ಮನಸ್ಸು ಆಧ್ಯಾತ್ಮದತ್ತ ವಿಶೇಷ ವಾಲುವುದು. ಸ್ವಪ್ನಗಳು ಶುಭ ಹಾಗು ಭವಿಷ್ಯತ್ಸೂಚಕವಾಗಿರುವವು. ದೇವ-ಧರ್ಮನಿಷ್ಠೆ ವಿಶೇಷವಾಗಿರುವಾಗಲೂ ಐದನೆಯ ಕೇತುವಿನಿಂದಾಗಿ ಪ್ರತ್ಯಕ್ಷ ಪೂಜಾದಿ ಕರ್ಮಾಚರಣದಲ್ಲಿ ಆಸಕ್ತಿ ಕಡಿಮೆ. ಮಿತ್ರಸುಖ ಚೆನ್ನಾಗಿ ದೊರೆಯುವುದಿಲ್ಲ ಮಾತ್ರವಲ್ಲ, ಕ್ಷುಲ್ಲಕ ಕಾರಣಗಳಿಂದಾಗಿಯೆ ಅನೇಕರೊಂದಿಗೆ ಕೆಡಬಹುದಾಗಿದೆ. ನೌಕರದಾರರಿಗೆ ಬಡತಿ ಸಿಗುವುದಾದರೂ ಸಂಬಳದಲ್ಲಿ ಹೆಚ್ಚಳದ ಬಗೆಗೆ ಹೊಸ ಪ್ರಶ್ನೆಗಳು ಹುಟ್ಟಿಕೊಳ್ಳುವುದರಿಂದಾಗಿ ಅದು ನಾಲ್ಕಾರು ತಿಂಗಳು ಮುಂದೆ ಬೀಳಬಹುದಾಗಿದೆ. ಅದರಂತೆಯೆ, ಬದಲಿಯಾದರೆ ಅದು ಮೊದ

ಲೊಂದು ಊರಿಗಾಗಿ ಕೊನೆಯ ಗಳಿಗೆಯಲ್ಲಿ ಬದಲಿಸಲ್ಪಡುವುದು.

ದಾವೆ, ಖಟ್ಲೆ ಹಾಗು ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ತೀರ್ಪು ಜನೆವರಿ ೧೨ರ ಮೊದಲು ಹಾಗು ಫೆಬ್ರುವರಿ ೮ ರಿಂದ ಎಪ್ರಿಲ್ ೨೮ ಮತ್ತು ಜುಲೈ ೨೮ ರಿಂದ ಸಪ್ಟೆಂಬರ್ ೧೨ರ ವರೆಗಿನ ಅವಧಿಯಲ್ಲಿ ದೊರೆತರೆ ಯಶಸ್ಸು ದೊರೆಯುವುದು. ಅರ್ಥಾತ್ ಇನ್ನುಳಿದ ಸಮಯದಲ್ಲಾದರೆ ಪ್ರತಿಪಕ್ಷಿಗೆ ಅನುಕೂಲವೆಂಬುದು ಸ್ಪಷ್ಟವೆ ಇದೆ.

ಈ ರಾಶಿಯ ಗರ್ಭಿಣಿಯರು ಜನೆವರಿ ೧೨ರ ಮೊದಲು ಪ್ರಸೂತರಾದರೆ ಹೆರಿಗೆ ಕಷ್ಟರಹಿತವಾಗುವುದಲ್ಲದೆ ಪುತ್ರಪ್ರಾಪ್ತಿಯ ಯೋಗವೂ ಇದೆ; ಮುಂದೆ ಅಕ್ಟೋಬರ್ ೧೦ರ ವರೆಗಾದರೆ ಪ್ರಸೂತಿ ತುಸು ಕಷ್ಟಕರವೆನಿಸಿದರೂ ಬಹುತರರಿಗೆ ಪುತ್ರಲಾಭವೇ ಆಗಬಹುದು. ಆದರೆ ಅದರ ನಂತರವಾದರೆ ಪ್ರಸೂತಿ ಸುಲಭವಾದರೂ ಕನ್ಯಾಪ್ರಾಪ್ತಿಯ ಸಂಭವವೇ ವಿಶೇಷ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ್ ೧ ರಿಂದ ೨೦, ಜನೆವರಿ ೭ ರಿಂದ ೨೬, ಫೆಬ್ರುವರಿ ೧೧ ರಿಂದ ಮಾರ್ಚ್ ೧೧, ಎಪ್ರಿಲ್ ೧ ರಿಂದ ೧೭, ಮೇ ೩ ರಿಂದ ೨೩, ಜುಲೈ ೪ ರಿಂದ ೨೬, ಅಗಸ್ಟ ೨೯ ರಿಂದ ಸಪ್ಟೆಂಬರ್ ೨೦ ಹಾಗು ಅಕ್ಟೋಬರ್ ೧೦ ರ ನಂತರ. ಈ ಅವಧಿಯಲ್ಲಾದರೆ ಕನಿಷ್ಠ ಗುಣಗಳಾದರೂ ದೊರೆತು ಉತ್ತೀರ್ಣರಾಗುವುದು ನಿಶ್ಚಿತವೆನಿಸುತ್ತದೆ.

ಮಿಥುನ

ಈ ವರ್ಷವು ಈ ರಾಶಿಯವರಿಗೆ ಒಟ್ಟಿನಲ್ಲಿ ಪ್ರಾಪಂಚಿಕ ಸುಖಕ್ಕಿಂತ ದ್ರವ್ಯಲಾಭ ಮತ್ತು ಬೌದ್ಧಿಕ ಕೆಲಸಗಳಲ್ಲಿ ಯಶಸ್ಸಿಗೆ ಹೆಚ್ಚು ಉತ್ತಮವೆಂದು ತಿಳಿಯಬೇಕು.

ವರ್ಷಾರಂಭದಲ್ಲಿಯೆ ರಾಶಿಸ್ವಾಮಿ ಬುಧನು ಪ್ರಥಮ ತ್ರಿಕೋಣಾತ್ಮಕ ಶುಭಸ್ಥಾನವಾದ ಪಂಚಮದಲ್ಲಿ ಹಾಗು ಮಿತ್ರರಾಶಿಯಾದ ತುಲಾದಲ್ಲಿದ್ದರೂ ವಕ್ರನಾಗಿರುವುದರಿಂದ ಮತ್ತು ಮೃತ್ಯುಸ್ವಾಮಿ ಶನಿಯು ಬಲಿಷ್ಠಸ್ಥಾನವಾದ ದಶಮದಲ್ಲಿ ಮಿತ್ರರಾಶಿಯಾದ ಮೀನದಲ್ಲಿದ್ದರೂ ವಕ್ರನಾಗಿರುವುದರಿಂದ ಆರೋಗ್ಯ ಉತ್ತಮವಾಗಿರುವುದಾದರೂ ಅನೇಕ ವಿಷಯಗಳಲ್ಲಿ ವಿಪರೀತ ಮಾನಸಿಕ ಕಷ್ಟವಾಗುವುದು. ಚಿಕ್ಕ ದೊಡ್ಡ ಕೆಲಸಗಳೆಲ್ಲವುಗಳಲ್ಲೂ ಹೆಂಡತಿ, ಮಕ್ಕಳು ಮತ್ತು ಸೋದರರಿಂದ ವಿರೋಧ, ಮತಭೇದವುಂಟಾಗುವುದರಿಂದ ಮನಸ್ಸುಬೇಸರಗೊಳ್ಳುವುದು. ವಿಶೇಷತಃ ಡಿಸೆಂಬರ್ ೧ ರಿಂದ ೧೦, ಜನೆವರಿ ೭ ರಿಂದ ೨೩, ಫೆಬ್ರುವರಿ ೧೧ ರಿಂದ ಮಾರ್ಚ್ ೧೧, ಮೇ ೩ ರಿಂದ ೨೩ ಮತ್ತು ಜೂನ್ ೧೧ ರಿಂದ ಜುಲೈ ೪ರ ವರೆಗಿನ ಅವಧಿಯಲ್ಲಿ ತೊಂದರೆ ಹೆಚ್ಚು. ಜನೆವರಿ ೧೨ ರಿಂದ ಬರುವ ನಾಲ್ಕನೆಯ ಕೇತುವಿನಿಂದಾಗಿ ಸ್ಥಿರಾಸ್ತಿಯ ವಿಷಯದಲ್ಲಿ ಸೋದರರಿಂದ ಹೊಸ ಕಿರುಕಳಗಳು ಹುಟ್ಟಿಕೊಳ್ಳುವವಲ್ಲದೆ ಆಪ್ತರು ಹೆಸರು ಕೆಡಿಸುವ ಪ್ರಯತ್ನ ಮಾಡುವರು ಹಾಗು ಸೇವಕರು ಮತ್ತು ಆಶ್ರಿತರ ವರ್ತನೆಯೂ ತೊಂದರೆದಾಯಕವೆ.

ಭಾರ್ಯಾಸ್ಥಾನದಲ್ಲಿರುವ ಮಂಗಳನಿಂದಾಗಿ ಹೆಂಡತಿಯಿಂದ ಮನ ನೋಯುವಂತಹ ಮತ್ತು ಅಪಮಾನಕರ ಮಾತುಗಳನ್ನು ಕೇಳಬೇಕಾಗಬಹುದು; ಆದರೆ ಈ ಸ್ಥಾನವು ಸ್ವಸ್ವಾಮಿ ಗುರುವಿನಿಂದ ದೃಷ್ಟವಾಗಿರುವುದರಿಂದ ಅವಳ ಮಾತು ಕೆಲವು ಸಲ ಯೋಗ್ಯವೂ ಇರಬಹುದು. ಅವಳ ಆರೋಗ್ಯ ಒಟ್ಟಿನಲ್ಲಿ ಉತ್ತಮವಿರುವುದಲ್ಲದೆ ಒಳ್ಳೆಯ ಸಹವಾಸಸುಖವೂ ದೊರೆಯುವುದು. ಅದರಂತೆಯೆ, ಅವಳ ಹೆಸರಿನ ಮೇಲೆ ಮಾಡಿದ ವ್ಯವಹಾರಗಳಲ್ಲಿಯೆ ಹೆಚ್ಚಿನ ಲಾಭ, ಯಶಸ್ಸು ದೊರೆಯಬಹುದಾಗಿದೆ.

ಈ ರಾಶಿಯ ಅವಿವಾಹಿತರ ವಿವಾಹವಾಗುವುದಿದ್ದರೆ ಅದಕ್ಕೆ ಉತ್ತಮ ಬಾಸಿಂಗಬಲವಿದ್ದು ವಿವಾಹ ಅಲ್ಪಾಯಾಸದಿಂದಾಗುವುದು. ಸ್ವತಃಕ್ಕಿಂತ ವಧು ಅಥವಾ ವರ ಹೆಚ್ಚು ಉತ್ತಮರಿರುವರು ಮಾತ್ರವಲ್ಲ ಆಪ್ತರು ಇಲ್ಲವೆ ಪರಿಚಿತ ಮನೆತನದವರೇ ಇರಬಹುದಾಗಿದೆ. ಅದರಂತೆಯೆ, ಈ ರಾಶಿಯವರ ಮಗ ಅಥವಾ ಮಗಳ ವಿವಾಹ ಮಾಡುವುದಿದ್ದರೆ ಅದಕ್ಕೆ ಮಧ್ಯಮ ಬಾಸಿಂಗಬಲವಿದೆ. ಅಂತೆಯೆ, ಮೊದಲೇ ಅನೇಕ ಅಡೆತಡೆಗಳುಂಟಾಗುವದರಿಂದ ಮನೋಭಂಗವಾಗಬಹುದು ಅಥವಾ ವಿವಾಹ ಹೊಂದಿಸುವ ಮಾತುಕತೆಗಳಲ್ಲಿ ಸ್ವತಃದ ಆಕ್ಷೇಪಗಳನ್ನು ತೀರ ಹತ್ತಿಕ್ಕಿಕೊಂಡು ಒಪ್ಪಿಗೆಯೀಯಬೇಕಾಗಬಹುದಲ್ಲದೆ ಮುಂದೆ ಪ್ರತ್ಯಕ್ಷ ವಿವಾಹಕಾಲದಲ್ಲಿಯೂ ಅನೇಕ ಅಪ್ರಿಯ ಸಂಗತಿಗಳನ್ನು ಎದುರಿಸಬೇಕಾಗಬಹುದು. ಆದರೆ ಅಳಿಯ ಅಥವಾ ಸೊಸೆ ಪೂರ್ಣ ಮನ ಒಪ್ಪುವಂತಿರುವರು. ವರ ಅಥವಾ ವಧು ಶೋಧನೆಗೆ ಇದ್ದುದರಲ್ಲಿಯೆ ಡಿಸೆಂಬರ್ ೧ ರಿಂದ ೨೬, ಜನೆವರಿ ೨೧ ರಿಂದ ಫೆಬ್ರುವರಿ ೧೪, ಮಾರ್ಚ್ ೧೦ ರಿಂದ ಎಪ್ರಿಲ್ ೨, ಎಪ್ರಿಲ್ ೨೭ ರಿಂದ ಮೇ ೨೧ ಹಾಗು ಜೂನ್ ೧೪ ರಿಂದ ಜುಲೈ ೯ರ ವರೆಗಿನ ಅವಧಿಯು ಒಳ್ಳೆಯ ಅನುಕೂಲವಿದೆ.

ಉದ್ಯೋಗದಲ್ಲಿ ಲಾಭಕ್ಕೆ ಈ ವರ್ಷ ಬಹಳ ಉತ್ತಮವಾಗಿದೆ. ಯಾಕೆಂದರೆ ಅಕ್ಟೋಬರ್ ೧೦ ರ ವರೆಗೆ ಪರಾಕ್ರಮಸ್ಥಾನವಾದ ತೃತೀಯದಲ್ಲಿರುವ ಕರ್ಮೇಶ ಗುರುವಿನ ದೃಷ್ಟಿಯು ಪೂರ್ಣವಾಗಿ ಕ್ರಯವಿಕ್ರಯ ಮತ್ತು ಸ್ಪರ್ಧೆಯ ಸ್ಥಾನವಾದ ಸಪ್ತಮದಲ್ಲಿರುವ ಧನುರಾಶಿಯ ಮೇಲಿದೆ. ಅದರಂತೆಯೆ ಭಾಗ್ಯಸ್ಥಾನವಾದ ನವಮದಲ್ಲಿಯ ಕುಂಭ ಹಾಗು ಲಾಭಸ್ಥಾನವಾದ ಏಕಾದಶದಲ್ಲಿಯ ಮೇಷ ಈ ಮಿತ್ರರಾಶಿಗಳ ಮೇಲಿದೆ. ಆದರಿಂದ ವಿಪುಲ ದ್ರವ್ಯಲಾಭವಾಗಿ ವ್ಯವಸಾಯದಲ್ಲಿ ಪತ್ತು, ಪ್ರತಿಷ್ಠೆಗಳು ಅಬಾಧಿತವಾಗುಳಿಯುವುದಲ್ಲದೆ ಶೀಘ್ರ ಪ್ರಗತಿಯೂ ಸಾಧ್ಯವಾಗುವುದು. ಕರ್ಮಸ್ಥಾನವಾದ ದಶಮದಲ್ಲಿರುವ ಭಾಗ್ಯೇಶ ಶನಿಯಿಂದಾಗಿ ಉದ್ಯೋಗಸ್ಥರಿಗೆ ದೊಡ್ಡ ಜನರಿಗಿಂತ ಮಧ್ಯಮ ಸ್ಥಿತಿಯಲ್ಲಿರುವವರಿಂದಲೇ ಹೆಚ್ಚು ಸಹಾಯ ಮತ್ತು ಲಾಭವಾಗುವುದು. ಆದರೆ ಜನೆವರಿ ೧೨ ರಿಂದ ಬರಲಿರುವ ೧೦ ನೆಯ ರಾಹುವಿನಿಂದಾಗಿ ಸರಕಾರದಿಂದ ಮೇಲಿಂದ ಮೇಲೆ ತೊಂದರೆಯಾಗಬಹುದು. ಅದರಂತೆಯೆ, ಸರಕಾರಿ ಕೆಲಸಗಳಲ್ಲಿ ಬಹಳ ಅಗ್ರಾಹ್ಯ ವೆಚ್ಚ ಮಾಡಬೇಕಾಗಬಹುದು. ನೌಕರದಾರರಿಗೆ ವರಿಷ್ಠರಿಂದ ತುಂಬ ತೊಂದರೆ ಹಾಗು ಉಪದ್ರವವುಂಟಾಗಬಹುದು. ಬದಲಿಯಾದರೆ ಅದು ತೀರ ಪ್ರತಿಕೂಲ ಸ್ಥಳಕ್ಕಾಗಬಹುದಲ್ಲದೆ ಅಲ್ಲಿಯ ವರಿಷ್ಠರು ಮತ್ತು ಇತರರೊಂದಿಗೆ ಆಷ್ಟಾಗಿ ಕೂಡಿ ನಡೆಯಲಾರದು. ಜನೆವರಿ ೧೨ ರ ಮೊದಲು ಬಡತಿಯಾಗುವ ಸಂಭವವಿದೆ. ಆದರೆ ಅದು ತಾತ್ಪೂರ್ತಿಕವೋ ಕಾಯಮವೋ ಎಂಬುದು ಮಾತ್ರ ಅನೇಕ ತಿಂಗಳು ಅನಿರ್ಣೀತವಾಗಿಯೇ ಉಳಿಯಬಹುದು. ಕೈಕೆಳಗಿನವರ ವರ್ತನೆ ಚೆನ್ನಾಗಿರುವುದು. ಮಿತ್ರಸುಖ ಉತ್ತಮ. ಉಚ್ಚ ವಸ್ತುಗಳ ಅಥವಾ ದ್ರವ್ಯದ ಸಂಗ್ರಹ ತುಸು ಆಗುವ ಯೋಗವಿದೆ. ಒಂದೆರಡು ಯಾತ್ರೆಗಳು ಸಾಧ್ಯವಾಗಬಹುದಲ್ಲದೆ ಇತರ ಕೆಲಸಗಳಿಗಾಗಿಯೂ ಎರಡು ಮೂರು ಸಲ ದೂರದ ಪ್ರವಾಸ ಕೈಕೊಳ್ಳಬೇಕಾಗಬಹುದು. ಸೋದರರಿಗೂ ಈ ವರ್ಷ ಉನ್ನತಿಕಾರಕವೆನಿಸಬಹುದಾಗಿದೆ. ಮಕ್ಕಳಲ್ಲಿ ಪುತ್ರರಿಗಿಂತ ಪುತ್ರಿಯರಿಗೆ ಇದು ಹೆಚ್ಚು ಅನುಕೂಲ ವರುಷ.

ದಾವೆ, ಖಟ್ಲೆ ಹಾಗು ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಹತ್ತರಲ್ಲಿ ಕನಿಷ್ಠ ಏಳೆಂಟಾದರೂ ನಿಮಗೆ ಅನುಕೂಲವಾಗಿ ಪರಿಣಮಿಸುವವು. ಇಂತಹ ಕೆಲಸಗಳಿಗೆ ನವೆಂಬರ್ ೨೩ ರ ವರೆಗೆ ಹಾಗು ಅನಂತರ ಜನೆವರಿ ೧ ರಿಂದ ಫೆಬ್ರುವರಿ ೮, ಮಾರ್ಚ್ ೧೯ ರಿಂದ ಎಪ್ರಿಲ್ ೨೮, ಜೂನ್ ೧೧ ರಿಂದ ಜುಲೈ ೨೮ ಮತ್ತು ಸಪ್ಟೆಂಬರ್ ೧೨ ರಿಂದ ಅಕ್ಟೋಬರ್ ೧೦ ರ ವರೆಗಿನ ಕಾಲ ಹೆಚ್ಚು ಯಶೋದಾಯಕವಾಗಿದೆ.

ಈ ರಾಶಿಯ ಗರ್ಭಿಣಿಯರು ಅಕ್ಟೋಬರ್ ೧೦ ರ ವರೆಗೆ ಪ್ರಸೂತರಾದರೆ ಬಹುತರರ ಹೆರಿಗೆ ಸುಲಭವಾಗುವುದಲ್ಲದೆ ಪುತ್ರಪ್ರಾಪ್ತಿಯೂ ಆಗುವುದು; ಮತ್ತು ಜನೆವರಿ ೧೨ರ ನಂತರ ಪ್ರಸೂತಿ ಕಷ್ಟಕರವೆನಿಸಿದರೂ ಪುತ್ರಪ್ರಾಪ್ತಿಯ ಯೋಗವಂತೂ ಇದ್ದೇಯಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ್ ೧ ರಿಂದ ೨೬, ಜನೆವರಿ ೨೧ ರಿಂದ ಫೆಬ್ರುವರಿ ೧೪, ಮಾರ್ಚ್ ೧೦ ರಿಂದ ಎಪ್ರಿಲ್ ೨, ಎಪ್ರಿಲ್ ೨೭ ರಿಂದ ಮೇ ೨೧, ಅಗಸ್ಟ್ ೨ ರಿಂದ ೨೭ ಹಾಗು ಸಪ್ಟೆಂಬರ್ ೧೦ ರಿಂದ ಅಕ್ಟೋಬರ್ ೨೫ ರ ವರೆಗಿನ ಅವಧಿಯಲ್ಲಾದರೆ ಉತ್ತೀರ್ಣರಾಗುವುದು ನಿಶ್ಚಿತ. ಅಲ್ಲದೆ ಮಾರ್ಚ್ ೧೦ ರಿಂದ ಎಪ್ರಿಲ್ ೨ ಹಾಗು ಎಪ್ರಿಲ್ ೨೭ ರಿಂದ ಮೇ ೨೧ ಈ ಅವಧಿಯಲ್ಲಾದರೆ ಒಳ್ಳೆಯ ಶ್ರೇಣಿಯನ್ನೂ ದೊರಕಿಸುವರು.

ಕರ್ಕ

ಈ ರಾಶಿಯುವರಿಗೆ ಈ ವರ್ಷವು ಕೆಲವೊಂದು ಚಿಕ್ಕಪುಟ್ಟ ವಿಷಯಗಳನ್ನುಳಿದು ಬಹುತರ ಎಲ್ಲದರಲ್ಲೂ ಉತ್ಕರ್ಷ ಕಾರಕವೂ ಒಳ್ಳೆಯ ಉತ್ಸಾಹಕಾರಕವೂ ಆಗಿರುವುದೆಂಬುದು ನಿಶ್ಚಿತ.

ಈ ಸಲ ನವಮ ಅಂದರೆ ಭಾಗ್ಯಸ್ವಾಮಿ ಗುರುವು ಅಕ್ಟೋಬರ್ ೧೦ ರ ವರೆಗೆ ಧನಸ್ಥಾನವಾದ ದ್ವಿತೀಯದಲ್ಲಿ ಹಾಗೂ ಅನಂತರ ಭ್ರಾತೃ ಮತ್ತು ಪರಾಕ್ರಮಸ್ಥಾನವಾದ ತೃತೀಯದಲ್ಲಿರುವದರಿಂದ ಈ ವರ್ಷವು ಭಾರಿ ಭಾಗ್ಯದಾಯಕವೂ ಕೌಟುಂಬಿಕ ಉತ್ಕರ್ಷದ್ದೂ ಎನಿಸಲಿದೆ. ಮಂಗಲ ಮತ್ತು ಧಾರ್ಮಿಕಕಾರ್ಯಗಳು ಯೋಜಿಸಿದಂತೆಯೆ ಎಷ್ಟೂ ಸದ್ದುಗದ್ದಲವಿಲ್ಲದೆ ಪೂರಯಿಸುವವು. ಆರೋಗ್ಯ ಉತ್ತಮವಾಗಿರುವುದು. ಕಠೋರ ಅಥವಾ ಕಠಿಣ ಮಾತಿಗಿಂತ ಮೃದು, ಸವಿ ಮಾತುಗಳಿಂದಲೇ ಹೆಚ್ಚಿನ ಕೆಲಸಗಳು ಸಿದ್ಧಿಸುವವು. ಈಗಿರುವ ನಾಲ್ಕನೆಯ ಕೇತುವು ಜನೆವರಿ ೧೨ ರಿಂದ ಮೂರನೆಯವನಾದ ನಂತರವಂತೂ ಈ ರಾಶಿಯುವರ ಮಾತು ಹಾಗು ವರ್ತನೆಯ ಪ್ರಭಾವ ಇತರರ ಮೇಲೆ ಬಹಳವಾಗುವುದು. ರಿಪುಸ್ಥಾನದ ಸ್ವಾಮಿಯೂ ಸಹ ಗುರುವೇ ಆಗಿರುವುದರಿಂದ ಅವನು ಎರಡನೆಯವನಾಗಿರುವವರೆಗೆ ಶತ್ರುಗಳೂ ವಿರೋಧಿಗಳೂ ಸಂಖ್ಯೆಯಲ್ಲಿ ಬಹಳ ಹೆಚ್ಚುವರಾದರೂ ಅವರ ಆಟವೆಷ್ಟೂ ನಡೆಯದೆಯೆ ಕೊನೆಗೆ ಶರಣಾಗತರಾಗಬೇಕಾಗುವುದು. ಇತರ ವಿಷಯಗಳಲ್ಲಿ ಒಳ್ಳೆಯ ಪ್ರಾಪಂಚಿಕಸುಖ ದೊರೆಯುವುದಾದರೂ ಆಪ್ತರು ಮತ್ತು ಆಶ್ರಿತರು ವಿಪರೀತ ತೊಂದರೆ ಕೊಡುವುದರಿಂದ ಅವರಲ್ಲಿ ಕೆಲವರೊಂದಿನ ಸಂಬಂಧ ಶಾಶ್ವತವಾಗಿಯೇ ಕಡಿದು ಹೋಗಬಹುದು.

ಭಾರ್ಯಾಸ್ಥಾನವಾದ ಸಪ್ತಮದಲ್ಲಿರುವ ಮಕರದ ಸ್ವಾಮಿ ಶನಿಯು ಈ ವರ್ಷವಿಡಿ ಒಂಬತ್ತನೆಯವನಾಗಿ ಭಾಗ್ಯಸ್ಥಾನದಲ್ಲಿರುವುದರಿಂದ ಹೆಂಡತಿಯ ಆರೋಗ್ಯ ಸಹ ಚಿಕ್ಕ ಪುಟ್ಟ ಬೇನೆ ಬೇಸರಗಳನ್ನುಳಿದರೆ ಒಳ್ಳೆಯ ಉತ್ತಮವಾಗಿಯೇ ಇರುವುದು. ಅಲ್ಲದೆ ಆವಳ ವಿಚಾರಗಳು ಸಹ ತಾತ್ಕಾಲಿಕ ಮತ್ತು ಭಾವೀ ಯಶಕ್ಕೆ ಪೋಷಕವಾಗಿರುತ್ತವೆ. ಆದರೆ ಎರಡನೆಯ ಗುರುವು ಇರುವ ವರೆಗೆ ಪರಸ್ಪರರ ವಿಷಯದಲ್ಲಿ ಕೆಲವು ತಪ್ಪು ತಿಳುವಳಿಕೆಗಳಿಂದಾಗಿ ವಾಗ್ವಾದವಾಗಬಹುದಾದರೂ ಅದರ ಸ್ವರೂಪ ಮಾತ್ರ ಪ್ರೇಮಕಲಹವಾಗಿಯೇ ಉಳಿಯುವುದು.

ಈ ರಾಶಿಯ ಅವಿವಾಹಿತರ ವಿವಾಹವಾಗುವುದಿದ್ದರೆ ಅದಕ್ಕೆ ಎರಡು ಮತ್ತು ಮೂರನೆಯ ಗುರುವಿರುವಾಗ ಉತ್ತಮ ಬಾಸಿಂಗಬಲವಿದೆಯಾದ್ದರಿಂದ ವಿವಾಹ ಅಲ್ಪಾಯಾಸದಿಂದ ಹೊಂದುವುದಲ್ಲದೆ ಯಾವುವೇ ಅಡತಡೆಗಳಿಲ್ಲದೆ ನಿಶ್ಚಿತ ವೇಳೆಗೆ ಜರುಗುವುದು. ಆದರೆ ಶನಿ ಹಾಗು ಗುರು ಇವರ ಸ್ಥಾನಪರತ್ವದಿಂದ ಷಡಾಷ್ಟಕವಾಗಿರುವುದರಿಂದ ಈ ವಿವಾಹ ಜರುಗಬಾರದೆಂದು ಮತ್ಸರಬುದ್ಧಿಯ ಹಿತಶತ್ರುಗಳು ಪ್ರಯತ್ನ ಮಾಡುವರು. ವಧೂವರರು ನೋಡುವುದಕ್ಕೆ ಅಷ್ಟೊಂದು ಸರಿಜೋಡಿಯೆನಿಸದಿದ್ದರೂ ಗುಣಸ್ವಭಾವದಿಂದ ಪರಸ್ಪರ ಪೂರಕರಾಗಿರುತ್ತಾರೆ. ಅದರಂತೆಯೆ, ಈ ರಾಶಿಯವರ ಮಗ ಅಥವಾ ಮಗಳ ವಿವಾಹ ಮಾಡುವುದಿದ್ದರೆ ಅದಕ್ಕೆ ಸಹ ಈ ವರ್ಷ ಬಾಸಿಂಗಬಲ ಸಾಕಷ್ಟು ಉತ್ತಮವೇ ಆಗಿದೆ. ಆದರೆ ಮೊದಲು ವಿವಾಹ ಹೊಂದುವುದು ಎಂದೆನಿಸಿದ್ದ ಅಪೇಕ್ಷಿತ ಕಡೆಯಿಂದ ನಕಾರಾತ್ಮಕ ಉತ್ತರ ಬರುವುದರಿಂದ ಮನಸ್ಸಿಗೆ ಬೇಸರವೆನಿಸುವುದಾದರೂ ನಂತರ ಎರಡನೆಯ ಕಡೆ ಹೊಂದಿದಾಗ ಅದು ಮೊದಲಿಗಿಂತಲೂ ಹೆಚ್ಚು ಉತ್ತಮವೆನಿಸಿ ಉತ್ಸಾಹವರ್ಧನೆಯಾಗುವುದು. ಮಕ್ಕಳ ಉತ್ಕರ್ಷಕ್ಕೆ ಈ ವರ್ಷವು ಅತ್ಯುತ್ತಮವಾಗಿದೆ. ಆದರೆ ವರ್ಷಾರಂಭದಲ್ಲಿ ತತ್ಸ್ವಾಮಿ ಮಂಗಳನು ಶನಿಯಿಂದ ದೃಷ್ಟನಾಗಿರುವುದರಿಂದ ಅವರಿಂದ ಅಪೇಕ್ಷಿತ ಸುಖವು ದೊರೆಯುವುದಿಲ್ಲ. ಸೊಸೆ ಇಲ್ಲವೆ ಅಳಿಯ ರೂಪ, ಗುಣಗಳೆರಡರಿಂದಲೂ ಬಹಳ ಉತ್ತಮವಾಗಿರುವರು.

ವರ್ಷಾರಂಭದಲ್ಲಿಯೇ ಎರಡನೆಯ ಗುರು, ಆರನೆಯ ಮಂಗಳ, ಒಂಬತ್ತನೆಯ ಶನಿ ಮತ್ತು ಹತ್ತನೆಯ ರಾಹು ಇಂತಹ ಬಲಿಷ್ಠ ಯೋಗವಿರುವುದರಿಂದ ನೌಕರಿ ಅಥವಾ ಉದ್ಯೋಗದಲ್ಲಿ ವಿಪುಲ ದ್ರವ್ಯಲಾಭವಾಗುವುದಲ್ಲದೆ ಅದರ ಸಂಗ್ರಹವೂ ಸಾಧ್ಯವಾಗುವುದು ಮತ್ತು ಅದರ ವಿನಿಯೋಗವೂ ಯೋಗ್ಯ ರೀತಿಯಲ್ಲಾಗುವುದು. ಬುದ್ಧಿಜೀವಿಗಳಿಗಿಂತ ಶ್ರಮಜೀವಿಗಳು ಹಾಗು ವಸ್ತು ವಿಷಯಕ ಉದ್ಯೋಗಸ್ಥರಿಗೆ ಈ ವರ್ಷ ಹೆಚ್ಚು ಲಾಭದಾಯಕವಾಗಿದೆ. ನೌಕರದಾರರಿಗೆ ಬಡತಿ ದೊರೆಯುವುದಲ್ಲದೆ ಬದಲಿಯಾದರೆ ಅದು ಅಪೇಕ್ಷಿತ ಸ್ಥಳಕ್ಕೆಯೆ. ವರಿಷ್ಠರ ಕೃಪೆಯನ್ನು ಹೆಚ್ಚಿಸುವಂತಹ ಘಟನೆಗಳು ಒಂದರ ಹಿಂದೊಂದರಂತೆ ಸಂಭವಿಸುವವು. ಆದರೆ ಲಂಚ ಮುಂತಾದುವನ್ನು ಪಡೆಯುವ ಚಟವಿದ್ದವರು ಮಾತ್ರ ಒಳ್ಳೆಯ ಎಚ್ಚರದಿಂದಿರಬೇಕು. ಯಾಕಂದರೆ, ಕರ್ಮೇಶ ಮಂಗಳ ಹಾಗು ಅಷ್ಟಮೇಶ ಶನಿ ಇವರ ಪರಸ್ಪರ ದೃಷ್ಟಿಯೋಗವಾಗಿ ಅಶುಭವಾಗಿರುವುದರಿಂದ ಇಂಥ ಚಟವಿರುವವರು ಮೋಸಹೋಗಿ ಸಂಕಟದಲ್ಲಿ ಸಿಕ್ಕುವ ಸಂಭವ ಬಹಳವಾಗಿದೆ. ಲಾಭದ ದೃಷ್ಟಿಯಿಂದ ಡಿಸೆಂಬರ್ ೧ ರಿಂದ ಜನೆವರಿ ೨೧, ಫೆಬ್ರುವರಿ ೧೪ ರಿಂದ ಎಪ್ರಿಲ್ ೨, ಮೇ ೨೧ ರಿಂದ ಜೂನ್ ೧೪, ಜುಲೈ ೯ ರಿಂದ ಅಗಸ್ಟ್ ೨೭ ಹಾಗು ಸಪ್ಟೆಂಬರ್ ೨೦ ರ ನಂತರದ ಕಾಲ ಹೆಚ್ಚು ಅನುಕೂಲದ್ದಾಗಿದೆ. ಪತ್ತು ಹಾಗು ಪ್ರತಿಷ್ಠೆ ಹೆಚ್ಚುವವು. ಈರ್ಷೆಯಿಂದ ಕಷ್ಟಪ್ರದವಾದ ದೂರದ ಪ್ರವಾಸವೊಂದನ್ನು ಮಾಡಬಹುದು. ವಾಹನಗಳಿದ್ದರೂ ಅವುಗಳಿಂದ ಸುಖ ಮನಸ್ಸಿನಂತೆ ಸಿಗುವುದಿಲ್ಲ. ಮಿತ್ರಸುಖ ಚೆನ್ನಾಗಿ ದೊರೆಯುವದಾದರೂ ಅವರಲ್ಲೊಬ್ಬನ ವಿಯೋಗ ಅಥವಾ ವಿರಹದಿಂದ ದುಃಖವಾಗುವ ಸಂಭವ.

ದಾವೆ, ಖಟ್ಲೆ ಹಾಗು ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಪ್ರತಿಪಕ್ಷಿಯ ಜೋರು ಕಂಡು ಬಂದರೂ ಬಹುತರ ಪ್ರಕರಣಗಳಲ್ಲಿ ಭಾರೀ ವಿಜಯ ದೊರೆಯುವುದು. ಆದರೆ ಪ್ರತಿಪಕ್ಷಿಯು ಬಹಿರಂಗವಾಗಿ ಅಥವಾ ಗುಪ್ತರೀತಿಯಿಂದ ತುಂಬ ಕಷ್ಟವೀಯುವನು. ವಿಶೇಷತಃ ಡಿಸೆಂಬರ್ ೩೧ ರ ವರೆಗೆ ಹಾಗು ಮಾರ್ಚ್ ೧೯ ರಿಂದ ಎಪ್ರಿಲ್ ೨೮ ಮತ್ತು ಜುಲೈ ೨೭ ರಿಂದ ಸಪ್ಟೆಂಬರ್ ೨೨ ರ ವರೆಗಿನ ಅವಧಿಯು ಯಶಸ್ಸಿಗೆ ಹೆಚ್ಚು ಅನುಕೂಲವಾಗಿದೆ.

ಈ ರಾಶಿಯ ಗರ್ಭವತಿಯರ ಪ್ರಸೂತಿ ಜನೆವರಿ ೧೨ ರ ಮೊದಲು ಆದರೆ ಹೆರಿಗೆ ತುಸು ಕಷ್ಟಕರವೆನಿಸಿ ಬಹುತರರಿಗೆ ಕನ್ಯಾಪ್ರಾಪ್ತಿಯಾಗುವುದು ; ಆದರೆ ಜನೆವರಿ ೧೪ ರಿಂದ ಅಕ್ಟೋಬರ್ ೧೦ ರ ವರೆಗಿನ ಅವಧಿಯಲ್ಲಾದರೆ ಸುಲಭ ಪ್ರಸೂತಿಯಾಗಿ ಪುತ್ರಲಾಭದ ಯೋಗವಿದೆ. ಅನಂತರವಾದರೆ ಹೆರಿಗೆ ಸುಲಭವಾದರೂ ಕನ್ಯೆ ಜನಿಸುವ ಸಂಭವವಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ನವೆಂಬರ್ ೨೩ ರ ಮೊದಲು ಇಲ್ಲವೆ ಡಿಸೆಂಬರ್ ೩೧ ರಿಂದ ಫೆಬ್ರುವರಿ ೮, ಮಾರ್ಚ್ ೧೯ ರಿಂದ ಜೂನ್ ೧೧, ಹಾಗು ಜುಲೈ ೨೭ ರ ಮುಂದಿನ ಅವಧಿಯಲ್ಲಾದರೆ ಉತ್ತೀರ್ಣರಾಗುವರು ಮಾತ್ರವಲ್ಲ, ಮಾರ್ಚ್ ೧೯ ರಿಂದ ಎಪ್ರಿಲ್ ೨೮ ಅಥವಾ ಸಪ್ಟೆಂಬರ್ ೨೮ ರ ನಂತರವಾದರೆ ಪ್ರಥಮ ಅಥವಾ ದ್ವಿತೀಯ ಶ್ರೇಣಿಯನ್ನೂ ಪಡೆಯಬಹುದು.

ಸಿಂಹ

ಈ ರಾಶಿಯುವರಿಗೆ ಈ ವರ್ಷವು ಒಟ್ಟಿನಲ್ಲಿ ಪ್ರಾಪಂಚಿಕಸುಖಕ್ಕೆ ಮಧ್ಯಮವಾಗಿರುವುದಾದರೂ ಔದ್ಯೋಗಿಕ ಉತ್ಕರ್ಷಕ್ಕೆ ಅತ್ಯುತ್ತಮವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ.

ಈ ವರ್ಷ ಈ ರಾಶಿಯ ಮಿತ್ರಗ್ರಹವಾದ ಗುರುವಿನಿಂದ ಯುಕ್ತನಾಗಿರುವುದರಿಂದ ಹಾಗು ಅವನೇ ಈ ರಾಶಿಯ ಬುದ್ಧಿಸ್ಥಾನದ ಸ್ವಾಮಿಯಾಗಿರುವುದರಿಂದ ಮನಸ್ಸಿನಲ್ಲಿ ಯೋಜಿಸಿದ ಕೆಲಸಗಳಲ್ಲಿ ಹೆಚ್ಚಿನವು ಚೆನ್ನಾಗಿ ಕೈಗೂಡುವವು; ಅಂತೆಯೆ ಮನಸ್ಸಿನ ಉತ್ಸಾಹವೂ ಹೆಚ್ಚುವುದು. ಆದರೆ ಇದೇ ಗುರುವು ಮೃತ್ಯುಸ್ಥಾನವಾದ ಅಷ್ಟಮದ ಸ್ವಾಮಿಯಾಗಿರುವು

ನಲ್ಲದೆ ಶನಿಯೂ ಅದೇ ಸ್ಥಾನದಲ್ಲಿರುವುದರಿಂದ ಆರೋಗ್ಯದ ಬಗ್ಗೆ ತೊಂದರೆ ಇದ್ದೇಯಿರುವುದು. ಅಲ್ಲದೆ ಜನೆವರಿ ೧೨ ರಿಂದ ಬರುವ ಧನ ಅಥವಾ ಕುಟುಂಬಸ್ಥಾನದಲ್ಲಿಯ ಎರಡನೆಯ ಕೇತುವಿನಿಂದಾಗಿ ಗೃಹಕಲಹ ಹೆಚ್ಚಾಗುವುದು ಮತ್ತು ಜನೆವರಿ ೭ ರಿಂದ ೨೬, ಫೆಬ್ರುವರಿ ೧೧ ರಿಂದ ಮಾರ್ಚ್ ೧೧, ಎಪ್ರಿಲ್ ೧ ರಿಂದ ೧೭, ಜುಲೈ ೨೬ ರಿಂದ ಆಗಸ್ಟ್ ೧೨, ಈ ಅವಧಿಯಲ್ಲಿ ಅದು ವಿಶೇಷ ಕಂಡುಬರುವುದು. ಇದನ್ನುಳಿದು ಇತರ ವಿಷಯಗಳಲ್ಲಿ ದೇಹಸುಖ ಸಾಕಷ್ಟು ಉತ್ತಮ.

ಅದರಂತೆಯೆ, ಭಾರ್ಯೇಶನು ಶನಿಯೇ ಇರುವುದರಿಂದ ಹೆಂಡತಿಯ ಆರೋಗ್ಯ, ವಾತ-ಜನ್ಯವಿಕಾರದಿಂದಾಗಿ ಅಷ್ಟೊಂದು ಸರಿಯಿರಲಾರದು. ಅಲ್ಲದೆ ಗುರು ಹಾಗು ದೇಹೇಶ ರವಿಯೊಂದಿಗೆ ಶನಿಯ ಷಡಾಷ್ಟಕಯೋಗವಾಗಿರುವುದರಿಂದ ಉಭಯತರಲ್ಲೂ ಪರಸ್ಪರರ ವಿಷಯದಲ್ಲಿ ತಪ್ಪು ಕಲ್ಪನೆಯುಂಟಾಗಿ ಉಳಿಯುವುದಲ್ಲದೆ ಕೆಲಕಾಲ ದೂರತ್ವದಿಂದಾಗಿ ಸಹವಾಸದಲ್ಲಿ ವ್ಯತ್ಯಯ ಬರಬಹುದು.

ಈ ರಾಶಿಯ ಅವಿವಾಹಿತರ ವಿವಾಹವಾಗುವುದಿದ್ದರೆ ಅದಕ್ಕೆ ಮಧ್ಯಮ ಬಾಸಿಂಗಬಲವಿರುವುದರಿಂದ ತುಂಬ ಪ್ರಯಾಸದಿಂದಾದರೂ ಆಗುವುದು ಮಾತ್ರ ನಿಶ್ಚಿತ. ನಿಶ್ಚಯವಾದ ಮಾತುಕತೆಗಳು ಬದಲಾಗಿ ಮತ್ತೆ ಮಾತುಕತೆ ನಡೆಸಬೇಕಾಗುವುದು. ಕೆಲವರ ವಿವಾಹ ಮುಹೂರ್ತವನ್ನು ಕೊನೆಯ ಗಳಿಗೆಯಲ್ಲಿ ಅಕಸ್ಮಾತ್ ಬದಲಿಸಬೇಕಾಗಬಹುದು. ವಧೂವರರು ರೂಪ, ಗುಣ, ಬುದ್ಧಿಗಳಿಂದ ಪರಸ್ಪರ ಅನುರೂಪರಾಗಿದ್ದರೂ ಅವರಲ್ಲಿ ಪರಸ್ಪರ ಸಾಮರಸ್ಯವುಂಟಾಗಲು ತುಂಬ ಸಮಯ ಬೇಕಾಗಬಹುದು. ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದರೆ ಅದಕ್ಕೆ ಮಾತ್ರ ಅತ್ಯುತ್ತಮ ಬಾಸಿಂಗಬಲವಿದೆಯಾದ್ದರಿಂದ ಅವರ ವಿವಾಹ ಬೇಗ ಹೊಂದಿ ಸುಸೂತ್ರ ಜರಗುವುದು. ಸೊಸೆ ಇಲ್ಲವೆ ಅಳಿಯ ಆಪ್ತರಲ್ಲಿಯವರು ಅಥವಾ ಮೊದಲಿನಿಂದಲೂ ವಿಶೇಷ ಋಣಾನುಬಂಧವುಳ್ಳ ಮನೆತನದವರು ಆಗಿರಬಹುದು. ಅಲ್ಲದೆ ಅವರು ಪೂರ್ಣ ಮನಸ್ಸಿಗೊಪ್ಪುವಂತಹರಿರುವರು ಮಾತ್ರವಲ್ಲ, ವಿವಾಹೋತ್ತರದಲ್ಲಿ ಉತ್ಕರ್ಷಕ್ಕೆ ಅನುಗುಣವಾದಂತಹ ಕಾಲ್ಗುಣವುಳ್ಳವರಾಗಿರುತ್ತಾರೆ.

ಮಕ್ಕಳೆಲ್ಲರಿಂದ ಎಲ್ಲ ದೃಷ್ಟಿಯಿಂದಲೂ ಯಥಾಯೋಗ್ಯ ಸುಖ ದೊರೆಯುವುದಲ್ಲದೆ ವಿದ್ಯೆ ಅಥವಾ ವ್ಯವಸಾಯದಲ್ಲಿ ಪ್ರತಿಯೊಬ್ಬರೂ ಒಳ್ಳೆಯ ಉತ್ಕರ್ಷ ಹೊಂದುವರು. ಅದರಲ್ಲಿಯೂ ಈ ಅಂಶ ಕನ್ಯೆಯರಿಗಿಂತ ಪುತ್ರರಲ್ಲಿ ವಿಶೇಷ ಕಂಡುಬರುವುದು.

ಉದ್ಯೋಗದಲ್ಲಿ ಈ ವರ್ಷವು ಕಲ್ಪನಾತೀತವೆನಿಸುವಷ್ಟು ಉತ್ತಮವಾಗಿದೆ. ಮೊದಲನೆಯ ಗುರುವಿರುವ ವರೆಗೆ ಕೀರ್ತಿ, ಪ್ರತಿಷ್ಠೆಗಳು ಹೆಚ್ಚುವಂತಹ ಅನೇಕ ಘಟನೆಗಳು ಜರುಗುವುವು. ಕನಸು ಮನಸ್ಸಿನಲ್ಲಿ ಸಹ ಇರದಂತಹ ಅನೇಕ ದೊಡ್ಡ ಮನುಷ್ಯರೊಂದಿಗೆ ಉದ್ಯೋಗ ವಿಷಯಕ್ಕೆ ಹಾಗು ಇತರ ವಿಷಯಗಳಲ್ಲಿ ನಿಕಟ ಸಂಬಂಧ ಬೆಳೆದುಬರುವುದಾದ್ದರಿಂದ ಇತರರ ಮೇಲೆ ಒಳ್ಳೆಯ ವರ್ಚಸ್ಸು ಬೀಳುವುದು. ಉದ್ಯೋಗಸ್ಥರಲ್ಲಿ ಶ್ರಮಜೀವಿಗಳಿಗಿಂತ ಬುದ್ಧಿಜೀವಿಗಳಿಗೆ ಯಶಸ್ಸು, ಲಾಭಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆಯುವುವು. ಅದರಂತೆಯೆ, ನೌಕರದಾರರಿಗೆ ಸಹ ಈ ವರ್ಷವು ಭಾಗ್ಯೋದಯದ್ದಾಗಿದೆಯಾದ್ದರಿಂದ ಬಡತಿ ದೊರೆಯುವುದು ನಿಶ್ಚಿತ ಹಾಗು ಬದಲಿಯಾದರೆ ಅದು ಮನಕ್ಕೊಪ್ಪುವಂತಹ ಮತ್ತು ಎಲ್ಲ ದೃಷ್ಟಿಯಿಂದಲೂ ಸುಖಸೌಕರ್ಯಗಳಿರುವ ಸ್ಥಳಕ್ಕೇ ಆಗುವುದು. ಆದರೆ ಕೆಲಸದಲ್ಲಿ ಯಾವ ತಪ್ಪಿರದಿದ್ದರೂ ವರಿಷ್ಠರ ಕಿರಿಕಿರಿ ಮಾತ್ರ ಇದ್ದದ್ದೆ. ಡಿಸೆಂಬರ್ ೩೧ರ ವರೆಗೆ ಹಾಗು ಅನಂತರ ಮಾರ್ಚ್ ೧೯ ರಿಂದ ಎಪ್ರಿಲ್ ೨೮, ಜೂನ್ ೧೧ ರಿಂದ ಜುಲೈ ೨೭ ಮತ್ತು ಸಪ್ಟೆಂಬರ್ ೧೨ ರ ನಂತರದ ಕಾಲವೆಲ್ಲ ವಿಶೇಷ ಭಾಗ್ಯವರ್ಧಕವಾಗಿದೆ. ಕೈಕೆಳಗಿನವರು, ಆಪ್ತರು ಮತ್ತು ಆಶ್ರಿತರಿಂದ ಒಳ್ಳೆಯಸುಖ ದೊರೆಯುವುದು. ಆದರೆ ಜನೆವರಿ ೧೨ ರ ವರೆಗೆ ದೊರೆಯುವಷ್ಟು ಉತ್ತಮ ವಾಹನಸುಖ ಮುಂದೆ ಮಾತ್ರ ಸಿಕ್ಕುವುದಿಲ್ಲ. ಕನಿಷ್ಠ ಮೂರು ನಾಲ್ಕು ಸಲವಾದರೂ ದೂರದ ಪ್ರವಾಸ ಕೈಕೊಳ್ಳಬೇಕಾಗಿ ಬಂದು ಅದರಲ್ಲಿಯ ಉದ್ದೇಶ ಪೂರ್ಣ ಸಾಧಿಸುವುದು. ಪ್ರತ್ಯಕ್ಷ ಭೆಟ್ಟಿಗಿಂತ ಪತ್ರವ್ಯವಹಾರ ಮತ್ತು ಲೇಖನ ಕೆಲಸಗಳು ಹೆಚ್ಚು ಉತ್ಸಾಹಕರವೆನಿಸುವವು. ಮಂಗಲ ಹಾಗು ಧಾರ್ಮಿಕ ಕಾರ್ಯಗಳು ಜರಗುವವು. ಮಿತ್ರ ಸುಖ ಉತ್ತಮ. ಆದರೆ ವರ್ಷವಿಡಿ ಶನಿಯು ಎಂಟನೆಯವನಾಗಿರುವುದರಿಂದ ಮಾನಸಿಕ ಸಮಾಧಾನ ಕಡಿಮೆಯಿರುವುದು ಅನಿವಾರ್ಯ.

ದಾವೆ, ಖಟ್ಲೆ ಹಾಗು ಇತರ ಸ್ಪರ್ಧೆಯ ಕೆಲಸಗಳಲ್ಲಿ ತೊಂದರೆ, ವೆಚ್ಚಗಳೆರಡೂ ಬಹಳವಾದರೂ ಅವುಗಳಲ್ಲಿ ಐದರಲ್ಲಿ ಮೂರು ಪಾಲು ಯಶಸ್ಸು ದೊರೆಯುವುದು. ಆದರೆ ಅದರಿಂದ ಹೇಳಿಕೊಳ್ಳುವಂತಹ ಪ್ರಯೋಜನವೇನೂ ಆಗಲಿಕ್ಕಿಲ್ಲ.

ಈ ರಾಶಿಯ ಗರ್ಭಿಣಿಯರು ನವೆಂಬರ್ ೨೩ ರ ಮೊದಲು ಹಾಗು ಜೂನ್ ೧೧ ರಿಂದ ಜುಲೈ ೨೭ರ ವರೆಗೆ ಪ್ರಸೂತರಾದರೆ ಹೆರಿಗೆ ತುಸು ಕಷ್ಟಕರವೆನಿಸಬಹುದು. ಆದರೆ ಮೊದಲನೆಯ ಗುರುವಿರುವಾಗ ಅಂದರೆ ಅಕ್ಟೋಬರ್ ೧೦ ರ ವರೆಗಾದರೆ ಬಹುತರರಿಗೆ ಪುತ್ರಲಾಭದ ಹಾಗು ಅನಂತರವಾದರೆ ಕನ್ಯಾಜನನದ ಯೋಗವಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಫೆಬ್ರುವರಿ ೮ ರಿಂದ ಮಾರ್ಚ್ ೧೯ ಹಾಗು ಜುಲೈ ೨೭ ರಿಂದ ಸಪ್ಟೆಂಬರ್ ೧೨ ರ ವರೆಗಿನ ಅವಧಿಯಲ್ಲಾದರೆ ಯಶಸ್ಸು ನಿಶ್ಚಿತವಲ್ಲ; ಆದರೂ ಇನ್ನಿತರಸಮಯದಲ್ಲಾದರೆ ಯಶಸ್ಸು ನಿಶ್ಚಿತವೆಂದು ಹೇಳಬಹುದು. ಅಲ್ಲದೆ ನವೆಂಬರ್ ೨೩ ರ ಮೊದಲು, ಅಥವಾ ಜನೆವರಿ ೧ ರಿಂದ ಫೆಬ್ರುವರಿ ೮, ಮಾರ್ಚ್ ೧೯ ರಿಂದ ಎಪ್ರಿಲ್ ೨೮, ಜೂನ್ ೧೧ ರಿಂದ ಜುಲೈ ೨೭ ಹಾಗು ಸಪ್ಟೆಂಬರ್ ೧೨ ರ ವರೆಗಿನ ಅವಧಿಯಲ್ಲಾದರೆ ಒಳ್ಳೆಯ ಶ್ರೇಣಿಯೂ ದೊರೆಯಬಹುದಾಗಿದೆ.

ಕನ್ಯಾ

ಈ ರಾಶಿಯವರಿಗೆ ಈ ವರ್ಷವು ವಿವಂಚನೆಯದೂ ಅಲ್ಪ ಸಮಾಧಾನದ್ದೂ ಇದೆಯಾದರೂ ಭವಿಷತ್ಕಾಲದ ಉತ್ಕರ್ಷದ ಕೆಲವು ಸೂಚನೆಗಳನ್ನು ನೀಡುವಂಥದಾಗಿದೆಯೆಂದು ತಿಳಿಯಬೇಕು.

ಈ ರಾಶಿಯವರಿಗೆ ಜನೆವರಿ ೧೨ ರ ವರೆಗೆ ಅಷ್ಟಮದಲ್ಲಿರುವ ರಾಹುವಿನಿಂದಾಗಿ ಆರೋಗ್ಯ ವಿಷಯದಲ್ಲಿ ತುಸು ಕ್ಲೇಶವಾಗುತ್ತಲೇ ಇರುವುದು. ಅಲ್ಲದೆ ಸುಮಾರು ವರ್ಷವಿಡಿ ಏಳನೇಯ ಶನಿ ಹಾಗು ಹನ್ನೆರಡನೆಯ ಗುರು ಇರುವುದರಿಂದ ಅನೇಕ ವಿಷಯಗಳಲ್ಲಿ ಭಯಂಕರ ಮಾನಸಿಕ ಕಷ್ಟವನ್ನು ಸಹಿಸಬೇಕಾಗಬಹುದು. ಹೆಂಡತಿ, ಮಕ್ಕಳನ್ನೊಳಗೊಂಡು ಮನೆಯಲ್ಲಿಯ ಅನೇಕರೊಂದಿಗೆ ಮಾತು ಬಿಡುವಷ್ಟರ ಮಟ್ಟಿಗೆ ಮತಭೇದವುಂಟಾಗಬಹುದು. ಅದರಲ್ಲೂ ನವೆಂಬರ್ ೨೩ ರ ವರೆಗೆ ಹಾಗು ನಂತರ ಫೆಬ್ರುವರಿ ೧೮ ರಿಂದ ಎಪ್ರಿಲ್ ೨೮ ಮತ್ತು ಸಪ್ಟೆಂಬರ್ ೧೨ ರ ನಂತರದ ಕಾಲದಲ್ಲಿ ಇದು ವಿಶೇಷ ಗಂಭೀರ ಸ್ವರೂಪ ತಳೆಯಹುದು. ಅಂತೆಯೆ ಅದರ ಪರಿಹಾರಾರ್ಥ ರಾಹುವಿನ ೧೮೦೦೦, ಕೇತುವಿನ ೧೭೦೦೦, ಗುರುವಿನ ೧೯೦೦೦ ಮತ್ತು ಶನಿಯ ೨೩೦೦೦ ಜಪ ಮಾಡಿದರೆ ಪರಿಣಾಮ ಸಾಕಷ್ಟು ಕಡಿಮೆಯಾಗಬಹುದು.

ಅದರಂತೆಯೆ, ವರ್ಷಾರಂಭದಲ್ಲಿಯೆ ಶನಿಯು ಏಳನೆಯ ಅಂದರೆ ಭಾರ್ಯಾಸ್ಥಾನದಲ್ಲಿ ಮತ್ತು ರಾಶಿಸ್ವಾಮಿ ಬುಧನು ಎರಡನೆಯ ಅಂದರೆ ಕುಟುಂಬಸ್ಥಾನದಲ್ಲಿದ್ದು, ಅವರಲ್ಲಿ ಬುಧನು ನವೆಂಬರ್ ೧೧ ರ ವರೆಗೆ ಹಾಗು ಶನಿಯು ಡಿಸೆಂಬರ್ ೯ರ ವರೆಗೆ ವಕ್ರರಾಗಿರುವುದರಿಂದ ಆ ವರೆಗೆ ಪತಿ-ಪತ್ನಿಯರಲ್ಲಿ ನಿಷ್ಕಾರಣ ವಾದವಿವಾದಗಳಾಗಿ ತೀರ ಅಪ್ರೀತಿಯುಂಟಾಗುವುದು. ಆದರೆ ಅನಂತರ ಮಾತ್ರ ಅದು ಅಷ್ಟಾಗಿ ಉಳಿಯುವುದಿಲ್ಲ.

ಈ ರಾಶಿಯವರ ವಿವಾಹವಾಗುವುದಿದ್ದರೆ ಅದಕ್ಕೆ ಇದೇ ವರ್ಷ ಅಂದರೆ ಅಕ್ಟೋಬರ್ ೧೦ರ ವರೆಗೆ ಇರುವ ಹನ್ನೆರಡನೆಯ ಗುರುವಿನಿಂದಾಗಿ ಬಾಸಿಂಗಬಲದ ಸಂಪೂರ್ಣ ಅಭಾವವಿದೆಯೆಂದು ತಿಳಿಯಬೇಕು. ಯಾಕೆಂದರೆ ಗುರುವೇ ಈ ರಾಶಿಯ ಭಾರ್ಯೇಶನಾಗಿರುತ್ತಾನೆ. ಆದರೆ ಈ ಬಗ್ಗೆ ಯಾರಾದರೂ ಪರಾಕಾಷ್ಠದ ಪ್ರಯತ್ನ ಮಾಡಿದಲ್ಲಿ ಡಿಸೆಂಬರ್ ೨೦ ರಿಂದ ಜನೆವರಿ ೭, ಜನೆವರಿ ೨೬ ರಿಂದ ಫೆಬ್ರುವರಿ ೧೧, ಮಾರ್ಚ್ ೧೧ ರಿಂದ ಎಪ್ರಿಲ್ ೧, ಎಪ್ರಿಲ್ ೧೭ ರಿಂದ ಮೇ ೩,

ಆಗಸ್ಟ್ ೧೨ ರಿಂದ ೨೯ ರ ವರೆಗಿನ ಅವಧಿಯಲ್ಲಿ ಆದರೂ ಆಗಬಹುದು. ಅದರಲ್ಲೂ ಪ್ರಥಮ ವಿವಾಹಕ್ಕಿಂತ ದ್ವಿತೀಯ ವಿವಾಹವಾಗುವವರಿಗೆ ತೊಂದರೆ ಕಡಿಮೆಯೆನಿಸುವಂತಹ ವಿಚಿತ್ರಯೋಗವಿದೆ. ವಧೂವರರು ರೂಪದಿಂದ ಮಧ್ಯಮರಾಗಿದ್ದರೂ ಗುಣದಿಂದ ಸಾಕಷ್ಟು ಉತ್ತಮರಾಗಿರುತ್ತಾರೆ. ಅದರಂತೆಯೆ, ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದರೆ ಅದಕ್ಕೂ ಈ ಸಲ ಬಾಸಿಂಗಬಲ ಸಾಮಾನ್ಯವೇ ಆಗಿದೆ. ಇದ್ದುದರಲ್ಲಿಯೆ ಡಿಸೆಂಬರ್ ೧ ರ ವರೆಗೆ ಹಾಗು ಮುಂದೆ ಡಿಸೆಂಬರ್ ೨೬ ರಿಂದ ಜನೆವರಿ ೨೧, ಫೆಬ್ರುವರಿ ೧೪ ರಿಂದ ಮಾರ್ಚ್ ೧೦, ಮೇ ೨೧, ರಿಂದ ಜೂನ್ ೧೪, ಜುಲೈ ೯ ರಿಂದ ಆಗಸ್ಟ್ ೨ ಮತ್ತು ಆಗಸ್ಟ್ ೨೭ ರಿಂದ ಸಪ್ಟೆಂಬರ್ ೨೦ ರ ವರೆಗಿನ ಅವಧಿಯಲ್ಲಿ ಹೊಂದಬಹುದಾದರೂ ಮುಂದೆ ನಿರೀಕ್ಷೆಗಿಂತಲೂ ಒಂದೆರಡು ತಿಂಗಳು ತಡವಾಗಿ ವಿವಾಹ ಜರುಗಬಹುದು. ಯಾಕೆಂದರೆ, ವರ್ಷಾರಂಭಕ್ಕೆಯೆ ಗುರುವಿನೊಂದಿಗೆ ಸಂತತಿಸ್ವಾಮಿ ಶನಿಯು ಷಡಾಷ್ಟಕವಾಗಿದ್ದು, ಇದು ಸಾಮಾನ್ಯವಾಗಿ ಅಶುಭವೆಂದು ಪರಿಗಣಿಸಲ್ಪಟ್ಟದೆ. ಸೊಸೆ ಇಲ್ಲವೆ ಅಳಿಯ ನೋಡುವುದಕ್ಕೆ ಒಳ್ಳೆಯ ಆಕರ್ಷಕರಾಗಿದ್ದರೂ ಪರಸ್ಪರರಲ್ಲಿ ಎತ್ತರ ಹಾಗು ಮೈಕಟ್ಟಿನ ದೃಷ್ಟಿಯಿಂದ ಇಜ್ಜೋಡಿಯೆನಿಸಬಹುದು; ಆದರೆ ಗುಣ ಹಾಗು ಸಂಸಾರಕ್ಕೆ ಯೋಗ್ಯವಾದ ಆಚಾರ ವಿಚಾರಗಳುಳ್ಳವರಾಗಿರುತ್ತಾರೆ.

ಈ ವರ್ಷವು ಮಕ್ಕಳ ಉತ್ಕರ್ಷಕ್ಕೆ ಚೆನ್ನಾಗಿರುವುದಾದರೂ ಅದಕ್ಕಾಗಿ ದೀರ್ಘ ಪ್ರಯತ್ನ ಮಾಡಬೇಕಾಗಬಹುದು. ಆದರೆ ಖಾತ್ರಿಯ ಮತ್ತು ವಚನವಿತ್ತ ಜನರಿಂದ ಈ ವಿಷಯದಲ್ಲಿ ಎಷ್ಟೊ ಸಹಾಯ ಸಿಗದೆಯೆ ಸಾಮಾನ್ಯ ಪರಿಚಿತರಿಂದ ವಿಶೇಷ ನೆರವು ದೊರೆಯುವುದು. ಮಕ್ಕಳಿಂದ ಸ್ವತಃಕ್ಕೆ ವಿಶೇಷ ಸುಖ, ಸಹಾಯಗಳು ಅಪೇಕ್ಷಿಸಿದಷ್ಟು ಸಿಗಲಾರವು.

ಉದ್ಯೋಗಕ್ಕೆ ಈ ವರ್ಷವು ಜನೆವರಿ ೧೯ ರ ನಂತರ ಒಟ್ಟನಲ್ಲಿ ಚೆನ್ನಾಗಿದೆ. ಅದರಲ್ಲೂ ಶ್ರಮಜೀವಿಗಳಿಗಿಂತಲೂ ಬುದ್ಧಿಜೀವಿಗಳಿಗೆ ಹೆಚ್ಚು ಅನುಕೂಲವಿದೆ. ನೌಕರದಾರರಿಗೆ ಬಡತಿ ದೊರೆಯುವ ಸಂಭವ ಕಡಿಮೆಯಿರುವುದಾದರೂ ವರಿಷ್ಠರ ಕೃಪೆ ಚೆನ್ನಾಗಿದ್ದು ಭಾವೀ ಉತ್ಕರ್ಷಕ್ಕೆ ಪೋಷಕವೆನಿಸುವಂತಹ ವಾತಾವರಣವಿರುತ್ತದೆ. ಬದಲಿಯಾದರೆ ಹೆಚ್ಚು ವೆಚ್ಚದಾಯಕವೆನಿಸಿದರೂ ಇತರ ಸಾಂಸಾರಿಕ ವಿಷಯಗಳಲ್ಲಿ ಸುಖ-ಸೌಕರ್ಯಗಳುಳ್ಳ ಸ್ಥಳಕ್ಕೆಯೆ ಆಗುವುದು. ಆದರೆ ಅದರಲ್ಲಿಯೇ, ಡಿಸೆಂಬರ್ ೧ ರಿಂದ ೨೦, ಫೆಬ್ರುವರಿ ೧೪ ರಿಂದ ಮಾರ್ಚ್ ೧೨, ಮೇ ೩ ರಿಂದ ೨೩, ಜೂನ್ ೧೪ ರಿಂದ ಜುಲೈ ೯, ಜುಲೈ ೨೬ ರಿಂದ ಆಗಸ್ಟ್ ೧೨, ಸಪ್ಟೆಂಬರ್ ೨೦ ರಿಂದ ಅಕ್ಟೋಬರ್ ೫ ಹಾಗು ಅಕ್ಟೋಬರ್ ೧೫ ರ ನಂತರದ ಕಾಲವು ಲಾಭಕ್ಕೆ ಚೆನ್ನಾಗಿದೆ. ಆದರೆ ವೆಚ್ಚದಲ್ಲಿ ಬಹುಭಾಗ ಶುಭಕಾರ್ಯಗಳಿಗಾಗಿಯೇ ಮತ್ತು ಯೋಜಿತ ಕೆಲಸಗಳಲ್ಲಿಯೇ ಆಗುವುದು. ಅಕ್ಟೋಬರ್ ೧೦ ರ ನಂತರ ಮನೋತ್ಸಾಹ ಹೆಚ್ಚಿಸುವಂತಹ ಅನೇಕ ಘಟನೆಗಳು ನಿಶ್ಚಿತ ಸಂಭವಿಸುವವು.

ಕೈಕೆಳಗಿನವರು ಸಾಮಾನ್ಯವಾಗಿ ವಿರುದ್ಧವಾಗಿಯೇ ವರ್ತಿಸುವರು. ವಾಹನಗಳಿಂದ ಅಷ್ಟಾಗಿ ಸುಖ ದೊರೆಯುವುದಿಲ್ಲ. ಸೋದರರಿಂದ ಸ್ಥಿರಾಸ್ತಿಯ ವಿಷಯದಲ್ಲಿ ತುಂಬ ತೊಂದರೆಯಾಗುವುದು. ಪ್ರವಾಸ ವಿಶೇಷ ಸುಖಕರವೆನಿಸುವುದಿಲ್ಲ. ಅದಕ್ಕಿಂತ ಭೆಟ್ಟಿ ಮತ್ತು ಲೇಖನ ಕೆಲಸಗಳು ಹೆಚ್ಚು ನೆಟ್ಟಗೆ. ಅನೇಕ ಸ್ವಪ್ನಗಳು ಶುಭವೂ ಭವಿಷ್ಯತ್ಸೂಚಕವೂ ಆಗಿರುವವು.

ದಾವೆ, ಖಟ್ಲೆ ಹಾಗೂ ಇತರ ಸ್ಪರ್ಧೆಯ ಕೆಲಸಗಳಲ್ಲಿ ಜನೆವರಿ ೧೨ ರ ವರೆಗೆ ನಿರ್ಣಯ ದೊರೆತರೆ ಹೆಚ್ಚಿನವು ಯಶಸ್ವಿಯಾಗುವವು; ಅರ್ಥಾತ್ ಅನಂತರವಾದರೆ ವಿರುದ್ಧವಾಗಬಹುದು ಅಥವಾ ಅನಿರ್ಣೀತವಾಗುಳಿಯಬಹುದು.

ಈ ರಾಶಿಯ ಗರ್ಭಿಣಿಯರಲ್ಲಿ ಬಹುತರರಿಗೆ ಕನ್ಯಾಜನನದ ಯೋಗವಿದ್ದು, ಜನೆವರಿ ೧೨ ರ ನಂತರವಾದರೆ ಪ್ರಸೂತಿ ಕಷ್ಟಕರವೆನಿಸುವ ಸಂಭವವಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಜನೆವರಿ ೧೨ ರ ಮೊದಲು ಆದರೆ ಯಶಸ್ಸು ದುರ್ಬಲವೆನಿಸಿದರೆ ಅನಂತರ ಕನಿಷ್ಠ ಉತ್ತೀರ್ಣರಾದರೂ ಆಗಬಹುದಾಗಿದೆ.

ತುಲಾ

ಈ ರಾಶಿಯವರಿಗೆ ಈ ವರ್ಷವು ಕೆಲವು ಚಿಕ್ಕ ಪುಟ್ಟ ವಿಷಯಗಳನ್ನುಳಿದರೆ ಮಹತ್ವದ ವಿಷಯಗಳಲ್ಲೆಲ್ಲ ಒಳ್ಳೆಯ ಲಾಭದಾಯಕವೂ ಭಾರಿ ಯಶಸ್ಸಿನದೂ ಭಾಗ್ಯವೃದ್ಧಿಕಾರಕವೂ ಆಗಿದೆಯೆಂದು ತಿಳಿಯಬೇಕು.

ವರ್ಷಾರಂಭದಲ್ಲಿಯೇ ರಾಶಿಸ್ವಾಮಿ ಶುಕ್ರನು ಹನ್ನೆರಡನೆಯವನಾಗಿರುವುದರಿಂದ ಹಾಗೂ ಕನ್ಯೆಯಲ್ಲಿ ನೀಚನಾಗಿರುವುದರಿಂದ ವೀರ್ಯ ಅಥವಾ ಆರ್ತವ ದೋಷದಿಂದ ತುಸು ಅಶಕ್ತತೆ ಭಾಸವಾಗಬಹುದು. ಆದರೆ ವರ್ಷಾರಂಭದಲ್ಲಿಯೇ ಇರುವ ಏಳನೆಯ ರಾಹು ಮತ್ತು ಮೊದಲನೆಯ ಕೇತು ಇವರು ಜನೆವರಿ ೧೨ ರಿಂದ ಅನುಕ್ರಮವಾಗಿ ಆರು ಮತ್ತು ಹನ್ನೆರಡನೆಯವರಾಗಿರುವುದರಿಂದ ಆಗಿನಿಂದ ಆರೋಗ್ಯ ಸುಧಾರಿಸತೊಡಗುವುದು. ಅಲ್ಲದೆ ಮುಂಗೆ ವರ್ಷವಿಡಿ ಶನಿಯು ಆರನೆಯವನೂ ಸಾಮಾನ್ಯತಃ ವರ್ಷದ ಕೊನೆಯ ವರೆಗೆ ಅಂದರೆ ಅಕ್ಟೋಬರ್ ೧೦ರ ವರೆಗೆ ಗುರುವು ಹನ್ನೊಂದನೆಯವನೂ ಆಗಿರುತ್ತಾರೆ. ಇಂತಹ ಪ್ರಬಲ ಗ್ರಹಮಾನದಿಂದಾಗಿ ಇತರ ಆವಶ್ಯಕ ವಿಷಯಗಳಲ್ಲಿ ಅತ್ಯುತ್ತಮ ದೇಹಸುಖ ದೊರೆಯುವುದು.

ಸ್ತ್ರೀಸುಖದಲ್ಲಿ ಡಿಸೆಂಬರ್ ೧ರ ವರೆಗೆ ವಿಶೇಷ ಹಾಗು ಮುಂದೆ ಜನೆವರಿ ೧೨ರ ವರೆಗೆ ಮಧ್ಯಮ ಪ್ರತಿಯ ತೊಂದರೆಯಾಗುವ ಸಂಭವವಿದೆಯಾದರೆ ಅನಂತರ ಮಾತ್ರ ಅದು ಬಹಳ ಉತ್ತಮವಾಗಿದೆ. ಮಹತ್ವದ ವಿಷಯಗಳಲ್ಲಿ ಉಭಯತರಲ್ಲಿ ಮತ್ತೈಕ್ಯವಿರುವುದರಿಂದ ಒಳ್ಳೆಯ ಪ್ರಾಪಂಚಿಕಸುಖ ದೊರೆಯುವದು. ಅಲ್ಲದೆ ವರ್ಷಾರಂಭದಲ್ಲಿ ಮಂಗಳನು ಗುರು ಮತ್ತು ಶನಿಯ ದೃಷ್ಟಿಯಲ್ಲಿರುವುದರಿಂದ ಕೌಟುಂಬಿಕ ಉತ್ಕರ್ಷಕ್ಕೆ ಕಾರಕವಾದಂಥ ಒಂದೆರಡಾದರೂ ಒಡೆದು ಕಾಣುವಂತಹ ಘಟನೆಗಳು ಸಂಭವಿಸುವುದು ನಿಶ್ಚಿತ. ಅದರಂತೆಯೆ ಹೆಂಡತಿಯ ಹೆಸರಿನಿಂದ ಸಂಗ್ರಹ ಅಥವಾ ವ್ಯವಹಾರ ಮಾಡಿದರೆ ವಿಶೇಷ ಯಶಸ್ಸು ದೊರೆಯಬಹುದು. ಕದಾಚಿತ್ ಫೆಬ್ರುವರಿ ೮ ರಿಂದ ಮಾರ್ಚ್ ೧೯ರ ವರೆಗೆ ಅಪರಿಹಾರ್ಯ ಕಾರಣವೊಂದರಿಂದಾಗಿ ಅವಳ ಸಹವಾಸದಲ್ಲಿ ವ್ಯತ್ಯಯವುಂಟಾಗಬಹುದು.

ಈ ರಾಶಿಯ ಅವಿವಾಹಿತರ ವಿವಾಹವಾಗುವುದಿದ್ದರೆ ಈ ವರ್ಷ ಆಗುವುದು ನಿಶ್ಚಿತ. ಆದರೆ ಜನೆವರಿ ೧೨ರ ವರೆಗೆ ಹಾಗು ನಂತರ ಫೆಬ್ರುವರಿ ೮ ರಿಂದ ಮಾರ್ಚ್ ೧೯ರ ಅವಧಿಯಲ್ಲಿ ಹೊಂದಲು ತುಸು ತೊಂದರೆಯೆನಿಸಿದರೂ ಉಳಿದ ವೇಳೆಯಲ್ಲಿ ಅಲ್ಪಾಯಾಸದಿಂದಲೇ ಸಾಧ್ಯವಾಗುವುದು. ವಧೂವರರ ಮನೆತನಗಳು ಪೂರ್ವ ಪರಿಚಿತವೂ ಮೈತ್ರಿಯುಳ್ಳವೂ ಆಗಿರಬಹುದಾಗಿದೆ. ಅಲ್ಲದೆ ಅವರು ಬಣ್ಣದಿಂದ ತೀರ ವಿಭಿನ್ನರೆನಿಸಿದರೂ ರೂಪದಿಂದ ಸುಂದರರೂ ಸ್ವಭಾವದಿಂದ ಒಳ್ಳೆಯ ಉತ್ಸಾಹಿಗಳೂ ಆಗಿರುವುರಲ್ಲದೆ ಉಭಯತರಲ್ಲೂ ಸಾಮರಸ್ಯವಿರುವುದು. ಅದರಂತೆಯೆ, ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದರೆ ಅದಕ್ಕೆ ಈ ಸಲ ಅತ್ಯುತ್ತಮ ಬಾಸಿಂಗಬಲವಿರುವುದರಿಂದ ಅದು ನಿಶ್ಚಿತವಾಗಿಯೂ ಹಾಗು ಯೋಗ್ಯ ರೀತಿಯಲ್ಲೇ ಆಗುವುದು. ಆದರೆ ಸಂತತಿಸ್ವಾಮಿ ಶನಿಯೊಂದಿಗೆ ಆಗಿರುವ ಗುರುವಿನ ಷಡಾಷ್ಟಕಯೋಗದಿಂದಾಗಿ ಮೊದಲು ಪೂರ್ಣ ಹೊಂದಿದ ಸ್ಥಳದಿಂದ ಹಿತಶತ್ರುಗಳ ಕಾರಸ್ಥಾನದಿಂದ ನಕಾರಾತ್ಮಕ ಉತ್ತರ ಬರುವ ಸಂಭವವಿದೆ. ಆದರೆ ನಂತರ ಬಹಳ ಮಾತುಕತೆಯ, ಚರ್ಚೆಯ ನಂತರ ತಪ್ಪು ತಿಳುವಳಿಕೆ ದೂರವಾಗಿ ಮೊದಲು ನಿಶ್ಚಯವಾದಂತೆಯೆ ವಿವಾಹವಾಗುವುದು. ಸೊಸೆ ಅಥವಾ ಅಳಿಯ ನೋಡುವುದಕ್ಕೆ ಸಾಮಾನ್ಯರಾಗಿದ್ದರೂ ಭಾರಿ ಬುದ್ಧಿವಂತರೂ ವಿದ್ವಾಂಸರೂ ಆಗಿರಬಹುದಾಗಿದೆ.

ಅದರಂತೆಯೇ ಈ ಸಲ ಮಕ್ಕಳೆಲ್ಲರಿಂದಲೂ ಮನಸ್ಸಿಗೆ ಆನಂದವುಂಟುಮಾಡುವಂತಹ, ಸಮಾಧಾನ ನೀಡುವಂತಹ ಶಾಬ್ದಿಕಸುಖ ಕಡಿಮೆಯೆನಿಸಿದರೂ ಆರ್ಥಿಕ ಮತ್ತು ಬೌದ್ಧಿಕ ಸಹಾಯ ಚೆನ್ನಾಗಿ ಸಿಗುವುದು. ವ್ಯವಸಾಯ ಅಥವಾ ಶಿಕ್ಷಣದಲ್ಲಿ ಅವರ ಪ್ರಗತಿ ಹಾಗು ಪ್ರತಿಷ್ಠೆ ಚೆನ್ನಾಗಿ ಬೆಳೆಯುವವು. ಅವರಲ್ಲೊಬ್ಬನ ವಿಶೇಷ ಉನ್ನತಿಯಾಗಿ ಅವನು ದೂರ

ದೇಶದ ಪ್ರಯಾಣ ಕೈಕೊಳ್ಳುವ ಸಂಭವವೂ ಇದೆ.

ಉದ್ಯೋಗದಲ್ಲಿ ಈ ರಾಶಿಯವರಿಗೆ ಈ ವರ್ಷವು ಲಾಭಸ್ಥಾನದಲ್ಲಿರುವ ಹನ್ನೊಂದನೆಯ ಗುರುವಿನಿಂದಾಗಿ ಅಂದರೆ ಬಲಿಷ್ಠವೂ ಮಿತ್ರ ರಾಶಿಯೂ ಆದ ಸಿಂಹದಲ್ಲಿರುವ ಗುರುವಿನಿಂದಾಗಿ ಭಾರಿ ಯಶೋದಾಯಕವೂ ವಿಪುಲ ಲಾಭ ದಾಯಕವೂ ಆಗಿದೆ. ಅಲ್ಲದೆ ಲಾಭೇಶ ರವಿಯು ವರ್ಷಾರಂಭದಲ್ಲಿಯೆ ಭಾಗ್ಯೇಶ ಬುಧ ಹಾಗು ಕರ್ಮೇಶ ಚಂದ್ರನೊಂದಿಗೆ ದೇಹಸ್ಥಾನದಲ್ಲಿರುವುದರಿಂದ ಉದ್ಯೋಗದಲ್ಲಿ ಮಹದ್ಭಾಗ್ಯೋದಯವಾಗುವುದಲ್ಲದೆ ಕರ್ತೃತ್ವದ ವಿಶೇಷ ವರ್ಚಸ್ಸು ಇತರರ ಮೇಲೆ ಬಿದ್ದು ಲೌಕಿಕದಲ್ಲಿ ಹೆಚ್ಚಳವಾಗುವುದು. ಗುರುವು ಈ ರಾಶಿಯ ತೃತೀಯ ಮತ್ತು ಷಷ್ಠ ಈ ಪರಾಕ್ರಮ ಹಾಗೂ ರಿಪು ಸ್ಥಾನಗಳ ಸ್ವಾಮಿಯಾಗಿರುವರಿಂದ ದುಸ್ಸಾಧ್ಯವೆನಿಸಿದ ದೊಡ್ಡ ದೊಡ್ಡ ಕೆಲಸಗಳು ಅಲ್ಪಾವಧಿಯಲ್ಲಿಯೇ ಯಶಸ್ವಿಯಾಗಿ ಪೂರ್ಣಗೊಂಡು ಇತರರನ್ನು ಚಕಿತಗೊಳಿಸುವವು. ಅವುಗಳ ವಿರುದ್ಧ ಕಾರಸ್ಥಾನ ಮಾಡಲೆತ್ನಿಸಿದವರು ಹಾನಿ ಹೊಂದುವರು. ಬುದ್ಧಿಜೀವಿ, ಶ್ರಮಜೀವಿಗಳಿಬ್ಬರಿಗೂ ಲಾಭ ಹಾಗೂ ಲೌಕಿಕ ದೃಷ್ಟಿಯಿಂದ ಒಂದೇ ಸಮನಾದ ಅನುಕೂಲವಿದೆ. ನೌಕರದಾರರಿಗೆ ಜನೆವರಿ ೧೨ ರಿಂದ ಫೆಬ್ರುವರಿ ೮ ಅಥವಾ ಮಾರ್ಚ್ ೧೯ ರಿಂದ ಎಪ್ರಿಲ್ ೨೮ ಅಥವಾ ಜುಲೈ ೨೬ ರಿಂದ ಸಪ್ಟೆಂಬರ್ ೧೨ರ ವರೆಗಿನ ಅವಧಿಯಲ್ಲಿ ನಿಶ್ಚಿತ ಬಡತಿ ದೊರೆಯುವುದು. ಬದಲಿಯಾದರೆ ಕೆಲಸ ಮತ್ತು ಅಧಿಕಾರದ ದೃಷ್ಟಿಯಿಂದ ಉತ್ತಮವಾದರೂ ಹವಾಮಾನದ ದೃಷ್ಟಿಯಿಂದ ಪ್ರತಿಕೂಲ ಸ್ಥಳಕ್ಕಾಗುವುದು. ವರಿಷ್ಠರು ಆತ್ಮೀಯತೆಯಿಂದ ಕಾಣುವರು. ದೊಡ್ಡ ಜನರಿಂದ ಕರ್ತೃತ್ವ ಹಾಗು ಶಿಸ್ತಿನ ಬಗ್ಗೆ ಪ್ರಶಸ್ತಿಯೂ ದೊರೆಯಬಹುದು. ವಿಶೇಷತಃ ಡಿಸೆಂಬರ್ ೧ರ ವರೆಗೆ ಹಾಗು ನಂತರ ಡಿಸೆಂಬರ್ ೨೦ ರಿಂದ ಜನೆವರಿ ೭, ಜನೆವರಿ ೨೬ ರಿಂದ ಫೆಬ್ರುವರಿ ೧೧, ಮಾರ್ಚ್ ೧೧ ರಿಂದ ಎಪ್ರಿಲ್ ೧, ಎಪ್ರಿಲ್ ೧೭ ರಿಂದ ಮೇ ೩, ಮೇ ೨೩ ರಿಂದ ಜೂನ್ ೧೧, ಜುಲೈ ೪ ರಿಂದ ೨೬, ಅಗಸ್ಟ್ ೧೨ ರಿಂದ ೨೯ ಹಾಗು ಸಪ್ಟೆಂಬರ್ ೨೦ ರಿಂದ ಅಕ್ಟೋಬರ್ ೫ರ ವರೆಗಿನ ಕಾಲವು ಲಾಭಕ್ಕೆ ಮತ್ತು ಭಾಗ್ಯ ವರ್ಧಕ ಘಟನೆಗಳು ಜರುಗುವುದಕ್ಕೆ ಹೆಚ್ಚು ಚೆನ್ನಾಗಿದೆ. ದೊಡ್ಡದೊಂದು ದೇವತಾಕಾರ್ಯ ಸಂಭವಿಸಬಹುದಾಗಿದೆ. ಲಾಭದ ಮಾನದಿಂದ ಸಂಗ್ರಹ ಮಾತ್ರ ಕಡಿಮೆಯೆ. ವಾಹನ, ಆಪ್ತರು ಮತ್ತು ಆಶ್ರಿತರಿಂದ ತೊಂದರೆ ಮತ್ತು ಹಾನಿ. ಆಪ್ತರಲ್ಲಿ ಇಬ್ಬರು ಸ್ತ್ರೀಯರು ತುಂಬ ದ್ವೇಷ ಮಾಡುವರು.

ದಾವೆ, ಖಟ್ಲೆ ಹಾಗು ಇತರ ಸ್ಪರ್ಧೆಯ ಕೆಲಸಗಳಲ್ಲಿ ರಿಪುಸ್ಥಾನದಲ್ಲಿಯ ಶನಿಯಿಂದಾಗಿ ಹೆಚ್ಚಿನವು ಯಶಸ್ವಿಯಾಗುವವು ಮಾತ್ರವಲ್ಲ, ಜನೆವರಿ ೧೨ರ ನಂತರ ನಿರ್ಣಯ ದೊರೆತರೆ ಸಿಗುವ ಯಶಸ್ಸು ಅದ್ಭುತ.

ಈ ರಾಶಿಯ ಗರ್ಭವತಿಯರು ಜನೆವರಿ ೧೨ರ ಮೊದಲು ಪ್ರಸೂತರಾದರೆ ಹೆರಿಗೆ ಸುಲಭವಲ್ಲದೆ ಪುತ್ರಪ್ರಾಪ್ತಿಯೂ ಆಗುವುದು, ಆದರೆ ಅನಂತರವಾದರೆ ಸುಲಭ ಪ್ರಸೂತಿಯಾದರೂ ಕನ್ಯಾ ಜನನದ ಯೋಗವಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಜನೆವರಿ ೧೨ರ ಮೊದಲು ಅಥವಾ ಜನೆವರಿ ೨೬ ರಿಂದ ಫೆಬ್ರುವರಿ ೧೧, ಮಾರ್ಚ್ ೧೧ ರಿಂದ ಎಪ್ರಿಲ್ ೧, ಮೇ ೨೩ ರಿಂದ ಜೂನ್ ೧೧, ಜುಲೈ ೪ ರಿಂದ ೨೬, ಅಗಸ್ಟ್ ೧೨ ರಿಂದ ೨೯ ಹಾಗು ಸಪ್ಟೆಂಬರ್ ೨೦ ರಿಂದ ಅಕ್ಟೋಬರ್ ೫ರ ವರೆಗಿನ ಅವಧಿಯಲ್ಲಾದರೆ ನಿಶ್ಚಿತ ಉತ್ತೀರ್ಣರಾಗುವರು.

ದೀಪಾವಳಿಯು ನಮ್ಮೆಲ್ಲ ಗ್ರಾಹಕವೃಂದಕ್ಕೆ ಸುಖಸಮೃದ್ಧಿಯನ್ನೀಯಲಿ !

ರೈತ ಬಾಂಧವರೇ . . .

ಘಂಟೆ ಛಾಪ ಮಿಶ್ರಣ ಗೊಬ್ಬರವನ್ನೇ ಉಪಯೋಗಿಸಿರಿ !

ನಮ್ಮಲ್ಲಿ

- ☐ ಮಿಶ್ರಣ ಗೊಬ್ಬರ
- ☐ ಸುಪರ್ ಫಾಸ್ಫೇಟ್ ಗೊಬ್ಬರ [ಶೀಲ ಬಂದ ಚೀಲಗಳು]
- ☐ [ಥಾಲಿಡಾಲ್] ಕ್ರಿಮಿನಾಶಕ ಔಷಧ (ಎಲ್ಲ ಬೆಳೆಗಳಿಗೂ ಉಪಯುಕ್ತ)
- ☐ ತಗಣಿ ಎಣ್ಣೆ [ಡಾಲ್ಫ್]

ಇಂದೇ ಆರ್ಡರ್ ಬರೆಯಿರಿ !

ಇವು ಯೋಗ್ಯ ಬೆಲೆಗೆ ದೊರೆಯುತ್ತವೆ.

ತಯಾರಕರು : **ವಿಜಯಾ ಫರ್ಟಿಲಾಯಝರ ಕಂ,**

ಜೋಳದ ಓಣಿ, ಹುಬ್ಬಳ್ಳಿ - ೨೦. ಫೋನ್ ನಂ. 2173

ಡಿಪೋ : ಗಾಂಧಿ ಮಾರ್ಕೆಟ್, ಹುಬ್ಬಳ್ಳಿ-೨೦. ಫೋನ್ ನಂ 3676 ಪ್ರೊ: ವ್ಹಿ. ಜಿ. ಆಳಗುಂಡಗಿ

ವೃಶ್ಚಿಕ

ಈ ರಾಶಿಯುವರಿಗೆ ಈ ವರ್ಷ ಪ್ರಾಪಂಚಿಕ ದೃಷ್ಟಿಯಿಂದ ಸಾಧಾರಣ ಸುಖಕರವಾದರೆ ಔದ್ಯೋಗಿಕ ವಿಷಯುಗಳಲ್ಲಿ ಒಳ್ಳೆಯು ಯುಶಸ್ಸಿನದೂ ತುಂಬ ಲಾಭದಾಯುಕವೂ ಆಗಿದೆಯೆಂಬುದರಲ್ಲಿ ಸಂದೇಹವಿಲ್ಲ.

ರಾಶಿಸ್ವಾಮಿ ಮಂಗಳನು ವರ್ಷಾರಂಭದಲ್ಲಿ ದ್ವಿತೀಯು ಸ್ಥಾನದಲ್ಲಿ ಮಿತ್ರರಾಶಿಯಾದ ಧನುವಿನಲ್ಲಿರುವುದಲ್ಲದೆ ಗುರುವಿನಿಂದ ದೃಷ್ಟನಾಗಿರುವುದರಿಂದ ಒಟ್ಟನಲ್ಲಿ ಈ ರಾಶಿಯುವರ ಆರೋಗ್ಯ ಸರಿಯಿರುವುದಾದರೂ ಜೂನ್ ೧೨ ರಿಂದ ಜುಲೈ ೨೬ರ ವರೆಗಿನ ಅವಧಿಯಲ್ಲಿ ತುಸು ಕ್ಲೇಶವುಂಟಾಗುವ ಸಂಭವವೂ ಇದೆ. ಕೆಲವು ವಿಷಯುಗಳಲ್ಲಿ ಮಾನಸಿಕ ಕಷ್ಟವನ್ನು ಸಹಿಸಬೇಕಾಗುವುದು. ಹಾಗೂ ಮನಸ್ಸಿಲ್ಲದ ಕೆಲವು ಕೆಲಸಗಳಲ್ಲಿ ಕೇವಲ ಲೌಕಿಕಾರ್ಥ ವೆಚ್ಚ ಮಾಡಬೇಕಾದ ಪ್ರಸಂಗ ಬರಬಹುದು. ಅವಶ್ಯಕ ವಿಷಯುಗಳಲ್ಲಿ ಒಟ್ಟನಲ್ಲಿ ಒಳ್ಳೆಯು ದೇಹಸುಖ ದೊರೆಯುುವುದು. ಅನೇಕ ಸಲ ಪ್ರಿಯು ಜನರ ಸಹವಾಸಸುಖ ಲಭಿಸುವುದು.

ಹೆಂಡತಿಯು ಆರೋಗ್ಯವು ಡಿಸೆಂಬರ್ ೩೧ ರಿಂದ ಫೆಬ್ರುವರಿ ೮ ಮತ್ತು ಏಪ್ರಿಲ್ ೨೮ ರಿಂದ ಜೂನ್ ೧೧ರ ವರೆಗಿನ ಅವಧಿಯಲ್ಲಿ ತುಸು ಕೆಡುವ ಸಂಭವವಿದೆ. ಆದರೆ ಇತರ ವೇಳೆಯಲ್ಲಿ ಅವಳು ನಿರೋಗಿಯಾಗಿರುವಳಲ್ಲದೆ ಉಭಯುತರಲ್ಲೂ ಒಳ್ಳೆಯು ಮತ್ತೈಕ್ಯವಿರುವುದು. ಆದರೆ ಬಹುತರ ವಿಷಯುಗಳಲ್ಲಿ ಅವಳ ವರ್ಚಸ್ಸು ವಿಶೇಷವಾಗಿರುವುದು ಕಂಡುಬರುವುದು.

ಈ ರಾಶಿಯು ಅವಿವಾಹಿತರ ವಿವಾಹವಾಗುವುದಿದ್ದರೆ ಅದಕ್ಕೆ ಮಧ್ಯಮ ಪ್ರತಿಯು ಬಾಸಿಂಗ ಬಲವಿದೆಯಾದ್ದರಿಂದ ವಿವಾಹ ಹೊಂದಲು ಬಹಳ ಪ್ರಯಾಸಪಡಬೇಕಾಗುವುದು. ಆದರೆ ಇದ್ದುದರಲ್ಲಿಯೆ ನವೆಂಬರ್ ೨೩ರ ವರೆಗೆ ಹಾಗೂ ಅನಂತರ ಜನವರಿ ೧ ರಿಂದ ಫೆಬ್ರುವರಿ ೮, ಮಾರ್ಚ್ ೧೯ ರಿಂದ ಏಪ್ರಿಲ್ ೨೮ ಮತ್ತು ಸಪ್ಟೆಂಬರ್ ೧೨ರ ಮುಂದಿನ ಕಾಲವು ಅನುಕೂಲವಾಗಿರುವುದರಿಂದ ಕಡಿಮೆ ಪ್ರಯಾಸದಿಂದಲೇ ವಿವಾಹ ಹೊಂದಿಕೆಯಾಗಬಹುದಾಗಿದೆ. ವಧೂವರರು ರೂಪದಿಂದ ಸಾಮಾನ್ಯರಾಗಿದ್ದರೂ ಗುಣದಿಂದ ಉತ್ತಮರಾಗಿರುವರಲ್ಲದೆ ಮುಂದೆ ಕೂಡ ಅವರಲ್ಲಿ ಒಳ್ಳೆಯು ಸಾಮರಸ್ಯವಿರುವುದು. ಅದರಂತೆಯೇ ಈ ರಾಶಿಯುವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಅದಕ್ಕೂ ಮಧ್ಯಮ ಬಾಸಿಂಗಬಲವೇ ಇದೆ. ಅಲ್ಲದೆ ಸುತಸ್ಥಾನದಲ್ಲಿ ಮೊದಲೇ ಇರುವ ಶನಿಯು ಜೊತೆಗೆ ಜನೆವರಿ ೧೨ ರಿಂದ ರಾಹುವೂ ಸೇರಿಕೊಳ್ಳುವುದರಿಂದ ಅನೇಕರ ವಿವಾಹ ನಿಶ್ಚಯವಾದ ನಂತರವೂ ಮುರಿದುಹೋಗುವ ಸಂಭವವಿದೆ. ಯಾಕಂದರೆ ಪ್ರತಿಪಕ್ಷಿಗಳಿಂದ ಅಸಾಧ್ಯ ಕರಾರುಗಳು ಮುಂಚೆ ಬರಬಹುದು. ಇದ್ದುದರಲ್ಲಿಯೆ, ಡಿಸೆಂಬರ್ ೧ರ ವರೆಗೆ ಇಲ್ಲವೆ ಡಿಸೆಂಬರ್ ೨೬ ರಿಂದ ಜನೆವರಿ ೨೧, ಫೆಬ್ರುವರಿ ೧೪ ರಿಂದ ಮಾರ್ಚ್ ೧೦, ಏಪ್ರಿಲ್ ೨ ರಿಂದ ೨೬, ಮೇ ೨೧ ರಿಂದ ಜೂನ್ ೧೪, ಜುಲೈ ೯ ರಿಂದ ಆಗಸ್ಟ್ ೨ ಹಾಗೂ ಆಗಸ್ಟ್ ೨೬ ರಿಂದ ಸಪ್ಟೆಂಬರ್ ೨೦ ರ ವರೆಗಿನ ಅವಧಿಯಲ್ಲಿ ವಿವಾಹ ಹೊಂದಿದರೆ ಸಹಸಾ ಮುರುಗಡೆಯಾಗುವ ಭಯುವಿಲ್ಲ. ಸೊಸೆ ಅಥವಾ ಅಳಿಯು ರೂಪಕ್ಕಿಂತ ಗುಣದಿಂದಲೇ ಹೆಚ್ಚು ಮನಕ್ಕೊಪ್ಪುವಂತಿರುವರು.

ಸುತಸ್ಥಾನದಲ್ಲಿ ಶನಿ ಮತ್ತು ರಾಹು ಹಾಗು ಸುತೇಶ ಗುರುವು ಬಲಿಷ್ಠವೂ ಮಿತ್ರರಾಶಿಯೂ ಆದ ಸಿಂಹದಲ್ಲಿದ್ದರೂ ಈ ಸ್ಥಾನದಿಂದ ಆರನೆಯುವನು ಈ ಯೋಗವು ಮಕ್ಕಳ ಉನ್ನತಿ, ಯುಶಸ್ಸು ಮತ್ತು ಲೌಕಿಕಕ್ಕೆ ಉತ್ತಮವಾಗಿರುವುದಾದರೂ ಮಕ್ಕಳಿಂದ ಸ್ವತಃಕ್ಕೆ ಹೆಚ್ಚಿನ ಸುಖ ಸಿಗಲಾರದು. ಅವರೆಲ್ಲರ ವರ್ತನೆ ಹೆಚ್ಚು ಕಡಿಮೆ ಮನಸ್ಸಿನ ವಿರುದ್ಧವೇ ಇರುವುದು. ಅಲ್ಲದೆ ಫೆಬ್ರುವರಿ ೮ ರಿಂದ ಮಾರ್ಚ್ ೧೨ರ ವರೆಗಿನ ಅವಧಿಯಲ್ಲಿ ಅವರಲ್ಲೊಬ್ಬನ ಆರೋಗ್ಯಕ್ಕೆ ಕ್ಲೇಶ ಉಂಟಾಗುವ ಸಂಭವವಿದೆ.

ಉದ್ಯೋಗದಲ್ಲಿ ಉತ್ಕರ್ಷಕ್ಕೆ ಮಿತ್ರ ಮತ್ತು ಬಲಿಷ್ಠ ರಾಶಿಯಾದ ಸಿಂಹದಲ್ಲಿರುವ ಹತ್ತನೆಯು ಗುರು ಬಹಳ ಉತ್ತಮನಾಗಿರುವನಲ್ಲದೆ ಧನ ಮತ್ತು ಸುಖಸ್ಥಾನಗಳಾದ ದ್ವಿತೀಯು ಹಾಗು ಚತುರ್ಥಗಳ ಮೇಲಿರುವ ಅವನ ದೃಷ್ಟಿಯಿಂದಾಗಿ ಕುಟುಂಬದಲ್ಲಿಯು ಕೆಲವರ ಉತ್ಕರ್ಷಕ್ಕೂ ಪೋಷಕರಾಗಿರುವನಲ್ಲದೆ ದ್ರವ್ಯ ಮತ್ತು ಉಚ್ಚ ವಸ್ತುಗಳ ವಿಪುಲ ಸಂಗ್ರಹಕ್ಕೂ ಅನುಕೂಲ ಯೋಗವಿದೆ. ಆದರಂತೆಯೆ ಸ್ಥಿರಾಸ್ತಿಯಲ್ಲಿಯು ಉತ್ಪನ್ನದಿಂದಲೂ ತುಂಬ ಲಾಭ ದೊರೆಯುುವುದು. ಅಲ್ಲದೆ ಜನ್ಮಕುಂಡಲಿಯಲ್ಲಿ ಗುರುವಿನ ಬಲಾನುಸಾರ ಊರಲ್ಲಿ, ರಾಜ್ಯದಲ್ಲಿ, ಅಥವಾ ರಾಷ್ಟ್ರದಲ್ಲಿ ವಿಶೇಷ ಪ್ರಸಿದ್ಧಿಗೆ ಬರುವ ಸುಯೋಗವಿದೆ. ಹಿರಿಯು ಮುಂದಾಳುಗಳು, ದೊಡ್ಡ ಸಿರಿವಂತರು ಹಾಗು ಶ್ರೇಷ್ಠ ಅಧಿಕಾರಿಗಳೊಂದಿಗೆ ಉದ್ಯೋಗದಲ್ಲಿ ಮೇಲಿಂದ ಮೇಲೆ ಸಂಬಂಧ ಬರುವುದರಿಂದ ಸಾಮಾಜಿಕ ದರ್ಜೆ ಹೆಚ್ಚುವುದಲ್ಲದೆ ಇಂಥ ಒಬ್ಬ ವ್ಯಕ್ತಿಯೊಂದಿಗೆ ಹೊಸ ಆಪ್ತ ಸಂಬಂಧವುಂಟಾಗುವ ಸಂಭವವಿದೆ. ವರ್ಷಾರಂಭದಲ್ಲಿಯೆ ಲಾಭೇಶ ಬುಧನು ವ್ಯಯುದಲ್ಲಿ ಹಾಗೂ ವ್ಯಯೇಶ ಶುಕ್ರನು ಲಾಭದಲ್ಲಿರುವುದರಿಂದ ಬಹಳ ಲಾಭವಾಗುವುದರೊಂದಿಗೆಯೆ ವೆಚ್ಚದ ಪ್ರಸಂಗಗಳೂ ಮೇಲಿಂದ ಮೇಲೆ ಬರುವವಾದರೂ ಈ ವೆಚ್ಚ ವ್ಯರ್ಥವೆನಿಸದೆಯೆ ಯುಥೋಚಿತವೂ ಉದ್ದೇಶಸಾಧಕವೂ ಎನಿಸುವುದು. ವ್ಯಾಪಾರಿಗಳು ಅಥವಾ ಶ್ರಮಜೀವಿ ಉದ್ಯೋಗಸ್ಥರಿಗಿಂತ ಬುದ್ಧಿಜೀವಿಗಳೂ ಕಲಾವಿದರೂ ಆದವರಿಗೆನೇ ಲಾಭ ಮತ್ತು ಲೌಕಿಕ ಹೆಚ್ಚು. ಅದರಂತೆಯೆ, ನೌಕರದಾರರಿಗೆ ಡಿಸೆಂಬರ್ ೩೧ ರಿಂದ ಫೆಬ್ರುವರಿ ೮ ಇಲ್ಲವೆ ಸಪ್ಟೆಂಬರ್ ೧೨ರ ನಂತರ ನಿಶ್ಚಿತ ಬಡತಿ ದೊರೆಯುುವುದು. ಬದಲಿಯಾದರೆ ಮಾತ್ರ ತೀರ ಪ್ರತಿಕೂಲ ಸ್ಥಳಕ್ಕಾಗುವುದು. ವರಿಷ್ಠರ ಕೃಪೆ ಚೆನ್ನಾಗಿರುವುದಾದರೂ ಕೈಕೆಳಗಿನವರು ತೀರ ತೊಂದರೆ ಕೊಡುವರು. ಮಿತ್ರರು ಕೆಲವೊಮ್ಮೆ ಅತಿ ಆದರದಿಂದಾದರೆ ಮತ್ತೆ ಹಲವು ಸಲ ತೀರ ತಿರಸ್ಕಾರದಿಂದ ವರ್ತಿಸುವರು. ಯಾತ್ರೆ ಅಥವಾ ದೂರ ಪ್ರವಾಸದ ಯೋಗ ಕಡಿಮೆಯೆ. ಲೇಖನ ಕೆಲಸಗಳಿಗಿಂತ ಪ್ರತ್ಯಕ್ಷ ಭೆಟ್ಟಿ ಹೆಚ್ಚು ನೆಟ್ಟಗೆ. ಸುಳ್ಳು ಸಾಕ್ಷಿ ಹೇಳಿದ ಇಲ್ಲವೆ ಖೊಟ್ಟಿ ಕಾಗದ ತಯಾರಿಸಿದ ಲೋಕಾಪವಾದ ಬರುವ ಸಂಭವವಿದೆ.

ದಾವೆ, ಖಟ್ಲೆ ಇಲ್ಲವೆ ಹಾಗೂ ಸ್ಪರ್ಧೆಯು ಕೆಲಸಗಳಲ್ಲಿ ಜನೆವರಿ ೧೨ರ ವರೆಗೆ ತೀರ್ಪು ದೊರೆತರೆ ಭಾರಿ ಯುಶಸ್ಸು ಸಿಗುವುದಾದರೆ ಅನಂತರ ಪ್ರತಿಕೂಲವಾಗುವ ಸಂಭವವೇ ಹೆಚ್ಚು; ಆದರೆ ಒಂದು ವೇಳೆ ಕೆಲವು ಪ್ರಕರಣಗಳಲ್ಲಿ ಅನುಕೂಲ ತೀರ್ಪು ದೊರೆತರೂ ಪ್ರತಿಪಕ್ಷಿಗಳು ಮುಂದೆ ಅಪೀಲು ಮಾಡಬಹುದು ಇಲ್ಲವೆ ಇದ್ದ ಸ್ಪರ್ಧೆಯೆ ಹಿಂದಿಗಿಂತಲೂ ಹೆಚ್ಚು ರಭಸದಿಂದ ಮುಂದುವರಿಯುಬಹುದು.

ಈ ರಾಶಿಯು ಗರ್ಭಿಣಿಯುರು ಜನೆವರಿ ೧೨ರ ಮೊದಲೇ ಪ್ರಸೂತರಾದರೆ ಹೆರಿಗೆಯುು ತುಸು ಕಷ್ಟಕರ; ಅನಂತರವಾದರೆ ಈ ಕಷ್ಟ ಹೆಚ್ಚೆನಿಸುವುದಲ್ಲದೆ ಬಹುತರರಿಗೆ ಕನ್ಯಾಜನನವೇ ಆಗುವುದು.

ಈ ರಾಶಿಯು ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ್ ೧ ರಿಂದ ೨೦, ಜನೆವರಿ ೬ ರಿಂದ ೨೬, ಫೆಬ್ರುವರಿ ೧೧ ರಿಂದ ಮಾರ್ಚ್ ೧೧, ಮೇ ೩ ರಿಂದ ೨೩, ಜೂನ್ ೧೧ ರಿಂದ ಜುಲೈ ೪, ಜುಲೈ ೨೬ ರಿಂದ ಆಗಸ್ಟ್ ೧೨ ಹಾಗು ಆಗಸ್ಟ್ ೨೯ ರಿಂದ ಸಪ್ಟೆಂಬರ್ ೨೦ರ ವರೆಗಿನ ಅವಧಿಯಲ್ಲಾದರೆ ತೃತೀಯು ಶ್ರೇಣಿಯಲ್ಲಾದರೂ ಉತ್ತೀರ್ಣರಾಗಬಹುದು.

ಧನು

ಈ ರಾಶಿಯುವರಿಗೆ ಈ ವರ್ಷವು ಕೆಲವು ಚಿಕ್ಕಪುಟ್ಟ ವಿಷಯುಗಳನ್ನುಳಿದರೆ ಒಳ್ಳೆಯು ಸುಖಕರವೂ ಉತ್ತಮ ಲಾಭದಾಯುಕವೂ ಭಾಗ್ಯವರ್ಧಕವೂ ಆಗಿರುವುದು ಅನುಭವಕ್ಕೆ ಬರದಿರದು.

ಈ ವರ್ಷ ಈ ರಾಶಿಸ್ವಾಮಿ ಗುರುವು ವರ್ಷಾರಂಭದಿಂದ ಅಕ್ಟೋಬರ್ ೧೦ರ ವರೆಗೆ ಒಂಬತ್ತನೆಯುವರಾಗಿ ಭಾಗ್ಯಸ್ಥಾನದಲ್ಲಿ ಮತ್ತು ಬಲಿಷ್ಠವೂ ಪ್ರಸಿದ್ಧಿಸುಲಭವೂ ಆದ ಸಿಂಹರಾಶಿಯಲ್ಲಿರುವನಾದರೆ ಅನಂತರ ಉಳಿದ ದಿನಗಳಲ್ಲಿ ಸಾಮಾನ್ಯ ಮಿತ್ರರಾಶಿಯಾದ ಕನ್ಯೆಯಲ್ಲಿಯಾದರೂ ಹತ್ತನೆಯು ನೈಸರ್ಗಿಕ ಬಲಿಷ್ಠಸ್ಥಾನದಲ್ಲಿರುವುದರಿಂದ ಆರೋಗ್ಯ ಉತ್ತಮವಾಗಿರುತ್ತದೆ.

ಆದರೆ ವರ್ಷವಿಡಿ ಶನಿಯು ನಾಲ್ಕನೆಯವನಾಗಿದ್ದು ಜನೆವರಿ ೧೨ ರಿಂದ ಅವನ ಜೊತೆಗೆ ಸೇರುವ ರಾಹುವಿನಿಂದಾಗಿ ಗೃಹಕಲಹ ತುಂಬ ಹೆಚ್ಚುವುದು ಹಾಗು ಸೋದರರು ಮತ್ತು ನಿಕಟ ಆಪ್ತರು ದ್ವೇಷದಿಂದ ವಿಪರೀತ ತೊಂದರೆಯೀಯುವರು ; ಆದರೂ ಕೊನೆಗೆ ಅವರು ಸೋಲೊಪ್ಪಬೇಕಾಗುವುದು. ಯಾಕೆಂದರೆ ಗುರುವೇ ಚತುರ್ಥೇಶನೂ ಆಗಿದ್ದಾನೆ. ಇತರ ಅವಶ್ಯಕ ವಿಷಯಗಳಲ್ಲಿ ದೇಹಸುಖ ಮಧ್ಯಮ.

ಭಾರ್ಯೇಶ ಬುಧನು ಹನ್ನೊಂದನೆಯವನಾಗಿ ವರ್ಷಾರಂಭದಲ್ಲಿಯೆ ಲಾಭಸ್ಥಾನದಲ್ಲಿರುವುದರಿಂದ ಹಾಗು ಅವನೊಂದಿಗೆ ಗುರುವಿನ ತ್ರಿಕೇಕಾದಶ ನಾಮಕ ಶುಭಯೋಗವಾಗಿರುವುದರಿಂದ ಸ್ತ್ರೀಸುಖವೂ ಉತ್ತಮ. ಉಭಯತರಲ್ಲಿ ಮತ್ತೈಕ್ಯವೂ ಬಹಳ ಉತ್ತಮ. ನವೆಂಬರ್ ೨೩ರ ವರೆಗೆ ಹಾಗು ನಂತರ ಫೆಬ್ರುವರಿ ೮ ರಿಂದ ಮಾರ್ಚ್ ೧೯ ಹಾಗು ಜುಲೈ ೨೭ ರಿಂದ ಸಪ್ಟೆಂಬರ್ ೧೨ರ ವರೆಗಿನ ಕಾಲದಲ್ಲಿ ಹೆಂಡತಿಯ ಆರೋಗ್ಯ ತುಸು ಕಿರಿಕಿರಿಯದೆನಿಸಿದರೂ ಇನ್ನಿತರ ಸಮಯದಲ್ಲಿ ಅವಳು ಒಳ್ಳೆಯ ನಿರೋಗಿಯಾಗಿರುವಳು. ಆದರೆ ಅಪರಿಹಾರ್ಯ ಕಾರಣವೊಂದರಿಂದಾಗಿ ಜೂನ್ ೧೧ ರಿಂದ ಜುಲೈ ೨೭ರ ವರೆಗಿನ ಅವಧಿಯಲ್ಲಿ ಅವಳ ಸಹವಾಸದಲ್ಲಿ ವ್ಯತ್ಯಯವುಂಟಾಗಬಹುದಾಗಿದೆ.

ಈ ರಾಶಿಯ ಅವಿವಾಹಿತರ ವಿವಾಹವಾಗುವುದಿದ್ದರೆ ಅದಕ್ಕೆ ಉತ್ತಮ ಬಾಲಸಿಂಗಬಲವಿದೆ. ಆದರೂ ಅದಾಗುವ ವರೆಗೂ ಕೆಲವು ವಿಘ್ನಸಂತೋಷಿಗಳು ಅನೇಕ ಅಡೆತಡೆಗಳನ್ನು ತಂದೊಡ್ಡುವರಲ್ಲದೆ ವರ ಅಥವಾ ವಧುವಿನ ಬಗೆಗೆ ಪ್ರತಿಪಕ್ಷಿಯ ಮನಸ್ಸನ್ನು ಕಲುಷಿತಗೊಳಿಸುವ ಅಶ್ಲಾಘ್ಯ ಪ್ರಯತ್ನವೂ ನಡೆಯುವುದು. ವಧೂವರರು ರೂಪದಿಂದ ಒಳ್ಳೆಯ ಸುಂದರರೂ ಗುಣದಿಂದ ಉತ್ತಮ ಸುಸಂಸ್ಕೃತರೂ ಆಗಿರುವರಲ್ಲದೆ ವಿವಾಹೋತ್ತರದಲ್ಲಿ ಬೇಗನೆ ಉತ್ಕರ್ಷ ಹೊಂದುವಂತಹ ಸುದೈವಿಗಳೂ ಆಗಿದ್ದು ಅನುಭವಕ್ಕೆ ಬರುತ್ತದೆ. ಅದರಂತೆಯೆ, ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಅದಕ್ಕೆ ಅಕ್ಟೋಬರ್ ೧೦ರ ವರೆಗೆ ಬಹಳ ಉತ್ತಮ ಬಾಸಿಂಗಬಲವಿದೆ. ಜನೆವರಿ ೧೨ರ ನಂತರ ವಿವಾಹ ಅಲ್ಪಾಯಾಸದಿಂದ ಹೊಂದಿ ಮುಂದೆ ನಿಶ್ಚಿತ ಮುಹೂರ್ತಕ್ಕೆ ನಿರ್ವಿಘ್ನ ರೀತಿಯಿಂದ ವ್ಯವಸ್ಥಿತವಾಗಿ ಜರುಗುವುದು. ಆದರೆ ನಾಲ್ಕನೆಯ ಶನಿ ಮತ್ತು ರಾಹುವಿನಿಂದಾಗಿ ಅಂದಾಜಿಗಿಂತ ವೆಚ್ಚ ಬಹಳ ಹೆಚ್ಚಾಗಬಹುದು. ಸಂಬಂಧವು ಲೋಕಪ್ರಸಿದ್ಧ ಮನೆತನವೊಂದರೊಂದಿಗೆ ಬೆಳೆದು ಬರಬಹುದಲ್ಲದೆ ಸೊಸೆ ಅಥವಾ ಅಳಿಯ ಸುಂದರ, ಸದ್ಗುಣಿಯಾದರೂ ತುಸು ಕೋಪಿಷ್ಠ ಸ್ವಭಾವದವರು. ಆದರೆ ಅತ್ಯಂತ ಬುದ್ಧಿವಂತರೂ ಪೂರ್ಣ ಮನಕ್ಕೊಪ್ಪುವಂತಹರೂ ಆಗಿರುವರು. ಅದರಂತೆಯೆ ಅವರು ಒಳ್ಳೆಯ ಭಾಗ್ಯವಂತರೂ ಆಗಿರುವುದು ಮುಂದೆ ಅನುಭವಕ್ಕೆ ಬರುವುದು.

ಮಕ್ಕಳಲ್ಲಿ ಪ್ರತಿಯೊಬ್ಬರ ಶೈಕ್ಷಣಿಕ ಹಾಗು ವ್ಯಾವಸಾಯಿಕ ಉತ್ಕರ್ಷ ಚೆನ್ನಾಗಿ ಆಗುವುದಲ್ಲದೆ ಸ್ವತಃಕ್ಕೆ ಪ್ರತಿಯೊಬ್ಬರಿಂದಲೂ ಶಾಬ್ದಿಕ ಸುಖಕ್ಕಿಂತಲೂ ಆರ್ಥಿಕ ಹಾಗು ಬೌದ್ಧಿಕ ಸಹಾಯ ಉತ್ತಮ ರೀತಿಯಲ್ಲಿ ದೊರೆಯುವುದು. ಆದರೆ ಜನೆವರಿ ೧೨ರ ವರೆಗೆ ಒಬ್ಬನ ಅನಾರೋಗ್ಯ ಅಥವಾ ದುರ್ವರ್ತನೆಯಿಂದಾಗಿ ತುಂಬ ತೊಂದರೆಯಾಗುವ ಸಂಭವವಿದೆ. ಮಕ್ಕಳ ಉತ್ಕರ್ಷಕ್ಕೆ ಫೆಬ್ರುವರಿ ೮ರ ವರೆಗಿನ ಹಾಗೂ ನಂತರ ಮಾರ್ಚ್ ೧೯ ರಿಂದ ಎಪ್ರಿಲ್ ೨೮, ಜೂನ್ ೧೧ ರಿಂದ ಜುಲೈ ೨೭ ಹಾಗು ಸಪ್ಟೆಂಬರ್ ೧೨ರ ನಂತರದ ಕಾಲ ವಿಶೇಷ ಉತ್ತಮವಾಗಿದೆ.

ಉದ್ಯೋಗದಲ್ಲಿ ಈ ವರ್ಷ ಗುರುಬಲದಿಂದಾಗಿ ಅತ್ಯಂತ ತೇಜಿಯಿರುತ್ತದೆ. ನಾಲ್ಕನೆಯ ರಾಹು ಮತ್ತು ಶನಿ ಗೃಹ ಮತ್ತು ಆಪ್ತಸುಖಕ್ಕೆ ಅನುಕೂಲರಲ್ಲವಾದರೂ ಸ್ಥಾವರದಲ್ಲಿ ಹೆಚ್ಚಳಕ್ಕೆ ಮತ್ತು ಸ್ವಕೀಯರಿಗಿಂತ ಪರಕೀಯರಿಂದಲೇ ಹೆಚ್ಚು ಉತ್ತಮ ಸಹಾಯ ದೊರೆಯುವುದಕ್ಕೆ ಅನುಕೂಲರಾಗಿದ್ದಾರೆ. ಬುದ್ಧಿಜೀವಿಗಳಿಗಿಂತ ಶ್ರಮಜೀವಿಗಳೂ ಕಲಾವಿದರೂ ವ್ಯಾಪಾರಾದಿ ಉದ್ಯೋಗದಲ್ಲಿ ತೊಡಗಿರುವವರೂ ಆದವರಿಗೆಯೆ ಯಶಸ್ಸು ಮತ್ತು ಲಾಭ ಹೆಚ್ಚು. ಪಾಲುಗಾರಿಕೆಯುಳ್ಳವರಿಗೂ ಅನುಕೂಲವಿದೆ. ಅದರಂತೆಯೆ, ನೌಕರದಾರರರಿಗೆ ಜನೆವರಿ ೧೨ರ ನಂತರ ವರಿಷ್ಠರಿಂದ ತುಸು ತೊಂದರೆಯಾಗುತ್ತಿರುವುದಾದರೂ ಬಡತಿ ದೊರೆಯುವುದು ನಿಶ್ಚಿತ ಹಾಗು ಭಾಗ್ಯ ಮತ್ತು ಲಾಭದಲ್ಲಿ ಹೆಚ್ಚಳವಾಗುವುದು. ಬದಲಿಯಾದರೆ ಅದು ಅಪೇಕ್ಷೆಗಿಂತಲೂ ಹೆಚ್ಚು ಸುಖ ಸೌಕರ್ಯಗಳುಳ್ಳ ಸ್ಥಳಕ್ಕಾಗುವುದು. ಕೈಕೆಳಗಿನವರ ವರ್ತನೆ ಚೆನ್ನಾಗಿರುವುದು ; ಆದರೆ ಅವರಲ್ಲಿ ಸ್ತ್ರೀಯರೂ ಇದ್ದರೆ ಒಬ್ಬಳ ವಿಷಯದಲ್ಲಿ ನಿಜವೋ ಸುಳ್ಳೋ ಒಂದು ಲೋಕಾಪವಾದ ಮಾತ್ರ ಬರುವ ಭಯವಿದೆ. ವಿಶೇಷತಃ ಡಿಸೆಂಬರ್ ೧ ರಿಂದ ೨೬, ಜನೆವರಿ ೨೧ ರಿಂದ ಫೆಬ್ರುವರಿ ೧೪, ಮಾರ್ಚ್ ೧೦ ರಿಂದ ಎಪ್ರಿಲ್ ೨, ಎಪ್ರಿಲ್ ೨೭ ರಿಂದ ಮೇ ೨೧, ಜೂನ್ ೧೪ ರಿಂದ ಜುಲೈ ೯, ಅಗಸ್ಟ್ ೨ ರಿಂದ ೨೭ ಹಾಗು ಸಪ್ಟೆಂಬರ್ ೨೦ ರಿಂದ ಅಕ್ಟೋಬರ್ ೧೫ರ ವರೆಗಿನ ಕಾಲವು ಲಾಭಕ್ಕೆ, ಭಾಗ್ಯ ಮತ್ತು ಧರ್ಮಕ್ಕೆ ಪೂರಕವಾಗಿದೆ. ವಾಹನಸುಖ ಮತ್ತು ಮಿತ್ರಸುಖ ಸಾಧಾರಣವೆ. ಎರಡು ಅಥವಾ ನಾಲ್ಕು ಸಲ ಮಹತ್ವದ ಕಾರ್ಯಕ್ಕಾಗಿ ದೂರ ಪ್ರವಾಸ ಜರುಗಿ ಅದರಲ್ಲಿಯ ಉದ್ದೇಶ ಸಾಧ್ಯವಾಗುವುದು. ಒಂದೆರಡು ಯಾತ್ರೆಗಳೂ ನಡೆಯುವ ಸಂಭವವಿದೆ. ಇಚ್ಛಿತ ಧಾರ್ಮಿಕ ಮತ್ತು ಮಂಗಲಕಾರ್ಯಗಳು ಯಥಾಸಾಂಗ ನೇರವೇರುವವು.

ದಾವೆ, ಖಟ್ಲೆ ಹಾಗು ಇತರ ಸ್ಪರ್ಧೆಯ ಕೆಲಸಗಳಲ್ಲಿ ಹೆಚ್ಚಿನವುಗಳಲ್ಲಿ ಯಶಸ್ಸು ನಿಶ್ಚಿತ; ಆದರೆ ಜನೆವರಿ ೧೨ರ ನಂತರ ಅದಕ್ಕಾಗಿ ಬಹಳ ಕಷ್ಟ ಹಾಗು ವೆಚ್ಚವನ್ನು ಸಹಿಸಬೇಕಾಗುವುದು.

ಈ ರಾಶಿಯ ಗರ್ಭಿಣಿಯರು ಜನೆವರಿ ೧೨ರ

ದೀಪಾವಳಿಯು ನಮ್ಮೆಲ್ಲ ಗ್ರಾಹಕರಿಗೆ ಸುಖ ಸಮೃದ್ಧಿಯನ್ನು ಕೊಡಲಿ !

ಮೆ॥ ಜವಾಹರ ಸಾ ಮಿಲ್ಲ

ತೊರವಿ ಹಕ್ಕಲ, ಹುಬ್ಬಳ್ಳಿ

PHONE : 3566

ಅವಶ್ಯ ಸಂದರ್ಶಿಸಿರಿ :

ಕೆ ವಾಯ್. ಹಬೀಬ ಎಂಡ್ ಕಂಪನಿ

ಟಿಂಬರ್ ಮರ್ಚಂಟ್, ತೊರವಿ ಹಕ್ಕಲ, ಹುಬ್ಬಳ್ಳಿ

ನಮ್ಮಲ್ಲಿ ಯಾವತ್ತೂ ಇಮಾರತಿಗೆ
ಬೇಕಾಗುವ ಸಾಗವಾನಿ, ಮತ್ತಿ,
ಹೆದ್ದಿ, ಸೀಸಂ, ಹೊನ್ನಿ ವಗೈರೆ
ಜಾತಿಯ ಕಟ್ಟಿಗೆ
ಸೈಜವಾರ ಯೋಗ್ಯ ಬೆಲೆಗೆ ಸಿಗುತ್ತವೆ
ಮತ್ತು
ತಮ್ಮ ಕಟ್ಟಿಗೆಯನ್ನು ತಂದಲ್ಲಿ
ಯೋಗ್ಯ ರೀತಿಯಿಂದ
ಸೈಜ ಪ್ರಕಾರ ಕೊರೆದು ಕೊಡುತ್ತೇವೆ.

ವರೆಗೆ ಪ್ರಸೂತರಾದರೆ ಹೆರಿಗೆ ತುಸು ಕಷ್ಟಕರವೆನಿಸಿದರೂ ಅನಂತರವಾದರೆ ಸುಲಭ ಪ್ರಸೂತಿಯಾಗುವುದು ಹಾಗು ಬಹುತರರರಿಗೆ ಪುತ್ರ ಲಾಭದ ಯೋಗವೇ ಇದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಜನವರಿ ೧೨ರ ಮೊದಲಾದರೆ ಯಶಸ್ಸು ನಿಶ್ಚಿತವಲ್ಲ; ಆದರೆ ಅನಂತರವಾದರೆ ಯಶಸ್ಸು ನಿಶ್ಚಿತವಷ್ಟೇ ಅಲ್ಲ, ಜನವರಿ ೧೨ ರಿಂದ ಫೆಬ್ರುವರಿ ೮, ಮಾರ್ಚ್ ೧೯ ರಿಂದ ಎಪ್ರಿಲ್ ೨೮ ಹಾಗು ಸಪ್ಟೆಂಬರ್ ೧೨ರ ನಂತರವಾದರೆ ಪ್ರಥಮವಲ್ಲದಿದ್ದರೆ ದ್ವಿತೀಯ ಶ್ರೇಣಿಯನ್ನಾದರೂ ಪಡೆಯುವುದು ನಿಶ್ಚಿತ.

ಮಕರ

ಈ ರಾಶಿಯವರಿಗೆ ಈ ವರ್ಷವು ಅಷ್ಟಮ ಗುರುವಿನಿಂದಾಗಿ ಪ್ರತ್ಯಕ್ಷ ಭಾಗ್ಯವರ್ಧಕವಲ್ಲದಿದ್ದರೂ ರಾಶಿಸ್ವಾಮಿ ಶನಿಯು ಪೂರ್ಣ ಪ್ರಬಲನಿರುವುದರಿಂದ ಭಾವೀ ಭಾಗ್ಯಸೂಚಕವೆನಿಸುವಂಥ ಘಟನೆಗಳು ಸಂಭವಿಸಿ-ಮನಸ್ಸಿನ ಉತ್ಸಾಹ ಮಾತ್ರ ಅಬಾಧಿತವಾಗುಳಿಯುವುದೆಂಬುದು ನಿಶ್ಚಿತ.

ವರ್ಷಾರಂಭದಿಂದ ಅಕ್ಟೋಬರ್ ೧೦ರ ವರೆಗೆ ಇರುವ ಎಂಟನೆಯ ಗುರುವಿನಿಂದಾಗಿ ಆರೋಗ್ಯ ವಿಷಯದಲ್ಲಿ ಒಂದಿಲ್ಲೊಂದು ಬಗೆಯ ಕಿರಿಕಿರಿ ಇದ್ದದ್ದೇ ; ಅಲ್ಲದೆ ಜನವರಿ ೧೨ ರ ವರೆಗಿರುವ ನಾಲ್ಕನೆಯ ರಾಹುವಿನಿಂದಾಗಿ ಅದಕ್ಕಾಗಿ ಬಹಳ ವೆಚ್ಚ ಮಾಡುವ ಪ್ರಸಂಗವೂ ಬರಬಹುದು. ಆದರೆ ರಾಶಿಸ್ವಾಮಿ ಶನಿಯು ಮೂರನೆಯವನಾಗಿ ಮಿತ್ರರಾಶಿಯೂ ಗುರುವಿನ ರಾಶಿಯೂ ಆದ ಮೀನದಲ್ಲಿರುವುದರಿಂದಾಗಿ ಹಾಸಿಗ್ಗೆ ಹಿಡಿಯುವಂತಹ ಯಾವುದೇ ಅನಾರೋಗ್ಯವಾಗುವುದಿಲ್ಲ. ಆದರೂ ಆರೋಗ್ಯಕ್ಕಾಗಿ ಗುರುವಿನ ಸಂಪೂರ್ಣ ಅಂದರೆ ೧೯೦೦೦ ಜಪ ಮಾಡಿದರೆ ಯಾವುದೇ ರೋಗಬಾಧೆಯ ಇಲ್ಲವೆ ಪೀಡೆಯ ಭಯವಿಲ್ಲ. ಇತರ ವಿಷಯಗಳಲ್ಲಿ ಜನವರಿ ೧೨ ರಿಂದ ಬಹಳ ಉತ್ತಮ ದೇಹಸುಖ ದೊರೆಯುವುದು. ಅಲ್ಲದೆ ಜನರ ಮೇಲೆ ಒಳ್ಳೆಯ ಪ್ರಭಾವ ಬೀಳುವಂತಹ ಅನೇಕ ಸಾಹಸ ಕೃತ್ಯಗಳು ಸಾಧ್ಯವಾಗುವವು.

ವರ್ಷಾರಂಭದಲ್ಲಿಯೆ ಗುರುವು ಎಂಟನೆಯವನು, ಮಂಗಳನು ನಾಲ್ಕನೆಯವನು ಹಾಗು ಸ್ತ್ರೀಸುಖದರ್ಶಕನಾದ ಶುಕ್ರನು ನೀಚನು ಆಗಿರುವಂಥ ನಿರ್ಬಲ ಗ್ರಹಮಾನದಿಂದಾಗಿ ಸ್ತ್ರೀ-ಸುಖಕ್ಕೆ ಅನೇಕ ಸಲ ಕೆಲವು ನಿರೀಕ್ಷಿತ ಮತ್ತು ಕೆಲವು ಅನಿರೀಕ್ಷಿತ ಅಡೆತಡೆಗಳು ಬರಬಹುದಾಗಿದೆ. ಹೆಂಡತಿಯ ಆರೋಗ್ಯವು ಸಹ ಡಿಸೆಂ-ಬರ್ ೩೧ರ ವರೆಗೆ ಹಾಗು ಮತ್ತೆ ಜುಲೈ ೨೭ ರಿಂದ ಸಪ್ಟೆಂಬರ್ ೧೨ರ ವರೆಗಿನ ಅವಧಿಯಲ್ಲಿ ಸರಿಯಿರಲಾರದು. ಉಭಯತರಲ್ಲೂ ಪರಸ್ಪರರ ವಿಷಯದಲ್ಲಿ ತುಸು ಅಪ್ರೀತಿಯಿರುವುದು. ಆದರೂ ಜನರ ದೃಷ್ಟಿಯಲ್ಲಿ ಈ ಕೊರತೆ ಎದ್ದು ಕಾಣದೆ ಸಾಂಸಾರಿಕ ಕರ್ತವ್ಯಗಳು ವ್ಯವಸ್ಥಿತವಾಗಿಯೇ ನಡೆದುಹೋಗುವವು.

ಈ ರಾಶಿಯ ಅವಿವಾಹಿತರ ವಿವಾಹ ಈ ವರ್ಷ ಆಗುವುದಿದ್ದರೆ ಅದಕ್ಕೆ ವಿಶೇಷ ಆಸೆಯೇ ಇಲ್ಲ. ಯಾಕೆಂದರೆ ಎಂಟನೆಯ ಗುರುವಿನೊಂದಿಗೆ ಇರುವ, ಮೇಲೆಯೇ ಬರೆದ ಯೋಗವು ಬಾಸಿಂಗ ಬಲಕ್ಕೆ ಎಷ್ಟೂ ಅನುಕೂಲವಾಗಿಲ್ಲ. ಆದರೂ ಒಂದು ವೇಳೆ ಯಾರೊಬ್ಬರ ವಿವಾಹವಾದರೆ, ಆದು ಹೊಂದಿ ಮುಗಿಯುವಷ್ಟರಲ್ಲಿಯೇ ಕಣ್ಣೀರು ಕಪಾಳಕ್ಕೆ ಬಂದುಬಿಡುತ್ತದೆ. ಅಲ್ಲದೆ ವಧೂವರರಲ್ಲಿ ಪರಸ್ಪರ ಸಾಮರಸ್ಯವೆಷ್ಟೂ ಇರುವುದಿಲ್ಲ ಮಾತ್ರವಲ್ಲ, ಪ್ರತಿಯಾಗಿ ತಿರಸ್ಕಾರವೇ ಕಂಡುಬರುತ್ತದೆ. ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಅದಕ್ಕೆ ಮಧ್ಯಮ ಪ್ರತಿಯ ಬಾಸಿಂಗಬಲವಿದೆಯಾದ್ದರಿಂದ ಅದನ್ನು ಹೊಂದಿಸಲಿಕ್ಕೆಯೆ ಆಕಾಶ - ಪಾತಾಳಗಳನ್ನು ಒಂದು ಮಾಡಬೇಕಾಗುತ್ತದೆ. ಇಂಥ ಪ್ರಯ-ತ್ನಕ್ಕೆ ಡಿಸೆಂಬರ್ ೧ ರ ವರೆಗಿನ ಹಾಗು ಅನಂ-ತರ ಡಿಸೆಂಬರ್ ೨೩ ರಿಂದ ಜನವರಿ ೨೧, ಎಪ್ರಿಲ್ ೨ ರಿಂದ ೨೭, ಮೇ ೨೧ ರಿಂದ ಜೂನ್ ೧೪, ಜುಲೈ ೯ ರಿಂದ ಅಗಸ್ಟ್ ೨ ಹಾಗು ಅಗಸ್ಟ್ ೨೭ ರಿಂದ ಸಪ್ಟೆಂಬರ್ ೨೦ ರ ವರೆಗಿನ ಕಾಲವು ಅನುಕೂಲವಾಗಿದೆ. ಸೊಸೆ ಇಲ್ಲವೆ ಅಳಿಯ ರೂಪ ಗುಣಗಳೆರಡೂ ವಿಷಯಗಳಲ್ಲಿ ಒಳ್ಳೆಯ ಮನ ಮೊಪ್ಪುವಂತಿರುತ್ತಾರೆ.

ಮದುವೆ – ಹುಚ್ಚು

ಮದುವೆಯಾದರೆ ಹುಚ್ಚು ಬಿಡುವುದೆನ್ನುವಿರೇನು ?
ನಮ್ಮ ಗುಂಡನ ವಿಷಯ ಬಲ್ಲಿರೇನು ?
ಊಟ-ಉಡುಗೆಯ ಬಿಡಿರಿ, ಉದ್ಯೋಗವನು ಮರೆತು
ಸತಿಯ ಬಾಲಾಗಸಿಯುದಾಗಿರುವನು !
—ಎಂ. ಅಕಬರ ಅಲಿ

ಎಲ್ಲ ಮಕ್ಕಳ ಉನ್ನತಿಗೂ ಈ ವರ್ಷವು ಒಟ್ಟಿನಲ್ಲಿ ಚೆನ್ನಾಗಿದೆ; ಅದರಲ್ಲಿಯೇ ಪುತ್ರರಿಗಿಂತ ಪುತ್ರಿಯರಿಗೆ ಹೆಚ್ಚು ಅನುಕೂಲವಾಗಿದೆ. ಅವರಿಂದ ಸ್ವತಃಕ್ಕೆ ಒಳ್ಳೆಯ ಸುಖವೂ ದೊರೆಯುವುದು.

ಉದ್ಯೋಗದಲ್ಲಿ ವ್ಯಾಪದಮಾನದಿಂದ ಲಾಭ ಅಷ್ಟಾಗುವ ಯೋಗವಿಲ್ಲವಾದರೂ ಭಾವೀ ಭಾಗ್ಯಕ್ಕೆ ಪೋಷಕವಾದಂತಹ ಅನೇಕ ಘಟನೆಗಳು ಜರಗುವವು. ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಪ್ರತಿಷ್ಠೆ ಚೆನ್ನಾಗಿ ಹೆಚ್ಚುವುದಲ್ಲದೆ ಅಲ್ಲಿಯ ಪ್ರಮುಖರೊಂದಿಗೆ ವಿಶೇಷ ಸಂಬಂಧ ಬೆಳೆದು ಬರುವುದು. ಲೌಕಿಕ ಹಾಗು ಪ್ರತಿಷ್ಠೆಯನ್ನು ಹೆಚ್ಚಿಸುವಂತಹ ಕೆಲಸಗಳಲ್ಲಿ ಮರ್ಯಾದೆ ದೊರೆಯುವುದು. ವೆಚ್ಚ ಹೆಚ್ಚಾದರೂ ಅದರಲ್ಲಿನ ಉದ್ದೇಶ ಚೆನ್ನಾಗಿ ಸಾಧಿಸುವುದು. ಶುಭಕಾರ್ಯಗಳಲ್ಲಿ ದೊಡ್ಡಿಸ್ತಿಕೆಗೆ ಬಿದ್ದು ಬೇಕೆಂದೇ ಹೆಚ್ಚು ವೆಚ್ಚ ಮಾಡಬೇಕಾಗುವುದಲ್ಲದೆ ಕೆಲವರು ಅದ-ಕ್ಕಾಗಿ ಕೈಗಡ, ಉದ್ದರಿಗಳನ್ನೂ ಮಾಡಬೇಕಾಗಬಹುದು! ಬುದ್ಧಿಜೀವಿಗಳಿಗಿಂತ ಶ್ರಮಜೀವಿ ಹಾಗು ವ್ಯಾಪಾರಿಗಳಿಗೆಯೇ ಈ ವರ್ಷ ಹೆಚ್ಚು ಚೆನ್ನಾಗಿದೆ. ನೌಕರದಾರರಿಗೆ ಜನವರಿ ೧೨ ರ ವರೆಗೆ ತುಸು ತೊಂದರೆಯಾಗಬಹುದು; ಆದರೆ ಅನಂತರ ಒಮ್ಮೆಲೇ ಅಥವಾ ಶೀಘ್ರಗತಿಯಿಂದ ಅದು ಕಡಿಮೆಯಾಗುವುದು. ಬಡತಿ ಸಿಕ್ಕರೂ ಅದು ತಾತ್ಪೂರ್ತಿಕವಿರುವುದು. ಬದಲಿಯಾ-ದರೆ ಅದು ಹವಾಮಾನದಿಂದ ಉತ್ತಮವಾದರೂ ವಿಪರೀತ ವೆಚ್ಚದಾಯಕ ಸ್ಥಳಕ್ಕೇ ಆಗುವುದು. ಅನೇಕರೊಂದಿಗೆ ಕ್ಷುಲ್ಲಕ ವಿಷಯಗಳಿಗಾಗಿಯೇ ತಂಟೆಯಾಗಿ ವೈರ ಪ್ರಾಪ್ತವಾಗಬಹುದು. ಇದ್ದುದರಲ್ಲಿಯೆ, ನವೆಂಬರ್ ೨೩ ರಿಂದ ಫೆಬ್ರುವರಿ ೮, ಮಾರ್ಚ್ ೧೯ ರಿಂದ ಜೂನ್ ೧೧ ಹಾಗು ಜುಲೈ ೨೭ ರಿಂದ ಸಪ್ಟೆಂಬರ್ ೧೨ ರ ವರೆಗಿನ ಕಾಲವು ಲಾಭಕ್ಕೆ ಅನುಕೂಲವಾಗಿದೆ. ಮಿತ್ರಸುಖ ಅಷ್ಟಕ್ಕಷ್ಟೆ. ಜೂನ್ ೧೧ ರಿಂದ ಜುಲೈ ೨೭ ರ ವರೆಗಿನ ಅವಧಿಯಲ್ಲಿ ಒಬ್ಬಿಬ್ಬರೊಂದಿಗೆ ತೀರ ವಿರಸವೂ ಉಂಟಾಗಬಹುದು. ಜನವರಿ ೧೨ ರ ಮೊದಲು ವಾಹನ ಮೂಲಕ ಅಪಘಾತ ಇಲ್ಲವೆ ಇತರ ಕೆಲವುರೀತಿಯಲ್ಲಿ ಹಾನಿಯಾಗುವ ಸಂಭವವಿದೆ. ಅದರಂತೆಯೆ, ಅದುವರೆಗೆ ಕೈಕೆಳಗಿನವರೂ ಕೆಲ ವಿಷಯಗಳಲ್ಲಿ ಉದ್ದೇಶಪೂರ್ವಕವಾಗಿಯೇ ತೊಂದರೆಯೀಯುವರು. ಅನೇಕ ಸ್ವಪ್ನಗಳು ಶುಭವೂ ಭವಿಷ್ಯಸೂಚಕವೂ ಆಗಿರುವವು. ಅದರಂತೆಯೆ, ಸತ್ಪುರುಷನೊಬ್ಬನ ಸಹ-ವಾಸ ಹಾಗು ಅನುಗ್ರಹ ಲಭಿಸುವ ಯೋಗವಿದೆ. ಕೆಲವು ಧಾರ್ಮಿಕ ಹಾಗು ಮಂಗಲ ಕಾರ್ಯಗಳು ಜರಗುವವಲ್ಲದೆ ಅವು ತೀರ ನಿರ್ವಿಘ್ನವೂ ಯಥಾ ಸಾಂಗವೂ ಆಗಿ ನೆರವೇರುವವು.

ದಾವೆ, ಖಟ್ಲೆ ಹಾಗು ಇತರ ಸ್ಪರ್ಧೆಯ ಕೆಲ

HAPPY DEEPAVALI GREETINGS



SOME PAPER JUST INVITES YOU TO WRITE ON IT



West Coast writing paper is like that.
Its smooth, sparkling, non-smudge surface makes your pen skim over it.
Even your writing seems to improve, as if in deference to the paper!
Yet the smoothness and the sparkle are not superficial.
The paper's good through and through. You see,
the quality is built right in the paper!
Choose West Coast writing paper.
Remember, what you write on is as important as what you write!

PAPER IS PERMANENT PAPER IS PROGRESS

WEST COAST PAPER Shreeniwas House, Waudby Road, Bombay 1.

PRESYN/WC/2/68

WEST COAST PAPER MILLS, DANDELI

ಸಗಳಲ್ಲಿ ತೀರ್ಪು ಜನೆವರಿ ೧೨ ರ ಮೊದಲೇ ದೊರೆತರೆ ವಿರುದ್ಧವಾಗುವ ಸಂಭವವಿದೆ; ಆದರೆ ಅನಂತರವಾದರೆ ಅನೇಕ ವಿಷಯುಗಳಲ್ಲಿ ಅನುಕೂಲವುಂಟಾಗುವುದು ನಿಶ್ಚಿತ.

ಈ ರಾಶಿಯು ಗರ್ಭಿಣಿಯುರಲ್ಲಿ ಬಹುತರರಿಗೆ ಕನ್ಯಾಜನನದ ಯೋಗವಿದೆಯಲ್ಲದೆ ಜನೆವರಿ ೧೨ರ ವರೆಗೆ ಇಲ್ಲವೆ ಮಾರ್ಚ್ ೧೯ ರಿಂದ. ಜೂನ್ ೧೧ ರ ವರೆಗಿನ ಅವಧಿಯಲ್ಲಿ ಪ್ರಸೂತಿ ತುಸು ಕಷ್ಟಕರವೆನಿಸಬಹುದಾದರೂ ಇತರ ವೇಳೆಯಲ್ಲಿ ಸುಲಭ ಪ್ರಸೂತಿಯಾಗುವುದು.

ಈ ರಾಶಿಯು ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ್ ೧ ರ.ವರೆಗೆ ಹಾಗು ಡಿಸೆಂಬರ್ ೨೬ ರಿಂದ ಜನೆವರಿ ೨೬, ಫೆಬ್ರುವರಿ ೧೪ ರಿಂದ ಎಪ್ರಿಲ್ ೨೭, ಮೇ ೨೧ ರಿಂದ ಜೂನ್ ೧೪, ಜುಲೈ ೯ ರಿಂದ ಅಗಸ್ಟ್ ೨, ಹಾಗು ಅಕ್ಟೋಬರ್ ೧೦ ರ ನಂತರವಾದರೆ ಕನಿಷ್ಠ ಉತ್ತೀರ್ಣರಾಗುವುದು ನಿಶ್ಚಿತ.

ಕುಂಭ

ಈ ರಾಶಿಯುವರಿಗೆ ಈ ವರ್ಷವು ಆರೋಗ್ಯ ಹಾಗು ಕೌಟುಂಬಿಕಸುಖದ ದೃಷ್ಟಿಯಿಂದ ಅಷ್ಟೊಂದು ಅನುಕೂಲವಾಗಿಲ್ಲವಾದರೂ ಔದ್ಯೋಗಿಕ ಕ್ಷೇತ್ರದಲ್ಲಿ ಒಳ್ಳೆಯ ಭಾಗ್ಯವರ್ಧಕವಾಗಿರುವುದು ನಿಶ್ಚಿತ.

ಕಳೆದ ಆರು ವರ್ಷಗಳಿಂದಿರುವ ಶನಿಯ ಸಾಡೆಸಾತಿ ಈ ವರ್ಷವೂ ಊರ್ಜಿತದಲ್ಲಿದೆಯಾದರೂ ಶನಿಯು ಈ ರಾಶಿಯ ಸ್ವಾಮಿಯಾಗಿರುವನಲ್ಲದೆ ಮಿತ್ರರಾಶಿಯಾದ ಮೀನದಲ್ಲಿರುವುದರಿಂದ ಯಾವುದೇ ಕಾರ್ಯದಲ್ಲಿ ಅತಿ ಚಿಕಿತ್ಸೆ, ವಿಲಂಬ ಹಾಗೂ ತುಸು ಹೆಚ್ಚು ವೆಚ್ಚ ಇಷ್ಟಕ್ಕಿಂತ ಹೆಚ್ಚಿನ ಕೆಟ್ಟ ಫಲಗಳನ್ನು ಕೊಡಲಾರನು. ಅಲ್ಲದೆ ಈ ಸಲ ಸಾಧಾರಣ ವರ್ಷದ ಕೊನೆ ಕೊನೆಯ ವರೆಗೂ ಗುರುವು ಏಳನೆಯವನಾಗಿರುವುದರಿಂದ ಕಳೆದ ವರ್ಷಕ್ಕಿಂತ ಈ ವರ್ಷವು ಅನೇಕ ವಿಷಯುಗಳಲ್ಲಿ ಸುಖಕರವೂ ಉತ್ಸಾಹಕರವೂ ಎನಿಸಲಿದೆ. ಆರೋಗ್ಯಕ್ಕೆ ಸಹ ಜನೆವರಿ ೭ ರಿಂದ ೨೬, ಫೆಬ್ರುವರಿ ೧೧ ರಿಂದ ಮಾರ್ಚ್ ೧೧, ಎಪ್ರಿಲ್ ೧೭ ರಿಂದ ಮೇ ೩ ಜುಲೈ ೨೬ ರಿಂದ ಅಗಸ್ಟ್ ೧೨ ಹಾಗೂ ಅಕ್ಟೋಬರ್ ೧೦ರ ನಂತರದ ಕಾಲ ಇಷ್ಟನ್ನು ಳಿದರೆ ಇತರ ಅವಧಿಯೆಲ್ಲ ಉತ್ತಮವೇ ಆಗಿರುವುದು. ದ್ವಿತೀಯ ಸ್ಥಾನಲ್ಲಿರುವ ಶನಿಯಿಂದಾಗಿ ತುಸು ಗೃಹಕಲಹವಾಗಬಹುದಾದರೂ ಕೌಟುಂಬಿಕ ಉತ್ಕರ್ಷದ ಕೆಲವು ಘಟನೆಗಳು ಜರುಗುವುದು ನಿಶ್ಚಿತ, ಅವಶ್ಯಕವೆನಿಸಿದ ಇತರ ವಿಷಯುಗಳಲ್ಲಿಯೂ ಒಳ್ಳೆಯ ದೇಹಸುಖ ದೊರೆಯುವುದು.

ಭಾರ್ಯಾಸ್ಥಾನದಲ್ಲಿರುವ ಗುರುವಿನಿಂದಾಗಿ ಸ್ತ್ರೀಸುಖ ಚೆನ್ನಾಗಿ ದೊರೆಯುವುದು. ಆದರೆ ಜನೆವರಿ ೧೨ ರಿಂದ ಅವಳ ಆರೋಗ್ಯ ತುಸು

...॥ ಶ್ರೀ ಜಗದಂಬಾ ಪ್ರಸನ್ನ ॥...

ದೀಪಾವಳಿಯು ನಮ್ಮ ಎಲ್ಲ ಗ್ರಾಹಕರಿಗೆ ಶುಭದಾಯಕವಾಗಲೆಂದು ಕೋರುತ್ತೇವೆ.

ಫೋನ್ ನಂ. ೨೪೪೯

ಎಸ್. ಡಿ. ಮೆಹರವಾಡೆ & ಸನ್ಸ್

ಜವಳಿ ವ್ಯಾಪಾರಿಗಳು, ಬೆಳಗಾಂವಗಲ್ಲಿ, ಹುಬ್ಬಳ್ಳಿ

ನಮ್ಮಲ್ಲಿ

ಬನಾರಸ ಭರಜರಿ ಪೀತಾಂಬರಗಳು (ಶ್ಯಾಲು) ಮುತ್ತು ಧರ್ಮಾವರಂ ಪಕ್ಕಾ ರೇಶ್ಮಿಯ ಜರಿವ ಸಾದಾ ಹೊಸ ನಮೂನೆಯ ಸೀರೆಗಳು ವ ಖಣ, ಬ್ಲಾವುಜ್ ಪೀಸುಗಳು, ಇವಲ್ಲದೆ ನೈಲಾನ್, ವಾಶ್ ಆ್ಯಂಡ್ ವ್ಯಾರ್, ಟ್ವಿಂಕಲ್ ಪತ್ತಲಗಳು, ನಿತ್ಯೋಪಯೋಗಿ ಕೈಮಗ್ಗದ ತರತರದ ಪತ್ತಲಗಳು ಸಂಗ್ರಹದಲ್ಲಿವೆ.

ಅವಶ್ಯ ಸಂದರ್ಶಿಸಿರಿ :

S. D. MEHARWADE & SONS

Javali Merchants, Belgaum Galli, HUBLI

Dealers in

High Class Fashionable Sarees and Blouse Pieces of to-day with the touch of tomorrow

ಕಿರಿಕಿರಿಯದೆನಿಸುವುದರಿಂದ ಅವಳ ಸ್ವಭಾವ ಮುಂಗೋಪಿತನದ್ದಾಗಬಹುದು ಮತ್ತು ಕೆಲವು ವಿಷಯಗಳಲ್ಲಿ ಅವಳಿಂದ ತೀವ್ರ ವಿರೋಧ ಪ್ರಾಪ್ತವಾಗಬಹುದು. ಆದರೂ ಸಹವಾಸದಲ್ಲಿ ವ್ಯತ್ಯಯವುಂಟಾಗದೆಯೆ ಪರಸ್ಪರ ವಿಷಯದಲ್ಲಿ ಒಳ್ಳೆಯ ಆದರ ಉಳಿಯುವುದು.

ಈ ರಾಶಿಯ ಅವಿವಾಹಿತರ ವಿವಾಹವಾಗುವದಿದ್ದಲ್ಲಿ ಅದಕ್ಕೆ ಬಹಳ ಉತ್ತಮ ಬಾಸಿಂಗ ಬಲವಿದೆ. ಆದರೆ ಗುರುವಿನೊಂದಿಗೆ ಉಂಟಾಗಿರುವ ರಾಶಿಸ್ವಾಮಿ ಶನಿಯ ಷಡಾಷ್ಟಕ ಯೋಗದಿಂದಾಗಿ ವಧೂವರರು ರೂಪದಿಂದ ಒಳ್ಳೆಯ ಜೋಡಿಯೆನಿಸಿದರೂ ಲಗ್ನದ ನಂತರ ಸುಮಾರು ಒಂದು ಒಂದೂವರೆ ವರ್ಷ ಸ್ವಭಾವದಿಂದ ವಿಭಿನ್ನರಾಗಿಯೇ ಉಳಿಯಬಹುದು. ಆದರೂ ಭಾಗ್ಯವೃದ್ಧಿ ಕಾರಕವಾದಂತಹ ಒಂದೆರಡು ಘಟನೆಗಳು ಜರುಗುವುದು ನಿಶ್ಚಿತ. ಅದರಂತೆಯೇ, ಉಭಯತರ ಮನೆತನಗಳೂ ಪೂರ್ವಪರಿಚಿತವಾದವುಗಳೇ ಆಗಿರುತ್ತವೆ. ಈ ರಾಶಿಯ ಮಕ್ಕಳ ವಿವಾಹ ಮಾಡುವದಿದ್ದಲ್ಲಿ ಅದಕ್ಕೂ ಈ ಸಲ ಒಳ್ಳೆಯ ಬಾಸಿಂಗಬಲವಿದೆಯಾದ್ದರಿಂದ ಅತ್ಯಲ್ಪ ಪ್ರಯತ್ನದಿಂದಲೇ ಅದು ಹೊಂದಿ ಅಪೇಕ್ಷಿತ ಸಮಯದಲ್ಲಿ ಯೋಜನೆಯಂತೆಯೆ ನೇರವೇರುವದು. ಸೊಸೆ ಅಥವಾ ಅಳಿಯ ಅತಿ ಸುಂದರ, ಕಿಂಚಿತ ಸ್ಥೂಲ, ಬುದ್ಧಿವಂತ ಹಾಗು ಸುರಕ್ಷಿತ, ಬಹುಭಾಷಾವಿದ, ಆದರೆ ನಸುವೆ ಶಾಮ ವರ್ಣದವರಾಗಿರಬಹುದಾಗಿದೆ.

ವರ್ಷಾರಂಭದಲ್ಲಿಯೇ ಸಂತತಿ ಸ್ವಾಮಿ ಬುಧನು ಭಾಗ್ಯಸ್ಥಾನದಲ್ಲಿರುವದರಿಂದ ಎಲ್ಲರಿಂದಲೂ ಸುಖ ದೊರೆಯುವದು. ಆದರೂ ಬುಧನೊಂದಿಗೆ ದೇಹೇಶ ಶನಿಯ ಷಡಾಷ್ಟಕವಾಗಿರುವದರಿಂದ ಮಕ್ಕಳಲ್ಲಿ ಪ್ರತಿಯೊಬ್ಬರ ಬಗೆಗೂ ತೀರ ತಪ್ಪು ಕಲ್ಪನೆಯುಂಟಾಗುವ ಸಂಭವವಿದೆ. ತುಸುಮಟ್ಟಿಗಾದರೂ ಪ್ರತಿಯೊಬ್ಬರ ಭಾಗ್ಯೋದಯ ಉಂಟಾಗುವದಲ್ಲದೆ ಅವರಲ್ಲಿ ಒಬ್ಬಿಬ್ಬರು ಅತಿ ದೂರದ ಪ್ರವಾಸ ಕೈಕೊಳ್ಳಬೇಕಾಗಬಹುದು.

ಉದ್ಯೋಗದಲ್ಲಿ ಈ ವರ್ಷ ವರ್ಷಾರಂಭದಲ್ಲಿಯೇ ಪರಾಕ್ರಮಸ್ಥಾನವಾದ ತೃತೀಯವು ಉದ್ಯೋಗಕ್ಷಮನಾದ ರಾಹುವಿನಿಂದ ಯುಕ್ತವಾಗಿರುವದರಿಂದ ದೊಡ್ಡ ದೊಡ್ಡ ಸಾಹಸ ಕಾರ್ಯಗಳು ಸಾಧ್ಯವಾಗುವವು. ಅಲ್ಲದೆ ಏಕಾದಶ ಅಂದರೆ ಲಾಭಸ್ಥಾನದಲ್ಲಿರುವ ಮಂಗಳನೇ ಪರಾಕ್ರಮೇಶನಾಗಿರುವನಲ್ಲದೆ ಕರ್ಕಸ್ಥಾನವಾದ ದಶಮದ ಸ್ವಾಮಿಯು ಆಗಿರುವನಾದರೆ ಸಪ್ತಮದಲ್ಲಿರುವ ಗುರುವು ಲಾಭೇಶ ಮತ್ತು ಧನೇಶನಾಗಿದ್ದು ಅವನ ಪೂರ್ಣ ದೃಷ್ಟಿಯು ಲಾಭ, ಪರಾಕ್ರಮ ಹಾಗು ದೇಹಸ್ಥಾನದ ಮೇಲಿದೆಯಾದ್ದರಿಂದ ಅಂದಾಜಿಗಿಂತ ಕನಿಷ್ಠ ಒಂದೆರಡು ಪಟ್ಟಾದರೂ ಹೆಚ್ಚು ಲಾಭವಾಗುವುದು ನಿಶ್ಚಿತ. ನವಮೇಶ ಅಂದರೆ ಭಾಗ್ಯೇಶ ಶುಕ್ರನು ಅಷ್ಟಮದಲ್ಲಿಯಾದರೆ ಅಷ್ಟಮೇಶ ಬುಧನು ನವಮದಲ್ಲಿ ಈ ರೀತಿ ಅನ್ಯೋನ್ಯಾಶ್ರಯ ಯೋಗವಾಗಿರುವದಲ್ಲದೆ ಅವರಿಬ್ಬರೂ ಅನುಕ್ರಮವಾಗಿ ಚತುರ್ಥ ಹಾಗು ಪಂಚಮ ಈ ಕೇಂದ್ರ ಮತ್ತು ತ್ರಿಕೋನ ಸ್ಥಾನಗಳ ಸ್ವಾಮಿಗಳಾಗಿರುವದರಿಂದ ಕೆಲವು ತಾತ್ಕಾಲಿಕವೂ ಹಲವು ಭವಿಷತ್ಕಾಲಕ್ಕೆ ಉಪಯುಕ್ತವೂ ಆದಂತಹ ಭಾಗ್ಯಕಾರಕವೂ ಕೀರ್ತಿಕಾರಕವೂ ಆದ ಘಟನೆಗಳು ಸಂಭವಿಸುವವು. ಶ್ರಮಜೀವಿಗಳಿಗಿಂತ ಬುದ್ಧಿಜೀವಿಗಳಿಗೂ ಕಲಾವಿದರಿಗೂ ಈ ವರ್ಷ ಹೆಚ್ಚು ಹಿತಕರವಾಗಿದೆ. ಅದರಂತೆಯೆ, ನೌಕರದಾರರಿಗೂ ಬಡತಿ ದೊರೆಯುವುದು ನಿಶ್ಚಿತ. ವರಿಷ್ಠರ ಪೂರ್ಣ ಕೃಪೆಯಿರುವದಲ್ಲದೆ ಬದಲಿಯಾದರೆ ಅದು ತೀರ ದೂರದ್ದಾದರೂ ಸಕಲ ಸುಖಸೌಕರ್ಯಗಳಿಂದ ಕೂಡಿದ ಸ್ಥಳಕ್ಕೆಯೆ ಆಗುವದು. ವಿಶೇಷತಃ ಡಿಸೆಂಬರ್ ೧ ರಿಂದ ಫೆಬ್ರುವರಿ ೧೪, ಮಾರ್ಚ ೧೦ ರಿಂದ ಮೇ ೨೧, ಅಗಸ್ಟ ೨ ರಿಂದ ೨೭ ಹಾಗು ಸಪ್ಟೆಂಬರ್ ೨೦ ರಿಂದ ಅಕ್ಟೋಬರ್ ೧೫ ರ ವರೆಗಿನ ಕಾಲವು ಲಾಭಕ್ಕೂ, ಭಾಗ್ಯವರ್ಧಕ ಘಟನೆಗಳಿಗೂ ಅನುಕೂಲವಾಗಿದೆ. ಆದರೆ ಜನೆವರಿ ೧೨ ರಿಂದ ಬರುವ ಎರಡನೆಯ ರಾಹುವು ಸಂಗ್ರಹ ಮಾಡುವುದಿಲ್ಲ. ಇಲ್ಲಿ ಅವನ ಜೊತೆಗಿರುವ ಶನಿಯು ವ್ಯಯೇಶನಾಗಿರುವದರಿಂದ ವಿಪರೀತ ವೆಚ್ಚದ ಪ್ರಸಂಗಗಳು ಎದುರಾಗಿ ಬಹಳ ತೊಂದರೆಗೀಡುಮಾಡಬಹುದು. ಮನೆಯ ಜನರು ಸಹ ಮನಬಂದಂತೆ ವೆಚ್ಚ ಮಾಡುವರು. ಕೆಲ ಸಲ ದೂರದ ಪ್ರವಾಸ ಕೈಕೊಳ್ಳಬೇಕಾಗಿ ಬಂದು ಅದರಲ್ಲಿಯ ಉದ್ದೇಶ ಪೂರ್ಣ ಸಾಧಿಸುವದರಿಂದ ಸಾಮಾಜಿಕ ಮಹತ್ವ ಹೆಚ್ಚುವುದು. ಜನೆವರಿ ೧೨ರ ವರೆಗಿನ ಕಾಲದಲ್ಲಿ ಸೋದರರಿಗೆ ಕ್ಲೇಶ ಉಂಟಾಗಬಹುದಲ್ಲದೆ ಒಂದು ವಿಷಯದಲ್ಲಿ ಅವರಿಂದ ತೀವ್ರ ವಿಕೋಪವೂ ಪ್ರಾಪ್ತವಾಗಬಹುದು. ಇತರ ಆಪ್ತರಿಂದಲೂ ಸುಖ ಅಷ್ಟಾಗಿ ದೊರೆಯಲಾರದು. ವಾಹನಸುಖವೂ ಅಷ್ಟಕ್ಕಷ್ಟೆ. ಪರಸ್ತ್ರೀ ವಿಷಯಕ್ಕೆ ಮೇಲಿಂದ ಮೇಲೆ ಕುವಿಚಾರಗಳು ಬರಬಹುದು. ಕೈಕೆಳಗಿನವರಿಂದಲೂ ತೊಂದರೆ ಬಹಳ. ಅಲ್ಲದೆ ದೃಷ್ಟಿಯು ತೀರ ಮಂದವಾಗಬಹುದು.

ದಾವೆ, ಫಿರ್ಯಾದಿ ಹಾಗು ಇತರ ಸ್ಪರ್ಧೆಯ ಕೆಲಸಗಳಲ್ಲಿ ನವೆಂಬರ್ ೨೩ ರಿಂದ ಡಿಸೆಂಬರ್ ೩೧, ಫೆಬ್ರುವರಿ ೮ ರಿಂದ ಮಾರ್ಚ ೧೯ ಹಾಗು ಎಪ್ರಿಲ್ ೨೮ ರಿಂದ ಜೂನ್ ೧೧ ಈ ಅವಧಿಯಲ್ಲಿ ತೀರ್ಪು ದೊರೆತರೆ ಬಹುಶಃ ವಿರುದ್ಧವಾಗುವುದು; ಆದರೆ ಇತರ ವೇಳೆಯಲ್ಲಾದರೆ ಒಳ್ಳೆಯ ಯಶಸ್ಸು ಸಿಗುವುದೆಂಬುದು ಸ್ಪಷ್ಟವಿದೆ.

ಈ ರಾಶಿಯ ಗರ್ಭಿಣಿಯರು ಜನೆವರಿ ೧೨ ರ ಮೊದಲು ಪ್ರಸೂತರಾದರೆ ಅವರಿಗೆ ನಿಶ್ಚಿತ ಪುತ್ರಲಾಭದ ಯೋಗವಿದೆಯಲ್ಲದೆ ನವೆಂಬರ್ ೨೩ ರಿಂದ ಫೆಬ್ರುವರಿ ೮, ಮಾರ್ಚ ೧೯ ರಿಂದ ಎಪ್ರಿಲ್ ೨೮ ಹಾಗೂ ಜುಲೈ ೨೭ ರಿಂದ ಸಪ್ಟೆಂಬರ್ ೧೨ ರವರೆಗಿನ ಅವಧಿಯಲ್ಲಿ ಹೆರಿಗೆ ತೀರ ಸುಲಭವಾಗುವದು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ್ ೧ ರ ವರೆಗೆ ಇಲ್ಲವೆ ಡಿಸೆಂಬರ್ ೨೦ ರಿಂದ ಜನೆವರಿ ೭, ಜನೆವರಿ ೨೬ ರಿಂದ ಫೆಬ್ರುವರಿ ೧೧, ಮಾರ್ಚ ೧೧ ರಿಂದ ಎಪ್ರಿಲ್ ೧, ಎಪ್ರಿಲ್ ೧೭ ರಿಂದ ಮೇ ೩, ಮೇ ೨೩ ರಿಂದ ಜೂನ್ ೧೧, ಜುಲೈ ೪ ರಿಂದ ೨೬, ಅಗಸ್ಟ ೧೨ ರಿಂದ ೨೯ ಹಾಗು ಸಪ್ಟೆಂಬರ್ ೨೦ ರಿಂದ ಅಕ್ಟೋಬರ್ ೫ರ ವರೆಗಿನ ಅವಧಿಯಲ್ಲಾದರೆ ಉತ್ತೀರ್ಣರಾಗುವದು ನಿಶ್ಚಿತ; ಅಲ್ಲದೆ ಡಿಸೆಂಬರ್ ೨೦ ರಿಂದ ಜನೆವರಿ ೭, ಜನೆವರಿ ೨೬ ರಿಂದ ಫೆಬ್ರುವರಿ ೧೧, ಮಾರ್ಚ ೧೧ ರಿಂದ ಎಪ್ರಿಲ್ ೧ ಹಾಗೂ ಎಪ್ರಿಲ್ ೧೭ ರಿಂದ ಮೇ ೩ ರ ವರೆಗಿನ ಅವಧಿಯಲ್ಲಾದರೆ ಒಳ್ಳೆಯ ಶ್ರೇಣಿಯೂ ದೊರೆಯಬಹುದು.

ಮೀನ

ಈ ರಾಶಿಯವರಿಗೆ ಈ ವರ್ಷವು ಆರೋಗ್ಯ ಹಾಗು ಪ್ರಾಪಂಚಿಕಸುಖದ ದೃಷ್ಟಿಯಿಂದ ತುಸು ಹೆಚ್ಚುಕಡಿಮೆ ಕ್ಲೇಶಕರವೂ ದಗದಗಿಯದೂ ಆಗಿದೆಯಾದರೂ ಉದ್ಯೋಗದಲ್ಲಿ ಮಾತ್ರ ಸಾಡೇಸಾತಿಯು ಯಾವಾಗಲೂ ಪ್ರಗತಿ, ಪ್ರತಿಷ್ಠೆ, ಲಾಭಗಳೆಲ್ಲವಕ್ಕೂ ತುಸು ಉತ್ಕರ್ಷಕಾರಕವಾಗಿದೆಯೆಂಬುದು ನಿಶ್ಚಿತ.

ಈ ರಾಶಿಗೆ ಇನ್ನೂ ಸುಮಾರು ನಾಲ್ಕು ವರ್ಷ ಸಾಡೇಸಾತಿಯಿರುವುದಲ್ಲದೆ ಈ ವರ್ಷವು ಅದರ ಮಧ್ಯಭಾಗದಲ್ಲಿದೆಯಾದರೂ ಈ ರಾಶಿಯು ಶನಿಯ ಮಿತ್ರಕ್ಷೇತ್ರವಾಗಿದೆ ಮತ್ತು ಅವನು ಇದರ ವ್ಯಯೇಶನಾಗಿರುವಂತೆಯೆ ಲಾಭೇಶನೂ ಆಗಿರುವುದರಿಂದ ಸಾಡೇಸಾತಿಯ ಕಷ್ಟ ವಿಶೇಷವಾಗಲಾರದು. ಅರ್ಥಾತ್ ಸುಖ ದುಃಖ, ಆಯವ್ಯಯ, ಲಾಭಹಾನಿ, ಉತ್ಸಾಹ ನಿರುತ್ಸಾಹಗಳೆಲ್ಲ ಸಮಪ್ರಮಾಣದಲ್ಲಿಯೆ ಇರುವವು. ಆದರೆ ರಾಶಿಸ್ವಾಮಿ ಗುರುವು ಆರನೆಯವನಾಗಿರುವುದರಿಂದ ಆರೋಗ್ಯ ವಿಷಯದಲ್ಲಿ ಒಂದಿಲ್ಲೊಂದು ತೊಂದರೆಯಿದ್ದದ್ದೆ. ಎಂಟನೆಯ ಕೇತುವಿರುವ ವರೆಗೆ ಅಂದರೆ ಜನೆವರಿ ೧೨ರ ವರೆಗೆ ಇದು ವಿಶೇಷವಾಗಿರುವುದು. ಇತರ ಆವಶ್ಯಕ ವಿಷಯಗಳಲ್ಲಿ ದೇಹಸುಖ ಮಧ್ಯಮ-ಪ್ರತಿಯದು. ಕೇತುವಿನ ೧೭೦೦೦, ಗುರುವಿನ ೨೯೦೦೦ ಹಾಗು ಶನಿಯ ೨೩೦೦೦ ಜಪ ಮಾಡಿದರೆ ಆರೋಗ್ಯ ಹಾಗು ಮಾನಸಿಕಸುಖ ನಿರ್ದೋಷವಾಗಿ ಉಳಿಯುವವು.

ಸ್ತ್ರೀಸುಖಕ್ಕೆ ಈ ಸಲ ಸಾಮಾನ್ಯ ಯೋಗವಿದ್ದು ಅವಳ ಆರೋಗ್ಯ ಜನೆವರಿ ೧೨ರ ವರೆಗೆ ಕಿರಿಕಿರಿಯದಾಗಿರುವುದು; ಆದರೆ ಮುಂದೆ ಮಾತ್ರ ಅದು ಸಾಕಷ್ಟು ಉತ್ತಮವಾಗಿರುವುದು. ಆದರೆ ಅಂದಿನಿಂದ ಬರುವ ಮೊದಲನೆಯ ರಾಹು ಮತ್ತು ಎಂಟನೆಯ ಕೇತುಗಳಿಂದಾಗಿ ಉಭಯತರಲ್ಲಿ ಮೇಲಿಂದ ಮೇಲೆ ತೀವ್ರ

ದೀಪಾವಳಿಯು ಸರ್ವರಿಗೂ
ಸುಖ ಸಂಪದಭಿವೃದ್ಧಿಯಾಗಲಿ !

ಬೇಡೆಕರರ ಉಪ್ಪಿನಕಾಯಿಗಳು
ಹಪ್ಪಳಗಳು ಮತ್ತು ಮಸಾಲೆಗಳು
ನಿಮ್ಮ ಕುಟುಂಬಕ್ಕೆ
ಪ್ರಿಯವಾದವುಗಳು
ಪರಿಶುದ್ಧ ದ್ರವ್ಯಗಳು
ಶಾಸ್ತ್ರೀಯ ತಯಾರಿಕೆ ಕ್ರಮ
ಹಾಗೂ ವಿಶಿಷ್ಟ ರುಚಿ
ಅವುಗಳನ್ನು ಪರಿಪೂರ್ಣ
ಆಯ್ಕೆ ವಸ್ತುಗಳನ್ನಾಗಿ ಮಾಡಿವೆ.

ಬೇಡೆಕರ ಮಸಾಲೆವಾಲೆ
ಮುಗಭಾಟ, ಮುಂಬಯಿ – ೪

ಅವುಗಳು ಇಲ್ಲಿಯೇ ಇವೆ





ಮತಭೇದದ ಪ್ರಸಂಗಗಳು ಬರಬಹುದು. ಆದರೂ ದೇಹೇಶ ಗುರುವಿನೊಂದಿಗೆ ವರ್ಷಾರಂಭದಲ್ಲಿಯೆ ಭಾರ್ಯೇಶ ಬುಧನ ತ್ರಿಕೇಕಾದಶ ವೆಂಬ ಶುಭಯೋಗವಾಗಿರುವುದರಿಂದ ಅಂತರ್ಯದಲ್ಲಿ ಪರಸ್ಪರರ ವಿಷಯಕ್ಕೆ ನಿಷ್ಠೆ, ಪ್ರೇಮ, ವಿಶ್ವಾಸಗಳು ಮಾತ್ರ ಅಚ್ಚಳಿಯದೇ ಉಳಿಯುವವು.

ಈ ರಾಶಿಯ ಅವಿವಾಹಿತರ ವಿವಾಹವಾಗುವುದಿದ್ದರೆ ಅದಕ್ಕೆ ಕಷ್ಟಸಾಧ್ಯ ಯಶಸ್ಸು ಸಿಗುವಷ್ಟು ಮಾತ್ರ ಬಾಸಿಂಗಬಲವಿದೆಯೆಂದು ತಿಳಿಯಬೇಕು. ವಿವಾಹ ಒಂದು ವೇಳೆ ಹೊಂದಿದರೂ ಅದು ಪ್ರತ್ಯಕ್ಷ ಪೂರಯಿಸುವ ವರೆಗೆ ಅನೇಕ ಅಡೆತಡೆಗಳನ್ನೆದುರಿಸಬೇಕಾಗುತ್ತದೆ. ಮದುವೆಯಾದ ನಂತರ ಇಬ್ಬರಲ್ಲೂ ಪರಸ್ಪರರ ವಿಷಯಕ್ಕೆ ಸಂಶಯದ ವಾತಾವರಣವೇ ಉಳಿಯುವುದು. ಬಹಳ ನಿರರ್ಥಕ ವೆಚ್ಚವನ್ನೂ ಮಾಡಬೇಕಾಗಿ ಬರಬಹುದು. ವಧೂವರರು ಗುಣದಿಂದ ಅನುರೂಪರಿದ್ದರೂ ರೂಪದಿಂದ ಇಜ್ಜೋಡಿಯೆನಿಸಬಹುದು. ಅಧರಂತೆಯೆ, ಈ ರಾಶಿಯವರ ಮಕ್ಕಳ ವಿವಾಹ ಮಾಡುವುದಿದ್ದಲ್ಲಿ ಅದಕ್ಕೆ ಮಾತ್ರ ಈ ಸಲ ಉತ್ತಮ ಬಾಸಿಂಗಬಲವಿದೆ. ಜನೆವರಿ ೧೨ರ ನಂತರ ಈ ವಿವಾಹ ಹೊಂದಲು ವಿಶೇಷ ಪ್ರಯತ್ನ ಹಾಗು ಕಷ್ಟಪಡುವ ಕಾರಣವೇ ಬೀಳುವುದಿಲ್ಲ. ಜನೆವರಿ ೧೨ ರಿಂದ ೨೬, ಎಪ್ರಿಲ್ ೧ ರಿಂದ ೧೭, ಮೇ ೩ ರಿಂದ ೨೩, ಜುಲೈ ೨೬ ರಿಂದ ಅಗಸ್ಟ್ ೨೯ ಹಾಗು ಅಕ್ಟೋಬರ್ ೫ರ ನಂತರ ಈ ಅವಧಿಯಲ್ಲಿ ಕೆಲವರ ವಿವಾಹವಂತೂ ತೀರ ನಿರಾಯಾಸವಾಗಿ ಹೊಂದುವುದು. ಸೊಸೆ ಇಲ್ಲವೆ ಅಳಿಯ ಸಾಕಷ್ಟು ಸುಂದರರೂ, ನಿರೋಗಿಯೂ, ವಿದ್ವಾಂಸರೂ, ಚಾಣಾಕ್ಷರೂ ಇರುವರಾದರೂ ಅವರು ಸ್ವತಃಕ್ಕೆ ಮಾತ್ರ ವಿಶೇಷ ಪ್ರಿಯರೆನಿಸುವುದಿಲ್ಲ. ಮಕ್ಕಳ ಉನ್ನತಿಗೆ ಈ ವರ್ಷವು ಸಾಕಷ್ಟು ಉತ್ತಮವಾಗಿದೆಯಾದರೂ ಉನ್ನತಿಯ ಗತಿ ಮಾತ್ರ ಸಾವಕಾಶವಾಗಿರುವುದು. ಆದರೆ ಅವರೊಂದಿಗಿರಬೇಕಾದಷ್ಟು ಪ್ರೇಮವಿರದೆಯೆ ತುಸು ವಿರೋಧವೇ ವ್ಯಕ್ತವಾಗಬಹುದು.

ಉದ್ಯೋಗಸ್ಥರಿಗೆ ಮಾತ್ರ ಈ ವರ್ಷ ಒಳ್ಳೆಯ ಯೋಗವಿದೆ. ಉದ್ಯೋಗದಲ್ಲಿ ಒಳ್ಳೆಯ ಹೆಚ್ಚಳ ಕಂಡುಬರುವುದು ಹಾಗು ಜನೆವರಿ ೧೨ರ ನಂತರ ತುಂಬ ಲಾಭವೂ ಆಗುವುದು. ಆದರೆ ಪ್ರತಿಯೊಂದು ಕೆಲಸದಲ್ಲೂ ಎಂದಿಗಿಂತಲೂ ಹೆಚ್ಚು ವಿಚಾರ ಮಾಡಬೇಕಾಗುವಂತಹ ಅನೇಕ ಪ್ರಶ್ನೆಗಳು ಉಪಸ್ಥಿತವಾಗುತ್ತವೆ. ಬುದ್ಧಿಜೀವಿಗಳು, / ಶ್ರಮಜೀವಿಗಳು ವಸ್ತುವಿಷಯಕ ಉದ್ಯೋಗಸ್ಥರಿಗೆಲ್ಲರಿಗೂ ಈ ರೀತಿ ಈ ವರ್ಷ ಹೆಚ್ಚು ವಿಚಾರ ಮಾಡಹಚ್ಚುವುದು. ನೌಕರದಾರರಿಗೆ ಸಹ ಹೆಚ್ಚು ಕೆಲಸದ ಭಾರವನ್ನು ಹೊರಬೇಕಾದೀತಾದರೂ ವರಿಷ್ಠರ ಕೃಪೆ ಮಾತ್ರ ಚೆನ್ನಾಗಿರುತ್ತದೆ. ಬಡತಿ ದೊರೆಯುವುದು ನಿಶ್ಚಿತ ಹಾಗು ಬದಲಿಯಾದರೆ ಅದು ಹವೆಯ ದೃಷ್ಟಿಯಿಂದ ಬಾಧಕವಾದರೂ ಇತರೆಲ್ಲ ದೃಷ್ಟಿಯಿಂದಲೂ ಸುಖ ಸೌಕರ್ಯಗಳಿಂದ ಕೂಡಿದ ಸ್ಥಳಕ್ಕಾಗುವುದು. ಲೋಕಮತವು ಯಾವಾಗಲೂ ಅನುಕೂಲವಾಗಿಯೇ ಇರುವುದಲ್ಲದೆ ಕರ್ತೃತ್ವ ಹಾಗು ಕೆಲಸದ ಬಗ್ಗೆ ದೊಡ್ಡವರಿಂದ ಪ್ರಶಂಸೆಯೂ ದೊರೆಯುವುದು. ವಿಶೇಷತಃ ವರ್ಷಾರಂಭದಿಂದ ಡಿಸೆಂಬರ್ ೩೧ರ ವರೆಗೆ ಹಾಗು ಅದರಲ್ಲೂ ಫೆಬ್ರುವರಿ ೮ ರಿಂದ ಮಾರ್ಚ್ ೧೯, ಎಪ್ರಿಲ್ ೨೮ ರಿಂದ ಜೂನ್ ೧೧ ಮತ್ತು ಸಪ್ಟೆಂಬರ್ ೧೨ರ ನಂತರದ ಸಮಯವೆಲ್ಲ ಲಾಭಕ್ಕೆ ಹೆಚ್ಚು ಅನುಕೂಲವಿದೆ. ಮಾರ್ಚ್ ೧೯ ರಿಂದ ಎಪ್ರಿಲ್ ೨೮ರ ವರೆಗಿನ ಕಾಲದಲ್ಲಿ ಅಲ್ಪವೆಚ್ಚದಲ್ಲಿಯೆ ಉಚ್ಚ ವಸ್ತುಗಳ ಸಂಗ್ರಹವಾಗಬಹುದು. ಆದರೆ ಜನವರಿ ೧೨ರ ಮೊದಲು ಬಹು ಬೆಲೆಯ ವಸ್ತುವೊಂದು ಕಳೆದು ಅಥವಾ ಕಳವಾಗಿ ಹೋಗುವ ಭಯವಿದೆ. ಲೌಕಿಕವನ್ನು ಹೆಚ್ಚಿಸುವಂಥ ಧಾರ್ಮಿಕ ಹಾಗು ಪರೋಪಕಾರದ ಕೆಲವು ಕಾರ್ಯಗಳು ನಡೆಯುವವು. ಅದರಲ್ಲಿಯೂ ಪರಮಾರ್ಥಕ್ಕಿಂತ ಸ್ವಾರ್ಥ ಹಾಗು ಐಹಿಕಸುಖದ ಕಡೆಗೆಯೆ ಲಕ್ಷ್ಯ ಹೆಚ್ಚಾಗಿರುವುದು.

ದಾವೆ, ಖಟ್ಲೆ ಹಾಗೂ ಸ್ಪರ್ಧೆಯ ಕೆಲಸಗಳಲ್ಲಿ ಸುಮಾರು ಅರ್ಧದಷ್ಟು ಯಶಸ್ವಿಯಾಗುವವು. ಆದರೂ ಪ್ರತಿಪಕ್ಷಿಯ ಜೋರು ಹಿಂದಿನಷ್ಟೆ ಉಳಿಯುವ ಸಂಭವವಿದೆ. ಕೆಲವು ವಿಷಯಗಳಲ್ಲಿ ನಿಮ್ಮ ಪುರಾವೆಯು ನಿಮಗೆಯೆ ಪ್ರತಿಕೂಲವಾಗುವ ಸಂಭವವಿದೆ.

ಈ ರಾಶಿಯ ಗರ್ಭಿಣಿಯರಲ್ಲಿ ಬಹುತರರಿಗೆ ಪುತ್ರವಾಗುವ ಯೋಗವಿದೆಯಲ್ಲದೆ ಜನವರಿ ೧೨ರ ಮೊದಲು ಪ್ರಸೂತರಾಗುವವರ ಹೆರಿಗೆ ತುಸು ಕಷ್ಟಕರವೆನಿಸಬಹುದು. ಅರ್ಥಾತ್ ಅನಂತರ ಆಗುವವದಾದರೆ ಸುಲಭ ಪ್ರಸೂತಿಯಾಗುವುದದಲ್ಲದೆ ಮಗು ಕೂಡ ಒಳ್ಳೆಯ ಸಶಕ್ತವೂ ಸುಂದರವೂ ಆಗಿರುವ ಯೋಗವಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ್ ೧ ರಿಂದ ಜನೆವರಿ ೨೬, ಫೆಬ್ರುವರಿ ೧೧ ರಿಂದ ಮಾರ್ಚ್ ೨೧, ಎಪ್ರಿಲ್ ೧ ರಿಂದ ೧೭, ಮೇ ೩ ರಿಂದ ೨೩, ಜೂನ್ ೧೧ ರಿಂದ ಜುಲೈ ೪, ಜುಲೈ ೨೬ ರಿಂದ ಅಗಸ್ಟ್ ೧೨, ಅಗಸ್ಟ ೨೯ ರಿಂದ ಸಪ್ಟೆಂಬರ್ ೨೦ ಹಾಗು ಅಕ್ಟೋಬರ್ ೫ ರಿಂದ ಮುಂದಿನ ಕಾಲದಲ್ಲಿಯಾದರೆ ಉತ್ತೀರ್ಣರಾಗುವ ಶಕ್ಯತೆ ಹೆಚ್ಚಾಗಿದೆ.

॥ ಶುಭಂ ಭವತು ॥

ದೀಪಾವಳಿಯ ಸಂತಸವು ಕಸ್ತೂರಿಯ ಸುವಾಸನೆಯಂತೆ ಹರಡಲಿ

ಶ್ರೀ ರಾಮಕೃಷ್ಣ ಆಯಿಲ್ ಮಿಲ್ಸ ಲಿ. ಇವರ ಪ್ರಸಿದ್ಧ ತಯಾರಿಕೆಗಳಾದ

- ಕಸ್ತೂರಿ ಬಾರ ಸೋಪ
- ಅನಿತಾ ಟಾಯಿಲೆಟ್ ಸೋಪ
- ಸೋನಾ ಸ್ಯಾಂಡಲ್ ಸೋಪ
- ಆ್ಯಗಮಾರ್ಕ ನಿರ್ಮಲ ಕೊಬ್ಬರಿ ಎಣ್ಣೆ

ಮೊದಲಾದವುಗಳ ಏಜಂಟರು

ಮಾಲಕರು :
ಜಿ. ಎಮ್. ವೀರಭದ್ರಪ್ಪ

ಶ್ರೀ ಸಾಯಿನಾಥ ಜನರಲ್ ಎಜನ್ಸಿ
ಪಿ. ಬಿ. ರಸ್ತೆ — ದಾವಣಗೆರೆ ಫೋನ : ೪೮೮

ಹಳ್ಳಿಯಿಂದ ಹಳ್ಳಿಗೆ

(ಕಾದಂಬರಿ)

ಸರೋಜ ನಾರಾಯಣ ರಾವ್

-೧-

ವಿಶಾಲಾಕ್ಷಮ್ಮನ ಕೈಲ್ಲಿದ್ದ ಬಾದಾಮಿ ಹಾಲಿನ ಬೆಳ್ಳಿಲೋಟವನ್ನು ತೆಗೆದುಕೊಂಡು, ಮೇಜಿನ ಮೇಲಿಟ್ಟು ಸುರೇಶ್ ಕೇಳಿದ,

"ಮನೇಲಿ ಅಜೀರ್ಣಕ್ಕೆ ಏನಾದರೂ ಔಷಧಿ ಇಟ್ಟುಕೊಂಡಿದ್ದೀಯೇನಮ್ಮ?" ವಿಶಾಲಕ್ಷಮ್ಮ,

"ಸಾಕು ಬಿಡೋ ನಿನ್ನ ಹಾಸ್ಯ. ಒಂದು ಲೋಟ ಹಾಲು ಅರಗಿಸಿಕೊಳ್ಳಲಾರದವನು ಅದೇನು ದೇಶ ದೇಶಾನೆಲ್ಲ ಸುತ್ತಿ ಡಾಕ್ಟರೇಟ್ ಪಡೆದು ಬಂದೆಯೋ" ಎಂದರು.

ಸುರೇಶ್ ಹೇಳಿದ, "ಹೊಟ್ಟೆಗಿಂತ ಬುದ್ಧಿಗೆ, ಜೀರ್ಣಿಸಿಕೊಳ್ಳುವ ಶಕ್ತಿ ಹೆಚ್ಚಾಗಿದೆಯಮ್ಮ."

"ನಿಜವಾಗಿಯೂ ಸುರೇಶ್ ನಿನ್ನಂತಹ ಮಕ್ಕಳೇ ಎಲ್ಲ ತಾಯಂದಿರಿಗೂ ಇದ್ದರೆ ಹೊಟ್ಟೆಗೆ ಹಾಕುವ ಖರ್ಚೆ ಕಡಿಮೆಯಾಗುತ್ತೆ ಕಣೋ."

"ಬುದ್ಧಿಗೆ ಆಹಾರ ಒದಗಿಸೋದೇನು ಸುಲಭ ಅಂದುಕೊಂಡೆಯಾ?"

"ಸರಿ ಬಿಡು. ನಿನ್ನ ತರ್ಕ ಕೊನೆ ಮೊದಲಿಲ್ಲದ್ದು. ಹಾಲು ಕುಡಿ ಆರಿಹೋಗುತ್ತೆ."

ಅವನು ಹಾಲು ಕುಡಿದು ಲೋಟ ಕೆಳಗಿಟ್ಟ ಮೇಲೆ ವಿಶಾಲಾಕ್ಷಮ್ಮ, "ಸುರೇಶ್ ನೋಡು ತುಮಕೂರಿಂದ ನಿನ್ನ ಮಾವ ಕಾಗದ ಬರೆದಿದಾನೆ. ನಾಲ್ಕು ದಿನಕ್ಕಾದರೂ ನಿನ್ನ ಕಳಿಸು ಅಂತ."

"ಅದೇನು ಊರಮ್ಮ ಅದು. ಊರಿಗೆ ಊರಲ್ಲ. ಹಳ್ಳಿಗೆ ಹಳ್ಳಿಯಲ್ಲ. ಅಲ್ಲಿಗೆ ಹೋಗೋಕೇ ನನಗೆ ಬೇಜಾರು"

"ಹಾಗೆಲ್ಲ ಅನ್ನಬಾರದು ಸುರೇಶ್. ಏನೋ ನನಗಿರೋನು ಅವನೊಬ್ಬನೇ ಅಣ್ಣ. ಅವನಿಗೆ ನಾನೊಬ್ಬಳೇ ತಂಗಿ. ಈ ಕಡೆ ಬಂಧು ಬಳಗ 'ಬಾ' ಅಂತ ಕರೆಯುವವರು ತಾನೆ ಯಾರಿದಾರೆ ಹೇಳು."

"ಆಗಲಮ್ಮ. ಜೊತೆಗೆ ಪವಿತ್ರೋನೂ ಬರಲಿ" ಅಲ್ಲೇ ಸೋಫಾದ ಮೇಲೆ ನಾಯಿಯ ಮೈಸವರುತ್ತ ಕುಳಿತಿದ್ದ ಪ್ರವಿಮಳ,

"ನನಗೆ ಕಾಲೇಜಿದೆ" ಎಂದಳು.

"ನೀನು ಒಂದು ದಿನ ಕಾಲೇಜು ತಪ್ಪಿಸಿಕೊಂಡರೆ ಏನು ನಷ್ಟವಾಗೋಲ್ಲ. ಹೋಗಿ ಬರೋಣ ಬಾರೆ"

"ಶನಿವಾರ, ಭಾನುವಾರವಾದರೆ ಬರ್ತೀನೆ"

ಸುರೇಶ್ "ಹಾಗೇ ಆಗಲಿ ಶನಿವಾರ ಬೆಳಿಗ್ಗೆ ಹೋಗೋಣ" ಎಂದ.

ತಮ್ಮ ಮಾತಿಗೆ ಬೆಲೆಕೊಟ್ಟು, ಅಣ್ಣನ ಮನೆಗೆ ಹೋಗಲು ಒಪ್ಪಿದುದಕ್ಕೆ ವಿಶಾಲಾಕ್ಷಮ್ಮನಿಗೆ ಸಂತೋಷವಾಗಿತ್ತು. ಸುರೇಶನನ್ನು ಅಲ್ಲಿಗೆ ಕಳಿಸುವುದರಲ್ಲಿ ಬೇರೊಂದು ಉದ್ದೇಶವೂ ಇತ್ತು. ಅಣ್ಣ ಸೋಮಶೇಖರನ ಮಗಳು ಚಂಚಲಾ ಅದೇ ವರ್ಷ ಬಿ. ಎ. ಮುಗಿಸಿದ್ದಳು. ಆಧುನಿಕ ಜೀವನದ ರೀತಿ ನೀತಿಗಳಿಗೆ ಹೊಂದಿಕೊಂಡು ಹೋಗುವ ಚಾಷ್ಟೀಕವಿತ್ತು. ತವರಿನ ಕಡೆ ಸಂಬಂಧವೆಂದು ವಿಶಾಲಾಕ್ಷಮ್ಮನಿಗೆ ಅವಳನ್ನೇ ಸೊಸೆಯಾಗಿ ತರಬೇಕೆಂಬ ಆಸೆಯಿತ್ತು. ಅಣ್ಣ, ಡಾಕ್ಟರಾಗಿ ಬೇಕಾದಷ್ಟು ಸಂಪಾದನೆ ಮಾಡಿದ್ದ. ಅವನಿಗಿದ್ದುದು ಒಬ್ಬಳೇ ಮಗಳು. ಸುರೇಶನಿಗೆ ಮಾತ್ರ ವಿಶಾಲಾಕ್ಷಮ್ಮನ ಈ ಉದ್ದಿಶ್ಯದ ಅರಿವಿರಲಿಲ್ಲ.

ಶನಿವಾರ ಬೆಳಿಗ್ಗೆ ಸುರೇಶ ಹೊರಟು ನಿಂತಾಗ ಪ್ರವಿಮಳ, "ತುಂಬಾ ಸಾರಿ. ಅಣ್ಣ ನನಗೆ ಇವತ್ತು ಪ್ರಾಕ್ಟಿಕಲ್ಸ್ ಇದೆ. ಮೊದಲೇ ಜ್ಞಾಪಕ ಬರಲಿಲ್ಲ" ಎಂದುಬಿಟ್ಟಳು. ತುಮಕೂರಿಗಾಗಲೇ ಕಾಗದ ಬರೆದು ಹಾಕಿಬಿಟ್ಟದ್ದರಿಂದ ವಿಧಿಯಿಲ್ಲದೆ ಸುರೇಶನೊಬ್ಬನೇ ಹೊರಟ. ಬಸ್ಸಿನಲ್ಲಿ ಕುಳಿತಾಗ, ಸಾಧ್ಯವಾದರೆ ಮಾರನೆಯ ದಿನವೇ ಬಂದುಬಿಡಬೇಕೆಂದುಕೊಂಡ.

ಸುರೇಶ ಅಮೇರಿಕದಲ್ಲಿ ಐದು ವರ್ಷ ಇದ್ದು, ಸ್ವದೇಶಕ್ಕೆ ಹಿಂತಿರುಗಿ ಆದೇ ಹದಿನೈದು ದಿನವಾಗಿತ್ತು. ಅವನ ತೀಕ್ಷ್ಣಮತಿಯನ್ನೂ, ಅಭ್ಯಾಸದಲ್ಲಿದ್ದ ಆಸಕ್ತಿಯನ್ನೂ ಮೆಚ್ಚಿದ ಅವನ ಪ್ರೊಫೆಸರರು ಅಲ್ಲೇ ಕೆಲಸ ಕೊಡುವುದಾಗಿ ಹೇಳಿದರೂ ತಾಯ್ನಾಡಿನ ಹಂಬಲ ಹೆಚ್ಚಾಗಿ ಅದನ್ನು ನಿರಾಕರಿಸಿ ಬಂದುಬಿಟ್ಟಿದ್ದ. ಅವನ ಮನಸ್ಸಿನಿಂದ ಅಲ್ಲಿಯ ಕಾಲೇಜು, ಯಾಂತ್ರಿಕವಾದ ಜೀವನದ ರೀತಿ, ಹುಡುಗ-ಹುಡುಗಿಯರು ನಿಸ್ಸಂಕೋಚವಾಗಿ ಬೆರೆತು ಓಡಾಡುವ ವೈಖರಿ ಒಂದೂ ಇನ್ನೂ ಮರೆಯಾಗಿರಲಿಲ್ಲ. ಅದೇ ಕನಸಿನಲ್ಲಿದ್ದಾಗ ಬಸ್ಸು ತುಮಕೂರನ್ನು ಸೇರಿತು.

ಬಸ್ ನಿಲ್ದಾಣಕ್ಕೆ ಕಾರನ್ನು ತಂದಿದ್ದರು ಮಾವ. ಸುರೇಶನನ್ನು ಗುರುತಿಸಿದ ಮಾವ

ಅವನ ಹೆಗಲ ಮೇಲೆ ಕೈಹಾಕಿ, "ತುಂಬಾ ದೊಡ್ಡ ಮನುಷ್ಯನಾಗಿ ಬಿಟ್ಟೆ" ಎಂದರು.

"ಆಕಾರದಲ್ಲಿ ದೊಡ್ಡ ಮನುಷ್ಯ ಆಗಿರೋದು ನಿಜ ಮಾವ. ಆರಡಿ ಇದೀನಿ. ತೂಕ ನೂರ ಮೂವತ್ತೈದು ಪೌಂಡು" ಎಂದು ನಕ್ಕ.

"ಹುಂ. ಡಾಕ್ಟರ್ ಸುರೇಶ್ ಆದರೂ ಇನ್ನೂ ಈ ಹಾಸ್ಯ ಹುಡುಗಾಟ ಬಿಟ್ಟಿಲ್ಲ" ಎಂದರ ಮಾವ.

"ಇದೊಂದು ತರಹ ಅಲ್ಲವೆ ಮಾವ? ಡಾಕ್ಟರ್ ಅಂತ ಕರೆಸಿಕೊಳ್ಳೋದು. ಔಷಧಿ ಕೊಡೋ ತಾಪತ್ರಯವಿಲ್ಲ...ಹೇಗಿದೆ ನಿಮ್ಮ ಪ್ರಾಕ್ಟೀಸ್?" ಎಂದ ಸುರೇಶ್

"ಪರವಾಗಿಲ್ಲ ಹೇಗೊ..."

ಐದು ನಿಮಿಷದಲ್ಲಿ ಮನೆ ಸೇರಿದ್ದರು. ಮನೆಯ ಇರಿಸರಿಕೆಯನ್ನು ನೋಡಿಯೇ ಅವರ 'ಪ್ರಾಕ್ಟೀಸ್' ಹೇಗಿದೆ ಎಂದು ತಿಳಿಯಬಹುದಾಗಿತ್ತು. ಮನೆಯ ಮುಂದೆ ಅಂದವಾದ ಕೈತೋಟದಲ್ಲಿ ಮಾಲಿಯೊಬ್ಬ ಗಿಡದ ಕೆಲಸ ಮಾಡುತ್ತಿದ್ದ. ಕಾರಿನ ಸಪ್ಪಳ ಕೇಳಿದೊಡನೆ ಓಡಿಬಂದು ಗೇಟನ್ನು ತೆಗೆದ ಮತ್ತೊಬ್ಬ ಆಳು, ಅವನನ್ನು ಹಿಂಬಾಲಿಸಿ ಓಡಿ ಬಂದುವು ಎರಡು ನಾಯಿಗಳು.

ಸುರೇಶ ಹತ್ತು-ಹನ್ನೆರಡು ವರ್ಷಗಳ ಹಿಂದೆ ಮಾವನ ಮನೆಗೆ ಬಂದಿದ್ದ. ಮನೆ ಅದೇ ಆಗಿದ್ದರೂ, ಮುಂಭಾಗವನ್ನೆಲ್ಲ ಕೆಡಹಿ ನವೀನ ರೀತಿಯಲ್ಲಿ ಕಟ್ಟಿಸಿದ್ದರು. ಮನೆಯೊಳಕ್ಕೆ ಕಾಲಿಡುವಾಗಲೇ ರೇಡಿಯೋ ಸ್ವಾಗತ ಹಾಡಿತು ಸಿನೇಮಾ ಗೀತೆಯೊಂದಿಗೆ

ಅತ್ತೆ ಕೌಸಲ್ಯಮ್ಮ, "ಚೆನ್ನಾಗಿದೀಯಾಪ್ಪ?" ಎಂದರು. ಪಕ್ಕದಲ್ಲಿದ್ದ ಚಂಚಲ ಮುಗಳ್ನಕ್ಕಳು.

"ಚೆನ್ನಾಗಿದೀನಿ ಅತ್ತೆ" ಎಂದು ಹೇಳಿ ಬೇಕೆಂದೆ ಚಂಚಲ ಯಾರೆಂದು ತಿಳಿಯದವನಂತೆ ನಟಿಸುತ್ತ, "ಅತ್ತೆ, ಈ ಹುಡುಗಿ ಯಾರು?" ಎಂದ

ಕೌಸಲ್ಯಮ್ಮ, "ನಮ್ಮ ಚಂಚಲ ಅಲ್ಲವೆ? ನೀನು ನೋಡಿ ತುಂಬ ದಿನ ಆಗಿತ್ತು" ಎಂದರು.

"ಅರೆ ಚಂಚಲ! ನಾನು ಯಾರೋ ಸಿನೇಮಾ ತಾರೆ ಇರಬಹುದು ಅಂತಿದ್ದೆನಲ್ಲಾ!" ಎಂದ.

ಚಂಚಲ ನಾಚಿಕೆಯಿಂದ ಕೆಂಪಾಗಿ ಒಳಗೆ ಹೋದಳು. ಅವನ ಹಿಂದೆ ಬಂದ ಮಾವ,

"ನಾನೊಂದು ಚಿತ್ರ ತಯಾರಿಸುವುದಾದರೆ ಅದರಲ್ಲಿ ನೀನೇ ನಾಯಕ ಅವಳೇ ನಾಯಕಿ" ಎಂದರು. ಕೌಸಲ್ಯಮ್ಮ ಆ ಮಾತು ತಮಗಿಷ್ಟವಾಗಲಿಲ್ಲವೆನ್ನುವುದನ್ನು ಮುಖದಲ್ಲೇ ತೋರ್ಪಡಿಸಿಕೊಂಡರು

ಸೋಮಶೇಖರ ಸುರೇಶನನ್ನು ಅವನ ರೂಮಿಗೆ ಕರೆದುಕೊಂಡು ಹೋದರು. ಮಹಡಿಯ ಮೇಲೆ ವಿಶಾಲವಾಗಿದ್ದ ಕೋಣೆ. ಸೊಳ್ಳೆ ಪರದೆಯಿಂದಲಂಕೃತವಾಗಿದ್ದ ಕರೀಮರದ ಮಂಚ. ನೆಲಕ್ಕೆ ಹಾಸಿದ ರತ್ನಕಂಬಳಿ. ದೊಡ್ಡ ನಿಲುವುಗನ್ನಡಿ, ಕುರ್ಚಿ, ಮೇಜುಗಳು. ಕೋಣೆಯನ್ನು ನೋಡಿದ ಸುರೇಶ.

"ಇದೇನು ಮಾವನ ಮನೆಯೋ, ಗೆಸ್ಟ್ ಹೌಸೋ ಅಂತ ನನಗೆ ಅನುಮಾನವಾಗ್ತಾ ಇದೆ" ಎಂದ.

"ಎರಡೂ ಅಂತ ತಿಳಿಕೋ" ಎಂದರು ಮಾವ. ರೂಮಿಗೆ ಹೊಂದಿದಂತೆಯೇ ಇದ್ದ ಬಾತ್

"ಅರೆ ಚಂಚಲಾ! ನಾನು ಯಾರೋ ಸಿನೇಮಾ ತಾರೆ ಇರಬಹುದು ಅಂತಿದ್ದೆನಲ್ಲಾ!"



ಕೂಮನ್ನು ತೋರಿಸಿ ಸೋಮಶೇಖರ, "ಮುಖ ಗಿಖ ತೊಳಕೋ ಈಗ ತಿಂಡಿ ಬರುತ್ತೆ" ಎಂದರು.

ಕೆಳಗಡೆಯಿಂದ ಅಡಿಗೆಯವನು ಬೆಳ್ಳಿ ತಟ್ಟೆಯಲ್ಲಿ ಇಡ್ಲಿ, ಚಟ್ನಿ, ಬೆಣ್ಣೆಗಳನ್ನು ತಂದಿಟ್ಟ.

ಸೋಮಶೇಖರ, "ಈ ಇಡ್ಲಿ, ದೋಸೆ ಇಲ್ಲದೆ ನೀನು ನಾಲ್ಕೈದು ವರ್ಷ ಹೇಗಿದ್ದೆಯೋಪ್ಪ. ನನಗಂತೂ ವಾರದಲ್ಲಿ ಮೂರು ದಿನವಾದರೂ ಇಡ್ಲಿ ಆಗಬೇಕು" ಎಂದರು.

"ಅಲ್ಲೂ ಬೇಕಾದಷ್ಟು ತರಹ ತಿಂಡಿ ತೀರ್ಥ ಕೊಡೋರು ಮಾವ. ಆದರೂ ಶಾಖಾಹಾರಿಗಳಿಗೆ ಹೊಸದರಲ್ಲಿ ಸ್ವಲ್ಪ ಕಷ್ಟ. ಆ ಮೇಲೆ ಅದೇ ಅಭ್ಯಾಸವಾಗಿ ಹೋಗತ್ತೆ. ನಾನಿದ್ದ ಕಡೆ ಸಿಲೋನಿ ದಂಪತಿಗಳಿದ್ದರು. ಅವರು ಎಂದಾದರೂ ಒಂದೊಂದು ದಿನ ಇಡ್ಲಿ, ದೋಸೆ, ಉಪ್ಪಿಟ್ಟು ಮಾಡಿ ಕರೆಯುತ್ತಾ ಇದ್ದರು."

ಎದುರು ಸಾಲಿನಲ್ಲಿ ಚಂಚಲೆಯ ಬಳಿ ಮಾತಾಡುತ್ತ ನಿಂತಿದ್ದ ಹುಡುಗಿಯನ್ನು ಕಂಡಾಗ...

"ಏನು ಸಿಲೋನಿನವರೇ!"

"ಹುಂ ಮಾವಾ. ಅಮೇರಿಕೆಯಲ್ಲಿ ನಮ್ಮ ಸುಬ್ಬಾಭಟ್ಟರೂ, ಕೃಷ್ಣಾವಧಾನಿಗಳೂ ಹೋಟೆಲಿಟ್ಟುಕೊಂಡಿರ್ತಾರೆಯೇ ? ಅಲ್ಲಿರೋವಾಗ ಅಲ್ಲಿಯವರೇ ನಮ್ಮ ಬಂಧುಗಳು."

"ಸರಿಯಪ್ಪ ಜನಿವಾರವಾದರೂ ಇದೆಯೋ ಇಲ್ಲವೋ..."

"ಅದೇನೋ ಇದೆ ಮಾವಾ..."

ಅಡಿಗೆಯವನು ಮತ್ತಷ್ಟು ಇಡ್ಲಿಗಳನ್ನು ತಂದ. ಸೋಮಶೇಖರ ಎರಡು ಹಾಕಿಸಿಕೊಂಡರು. ಸುರೇಶ್ ಎದ್ದು ಕೈತೊಳೆದ.

ಇಬ್ಬರೂ ಕೆಳಗೆ ಬಂದರು. ಸೋಮಶೇಖರ, "ನಾನು ಹೀಗೇ ಆಸ್ಪತ್ರೆಗೆ ಹೋಗಿ ಸ್ವಲ್ಪ ಹೊತ್ತು ಇದ್ದು ಬಂದ್ಬಿಡ್ತೇನೆ. ಚಂಚಲಾ-ಸುರೇಶ್‌ಗೆ ಏನಾದರೂ ಓದಲು ಪುಸ್ತಕ ಇದ್ದರೆ ಕೊಡಮ್ಮ" ಎಂದು ಹೇಳಿ ಹೋದರು.

ಚಂಚಲ ನಾಲ್ಕೈದು ವಾರಪತ್ರಿಕೆ, ಮಾಸ ಪತ್ರಿಕೆಗಳನ್ನು ಕೊಟ್ಟಳು. ಸ್ವಲ್ಪ ಹೊತ್ತು ಪೇಪರ್ ಓದಿದ ಸುರೇಶ್, "ನಾನು ಹೀಗೇ ತಿರುಗಾಡಿಕೊಂಡು ಬರ್‍ತೇನೆ" ಎಂದು ಎದ್ದು ಹೋದ.

ನಿಧಾನವಾಗಿ ಮಾರ್ಕೆಟ್ ವರೆಗೆ ಹೋಗಿ ಮನೆಗೆ ಬರುವ ವೇಳೆಗೆ ಊಟದ ಸಮಯವಾಗಿತ್ತು. ಸೋಮಶೇಖರ ಸಹ ಮನೆಗೆ ಬಂದಿದ್ದರು. ಊಟವಾದ ಮೇಲೆ ಚಂಚಲ ಎಲೆ ಅಡಿಕೆ ತಟ್ಟೆ ಹಿಡಿದು ಬಂದಳು. ಸೋಮಶೇಖರ ಅಡಿಕೆಪುಡಿಯನ್ನು ಬಾಯಿಗೆ ಹಾಕಿಕೊಂಡು, ಐದಾರು ಎಲೆಗಳನ್ನು ಜೋಡಿಸಿಕೊಳ್ಳುತ್ತ, "ಸುರೇಶನಿಗೂ ಕೊಡಮ್ಮ" ಎಂದರು.

ಸುರೇಶ, "ಇಲ್ಲ ಮಾವ. ನನಗೆ ಅಭ್ಯಾಸವಿಲ್ಲ." ಎಂದು ಹೇಳಿ ಸ್ವಲ್ಪ ಅಡಿಕೆಯನ್ನು ಮಾತ್ರ ತೆಗೆದುಕೊಂಡ.

"ಬೇರೆ ಏನಾದರೂ ಅಭ್ಯಾಸಗಳುಂಟೋ" ಎಂದರು ಮಾವ.

"ಇಲ್ಲ. ಯಾವುದೂ ಇಲ್ಲ"

"ಪರವಾಗಿಲ್ಲ. ನಮ್ಮ ವಿಶಾಲಾಕ್ಷಿ ಪುಣ್ಯ" ಎಂದರು, ಸೋಮಶೇಖರ. ಸುರೇಶ್ ತಾನು ಅದೇ ಸಂಜೆಯೇ ವಾಪಸು ಹೊರಟುಬಿಡಲೇ ಎಂದು ಯೋಚಿಸುತ್ತಿದ್ದಾಗ,

"ನಾಳೆ ಹೇಗೂ ಭಾನುವಾರ. ಇಲ್ಲೇ ಬಯಲಾಂಜನೇಯ ಸ್ವಾಮಿ ಗುಡಿಯಲ್ಲಿ ವಿಶೇಷ ಪೂಜೆ ಮಾಡಿಸಬೇಕೆಂದಿದೆ. ಎಲ್ಲಾ ಹೋಗಿ ಬರೋಣ" ಎಂದರು ಮಾವ.

"ನಾನು ನಾಳೆ ಬೆಳಿಗ್ಗೆ ಹೊರಟುಬಿಡೋಣವೆಂದಿದ್ದೆ ಮಾವ"

"ಯಾಕಯ್ಯಾ ಒಂದೇ ದಿನಕ್ಕೆ ನಮ್ಮ ಮನೆ ಬೇಜಾರಾಯ್ತೇ?"

"ಅಮೇರಿಕದಿಂದ ಬಂದವರಿಗೆ ತುಮಕೂರಿನಲ್ಲಿ ಏನು ಹೊತ್ತು ಹೋಗುತ್ತೆ ಹೇಳಿ" ಎಂದರು ಕೌಸಲ್ಯಮ್ಮ.

"ನೀವೇ ಎಲ್ಲರೂ ಬಂದು ಸ್ವಲ್ಪ ದಿನ ಬೆಂಗಳೂರಿನಲ್ಲಿ ಯಾಕಿರಬಾರದು ಅತ್ತೆ?" ಎಂದು ಕೇಳಿದ ಸುರೇಶ.

"ಆಗಲಿ ಬರೋಣ. ನೀನಂತೂ ಬುಧವಾರದವರೆಗಾದರೂ ಇರಬೇಕಪ್ಪ. ನಾಲ್ಕು ದಿನವಾದರೂ ಇರದೆ ಇದ್ದರೆ ಬಂದ ಹಾಗೆ ಆಗುವುದಿಲ್ಲ" ಎಂದು ಕೌಸಲ್ಯಮ್ಮ ಒತ್ತಾಯಪಡಿಸಿದರು. ಸುರೇಶ ಒಪ್ಪದೆ ವಿಧಿಯಿರಲಿಲ್ಲ.

ಮರುದಿನ ಬೆಳಿಗ್ಗೆ ಎಲ್ಲರೂ ಬಯಲಾಂಜನೇಯ ಸ್ವಾಮಿಗುಡಿಗೆ ಹೋದರು. ಕೌಸಲ್ಯಮ್ಮ ಎರಡು ದೊಡ್ಡ ಬುಟ್ಟಿಗಳ ತುಂಬ ಹಣ್ಣು, ಹೂ, ತಂದಿದ್ದರು. ಪೂಜಾರಿಗಳು ಹಾರಗಳನ್ನು ತೆಗೆದು ಆಂಜನೇಯನನ್ನು ಅಲಂಕರಿಸಿ, ಹಣ್ಣುಗಳನ್ನೂ ಸಹ ಹೂವಿನಂತೆಯೇ ಇಟ್ಟು ಪೂಜೆ ಮಾಡಿದರು. ಪೂಜೆ, ನೋಡಲು ಆಹ್ಲಾದಕರವಾಗಿತ್ತು. ಆಂಜನೇಯನ ಸಾನಿಧ್ಯ ನಾಸ್ತಿಕರಿಗೂ ಭಕ್ತಿ ಹುಟ್ಟಿಸುವಂತಿತ್ತು. ಪೂಜೆಮುಗಿದು ಮಂಗಳಾರತಿಯ ತಟ್ಟೆ ಎಲ್ಲರಮುಂದೆ ಬಂದಾಗ ಸುರೇಶನ ದೃಷ್ಟಿ, ಅಲ್ಲಿ ನೆರೆದಿದ್ದ ಜನರ ಕಡೆ ಹರಿಯಿತು. ಹೆಚ್ಚು ಜನರೇನು ಇರಲಿಲ್ಲ. ಸೋಮಶೇಖರರ ಮನೆಯವರಲ್ಲದೆ ಇನ್ನು ಮೂರು ನಾಲ್ಕು ಮನೆಯವರು, ಕೆಲವು ವಿದ್ಯಾರ್ಥಿಗಳು, ಬಂದಿದ್ದರು.

ಎದುರು ಸಾಲಿನಲ್ಲಿ ಚಂಚಲೆಯ ಪಕ್ಕದಲ್ಲಿ ಅವಳೊಡನೆ ಮಾತನಾಡುತ್ತ ನಿಂತಿದ್ದ ಹುಡುಗಿಯನ್ನು ಕಂಡಾಗ ಅವನ ಕಣ್ಣುಗಳು ಅಲ್ಲೇ ನೆಲೆಸಿದುವು. ಮಂಗಳಾರತಿಯ ದಿವ್ಯ ಪ್ರಭೆಯಲ್ಲಿ ಕಂಗೊಳಿಸುತ್ತಿದ್ದ ಆ ಮುದ್ದು ಮುಖ ಅವನನ್ನು ಮೊದಲ ನೋಟದಲ್ಲೇ ಆಕರ್ಷಿಸಿತು. ಪಟ್ಟಣವಾಸದ ನಾಗರಿಕತೆಯ ಗಾಳಿಯೇ ಸೋಂಕದ ಆ ಹಳ್ಳಿಯ ಹೆಣ್ಣು ದೇವರ ಸನ್ನಿಧಿಯಲ್ಲೇ ಸುರೇಶನ ಮನವನ್ನು ಸೆಳೆದಳು. ನಿಂಬೆಯ ಬಣ್ಣದ ಮೈಕಾಂತಿ, ಅರಿಶಿಣ ಲೇಪನದಿಂದ ಮತ್ತೂ ಬಣ್ಣವಾಗಿತ್ತು. ಹಣೆಯಲ್ಲಿ ಅಗಲವಾದ ಕುಂಕುಮ, ಆರೋಗ್ಯ ತುಂಬಿ ಸೂಸುವ ನಿಷ್ಕಳಂಕ ಮುಖಚಂದ್ರ. ತೀರ್ಥ ಕೊಡಲು ಬಂದ ಪೂಜಾರಿಗಳು ಸುರೇಶನನ್ನು "ಸ್ವಾಮೀ ತೀರ್ಥ" ಎಂದು ಎಚ್ಚರಿಸಬೇಕಾಯಿತು.

ಗುಡಿಯಿಂದ ಹಿಂತಿರುಗುವಾಗ ಕಾರಿನಲ್ಲಿ ಸುರೇಶ್ ಕೇಳಿದ,

"ಚಂಚಲಾ, ನಿನ್ನ ಹತ್ತಿರ ಮಾತಾಡ್ತಾ ಇದ್ದ ಹುಡುಗಿ ಯಾರು? "

ಚಂಚಲ ಮೊದಲು ನಕ್ಕಳು. ಆ ಮೇಲೆ, "ಅವಳು ಅಮ್ಮನ ಬಳಗ" ಎಂದಳು.

"ಯಾರೇ ಪುಟ್ಟಗೌರೀನೇ?" ಎಂದು ಕೇಳಿದರು ಕೌಸಲ್ಯಮ್ಮ.

"ಹೌದಮ್ಮ ಅವಳೇ." ಎಂದಳು ಚಂಚಲ. ಅವಳ ದನಿಯಲ್ಲಿದ್ದ ನಿಶ್ಕಪಟಭಾವವನ್ನು ಗುರುತಿಸಿ ಚಕಿತನಾಗಿ ಸುರೇಶ್ ಅವಳ ಕಡೆ ನೋಡಿದ. ಮೋಟಾದ ಎರಡು ಜಡೆಗಳು, ಸಾಮಾನ್ಯವರ್ಣವನ್ನು ಮರೆ ಮಾಡಲು ಶ್ರಮಿಸುವ ದಪ್ಪನಾದ ಪೌಡರಿನ ತೆರೆ, ತುಟಿಗೆ ರಂಗು, ಚಾಂಚಲ್ಯ, ಅಹಂಭಾವ ತುಂಬಿ ತುಳುಕುವ ಕಣ್ಣುಗಳು, ತಾಯಿಯಂತೆಯೇ ಬಿಗಿದುಕೊಂಡ ಬಾಯಿ, ಸುರೇಶನಿಗೆ ನಗು ಬಂತು.

ಅದೇ ತಾನೆ, ಅತಿ ಅಲಂಕಾರದಿಂದ, ಕೃತಕ ಸಾಧನಗಳಿಂದ ನೈಜ ರೂಪವನ್ನೇ ಮರೆ ಮಾಡಿಬಿಡುವ ಹುಡುಗಿಯರ ಮಧ್ಯದಿಂದ ಬಂದಿದ್ದ ಸುರೇಶನಿಗೆ ಪುಟ್ಟಗೌರಿ ನಿಸರ್ಗದ ನಿಷ್ಕಳಂಕ ಚೆಲುವೆಯಾಗಿ ಕಂಡದ್ದರಲ್ಲಿ ಆಶ್ಚರ್ಯವಿರಲಿಲ್ಲ. ಆದರೆ ಚಂಚಲ ಆ ಹುಡುಗಿಯ ಬಗ್ಗೆ ಅಷ್ಟೊಂದು ತಾತ್ಸಾರ ತಾಳಿದುದೇಕೆಂದು ಅವನಿಗೆ ಅರ್ಥವಾಗಲಿಲ್ಲ.

ಕೌಸಲ್ಯಮ್ಮ ಹೇಳಿದರು,

"ನಮ್ಮ ತಾಯಿಯ ಸೋದರಮಾವನ ಮಗಳು ಅವಳು. ಇಲ್ಲೇ ಹನ್ನೆರಡು ಮೈಲಿ ದೂರದ ಹಳ್ಳೀಲಿದಾರೆ. ಆಗಾಗ ಇಲ್ಲಿ ಗುಡೀಗೆ ಬರ್ತಾ ಇರ್ತಾರೆ"

"ಈ ತುಮಕೂರಿನ ಸುತ್ತಮುತ್ತ ನಮ್ಮ ಕೌಸಲ್ಯನ ಬಳಗವೇ ತುಂಬಿಕೊಂಡಿದೆ" ಎಂದರು ಸೋಮಶೇಖರ.

"ನನಗೆ ಯಾವುದಾದರೂ ಹಳ್ಳಿಗೆ ಹೋಗಿ ಬರಬೇಕು ಅಂತ ತುಂಬ ಇಷ್ಟ. ಹತ್ತಿರವೇ ಇದ್ದರಿಂದ ನಾಳೆ ನಾಡಿದ್ದರಲ್ಲಿ ಹೋಗಿ ಬರಲಾ?" ಎಂದು ಕೇಳಿದ ಸುರೇಶ.

"ಅದೇನು ಹಳ್ಳಿ ನೋಡಬೇಕು ಅಂತ ಆಸೆ?"

"ಸುಮ್ಮನೆ ಆಷ್ಟೆ. ಹುಟ್ಟಿ ಬೆಳೆದದ್ದೆಲ್ಲಾ ಪಟ್ಟಣದಲ್ಲೇ. ನಾನು ಒಂದೂ ಹಳ್ಳೀನೇ ನೋಡಿಲ್ಲ..."

"ಆಗಲಿ ಅದಕ್ಕೇನು ನಾನು ಯಾರ ಕೈಲಾದರೂ ಹೇಳಿಕಳಿಸ್ತೀನಿ. ನಾಳೆ ಹೋಗುವಂತೆ" ಎಂದರು ಕೌಸಲ್ಯಮ್ಮ.

-೨-

ಹಳ್ಳಿ ಮನೆಯ ವರೆಗೆ ಕಾರು ಹೋಗುವಂತಹ ರಸ್ತೆ ಇರಲಿಲ್ಲ. ಒಂದೂವರೆ ಮೈಲಿ ಆಚೆ ಒಂದು ಆಲದ ಮರದ ಹತ್ತಿರ ಕಾರು ನಿಲ್ಲಿಸಿದ ಡ್ರೈವರ್. ಮೊದಲೇ ಆಳು ಕಳಿಸಿ ಸುರೇಶ ಬರುವ ವಿಷಯವನ್ನು ತಿಳಿಸಿದ್ದರಿಂದ ವೆಂಕಾಭಟ್ಟರು ಗಾಡಿ ಕಟ್ಟಿಸಿಕೊಂಡು ಬಂದಿದ್ದರು. ಸುರೇಶನ ಬಗ್ಗೆ ಕೌಸಲ್ಯಮ್ಮನಿಂದ ಕೇಳಿ ತಿಳಿದಿದ್ದ ಭಟ್ಟರು, ಬಹಳ ಗೌರವದಿಂದ,

"ದಯಮಾಡಿಸಬೇಕು ದೇವರೂ" ಎಂದರು.

ಜೋಡೆತ್ತಿನ ಗಾಡಿಯಲ್ಲಿ ತುಂಬಾ ಹುಲ್ಲು ಹಾಕಿ ಅದರ ಮೇಲೆ ಜಮಖಾನೆ ಹಾಸಿದ್ದರು. ಒತ್ತಿಗೆ ಒರಗುದಿಂಬು ಸಹ ಇತ್ತು. ಮುಗಿಲೆತ್ತರ ಬೆಳೆದು ನಿಂತ ತೆಂಗು ಕಂಗುಗಳು ಕೈಬೀಸಿ ಕರೆ[illegible] [illegible]ತ್ತಿದ್ದುವು. ಪ್ರಕೃತಿಯ ಸೊಬಗನ್ನು ಸವಿಯುತ್ತ ಸುರೇಶ ಉಲ್ಲಾಸಭರಿತನಾಗಿದ್ದ.

ಗಾಡಿ ಮನೆಯ ಮುಂದೆ ನಿಂತಾಗ ಅಕ್ಕ ಪಕ್ಕದ ಮನೆಯ ಮಕ್ಕಳೆಲ್ಲ ಬಂದು ಗಾಡಿಯ ಸುತ್ತ ನೆರೆದರು. ಭಟ್ಟ ಜೋರಾಗಿ,

"ಏ ನೆಡೀರೋ ಅತ್ಲಾಗೆ" ಎಂದು ಗದರಿಸಿದರು. ಸುರೇಶ ಗಾಡಿಯಿಂದ ಇಳಿದ ಕೂಡಲೆ ಕಣ್ಣಿಗೆ ಬಿದ್ದುದು ಅಂದವಾದ ರಂಗೋಲಿ. ಚೆನ್ನಾಗಿ ಕೆಮ್ಮಣ್ಣು ಹಾಕಿ ಕೆಂಪಗೆ ಸಾರಿಸಿದ್ದ

... ಅವನ ಕಣ್ಣುಗಳು ಅಲ್ಲೇ ನೆಲೆಸಿದವು.

[illegible] ಮೇಲೆ ದೊಡ್ಡದಾದ ಹಸೆ ಚಿತ್ರಿತವಾಗಿದ್ದು ಮನೆಗೆ ಒಂದು ಕಳೆಯನ್ನು ಕೊಟ್ಟಿತ್ತು. ಜಗುಲಿಯ ಮೇಲೆ ಎಲೆ ಹಚ್ಚುತ್ತ ಕುಳಿತಿದ್ದ ಮುದುಕಿ,

"ನಮ್ಮ ಕೌಸಲ್ಯ ನಾದಿನಿ ಮಗ ಅಲ್ಲವೆ? ನಾನು ನಿನ್ನ ನೋಡೇ ಇರಲಿಲ್ಲಾಪ್ಪ. ಬಾ. ಬಾ. ದೊರೆಮಗನ ಹಾಗಿದೀಯ" ಎಂದು,

"ಲೇ ಪುಟ್ಟೀ ನಿಮ್ಮಮ್ಮನ್ನ ಕೂಗೆ. ಕೈಕಾಲಿಗೆ ನೀರು ಕೊಡ್ರೀ" ಎಂದು ಕೂಗಿದರು.

ಮೈ ತುಂಬ ಸೆರಗು ಹೊದ್ದ ಹಿರಿಯ ಮುತ್ತೈದೆ ಫಳ ಫಳ ಹೊಳೆಯುತ್ತಿದ್ದ ಹಿತ್ತಾಳೆ ಚೆಂಬಿನಲ್ಲಿ ನೀರು ತಂದುಕೊಟ್ಟರು.

ನಾಲ್ಕು ಕಂಬಗಳ ಪಡಸಾಲೆಯಲ್ಲಿ ಒಂದೇ ಒಂದು ಕುರ್ಚಿಯಿತ್ತು. ಅದನ್ನು ತೋರಿಸುತ್ತ, ಭಟ್ಟರು, "ವಿಶ್ರಮಿಸಿಕೋಬೇಕು. ಹಳ್ಳಿಗಾಡು ಪಟ್ಟಣವಾಸದಷ್ಟು ಗಾಳಿ ಬೆಳಕು ಇಲ್ಲ. ಲೋ... ಸುಬ್ಬಾ ಒಂದೆರಡು ಎಳನೀರು ತಗೊಂಡು ಬಾ" ಎಂದರು. ಹದಿನಾಲ್ಕು ವರ್ಷದ ಹುಡುಗನೊಬ್ಬ ಎರಡು ಎಳನೀರನ್ನು ತೆಗೆದುಕೊಂಡು ಬಂದ. ಭಟ್ಟರು ಒಂದನ್ನು ಕೆತ್ತಿ ಸುರೇಶನಿಗೆ ಕೊಟ್ಟರು. ಅಮೃತದಂತಿತ್ತು ಎಳನೀರು. ಭಟ್ಟರು ಎರಡನೆಯದನ್ನೂ ಕೊಡಲು ಬಂದಾಗ ಸುರೇಶ,

"ಬೇಡ ಬೇಡ ಎಷ್ಟು ದೊಡ್ಡದಾಗಿತ್ತು. ಒಂದು ಮುಗಿಸೋದರಲ್ಲೇ ಸಾಕಾಯ್ತು" ಎಂದ. ಭಟ್ಟರು ತಮ್ಮ ಮಗನನ್ನು ತೋರಿಸಿ,

"ಇವನಿದಾನಲ್ಲ ನೋಡಿ, ನಾಲ್ಕು ಎಳನೀರು ಬೇಕಾದರೆ ಒಬ್ಬನೇ ಒಂದೇ ಸಲಕ್ಕೆ ಮುಗಿಸ್ತಾನೆ, ಪಾಠ ಪ್ರವಚನ ಮಾತ್ರ ಏನೂ ಕೇಳಬೇಡಿ. ಶುದ್ಧ ಶುಂಠಿ" ಎಂದು ಸುಬ್ಬನ ಕಿವಿ ಹಿಂಡಿದರು. ಅವನ ಕಿವಿಯೆಲ್ಲ ಕೆಂಪಾಗಿ, ಅಲ್ಲಿ ನಿಲ್ಲದೆ ಓಡಿಹೋದ.

ದೊಡ್ಡದಾಗಿದ್ದ ಪಡಸಾಲೆಯ ಸುತ್ತಲೂ ನೋಟ ಹರಿಸಿ ಸುರೇಶ,

"ಮನೆ ಒಳ್ಳೆ ದೊಡ್ಡದಾಗಿದೆ. ಮದುವೆ ಮುಂಜಿ ಬೇಕಾದರೂ ಮಾಡಬಹುದು" ಎಂದ.

"ಹೌದಪ್ಪ ಹಿರಿಯರು ಕಟ್ಟಿದ್ದು. ಪಟ್ಟಣಗಳಲ್ಲಿ ಇರೋ ಹಾಗೆ ಇಲ್ಲೇನು ಛತ್ರಗಳಿವೆಯೇ ಯಾವ ಮಂಗಳ ಕಾರ್ಯ ಆದರೂ ಮನೇಲೇ ಆಗಬೇಕು. ಬನ್ನಿ ಮನೆ ನೋಡೋರಂತೆ" ಎಂದು ಮನೆ ತೋರಿಸಲು ಕರೆದೊಯ್ದರು ಭಟ್ಟರು. ಪಡಸಾಲೆಯ ಎರಡು ಕಡೆಗೂ ಎರಡೆರಡು ಕೋಣೆಗಳು. ಹಿಂದೆ ಅಂಗಳ. ಅಲ್ಲಿ ದೊಡ್ಡ ಬೃಂದಾವನ. ಅದರ ಆಚೆಗೆ ಅಡಿಗೆ ಮನೆ. ಬಚ್ಚಲುಮನೆ. ಅದರ ಹಿಂದೆ ದನದ ಕೊಟ್ಟಿಗೆ–ಸುರೇಶನ ಕಾಲು ಅಲ್ಲೇ ನಿಂತಿತು. ಲಕ್ಷಣವಾದ ಬಿಳಿಯ ಹಸು. ಸ್ವಲ್ಪ ದೂರದಲ್ಲೇ ಮುದ್ದಾದ ಕರು. ಕೈಯ್ಯಲ್ಲಿ ಕಂಚಿನ ತಂಬಿಗೆ

ಹಿಡಿದು ಹಾಲು ಕರೆಯುತ್ತ ಕುಳಿತಿದ್ದಳು ಪುಟ್ಟಿ ಗೌರಿ. ಆ ದೃಶ್ಯವನ್ನು ಮನದಲ್ಲೇ ತುಂಬಿಕೊಂಡ ಸುರೇಶ. ಗೌರಿ ತಂದೆಯ ದನಿ ಕೇಳಿ ಹಿಂತಿರುಗಿದಳು.

"ಇವಳು ನನ್ನ ಹಿರೇ ಮಗಳು ಪುಟ್ಟಿ. ಈ ಭಾಗೀರತಿ ನೋಡಿ ಯಾರ ಕೈಲೂ ಹಾಲು ಕರೆಸಿಕೊಳ್ಳಲ್ಲ. ಆದಕ್ಕೆ ಪುಟ್ಟೀನೇ ಆಗ ಬೇಕು" ಎಂದರು ಭಟ್ಟರು.

ಅಡಿಗೆ ಮನೆ ಬಾಗಿಲಲ್ಲಿ ನಿಂತು ಭಟ್ಟರ ಮಡದಿ ನರಸಮ್ಮ, "ತಿಂಡಿ ಆಗಿದೆ" ಎಂದರು.

ಸಾಲಾಗಿ ಹಾಕಿದ್ದ ಬಾಳೆಲೆಗಳ ಮೇಲೆ ನರಸಮ್ಮ ಬಿಸಿ ಬಿಸಿ ಕಾಯಿ ದೋಸೆಗಳನ್ನು ತಂದು ಹಾಕಿದರು. ತುಪ್ಪ, ಮಾವಿನಕಾಯಿ ಉಪ್ಪಿನ ಕಾಯಿ ಹಾಕಿ, ಸುರೇಶ ಬೇಡ ಬೇಡವೆಂದರೂ ನಾಲ್ಕು ದೋಸೆಗಳನ್ನು ತಿನ್ನಿಸಿದರು.

ಭಟ್ಟರು, "ಹೀಗೇ ತೋಟದ ಕಡೆ ಹೋಗಿ ಬರೋಣ ಬರ್ತೀರಾ" ಎಂದರು. ಸುರೇಶ ಉತ್ಸಾಹದಿಂದ ಎದ್ದು ಹೊರಟ. ಹಿಂದೆ ಸುಬ್ಬ, ಅವನ ತಮ್ಮ ಕಂಠಿ ಹೊರಟರು. ಭಟ್ಟರು ಅವರ ತಾಯಿಗೆ,

"ಅಮ್ಮಾ ಇವಳಿಗೆ ಹೇಳು,ಊಟ ತಗೊಂಡು ತೋಟದ ಮನೇಗೇ ಬಂದ್ಬಿಡು ಅಂತ. ಬೇಕಾದ್ರೆ ಪುಟ್ಟಿ, ಶಾರೀನೂ ಬರಲಿ" ಎಂದು ಹೇಳಿದರು.

"ಹೇಳ್ತೀನಪ್ಪ. ತೋಟದ ಮನೆ ಗುಡಿಸಿ, ಸಾರಿಸಿ ಮಾಡಿದಾರೆಯೇ?"

"ಹೇಳಿದ್ದೇನಮ್ಮಾ ನಿನ್ನೇನೇ ಮಾಡಿರ್ಬೇಕು" ಭಟ್ಟರು ಸುರೇಶನನ್ನು

"ಗಾಡೀಲಿ ಹೋಗೋಣ್ವೆ?"ಎಂದು ಕೇಳಿದರು.

"ಬೇಡ ನಡದೇ ಹೋಗೋಣ. ಎಷ್ಟು ದೂರ ಆಗತ್ತೆ?"

"ಎರಡು ಮೈಲಿ ಆಗಬಹುದು."

"ಅಷ್ಟೆ ತಾನೇ ಹೀಗೆ ಹೋಗೋಣ ನಡೀರಿ" ಎಂದ ಸುರೇಶ.

ಮಾರ್ಗದುದ್ದಕ್ಕೂ, ತೆಂಗು, ಅಡಿಕೆಯ ಮರಗಳು, ಬಾಳೆ ತೋಟಗಳು ಕಣ್ಣಿಗೆ ತಂಪೆರೆಯುತ್ತಿದ್ದುವು.

ಭಟ್ಟರು ದಾರಿಯುದ್ದಕ್ಕೂ ಮಾತನಾಡುತ್ತಿದ್ದರು. ಕೆಲವು ತೋಟಗಳನ್ನು ಕೈಮಾಡಿ ತೋರಿಸಿ ಅದು ಯಾರದೆಂದು ಹೇಳುತ್ತಿದ್ದರು. ಸುರೇಶ ಸಂಭಾಷಣೆಯಲ್ಲಿ ತೊಡಗಲೆಂದು,

"ಎಷ್ಟು ಮನೆಯಿದೆ ಈ ಹಳ್ಳೀಲಿ?" ಎಂದ.

"ಈಗ ಎಲ್ಲಾ ಹೊಲಮನಿ ಮಾರಿಕೊಂಡು ಹಳ್ಳಿ ಬಿಟ್ಟು ಹೋಗ್ತಾ ಇದಾರೆ. ಒಟ್ನು ಒಂದು ಇನ್ನೂರು ಮನೆ ಇರಬಹುದು."

"ಸ್ಕೂಲು ಇದೆ ಅಲ್ಲವೆ?"

"ಇದೆ. ಪ್ರೈಮರಿ, ಮಿಡ್ಲ್ ಸ್ಕೂಲು ಇದೆ ಈಗ ಹೊಸದಾಗಿ ಬಂದಿರೋ ಮೇಷ್ಟ್ರು ಬಳಗ ಒಂದು ವರ ಇದಾನಂತೆ. ನಮ್ಮ ಪುಟ್ಟೀಗೆ ವಿಚಾರಿಸಿದೆ. ಜಾತಕ ಚೆನ್ನಾಗಿ ಹೊಂದುತ್ತೆ. ನಾಳೆ ಎಲ್ಲಾ ನೋಡಕ್ಕೆ ಬರ್ತಾರಂತೆ. ಅವಳಿಗೂ ಮೊನ್ನೆ ಆಷಾಢಕ್ಕೆ ಹದಿನೇಳು ತುಂಬಿತು. ಏನೋ ಈಗಿನ ಕಾಲಮಾನಗುಣ ಹೊತ್ತಿಗೆ ಪರವಾಗಿಲ್ಲ. ನಮ್ಮ ಕಾಲವಾಗಿದ್ದರೆ ಇದು ವರೆಗೆ ಮದುವೆ ಇಲ್ಲದೆ ಕೂರಿಸಿ ಕೊಂಡಿರುವುದಕ್ಕಾಗ್ತಾ ಇತ್ತೇ? ಆದರೂ ನಮ್ಮ ತಾಯಿ ತುಂಬ ಗಲಾಟೆ ಮಾಡ್ತಾ ಇದಾರೆ. ಈ ವರ್ಷ ಮದುವೆ ಮಾಡದೆ ಇದ್ದರೆ ಸಾಧ್ಯವಿಲ್ಲ."

"ವರ ಏನು ಮಾಡಿಕೊಂಡಿದಾನೋ?" ಸುರೇಶ ಲೋಕಾಭಿರಾಮವಾಗಿ ಕೇಳಿದ.

"ಹೀಗೇ ಬೇಕಾದಷ್ಟು ತೋಟ ಇದೆ. ನೋಡ್ಕೊಂಡಿದಾನೆ. ತಿಪಟೂರಿನ ಹತ್ರ ಒಂದು ಹಳ್ಳಿ. ಉಟ್ಟು ತೊಟ್ಟು ಮಾಡೋಕೇನೂ ಕೊರತೆ ಇಲ್ಲ."

"ಸುಖ!" ಆದರ ಕಲ್ಪನೆ ಒಬ್ಬೊಬ್ಬರ ಮನಸಿನಲ್ಲಿ ಒಂದೊಂದು ರೀತಿಯದು.

"ವಿದ್ಯಾಭ್ಯಾಸ ಏನಾದರೂ ಆಗಿದೆಯೋ?" ಭಟ್ಟರು ಉದಾಸೀನದಿಂದ,

"ಏನು ಒಂದು ಲೆಕ್ಕ ಪತ್ರ ಇಡಲು ಬೇಕಾದಷ್ಟು ಓದಿರಬಹುದು. ನಮ್ಮ ಹುಡುಗೀಗೂ ನಾವೇನೂ ಕಲಿಸಿಲ್ಲ. ಗಂಡು ಹುಡುಗರ ಜೊತೆ ಹೋಗಬೇಕು ಅಂತ ನಮ್ಮಮ್ಮ ಒಪ್ಪಲಿಲ್ಲ. ಅಡಿಗೆ ಕೆಲಸ, ಪೂಜೆ ಪುರಸ್ಕಾರ ಮಾಡ್ಕೊಂಡು ಅವರಮ್ಮನ ಜೊತೆ ಮನೇಲೇ ಅಷ್ಟು ಹಾಡು ಹಸೆ ಕಲಿತುಕೊಂಡಿದಾಳೆ ಅಷ್ಟೆ."

ತೋಟ ಸಮೀಪಿಸಿತು.

ಸುಬ್ಬ, ಕಂಠಿ ಮುಂದೆ ಮುಂದೆ ಹೋದರು. ತೋಟ ಭಾರಿಯಾಗೇ ಇತ್ತು. ಮಾವು, ಹಲಸು, ದಾಳಿಂಬೆ, ಸೀಬೆ, ಸೀತಾಫಲ, ಪರಂಗಿ ಮರಗಳು ಅಲ್ಲದೆ ಬೇಲಿಗೆಂದು ಹಾಕಿದ್ದ ಹುಣಸೇಮರ ಮತ್ತು ಮುತ್ತುಗದ ಮರಗಳು. ತೆಂಗು, ಅಡಿಕೆಯ ತೋಟ ಬೇರೆ ಇತ್ತು. ಮತ್ತೊಂದು ಮಗ್ಗುಲಿಗೆ ತರಕಾರಿಯ ತೋಟ. ಟಮಾಟೋ, ಹುರಳೀಕಾಯಿ, ಬದನೇಕಾಯಿ ಗಿಡಗಳಲ್ಲಿ ಕಾಯಿ ತುಂಬಿ ತೂಗುತ್ತಿತ್ತು. ಭಟ್ಟರು, "ಈ ತರ್ಕಾರಿ ಬೆಳೆಯೊಂದು ಈಚೆಗೆ ಶುರು ಮಾಡಿದೆ"ಎಂದರು.

ಹಸಿರು ಹಾಸಿನಿಂದ ಹಾಯ್ದು ಬಂದ ತಂಗಾಳಿ ಚೈತನ್ಯಕಾರಿಯಾಗಿತ್ತು. ತೋಟದ ಹವ ಸುರೇಶನಿಗೆ ಹೊಸ ಬಗೆಯಾಗಿ ಆಹ್ಲಾದಕರವಾಗಿ ತೋರಿತು. ತೋಟದಲ್ಲೆಲ್ಲ ಸುತ್ತಾಡಿ, ತೋಟದ ಮನೆಗೆ ಬಂದರು. ಅಲ್ಲಿ ಆಳು ನರಸ ಭಟ್ಟರನ್ನು ಕುರಿತು, "ಈ ಸ್ವಾಮಿಯೋರು ಯಾರು ಬುದ್ಧಿ ನಮ್ಮ ಪುಟ್ಟವ್ವನೋರನ್ನ ನೋಡಕ್ಕೆ ಬಂದವ್ರಾ?" ಎಂದು ಕೇಳಿದ.

"ಅಯ್ಯೋ ಅಯ್ಯೋ ಇಲ್ಲ ಕಣೋ ನರಸ. ಅವರು ತುಂಬ ದೊಡ್ಡ ಮನುಷ್ಯರು. ತುಂಬಾ ಓದಿದಾರೆ. ನಮ್ಮ ಹಳ್ಳಿ ನೋಡೋಣಾಂತ ಬಂದಿದಾರೆ ಅಷ್ಟೆ." ಎಂದರು ಭಟ್ಟರು. ಸುರೇಶ ಒಳಗೇ ನಕ್ಕ. ತಾನು ಬಂದದ್ದು ಪುಟ್ಟಗೌರಿಯನ್ನು ನೋಡಲೆಂದೇ ತಾನೆ ?

ತೋಟದ ಮನೆಯೊಳಗಾಗಲೆ ತಾಯಿ, ಮಗಳು ಬಂದು ಕುಳಿತಿದ್ದರು. ಹುಳಿಯನ್ನ, ಮೊಸರನ್ನ, ಹಪ್ಪಳ. ಸಂಡಿಗೆಯ ಭೋಜನವಾಯಿತು. ಭಟ್ಟರು,

"ನೀವು [illegible] ವರ್ಷ ಸೀಮೇಲಿ ಇದ್ದು ಬಿಟ್ರಿ ಅಲ್ಲವೇ?" ಎಂದರು.

"ಹೌದು ಐದು ವರ್ಷ ಇದ್ದೆ"

"ನಮ್ಮ ದೇಶ, ನಮ್ಮ ಜನ ನೋಡದೆ ನಿಮಗೆ ಬೇಜಾರಾಗ್ಲಿಲ್ವೆ? ನನಗೇನೋ ಯಾವುದಾದರೂ ಕೆಲಸದ ಮೇಲೆ ತುಮಕೂರಿಗೋ ಬೆಂಗಳೂರಿಗೋ ಹೋಗಿ ಎರಡು ದಿನ ನಿಂತರೆ ಮನಸ್ಸೆಲ್ಲಾ ಇಲ್ಲೇ ಇರತ್ತೆ. ಈ ತೋಟ, ಮನೆ ಎಲ್ಲ ಹಿಡಿದೆಳೆಯುತ್ತೆ. ಎಂದಿಗೆ ವಾಪಸು ಬಂದೇನೋ ಎನಿಸುತ್ತೆ"

"ನಿಮ್ಮ ಹಾಗೆ ನಮಗೇನು ತೋಟವೇ ಗದ್ದೆಯೇ ಅಥವ ದನ ಕರುಗಳೇ. ಏನೂ ಇಲ್ಲ. ಆದರೂ ನೀವು ಹೇಳಿದ ಹಾಗೆ ಮನಸ್ಸು ಎಳೆಯುತ್ತೆ. ನನಗೆ ಅಲ್ಲೇ ಕೆಲಸ ಕೊಡ್ತೀವಿ ಅಂದರು, ಬೇಡ ಅಂತ ಬಂದು ಬಿಟ್ಟೆ"

"ಅಲ್ಲಿ ಜನ ಎಲ್ಲಾ ಹೇಗೆ?"

"ಎಲ್ಲಾ ತರಹಾನೂ ಇರ್ತಾರೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಜನರಿಗೆ ಮಾತಾಡೋಕ್ಕೂ ಪುರಸೊತ್ತಿಲ್ಲದಷ್ಟು ಕೆಲಸ. ಅವರು ಆಲಸ್ಯವನ್ನು ದ್ವೇಷಿಸುತ್ತಾರೆ. ಎಲ್ಲಾ ವಿಚಾರದಲ್ಲೂ ಬಹಳ ಮುಂದುವರಿದಿದ್ದಾರೆ. ಜನ ಸಾಮಾನ್ಯವಾಗಿ ಒಳ್ಳೆಯವರು. ನಾ ಇದ್ದ ಕಡೆ ಏನೋ ಎಲ್ಲಾ ಬಹಳ ಒಳ್ಳೆಯವರಾಗಿದ್ದರು. ನಮ್ಮ ಪ್ರೊಫೆಸರರ ಹೆಂಡತಿ ನನ್ನನ್ನು ತಾಯಿಯಂತೆ ನೋಡಿಕೊಳ್ಳುತ್ತಿದ್ದರು. ಕೊನೆಗೆ ಅಲ್ಲಿಂದ ನಾನು ಹೊರಟಾಗ ಕಣ್ಣಲ್ಲಿ ನೀರು ತಂದು "ಪುನಃ ಬನ್ನಿ, ನಮ್ಮನ್ನು ಮರೆಯಬೇಡಿ" ಅಂದರು."

"ಜನರ ಗುಣ ಮುಖ್ಯ. ದೇಶ ಕೋಶ ಏನು ಮಾಡುತ್ತೆ" ಎಂದರು ಭಟ್ಟರು.

ಪಾತ್ರೆಗಳನ್ನೆಲ್ಲ ಜೋಡಿಸಿಕೊಂಡು ಹೊರಡಲು ಸಿದ್ಧರಾದರು ನರಸಮ್ಮ. "ಗಾಡೀಲೇ ಒಟ್ಟಿಗೆ ಹೊರಟ್ಹೋಗೋಣ" ಎಂದರು ಭಟ್ಟರು. ಬಿಸಿಲು ಏರಿದ್ದುದರಿಂದ ಸುರೇಶನೂ ಒಪ್ಪಿದ.

ಸಂಜೆ ಭಟ್ಟರು, "ನಾನು ಒಂದು ಘಳಿಗೆ ಹೊರಗೆ ಹೋಗಿ ಬರ್ತೀನೆ. ನಾಳೆ ನಮ್ಮ ಪುಟ್ಟೀನ ನೋಡೋಕೆ ಗಂಡಿನ ಮನೆಯವರು ಬರ್ತಾರೆ ಮೇಷ್ಟ್ರು ಮನೆಗೆ ಹೋಗಿ ಏನಾದರೂ ಏರ್ಪಾಟು ಮಾಡಿಕೊಂಡು ಬರ್ತೀನಿ" ಎಂದರು.

ಏನೋ ಹೇಳಲು ಹೊರಟ ಸುರೇಶ ಅದಕ್ಕೇ ಸುಮ್ಮನಾಗಿ, "ಹೋಗಿ ಬನ್ನಿ" ಎಂದು ಹೇಳಿ ಜಗುಲಿಯ ಮೇಲೊಂದು ಚಾಪೆ ಹಾಸಿಕೊಂಡು ಕುಳಿತ. ಸುಬ್ಬ, ಕಂಠಿ ಇಬ್ಬರೂ ಪಿಸು ಮಾತಿನಲ್ಲಿ 'ನೀನು ಕೇಳು' 'ತಾನು ಕೇಳು' ಎನ್ನುತ್ತಿದ್ದುದು ಕೇಳಿಸಿತು. ಸುರೇಶ,

"ಏನದು ಸುಬ್ಬಣ್ಣಾ?" ಎಂದ.

"ಮತ್ತೇ... ಕಂಠಿ ಕೇಳ್ತಾನೆ. ನಿಮಗೆ ಪಗಡೆ ಆಡಕ್ಕೆ ಬರತ್ತಾ ಅಂತ"

ಸುರೇಶ 'ಪಗಡೆ' ಎಂಬ ಹೆಸರನ್ನು ಕೇಳಿದ್ದನೇ ಹೊರತು ಎಂದೂ ಆಡಿರಲಿಲ್ಲ. ಆದರೂ ವಿನೋದಕ್ಕಾಗಿ, "ತಗೊಂಡು ಬಾ ನೋಡೋಣ" ಎಂದ. ಸುಬ್ಬಣ್ಣ ಓಡಿ ಹೋಗಿ ಪಗಡೆ ಹಾಸು, ಕಾಯಿ, ದಾಳಗಳನ್ನು ತಂದ. ಕಂಠಿ

"ಮೂರು ಜನ [illegible]ವಲ್ಲಾ?" ಎಂದ.

"[illegible]ರೇನಂತೆ?" ಎಂದ ಆಟ [illegible]ದ ಸುರೇಶ.

"ಆಗಲ್ಲ ಇದಕ್ಕೆ ನಾಲ್ಕು ಜನ ಬೇಕು" ಎಂದ ಸುಬ್ಬು.

"ನಾನು ಬರಲೇನ್ರೋ?" ಎಂದು ಕೇಳಿದರು ಅಜ್ಜಿ.

ಕಂಠಿ ಘಾಬರಿಯಿಂದ, "ಇಲ್ಲ ಅಜ್ಜಿ ಅಕ್ಕ ಬರ್ತ್ತಾಳಂತೆ" ಎಂದು ಹೇಳಿದ. ಅಜ್ಜಿ ಪಗಡೆ ಯಾಟದಲ್ಲಿ ನಿಪುಣೆ. ಎಲ್ಲರ ಕಾಯನ್ನೂ ಕೊಂದು ಕೊಂದು ಸುಸ್ತು ಹೊಡೆಸುತ್ತಿದ್ದರು. ಕಂಠಿಯಂತೂ ಆಕೆಯೊಡನೆ ಆಟಕ್ಕೆ ಕುಳಿತಾಗ ಎಂಟು ಕಾಯಿಯೂ ಸೋಲುತ್ತಿದ್ದ.

ಕಂಠಿ ಒಳಗೆ ಹೋಗಿ ಪುಟ್ಟಗೌರಿಯನ್ನು ಬಲವಂತ ಮಾಡತೊಡಗಿದ. ಅವಳು,

"ನಾನು ಅಮ್ಮಂಗೆ ಕೋಡಬಳೆ ಹೊಸೆದು ಕೊಡಬೇಕು ಬರಲ್ಲ" ಎಂದಳು.

ಅಜ್ಜಿ, "ಅಪರೂಪಕ್ಕೆ ಆಟ ಹೂಡಿ ದಾರೆ ಬಾರೆ ಕೊಡಬಳೆ ಬೇಕಾದರೆ ನಾನು ಮಾಡ್ತೀನಿ" ಎಂದರು.

"ಜಗುಲಿಯ ಮೇಲೆ ಬೇಡ, ಒಳಗೆ ಆಡೋಣ" ಎಂದಳು ಪುಟ್ಟಿ.

ಒಳಗೆ ಹೂಡಿದ್ದಾಯಿತು. ಸುರೇಶ, ಕಂಠಿ ಜೊತೆಯಾದರು. ಸುಬ್ಬು, ಪುಟ್ಟಗೌರಿ ಒಂದು. ಆಟದ ಗಂಧವನ್ನೇ ಅರಿಯದ ಸುರೇಶ ಮನ ಬಂದಂತೆ ಕಾಯಿಗಳನ್ನು ನಡೆಸುತ್ತಿದ್ದ. ಒಮ್ಮೆ ತನ್ನ ಕೆಂಪಿನಿಂದ ಪುಟ್ಟಗೌರಿಯ ಹಳದಿಕಾಯಿ ಹೋಗುವ ಹಾಗಿದ್ದರೂ ಕೊಲ್ಲದೆ ಬೇರೆ ನಡೆಸಿದ. ಕಂಠಿ,

"ಆ ಹಳದೀನ ಕೊಂದ್ಬಿಡಿ" ಎಂದು ಕೂಗಿಕೊಂಡ. ಸುರೇಶ, "ಬೇಡ ಬಿಡು ಇದೆ ಇರ್ಲಿ ಏನೀಗ ಯಾವ್ದೋ ಒಂದು" ಎಂದ. ಅವರೆಲ್ಲ ಬಿದ್ದು ಬಿದ್ದು ನಕ್ಕರು. ನಗುವಾಗ ಪುಟ್ಟಿ ಮತ್ತೂ ಮುದ್ದಾಗಿ ಕಾಣುತ್ತಿದ್ದಳು. ಆ ಮುಗ್ಧ ಮುಖದ ನಿರ್ಮಲವಾದ ನಗೆಯ ಲಹರಿಯಲ್ಲಿ ಸುರೇಶ ತನ್ನನ್ನು ತಾನೆ ಮರೆತ.

ಪುಟ್ಟಿ, ಸುಬ್ಬಣ್ಣನೇ ಗೆದ್ದರು. ಸೋತು ಪೆಚ್ಚುಮುಖ ಮಾಡಿಕೊಂಡಿದ್ದ ಕಂಠಿಯ ಬೆನ್ನು ತಟ್ಟಿ, ಸುರೇಶ, "ಆಟ ಅಂದ ಮೇಲೆ ಒಬ್ಬರು ಗೆಲ್ಲಬೇಕು ಒಬ್ಬರು ಸೋಲಬೇಕು. ನನ್ನಿಂದ ನೀನು ಸೋತ ಹಾಗಾಯ್ತು. ಹೋಗಲಿ ಬಿಡು...ನಾನು ನೋಡಿಕೊಂಡು ಬಂದ ದೇಶಗಳ ವಿಚಿತ್ರಗಳನ್ನೆಲ್ಲಾ ಹೇಳ್ತೀನಿ ಬಾ" ಎಂದ ಕಂಠಿಯ ಮುಖ ಅರಳಿತು.

"ಮಾಳಿಗೆ ಮೇಲೆ ಹೋಗೋಣ ಬನ್ನಿ" ಎಂದ. ನರಸಮ್ಮ ಒಳಗಿನಿಂದ "ಪುಟ್ಟೀ ಕೋಡ ಬಳೆ ತಗೊಂಡು ಹೋಗಿ ಕೊಡೆ" ಎಂದರು. ಎಲ್ಲರೂ ಅಟ್ಟದ ಮೇಲಿನಿಂದ ಮಾಳಿಗೆಗೆ ಬಂದರು.

ಸುಬ್ಬಣ್ಣ ಒಂದು ಚಾಪೆಯನ್ನು ತಂದು ಹಾಸಿದ. ಪುಟ್ಟಗೌರಿ ಒಂದು ತಟ್ಟೆಯ ತುಂಬ ಕೋಡುಬಳೆಯನ್ನು ತಂದಿಟ್ಟಳು. ಕಂಠಿ ಒಂದು ತಂಬಿಗೆ ನೀರು ನಾಲ್ಕೈದು ಲೋಟಗಳನ್ನು ತಂದ.

ಸುಬ್ಬಣ್ಣ, "ಹೇಳಿ ನೀವು ಹೋಗಿದ್ದ ದೇಶ ಹೇಗಿತ್ತು ಅಂತಾ, ನಾವು ಬರೀ ಭೂಪಟದಲ್ಲೇ ಅದನ್ನೆಲ್ಲ ನೋಡಿರೋದು. ನೀವು ಹಡಗಿನಲ್ಲಿ ಹೋಗಿದ್ರೋ ಏರೋಪ್ಲೇನಿನಲ್ಲೋ?"

"ಹೋಗುವಾಗ ಹಡಗು. ಬರೋವಾಗ ಏರೋಪ್ಲೇನು."

"ಹಡಗು ತುಂಬಾ ದೊಡ್ಡದಾಗಿರತ್ತಾ. ನಮ್ಮ ಮನೆಯಷ್ಟಿರತ್ತಾ?" ಎಂದು ಕೇಳಿದ ಕಂಠಿ.

ಪುಟ್ಟಗೌರಿ, "ಏನೇನೋ ಕೇಳಬೇಡವೋ ನೀನು. ನಮ್ಮನೇ ಅಷ್ಟುದೊಡ್ಡದಾಗಿದ್ರೆ ನೀರಿನ ಮೇಲೆ ಹೋಗೋದಾಗತ್ತಾ?" ಎಂದಳು.

ಸುರೇಶ, "ಇನ್ನೂ ದೊಡ್ಡದಾಗಿರುತ್ತೆ. ಒಂದು ಸಲಕ್ಕೆ ಮುನ್ನೂರು ನಾನೂರು ಜನ ಹೋಗಬಹುದು" ಎಂದ.

"ಅಬ್ಬಾ! ಅಷ್ಟು ಭಾರ ತಡೆಯುತ್ತಾ ಅದು? ಮುಳುಗಿ ಹೋಗಲ್ವಾ?"

"ಇಲ್ಲ. ಹಡಗಿನ ಒಳಗೆ ಆಟ ಆಡಬಹುದು. ಸಿನೆಮಾ ನೋಡಬಹುದು. ಈಜುವ ಕೊಳ ಸಹ ಇರುತ್ತೆ."

"ಅಬ್ಬಬ್ಬಾ ಹೇಗೆ ಮಾಡ್ತಾರೋ ಅದೆಲ್ಲ ನಂಬೋಕೆ ಆಗಲ್ಲ."

"ಹಡಗಿನಲ್ಲೇ ಸಿನೆಮಾ ನೋಡಬಹುದು. ಸಣ್ಣಮಕ್ಕಳಿಗೆ ಆಟದ ಸೈಕಲ್ಲು, ಕುದುರೆ ಎಲ್ಲಾ ಇರೋ 'ನರ್ಸರಿ' ಸಹ ಇರುತ್ತೆ."

"ನೀವು ಅಮೇರಿಕ ಸೇರೋದಕ್ಕೆ ಎಷ್ಟು ದಿನ ಬೇಕಾಯ್ತು?"

"ಸುಮಾರು ಒಂದು ತಿಂಗಳು."

"ಒಂದು ತಿಂಗಳು ನೀರಿನ ಮೇಲೇ ಇದ್ದಿರಾ?"

"ಹೂಂ. ಕೊನೆ ಕೊನೆಗೆ ಸ್ವಲ್ಪ ಬೇಜಾರಾಯ್ತು."

ಸುರೇಶ ಎದ್ದು ಹೋಗಿ ತನ್ನ ಕೈಚೀಲದಿಂದ 'ವ್ಯೂಮಾಸ್ಟರ್' ತಂದು ರೀಲುಗಳನ್ನು ಹಾಕಿ ತೋರಿಸಿದ.

"ಇದು ನೋಡು ಎಂಪೈರ್ ಸ್ಟೇಟ್ ಬಿಲ್ಡಿಂಗ್. ಪ್ರಪಂಚದಲ್ಲೇ ಬಹಳ ಎತ್ತರವಾದ ಕಟ್ಟಡ. ಅದಕ್ಕೆ ಮಹಡಿಗಳಿವೆ"

"ಅದೇನು ಒಂದು ನಾಲ್ಕು ತೆಂಗಿನ ಮರ ದಷ್ಟೆತ್ತರ ಇದೆಯೇನೋ" ಎಂದು ಹೋಲಿಸಿದಳು ಗೌರಿ.

ಶ್ರಾವಣದ ಮೋಡ ಆವರಿಸಿ ಬರುತ್ತಿತ್ತು. ಮೋಡದ ಮರೆಯಿಂದ ತೂರಿ ಬರುತ್ತಿದ್ದ ಹೊಂಗಿರಣಗಳ ಕಾಂತಿಯಲ್ಲಿ ಗೌರಿ ಸ್ವರ್ಣ ಗೌರಿಯಾಗಿದ್ದಳು. ಸುರೇಶ ಹೇಳುತ್ತಿದ್ದುದನ್ನೆಲ್ಲ ಕೇಳಿ ಆಶ್ಚರ್ಯದಿಂದ ಸ್ವಲ್ಪವೇ ಬಿರಿದ ತುಟಿಗಳು–ಸುರೇಶ ಮೌನವಾಗಿ ಆ ಸೌಂದರ್ಯವನ್ನು ಸವಿದ.

ಕಂಠಿ "ಅಪ್ಪ ಬಂದರು" ಎಂದ.

ಆ ಹೊತ್ತಿಗೆ ಒಂದೆರಡು ಹನಿ ಮಳೆಯೂ ಬಿದ್ದುದರಿಂದ ಎಲ್ಲರೂ ಎದ್ದು ಒಳಕ್ಕೆ ಹೋದರು.

ರಾತ್ರಿ ಬಹಳ ಹೊತ್ತು ಸುರೇಶನಿಗೆ ನಿದ್ದೆ ಬರಲಿಲ್ಲ. ತಾಯಿ ತನ್ನೊಡನೆ ಮದುವೆಯ ಪ್ರಸ್ತಾಪ ಮಾಡಿ ಚಂಚಲೆಯ ಹೆಸರನ್ನು ಸೂಚಿಸಿದ್ದರು. ಆದರೆ ಮಾವನ ಮನೆಯಲ್ಲಿ ಯಾರೂ ಆ ಮಾತನ್ನು ಆಡಿರಲಿಲ್ಲ. ತನಗೂ ಅದು ಇಷ್ಟವಿರಲಿಲ್ಲ.

ಪುಟ್ಟಗೌರಿ ಅವನ ಹೃದಯದಲ್ಲಿ ಅಚ್ಚೊತ್ತಿದಂತೆ ನೆಲೆಸಿದ್ದಳು. ಪ್ರಪಂಚವೆಲ್ಲ ಸುತ್ತಿ ಬಂದು ಈ ಹಳ್ಳಿಯ ಮುಗ್ಧೆಗೆ ಮಾರು ಹೋಗಿದ್ದ ಸುರೇಶ. ಅವಳಿಗೆ ಅಕ್ಷರಜ್ಞಾನ ಸಹ ಇರಲಿಲ್ಲ. ತಾನು ಹುಟ್ಟಿದ ಹಳ್ಳಿ, ಎಂದಾದರೊಮ್ಮೆ ತುಮಕೂರು, ಬಿಟ್ಟು ಅವಳು ಇನ್ನೆಲ್ಲೂ ಹೋಗಿರಲಿಲ್ಲ. ಆದರೂ ಅವಳಲ್ಲಿ ಅದೇನೋ ಆಕರ್ಷಣೆ, ಸುರೇಶನ ಮನವನ್ನು ಹಿಡಿದು ತಬ್ಬಿ ಹಾಕಿತ್ತು.

ಚತುರ ಶಿಲ್ಪಿಗೆ ಉತ್ತಮ ಶಿಲೆಯನ್ನು ಕಂಡಾಗ ಉಂಟಾಗುವ ಆನಂದವೇ ಆಗಿತ್ತು ಸುರೇಶನಿಗೆ. ಈಗ ತಾನು ಪುಟ್ಟಗೌರಿಯನ್ನು ಮದುವೆಯಾದರೆ ತನಗೆ ಹೇಗೆ ಬೇಕೋ ಹಾಗೆ ಅವಳನ್ನು ತಿದ್ದಿಕೊಳ್ಳಬಹುದು. ಅವಳ ಆ ಹುಚ್ಚು ಹಿಡಿಸುವ ರೂಪ, ಯಾವ ಹಾಲಿವುಡ್ ತಾರೆಯರನ್ನೂ ನಾಚಿಸುವ ಮೈಮಾಟ, ಅದರ ಬಗ್ಗೆ ಹೆಮ್ಮೆಯಿಲ್ಲದ ಅಕಳಂಕವಾದ ಮನಸ್ಸು.

ಬೆಳಿಗ್ಗೆ ಬೇಗ ಎದ್ದು ಸುರೇಶ, ಮುಂಜಾವಿನಲ್ಲಿ ಹಳ್ಳಿಯ ಪ್ರಕೃತಿಯ ಸೊಬಗನ್ನು ಸವಿಯಲು ಹೊರಟ. ರಾತ್ರಿ ಬಿದ್ದ ಮಳೆಯಿಂದ ಪ್ರಕೃತಿ ಮೈತೊಳೆದು ನಗುನಗುತ್ತ ಹೊಸ ಕಳೆಯಿಂದ ಶೋಭಿಸುತ್ತಿದ್ದಳು. ಎತ್ತ ನೋಡಿದರೂ ಹಸಿರು, ಹಕ್ಕಿಗಳ ಚಿಲಿಪಿಲಿ, ಕಾವ್ಯವೊಂದು ರೂಪುಗೊಂಡು ಬಂದಂತಿತ್ತು, ಆ ಸೊಬಗು. ಸುರೇಶ ಆ ಸೊಬಗನ್ನು ಕಣ್ತುಂಬ ನೋಡುತ್ತ ಮುಂದೆ ಮುಂದೆ ನಡೆದ.

ನಡೆಯುತ್ತಿದ್ದ ಅವನನ್ನು ಹಿಡಿದು ನಿಲ್ಲಿಸಿತು ಆ ದೃಶ್ಯ–ಎದುರಿಗೆ ಅಶ್ವತ್ಥ ಕಟ್ಟೆಯ ಕಡೆಯಿಂದ ತನ್ನೆಡೆಗೆ ಬರುತ್ತಿದ್ದ ದೇವಕನ್ಯೆ–ಹೌದು ಅವಳೇ ಪುಟ್ಟಗೌರಿ. ಸೊಂಟದ ಮೇಲೊಂದು ನೀರು ತುಂಬಿದ ಕೊಡವನ್ನಿಟ್ಟು ನಿಧಾನವಾಗಿ ಬರುತ್ತಿದ್ದ ಗೌರಿ ಸುರೇಶನ ಕಣ್ಣಿಗೆ ಕಣ್ವಾಶ್ರಮದ ಶಕುಂತಲೆಯಾಗಿ ಕಂಡಳು. ತಾನು ಕ್ಯಾಮರಾ ತಂದಿದ್ದರೆ ಅವಳದೊಂದು ಚಿತ್ರವನ್ನಾದರೂ ತೆಗೆದುಕೊಳ್ಳಬಹುದಾಗಿತ್ತೆಂದುಕೊಂಡ. ಇಲ್ಲ ಇಲ್ಲ. ಆ ದಿವ್ಯ ದೃಶ್ಯವನ್ನು ಸೃಷ್ಟಿಸಲು ದೇವ ಬ್ರಹ್ಮನಿಂದಲ್ಲದೆ ಬೇರೆ ಯಾರಿಂದಲೂ ಸಾಧ್ಯವಿಲ್ಲ. ಆ ಮುಂಜಾವಿನ ಸೊಬಗಿನ ಹಿನ್ನೆಲೆಯಲ್ಲಿ ಈ ಮುಗ್ಧ ಸೌಂದರ್ಯ ರಾಶಿ.

ಸುರೇಶ ಪುಟ್ಟಗೌರಿಯ ಬಳಿಗೆ ಹೋದ.

"ಇದೇನು ನೀರಿಗೆ ಹೋಗಿದ್ದೆಯಾ?"

"ಹುಂ! ದಿನಾ ಅಮ್ಮನೇ ಹೋಗೋಳು. ಇವತ್ತು ಅವಳಿಗೆ ಕೆಲಸ ಇತ್ತು."

"ಮತ್ತೆ ಮನೇಲೇ ಭಾವಿ ಇದೆ?"

"ಅದು ಉಪ್ಪು ನೀರಿಂದು. ಸೀನೀರಿಗೆ ಭಾವೀಗೆ ಹೋಗಬೇಕು"

"ಪುಟ್ಟಗೌರೀ...?"

"ಅಂ...?"

"ನಿಮ್ಮ ಹಳ್ಳಿ ಎಷ್ಟು ಚೆನ್ನಾಗಿದೆ ಅಲ್ಲ?"

"ದೇಶಾನೆಲ್ಲಾ ಸುತ್ತಿ ಬಂದೋರು ನೀವು ನಮ್ಮ ಹಳ್ಳಿಲೇನು ಕಂಡಿರಿ?"

ಅದೊಂದು ಅತ್ಯಂತ ಸಹಜವಾದ ಪ್ರಶ್ನೆ. ಆದರೂ ಸುರೇಶ ತಕ್ಷಣ ಉತ್ತರಿಸಲಾಗಲಿಲ್ಲ. ದೂರದಲ್ಲಿ ಕಾಣುತ್ತಿದ್ದ ಸಿದ್ಧಗಂಗೆ ಬೆಟ್ಟ, ಉದಿಸುತ್ತಿದ್ದ ಸೂರ್ಯ, ಗೋವುಗಳನ್ನು ಅಟ್ಟಿಕೊಂಡು ಹೋಗುತ್ತಿದ್ದ ಗೋವಳರು ಎಲ್ಲವನ್ನೂ ನೋಡಿ ಸುರೇಶ್,

"ಇಷ್ಟು ಚೆನ್ನಾಗಿ ಯಾವ ದೇಶಾನೂ ಇಲ್ಲ" ಎಂದ.

"ಹೌದಾ?" ಪುಟ್ಟಗೌರಿ ಆಶ್ಚರ್ಯದಿಂದ ಕೇಳಿದಳು. ಸುರೇಶ್ ಸುತ್ತ ನೋಡಿದ. ದೂರದಲ್ಲೆಲ್ಲೋ ಒಬ್ಬಿಬ್ಬರು ತೋಟದ ಕಡೆಗೆ ಹೋಗುತ್ತಿದ್ದರು.

"ಪುಟ್ಟಗೌರೀ, ಇವತ್ತು ನಿನ್ನ ನೋಡೋಕೆ ಯಾರೋ ಬರ್‍ತಾರಂತೆ."

ಪುಟ್ಟಗೌರಿ, "ಹೊತ್ತಾಯ್ತು ನಾನ್ಹೋಗ್ತೀನಿ" ಎಂದಳು. ಸುರೇಶ ಹತ್ತಿರ ಬಂದ್ರು

"ಗೌರೀ, ನೀನು ನನ್ನ ಮದ್ವೆ ಮಾಡ್ಕೋತೀಯಾ?"

ಪುಟ್ಟ ಗೌರಿ ಸೊಂಟದಿಂದ ಕೊಡ ಜಾರಿತು. ಸುರೇಶ್ ಸಹಾಯ ಮಾಡಲು ಹೋದ. ಗೌರಿ ಮತ್ತಷ್ಟು ಗಾಬರಿಯಿಂದ ಕೊಡದ ಕೈಬಿಟ್ಟಳು. ಕೊಡ ಜಾರಿ ನೀರೆಲ್ಲ ಚೆಲ್ಲಿ ಹೋಯಿತು. ಪುಟ್ಟಗೌರಿ ತಲೆತಗ್ಗಿಸಿ ನಿಂತಳು. ಮುಖವೆಲ್ಲ ಕೆಂಪಾಗಿ, ಉದಯರಾಗಕ್ಕೆ ಕನ್ನಡಿ ಹಿಡಿದಂತಾಗಿತ್ತು

"ಛೆ ಛೆ ನೀರೆಲ್ಲಾ ಚೆಲ್ಲಿ ಹೋಯ್ತು. ನಾನು ಸೇದಿ ಕೊಡ್ತೀನಿ ಬಾ" ಎಂದ ಸುರೇಶ್.

ಅದು ವರೆಗೆ ಸುರೇಶನೊಡನೆ ಸಲೀಸಾಗಿ ಮಾತನಾಡುತ್ತಿದ್ದ ಪುಟ್ಟಗೌರಿ [illegible] ಕೊಂಡು, [illegible]

"ಬೇಡ ನಾ ಹೋಗ್ತೀನಿ" ಎಂದ[illegible]

"ಯಾವುದು ಬೇಡ ಮದ್ವೇನೋ ನೀರೋ?"

"ನೀರು..."

"ಹಾಗಾದರೆ ಮದುವೆಗೆ ಒಪ್ಪಿದೆ ಅನ್ನು"

"......"

"ನಾನು ಬೇಗ ಸೇದಿಕೊಡ್ತೀನಿ ಭಾವಿ ತೋರಿಸು" ಬೇಗ ಪಾರಾದರೆ ಸಾಕೆಂದು ಗೌರಿ ಭಾವಿಯ ಕಡೆ ನಡೆದಳು. ಎಂದೂ ಭಾವಿಯ ಹತ್ತಿರ ಸಹ ಸುಳಿಯದ ಸುರೇಶ ಗೌರಿಗಾಗಿ ಒಂದು ಕೊಡ ನೀರು ಸೇದಿಕೊಟ್ಟ. ಅವನು ಹಗ್ಗವನ್ನು ಅಡ್ಡಾದಿಡ್ಡಿಯಾಗಿ ಎಳೆಯುವ ರೀತಿ ನೋಡಿ ಅವಳಿಗೆ ನಗು ಬಂತು. ಕೊಡವನ್ನು ಗೌರಿಗೆ ಕೊಟ್ಟು ಸುರೇಶ, ಕೆಂಪಗಾಗಿದ್ದ ಕೈಗಳನ್ನು ಸವರಿಕೊಂಡು,

"ಈ ಒರಟು ಹಗ್ಗ ಹಿಡಿದು ದಿನಾ ಹೇಗೆ ಸೇದುತ್ತೀರೋ" ಎಂದ.

"ಅಭ್ಯಾಸವಾಗಿ ಹೋಗಿದೆ" ಎಂದಳು ಗೌರಿ.

"ನಮ್ಮನೇಲಿ ತಣ್ಣೀರು ಬಿಸಿ ನೀರು ಎರಡೂ ನಲ್ಲಿಗಳಿವೆ. ನೀವಿನ್ನೂ ಇಲ್ಲಿ ಉಪ್ಪು ನೀರು ಸಿಹಿನೀರು ಅಂತ ಸೇದೋದು ನೋಡಿದರೆ..."

"ಇದು ಹಳ್ಳಿ ಅಲ್ವೆ?"

ಭಾವಿಯ ಸುತ್ತ ಕಸ್ತೂರಿ ಜಾಜಿಯ ಪೊದೆ ದಟ್ಟವಾಗಿ ಬೆಳೆದಿತ್ತು. ಭಾವಿಯ ಹತ್ತಿರ ಅವರಿಬ್ಬರೇ. ಪುಟ್ಟಗೌರಿ ಅಂಜಿಕೆಯಿಂದ,

"ನಾನು ಹೋಗ್ತೀನಿ" ಎಂದಳು.

ಸುರೇಶ, "ಹೆದರಬೇಡ. ನಾನು ನಿನ್ನ ಏನೂ ಮಾಡೊಲ್ಲ. ನನ್ನ ಪ್ರಶ್ನೆಗೆ ಉತ್ತರ ಹೇಳು" ಎಂದ.

"ಅಪ್ಪನ್ನ ಕೇಳಿ..." ಎಂದು ಪುಟ್ಟಗೌರಿ ಅಲ್ಲಿ ನಿಲ್ಲದೆ ಬೇಗ ಬೇಗ ನಡೆದು ಹೋದಳು.

ಸುರೇಶ ಅವಳು ಹೋದ ದಿಕ್ಕಿನಲ್ಲೇ ನೋಡುತ್ತ ನಿಂತ. ಗೌರಿಯ ಕಾಲುಬಳೆ, ಚೈನು, ಬಹುದೂರದ ವರೆಗೂ ಕಾಣುತ್ತಿತ್ತು.

-೩-

ಸುರೇಶ ಮನೆಗೆ ಬಂದಾಗ ಭಟ್ಟರು ಬಾಗಿಲಲ್ಲೇ ನಿಂತಿದ್ದರು.

"ಕಾಫೀನೂ ಕುಡೀದೆ ಎಲ್ಲೋ ಹೊರಟು ಬಿಟ್ಟಿದ್ರಲ್ಲಾ?" ಎಂದರು.

"ಹೀಗೇ ಸುತ್ತಾಡಿಕೊಂಡು ಬಂದೆ" ಎಂದು ಕಾಫಿಗಾಗಿ ಒಳಗೆ ನಡೆದ ಸುರೇಶ ಕಾಫಿ ತಂದುಕೊಟ್ಟವನು ಕಂಡಿ.

"ಒಂಭತ್ತು ಘಂಟೆ ಹೊತ್ತಿಗೆ ಗಾಡಿ ಬರತ್ತೆ. ಹತ್ತು ಘಂಟೆಗೆ ಅಲದ ಮರದ ಹತ್ರಕ್ಕೆ ಕಾರು ಬಂದಿರತ್ತಂತೆ" ಎಂದರು ಭಟ್ಟರು.

"[illegible]", ಎಂದ ಸುರೇಶ. ಅವನಿಗೇನು ಹೊರಡುವ ಲವಲವಿಕೆ ಇರಲಿಲ್ಲ. ಆದರೂ ಹೊರಡುವುದು ನಿಶ್ಚಯವಾಗಿತ್ತು.

[illegible]ನ, ತಿಂಡಿ ಮುಗಿದ ಮೇಲೆ ಭಟ್ಟರು [illegible]ರೇ ಇದ್ದ ಸಮಯ ಸಾಧಿಸಿ,

"ನಿಮ್ಮಲ್ಲಿ ಒಂದು ಮಾತು ಕೇಳಬೇಕು" ಎಂದ ಸುರೇಶ.

"ಒಂದೇಕೆ ಹತ್ತು ಕೇಳಿ" ಎಂದರು ಭಟ್ಟರು ನಗುತ್ತ.

"ನಿಮ್ಮ ಮಗಳಿಗೆ ವರ ನೋಡ್ತಾ ಇದೀರಲ್ವೆ?"

"ಹೌದು ಇವತ್ತು ಮಧ್ಯಾಹ್ನ ನೋಡೋಕ್ಕೂ ಬರ್ತಾರಲ್ಲ. ಯಾಕೆ?"

"ಯಾಕೂ ಇಲ್ಲ. ವರ ನಾನೇ ಆಗೋಣಾಂತ" ಭಟ್ಟರಿಗೆ ಅರ್ಥವಾಗಲು ಎರಡು ನಿಮಿಷ ಬೇಕಾಯಿತು. ನಂತರ,

"ಉಂಟೇ ಸ್ವಾಮಿ ನೀವೆಲ್ಲಿ ನಾವೆಲ್ಲಿ? ಸರಸ್ವತೀ ಪುತ್ರರು ನೀವು. ಶುದ್ಧ ಶುಂಠಿ ನಮ್ಮ ಪುಟ್ಟಿ. ಏನಿದ್ದರೂ ಹಳ್ಳಿ ಸಂಸಾರಕ್ಕೆ ಲಾಯಕ್ಕಾದ ಹೆಣ್ಣು."

"ನಾನೇ ಒಪ್ಪಿದೀನಲ್ಲಾ ?"

"ಈಗ ಹಾಗನ್ನಿಸಬಹುದು. ಮುಂದೆ ನಿಮಗೆ ಬೇಜಾರಾದರೆ..."

"ಹಾಗಾದರೆ ನಿಮಗೆ ಒಪ್ಪಿಗೆ ಇಲ್ಲಾನ್ನಿ"

"ಉಂಟೇ... ಹಾಗೂ ಅನ್ನಲಾರೆ. ಎಷ್ಟು ಜನ್ಮಗಳ ಪುಣ್ಯದಿಂದ ಗೌರಿಗೆ ನೀವಾಗಿ ಒಲಿದು ಬಂದಿರುವಾಗ ನಾನು ತಪ್ಪಿಸಲೇ ? ನಿಮ್ಮ ತಾಯಿ ತಂದೆ ಒಪ್ತಾರೆಯೇ ದೇವ್ರೂ ?"

"ಅದೆಲ್ಲಾ ನನಗೆ ಬಿಡಿ. ಒಪ್ಪಿಸೋ ಭಾರ ನಂದು."

"ಹಾಗಾದರೆ ನಾನೇ ಬಂದು ನಿಮ್ಮ ತಂದೀನ ನೋಡ್ತೀನಿ"

"ಆಗಲಿ. ಆದರೆ ಜಾತಕ ಗೀತಕ ನೋಡೋದೇನೂ ಬೇಡ"

"ತಮ್ಮ ಗೋತ್ರ"

"ನಂಗೊತ್ತಿಲ್ಲ ವಿಶ್ವಾಮಿತ್ರ ಇರಬಹುದು."

"ಸರಿ ಹಾಗಾದರೆ ಭಯವಿಲ್ಲ...ಆದ್ರೂ ಇದೇನು ಕನಸೋ ನಂಗೆ ನಂಬೋಕೆ ಆಗಲ್ಲ"

ಸುರೇಶ ನಗುತ್ತ, "ನನಗೂ ಅಷ್ಟೆ" ಎಂದ. ಆ ಕ್ಷಣ ಮನೆಯಲ್ಲೆಲ್ಲ ಸುದ್ದಿ ಹರಡಿತು. ಅಜ್ಜಿಯಂತೂ ಹಿಗ್ಗಿ ಹೀರೇಕಾಯಾಗಿ,

"ನಮ್ಮ ಯಜಮಾನರಿದ್ದಾಗ ಪುಟ್ಟಿ ಜಾತಕ ನೋಡಿ ಹೇಳಿದ್ದರು-ಹುಡುಗಿ ತುಂಬ ಅದೃಷ್ಟಶಾಲಿ ಅಂತ" ಎಂದು ಸುರೇಶನನ್ನು, "ನೂರು ವರ್ಷ ಸುಖವಾಗಿ ಬಾಳು ಮಗೂ" ಎಂದು ಹರಿಸಿದರು.

ಸುರೇಶ ಹೊರಡುವಾಗ ಮನೆಯ ಮೂಲೆ ಮೂಲೆಗೆ ಕಣ್ಣು ಓಡಿಸಿದ. ಎಲ್ಲೂ ಪುಟ್ಟ ಗೌರಿ ಕಾಣಲಿಲ್ಲ. ಗಾಡಿ ಹೊರಟಿತು. ಸುರೇಶ ಎಲ್ಲರಿಗೂ,

"ಹೋಗಿ ಬರ್ತೀನಿ" ಎಂದು ಹೇಳಿದ.

ಸುಬ್ಬ, "ನೀವು ಬರೀ ಹಡಗಿನ ವಿಷಯ ಹೇಳಿದಿರಿ. ಇನ್ನೊಂದ್ಸಲ ಏರೋಪ್ಲೇನಿನ ವಿಚಾರ ಹೇಳಬೇಕು" ಎಂದ.

"ಆಗಲಿ ಬೆಂಗಳೂರಿಗೆ ಬಾ. ಏರೋಪ್ಲೇನಿನ ಒಳಗೆ ಕರಕೊಂಡು ಹೋಗಿ ತೋರಿಸ್ತೀನಿ" ಎಂದ ಸುರೇಶ, ಗಾಡಿ ಹೊರಟಿತು.

ಸುರೇಶನ ದೃಷ್ಟಿ ಆಕಸ್ಮಾತ್ತಾಗಿ ಮಾಳಿಗೆ ಯತ್ತ ತಿರುಗಿತು. ಅಲ್ಲೇ ಇದ್ದಳು, ಅವನ ಮನದನ್ನೆ. ಕಣ್ಣಿನಿಂದಲೇ ಪ್ರೇಮ ಸಂದೇಶ ಮುಟ್ಟಿಸಿದ. ಹೃದಯ ಹಗುರಾಗಿ ಹಾಡುತ್ತಿತ್ತು. ಮೊದಲೇ ಸುಂದರವಾಗಿದ್ದ ಪ್ರಕೃತಿ ಅವನ ಹರ್ಷದ ಉಬ್ಬರದಲ್ಲಿ ಮತ್ತೂ ಸುಂದರವಾಗಿ ಕಂಡಿತು.

ಗಾಡಿಯಲ್ಲಿ ಜೊತೆಯಲ್ಲಿ ಕುಳಿತಿದ್ದ ಭಟ್ಟರು "ಮಧ್ಯಾಹ್ನ ನೋಡೋಕೆ ಬರೋರಿಗೆ ಏನಾದರೂ ಹೇಳಿ ಕಳಿಸಿ ಬಿಡುತ್ತೇನೆ. ತಮ್ಮ ಮಾತು ಖಂಡಿತ ತಾನೆ?" ಎಂದು ಕೇಳಿದರು.



"ನೂರು ವರ್ಷ ಸುಖವಾಗಿ ಬಾಳು ಮಗೂ"

"ನನ್ನಲ್ಲಿ ನಿಮಗೆ ನಂಬಿಕೆ ಇಲ್ಲವೆ?"

"ಹಾಗಲ್ಲ ದೇವರು, ತಪ್ಪು ತಿಳಕೋ ಬೇಡಿ. ನಿಮ್ಮ ಮನೆಯಲ್ಲಿ ಒಪ್ತಾರೆಯೇ ಅಂತ. ಹಳ್ಳಿ ಹುಡುಗಿ ಅಂತ ಬೇಡ ಅಂದರೆ?"

"ಹಾಗೇನೂ ಆಗೊಲ್ಲ ಭಟ್ಟರೆ. ನಾನೇ ಇಷ್ಟಪಟ್ಟರೋವಾಗ ಅವರೇನೂ ಹೇಳೋಲ್ಲ."

"ಒಂದು ಒಳ್ಳೆ ದಿನ ನೋಡಿಕೊಂಡು ನಾನು ಬೆಂಗಳೂರಿಗೆ ಬಂದು ಎಲ್ಲಾ ನಿಷ್ಕರ್ಷೆ ಮಾಡಿಕೊಂಡು ಬರ್ತೀನಿ."

ಗಾಡಿ ಆಲದ ಮರದ ಹತ್ತಿರಕ್ಕೆ ಬಂತು. ಮೊದಲೇ ಏರ್ಪಾಟು ಮಾಡಿದ್ದಂತೆ ಸೋಮಶೇಖರರ ಕಾರು ಅಲ್ಲಿ ಸಿದ್ಧವಾಗಿತ್ತು.

ಸುರೇಶ ಗಾಡಿಯಿಂದಿಳಿದು ಕಾರನ್ನೇರಿದ. ಕಾರಿನೊಳಕ್ಕೆ ಭಟ್ಟರು, ಕಾಯಿ, ಕೊಬ್ಬರಿ ತುಂಬಿದ ಚೀಲ, ಎರಡು ಹಲಸಿನ ಹಣ್ಣು ಮತ್ತು ತಿಂಡಿಯ ಬುಟ್ಟಿಗಳನ್ನು ಇಟ್ಟರು. ಸುರೇಶ,

"ಇದೆಲ್ಲ ತುಮಕೂರಿನಲ್ಲಿ ಇಳಿಸಿ ಬಿಡೋದು ತಾನೆ?" ಎಂದ.

"ಎಷ್ಟು ಜನ್ಮಗಳ ಪುಣ್ಯದಿಂದ ಗೌರಿಗೆ ನೀವಾಗಿ ಒಲಿದು ಬಂದಿರುವಾಗ ನಾನು ತಪ್ಪಿಸಲೆ ?"

"ಇಲ್ಲ ಇಲ್ಲ. ಇದೆಲ್ಲಾ ನಿಮ್ಮ ಮನೆಗೆ, ಕೌಸಲ್ಯಮ್ಮನಿಗೆ ನಾನು ಆಗಾಗ ಕಳಿಸ್ತಾನೆ ಇರ್ತೀನಿ."

"ಇದನ್ನೆಲ್ಲ ಬೆಂಗಳೂರಿಗೆ ಹೇಗೆ ತಗೊಂಡು ಹೋಗಲಿ? ಬಸ್ಸಿನಲ್ಲಿ ಹೋಗ್ತೀನಲ್ಲ?"

"ಅದರಲ್ಲೇ ಹಾಕಿಕೊಂಡು ಹೋದರಾಯ್ತು" ಎಂದರು ಭಟ್ಟರು.

ಸುರೇಶ, "ಸರಿ ಆಗಲಿ ಬರ್ತೀನಿ" ಎಂದ ಇದಕ್ಕೇನು ಚರ್ಚೆ ಎನ್ನುವಂತೆ.

ಕಾರು ಕಣ್ಮರೆಯಾಗುವ ವರೆಗೆ ನೋಡುತ್ತ ನಿಂತಿದ್ದರು ಭಟ್ಟರು.

"ಅದೃಷ್ಟ ಅನ್ನೋದು ಯಾವ ರೂಪದಲ್ಲ ಯಾವಾಗ ಬರುತ್ತೆ ಅನ್ನೋದೇ ತಿಳಿಯೋದಿಲ್ಲ. ಎಲ್ಲ ಭಗವಂತನ ಲೀಲೆ" ಎನ್ನುತ್ತ ಗಾಡಿಯು ನ್ನೇರಿ ಹಳ್ಳಿಯ ಕಡೆ ಹೊರಟರು.

ಮತ್ತೊಂದು ದಿನ ಕೌಸಲ್ಯಮ್ಮ ಸೋಮ-ಶೇಖರರ ಆತಿಥ್ಯದಲ್ಲಿದ್ದು ಸುರೇಶ ಮನೆಗೆ ಮರಳಿದ.

ಕಾಯಿ, ಕೊಬ್ಬರಿ, ತಿಂಡಿಯ ಬುಟ್ಟಿಗಳನ್ನು ನೋಡಿದ ತಾಯಿ, "ಇದೆಲ್ಲ ಏನು ಸುರೇಶ್?" ಎಂದರು.

"ನೀನೇ ನೋಡಮ್ಮ" ಎಂದ ಸುರೇಶ.

ವಿಶಾಲಾಕ್ಷಮ್ಮ ಬುಟ್ಟಿಯನ್ನು ಬಿಚ್ಚಿ,

"ಇದೇನು ಕೌಸಲ್ಯ ಎಂದೂ ಇಲ್ಲದ್ದು ಇಷ್ಟೊಂದು ತಿಂಡಿ ಕಳಿಸಿದಾಳೆ?" ಎಂದರು.

"ಅತ್ತೆ ಅಲ್ಲಾಮ್ಮ. ಅಲ್ಲಿಂದ ಹಳ್ಳಿಗೆ ಹೋಗಿದ್ದೆ. ಅಲ್ಲಿ ಭಟ್ಟರ ಮನೆಯವರು ಕೊಟ್ಟದ್ದು"

"ಯಾವ ಭಟ್ಟರೋ ಸುರೇಶ್?"

"ನಿಧಾನವಾಗಿ ಹೇಳ್ತೀನಮ್ಮ"

ಪ್ರಮೀಳ ಬುಟ್ಟಿಗೆ ಕೈಹಾಕಿ ಕೊಬ್ಬರಿ ಒಬ್ಬಟ್ಟನ್ನು ತೆಗೆದು ರುಚಿ ನೋಡಿ,

"ಎಷ್ಟು ಚೆನ್ನಾಗಿದೆ ಅಮ್ಮ ಒಳ್ಳೆ ಮಂಡಿಗೆ ಇದ್ದ ಹಾಗೆ" ಎಂದಳು.

"ಮನಸ್ಸಿನಲ್ಲೇ ಮಂಡಿಗೆ ಮುರಿಯೋರಿಗೆ ಎಲ್ಲಾ ಹಾಗೆ ಇರೋದು" ಎಂದ ಸುರೇಶ್.

ಒಂದು ಪುಳ್ಳಂಗಾಯುಂಡೆಯನ್ನು ತೆಗೆದು ಸುರೇಶನ ಕಡೆಗೆ ಎಸೆದಳು ಪ್ರಮೀಳ. ಸುರೇಶ ತಪ್ಪಿಸಿಕೊಂಡದ್ದರಿಂದ ಉಂಡೆ ಗೋಡೆಗೆ ಬಡಿದು ಕೆಳಗೆ ಬಿದ್ದು ಚೂರು ಚೂರಾಯಿತು. ವಿಶಾಲಾಕ್ಷಮ್ಮ ರೇಗಿ,

"ಕಾರ್ಪೆಟ್ ಎಲ್ಲಾ ಹೋಯ್ತು ಎಷ್ಟು ದೊಡ್ಡವರಾದ್ರೂ ಏನು ಹೀಗಾಡ್ತೀರೋ" ಎಂದರು.

"ಆ ಕಲ್ಲಿನಂತಹ ಪುಳ್ಳಂಗಾಯುಂಡೆ ಸಹ ಪುಡಿ ಪುಡಿಯಾಗಬೇಕಾದರೆ ಈ ಪಮ್ಮಿ ಶಕ್ತಿ ಎಷ್ಟಿರಬೇಕಮ್ಮಾ, ಮುಂದೆ ಮದುವೆ ಮಾಡ್ಕೋಳೋ ಗಂಡನ್ನ ದೇವರೇ ಕಾಪಾಡ ಬೇಕು."

ವಿಶಾಲಾಕ್ಷಮ್ಮ ನಕ್ಕರು.

"ಸುರೇಶ್, ಚಂಚಲಾ ಹೇಗಿದಾಳೆ?" ಎಂದು ಮಾತು ಬದಲಾಯಿಸಿದರು.

"ಇದಾಳಮ್ಮ, ಬೊಂಬಾಯಿ ಬೋಂಡ ಇದ್ದ ಹಾಗೆ."

"ಹಾಗಂದರೇನೋ?"

"ಅವರ ಮನೇಲಿ ಊಟ—ತಿಂಡಿ ಬಹಳ ಜಾಸ್ತಿ. ಅದಕ್ಕೇ ಅಂತ ಕಾಣತ್ತೆ ಅವಳು ಹಾಗಾ ಗಿರೋದು. ಮೂಗು ಬಾಯಿ ಎಲ್ಲಿದೆ ಅಂತ ಟಾರ್ಚ ಹಿಡಿದು ಹುಡುಕಬೇಕು."

"ನೀನಂತೂ ಎಲ್ಲರನ್ನೂ ಹಾಸ್ಯ ಮಾಡುವು ದರಲ್ಲೇ ಆಯ್ತು. ಕೌಸಲ್ಯ, ಅಣ್ಣಾ ಎಲ್ಲಾ ಚೆನ್ನಾಗಿದಾರಾ?"

"ಭೇಷಾಗಿದಾರಮ್ಮ, ಮಾವನಿಗೆ ಪ್ರಾಕ್ಟೀಸ್ ಜೋರಾಗಿರೋ ಹಾಗಿದೆ..."

ವಿಶಾಲಾಕ್ಷಮ್ಮ ಕುತೂಹಲವನ್ನು ತಡೆಯ ಲಾರದೆ "ಮದುವೆ ಮಾತೇನಾದರೂ ಬಂತೆ?" ಎಂದರು.

"ಯಾರ ಮದುವೆ?"

"ಇನ್ಯಾರು. ಚಂಚಲಾಳದು. ಅವಳಿಗೂ ಬಿ. ಎ, ಆಗಿ ಎರಡು ವರ್ಷವಾಯಿತು."

"ಯಾರಾದರೂ ಡಾಕ್ಟರ್‌ನೇ ಅಳಿಯ ನನ್ನಾಗಿ ಮಾಡಿಕೊಂಡು ಮನೇಲೇ ಇಟ್ಕೊಳ್ಳೋ ಬೇಕು ಅಂತ ಇಷ್ಟ ಇರೋ ಹಾಗೆ ಕಾಣತ್ತೆ."

ವಿಶಾಲಾಕ್ಷಮ್ಮನ ಹುಬ್ಬು ಗಂಟಿಕ್ಕಿತು.

"ಹಾಗಂತ ಹೇಳಿದರೇನು?"

"ಯಾಕಮ್ಮ ಆ ಚಂಚಲಾ ನಿನಗೆ ಸೊಸೆ ಆಗಬೇಕೂಂತ ಇಷ್ಟವಿತ್ತೆ? ಬರೀ ದುಡ್ಡು ನೋಡಿ ಇಷ್ಟಪಟ್ಟಿಯೇನೊ?"

"ಹಾಗೇನಿಲ್ಲ ಅದಕ್ಕಿಂತ ದೊಡ್ಡ ಮನು ಷ್ಯರು ಬೇಕಾದಷ್ಟು ಜನ ನಾನು ತಾನು ಅಂತ ಕಾದಿದಾರೆ ನಿನಗೆ ಹೆಣ್ಣು ಕೊಡೋಕೆ."

"ಯಾರಿಗೂ ತೊಂದರೆ ಬೇಡಮ್ಮ ನನ್ನ ಹೆಂಡತಿಯನ್ನು ನಾನೇ ಆರಿಸಿಕೊಳ್ತೀನಿ."

"ಹಾಗೆಂದರೇನು ಸುರೇಶಾ.?"

"ಅದೊಂದು ಗುಟ್ಟು. ಯಾವಾಗಲಾದರೂ ಹೇಳ್ತೀನಿ." ವಿಶಾಲಾಕ್ಷಮ್ಮ ಮತ್ತೆ ಮತ್ತೆ ಕೇಳಿದರೂ ಸುರೇಶ್ ಬಾಯಿ ಬಡಲಿಲ್ಲ.

"ಅಮ್ಮಾ ನಾನಂತೂ ಭಟ್ಟರ ಮಗಳನ್ನೇ ಮದುವೆ ಮಾಡುವುದೆಂತ ನಿಶ್ಚೈಸಿದ್ದೇನೆ."

-೪-

ಆಧುನಿಕ ರೀತಿ ನೀತಿಗಳನ್ನು ಎಲ್ಲ ವಿಧದಲ್ಲೂ ಅನುಸರಿಸುತ್ತಿದ್ದ ಮನೆ ಅದು. ವಿಶಾಲಾಕ್ಷಮ್ಮನೇ ಪದವೀಧರೆಯಾಗಿದ್ದು, ಅನೇಕ ಸಮಾಜ, ಸಂಘಗಳಿಗೆ ಸದಸ್ಯೆಯಾಗಿದ್ದರು. ಮಗಳು ಪ್ರಮೀಳ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದಳು. ಹಿರಿಯ ಮಗಳು ನಿರ್ಮಲ ಎಂ. ಎ. ಮುಗಿಸಿದ್ದಳು-ಪತಿ ಪತ್ನಿಯರಿಬ್ಬರೂ ಒಂದೇ ಕಾಲೇಜಿನಲ್ಲಿ ಡೆಲ್ಲಿಯಲ್ಲಿ ಕೆಲಸ ಮಾಡುತ್ತಿದ್ದರು. ಹಿರಿಯ ಮಗ ರಮೇಶ್ ಮಿಲಿಟರಿಯಲ್ಲಿ ದೊಡ್ಡ ಹುದ್ದೆಯಲ್ಲಿದ್ದ ಅವನ ಮಡದಿ ಚಂದ್ರಕಲಾ ಮದರಾಸಿನ ಚಲಚಿತ್ರ ಹಂಚಿಕೆದಾರರ ಮಗಳಾಗಿ ಅತ್ಯಾಧುನಿಕ ಉಡುಪು ಮತ್ತು ನಡವಳಿಕೆಗಳಿಂದ ಸಿನೆಮಾ ತಾರೆಯಂತೆಯೇ ಕಾಣುತ್ತಿದ್ದಳು. ತಂದೆ ವಿಶ್ವನಾಥರಾಯರು ಪ್ರಸಿದ್ಧ ವಕೀಲರಾಗಿದ್ದು ಕ್ಲಬ್ಬು, ಕುದುರೆ ಜೂಜುಗಳಿಗೆ ಹಾಜರಿ ಹಾಕುತ್ತ ಅಧುನಿಕರ ಸಾಲಿಗೇ ಸೇರಿದ್ದರು. ಈ ಸಂಸಾರದಲ್ಲಿ ತಾನು ಪುಟ್ಟಗೌರಿಯನ್ನು ಮದುವೆಯಾಗುವುದು ಎಂತಹ ವಿರೋಧಾಭಾಸವೆಂದು ತಿಳಿದಿತ್ತು. ಆದರೆ ಅದೇ ತಾನೆ ಅತಿ ನಾಗರಿಕ ನಾಡಿನಿಂದ ಹಿಂತಿರುಗಿದ್ದ ಅವನು ಕೃತಕ ಸಾಧನಗಳಿಂದ ಅತಿಯಾಗಿ ಶೃಂಗರಿಸಿಕೊಂಡು ಗಂಡಸರೆಂದರೆ ನಾಚಿಕೆ ಸಂಕೋಚಗಳಿಲ್ಲದೆ ಬೆರೆಯುವ-ಮೇಲೇರಿ ಬರುವ-ಹುಡುಗಿಯರನ್ನು ನೋಡಿ ಬೇಸತ್ತಿದ್ದ. ಪುಟ್ಟಗೌರಿಯ ಮುಗ್ಧ ಮನೋಹರವಾದ ಚೆಲುವು ಅವನ ಮನವನ್ನು ಸೂರೆಗೊಂಡಿತ್ತು. ಇದನ್ನು ತಾಯಿಯ ಮುಂದೆ ಹೇಳಲು ಹಿಂಜರಿಯುತ್ತ ಅದಕ್ಕೆ ಸರಿಯಾದ ಸಮಯಕ್ಕಾಗಿ ಕಾಯುತ್ತಿದ್ದ.

ಅವನ ಮನಸ್ಸನ್ನು ತಿಳಿಯಲು ಅವನ ತಾಯಿ ಹಲವಾರು ಸಲ ಪ್ರಯತ್ನಿಸಿ ವಿಫಲರಾಗಿದ್ದರು.

ಮಧ್ಯಾಹ್ನ ಎರಡು ಘಂಟೆಯ ಸಮಯ. ಎಲ್ಲರೂ ಮಲಗಿ ವಿಶ್ರಮಿಸುತ್ತಿದ್ದರು. ನಾಯಿ ಬಗುಳಿದ ಸದ್ದು ಕೇಳಿ ಸುರೇಶ ಕಿಟಕಿಯಿಂದ ನೋಡಿದ. ವೆಂಕಾಭಟ್ಟರು ಗೇಟಿನ ಹತ್ತಿರ ನಿಂತಿದ್ದರು. ಜೊತೆಯಲ್ಲಿ ಸುಬ್ಬನೂ ಇದ್ದ. ಸುರೇಶ ಬೇಗ ಹೋಗಿ ನಾಯಿಯನ್ನು ಕಟ್ಟಿಹಾಕಿ "ಬನ್ನಿ" ಎಂದ. ಭಟ್ಟರು, "ದಿನ ಚೆನ್ನಾಗಿದೆ ಮಾತಾಡಿಕೊಂಡು ಹೋಗೋಣಾಂತ ಬಂದೆ ದೇವರೂ" ಎನ್ನುತ್ತ ಒಳಕ್ಕೆ ಬಂದರು.

ಸುರೇಶ ತಗ್ಗಿದ ದನಿಯಲ್ಲಿ,

"ನಾನಿನ್ನೂ ಮನೇಲಿ ಈ ವಿಚಾರ ಪ್ರಸ್ತಾಪ ಮಾಡಿಲ್ಲ" ಎಂದ. ಭಟ್ಟರು ಅನುಮಾನದಿಂದ, "ಯಾಕೆ ಸ್ವಾಮಿ?" ಎಂದರು. ಅವರ ಮನದ ಭಯವನ್ನು ಗ್ರಹಿಸಿದ ಸುರೇಶ,

"ನೀವೇನೂ ಹೆದರಬೇಡಿ ಭಟ್ಟರೇ. ನಾನು ಪುಟ್ಟಗೌರಿಯನ್ನಲ್ಲದೆ ಬೇರೆ ಯಾರನ್ನೂ ಮದುವೆಯಾಗೋಲ್ಲ" ಎಂದು ಹೇಳಿದ. ಭಟ್ಟರು,

"ಈಗಾಗಲೆ ಶ್ರಾವಣಮಾಸ ಮುಗಿಯುತ್ತ ಬಂತು. ಕಾರ್ತಿಕದಲ್ಲಿ ಲಗ್ನ ಇಟ್ಟರೆ ನಮಗೆ ಒಂದು ತಿಂಗಳಾದರೂ ಟೈಂ ಸಿಗುತ್ತೆ, ಅಂತ ನಾನು ಯೋಚಿಸಿಕೊಂಡು ಬಂದೆ. ಆ ದಿನ ಪುಟ್ಟೀನ ನೋಡೋಕ್ಕೆ ಬಂದಿದ್ದೋರೂ ಇನ್ನೂ ಆಸೆ ಇಟ್ಕೊಂಡಿದಾರೆ" ಎಂದರು.

''ಛೆ ಛೆ ಅದನ್ನೆಲ್ಲ ನೀವು ಮರೆತು ಬಿಡಿ'' ಎನ್ನುವಾಗ ವಿಶಾಲಾಕ್ಷಮ್ಮ ಈಚೆ ಬಂದರು. ಅವರು ಮಾತಾಡುವ ಮೊದಲೇ ಸುರೇಶ, ''ಅಮ್ಮ ನಾನು ಹಳ್ಳಿಗೆ ಹೋಗಿದ್ದೆ ಅಂತ ಹೇಳಿದೆನಲ್ಲಾ, ಇವರ ಮನೆಗೆ ಅಮ್ಮ ನಾನು ಹೋಗಿದ್ದು'' ಎಂದ. ಭಟ್ಟರು ಕೈ ಜೋಡಿಸಿ, ''ನಮಸ್ಕಾರ ತಾಯೀ'' ಎಂದರು. ವಿಶಾಲಾಕ್ಷಮ್ಮ ''ನಮಸ್ಕಾರ ಬನ್ನಿ'' ಎಂದರು. ಅವರ ಮನೆಯ ವಿಶಾಲವಾದ ಡ್ರಾಯಿಂಗ್ ರೂಮಿನಲ್ಲಿ ಎಲ್ಲಿ ಕೂಡಬೇಕೆಂದು ತಿಳಿಯದೆ ನಿಂತರು ಭಟ್ಟರು. ಕೊನೆಗೆ ಸುರೇಶನೇ ಒಂದು ಬೆತ್ತದ ಕುರ್ಚಿಯನ್ನು ತೋರಿಸಿ, ''ಕೂತುಕೊಳ್ಳಿ'' ಎಂದ.

ಗೋಡೆಯ ಮೇಲಿದ್ದ ತೈಲಚಿತ್ರಗಳು, ಬಳ್ಳಿ ಬಳ್ಳಿಯಾಗಿ ಹಬ್ಬಿದ್ದ 'ಮನಿಪ್ಲಾಂಟ್', ಅಲ್ಲಲ್ಲಿ ನಿಂತ ರಾಧಾಕೃಷ್ಣ, ಪಾರ್ವತಿ, ಪರಮೇಶ್ವರರ 'ಪ್ಲಾಸ್ಟರ್ ಆಫ್ ಪ್ಯಾರಿಸ್' ವಿಗ್ರಹಗಳು, ಎಲ್ಲವನ್ನೂ ಸುಬ್ಬಣ್ಣ ವಿಸ್ಮಯದಿಂದ ನೋಡುತ್ತಿದ್ದ.

ಭಟ್ಟರು ತಮ್ಮ ಕೈಚೀಲದಿಂದ ಒಂದು ರಸಬಾಳೆಯ ಗೊನೆ ಮತ್ತು ಸ್ವಲ್ಪ ಹೂವನ್ನು ತೆಗೆದಿಟ್ಟರು. ವಿಶಾಲಾಕ್ಷಮ್ಮ ಅದನ್ನು ನೋಡಿ,

''ನಿಮ್ಮ ಕೈ ತುಂಬಾ ದೊಡ್ಡದು. ನೀವು ನಮ್ಮ ಸುರೇಶನ ಕೈಲಿ ಕಳಿಸಿದ ತಿಂಡಿಯನ್ನ ನಾವು ಒಂದು ತಿಂಗಳಿನ ವರೆಗೆ ತಿಂದೆವು'' ಎಂದರು.

ಭಟ್ಟರು ವಿನಯದಿಂದ, ''ಅದೇನು ಮಹಾ ಬಿಡಿತಾಯಿ. ಮುಖ್ಯ ನಿಮ್ಮ ಮನಸ್ಸು ದೊಡ್ಡದು ಅಷ್ಟೆ'' ಎಂದರು.

ವಿಶ್ವನಾಥರಾಯರೂ ಎದ್ದು ಬಂದು ಲೋಕಾಭಿರಾಮವಾಗಿ ನಾಲ್ಕು ಮಾತು ಆಡಿದರು.

ಭಟ್ಟರು, ಒಂದೆರಡು ದಿನ ಅಲ್ಲೇ ಇದ್ದು ಲಗ್ನದ ದಿನವನ್ನು ನಿಷ್ಕರ್ಷಿಸಿಕೊಂಡೇ ಹೋಗಬೇಕೆಂದು ಬಂದಿದ್ದರು. ಆದರೆ ಇಲ್ಲಿ ಅದಕ್ಕೆ

ತಕ್ಕ ವಾತಾವರಣವಿರಲಿಲ್ಲವಾಗಿ ಅವರು 'ಮತ್ತೆ ಬರುತ್ತೇನೆ' ಎಂದು ಹೇಳಿ ಹೊರಟುಹೋದರು.

ಸುರೇಶ, "ಇನ್ನು ಹತ್ತು-ಹದಿನೈದು ದಿನ ಬಿಟ್ಟು ಬನ್ನಿ" ಎಂದು ಹೇಳಿದ.

ಭಟ್ಟರ ಮನಸ್ಸು ತೂಗಾಡುತ್ತಿತ್ತು. ಪುಟ್ಟ ಗೌರಿ ನಿಜವಾಗಿ ಈ ಮನೆಗೆ ಸೊಸೆಯಾಗ ಬಲ್ಲಳೇ? ಮನೆಯವರೆಲ್ಲ ಮಾತಾಡುವಾಗ ಹೆಚ್ಚಾಗಿ ಇಂಗ್ಲೀಷನ್ನೇ ಬಳಸುವರು. ಮಡಿ-ಮೈಲಿಗೆಯ ಹೆಸರೇ ಇಲ್ಲ. ಊಟ-ಟೇಬಲ್ಲಿನ ಮೇಲೆ. ಇಂತಹ ಮನೆಗೆ ಮಗಳನ್ನು ಕೊಟ್ಟರೆ ಸರಿಹೋದೀತೇ ಎಂದು ಚಿಂತಿಸತೊಡಗಿದರು.

ಸುರೇಶ, ಇನ್ನು ವಿಳಂಬ ಮಾಡುವುದು ಸರಿಯಲ್ಲವೆಂದುಕೊಂಡ.

ಎಲ್ಲರೂ ಒಟ್ಟಿಗೆ ಮಾತಾಡುತ್ತ ಕುಳಿತಿದ್ದಾಗ,

"ಪವಿತ್ರಾ ನೀನು ಲ್ಯಾಬೊರೇಟರಿಯಲ್ಲಿ ಎಕ್ಸ್‌ಪರಿಮೆಂಟ್ಸ್ ಮಾಡೋ ಹಾಗೆ ನಾನು ಜೀವನದಲ್ಲೇ ಒಂದು ಪ್ರಯೋಗ ನಡೆಸೋಣ ನೆಂದಿದೇನೆ" ಎಂದ.

"ಹಾಗಂದರೇನಣ್ಣ?"

"ಒಂದು ಶುದ್ಧ ಹುಂಬಿಯಾದ ಹಳ್ಳಿ ಹುಡುಗೀನ ಮದುವೆಯಾಗೋದು. ಅವಳನ್ನು ತುಂಬಾ ಅಧುನಿಕಳನ್ನಾಗಿ, ವಿದ್ಯಾವಂತಳನ್ನಾಗಿ ತಯಾರು ಮಾಡೋದು"

"ಅಷ್ಟೆಲ್ಲಾ ಯಾಕೆ ಕಷ್ಟಪಡಬೇಕು. ಚೆನ್ನಾಗಿ ತಯಾರಾಗಿರೋರನ್ನೇ ಮಾಡಿಕೊ"

"ಇಲ್ಲ. ನನಗೆ ಹೀಗೇ ಮಾಡಬೇಕು ಅಂತ ಇಷ್ಟ"

"ಸುರೇಶ್, ನಿನ್ನ ಮನಸ್ಸಿನಲ್ಲೇನಿದೆ? ಬಾಯಿ ಬಿಟ್ಟು ಹೇಳು" ಎಂದರು ತಾಯಿ.

"ಅಮ್ಮ ಅವತ್ತು ಬಂದಿದ್ದರಲ್ಲ ಭಟ್ಟರು- ಅವರ ಮಗಳನ್ನ ನಾನು ಮದುವೆ ಮಾಡಿಕೋತೀನಿ"

"ಯಾರಾದರೂ ನಕ್ಕಾರು ಸುಮ್ಮನಿರು ಸುರೇಶ್. ಸಧ್ಯ ಆತನ ವೇಷ ನೋಡಿಯೇ ನನಗೆ ನಗು ಬಂತು." ಎಂದರು ವಿಶಾಲಾಕ್ಷಮ್ಮ.

"ಸುರೇಶ್, ಆ ಭಟ್ಟನ್ನ ಬೀಗರು ಅಂತ ಹೇಳಿಕೊಳ್ಳಲು ನನ್ನಿಂದ ಸಾಧ್ಯವಿಲ್ಲಪ್ಪ. ನನ್ನ ಸ್ನೇಹಿತರೆಲ್ಲ ಎಂತೆಂತಹ ಬೀಗತನ ಮಾಡಿದ್ದಾರೆ. ಈಗ ನಮ್ಮನೇಲೇ ನೋಡು ರಮೇಶನ ಮಾವನವರು ಹ್ಯಾಗಿದಾರೆ. ಯಾವಾಗಲೂ ಸರಿ ಸಮಾನರಾದವರಲ್ಲಿ ನೆಂಟಸ್ತನಮಾಡಬೇಕು"

"ನನಗೆ ಭಟ್ಟರು ಮುಖ್ಯ ಅಲ್ಲ ಅಪ್ಪ-ಅವರ ಮಗಳು."

"ಅದೇನು ಅಷ್ಟೊಂದು ಚೆನ್ನಾಗಿದಾಳೇನೊ ಸುರೇಶ್ ಆ ಹುಡುಗಿ?" ಪ್ರವೀಳೆ ಕೇಳಿದಳು.

"ನೀನೇ ನೋಡಿ ಹೇಳುವೆಯಂತೆ ಪವಿತ್ರಾ"

"ಅದೆಲ್ಲ ಆಗದ ಹೋಗದ ಮಾತು ಸುರೇಶ್. ಮೊನ್ನೆ ನನ್ನ ಸ್ನೇಹಿತೆಯೊಬ್ಬಳು ಬೊಂಬಾಯಿಂದ ಕಾಗದ ಬರೆದಿದಾಳೆ. ಅಲ್ಲಿ ದೊಡ್ಡ ಕಂಟ್ರಾಕ್ಟರರ ಒಬ್ಬಳೇ ಮಗಳು. ತುಂಬಾ ಚೆನ್ನಾಗಿ ಮದುವೆ ಮಾಡಿಕೊಡ್ತಾರೆ. ಎಂಬಾಸಡರ್ ಕಾರು ಕೊಡ್ತಾರೆ ಅಂತ" ಎಂದರು ವಿಶಾಲಾಕ್ಷಮ್ಮ.

ವಿಶ್ವನಾಥರಾಯರು, "ನನ್ನೂ ನಿನ್ನೆ ಸಂಜೆ ಆ ರಿಟೈರ್ಡ್ ಜಡ್ಜ್ ಸೋಮಣ್ಣ ಕೇಳಿದರು. ಮಗಳಿಗೆ ಅಂತ ಮನೆ ಕೂಡ ಕಟ್ಟಿಸಿದಾರಂತೆ. ಅವರ ಮಗಳು ಭಾರ್ಗವಿ. ಎಂ. ಎ. ಮಾಡಿದಾಳೆ. ನಿನಗೆ ಸರಿಯಾದ ಜೋಡಿ" ಎಂದರು.

ಪ್ರವೀಳ, "ಹೌದಣ್ಣ ಆ ಭಾರ್ಗವಿ ತುಂಬಾ ಚೆನ್ನಾಗಿದಾಳೆ. ತುಂಬಾ ಮಾಡರ್ನ್ ಕೂಡ" ಎಂದಳು.

ಸುರೇಶ ಗಂಭೀರವಾಗಿ,

"ನಾನಂತೂ ಈ ವಿಷಯ ನಿಶ್ಚಯಿಸಿದ್ದಾಗಿದೆ" ಎಂದ.

ವಿಶಾಲಾಕ್ಷಮ್ಮ, "ನನ್ನ ಪರಿಚಯದವರೆದುರಿಗೆ ಸೊಸೆ ಅಂತ ಕರೆದುಕೊಂಡು ಹೋದರೆ ಅವಮಾನವಾಗುವಂತಹ ಹಳ್ಳಿ ಗೊಡ್ಡು ಹುಡುಗೀನ ನೀನು ಮದುವೆಯಾಗುವುದಕ್ಕೆ ನಾನು ಎಂದಿಗೂ ಒಪ್ಪುವುದಿಲ್ಲ ಸುರೇಶ್" ಎಂದರು ನಿರ್ಧಾರದಿಂದ.

"ಅಮ್ಮಾ ನೀವೆಲ್ಲ ಹೀಗೆ ಹೇಳೋದು ಕೇಳಿದರೆ ನನಗೆ ಆಶ್ಚರ್ಯವಾಗತ್ತೆ. ನಿನ್ನ ತಾಯಿ, ಅಪ್ಪನ ತಾಯಿ ಎಲ್ಲ ಹಳ್ಳಿಯವರಾಗಿರಲಿಲ್ಲವೆ?"

"ಆ ಕಾಲದ ಮಾತು ಆಗಿಹೋಯ್ತು ಸುರೇಶ್. ನೀನು ಅಮೇರಿಕಾದಿಂದ ಒಂದು ಹುಡುಗೀನ ಕಟ್ಟಿಕೊಂಡು ಬಂದಿದ್ದರೂ ನನಗೆ ಇಷ್ಟು ಬೇಜಾರಾಗ್ತಾ ಇರಲಿಲ್ಲ"

"ಇದು ಮೂರ್ಖತನದ ಪರಮಾವಧಿ. ಅಮ್ಮಾ ನಿಮಗೆಲ್ಲ ಇಷ್ಟವಿರಲಿ ಇಲ್ಲದೆ ಇರಲಿ ನಾನು ಅವಳನ್ನೇ ಮದುವೆ ಮಾಡಿಕೊಳ್ತೀನಿ" ಎಂದು ರೇಗಿ ಸುರೇಶ ಆ ಜಾಗ ಬಿಟ್ಟು ಎದ್ದು ಹೋದ.

ಭಟ್ಟರು ಮತ್ತೆ ಹದಿನೈದು ದಿನ ಬಿಟ್ಟು ಬಂದು, ಲಗ್ನದ ದಿನವನ್ನು ನಿಶ್ಚಯಿಸಿಕೊಂಡು ಹೋದರು.

ಮದುವೆಗೆ, ಸುರೇಶ, ವಿಶಾಲಾಕ್ಷಮ್ಮ, ವಿಶ್ವನಾಥರಾಯರು, ಪ್ರವೀಳ ನಾಲ್ಕು ಜನ ಮಾತ್ರ ಹೊರಟರು. ವಿಶ್ವನಾಥರಾಯರು, ಬೇಕೆಂದೇ ನಿರ್ಮಲೆಗೆ, ರಮೇಶನಿಗೆ ಮೊದಲೇ ತಿಳಿಸದೆ ಲಗ್ನದ ದಿನವೇ ತಲುಪುವಂತೆ ಕಾಗದ ಬರೆದಿದ್ದರು.

ಭಟ್ಟರು ಮದುವೆಯನ್ನು ಅದ್ದೂರಿಯಾಗಿಯೇ ಮಾಡಿದರು. ಮನೆಯ ಮುಂದೆ ವಿಶಾಲವಾದ ಚಪ್ಪರ ಹಸಿರು ತೆಂಗಿನ ಗರಿಗಳಿಂದಲೂ, ಎಳನೀರಿನ ಗೊಂಚಲು, ಗೊನೆ ಸಮೇತವಾದ ಬಾಳೆ ಕಂಬಗಳಿಂದಲೂ ಕಂಗೊಳಿಸುತ್ತಿತ್ತು. ಚಿತ್ರ ವಿಚಿತ್ರವಾದ, ಹಿಟ್ಟಿನ ರಂಗೋಲಿ, ಮಾವಿನ ಸೊಪ್ಪಿನ ತೋರಣ, ನೋಡಿದವರ ಕಣ್ಮನಗಳನ್ನು ಸೆಳೆಯುತ್ತಿತ್ತು.

ಆಲದ ಮರದಿಂದ ಹಳ್ಳಿಗೆ ಹೋಗುವ ಒಂದೂವರೆ ಮೈಲಿ ರಸ್ತೆಯನ್ನೂ ಸಹ ಭಟ್ಟರು, ಹಳ್ಳಿಯವರ ಸಹಾಯದಿಂದ ಕಲ್ಲು ಮಣ್ಣು ಹಾಕಿಸಿ, ಕಾರು ಮನೆ ಬಾಗಿಲಿನ ವರೆಗೂ ಬರಲು ಅನುಕೂಲವಾಗುವಂತೆ ಮಾಡಿಸಿದ್ದರು. ವಿಶ್ವನಾಥರಾಯರ ಜೊತೆಗೆ ಸೋಮಶೇಖರರ ಮನೆಯದೊಂದು ಕಾರು ಸೇರಿತು. ಬೀಗರು ತುಂಬಾ ಜನ ಬರಲಿಲ್ಲವೆಂದು ಭಟ್ಟರಿಗೆ ನಿರಾಸೆಯೇ ಆಯಿತು. ನೂರು ಜನ ಬೀಗರನ್ನು ಸುಧಾರಿಸುವ ವ್ಯವಸ್ಥೆಯನ್ನು ಅವರು ಮಾಡಿಕೊಂಡಿದ್ದರು.

ವಿಶ್ವನಾಥರಾಯರು ಪ್ರಾರಂಭದಿಂದಲೂ ಮುಖ ಸಿಂಡರಿಸಿಕೊಂಡೇ ಇದ್ದರು. ವಿಶಾಲಾಕ್ಷಮ್ಮ, ಬೀಗಿತ್ತಿ ಮಾಡುತ್ತಿದ್ದ ಅತಿಯಾದ ಉಪಚಾರಕ್ಕೆ ಬೇಸರಗೊಳ್ಳುತ್ತಿದ್ದರು. ಕೌಸಲ್ಯಮ್ಮ ಆಗಾಗ ಮಧ್ಯಸ್ಥಿಕೆಗೆ ಬರಬೇಕಾಗುತ್ತಿತ್ತು. ವಿಶಾಲಾಕ್ಷಮ್ಮನಿಗೆ ಅಣ್ಣನ ಮೇಲೆ ಕೋಪವಿತ್ತು. ಅದನ್ನವರು ವ್ಯಕ್ತಪಡಿಸದೆ ಇರಲಿಲ್ಲ.

"ಅಣ್ಣ, ನಿನೋ ಎರಡು ದಿನ ನಿಮ್ಮ ಮನೇಲಿರಲಿ ಅಂತ ಕಳಿಸಿದರೆ ಸುರೇಶನನ್ನ ಈ ಹಳ್ಳಿಗೆ ಯಾಕೆ ಕಳಿಸಿದೆ ಅಣ್ಣಾ?" ಎಂದರು.

ಸೋಮಶೇಖರ, "ನಾನೇನೂ ಕಳಿಸಲಿಲ್ಲಾಮ್ಮ. ಅವನೇ ಆಸೆಪಟ್ಟು ಬಂದ. ಬಂದ ಮಾತ್ರಕ್ಕೆ ಈ ಪುಟ್ಟೀನ ಮದುವೆ ಮಾಡಿಕೊಳ್ತಾನೆ ಅಂತ ನಮಗೇನು ಗೊತ್ತು ಹೇಳು" ಎಂದರು.

ಅಲ್ಲೇ ಕುಳಿತಿದ್ದ ಚಂಚಲ,ಪ್ರವೀಳೆಯರು,

"ಹೆಸರು ಒಳ್ಳೆ ಚೆನ್ನಾಗಿ ಇಟ್ಟಿದ್ದಾರೆ. ಪೂರ್ವಕಾಲದ ಪುಟ್ಟಿ ಅನ್ನುವ ಹಾಗೆ."

"ಆದರೂ ಅದೇನು ಅಲಂಕಾರವಮ್ಮ. ಕೆನ್ನೆ ತುಂಬ ಅರಿಶಿಣ,ಹಣೆಗೆ ಕಾಸಿನಗಲ ಕುಂಕುಮ, ಒಂದು ಮಣ ಕೊಬ್ಬರಿ ಎಣ್ಣೆ ಹಾಕಿ ತಿದ್ದಿ ತೀಡಿದ ತಲೆ ಕೂದಲು!" ಎಂದು ಆಡಿಕೊಂಡು ನಕ್ಕರು. ಆ ಹೊತ್ತಿಗೆ ಅಲ್ಲಿಗೆ ಬಂದ ಸುರೇಶನಿಗೆ ಆ ಮಾತು ಕೇಳಿಸಿತು.

ಧಾರೆಯ ಸಮಯದಲ್ಲಿ ಜೋಯಿಸರು,

"ಹುಡುಗಿಗೆ ಬೇರೆ ಹೆಸರೇನಾದರೂ ಇಡುತ್ತೀರಾ" ಎಂದು ಕೇಳಿದಾಗ ಸುರೇಶ ತಕ್ಷಣ, "ಹುಂ" ಎಂದ.

"ಏನು?"

"ಪ್ರತಿಮಾ."

"ಏನು ಪಾರ್ವತಮ್ಮನೆ?" ಎಂದರು ಜೋಯಿಸರು.

"ಅಲ್ಲ ಅಲ್ಲ ಪ್ರತಿಮಾ."

ಹತ್ತಿರ ಕುಳಿತಿದ್ದವರು ಗುಸುಗುಸು ಮಾತಾಡಿಕೊಂಡರು. ಪ್ರವೀಳಾ

"ಹೆಸರು ಚೆನ್ನಾಗಿದೆ ಅಣ್ಣ" ಎಂದಳು.

ಮದುವೆ, ಯಾವ ಲೋಪವೂ ಇಲ್ಲದೆ ನೆರವೇರಿತು. ನಾಗೋಲಿ ಮುಗಿಯುವ ವೇಳೆಗೆ ವಿಶ್ವನಾಥರಾಯರ ಮುಖವೂ ಪ್ರಸನ್ನವಾಗಿತ್ತು. ಪ್ರವೀಳ, ಪುಟ್ಟಗೌರಿಯ ರೂಪವನ್ನು ಬಹಳವಾಗಿ ಮೆಚ್ಚಿಕೊಂಡಳು.

ಮದುವೆ ಮುಗಿಸಿಕೊಂಡು ಹೋಗುವಾಗಲೇ ಸೊಸೆಯನ್ನು ಕರೆದುಕೊಂಡು

ಹೋಗುವುದಾಗಿ ವಿಶಾಲಾಕ್ಷಮ್ಮ ತಿಳಿಸಿದಾಗ ಬೀಗರ ಮನೆಯಲ್ಲಿ ದೊಡ್ಡ ಕೋಲಾಹಲವೇ ಆಯಿತು. ಕೊನೆಗೆ ಅಜ್ಜ ತೀರ್ಪಿತ್ತರು. "ಇನ್ನು ಮೂರು ತಿಂಗಳು ಬಿಟ್ಟು ಕರೆದುಕೊಂಡು ಹೋಗಲಿ. ವರ್ಷದಲ್ಲಿ ಮೂರು ತಲೆಯಾಗ ಬಾರದು" ಎಂದು. ಸುರೇಶನಿಗೆ ಬೇಸರ ವಾದರೂ ಒಪ್ಪದೆ ವಿಧಿಯಿರಲಿಲ್ಲ.

ರಾಶಿಯನ್ನು ನೋಡಿ ಸಂತೋಷಪಟ್ಟರಾದರೂ ಅವುಗಳಲ್ಲನೇಕ ಪಟಾಕಿಗಳನ್ನು ಸುರೇಶನೇ ಹಚ್ಚಿ ತೋರಿಸಬೇಕಾಯಿತು.

ಹಬ್ಬದೂಟ ಮುಗಿಯಿತು. ಸುರೇಶನಿಗಾಗಿ ಮಹಡಿಯ ಮೇಲೆ ಒಂದು ವಿಶಾಲವಾದ ಕೋಣೆಯನ್ನು ಸಿದ್ಧಮಾಡಿದ್ದರು. ಮಂಚದ ಮೇಲೆ ಮೆತ್ತನೆಯ ಹಾಸಿಗೆಯಿದ್ದರೂ ಸುರೇಶನಿಗೆ

ತಗ್ಗಿಸಿ ನಿಂತಿದ್ದಳು. ಸುರೇಶ ಮೃದು ಸ್ವರದಲ್ಲಿ "ಒಳಗೆ ಬಾ" ಎಂದ. ಅವಳು ಅನುಮಾನಿಸುತ್ತ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟುಬಂದಳು.

ತಲೆಗೆ ನೀರು ಹಾಕಿಕೊಂಡಿದ್ದುದರಿಂದ ಜಡೆ ಸಡಿಲವಾಗಿ, ಹಣೆಯ ಮೇಲೆ ಮುಂಗುರುಳು ಚೆಲ್ಲಾಟವಾಡುತ್ತಿತ್ತು. ತುಟಿಗಳು ತಾಂಬೂಲರಾಗದಿಂದ ಕೆಂಪೇರಿದ್ದವು. ತಿಳಿ ಹಸಿರು ಬಣ್ಣದ ಸೀರೆಯಲ್ಲಿ ಗೌರಿ ಬಲು ಮೋಹಕವಾಗಿದ್ದಳು.

ಸುರೇಶ, ಹಸಿರು ಬಳೆಗಳಿಂದ ತುಂಬಿದ್ದ ಅವಳ ಕೈಗಳನ್ನು ತನ್ನ ಕೈಗೆತ್ತಿಕೊಂಡ. ಪುಟ್ಟ



"ಮುತ್ತಿನ ಸರ ನಿನ್ನ ಕೊರಳಿಗೆ ಎಷ್ಟು ಚೆನ್ನಾಗಿ ಒಪ್ಪುತ್ತೆ ಪುಟ್ಟಾ..."

-೫-

ಕೆಲವೇ ದಿನಗಳಲ್ಲಿ ದೀಪಾವಳಿಗೆ ಕರೆಯೂ ಬಂತು. ಭಟ್ಟರೇನೋ ಎಲ್ಲರನ್ನೂ ಆಹ್ವಾನಿಸಿದ್ದರು. ಆದರೆ ಹೊರಟವನು ಸುರೇಶನೊಬ್ಬನೇ

ಸುಬ್ಬ, ಕಂತಿಯರಿಗಾಗಿ ವಿಧವಿಧವಾದ ಪಟಾಕಿಗಳನ್ನೂ ಮುದ್ದು ಮಡದಿಗಾಗಿ ಒಂದು ಮುತ್ತಿನ ಸರವನ್ನೂ ತೆಗೆದುಕೊಂಡು ಹೊರಟ.

ಮದುವೆಯ ಗಲಾಟೆಯಲ್ಲಿ ಒಮ್ಮೆಯಾದರೂ ಅವಳೊಡನೆ ಏಕಾಂತದಲ್ಲಿ ಮಾತನಾಡಲು ಸಾಧ್ಯವಾಗಿರಲಿಲ್ಲ. ದೀಪಾವಳಿ, ಅವನ ಹೃದಯದಲ್ಲಿ, ಆಸೆಯ ನೂರು ಸೊಡರುಗಳನ್ನು ಬೆಳಗಿಸಿತ್ತು.

ಹಬ್ಬದ ದಿನ ಸುರೇಶನಿಗೆ ಬೇಕಿಲ್ಲದಿದ್ದರೂ ಅಭ್ಯಂಜನವಾಯಿತು. ಮೈದುನರು ಪಟಾಕಿಯ

ವಿಶ್ರಮಿಸುವ ಮನಸ್ಸಾಗಲಿಲ್ಲ. ಅವನು ಯಾರಿಗಾಗಿ ಬಂದಿದ್ದನೋ ಅವಳ ಮುಖದರ್ಶನ ಸಹ ಆಗಿರಲಿಲ್ಲ. ಕಾದು ಕಾದು ಬೇಸತ್ತ ಸುರೇಶ ಸುಬ್ಬನನ್ನು ಕರೆದು,

"ಪಗಡೆ ಆಡೋಣ ನಿಮ್ಮಕ್ಕನ್ನ ಕರಿ" ಎಂದ. ಸುಬ್ಬ ಉತ್ಸಾಹದಿಂದ ಒಳಗೆ ಹೋದವನು ಪೆಚ್ಚು ಮುಖ ಮಾಡಿಕೊಂಡು, "ಅಕ್ಕ ಬರಲ್ಲವಂತೆ" ಎಂದು ಹೇಳಿದ

ಸುರೇಶನಿಗೆ ರೇಗಿತು. ಸುಬ್ಬನನ್ನು ಹತ್ತಿರ ಕರೆದು, "ಹಾಗಾದರೆ ನಾನು ಈಗಲೇ ವಾಪಸು ಹೊರಟು ಹೋಗ್ತೀನಿ ಅಂತಾ ಹೇಳು" ಎಂದ.

ಹತ್ತು ಹದಿನೈದು ನಿಮಿಷಗಳ ನಂತರ ಹೊರಗೆ ಬಳೆಗಳ ಸದ್ದಾಯಿತು. ಸುರೇಶ ಬೇಗ ಎದ್ದು ಬಾಗಿಲಿಗೆ ಬಂದ. ಪುಟ್ಟಗೌರಿ ತಲೆ

ಗೌರಿ ಹಾವನ್ನು ಮೆಟ್ಟಿದವಳಂತೆ ಕೈಗಳನ್ನು ಹಿಂದಕ್ಕೆಳೆದುಕೊಂಡಳು. ಸುರೇಶ ನಗುತ್ತ,

"ಯಾಕೆ ಪುಟ್ಟಾ ಅಷ್ಟೊಂದು ಹೆದರಿಕೊಳ್ತೀಯಾ?" ಎಂದ.

ಗೌರಿ, ತೆರೆದಿದ್ದ ಬಾಗಿಲಿನ ಕಡೆ ನೋಡಿದಳು. ಸುರೇಶ ಎದ್ದು ಕದವನ್ನು ಮುಚ್ಚಿ ಚಿಲಕ ಹಾಕಿದ.

"ದೀಪಾವಳಿಗೆ ನಿನಗೊಂದು ಉಡುಗೊರೆ ತಂದಿದೇನೆ. ಏ ನಿ ರ ಬ ಹು ದು ಹೇಳು ನೋಡೋಣ".

ಮೌನವೇ ಗೌರಿಯ ಉತ್ತರವಾಯಿತು.

"ಹಾಗಾದರೆ ನಿನಗೇನೂ ಬೇಡವೆ?"

ಪುಟ್ಟಗೌರಿ ಯೋಚಿಸಿದಳು. ಅಕ್ಕ ಪಕ್ಕದವರೊಡನೆ,

"ದೀಪಾವಳಿಗೆ ನಮ್ಮ ಯಜಮಾನರು ತಂದು ಕೊಟ್ಟರು" ಎಂದು ಹೇಳಿಕೊಳ್ಳಲು ಎಷ್ಟು ಚೆನ್ನಾಗಿರುತ್ತೆ. ಅದೇನು ತಂದಿರುವರೋ ಸುಮ್ಮನೆ ಕೊಟ್ಟು ಬಿಡಬಾರದೆ? ಒಳ್ಳೆಯ ಕಾಟ ಎಂದುಕೊಂಡು,

"ನನಗೆ ಗೊತ್ತಿಲ್ಲ" ಎಂದಳು.

"ನಾನೇ ಹೇಳಲಾ?"

"ಹುಂ"

"ಹತ್ತಿರ ಬಾ"

ಪುಟ್ಟಗೌರಿ ಕದಲಲಿಲ್ಲ.

ಸುರೇಶ, ಮುತ್ತಿನ ಸರವಿದ್ದ ಪೆಟ್ಟಿಗೆಯನ್ನು ಅವಳ ಮುಂದೆ ಹಿಡಿದು, "ನೋಡು ಚೆನ್ನಾಗಿದೆಯಾ?" ಎಂದ.

ಎರಡೆಳೆ ಮುತ್ತಿನ ಸರ. ಮಧ್ಯೆ ಪುಟ್ಟ ಸೇವಂತಿಗೆ ಹೂವಿನಾಕಾರದಲ್ಲಿ ಮುತ್ತಿನದೇ ಪದಕ. ಬೇಡ ಬೇಡವೆಂದರೂ ಗೌರಿಯ ಮುಖ ಸಂತಸದಿಂದ ಅರಳಿತು.

"ತುಂಬಾ ಚೆನ್ನಾಗಿದೆ" ಎಂದಳು.

"ಈಗಲೆ ಹಾಕಿಕೋ".

ಪುಟ್ಟಗೌರಿ ಕೈ ನೀಡಿದಳು.

"ಹಾಗಲ್ಲ..." ಎಂದು ಹೇಳಿ ಸುರೇಶ ಮುಂದೆ ಬಂದು ತಾನೇ ಅದನ್ನು ಅವಳ ಕೊರಳಿಗೆ ಹಾಕಿದ. ಅವಳ ನೀಳವಾದ ಜಡೆಯನ್ನು ಮುಂದಕ್ಕೆ ಹಾಕಿ, ಕೊಂಡಿಯನ್ನು ಭದ್ರಪಡಿಸಿದ. ಹಾಗೇ ಬೆಣ್ಣೆಯಂತಹ ಆ ಕೊರಳನ್ನೊಮ್ಮೆ ನೇವರಿಸಿ, ಮುಖವನ್ನು ತನ್ನ ಕಡೆಗೆ ತಿರುಗಿಸಿಕೊಂಡು, "ನಿನ್ನ ಕೊರಳಿಗೆ ಎಷ್ಟು ಚೆನ್ನಾಗಿ ಒಪ್ಪುತ್ತೆ ಪುಟ್ಟಾ..." ಎಂದ.

ಅವನ ಪ್ರೀತಿಯ ಕರೆ, ಮುತ್ತುಬರಿಸುವಂತಹ ಆ ಸುಖಸ್ಪರ್ಶ...ಆದರೂ ಏನೋ ಭಯ, ನಾಚಿಕೆ. ಮುಖವೆಲ್ಲ ರಂಗುರಂಗಾಯಿತು. ಆ ರಾಗರಂಜಿತ ವದನ ಕುಸುಮದ ಭೃಂಗವಾಗಿ ಪರವಶನಾದ ಸುರೇಶ.

ತಾನಾಗಿ ಮೇಲೆ ಬೀಳುತ್ತಿದ್ದ ಹುಡುಗಿಯರು ಅವನಿಗೆ ಬೇಕಾಗಲಿಲ್ಲ. ಬೇಡ ಬೇಡವೆಂದು ನಾಚುವ ಈ ಮುಗ್ಧ ಹೆಣ್ಣು ಅವನನ್ನು ಸಂಪೂರ್ಣವಾಗಿ ಆಕರ್ಷಿಸಿದಳು. ಬೇಡವೆಂದಷ್ಟೂ ಸವಿಯುವ ಹಂಬಲ- ಕೊನೆಗೊಮ್ಮೆ ಸುರೇಶ ಬಿಡುಗಡೆ ಮಾಡಿದಾಗ ಬಾಗಲಕಡೆಗೆ ಓಡಿದಳು ಪುಟ್ಟಗೌರಿ.

ಪುನಃ ಅವಳನ್ನು ಏಕಾಂತದಲ್ಲಿ ಹಿಡಿಯುವುದೇ ಒಂದು ಸಾಹಸವಾಯಿತು.

ಊರಿಗೆ ಹೊರಡುವ ಮುನ್ನ ಅವಳನ್ನೇ ಕಾಫಿ ತೆಗೆದುಕೊಂಡು ಹೋಗಿ ಕೊಡುವಂತೆ ಹೇಳಿದರು, ತಾಯಿ. ಪುಟ್ಟಗೌರಿ,

"ಸುಬ್ಬನೇ ಕೊಡಲಿ" ಎಂದಳು.

"ಹಾಗೆಲ್ಲ ಮೊಂಡಾಟ ಮಾಡಬೇಡ. ಆಮೇಲೆ ಶುದ್ಧ ಹಳ್ಳಿ ಹೆಣ್ಣು ಅಂತಾ ಬೇಜಾರು ಮಾಡಿ ಕೊಳ್ತಾರೆ" ಎಂದು ಬುದ್ಧಿ ಹೇಳಿದರು ತಾಯಿ.

ಕಾಫಿಯ ಲೋಟವನ್ನು ಮೇಜಿನ ಮೇಲಿಟ್ಟು ಓಡುವುದರಲ್ಲಿದ್ದವಳನ್ನು ಕೈಹಿಡಿದು ಎಳೆದುಕೊಂಡ ಸುರೇಶ.

"ಅದೇನು ಹಾಗೆ ಓಡ್ತೀಯಾ? ನನ್ನನ್ನು ಕಂಡರೆ ನಿನಗೆ ಅಷ್ಟು ಭಯವೆ?"

"ಅಪ್ಪ ಕರೀತಾ ಇದಾರೆ" ಒಂದು ಸುಳ್ಳು ಹೇಳಿದಳು ಗೌರಿ.

"ಪರವಾಗಿಲ್ಲ ನಿನಗೆ ಸುಳ್ಳು ಹೇಳೋದಕ್ಕೂ ಬರತ್ತಲ್ಲ! ಅವರು ಈಗ ತಾನೆ ತೋಟದ ಕಡೆ ಹೋಗಿದ್ದನ್ನು ನಾನೇ ನೋಡಿದೆ."

"ಕಾಫಿ ತಗೋಳಿ ಆರಿ ಹೋಗುತ್ತೆ."

"ನೀನೇ ಕೊಡು."

"ಅಲ್ಲೇ ಇಟ್ಟಿದೀನಲ್ಲಾ..."

"ಮೇಜು ಅಷ್ಟು ದೂರದಲ್ಲಿದೆ. ಕೈಗೇ ಕೊಡು." ಪುಟ್ಟಗೌರಿ ಅಂಜುತ್ತಲೇ ಲೋಟವನ್ನು ತೆಗೆದುಕೊಂಡು ಅವನ ಬಳಿಗೆಹೋದಳು. ಅವನು ಕೈ ನೀಡಲಿಲ್ಲ.

"ಇಕಾಳಿ..."ಎಂದಳು ಪುಟ್ಟಗೌರಿ.

"ಆ" ಎಂದು ಬಾಯ್ತೆರೆದ ಸುರೇಶ.

ಅಡಿಯಿಂದ ಮುಡಿಯ ವರೆಗೆ ಬೆವೆತಳು ಪುಟ್ಟಗೌರಿ.

"ಬೇಗ. ಕಾಫಿ ಆರಿಹೋದರೆ ನನಗೆ ಸೇರೋಲ್ಲ."

ಪುಟ್ಟಗೌರಿಯ ಕೈ ನಡುಗುತ್ತಿತ್ತು. ತಲೆ ತಗ್ಗಿಸಿಕೊಂಡೇ ಲೋಟವನ್ನು ಅವನ ಬಾಯಿ ಸಮೀಪಕ್ಕೆ ತೆಗೆದುಕೊಂಡು ಹೋದಳು. ಸುರೇಶ ಆಗ ಲೋಟವನ್ನು ಕೈಗೆ ತೆಗೆದುಕೊಂಡ,

"ಜಾಣ ಹುಡುಗಿ. ಹೇಳಿದ ಮಾತು ಕೇಳ್ತೀಯ" ಎಂದು ಅವಳನ್ನು ಒತ್ತಿನಲ್ಲಿ ಕೂರಿಸಿಕೊಂಡು ಕಾಫಿ ಮುಗಿಸಿದ.

"ಪುಟ್ಟಾ, ನಾನು ಊರಿಗೆ ಹೋಗಿ ಕಾಗದ ಬರೀತೀನಿ. ಉತ್ತರ ಬರೀತೀಯಾ?"

ಸುರೇಶ ಬೇಕೆಂದೇ ಕೇಳಿದ. ಪುಟ್ಟಗೌರಿ,

"ನನಗೆ ಓದೋಕೆ ಬರಲ್ಲವಲ್ಲಾ!" ಎಂದಳು.

"ಅದನ್ನ ಓದಿ ಹೇಳೋಕೆ ನಾನೇ ಬರಬೇಕಾಗತ್ತೆ"

ಗೌರಿ ನಕ್ಕಳು.

"ಹೋಗಲಿ ನಾನು ಹೇಳಿಕೊಡ್ತೀನಿ. ಕಲಿತುಕೊಳ್ತೀಯಾ?"

"ಇಷ್ಟು ದೊಡ್ಡವಳಾದ ಮೇಲೆ?"

"ಅದಕ್ಕೇನು? ಇಷ್ಟಕ್ಕೂ ನಿನಗೇನು ಮಹಾ ವಯಸ್ಸಾಗಿರೋದು?"

"ಎಳೆ ಮಕ್ಕಳ ಹಾಗೆ ಅ, ಆ, ಇ, ಈ ಕಲಿತುಕೊಂಡರೆ ಎಲ್ಲರೂ ನಗ್ತಾರೆ."

"ಯಾರಿಗೂ ಕಾಣದ ಹಾಗೆ ನಾನೇ ಹೇಳಿಕೊಡ್ತೀನಿ"

ಪುಟ್ಟಗೌರಿ ಉದಾಸೀನದಿಂದ,

"ಮದುವೆ ಕೂಡ ಆಯ್ತು. ಈಗ್ಯಾಕೇ ತ?" ಎಂದಳು.

"ಯಾಕೆ ಅನ್ನೋದು ಕಲಿತುಕೊಂಡ ಮೇಲೆ ಗೊತ್ತಾಗತ್ತೆ ಚಿನ್ನಾ. ನಾನು-ನೀನು ಕಾಗದ ಬರೆದುಕೊಳ್ಳಬಹುದು. ನೀನು ಬೇಜಾರಾದಾಗ ಒಳ್ಳೆಯ ಪುಸ್ತಕಗಳನ್ನು ಓದಿಕೊಳ್ಳಬಹುದು."

"ಕೈ ತುಂಬ ಕೆಲಸ ಇದ್ರೆ ಬೇಜಾರು ಯಾಕೆ ಆಗತ್ತೆ? "

ಸುರೇಶ ಈಗ ಹೆಚ್ಚಿಗೆ ವಿವರಿಸಿ ಪ್ರಯೋಜನವಿಲ್ಲವೆಂದುಕೊಂಡ. ವಿದ್ಯೆಯ ಗಂಧವೇ ಇಲ್ಲದ ಈ ಹೆಣ್ಣಿಗೆ ಸಪ್ತಸಾಗರದಾಳವನ್ನೂ ಮೀರಿದ ಆ ವಿದ್ಯೆಯ ಮಹತ್ವವನ್ನು ವಿವರಿಸುವುದಾದರೂ ಹೇಗೆ?

"ನಮ್ಮ ಮನೇಲಿ ನಿನಗೇನೂ ಕೆಲಸ ಇರೋಲ್ಲ. ಅಲ್ಲಿಗೆ ಬಂದ ಮೇಲೆ ಕಲಿತುಕೊಳ್ಳುವೆಯಂತೆ"

"ಆಗಲಿ..."

ಸದ್ಯಕ್ಕೆ ಆ ಮಾತು ಸಾಕು ಎಂಬಂತೆ ಹೇಳಿದಳು ಗೌರಿ.

"ನನ್ನ ಹುಡುಗಿ ಜಾಣೆ ಎಂದು ನನಗೆ ಗೊತ್ತಿಲ್ಲವೆ?" ಎಂದು ಮಾತು ನಿಲ್ಲಿಸಿ, ಕೃತಿಗಿಳಿದ ಸುರೇಶ.

ಹಬ್ಬದ ಸಂಭ್ರಮ ಮುಗಿಸಿಕೊಂಡು ಊರಿಗೆ ಹೊರಡುವ ಮುನ್ನ ಮಡದಿಯ ಕೈಗೆ ಎರಡು ಪುಸ್ತಕ, ಪೆನ್ಸಿಲ್ ಕೊಟ್ಟು, "ನೋಡು ಇದರಲ್ಲಿ ಕನ್ನಡ ಅಕ್ಷರಗಳನ್ನೆಲ್ಲ ದೊಡ್ಡ ದೊಡ್ಡದಾಗಿ ಬರೆದಿದೆ. ಅದನ್ನು ನೋಡಿಕೊಂಡು ಹಾಗೆ ಕೆಳಗೆ ಬರೆದು ಅಭ್ಯಾಸ ಮಾಡಿಕೋ. "ನಾನು ಇನ್ನೊಂದು ಸಲ ಬರೋ ಹೊತ್ತಿಗೆ ಅಕ್ಷರಾನೆಲ್ಲ ಕಲಿತುಕೊಂಡಿರು" ಎಂದ ಸುರೇಶ. ಪುಟ್ಟಗೌರಿಗೆ ಈಗ ನಿಜವಾಗಿಯೂ ಯೋಜನೆ ಗಿಟ್ಟಿಕೊಂಡಿತು.

"ನಂಗೆ ಬರದೆ ಹೋದರೆ?" ಎಂದಳು.

"ಬರದೆ ಏನು? ಮೂರು-ನಾಲ್ಕು ವರ್ಷದ ಮಕ್ಕಳೆಲ್ಲಾ ಕಲೀತಾರೆ. ನಿಂಗೆ ಬರೋಲ್ವೆ?"

"ಚಿಕ್ಕ ವಯಸ್ಸಿನಲ್ಲಿ ಕಲಿಯೋದು ಸುಲಭ"

"ನೀನೇನು ಮುದುಕಿಯೇ ಹಾಗಾದರೆ? ಮನಸ್ಸು ಮಾಡಿದರೆ ಕಲಿಯೋದೇನೂ ಕಷ್ಟವಿಲ್ಲ"

ಪುಟ್ಟಗೌರಿಗೆ ಇದು ಸ್ವಲ್ಪವೂ ಇಷ್ಟವಿರಲಿಲ್ಲ. ಹಾಗೆಂದು ಹೇಳುವಷ್ಟು ಪತಿಯಲ್ಲಿ ಸಲಿಗೆ ಬೆಳೆದಿರಲಿಲ್ಲ. ತುಟಿಯ ವರೆಗೆ ಬಂದ ಮಾತುಗಳು ಅಲ್ಲೇ ನಿಂತುಹೋಗುತ್ತಿದ್ದುವು. ಮೊದಲೇ ಹೊಸದಾಗಿ ಮದುವೆಯಾದವಳು. ಜೊತೆಗೆ ಪತಿ ತುಂಬಾ ವಿದ್ಯಾವಂತರು. ತಾನು ಏನೂ ಅರಿಯದ ಹಳ್ಳಿ ಹುಡುಗಿ. ಯಾವ ಮಾತಾಡಿದರೆ ಏನು ತಪ್ಪಾಗುವುದೋ ಎಂಬ ಭಯ. ಈ ಭಾವನೆಗಳನ್ನೆಲ್ಲ ಅವಳ ಮುಖದಲ್ಲೇ ಓದಿದ ಸುರೇಶ ಕನಿಕರದಿಂದ ಹತ್ತಿರ ಬಂದು, "ಇದೇನು ಅಷ್ಟು ಕಷ್ಟವಿಲ್ಲ ಬಾ ಪುಟ್ಟಾ" ಎಂದು ಅವಳ ಕೈಗೆ ಪೆನ್ಸಿಲ್ ಕೊಟ್ಟು ತಾನೇ ಕೈ ಹಿಡಿದು ಐದಾರು ಸಲ ಅಕ್ಷರಗಳನ್ನು ತಿದ್ದಿಸಿದ.

"ನಾನು ನಿನ್ನ ಕರಕೊಂಡು ಹೋಗೋಕೆ ಬರ್ತೀನಲ್ಲ ಅಷ್ಟು ಹೊತ್ತಿಗೆ ನೀನು ಎಲ್ಲಾ ಚೆನ್ನಾಗಿ ಕಲಿತುಕೊಂಡಿದ್ದರೆ ನಿನಗೆ ಇನ್ನೊಂದು ಬಹುಮಾನ ತಂದು ಕೊಡ್ತೀನಿ" ಎಂದು ಆಸೆ ತೋರಿಸಿದ. ಪುಟ್ಟಗೌರಿ ಕೊರಳನ್ನು ಮುಟ್ಟಿ ನೋಡಿಕೊಂಡಳು. ಮುತ್ತಿನ ಸರ ಅಲ್ಲೇ ಇತ್ತು. ಮುಂದಿನ ಸಲ ಏನು ತರುತ್ತಾರೋ? ಕೆಂಪಿನ ಅಡ್ಡಿಗೆಯೇ? ಹಾಗಾದರೆ ಎಷ್ಟು ಕಷ್ಟವಾದರೂ ಕಲಿಯಲೇಬೇಕು ಎಂದು ನಿರ್ಧರಿಸಿದಳು. ತುಮಕೂರಿಗೆ ಹೋಗಿದ್ದಾಗ ಒಮ್ಮೆ ಕೌಸಲ್ಯಮ್ಮನ ಕೊರಳಲ್ಲಿ ಕೆಂಪಿನ ಅಡ್ಡಿಗೆಯನ್ನು ನೋಡಿದ್ದಳು. ಅದು ಅವಳಿಗೆ ಬಹಳ ಒಪ್ಪಿಗೆಯಾಗಿತ್ತು.

'ಏನು ತರಲಿ' ಎಂದು ಸುರೇಶ ಕೇಳಿದರೆ ಅಂತಹ ಸರವನ್ನೇ ತಂದುಕೊಡಿ ಎಂದು ಹೇಳಬಹುದು ಎಂದುಕೊಂಡಳು. ಆದರೆ ಸುರೇಶ ಕೇಳಲಿಲ್ಲ.

"ಕಲಿತುಕೊಳ್ತೀಯಾ ಹಾಗಾದರೆ?" ಎಂದ.

"ಹುಂ" ಎಂದಷ್ಟೆ ಹೇಳಿದಳು ಗೌರಿ.

ಸುರೇಶ ಹೊರಟುಹೋದ ಮೇಲೆ ಪುಟ್ಟಗೌರಿಗೆ ಮನೆಯೆಲ್ಲ ಬರಿದಾದಂತೆ ತೋರಿತು. ಸುರೇಶ ಇಳಿದಿದ್ದ ರೂಮಿನಲ್ಲಿ ಕುಳಿತು, ಅವನೊಡನೆ ಕಳೆದ ರಸನಿಮಿಷಗಳನ್ನು ಮೆಲುಕು ಹಾಕುತ್ತಿದ್ದಳು. ನಾಲ್ಕಾರು ದಿನಗಳ ವರೆಗೆ ಸುರೇಶ ಕೊಟ್ಟಿದ್ದ ಪುಸ್ತಕಗಳ ಕಡೆ ಅವಳ ಗಮನವೇ ಹೋಗಲಿಲ್ಲ.

ಸುಬ್ಬ ಒಂದು ದಿನ ಪುಸ್ತಕಗಳನ್ನು ಜೋಡಿಸಿಕೊಳ್ಳುತ್ತಿದ್ದಾಗ ಸುರೇಶ ಪುಟ್ಟಗೌರಿಗೆ ಕೊಟ್ಟಿದ್ದ ಪುಸ್ತಕಗಳನ್ನು ನೋಡಿ,

"ಇದ್ಯಾವ್ದೇ ಪುಸ್ತಕ?" ಎಂದ.

ಪುಟ್ಟಗೌರಿ ಅದನ್ನು ಸರ್ರನೆ ಕಸಿದುಕೊಂಡು,

"ನಂದು. ಇಲ್ಲಿ ತಾರೋ" ಎಂದಳು.

ಸುಬ್ಬ ಆಶ್ಚರ್ಯದಿಂದ,

"ನಿಂಗೆಲ್ಲಿ ಬಂತೇ ಪುಸ್ತಕ?" ಎಂದ.

ಪುಟ್ಟಗೌರಿ ಮುಖವೆಲ್ಲ ಕೆಂಪು ಮಾಡಿಕೊಂಡು ಅಲ್ಲಿ ನಿಲ್ಲದೆ ಓಡಿಹೋದಳು. ಸುಬ್ಬ ಅದನ್ನು ಮನೆಯವರಿಗೆಲ್ಲ ಹೇಳಿ ಹಾಸ್ಯಮಾಡಿಕೊಂಡು ನಕ್ಕ. ಅಜ್ಜಿ ಇದನ್ನು ಕೇಳಿ,

"ಏನು ಕಲಿಗಾಲವಮ್ಮ. ಮದುವೆಯಾದ ಹೆಣ್ಣುಮಕ್ಕಳು ನೋಹಿವ್ರತ ಮಾಡಿಕೊಂಡು, ಕಲಸ ಕಾರ್ಯ ಕಲಿತು, ಮನೆ ಸಂಸಾರ ನಿಭಾಯಿಸಿದರೆ ಸಾಲದೆ? ಇವಳೇನು ಓದಿ ಮೇಡಮ್ಮಾಗಬೇಕೆ? ಯಾಕೋ ಅತಿಯಾಯ್ತು" ಎಂದರು.

"ಹಾಗೆ ಬೇಕಾಗಿದ್ರೆ ಓದಿದ ಹುಡುಗೀನೇ ಮದ್ವೆ ಆಗಬಹುದಾಗಿತ್ತು. ನಾವೇನೂ ಹೆಣ್ಣು ಕೊಡ್ತೀವೀಂತ ಅವರ ಮನೆ ಬಾಗಿಲಿಗೆ ಹೋಗಿಲ್ಲವಲ್ಲಾ" ಎಂದರು ಸರಸಮ್ಮ. ಭಟ್ಟರು,

"ಹಾಗೆಲ್ಲ ಬಾಯಿಗೆ ಬಂದ ಹಾಗೆ ಮಾತಾಡಬೇಡ, ಮದ್ವೆ ಆದಮೇಲೆ ಅವರ ಮನ್ಯೋರು ಏನು ಬೇಕಾದ್ರೂ ಕಲಿಸಲಿ. ಹ್ಯಾಗಾದ್ರೂ ಇರಲಿ. ಅವರ ಮನೆ್ಯೋರೆಲ್ಲ ತುಂಬ ಓದಿದಾರೆ. ನಮ್ಮ ಪುಟ್ಟಿ ಅತ್ತೇನೆ ಬಿ. ಎ. ಮಾಡಿದಾರಂತೆ." ಎಂದರು.. ಅಲ್ಲದೆ ಮಗಳಿಗೆ,

"ಸ್ವಲ್ಪ ಸುಬ್ಬನ ಕೈಲಿ ಏನಾದರೂ ಹೇಳಿಸಿಕೋಮ್ಮ. ಆ ಮೇಲೆ ನಿಮ್ಮ ಯಜಮಾನ್ರು ಕೋಪ ಮಾಡಿಕೊಂಡಾರು" ಎಂದು ಸಹ ಹೇಳಿದರು. ಪುಟ್ಟಗೌರಿಗೆ ಎಲ್ಲ ಅಕ್ಷರಗಳೂ ಹೆಚ್ಚುಕಡಿಮೆ ಒಂದೇ ತರಹ ಕಾಣುತ್ತಿದ್ದುವು. ತಾಯಿಯಿಂದ ಪಾರಿಜಾತ, ಅನಂತನ ಗಂಟು ಎಂದು ನೂರೆಂಟು ಹಸೆಗಳನ್ನು ಕಲಿತವಳಿಗೆ ಈ ಅಕ್ಷರಮಾಲೆ ಒಂದು ಸವಾಲಾಯಿತು. ಆದರೆ ಕಣ್ಣು ಮುಂದೆ ಕುಣಿಯುತ್ತಿದ್ದ ಕೆಂಪಿನ ಮಾಲೆ! ಅದಕ್ಕಾಗಿ ಕಷ್ಟಪಟ್ಟು ಪ್ರತಿದಿನ ಒಂದೆರಡು ಘಂಟೆಗಳ ಕಾಲ ಕುಳಿತು ತಿದ್ದುತ್ತಿದ್ದಳು. ಒಮ್ಮೊಮ್ಮೆ ತುಂಬಾ ಬೇಸರವಾಗಿ "ಯಾರು ಮಾಡಿದರೋ ಈ ಹಾಳು ಅಕ್ಷರಾನ. ಇದಿಲ್ದೆ ಹೋದ್ರೆ ಏನು ನಷ್ಟವಾಗ್ತಾ ಇತ್ತೋ" ಎಂದು ಪುಸ್ತಕವನ್ನು ಬಿಸಾಕಿ ಹಗಲು ಗನಸಿನಲ್ಲೇ ಕಾಲ ಕಳೆಯುತ್ತಿದ್ದಳು.

-೨-

ಭಟ್ಟರ ಹೆಸರಿಗೆ ಸುರೇಶ ಒಂದು ಕಾಗದವನ್ನು ಬರೆದು ಪುಟ್ಟಗೌರಿಯ ವಿದ್ಯಾಭ್ಯಾಸ ಹೇಗೆ ನಡೆಯುತ್ತಿದೆ ಎಂದು ವಿಚಾರಿಸಿ, ಅದರ ಕಡೆಗೆ ಸ್ವಲ್ಪ ಗಮನ ಕೊಡಬೇಕಾಗಿ ತಿಳಿಸಿದ್ದ. ಭಟ್ಟರು ಗೌರಿಯನ್ನು ಶಾಲೆಗೆ ಕಳಿಸದೆ ಇದ್ದುದಕ್ಕಾಗಿ ತುಂಬ ಪಶ್ಚಾತ್ತಾಪಪಡುವಂತಾಯಿತು. ಅಕ್ಕಪಕ್ಕದ ಹಳ್ಳಿಗಳಿಂದ ಹೆಣ್ಣುಮಕ್ಕಳು ಶಾಲೆಗೆ ಬರುತ್ತಿದ್ದ ಕಾಲದಲ್ಲಿ, ಮನೆಗೆ ಅರ್ಧಮೈಲಿ ದೂರವೂ ಇಲ್ಲದ ಪ್ರೈಮರಿ ಶಾಲೆಗಾದರೂ ಅವಳನ್ನು ಕಳಿಸಬೇಕಾಗಿತ್ತು. ತಾಯಿಯ ಮಾತಿಗೆ ಗಮನ ಕೊಡಬಾರದಾಗಿತ್ತು ಎಂದುಕೊಂಡರು. ಆದರೆ ಪುಟ್ಟಗೌರಿಗೆ ಇಂತಹ ವಿದ್ಯಾವಂತ ಪತಿ ದೊರೆಯುವನೆಂದು ಅವರಂತೂ ತಿಳಿದಿರಲಿಲ್ಲ. ಎಂದಿದ್ದರೂ ಅಡಿಗೆ ಕೆಲಸ ಮಾಡಿಕೊಂಡು ನಾಲ್ಕುಮಕ್ಕಳ ತಾಯಿಯಾಗಿ ಸಂಸಾರ ನಿಭಾಯಿಸಿಕೊಂಡು ಹೋಗಲು ಶಾಲೆಯ ವ್ಯಾಸಂಗವೇಕೆ ಎಂಬ ತಾಯಿಯ ತರ್ಕಕ್ಕೆ ಅವರೂ ತಲೆಬಾಗಿದ್ದರು. ಈಗ ಸುರೇಶನ ಕಾಗದ ಬಂದ ಮೇಲೆ ಪುಟ್ಟಗೌರಿಯನ್ನು ಬೆಳಿಗ್ಗೆ ಸಂಜೆ ಮುಂದೆ ಕೂರಿಸಿಕೊಂಡು ತಾವೇ ಅಕ್ಷರಗಳನ್ನೂ ಸಂಖ್ಯೆಗಳನ್ನೂ ಹೇಳಿಕೊಡಲು ಪ್ರಾರಂಭಿಸಿದರು. ತಂದೆಯೇ ಶ್ರದ್ಧೆವಹಿಸತೊಡಗಿದಾಗ ಮಗಳೂ ಸ್ವಲ್ಪ ಮುತುವರ್ಜಿಯಿಂದ ಕಲಿಯತೊಡಗಿದಳು. ಹಾಗೂ ಅವಳು ಆಲಸ್ಯ ತೋರಿದಾಗ ಭಟ್ಟರು

"ನೋಡಮ್ಮ, ಗೌರಿ, ನಿನ್ನ ಯಜಮಾನರು ನೀನು ಹೀಗೇ ದಡ್ಡಿಯಾಗಿದ್ದರೆ ನಿನ್ನ ಬಿಟ್ಟು ಬೇರೆ ಮದುವೆ ಮಾಡಿಕೊಳ್ತಾರೆ ಅಷ್ಟೆ" ಎಂದು ಹೆದರಿಸುತ್ತಿದ್ದರು.

ತಂದೆ ಮನೆಯಲ್ಲಿಲ್ಲದಾಗ ತಾಯಿ, ಏನಾದರೂ ಕೆಲಸಕ್ಕೆ ಕರೆಯುತ್ತಿದ್ದರು.

"ಹೋಗಮ್ಮ ನಾನು ಓದಿಕೋಬೇಕು" ಎನ್ನುತ್ತಿದ್ದಳು ಗೌರಿ.

"ಸಾಕು ಬಿಡೇ. ಪುಸ್ತಕ ಅತ್ಲಾಗೆ ತೆಗೆದಿಡು. ಅತ್ತೆಮನೆಗೆ ಹೋಗಿ ಕೆಲಸ, ಬದುಕು ಮಾಡಿಕೊಂಡಿರೋ ಕಾಲಕ್ಕೆ ನಿಂದು ಓನಾಮ ಶುರುವಾಯ್ತು. ಎದ್ದುಬಂದು ಕಾಯಿತುರಿದುಕೊಡು" ಎನ್ನುತ್ತಿದ್ದರು. ಹೇಗೋ ಕಷ್ಟಪಟ್ಟು ಗೌರಿ ಎರಡೇ ತಿಂಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದಳು.

ಮಾಘಮಾಸದಲ್ಲೊಂದು ಶುಭ ದಿನವನ್ನು ನೋಡಿ ಭಟ್ಟರು ಸುರೇಶನಿಗೆ ಪತ್ರವನ್ನು ಬರೆದರು. ಅದಕ್ಕಾಗಿಯೇ ಕಾದಿದ್ದ ಸುರೇಶ, ಒಂದು ದಿನ ಮೊದಲೇ ಹಳ್ಳಿಗೆ ಹೊರಟ.

ಅವನು ಒಬ್ಬನೇ ಬಂದುದನ್ನು ನೋಡಿ ಭಟ್ಟರಿಗೆ ನಿರಾಸೆಯಾಯಿತು. ಸುರೇಶನ ಪ್ರತಿಭಟನೆಗೆ ಯಾರೂ ಗಮನ ಕೊಡದೆ ಹೋದುದರಿಂದ, ಅವನು ಮತ್ತೊಮ್ಮೆ ಗೌರಿಯೊಡನೆ ಹೊಗೆಯಲ್ಲಿ ಹಸೆಮಣೆಯ ಮೇಲೆ ಕೂಡಬೇಕಾಯಿತು.

ಬೇಡದ ಶಾಸ್ತ್ರಗಳೆಲ್ಲ ಮುಗಿದ ಮೇಲೆ, ಬೇಕಾದ ಆ ಘಳಿಗೆಯೂ ಬಂದೇ ಬಂದಿತು.

ಸುರೇಶ ಎರಡು ಸಲ ಇಳಿದುಕೊಂಡಿದ್ದ ಕೋಣೆಯೇ ಈಗಲೂ ಶೃಂಗಾರವಾಗಿ ಸಿದ್ಧವಾಗಿತ್ತು. ಆದರೆ ಅದು ಗುರುತಿಸಲಾರದಷ್ಟು ಬದಲಾಗಿತ್ತು. ಗೋಡೆಯ ತುಂಬ ಪಟಗಳು, ಗೋಡೆಯ ಒತ್ತಿಗೆ ಸಾಲುಸಾಲಾಗಿ ಬೆಂಚಿನ ಮೇಲೆ ಚಕ್ಕುಲಿ, ಉಂಡೆ, ಸಕ್ಕರೆ ಸಾಮಾನು. ಸುರೇಶನಿಗೆ ನಗುಬಂತು. ಜೀವಂತ ಸಕ್ಕರೆ ಬೊಂಬೆ ಮುಂದೆಯೇ ಇರುವಾಗ ಇದೆಲ್ಲ ಯಾರಿಗೆ ಬೇಕು? ಮದುವೆಯಾದ ಮೂರು ತಿಂಗಳಿನಲ್ಲಿ ಪುಟ್ಟ ಗೌರಿ ಮೈಕೈ ತುಂಬಿಕೊಂಡು ಮತ್ತಷ್ಟು ಚೆಲುವಾಗಿದ್ದಳು. ನಾಚಿಕೆಯಿಂದ ಕೆಂಪಾದ ಮುದ್ದು ಮುಖ ಭಾವೋದ್ವೇಗದಿಂದ ಸ್ವಲ್ಪವೇ ಕಂಪಿಸುತ್ತಿದ್ದ ತುಟಿಗಳು ಸುರೇಶ ಒಂದೇ ಹಿಡಿತದಲ್ಲಿ ಪುಟ್ಟ ಮಗುವನ್ನು ಹಿಡಿಯುವಂತೆ ಹಿಡಿದು ಮಂಚದ ಮೇಲೆ ಕೂರಿಸಿಕೊಂಡ. ಪುಟ್ಟ ಗೌರಿ ತಲೆತಗ್ಗಿಸಿ, ಕಂಪಿಸುವ ದನಿಯಲ್ಲಿ,

"ಹಾಲು ಕುಡೀಬೇಕಂತೆ" ಎಂದಳು.

ಸುರೇಶ ನಗುತ್ತ, "ಯಾರು ಹೇಳಿದರು?" ಎಂದ.

"ಅಮ್ಮ"

"ಹಾಗಾದರೆ ನಂಗೆ ಬೇಡ."

ಗೌರಿ ಆಶ್ಚರ್ಯದಿಂದ ತಲೆಯೆತ್ತಿದಳು.

"ಯಾಕೆ?"

"ನೀನು ಹೇಳಿದರೆ ಕುಡಿಯೋದು"

ಈಗ ಗೌರಿಗೂ ನಗು ಬಂತು. ಮೆಲ್ಲನೆದ್ದು ಕಂಚಿನಿಂದ ಹಾಲನ್ನು ಲೋಟಕ್ಕೆ ಬಗ್ಗಿಸಿ ಕೊಟ್ಟಳು.

"ಪುಟ್ಟಾ ಈ ಕದಲೀಕಾಯಿಯಿಂದ, ಹುರಿಗಡಲೆ ಗೋಪುರ ಇದೆಲ್ಲ ಯಾಕೆ ಇಟ್ಟಿದ್ದಾರೆ?" ಎಂದು ಕೇಳಿದ ಸುರೇಶ.

"ಬೇಕಾದರೆ ತಿನ್ನಬಹುದು."

"ಇಷ್ಟು ದೊಡ್ಡದನ್ನ ಹೀಗೆ ತಿನ್ನೋದು. ಸುಮ್ಮನೆ ದಂಡ"

"ಅಲ್ಲ..."

"ಮತ್ತೇನು ಹೇಳು"

"ಅಜ್ಜಿ ಹೇಳ್ತಾ ಇದ್ರು"

"ಏನು?"

"ಬೇರೆ ಕಡೆನೂ ಸ್ವಲ್ಪ ಗಮನ ಇರಲಿ ಅಂತ ಇಟ್ಟಿರ್ತಾರಂತೆ"

"ಹೂಂ ಪರವಾಗಿಲ್ಲ. ಅವರ ಹುಡುಗೀನೆ ನಾನೆಲ್ಲಿ ತಿಂದು ಬಿಡ್ತೀನೋ ಅಂತ ಇದೆಲ್ಲ ಇಟ್ಟಿದ್ದಾರೆ ಅಲ್ಲ?"

ಪುಟ್ಟಗೌರಿ ನಸುನಕ್ಕು ಎಲೆ ಅಡಿಕೆಯನ್ನು ಮುಂದೆ ಹಿಡಿದಳು.

"ನಂಗೆ ಬೇಡ. ನೀನು ಬೇಕಾದರೆ ಹಾಕ್ಕೊ"

"ನಂಗೂ ಬೇಡ"

"ಪುಟ್ಟಾ, ನಿನ್ನ ವಿದ್ಯಾಭ್ಯಾಸ ಎಲ್ಲೀ ವರೆಗೆ ಬಂತು ?"

"ಓದೋಕೆ ಬರೆಯೋಕೆ ಬರತ್ತೆ"

ಸುರೇಶ ಆನಂದದ ಭರದಲ್ಲಿ ಮಡದಿಯನ್ನು ಹೈಮರೆತು ಮುದ್ದಿಸಿದ.

"ಇದೋ ನಾನು ಹೇಳಿದ್ದ ಪ್ರೆಸೆಂಟು"

ಎಂದು ಒಂದು ಪುಟ್ಟ ಗಡಿಯಾರವನ್ನು ತೆಗೆದು ಆವಳ ಎಡಗೈಗೆ ಕಟ್ಟಿದ. ಪುಟ್ಟಗೌರಿಗೆ ನಿರಾಸೆಯಾಯಿತು. ಅವಳ ಕೆಂಪಿನ ಅಡ್ಡಿಯ ಕನಸು ಕನಸಾಗಿಯೇ ಉಳಿಯಿತು. ಈ ಗಡಿಯಾರವನ್ನೇಕೆ ತಂದರೋ? ಅವಳ ಅದುವರೆಗಿನ ಜೀವನದಲ್ಲಂತೂ ಗಡಿಯಾರದ ಅವಶ್ಯಕತೆಯೇ ತೋರಿರಲಿಲ್ಲ. ಮನೆಯಲ್ಲಿದ್ದ ಒಂದು ಹಳೇ ಗಡಿಯಾರ ಯಾವಾಗಲೂ ಕೆಟ್ಟು ಕುಳಿತಿರುತ್ತಿತ್ತು. ಅದನ್ನು ರಿಪೇರಿ ಮಾಡಿಸುವ ಅಗತ್ಯ ಯಾರಿಗೂ ಇರಲಿಲ್ಲ. ಶಾಲೆಯ ಗಂಟೆ ಕೇಳಿಸಿದ ಮೇಲೆ ಸುಬ್ಬ, ಕಂಠಿ, ಮನೆ ಬಿಡುತ್ತಿದ್ದರು. ಅಜ್ಜಿ ಜಗುಲಿಯ ಮೇಲೆ ಕುಳಿತು,

"ಲಕ್ಷ್ಮೀ ನರಸಿಂಹ ಬಂತು ಒಂಭತ್ತು ಘಂಟೆ ಕಣೋ"

"ಚಾಮುಂಡೇಶ್ವರಿ ಈಗ ತಾನೆ ಹೋಯ್ತು ಎಲೆ ಹಾಕ್ರೇ."

"ಇಸ್ಮೇಲ್ ಗಾಡಿ ಹೊರಟ್ಹೋಯ್ತು ಆರು ಘಂಟೆ ಆಗಿರಬೇಕು" ಎಂದು ಬಸ್ಸುಗಳು ಹೋಗಿ ಬರುವುದರಲ್ಲೇ ಘಂಟೆ ಹೇಳುತ್ತಿದ್ದರು.

ಈ ಗಡಿಯಾರವನ್ನು ಕಟ್ಟಿಕೊಂಡು ನಾನೇನು ಆಫೀಸಿಗೆ ಹೋಗಬೇಕೆ? ಮೂರು ತಿಂಗಳು ಕಷ್ಟಪಟ್ಟದ್ದಕ್ಕೆ ಇದೆಂತಹ ಬಹುಮಾನ?

ಪುಟ್ಟಗೌರಿಯ ಮುಖ ಅರಳದೆ ಇದ್ದುದನ್ನು ಕಂಡ ಸುರೇಶ, "ಯಾಕೆ ಚಿನ್ನಾ ಚೆನ್ನಾಗಿಲ್ವೆ?" ಎಂದ.

"ಚೆನ್ನಾಗಿದೆ ಆದ್ರೆ..."

"ಏನು?"

"ಇದನ್ನ ಹಾಕ್ಕೊಂಡು ಏನು ಮಾಡೋದು?"

"ಗಂಟೆ ನೋಡಿಕೊಳ್ಳೋದು"

"ನೋಡಿಕೊಂಡು?"

"ನೋಡಿ ಗಂಟೆ ಪ್ರಕಾರ ಎಲ್ಲ ಕೆಲಸಗಳನ್ನೂ ಮಾಡೋದು. ಯಾಕೆ ಪುಟ್ಟಾ ನಿನಗೆ ಏನು ಬೇಕಾಗಿತ್ತು?"

"ಏನೂ ಇಲ್ಲ ಇದೇ ಚೆನ್ನಾಗಿದೆ."

"ಇಲ್ಲ ನೀನು ನಿಜ ಹೇಳಲೇ ಬೇಕು"

"ಕೆಂಪಿನ ಅಡ್ಡಿಗೆ ತರ್ತೀರೇನೋ ಅಂತಿದ್ದೆ"

ಸುರೇಶ ನಗೆಯನ್ನು ತಡೆದು,

"ಅದು ನೀನು ಇಂಗ್ಲಿಷ್ ಕಲಿತ ಮೇಲೆ" ಎಂದ.

ಏನೋ ಹೇಳಲು ಅರೆ ತೆರೆದ ಗೌರಿಯ ಬಾಯಿಗೆ ಭದ್ರವಾದ ಬೀಗ ಮುದ್ರೆ ಬಿದ್ದಿತು.

ಬೆಳಿಗ್ಗೆ ಸುರೇಶ ಏಳುವ ವೇಳೆಗೆ ಗೌರಿ ಎದ್ದು ಹೋಗಿದ್ದಳು.

ಮಡದಿಯನ್ನು ತಿದ್ದುವ ಮೊದಲ ಹೆಜ್ಜೆಯಲ್ಲಿ ಗೆದ್ದೆನೆಂಬ ತೃಪ್ತಿಯಿಂದ ಸುರೇಶ ಉಲ್ಲಾಸವಾಗಿದ್ದ.

ಪತಿಯ ಒಲವಿನ ವೈಭವದಲ್ಲಿ ಧನ್ಯತೆಯನ್ನು ಕಂಡು ಸುಖಿಯಾಗಿದ್ದಳು ಗೌರಿ.

ಮಗಳನ್ನು ತಾವೇ ಕರೆದುಕೊಂಡು ಬಂದು ಬಿಡುವುದಾಗಿ ಹೇಳಿದರು ಭಟ್ಟರು. ಅದಕ್ಕೆ ಒಪ್ಪದೆ ಸುರೇಶ,

"ನಾನೆಲ್ಲ ಏರ್ಪಾಟು ಮಾಡಿ ಬಂದಿದೀನಿ. ತುಮಕೂರಿಗೆ ಕಾರು ಬಂದಿರತ್ತೆ. ನಾಳೆ ಬೆಳಿಗ್ಗೆ ಗಾಡಿ ಕಟ್ಟಿಸಿ. ನಾನೇ ಕರೆದುಕೊಂಡು ಹೋಗ್ತೀನಿ" ಎಂದ. ಉಪಚಾರಕ್ಕಾದರೂ ತಮ್ಮನ್ನು ಕರೆಯಲಿಲ್ಲವೆಂದು ಗೌರಿಯ ತಾಯಿಗೂ ಅಸಮಾಧಾನವಾಗಿತ್ತು.

ಪುಟ್ಟಗೌರಿಗೆ ಹುಟ್ಟಿದೂರನ್ನು ಬಿಟ್ಟು ಹೊರಡುವುದು ಸುಲಭವಾಗಿರಲಿಲ್ಲ. ಅದೂ ತನ್ನ ಜೊತೆ ತೌರಿನವರು ಯಾರೂ ಬರುವುದಿಲ್ಲವೆಂದು ತಿಳಿದಾಗ ಅವಳಿಗೆ ಸ್ವಲ್ಪ ದಿಗಿಲೇ ಆಯಿತು. ಮದುವೆಯಲ್ಲಿ ನೋಡಿದ್ದರಲ್ಲಿ ತನ್ನ ಅತ್ತೆ ಸ್ವಲ್ಪ ಬಿಗುವಿನ ಸ್ವಭಾವದವರೆಂದು ತಿಳಿದಿದ್ದಳು. ಜೊತೆಗೆ ಈ ಮದುವೆ ಅವರಿಗೆ ಇಷ್ಟವಿರಲಿಲ್ಲವೆಂದು ಕೌಸಲ್ಯಮ್ಮನೂ ಹೇಳಿದ್ದರು. ಪ್ರಮೀಳೆಯನ್ನು ಕಂಡರೂ ಸ್ವಲ್ಪ ದೂರವೇ ಇರೋಣವೆನಿಸುತ್ತಿತ್ತು. ಅತ್ತೆಯ ಮನೆ ವಾತಾವರಣಕ್ಕೂ, ತಾನು ಹುಟ್ಟಿದ ಮನೆಯದಕ್ಕೂ ಸ್ವಲ್ಪವೂ ಸಾಮ್ಯವಿರಲಿಲ್ಲ. ಅಲ್ಲಿ ಹೋಗಿ ತಾನು ಹೇಗೆ ಹೊಂದಿಕೊಳ್ಳುವುದು ಎನ್ನುವುದೇ ದೊಡ್ಡ ಚಿಂತೆಯಾಯಿತು. ಅವಳಿಗಿದ್ದ ಒಂದೇ ಸಮಾಧಾನವೆಂದರೆ ಸುರೇಶನ ಸಾನ್ನಿಧ್ಯ.

ಭಟ್ಟರು ಬೆಳಗಿನ ಝಾವಕ್ಕೇ ಗಾಡಿ ಕಟ್ಟಿಸಿದರು. ನರಸಮ್ಮ, ಅಜ್ಜಿ ಇಬ್ಬರೂ ಸೇರಿ ಗಾಡಿಯ ತುಂಬ ತಿಂಡಿಯೆಂಬಂತೆ, ಕಾಯಿ, ಕೊಬ್ಬರಿ, ಊಟದೆಲೆ ಎಲ್ಲಾ ಇಟ್ಟರು. ತುಮಕೂರಿನ ವರೆಗೆ ಮನೆಯವರೆಲ್ಲ ಹೋಗುವುದೆಂದು ನಿಶ್ಚಯವಾಗಿತ್ತು. ಪುಟ್ಟಗೌರಿ ತೌರನ್ನು ಬಿಟ್ಟು ಹೊರಡುವ ದುಃಖದಲ್ಲಿ ಬೆಳಿಗ್ಗೆ ಕಾಫಿಯನ್ನೂ ಕುಡಿದಿರಲಿಲ್ಲ. ನಾನಾ ಬಗೆಯಲ್ಲಿ ಸಮಾಧಾನಪಡಿಸಿ ಸೋತ ನರಸಮ್ಮ ಕೊನೆಗೆ,

"ಕಂಡಿದೀನಿ ಬಿಡೆ ನಿನ್ನ ಬೂಟಾಟಕೆ. ಒಂದ್ಸಲ ಹೋಗಿ ಬರೋವಗಂಟ ಇದೆಲ್ಲ. ಆಮೇಲೆ ನಾವಾಗಿ ಬಂದು ಕರೆದರೂ ಬರಲ್ಲ ಅಂತೀಯ. ನಾವೆಲ್ಲ ಅತ್ತೆ ಮನೆಗೆ ಬಂದಾಗ ನಿನಗಿಂತ ಇನ್ನೂ ನಾಲ್ಕೈದು ವರ್ಷ ಚಿಕ್ಕೋರಾಗೇ ಇದ್ವು.ಅತೀ ಅಡಬೇಡ ಕುಡಿ." ಎಂದರು.

ಗೌರಿ ದನದ ಕೊಟ್ಟಿಗೆಗೆ ಹೋಗಿ ತನ್ನ ಪ್ರೀತಿಯ ಹಸುವಿನ ಮೈದಡವಿ,

"ನಾಳೆಯಿಂದ ನಾನಿರಲ್ಲಮ್ಮ ಭಾಗೀರಥಿ. ತಂಟೆ ಮಾಡದೆ ಅಮ್ಮನ ಕೈಲೆ ಹಾಲು ಕರೆಸಿಕೋ" ಎಂದು ಕಣ್ಣೀರು ಹಾಕಿದಳು. ಬಾಲವಾಡಿಸಿ ಬಳಿಗೆ ಬಂದ ಕರುವನ್ನೆತ್ತಿ ಮುದ್ದಾಡಿದಳು.

ಹೊರಡುವ ಮೊದಲು, ಅಜ್ಜಿ, ತಾಯಿ, ತಂದೆಯರಿಗೆ ಕಾಲುಮುಟ್ಟಿ ನಮಸ್ಕರಿಸಿದಳು. ಗಾಡಿಯ ಸುತ್ತ ಅರ್ಧ ಹಳ್ಳಿಯೇ ನೆರೆದಿತ್ತು.

"ಒಗ್ಬರ್ತೀಯೇನವ್ವ ಪುಟ್ಟವ್ವ" ಎಂದು ಹಳ್ಳಿಯ ಹೆಂಗಳೆಯರೆಲ್ಲ ಕಣ್ಣೊರಿಸಿಕೊಂಡರು.

ಗಾಡಿಯಲ್ಲಿ ಜಾಗ ಸಾಕಾಗದೆ ಇದ್ದುದರಿಂದ ಸುಬ್ಬ, ಕಂಠಿ ಹಿಂದೆಯೇ ಉಳಿಯಬೇಕಾಯಿತು. ಎಷ್ಟೋ ದೂರದ ವರೆಗೆ ಗಾಡಿಯ ಹಿಂದೆಯೇ ನಡೆದುಹೋದರು. ಗಾಡಿಯ ವೇಗ ಹೆಚ್ಚಾದಾಗ,

"ಹೋಗ್ಬರ್ತೀಯಾ ಅಕ್ಕಾ, ಹೋಗ್ಬರ್ತೀರಾ ಭಾವ..." ಎಂದು ಅಳುಮುಖದಿಂದ ಬೀಳ್ಕೊಟ್ಟರು.

ಕಾರು ಅಲದ ಮರದ ಬಳಿಗೆ ಬಂದಿತ್ತು. ಡ್ರೈವರ್ ಹೇಳಿದ, "ಪೂರ್ತಿ ಹಳ್ಳೀವರೆಗೇ ಹೋಗು ಅಂತ ದೊಡ್ಡ ಸಾಹೇಬರು ಹೇಳಿದ್ದರು. ಇಲ್ಲಿ ರಸ್ತೆ ಎಡಕ್ಕೆ ಹೋಗಬೇಕೋ ಬಲಕ್ಕೆ ಹೋಗಬೇಕೋ ಗೊತ್ತಾಗಲಿಲ್ಲ. ಇಲ್ಲೇ ನಿಂತುಬಿಟ್ಟೆ ಸರ್" ಎಂದು ಹೇಳಿದ.

ಪುಟ್ಟಗೌರಿ ಮತ್ತೊಮ್ಮೆ ತಾಯಿ, ತಂದೆಯರಿಗೆ ನಮಸ್ಕಾರ ಮಾಡಿದಳು. ಭಟ್ಟರೂ ದುಃಖವನ್ನು ತಾಳಲಾರದೆ ಗದ್ಗದ ಕಂಠದಿಂದ ಸುರೇಶನಿಗೆ,

"ಏನೋ ಹಳ್ಳೀಲೇ ಹುಟ್ಟಿ ಬೆಳೆದಿದೆ. ಏನೂ ಅರಿಯದ ಮಗು. ಏನಾದರೂ ತಪ್ಪು ಮಾಡಿದರೆ ಹೊಟ್ಟೆಯಲ್ಲಿ ಹಾಕಿಕೊಂಡು ಕಾಪಾಡಬೇಕು" ಎಂದರು.

ಸುರೇಶ, "ನೀವೇನೂ ಯೋಚನೆ ಮಾಡಬೇಡಿ..." ಎಂದಷ್ಟೆ ಹೇಳಿದ. ಇಂತಹ ಸಂದರ್ಭದಲ್ಲಿ ಹೇಗೆ ಮಾತಾಡಬೇಕೆಂಬುದೇ ಅವನಿಗೆ ತಿಳಿದಿರಲಿಲ್ಲ.

"ಪುಟ್ಟಾ, ನಿನ್ನ ವಿದ್ಯಾಭ್ಯಾಸ
ಎಲ್ಲೀ ವರೆಗೆ ಬಂತು...?"

ಕಾರು ಧೂಳೆಬ್ಬಿಸಿ ಹೊರಟಾಗ, ಕಣ್ಮರೆಯಾಗುವ ವರೆಗೂ ನೋಡುತ್ತಿದ್ದು ಭಟ್ಟರು, ನರಸಮ್ಮ ಹಳ್ಳಿಯ ಕಡೆ ಹೊರಟರು.

ಕಾರಿನಲ್ಲಿ ಡ್ರೈವರ್ ಇರುವುದನ್ನು ಮರೆತು ಸುರೇಶ ಮಡದಿಯನ್ನು ನಾನಾ ಬಗೆಯಲ್ಲಿ ಸಂತೈಸಿದ.

ತುಮಕೂರಿನಲ್ಲಿ ತಮ್ಮ ಮನೆಗೆ ಬಂದು ಹೋಗಬೇಕೆಂದು ಕೌಸಲ್ಯಮ್ಮ ಹೇಳಿದ್ದರು. ಅಲ್ಲೇ ಊಟವಾಯಿತು. ಮೊದಲು ಪುಟ್ಟಗೌರಿಯೊಡನೆ ಹೆಚ್ಚು ಮಾತಾಡದಿದ್ದ ಚಂಚಲ ಈಗ ಅವಳೊಡನೆ ಬೇಕಾದಷ್ಟು ಹರಟಿದಳು. ಈಗ ಅವಳು ಕೇವಲ ಪುಟ್ಟಗೌರಿಯಾಗಿರಲಿಲ್ಲ - ಸುರೇಶನ ಮಡದಿಯೂ ಆಗಿದ್ದಳಲ್ಲ!

ಕೌಸಲ್ಯಮ್ಮ ಗೌರಿಗೆ ಒಂದು ಒಳ್ಳೆಯ ಖಣ ಇಟ್ಟು ಎಲೆ ಅಡಿಕೆ ಕೊಟ್ಟರು. ಅವಳೊಬ್ಬಳೇ ಇದ್ದಾಗ,

"ವಿಶಾಲಾಕ್ಷಿ ಸ್ವಲ್ಪ ಹಟದ ಸ್ವಭಾವದವಳು. ಹೇಳಿದ ಹಾಗೆ ಕೇಳಿಕೊಂಡು, ಹೊಂದಿಕೊಂಡು ಹೋಗಬೇಕಮ್ಮ" ಎಂದು ಬುದ್ಧಿವಾದ ಹೇಳಿದರು.

-೨-

ತೆಂಗು, ಕಂಗುಗಳನ್ನು ಹಿಂದೆ ಹಾಕಿ ಕಾರು ಬಹುಬೇಗ ಬೆಂಗಳೂರನ್ನು ಸೇರಿತು.

ಮನೆಯ ಬಾಗಿಲು ತೆರೆದಿತ್ತು. ಆದರೆ ಬಾಗಿಲಲ್ಲಿ ಯಾರೂ ಇರಲಿಲ್ಲ.

ಕಾರಿನಿಂದಿಳಿದ ಪುಟ್ಟಗೌರಿ, ಬಗುಳುತ್ತ ಓಡಿಬಂದ ನಾಯಿಗೆ ಬೆದರಿ ಸುರೇಶನ ಭುಜವನ್ನು ಹಿಡಿದಳು. ಸುರೇಶ ಅವಳ ಬೆನ್ನು ತಟ್ಟಿ, "ಅದು ಏನೂ ಮಾಡೋಲ್ಲ ಬಾ" ಎಂದು ಮನೆಯೊಳಕ್ಕೆ ಕರೆದುಕೊಂಡು ಬಂದ.

ಅಜ್ಜಿ ಹೇಳಿದ್ದಂತೆ ಪುಟ್ಟಗೌರಿ ಬಲಗಾಲನ್ನು ಮುಂದಿಟ್ಟು ಒಳಕ್ಕೆ ಬಂದಳು. ಅವಳನ್ನು ಆರತಿ ಎತ್ತಿ ಸ್ವಾಗತಿಸಲು ಅತ್ತೆಯಾಗಲೀ ನಾದಿನಿಯಾಗಲೀ ಕಾಣಲಿಲ್ಲ. ಸುರೇಶನೇ ಮನಸ್ಸು ತಡೆಯದೆ, "ಅಮ್ಮಾ" ಎಂದು ಕೂಗಿದ.

ಪ್ರಮೀಳ ಹೊರಗೆ ಬಂದು,

"ಅಮ್ಮ ಯಾವುದೋ ಮೀಟಿಂಗಿಗೆ ಹೋಗಿದಾರೆ ಸುರೇಶ್" ಎಂದು ಹೇಳಿ ಪುಟ್ಟಿಯನ್ನು ನೋಡಿ "ಬನ್ನಿ" ಎಂದಳು.

ಸುರೇಶ ಗೌರಿಯನ್ನು ತನ್ನ ರೂಮಿಗೆ ಕರೆದೊಯ್ದ. ಅವಳು ಅಂಜುತ್ತ,

"ಕೈ ಕಾಲು ತೊಳೆಯಬೇಡವೆ?" ಎಂದಳು.

"ಇಲ್ಲೇ ತೊಳೆಯೋಣ ಬಾ" ಎಂದು ಹೇಳಿ ಸುರೇಶ ರೂಮಿಗೆ ಸೇರಿದಂತಿದ್ದ ಬಾತ್-ರೂಮನ್ನು ತೋರಿಸಿದ. ಕಾಲಿಟ್ಟರೆ ಎಲ್ಲಿ ಜಾರುವುದೋ ಎಂಬಂತೆ ಹೊಳೆಯುತ್ತಿತ್ತು ಆ ಚಿತ್ತಾರದ ನೆಲ.

ಗೌರಿ ಮುಖ ತೊಳೆದು ತಲೆ ಬಾಚಿಕೊಂಡಳು. ಆಚೆ ಪ್ರಮೀಳ,

"ಪ್ರತಿಮಾ" ಎಂದಳು.

ಪುಟ್ಟಗೌರಿ ಕಿಟಕಿಯಿಂದಾಚೆ ಗಿಡಗಳನ್ನು ನೋಡುತ್ತಿದ್ದಳು. ಸುರೇಶನೇ, "ನೋಡು... ನಿನ್ನ ಕೂಗ್ತಾ ಇದಾಳೆ ಪಮ್ಮಿ" ಎಂದ.

"ಇಲ್ಲ ಅವರು ಇನ್ನೇನೋ ಹೆಸರು ಕೂಗಿದರು."

"ಇಲ್ಲ ಅದು ನಿನ್ನ ಹೆಸರೇ ಅಲ್ವೆ? ಮದುವೆಯಲ್ಲಿ ನಾನಿಟ್ಟ ಹೆಸರು. ಇನ್ನು ಮೇಲೆ ನೀನು ಪುಟ್ಟಗೌರಿ ಅಲ್ಲ, ಪ್ರತಿಮಾ."

ಪುಟ್ಟಗೌರಿಗೆ ಏನೋ ಒಂದು ಬಗೆಯಾಯಿತು. ಗೌರಮ್ಮಂತೂ ಬಿಟ್ಟು ಬಿಡಬೇಕಾಯಿತು. ಅವರಿಟ್ಟ ಹೆಸರೂ ಬೇಡವೆ?

"ಸುರೇಶ್, ಕಾಫಿಗೆ ಬರ್ತೀಯಾ?" ಪ್ರಮೀಳ ಮತ್ತೊಮ್ಮೆ ಕೂಗಿದಳು.

ಅಡಿಗೆಯ ಮಂಜಪ್ಪ ಗಾಜಿನ ಕಪ್ಪು ಬಸಿಗಳನ್ನು ತಂದು ಪುಟ್ಟ ಮೇಜಿನ ಮೇಲಿಟ್ಟ.

ಕಾಫಿ ಕುಡಿಯುವಾಗ ಪ್ರಮೀಳ ಪುಟ್ಟಗೌರಿಯ ಉಡುಗೆ ತೊಡುಗೆಗಳನ್ನು ಗಮನಿಸಿದಳು. ಹಳ್ಳಿಯ ಉಪ್ಪುನೀರಿನ ಒಗೆತದಿಂದಾಗಿ ಮಾಸಲು ಬಣ್ಣಕ್ಕೆ ತಿರುಗಿದ್ದ ಹಳದಿಯ ಸಣ್ಣಂಚಿನ ಸೀರೆ, ಮೊಳಕೈವರೆಗಿದ್ದ ದೊಗಲೆಯಾದ ಕೆಂಪು ರವಿಕೆ, ಚೆನ್ನಾಗಿ ಬಿಗಿದು ಹಾಕಿದ್ದ ಜಡೆ, ಹಣೆಯಲ್ಲಿ ಅಗಲವಾದ ಕುಂಕುಮ. ಪ್ರಮೀಳ,

"ನಮ್ಮ ಮನೆ ಕೆಲಸದವಳೂ ಇದಕ್ಕಿಂತ ವಾಸಿ" ಎಂದುಕೊಂಡಳು.

ಪ್ರಮೀಳ ತಾನಾಗಿ ಏನೂ ಮಾತಾಡಿಸಲಿಲ್ಲ. ಗೌರಿಯೇ, ಕೇಳಿದಳು, "ಅತ್ತೆಮ್ಮ ಎಷ್ಟೊತ್ತಿಗೆ ಬರ್ತಾರೆ?" ಸಲಿಗೆಯ ದನಿಯಲ್ಲಿ ಒರಟೊರಟಾಗಿ ಬಂದ ಪ್ರಶ್ನೆಗೆ ಪ್ರಮೀಳ ನಕ್ಕಳು. ಅದರಿಂದ ನೆತ್ತಿಹತ್ತಿ ಸ್ವಲ್ಪ ಕೆಮ್ಮು ಬಂದುಬಿಟ್ಟಾಯಿತು.

"ಬರ್ತಾರೆ ರಾತ್ರಿ ಎಂಟು ಘಂಟೆಗೆ" ಎಂದಳು.

ಗೌರಿ, "ಇದನ್ನೆಲ್ಲಾ ಗಲಬರಿಸಿ ಇಟ್ಟುಬಿಡ್ಲಾ?" ಎಂದು ಕೇಳಿದಳು. ಪ್ರಮೀಳ ತಡೆಯಲೆತ್ನಿಸುತ್ತಿದ್ದ ನಗೆ ಆ ಮಾತನ್ನು ಕೇಳಿ ಮತ್ತೆ ಉಕ್ಕಿ ಹರಿಯಿತು.

ಸುರೇಶ್ ಹೇಳಿದ, "ಬೇಡ ಅಲ್ಲೇ ಇಡು. ಬೋರ ತಗೊಂಡು ತೊಳೀತಾನೆ"

ಗೌರಿಗೆ ಏನು ಮಾಡಬೇಕೆಂದು ತೋಚದಾಯಿತು. ಅವಳ ಕಲ್ಪನೆಯ ಅತ್ತೆಯ

"ಈ ಹುಡುಗಿ ಸುರೇಶಪ್ನೋರಿಗ ಸರಿಜೋಡಿಯುಲ್ಲಬಿದ್ರನ್ನಾ"

ಮನೆಯ ಚಿತ್ರಕ್ಕೂ ಇದಕ್ಕೂ ಏನೂ ಸಂಬಂಧ ವಿರಲಿಲ್ಲ. ಮದುವೆಗೆ ಮೊದಲು ತಾಯಿ ಏನಾದರೂ ಕೆಲಸಕ್ಕೆ ಕರೆದಾಗ ಹೋಗದಿದ್ದರೆ ಆಕೆ ರೇಗಿ,

"ಹೀಗೇ ಪಾಲುಮಾರಿಕೆ ಪಟ್ಕೊಂಡು ಕೂತಿರು. ನಾಳೆ ಮದಿವೆಯಾದ್ಮೇಲೆ ಅತ್ತೆ ಮನೇಲಿ ಆಗತ್ತೆ ನಿಂಗೆ ಪೂಜೆ" ಎಂದು ಗದರಿಸುತ್ತಿದ್ದರು. ಆಗ ಅವಳೆಂದುಕೊಳ್ಳುತ್ತಿದ್ದಳು, "ಅತ್ತೆ ಮನೆಯಲ್ಲಿ ನಾನು ಎಲ್ಲಾ ಕೆಲಸಾನೂ ಚೆನ್ನಾಗಿ ಮಾಡಿ ಮುದ್ದು ಸೊಸೆ ಅನ್ನಿಸಿಕೊಳ್ತೀನಿ. ಆಗೇನೂ ನಾನು ಹೀಗಿರಲ್ಲ" ಕಲ್ಪನೆಯು ಹೊಂಬಿಸಲು ಹರಡಿಕೊಳ್ಳುತ್ತಿತ್ತು. ಬೆಳಗಿನ ಝಾವಕ್ಕೆ ಎದ್ದು ಬಾಗಿಲಿಗೆ ನೀರು ಹಾಕಿ ಒಲೆ ಹೊತ್ತಿಸುವುದು, ಮನೆಯಲ್ಲಿ ಎಮ್ಮೆ, ಹಸು ಇದ್ದರೆ ಹಾಲು ಕರೆದು ಕಾಸಿ ಮನೆಯುವರೆಲ್ಲ ಏಳುವ ಹೊತ್ತಿಗೆ ಕಾಫಿ ಸಿದ್ಧಮಾಡುವದು. ಆ ಮೇಲೆ ನೀರಿಗೆ ಹೋಗಬೇಕಾದರೆ ಹೋಗುವುದು. ಆಗ ಊರಿನ ಹಿರಿಯು ಮುತ್ತೈದೆಯುರೆಲ್ಲ ತನ ್ೇ ಮೆಚ್ಚುಗೆಯಿಂದ ನೋಡಿ 'ಸೊಸೆಯೆಂದರೆ ಹೀಗಿರಬೇಕು' ಎಂದುಕೊಳ್ಳುವರು.

ಹೊತ್ತಿಗೆ ಮುಂಚೆ ಮಡಿಯುಟ್ಟು ಮಾವನವರ ಪೂಜೆಗೆ ಅಣಿಮಾಡುವುದು. ಬೆಳಗಿನ ಫಲಹಾರಕ್ಕೆ ರೊಟ್ಟಿಯೋ ದೋಸೆಯೋ ಮಾಡಿ, ಸುತ್ತುಗಟ್ಟುವ ಚಿಕ್ಕ ನಾದಿನಿ, ಮೈದುನರನ್ನು ಮಾತಾಡಿಸುತ್ತ ಎಲ್ಲರಿಗೂ ಕೊಡುವುದು. ನಂತರ ಅಡಿಗೆ. ಮಧ್ಯಾಹ್ನದ ಹೊತ್ತು ಹೂಬತ್ತಿ ಮಾಡುವದು, ಅಕ್ಕಿಯನ್ನು ಜೀಸಿ, ಹಿಟ್ಟು, ತರಿ ಮಾಡಿಟ್ಟುಕೊಳ್ಳುವುದು. ಸಂಜೆ ಮಕ್ಕಳನ್ನೆಲ್ಲ ಕೂರಿಸಿಕೊಂಡು ಕತೆ ಹೇಳುವುದು. ರಾತ್ರಿ ಊಟ ಕೆಲಸ ಮುಗಿದ ಮೇಲೆ ಅತ್ತೆಯುವರೇನಾದರೂ ಕಾಲು ನೋವೆಂದರೆ ಅವರ ಪಾದಗಳನ್ನು ಒತ್ತಿ, ಅವರು ಅಪ್ಪಣೆ ಕೊಟ್ಟಾಗ ಮಲಗಲು ಹೋಗುವುದು. ಆಗ ತನ್ನ ಪ್ರಿಯತಮ ಪಿಸುದನಿಯಲ್ಲಿ,

"ಬೆಳಗ್ನಿಂದ ದುಡಿದೂ ದುಡಿದೂ ಸಾಕಾಗಿ ಹೋಯ್ತಾ ಪುಟ್ಟಾ?" ಎಂದರೆ ಸಾಕು ತನ್ನ ದಣಿವೆಲ್ಲ ಮಾ ್ವಾಗುವುದು. ಇದು ಆದರ್ಶ ಸೊಸೆಯೆಂದು ಅವಳು ಕಲ್ಪಿಸಿಕೊಂಡಿದ್ದ ಚಿತ್ರ.

ಆದರೆ ಇಲ್ಲಿ ತಾನು ಕುಡಿದ ಲೋಟವನ್ನು ತೊಳೆಯಲೂ ಅವಕಾಶವಿಲ್ಲ?

ಕೋಣೆಯಲ್ಲಿ ಮಂಕಾಗಿ ಕುಳಿತ ಗೌರಿಯನ್ನು ನೋಡಿ ಸುರೇಶ ಕನಿಕರದಿಂದ,

"ಹೊರಕ್ಕೆ ಹೋಗಿ ಬರೋಣ ಬರ್ತೀಯಾ?" ಎಂದ.

"ಇವತ್ತು ತಾನೆ ಊರಿಗೆ ಬಂದಿದೀವಿ. ನೋಡಿದವರು ಏನೆಂದುಕೊಳ್ತಾರೆ?"

"ಇದು ನಿಮ್ಮ ಹಳ್ಳಿ ಅಲ್ಲ, ಅಂದುಕೊಳ್ಳೋದಿಕ್ಕೆ. ಇವೆಲ್ಲಾ ಮದುವೆಗೆ ಮುಂಚೇನೇ ಜೊತೇಲಿ ಓಡಾಡ್ತಾರೆ."

"ಹೌದಾ!"

"ಬರ್ತೀಯಾ?"

"ಬೇಡ ಅತ್ತೆಮ್ಮ ಸಹ ಮನೇಲಿಲ್ಲ. ನಾಳೆ ಹೋದರಾಯ್ತು"

"ಅತ್ತೆಮ್ಮ ಅನ್ನಬೇಡ. ನಾವು ಅನ್ನೋ ಹಾಗೇ ಅಮ್ಮ ಅನ್ನು ಸಾಕು"

ಹೊರಗೆ ಮಾತಿನ ಧ್ವನಿಯಾಯಿತು. ಕೆಲದ ನಿಂಗಿ ಪ್ರಮೀಳೆಯನ್ನು ಕೇಳುತ್ತಿದ್ದಳು,

"ಅಮ್ಮಾವರು ಬಂದಂಗೈತೆ?"

"ಹುಂ ಬಂದರು."

"ನೋಡುವಂತೆ ಎಲ್ಲಿಗೆ ಹೋಗ್ತಾಳೆ? ಸಧ್ಯ ನು ನೋಡಿ ನಗದೆ ಇದ್ರೆ ಸಾಕು"

"ಯಾಕವ್ವ ಚಂದಾಕಿಲ್ವ?"

"ಓ...ತುಂಬಾ ಚೆನ್ನಾಗಿದಾಳೆ"

"ಮತ್ತೆ?"

ಪ್ರಮೀಳೆಗೆ ಅಷ್ಟು ಮಾತು ಸಾಕಾಯಿತು.

"ಸುಮ್ನೆ ನಿನ್ನ ಪಾಡಿಗೆ ನೀನು ಗುಡಿಸು" ಎಂದಳು.

ಆ ಸಂಭಾಷಣೆಯನ್ನು ಕೇಳಿದ ಗೌರಿ ರೂಮಿನ ಬಾಗಿಲಲ್ಲಿ ಬಂದುನಿಂತಳು.

ನಿಂಗಿ, ಕತ್ತಿನಿಂದ ಮೇಲಕ್ಕೆ ದೊಡ್ಡದಾಗಿ ಹೆರಳು ಹಾಕಿಕೊಂಡು ಅದಕ್ಕೆ ಕನಕಾಂಬರ ದಂಡೆಯನ್ನು ಸುತ್ತಿಕೊಂಡಿದ್ದಳು. ಯಾರೋ 'ಅಮ್ಮಾವರು' ಉಟ್ಟು ಹಳೆಯದು ಮಾಡಿ ಕೊಟ್ಟಿದ್ದ ವಾಯಲ್ ಸೀರೆ. ಒಳಗಿನ ಲಂಗವೂ ಕಾಣುತ್ತಿತ್ತು. ಮುಖದ ಕಪ್ಪನ್ನು ಮುಚ್ಚಲಾರದ ಪೌಡರ್. ಗೌರಿಗೆ "ಇವಳು ಕೆಲಸದವಳೇ!" ಎನಿಸಿತು. ಗೌರಿ ಒಳಕ್ಕೆ ಸರಿದಳು.

ನಿಂಗಿ ಪ್ರಮೀಳೆಗೆ,

"ಏನವ್ವ ಎಂತೆಂತ ಎಣ್ಣುಗೋಳೆಲ್ಲ ಬಂದಿದ್ವು ಈ ಹಳ್ಳಿ ಉಡುಗಿ ಮಾಡ್ಕೊಂಡವ್ರೆ. ನಮ್ಮ ಸುರೇಶಪ್ನೋರಿಗೆ ಸರಿ ಜೋಡಿಯಲ್ಲ ಬಿದ್ರನ್ನಾ" ಎಂದಳು. ಗೌರಿಗೆ ಅದನ್ನು ಕೇಳಿ ಅಳು ಬರುವಂತಾಯಿತು.

ಹೊರಗೆ ಕಾರಿನ ಸಪ್ಪಳ.

ವಿಶಾಲಾಕ್ಷಮ್ಮ ನಾಲ್ಕೈದು ಮಂದಿ ಗೆಳತಿಯರೊಡನೆ ಒಳಕ್ಕೆ ಬಂದರು. ಗೌರಿ ಇತಿಯನ್ನು ಕೇಳಿಬಳು, 'ಅಮ್ಮ ಬಂದರು ಅಂತ

"......ಗೌರಿಗೆ ಅದನ್ನು ಕೇಳಿ ಅಳು ಬರುವಂತಾಯಿತು."

ಗಿಣತ್ತೆ. ನಾನು ಹೊರಗೆ ಹೋಗಿ ನಮಸ್ಕಾರ ಮಾಡಲಾ?"

"ಬೇಡ ಬೇಡ. ನಮ್ಮ ಮನೇಲಿ ಅದೆಲ್ಲ ಅಭ್ಯಾಸವೆ ಇಲ್ಲ. ಅದೂ ಅಲ್ಲದೆ ಅಮ್ಮನ ಫ್ರೆಂಡ್ಸ್ ಬೇರೆ ಬಂದಿರೋ ಹಾಗಿದೆ. ಅವರೆಲ್ಲ ಹೊರಟು ಹೋಗಲಿ ಸುಮ್ಮನಿರು" ಎಂದ ಸುರೇಶ.

ಪುಟ್ಟಗೌರಿ ಮತ್ತೆ ಮೌನವಾಗಿ ಕುಳಿತಳು. ಇದೇನು ಇವರ ರೀತಿ ನೀತಿಗಳು? ಮನೆಯ ಸೊಸೆಯಾಗಿ ಬಂದವಳು ಅತ್ತೆ ಮಾವಂದಿರಿಗೆ ನಮಸ್ಕಾರ ಮಾಡಿ ಆಶೀರ್ವಾದ ಪಡೆಯ ಬೇಡವೆ? ಎಂದು ಯೋಚಿಸಿದಳು.

ಹೊರಗೆ ಮಾತು ಸಾಗಿತು.

"ಏನ್ರೀ ಪಂಕಜ, ನಿಮ್ಮ ಮಗನಿಗೆ ಮದುವೆ ಗೊತ್ತಾಯ್ತಂತೆ?" ಎಂದಳು ಮಂಜುಳ.

"ಹೌದಮ್ಮ ಗೊತ್ತಾಯಿತು."

"ಹೆಣ್ಣು ಈ ಊರಿನದೇನಾ?" ದೇವಕಿಯ ಪ್ರಶ್ನೆ.

"ಅಲ್ಲ. ಬೊಂಬಾಯಿಂದು. ವಿಶಾಲಾಕ್ಷಮ್ಮನ ಮಗಳು ನಿರ್ಮಲಾಗೆ ಪರಿಚಯವಂತೆ."

ವಿಶಾಲಾಕ್ಷಮ್ಮ, "ಹೌದು ಹೌದು. ನಿಮ್ಮ ಕಾಗದ ಬರೆದಿದ್ದಳು. ಅವಳು ಬೊಂಬಾಯಿಯಲ್ಲಿದ್ದಾಗ ತುಂಬ ಪರಿಚಯವಾಗಿತ್ತಂತೆ. ಒಳ್ಳೇ ಭಾರಿ ಕಡೆಗೇ ಹಾಕಿದಿರಿ ಗಾಳ" ಎಂದರು.

"ಹಾಗೇನಿಲ್ಲ. ನಾವು ವರದಕ್ಷಿಣೆ ಸಹ ಬೇಡ ಅಂದೆವು. ಅವರ ಮಗಳಿಗೆ ಅವರು ಏನು ಬೇಕಾದರೂ ಕೊಟ್ಟು ಕೊಳ್ಳಲಿ ಅವರಿಷ್ಟ."

ಪಂಕಜಮ್ಮನ ಮಾತಿಗೆ ಮಂಜುಳ ಕಂಡೂ ಕಾಣದಂತೆ ಬಾಯಿ ಸೊಟ್ಟುಮಾಡಿದಳು.

'ವರದಕ್ಷಿಣೆ ಬೇಡವಂತೆ! ನಮ್ಮ ಕಡೆಯದೇ ಒಂದು ಹೆಣ್ಣು ಕೇಳಿದ್ದಕ್ಕೆ ಇಪ್ಪತ್ತೈದು ಸಾವಿರಕ್ಕೆ ವ್ಯಾಪಾರ ಕುದುರಿಸಲು ನೋಡಿದರು. ಇವರ ಪತಿರಾಯ!" ಎಂದುಕೊಂಡಳು.

ವಿಶಾಲಾಕ್ಷಮ್ಮ, "ದೊಡ್ಡ ಮನುಷ್ಯರ ಮನೆ ಹೆಣ್ಣಾದ ಮೇಲೆ ನೀವು ಬೇಡವೆಂದರೂ ಅವರು ಕೊಟ್ಟೇ ಕೊಡ್ತಾರೆ. ಒಬ್ಬಳೇ ಮಗಳು. ಎಂಬಾಸೆಡರ್ ಕಾರು ಕೊಡ್ತಾರೆ ಅಂತ ನಿಮ್ಮಿ ಬರೆದಿದ್ದಳು" ಎಂದರು.

"ಹೌದೇನ್ರೀ...ಭಾರಿ ಮದುವೆ ಹಾಗಾದರೆ. ನಮ್ಮನ್ನೆಲ್ಲಾ ನೀವೇ ಪ್ಲೇನಿನಲ್ಲಿ ಮದುವೆಗೆ ಕರ್ಕೊಂಡು ಹೋಗಬೇಕು." ಎಂದಳು ದೇವಕಿ.

ಪಂಕಜಮ್ಮ, "ಎಲ್ರೀ ನಿಮ್ಮ ಸೊಸೆ ಇವತ್ತು ಬರ್‍ತಾಳೆ ಅಂದಿದ್ರಿ? ರಾತ್ರಿಗೆ ಬರ್‍ತಾರಾ?" ಎಂದು ಕೇಳಿದರು. ವಿಶಾಲಕ್ಷಮ್ಮ "ಓ ಹೌದು ಮರೆತೆ ಹೋಗಿತ್ತು. ಪಮ್ಮೀ,ಸುರೇಶ್ ಬಂದನೇನು?" ಎಂದು ಮಗಳನ್ನು ಕೇಳಿದರು.

"ಬಂದಾಮ್ಮ. ರೂಮಿನಲ್ಲಿದಾರೆ" ಎಂದಳು ಪ್ರಮೀಳ.

ವಿಶಾಲಕ್ಷಮ್ಮ ಮಗನ ರೂಮಿನ ಬಾಗಿಲಲ್ಲಿ ನಿಂತು ಬಹುಮೆಲ್ಲನೆ, 'ಸುರೇಶ್' ಎಂದರು.

"ಬಾ ಅಮ್ಮ "ಎಂದ ಸುರೇಶ್.

ಬಾಗಿಲು ತಳ್ಳಿಕೊಂಡು ಒಳಗೆ ಬಂದ ವಿಶಾಲಾಕ್ಷಮ್ಮ ಮತ್ತೆ ಬಾಗಿಲನ್ನು ಮುಂದಕ್ಕೆ ಮಾಡಿದರು. ಗೌರಿ ಅತ್ತೆಯನ್ನು ನೋಡಿ ಎದ್ದು ನಿಂತಳು.

"ಪ್ರತಿಮಾ, ಹೊರಗೆ ನನ್ನ ಸ್ನೇಹಿತೇರೆಲ್ಲ ಬಂದಿದಾರೆ.ನಿನ್ನ ನೋಡಬೇಕು ಅಂತಾರೆ, ಆದರೆ ನೀನು ಇವತ್ತೇ ಹಳ್ಳಿಯಿಂದ ಬಂದಿದೀಯ. ಸುಸ್ತಾಗಿ ಮಲಗಿದೀಯ ಅಂತ ಹೇಳಿಬಿಡ್ತೀನಿ" ಎಂದರು ವಿಶಾಲಕ್ಷಮ್ಮ. ಅವರ ಆ ಮಾತು ಆಜ್ಞೆಯಂತಿತ್ತು. ಗೌರಿ ಪ್ರಶ್ನಾರ್ಥಕವಾಗಿ ಅತ್ತೆಯ ಕಡೆ ನೋಡಿದಳು.

"ಈ ವೇಷದಲ್ಲಿ ಅವರ ಮುಂದೆ ನಿನ್ನ ನಿಲ್ಲಿಸಿದರೆ ನನ್ನ ಮಾನ ಹೋಗುತ್ತೆ ಅಷ್ಟೆ" ಎಂದು ಹೊರಟುಹೋದರು. ಬಾಗಿಲು ಚಿಲಕ ಹಾಕಿ ಸುರೇಶ ಮಡದಿಯ ಬಳಿಗೆ ಬಂದ. ಅವಳ ಕಣ್ತುಂಬ ನೀರು ತುಂಬಿತ್ತು. ಗೌರಿಯ ಕಣ್ಣೊರೆಸಿ ಸುರೇಶ,

"ಅವರೆಲ್ಲ ಆಚಾರದ ಹಟ್ಟಾ. ಈಗ ನಿನಗೆ 'ಅತ್ತೆ ಮನೆ' ಹೊಸ? ಇದೆಲ್ಲ ಸಿಹಿಸಿಕೊಳ್ಳಲು ಕಲಿಯಬೇಕು. ನಾಳೆ ಪೇಟೆಗೆ ಹೋಗಿ ಕೆಲವು ಸೀರೆ-ಬ್ಲೌಸ್‌ಪೀಸ್ ತರೋಣ. ನಿನ್ನ ಅಲಂಕಾರ ಎಲ್ಲಾ ನಮ್ಮ ಮನೆಗೆ ಸರಿ ಹೋಗುವಂತೆ ಮಾರ್ಪಡಿಸಿಕೊಂಡರಾಯಿತು" ಎಂದ.

ತನ್ನ 'ವೇಷ' ಏನಾಗಿದೆ! ಹಳ್ಳಿಯಲ್ಲಿ ಹೀಗೇ ಶೃಂಗರಿಸಿಕೊಂಡಾಗ ಅಜ್ಜಿ ಹತ್ತಿರ ಕರೆದು,

"ಮುದ್ದುಗಾರ ಚಿನ್ನ, ಹೆಸರಿಗೆ ತಕ್ಕ ಹಾಗಿ ದೀಯಲ್ಲೇ ಪುಟ್ಟೂ" ಎನ್ನುತ್ತಿರಲಿಲ್ಲವೆ?ಮುಂದಲೆಯ ಒಂದು ಕೂದಲಾದರೂ ಹೊರಗೆ ಬಂದರೆ ಅದನ್ನು ತೀಡಿ ಬಾಚಿ; "ಹಾಗೆಲ್ಲ ಕೂದಲು ಬಿಟ್ಕೋಬೇಡ. ಆ ಶೃಂಗಾರ ಎಲ್ಲಾ ಸೂಳೇರ್ಗೆ. ನಮ್ಮಂಥ ಮರ್‍ಯಾದಸ್ಥರ ಮನೆ ಮಕ್ಕಳಿಗಲ್ಲ" ಎನ್ನುತ್ತಿದ್ದರು.

ಪುಟ್ಟ ಗೌರಿಯ ಮನಸ್ಸೆಲ್ಲ ಹಳ್ಳಿಯಲ್ಲೇ ಇತ್ತು.

ಸುರೇಶ ವಿಮರ್ಶನ ದೃಷ್ಟಿಯಿಂದ ಗೌರಿಯನ್ನು ನೋಡಿದ-ಹೌದು ತಾಯಿ ಹೇಳಿದ್ದೂ

ಸೆರಿಯೆ ಎನಿಸಿತು. ಐವತ್ತರ ಗಡಿ ದಾಟಿದ್ದ ಪಂಕಜಮ್ಮ ಹದಿನಾರು ವರ್ಷದ ಹುಡುಗಿಯಂತೆ ಅಲಂಕರಿಸಿಕೊಳ್ಳುತ್ತಿದ್ದರು. ತಾಯಿಯ ಗೆಳತಿಯರೆಲ್ಲ ಹಾಗೇ.

ಸುರೇಶ ಹೊರಗೆ ಹೋದ.

ವಿಶಾಲಾಕ್ಷಮ್ಮನ ಗೆಳತಿಯರೆಲ್ಲ ಹೊರಟು ಹೋಗಿದ್ದರು. ಗೌರಿಯೂ ಎದ್ದು ಹೊರಗೆ ಬಂದಳು.

ಸೋಫಾದ ಮೇಲೆ ಪ್ರಮೀಳ ಅವಳ ಗೆಳತಿಯೊಡನೆ ಮಾತಾಡುತ್ತ ಕುಳಿತಿದ್ದಳು. ಗೆಳತಿ ಗೌರಿಯನ್ನು ನೋಡಿ,

"ಯಾರೇ ಅದು ಪಮ್ಮೀ" ಎಂದಳು.

"ನನ್ನ ಸಿಸ್ಟರ್ ಇನ್-ಲಾ"

"ಓ ಡಿಯರ್. ನಾನು ನಂಬಲಾರೆ ಪಮ್ಮೀ"

"ನಂಬಿದರೆ ನಂಬು ಬಿಟ್ಟರೆ ಬಿಡು. ನಿಜ ಹೇಳಿದೇನೆ ನಾನು."

"ಅಲ್ಲವೇ ನಿಮ್ಮಣ್ಣ ನೋಡಿದರೆ ಹಾಗಿದಾರೆ, ಇದು ಹೀಗಿದೆ!"

ಗೌರಿ ಬೇಡವೆಂದರೂ ಅವಳಿದ್ದ ನಡುಮನೆಗೆ ಮಾತು ಕೇಳಿಸುತ್ತಿತ್ತು.

"ಎಲ್ಲಿಂದ ಹಿಡಿದು ತಂದಿರೇ ಈ ಕಾಡು ಪ್ರಾಣೀನಾ?"

"ಎಲ್ಲೋ ತುಮಕೂರಿನ ಹತ್ರ ಒಂದು ಹಳ್ಳಿಯಿಂದ"

"ಯಾಕೆ ನಿಮ್ಮಣ್ಣಂಗೆ ಬೇರೆ ಎಲ್ಲೂ ಹೆಣ್ಣು ಸಿಕ್ತಾ ಇರಲಿಲ್ವೇನೆ?"

"ಅವನೇ ಇಷ್ಟಪಟ್ಟು ಮಾಡಿಕೊಂಡ."

"ಯಾವುದೋ ಹಳೇ ಸಾಮಾನಿನ ಅಂಗಡಿಯಿಂದ ಹೊತ್ಕೊಂಡು ಬಂದಿರೋ ಬೊಂಬೆ ಹಾಗಿದೆ. ನಿಮ್ಮಮನೇಲೊಂದು 'ಓರಿಯಂಟಲ್' ಕಾರ್ನರ್ ಮಾಡಿ ಅಲ್ಲಿ ಕೂರಿಸಬಹುದು."

ಗೆಳತಿಯೊಡನೆ ಪ್ರಮೀಳೆಯೂ ಸೇರಿ ಜೋರಾಗಿ ನಕ್ಕಳು. ಗೌರಿಗೆ ಈ ಸಂಭಾಷಣೆ ಪೂರ್ತಿಯಾಗಿ ಅರ್ಥವಾಗದೆ ಇದ್ದರೂ ತನ್ನನ್ನು ಹಾಸ್ಯಮಾಡಿಕೊಂಡು ನಗುತ್ತಿರುವರೆಂದು ತಿಳಿಯಿತು. ಅವಳು ಮತ್ತಷ್ಟು ಮಂಕಾದಳು.

ರಾತ್ರಿ ಊಟಕ್ಕೆ ಕರೆ ಬಂದಿತು. ಗೌರಿ 'ಊಟ ಬೇಡ'ವೆಂದಳು. ಸುರೇಶನೇ ಬಲವಂತ ಮಾಡಿದ.

ದೊಡ್ಡ ಟೇಬಲ್ಲಿನ ಮೇಲೆ ತಟ್ಟೆಗಳನ್ನು ಹಾಕಿದ್ದರು. ಒಂದು ಬದಿಗೆ ವಿಶಾಲಾಕ್ಷಮ್ಮ ಪ್ರಮೀಳ. ಎದುರಿಗೆ ಎರಡು ಕುರ್ಚಿಗಳ ಪೈಕಿ ಒಂದರಲ್ಲಿ ಸುರೇಶ್ ಕುಳಿತು, "ಬಾ" ಎಂದು ಪಕ್ಕದ ಕುರ್ಚಿಯನ್ನು ತೋರಿಸಿದ. ಗೌರಿಗೆ ತುಂಬಾ ನಾಚಿಕೆಯಾಯಿತು. ಎಲ್ಲರೆದುರಿಗೆ ಹೀಗೆ ಕುಳಿತು ಊಟ ಮಾಡಲು ಇದೇನು ಭೂಮದೂಟವೆ? ಅವಳು ಸುರೇಶನೊಡನೆ,

"ಮಾವನವರು?" ಎಂದಳು

"ಅವರು ರಾತ್ರಿ ಹೊತ್ತು ಊಟಮಾಡೊಲ್ಲ" ದೇಹವನ್ನು ಒಂದು ಹಿಡಿ ಮಾಡಿಕೊಂಡು, ಗೌರಿ ಪತಿಯ ಪಕ್ಕದಲ್ಲಿ ಕುರ್ಚಿಯ ಮೇಲೆ ಕುಳಿತಳು. ಪ್ರಮೀಳೆಗೆ ವಿಪರೀತ ನಗು ಬರುತ್ತಿತ್ತು- ಗೌರಿ ಕುಳಿತ ರೀತಿಗೆ-ಅವಳು ಮೇಜಿನ ಮೇಲೆ ಊಟ ಮಾಡಿ ಅಭ್ಯಾಸವಿಲ್ಲದೆ ಪಡುತ್ತಿದ್ದ ಪಾಡಿಗೆ ಹೇಗೋ ತಡೆದುಕೊಳ್ಳುತ್ತಿದ್ದಳು.

ಊಟದುದ್ದಕ್ಕೂ ಅವರೆಲ್ಲ ಏನೇನೋ ಮಾತನಾಡುತ್ತಿದ್ದರು. ಅದರಲ್ಲಿ ಹೆಚ್ಚು ಇಂಗ್ಲೀಷ್ ಪದಗಳಿದ್ದುದರಿಂದ ಗೌರಿಗೆ ಏನೂ ಅರ್ಥವಾಗಲಿಲ್ಲ. ಅದರ ಕಡೆ ಅವಳ ಗಮನವೂ ಇರಲಿಲ್ಲ.

ತಟ್ಟೆಗಳನ್ನು ತೆಗೆಯಬೇಕೆಂದುಕೊಂಡವಳು ಅದಕ್ಕೆ ಏನೆನ್ನುವರೊ ಎಂದು ಸುಮ್ಮನಾದಳು. ವಿಶಾಲಾಕ್ಷಮ್ಮ,

"ನನಗೆ ಬೆಳಗಿನಿಂದ ಓಡಾಡಿ ಸಾಕಾಗಿದೆ. ಮಲಗಲು ಹೋಗ್ತೇನೆ. ನೀವೂ ಮಲಗಿ. ಪ್ರತಿನಾ, ಮಂಜಪ್ಪ ಹಾಲು ಕೊಡ್ತಾನೆ. ತಂದು ಸುರೇಶ್‌ಗೆ ಕೊಡು" ಎಂದು ಹೇಳಿದರು. ಗೌರಿ, ಅದೊಂದು ಕೆಲಸವನ್ನಾದರೂ ಹೇಳಿದರಲ್ಲ ಎಂದು ಸಂಭ್ರಮದಿಂದ ಅಡಿಗೆ ಮನೆಗೆ ಹೋದಳು. ಕೆಂಪಗೆ ಕಾದು ಹದವಾಗಿದ್ದ ಹಾಲಿಗೆ ಸಕ್ಕರೆ ಹಾಕಿಕೊಟ್ಟರು ಮಂಜಪ್ಪ.

ಗೌರಿ ಕೊಟ್ಟ ಹಾಲನ್ನು ಅವಳ ಮುಂದೆಯೇ ಹಿಡಿದು ಸುರೇಶ್, "ನೀನು ಏನೂ ಊಟ ಮಾಡಲೇ ಇಲ್ಲ. ನೀನೇ ಕುಡಿ" ಎಂದು ಅವಳು ಬೇಡ ಬೇಡವೆಂದರೂ ಅವಳಿಗೇ ಎಲ್ಲವನ್ನೂ ಕುಡಿಸಿದ. ಅವನ ಈ ಪ್ರೀತಿಯಿಂದ ಪ್ರಫುಲ್ಲವಾಗಬೇಕಾಗಿದ್ದ ಅವಳ ಮನಸ್ಸು ಮತ್ತಷ್ಟು ಮುದುಡಿತು. ತಾನು ಸುರೇಶನಿಗೆ ಯೋಗ್ಯ ಪತ್ನಿಯಲ್ಲ ಎಂಬ ಭಾವನೆ ಅವಳಲ್ಲಿ ಬಲವಾಗಿ ಬೇರೂರಿತು. ದುಗುಡ ತುಂಬಿ ಬಂತು. ಸುರೇಶನಿಗಾಗಿ ತಡೆದುಕೊಂಡಳು.

ಜೋಡಿಸಿ ಹಾಕಿದ್ದ ಮಂಚವನ್ನು ನೋಡಿ ಗೌರಿ, "ಈಗ್ಯಾಕೆ ಹೀಗೆ? ಶಾಸ್ತ್ರಕ್ಕೆ ನಾಲ್ಕು ದಿನ ಆಯ್ತಲ್ಲ ಬೇರೆ ಬೇರೆ ಹಾಕೋಣ. ನೋಡ್ದೋರು ನಕ್ಕಾರು." ಎಂದಳು.

ಹೌದು, ಮಂಚ ಬೇರೆಯಾಗಿದ್ದರೆ ತನ್ನ ಪಾಡಿಗೆ ತಾನು ಗೋಡೆಯ ಕಡೆ ತಿರುಗಿಕೊಂಡು ಮನಃಪೂರ್ತಿಯಾಗಿ ಅತ್ತುಬಿಡಬಹುದು.

ಸುರೇಶ ಹೇಳಿದ, "ನಗೋದ್ಯಾಕೆ ಪುಟ್ಟಾ ನಾವಿಬ್ಬರೂ ದಂಪತಿಗಳು ತಾನೆ? ನಮ್ಮನೇಲಿ ನನ್ನ ತಾಯಿತಂದೆ ರೂಮಿನಲ್ಲೂ ಹೀಗೆ."

ಗೌರಿಗೆ ಅದನ್ನು ಕೇಳಲೂ ನಾಚಿಕೆಯಾಯಿತು. ಅವಳ ಮನದೊಳಗೆ ಕಡೆಯುತ್ತಿದ್ದ ದುಃಖವನ್ನು ಕಂಡುಕೊಂಡು ಸುರೇಶ,

"ನಿಮ್ಮ ತಾಯಿ ಮನೆಯವರನ್ನೆಲ್ಲಾ ಬಿಟ್ಟು ಬಂದಿರೋದು ತುಂಬಾ ಬೇಜಾರಾಗಿರಬೇಕು ಅಲ್ಲವೆ?" ಎಂದು ಅತ್ಯಂತ ಮೃದುವಾದ ದನಿಯಲ್ಲಿ ಕೇಳಿದ. ಗೌರಿ ತಡೆ ಹಿಡಿದಿದ್ದ ಕಣ್ಣೀರು ಕೆನ್ನೆಯ ಮೇಲೆ ತೊಟ್ಟಿಕ್ಕಿತು.

"ಅಳಬಾರದು ಚಿನ್ನಾ ನಾನಿಲ್ವೆ? ಬಾ" ಎಂದು ರಮಿಸಿದ.

ಅವನೆದೆಯಲ್ಲಿ ತಲೆಯಿಟ್ಟು ಹೃದಯ ಹಗುರಾಗುವ ವರೆಗೆ ಅತ್ತಳು ಗೌರಿ. ಸುರೇಶ ಮೆಲ್ಲನೆ ಅವಳ ಬೆನ್ನು ತಟ್ಟುತ್ತಿದ್ದ. ಗೌರಿ ಹಾಗೆಯೆ ನಿದ್ದೆ ಹೋದಳು.

-೮-

ಬೆಳಗ್ಗೆ ಎದ್ದ ಕೂಡಲೆ ದೇವರ ಪಟಕ್ಕೆ ಕೈ ಮುಗಿಯುವುದು, ಅವಳಿಗೆ ಬುದ್ಧಿ ತಿಳಿದಂದಿ

A HAPPY & PROSPEROUS DEEPAVALI

Telegram: 'URBANBANK' *Telephone:* OFFICE 129 SECRETARY 138

THE DAVANGERE URBAN CO-OP. BANK Ltd,
NARASARAJA ROAD, DAVANGERE.

Authorised Share Capital	.. ..	Rs. 10,00.000
Paid-Up Share Capital	.. ..	Rs. 5,09,475
Total Deposits	.. ..	Rs. 35,00,000
Total Working Capital	.. ..	Rs. 45,00,000

Rate of Interest on Deposits

Savings Deposits .. 4½%
Fixed Deposit .. 3% to 8½%
Cumulative Deposit .. 5% Compound
Laxmi Deposit .. 4½%

DIRECTORS

1. Sri V. M. Chigateri
2. ,, G. Mahadevappa
3. ,, Maganur Basappa
4. ,, Shamanur Shivappa
5. ,, I. Sannaveerappa
6. ,, J. C. Subhan
7. ,, J. M. Basavarajappa

DOING ALL TYPES OF BANKING BUSINESS

A.M. PRABHUDEV *Manager* R. R, SREENIVAS MURTHY *PRESIDENT* S. KOTRABASAPPA *Secretary*

ನಿಂದ ಬಂದಿದ್ದ ಅಭ್ಯಾಸ. ಕಣ್ಣು ಬಿಟ್ಟ ಕೂಡಲೆ ಗೌರಿ ನಾಲ್ಕು ಗೋಡೆಯನ್ನೂ ನೋಡಿದಳು. ಎಲ್ಲೂ ಒಂದು ಪಟವೂ ಇರಲಿಲ್ಲ. ಹಳ್ಳಿಯಲ್ಲಿ ಮಲಗುತ್ತಿದ್ದ ಹಜಾರದಲ್ಲಿ ಯಾವ ಕಡೆ ತಿರುಗಿದರೂ ದೇವರ ಪಟ ಕಾಣಿಸುತ್ತಿತ್ತು. ರವಿ—ವರ್ಮನ ಲಕ್ಷ್ಮಿ, ಸರಸ್ವತಿ, ತಿರುಪತಿ ವೆಂಕಟರಮಣಸ್ವಾಮಿ, ಮೃತ್ಯುಂಜಯ, ಬಲಿ-ವಾಮನ, ಕೃಷ್ಣ ಯಶೋದೆಗೆ ಬಾಯಲ್ಲಿ ಬ್ರಹ್ಮಾಂಡ ತೋರಿಸುತ್ತಿರುವುದು. ಹೀಗೆ ಒಂದೇ ಎರಡೇ- ಬಲಕ್ಕೆ ತಿರುಗಿದಳು ಗೌರಿ. ಗಾಢ ನಿದ್ರೆಯಲ್ಲಿದ್ದ ಸುರೇಶನ ಮುಖ ಸೌಮ್ಯವಾಗಿತ್ತು. ಮುಖದಲ್ಲಿದ್ದ ಮಾರ್ದವತೆ-ನಿದ್ರೆಯಲ್ಲೂ ಗೌರಿಯನ್ನೇ ಸಂತೈಸುತ್ತಿರುವಂತಿತ್ತು. ಗೌರಿ ಆ ನಿರ್ಮಲ ಮುಖದಲ್ಲೇ ದೇವರನ್ನು ಕಂಡು ಕೈ ಮುಗಿದಳು.

ಸ್ನಾನವಾದ ಮೇಲೆ ದೇವರ ಪೂಜೆ ಮಾಡುವುದನ್ನು ಅವಳು ಎಂದೂ ತಪ್ಪಿಸುತ್ತಿರಲಿಲ್ಲ. ಇಲ್ಲಿ ಮನೆಯೆಲ್ಲ ಹುಡುಕಿದರೂ ದೇವರ ಕೋಣೆ ಅವಳ ಕಣ್ಣಿಗೆ ಕಾಣಿಸಲಿಲ್ಲ. ಧೈರ್ಯ ಮಾಡಿ ವಿಶಾಲಕ್ಷಮ್ಮನನ್ನೇ ಕೇಳಿದಳು. ಆಕೆ ಉಗ್ರಾಣದಲ್ಲಿ ಒಂದು ಕಡೆ ಗೋಡೆಗೆ ತಗಲುಹಾಕಿದ್ದ ಪಟವೊಂದನ್ನು ತೋರಿಸಿದರು. ಗೌರಿಗೆ, ಅದು ಯಾವ ದೇವರೆಂದು ತಿಳಿಯಲಿಲ್ಲ.

"ಇದು ದೇವರ ಪಟ ಇದ್ದ ಹಾಗೆ ಕಾಣಲ್ಲವಲ್ಲ?"

"ಅದು ಸಾಯಿಬಾಬಾ ಪಟ. ನಿತ್ಯ ಎರಡು ಹೊತ್ತೂ ಊದು ಕಡ್ಡಿ ಹಚ್ಚಿಡು, ಸಾಕು"

"ಎಣ್ಣೆ ಬತ್ತಿ ಬೇಡವೆ ?"

"ಅದೆಲ್ಲ ನಾವು ಇಟ್ಟುಕೊಂಡಿಲ್ಲ"

"ತುಳಸೀ ಕಟ್ಟೆ ?"

"ಇದೇನು ದೇವಸ್ಥಾನವಲ್ಲ" ಎಂದರು.

ಗೌರಿಗೆ ತಾಯಿಯ ಮನೆಯಲ್ಲಿ ದೇವರ ಮನೆಗೆ ಪ್ರವೇಶವಿರಲಿಲ್ಲ. 'ಮಡಿ'ಯ ಕಾರಣದಿಂದ. ಆದರೆ ಅವಳೇ ಬೇರೊಂದು ಕಡೆ ದೇವರನ್ನು ಇಟ್ಟುಕೊಂಡಿದ್ದಳು. ನಿತ್ಯ ಅದಕ್ಕೆ ಎರಡು ಹೊತ್ತೂ ದೀಪ ಹಚ್ಚಿ ತನಗೆ ಬರುತ್ತಿದ್ದ ಒಂದೆರಡು ಸ್ತೋತ್ರಗಳನ್ನು ಹೇಳುತ್ತಿದ್ದಳು. ಹಬ್ಬ ಹರಿದಿನಗಳಲ್ಲಿ ಗೌರಿಯ ದೇವರಿಗೂ ವಿಶೇಷ ಪೂಜೆ ನೈವೇದ್ಯಗಳಾಗುತ್ತಿದ್ದುವು. ತುಳಸೀ ಪೂಜೆಯಿಲ್ಲದೆ ಯಾವ ಪೂಜೆಯೂ ಪೂರ್ಣವಲ್ಲ ಎಂಬ ಭಾವನೆ ಅವಳಲ್ಲಿ ಬೇರೂರಿತ್ತು.

ಸುರೇಶ ಗೌರಿಗಾಗಿ ಸೀರೆಗಳನ್ನು ತರಲು ಅವಳನ್ನು ಕರೆದುಕೊಂಡು 'ಕಮರ್ಷಿಯಲ್ ಸ್ಟ್ರೀಟ್'ಗೆ ಬಂದ. ಜೊತೆಗೆ ಪ್ರಮೀಳೆಯೂ ಬಂದಿದ್ದಳು.

ಗೌರಿಗೆ ಇದು ಹೊಸ ಲೋಕವಾಗಿತ್ತು. ಅತ್ಯಾಧುನಿಕ ಸಾಮಾನುಗಳನ್ನು ಮನಸೆಳೆವಂತೆ ಜೋಡಿಸಿದ್ದ ಅಂಗಡಿಗಳು, ನಾನಾ ಭಾಷೆಗಳನ್ನು ಮಾತಾಡುತ್ತ ಗಿರಾಕಿಗಳ ಚಿತ್ತವನ್ನಪಹರಿಸುತ್ತಿದ್ದ ನೌಕರರು, ವಿಧ ವಿಧವಾದ ಕೇಶಾಲಂಕಾರದಿಂದ ಗಂಡಸರ ಪೋಷಾಕಿನಲ್ಲೇ ಹೋಗುತ್ತಿದ್ದ ಮಹಿಳೆಯರು. ಗೌರಿ ಆಶ್ಚರ್ಯದಿಂದ ನೋಡುತ್ತಿದ್ದಳು. ಪ್ರಮೀಳ, ಸುರೇಶ್ ಇಬ್ಬರೇ ಆಯ್ಕೆ ಮಾಡಿ ಸೀರೆಗಳನ್ನು ತಂದರು. ಪ್ರಮೀಳ, ಉಗುರಿಗೆ ಹಾಕುವ ಬಣ್ಣ ಮತ್ತು ಎರಡು ಜೊತೆ ಚಪ್ಪಲಿಗಳನ್ನು ಕೊಂಡಳು. ಸುರೇಶ್ ಕಾರಿನಲ್ಲಿ ಬಂದು ಕುಳಿತಾಗ ಗೌರಿ ಕೇಳಿದಳು,

"ನನಗೊಂದು ಸಾಮಾನು ಬೇಕಲ್ಲಾ"

"ಏನು ಹೇಳು ಇಲ್ಲಿ ಏನು ಬೇಕಾದರೂ ಸಿಕ್ಕುತ್ತದೆ"

ಗೌರಿ ಸಂಕೋಚದಿಂದ, "ನನಗೊಂದು ದೇವರ ಪಟ ಬೇಕು" ಎಂದಳು.

"ಯಾವ ದೇವರು?"

"ಗಣಪತಿ"

ಗೌರಿಗೆ ಗಣೇಶನೆಂದರೆ ಬಲು ಪ್ರೀತಿ. ವರ್ಷಕ್ಕೊಮ್ಮೆ ಬರುತ್ತಿದ್ದ ಗಣೇಶನ ಹಬ್ಬದಲ್ಲಿ ಅವಳೇ ಮಂಟಪ ಕಟ್ಟಿ, ಹಣ್ಣುಗಳನ್ನೆಲ್ಲ ದಾರಕ್ಕೆ ಕಟ್ಟಿ ತೂಗುಬಿಟ್ಟು, ಬಣ್ಣದ ರಂಗೋಲಿಯಿಟ್ಟು ಸಂಭ್ರಮ ಪಡುತ್ತಿದ್ದಳು. ಗಣಪತಿಗೆ ಸಂಬಂಧಿಸಿದ ಕತೆಗಳನ್ನು ಅಜ್ಜಿಯ ಬಾಯಿಂದ ಅನೇಕ ಬಾರಿ ಕೇಳಿದ್ದಳು.

ತುಂಟ ಬಾಲಕನಾಗಿ ರಾವಣ ಬಹಿರ್ದೆಶೆಗೆ ಹೋದಾಗ ಗೋಕರ್ಣದಲ್ಲಿ ಲಿಂಗವನ್ನು ಕೆಳಗಿಟ್ಟದು, ಅಣ್ಣನೊಡನೆ ಪಂಥ ಹೂಡಿ, ತಾಯಿ ತಂದೆಯರಿಗೇ ಪ್ರದಕ್ಷಿಣೆ ಹಾಕಿ ಪ್ರಪಂಚ ಪ್ರದಕ್ಷಿಣೆ ಆಯಿತೆಂದುದು......

ಸುರೇಶ ಕಾರನ್ನು 'ಆರ್ಟ್ಸ್ ಅಂಡ್ ಕ್ರಾಫ್ಟ್ಸ್' ಮುಂದೆ ನಿಲ್ಲಿಸಿದ. ಒಂದು ಪುಟ್ಟ ಕರೀಮರದ ಮಂಟಪ, ಅದರೊಳಗೆ ಮುದ್ದಾದ ದಂತದ ಗಣೇಶ. ತಂದು ಗೌರಿಯ ಕೈಗೆ ಕೊಟ್ಟ. ಗೌರಿಗೆ ತುಂಬಾ ಸಂತೋಷವಾಯಿತು. ಸುರೇಶ ಹೇಳಿದ,

"ಭಕ್ತಿಯಿಂದ ಪೂಜೆ ಮಾಡಿ, ನಿನ್ನ ವಿದ್ಯಾಭ್ಯಾಸ ನಿರ್ವಿಘ್ನವಾಗಿ ಸಾಗಲಿ ಅಂತ ಬೇಡಿಕೋ. ನಾಳೆಯಿಂದ ಇಂಗ್ಲಿಷ್ ಶುರು ಮಾಡ್ತೀನಿ"

ಗೌರಿಗೆ ದಿಗ್ಭ್ರಮೆಯಾಯಿತು. ಎಲ್ಲರಿಗೂ ಮದುವೆಯೆಂದರೆ ವಿದ್ಯಾಭ್ಯಾಸಕ್ಕೆ ಪೂರ್ಣ ವಿರಾಮವಾಗಿದ್ದರೆ ಇವಳ ಪಾಲಿಗೆ ಅದೇ ಪ್ರಾರಂಭವಾಗಿತ್ತು. ಅವಳನ್ನು ಕಾಡುತ್ತಿದ್ದುದು ಒಂದೇ ಪ್ರಶ್ನೆ. ಕಲಿತು ತಾನು ಮಾಡಬೇಕಾದುದೇನು? ಪತಿಸೇವೆ, ಸಂಸಾರ ನಿರ್ವಹಣೆಗೆ ಇಂಗ್ಲೀಷ್ ಏಕೆ?

ರಾತ್ರಿ ಗೌರಿ ಅದೇ ಮಾತನ್ನು ಸುರೇಶನೊಡನೆ ಕೇಳಿದಳು. ಸುರೇಶ ಅವಳ ಮುಖವನ್ನು ಕೈಯಲ್ಲಿ ಹಿಡಿದು, ಕಣ್ಣಲ್ಲಿ ಕಣ್ಣಿಟ್ಟು,

"ನಿನ್ನೆ ಹೇಳಿದೆಯಲ್ಲಾ ನಾನು ನಿಮಗೆ ಯೋಗ್ಯ ಪತ್ನಿ ಅಲ್ಲ ಅಂತ- ಆ ಯೋಗ್ಯತೆ ಸಂಪಾದಿಸೋದಕ್ಕೆ ಈ ವಿದ್ಯೆ. ನೀನು ಎಷ್ಟು ಕಲಿತರೆ ಅಷ್ಟು ಬೇಗ ನಿನಗೆ ಬಹುಮಾನ. ಏನು ಹೇಳು?"

ಗೌರಿ ನಾಚಿದಳು.

"ಕೆಂಪಿನ ಅಡ್ಡಿಗೆ" ಎಂದು ನಕ್ಕ ಸುರೇಶ.

ಸುರೇಶನ ರಜ ಮುಗಿದು, ಅವನು ಕೆಲಸಕ್ಕೆ ಹೊರಟ ದಿನ ಗೌರಿಗೆ ಪ್ರಪಂಚವೇ ಬರಿದಾದಂತೆ ತೋರಿತು.

ಸದಾ ತವರು ಮನೆಗೆ ಓಡುತ್ತಿತ್ತು ಮನಸ್ಸು. ಸುಬ್ಬ, ಸೀನ ಇವರೊಡನೆ ಪಗಡೆ, ಚೌಕಾಬಾರ ಆಡುವುದು, ಅವರು ಶಾಲೆಗೆ ಹೋದಾಗ ಶಾರಿಯೊಡನೆ ಆಟ, ಊಟ, ನಿದ್ರೆ ಒಮ್ಮೊಮ್ಮೆ, ಅಜ್ಜಿಯೊಡನೆ ಎಲೆ ಹಚ್ಚುವುದು, ಕತೆ ಕೇಳುವುದು, ಬೇಸರವಾದಾಗ ಆಚೀಚೆ ಮನೆಯವರೊಡನೆ ಜಗುಲಿಯ ಮೇಲೆ ಹರಟೆ ಇದರಲ್ಲೇ

HAPPY DEEPAVALI GREETINGS

The Mysore Central Co-Operative Land Development Bank Ltd.,

Est : 1929
Tel : 'MYLANDBANK'
Phones : 22510 & 22309

Albert victor Road, Fort,
BANGALORE-18

President :
Sri R. Anantaraman, B. Sc., LL. B.

(AS ON 30-6-67)

PAID-UP SHARE CAPITAL	..	1,55,15,600·00
TOTAL RESERVES	..	29,72,426·00
DEBENTURE REDEMPTION FUND	..	3,14,17,826·00
WORKING CAPITAL	..	20,81,19,526·00
RURAL & ORDINARY DEBENTURE IN CIRCULATION		18,96,31,500·00
LOANS DISBURSED DURING 1966-67	..	5,00,66,216·00
NET PROFIT FOR 65.66	..	4,10,618·14

The Bank is Apex Institution in the Mysore State for issue of long-term agricultural credit towards sinking of wells, for reclamation of lands, for development of areca plantations, irrigation pump-sets and other improvement purposes through its 164 Taluka Primary Land Development Banks and also through the 3 Branch offices at Raichur, Davanagere and Shimoga. The principal and the interest on debentures are fully and unconditionally guaranteed by the Government of Mysore. The debentures are trust securities and are also approved securities. Sinking funds are constituted to pay of the debentures on maturity.

C. B. NAVALLI
Secretary

ವಳ ಬಾಲ್ಯವೆಲ್ಲಾ ಕಳೆದಿತ್ತು. ಶಾಲೆಗೆ ಹೋಗಬೇಕೆಂದು ಅವಳಿಗೆ ಎಂದೂ ಆಸೆಯಾಗಿರಲಿಲ್ಲ. ಓದುವುದು ಬೇಡವೆಂದಾಗ ಒಳಗೇ ಸಂತೋಷ ಪಟ್ಟಿದ್ದಳು. ಮನೆಯಲ್ಲಿ ಸದಾ ನೆಂಟರು, ಅಥವಾ ಹೊಲ ಗದ್ದೆ ಕೆಲಸ ನೋಡಿಕೊಳ್ಳುವ ರೈತರು, ಅಕ್ಕಪಕ್ಕದ ಹಳ್ಳಿಯವರು, ಯಾರಾದರೂ ಇರುತ್ತಿದ್ದರು. ಬೇಸರವಾಗಲು ಕಾರಣವೇ ಇರಲಿಲ್ಲ.

ಇಲ್ಲಿ ಮನೆ ಸದಾ ಭಣಭಣ ಎನ್ನುತ್ತಿತ್ತು. ನಿಯಮಿತ ವೇಳೆಗೆ ಅವರವರ ಕೆಲಸಗಳನ್ನು ಮುಗಿಸಿಕೊಂಡು ತಮ್ಮ ತಮ್ಮ ರೂಮನ್ನು ಸೇರುತ್ತಿದ್ದರು. ನೆರೆಹೊರೆಯವರಲ್ಲಿ ಯಾವ ಮಾತುಕತೆಯೂ ಇಲ್ಲ. ವಿಶಾಲಾಕ್ಷಮ್ಮ, ಬೆಳಿಗ್ಗೆ, ಸಂಜೆ ಏನಾದರೂ ಮೀಟಿಂಗ್ ಎಂದು ಹೋಗುತ್ತಿದ್ದರು. ಪ್ರಮೀಳೆ ಕಾಲೇಜಿಗೆ ಹೋಗುತ್ತಿದ್ದಳು. ಕಾಲೇಜು ಇಲ್ಲದ ದಿನಗಳಲ್ಲೂ ಅವಳು ತನ್ನ ಗೆಳತಿಯರನ್ನು ಕರೆದುಕೊಂಡು ತನ್ನ ರೂಮನ್ನು ಸೇರಿ ಇಂಗ್ಲಿಷ್ ಹಾಡನ್ನು ಹಾಕಿಕೊಂಡು 'ರೆಕಾರ್ಡ್ ಪ್ಲೇಯರ್' ಮುಂದೆ ಕುಳಿತುಬಿಡುತ್ತಿದ್ದಳು. ವಿಶ್ವನಾಥರಾಯರು ಬೆಳಗಿನ ವಾಕಿಂಗ್, ಪೇಪರ್ ಓದುವುದು, ಊಟ, ವಿಶ್ರಾಂತಿ, ಸಂಜೆ ಕ್ಲಬ್ಬು ರಾತ್ರಿಗೆ ಒಂದು ಲೋಟ ಹಾಲು ಕುಡಿದು ಮಲಗುವುದು. ಈ ದಿನಚರಿಯಿಂದ ಸ್ವಲ್ಪವೂ ಅತ್ತಿತ್ತ ಸರಿಯುತ್ತಿರಲಿಲ್ಲ

ರಜಾ ದಿನಗಳಲ್ಲಿ ಸುರೇಶ್, ಪ್ರಮೀಳ, ವಿಶಾಲಾಕ್ಷಮ್ಮ ಕುಳಿತು ಮಾತನಾಡಿದರೂ ಅದರಲ್ಲಿ ಗೌರಿ ಭಾಗವಹಿಸುವಂತಹ ವಿಷಯಗಳೇನೂ ಇರುತ್ತಿರಲಿಲ್ಲ.

ಸುರೇಶ ಕನ್ನಡ ವೃತ್ತಪತ್ರಿಕೆಯನ್ನು ಗೌರಿಗೆ ತಂದುಕೊಟ್ಟು, "ನೋಡು, ಇದರಲ್ಲಿ ವಾರ್ತೆಗಳನ್ನೆಲ್ಲ ಓದಿ ಮುಖ್ಯವಾದವುಗಳನ್ನು ಪೆನ್ಸಿಲಿನಿಂದ ಗುರುತಿಸು" ಎಂದು ಹೇಳಿದ.

ಗೌರಿಗೆ, ಮೊದಲ ಪುಟದಲ್ಲಿ ಯಾವುದೂ ಸ್ವಾರಸ್ಯವಾಗಿ ಕಾಣಲಿಲ್ಲ. ಭಾಷಾವಾರು ಪ್ರಾಂತ್ಯ, ವಿಯೆಟ್‌ನಾಮ್, ಕಾಶ್ಮೀರ ಸಮಸೆ. ಇವೆಲ್ಲ ಅವಳಿಗೆ ಅರ್ಥವಾಗದ ಪದಗಳು.

ಕೊನೆಗೆ ಯಾವುದೋ ಹಳ್ಳಿಯಲ್ಲಿ ಹಸುವೊಂದು ಎರಡು ಮುಖವುಳ್ಳ ಕರುವಿಗೆ ಜನ್ಮ ಕೊಟ್ಟಿತೆಂಬ ಆಶ್ಚರ್ಯಕರವಾದ ಸಂಗತಿಗೆ ಗೀರು ಹಾಕಿದಳು. ಹಾಗೆಯೇ ಭಿಕ್ಷುಕನೊಬ್ಬ ರಕ್ಷಣಾನಿಧಿಗೆ ನೂರು ರೂಪಾಯಿ ಕೊಟ್ಟ ಸಮಾಚಾರವೂ ಅವಳ ಮನವನ್ನು ಸೆಳೆಯಿತು

ಅದನ್ನು ನೋಡಿದ ಸುರೇಶನಿಗೆ ಅಳಬೇಕೋ ನಗಬೇಕೋ ತಿಳಿಯದಾಯಿತು. ಗೌರಿ ಮಾತ ಉತ್ಸಾಹದಿಂದ,

"ಆ ಹಳ್ಳಿ ಹತ್ರ ಇದ್ರೆ ಹೋಗಿ ಆ ಕರು ನೋಡ್ಕೊಂಡು ಬರೋಣ" ಎಂದಳು

ಸುರೇಶ ತಾಳ್ಮೆಯಿಂದ

"ಇದೆಲ್ಲ ಮುಖ್ಯವಾದ ಸುದ್ದಿ ಅಲ್ಲ ಪುಟ್ಟಾ" ಎಂದು ಹೇಳಿ ಪ್ರಪಂಚದ ನಾನಾ ಭಾಗಗಳಲ್ಲಿ ನಡೆಯುತ್ತಿದ್ದ ವಿದ್ಯಮಾನಗಳನ್ನು

"ಇನ್ನು ಮೇಲೆ ನೀನು ಓದಬೇಕು ಅನ್ನೋದನ್ನು ನಾನೇ ಗುರುತು ಮಾಡಿಟ್ಟು ಹೋಗ್ತೀನೆ"

ಕುರಿತು ವಿವರಿಸಿದ. ಭೂಪಟವನ್ನು ತೆಗೆದು ಆ ದೇಶಗಳು ಎಲ್ಲವೆ ಎಂದು ಹೇಳಿದ.

ಗೌರಿ "ಅದೆಲ್ಲ ಕಟ್ಕೊಂಡು ನಮಗೇನು?" ಎಂದಳು. ಇವಳಿಗೆ ಹೇಳಿಕೊಡುವುದು ಸುಲಭವಲ್ಲ ಎನಿಸಿತು ಸುರೇಶನಿಗೆ. ಅವನು ಬರೆದು ಕೊಟ್ಟ ಇಂಗ್ಲೀಷ್ ಅಕ್ಷರಗಳು ಗೌರಿಗೆ ಎಷ್ಟು ದಿನವಾದರೂ ಬರಲಿಲ್ಲ

ಕಾಲೇಜಿನಿಂದ ಬೇಸರಗೊಂಡು ಬಂದಿದ್ದ ಸುರೇಶ. ಅಂದು ಗೌರಿ, "ನೋಡಿ ಇವತ್ತು ಪೇಪರಿನಲ್ಲಿ..." ಎಂದು ಪ್ರಾರಂಭಿಸಿದಾಗ ಉತ್ಸಾಹದಿಂದ

"ಏನಿದೆ?" ಎಂದ.

"ಹೊಸ ಹೊಸ ತರಹ ಒಡವೆಗಳ ಮಾದರಿ ಚಿತ್ರ ಕೊಟ್ಟಿದಾರೆ......" ಎಂದಳು. ಅದೊಂದು ಜಾಹಿರಾತು. ಸುರೇಶ ಮುಖವನ್ನು ಗಂಟಿಕ್ಕಿ, "ಇನ್ನೇನಿದೆ" ಎಂದ.

"ಯಾವುದೋ ಊರಿನಲ್ಲಿ ಒಂದು ಬಳ್ಳಿ ನಾಗರಹಾವಿನ ಆಕಾರದಲ್ಲಿ ಬೆಳೆದಿದೆಯಂತೆ"

ಸುರೇಶನ ತಾಳ್ಮೆ ಕರಗಿತು.

"ಇದಕ್ಕಿಂತ ಮುಖ್ಯವಾದ ವಿಷಯ ಇನ್ನೇನೂ ಇಲ್ಲ ಅಲ್ವೆ? ಮೊನ್ನೇನೇ ನಾನು ಹೇಳಲಿಲ್ಲವೇ ಇಂಥಾದ್ದೆಲ್ಲ ಓದೋದ್ರಿಂದ ಏನೂ ಪ್ರಯೋಜನವಿಲ್ಲ ಅಂತ?" ಗೌರಿ ಪೆಚ್ಚು ಮುಖ ಮಾಡಿಕೊಂಡು ತಲೆ ತಗ್ಗಿಸಿ ತಪ್ಪಿತಸ್ಥಳಂತೆ ನಿಂತಳು.

"ಇನ್ನು ಮೇಲೆ ನೀನು ಓದಬೇಕು ಅನ್ನೋದನ್ನೂ ನಾನೇ ಗುರುತುಮಾಡಿಟ್ಟು ಹೋಗ್ತೀನೆ. ಇಂಗ್ಲಿಷ್ ಅಕ್ಷರ ಎಲ್ಲೀ ವರೆಗೆ ಬಂತು ನೋಡೋಣ ತೋರ್ಸು" ಎಂದ ಸುರೇಶ.

ಗೌರಿ ನಿಂತ ಜಾಗ ಬಿಟ್ಟು ಕದಲಲಿಲ್ಲ.

"ಯಾಕೆ ಏನೂ ಬರೆದಿಲ್ಲವೆ?"

"ಊಂ ಹೂಂ"

"ಹೇಳೋಕೆ ನಾಚಿಕೆ ಆಗಲ್ವೆ? ಪಾಠ ಹದಿನೈದು ದಿನ ಆಯ್ತು, ನಾಲ್ಕಕ್ಷರ ಕೂಡ ಬರಲ್ಲ."

ಗೌರಿಯ ಉತ್ತರ ಕಣ್ಣೀರಾಗಿ ಹರಿದು ಬಂತು. ಸುರೇಶ ಮತ್ತಷ್ಟು ಬೇಸರದಿಂದ.

"ಮಾತೆತ್ತಿದರೆ ಅಳು. ನಿನಗೆ ಬೇರೆ ಏನಾದರೂ ಗೊತ್ತಿದ್ದರೆ ತಾನೆ" ಎಂದು ಗದರಿಸಿ ರೂಮಿನಿಂದ ಹೊರಗೆ ಬಂದ. ವಿಶಾಲಾಕ್ಷಮ್ಮ ಅಲ್ಲೇ ಸ್ವೆಟರ್ ಹೆಣೆಯುತ್ತ ಕುಳಿತಿದ್ದರು. ಸುರೇಶನ ಮುಖ ನೋಡಿ ಪರಿಸ್ಥಿತಿಯನ್ನು ಊಹಿಸಿದರು

"ಕೂತುಕೋ ಬಾ ಸುರೇಶ್ ಏಕೆ ಒಂದು ಥರಾ ಇದೀಯಲ್ಲಾ?"

"ಏನೂ ಇಲ್ಲವ್ಮ. ಏನೋ ಬೇಜಾರು"

"ಬೇಜಾರು! ಎಲ್ಲಾದರೂ ಹೊರಗೆ ಹೋಗಿ ಬಾ."

"ಎಲ್ಲಿಗೆ ಹೋಗೋದು..."

"ಒಳ್ಳೆ ಪಿಕ್ಚರ್ ಬಂದಿದೆ. ಹೋಗೋದಾದರೆ ಪ್ರತಿಮಾನ್ನೂ ಕರ್ಕೊಂಡು ಹೋಗು."

"ಯಾವುದವ್ಮ?"

"Marriage Go Round"

ತಾಯಿ ತನ್ನನ್ನು ಕೆಣಕುತ್ತಿಲ್ಲವಷ್ಟೆ!

"ಅವಳಿಗೇನು ಅರ್ಥವಾಗತ್ತವ್ಮ, ಇಂಗ್ಲಿಷ್ ಸಿನೆಮಾ?"

"ನೀನು ಪಕ್ಕದಲ್ಲೇ ಇರ್ತಿಯಲ್ಲಾ ಅರ್ಥ ಹೇಳು?"

ಹೌದು ತಾಯಿಯ ಮಾತು ನಿಜ. ತಾನೂ ಸಿನೆಮಾ ನೋಡಿ ಬಹಳ ದಿನವಾಯಿತು. ಏಕೆ ಹೋಗಬಾರದು?

ಗೌರಿ ಮಂಚದ ಮೇಲೆ ಅಳುತ್ತ ಮಲಗಿರ ಬಹುದೆಂದು [illegible] ಒಳಗೆ ಬಂದ. ಗೌರಿ ಒಂದು ಪುಸ್ತಕವನ್ನು ಹಿಡಿದು ತನ್ಮಯತೆ ಯಿಂದ ಬರೆಯುತ್ತ ಕುಳಿತಿದ್ದಳು. ಸುರೇಶ ಹಿಂದಿನಿಂದ ಬಂದು ಕಿವಿಯಲ್ಲಿ "ಪುಟ್ಟಾ" ಎಂದಾಗ ಬೆಚ್ಚಿ ನೋಡಿದಳು. ಸುರೇಶ ಅವಳ ಕೈಲಿದ್ದ ಪುಸ್ತಕವನ್ನು ತೆಗೆದಿಟ್ಟು ಅನುಕಂಪದಿಂದ,

"ಬಾ ಸಿನೆಮಾಗೆ ಹೋಗೋಣ" ಎಂದ. ಗೌರಿಯ ಮನಸ್ಸು ಮುದುಡಿತ್ತು. ಅಷ್ಟು ಬೇಗ ಪ್ರಸನ್ನವಾಗಲು ಅದು ಒಪ್ಪಲಿಲ್ಲ.

"ಈಗ್ಯಾಕೆ ಬೇಡ ಬಿಡಿ. ಇನ್ನೆಂದಾದ್ರೂ ಹೋದರಾಯ್ತು" ಎಂದಳು. ಸುರೇಶ ನಕ್ಕು,

"ಹೂಂ...ಕೋಪ ಬೇರೆ ಬರತ್ತಾ ನಿಂಗೆ? ಎಲ್ಲಿ ಕೋಪದಲ್ಲಿ ಹೇಗೆ ಕಾಣ್ತೀಯ ನೋ—ಡೋಣ?" ಎಂದು ಅವಳ ಮುಖವನ್ನು ತನ್ನ ಕಡೆಗೆ ತಿರುಗಿಸಿಕೊಂಡು,

"ತುಂಬಾ ಮುದ್ದಾಗಿದೀಯ. ಕೋಪದಲ್ಲಿರೋ ಹೆಣ್ಣನ್ನು ಎಷ್ಟೊಂದು ಜನ ಕವಿಗಳು ವರ್ಣಿಸಿ ದಾರೆ ಗೊತ್ತಾ? ನನಗೂ ಬಂದಿದ್ದರೆ ಈಗ ನಿನ್ನ ಮೇಲೆ ಒಂದು ಪದ್ಯ ಬರೆದುಬಿಡುತ್ತಿದ್ದೆ. ಏಳು ರೆಡಿಯಾಗು. ಹೋಗೋಣ."

ಗೌರಿ ಎದ್ದು ಕನ್ನಡಿಯ ಮುಂದೆ ನಿಂತಳು. ಪ್ರಮೀಳೆಯ ನೆರವಿನಿಂದ ಸಡಿಲವಾಗಿ ಜಡೆ ಹೆಣೆಯುವುದನ್ನು ಕಲಿತಿದ್ದಳು. ಹಣೆಯ ಮಧ್ಯೆ ಒಂದು ಸಣ್ಣ ಚುಕ್ಕಿ. ಸುರೇಶನೇ ಬೀರುವಿನಿಂದ ಒಂದು 'ಟೆರಿಕಾಟನ್' ಸೀರೆ ಯನ್ನು ತೆಗೆದು 'ಇದನ್ನು ಉಟ್ಕೊಕೋ' ಎಂದ. ಸೀರೆ ಉಡುವುದರಲ್ಲೂ ಸ್ವಲ್ಪ ಸುಧಾರಣೆಯಾಗಿತ್ತು.

ಶೃಂಗರಿಸಿಕೊಂಡು ನಿಂತ ಗೌರಿಯನ್ನು ಸುರೇಶ ಎವೆಯಿಕ್ಕದೆ ನೋಡಿದ. ಗೌರಿ,

"ಏನು, ಯಾರೋ ಹೊಸಬರನ್ನು ನೋಡೋಹಾಗೆ ನೋಡ್ತೀರಲ್ಲಾ" ಎಂದಳು.

"ಹೌದು ಈಗ ನೀನು ಹೊಸ ಹುಡುಗಿಯೇ. ನೀನು ಪ್ರತಿಮಾ ಅಲ್ಲವೆ?"

"ಪ್ರತಿಮಾ ಅಂದರೆ ಅರ್ಥವೇನಾದರೂ ಇದೆಯೆ? ಅದು ಯಾವ ದೇವರ ಹೆಸರು?"

"ಪ್ರತಿಮಾ ಅಂದರೆ ವಿಗ್ರಹ. ನನ್ನ ಚಿನ್ನದ ಪುತ್ಥಳಿ ಅಂತ"

ಗೌರಿ ನ್ಯೂಸ್ ರೀಲನ್ನು ಬಹಳ ಉತ್ಸಾಹ ದಿಂದ ನೋಡಿದಳು. ಆದರೆ ಸಿನೆಮಾ ಪ್ರಾರಂಭ ವಾದ ಮೇಲೆ ಅವಳು ಕುಳಿತ ಕಡೆಯೇ ಒದ್ದಾ ಡುತ್ತಿದ್ದುದನ್ನು ನೋಡಿದ ಸುರೇಶ.

"ಯಾಕೆ ಪುಟ್ಟಾ ಸೀಟು ಸರಿಯಾಗಿಲ್ವೆ?" ಎಂದ.

"ಸರಿಯಾಗಿದೆ"

ಸುರೇಶ ಕತ್ತಲೆಯಲ್ಲೇ ಅವಳನ್ನು ಬಳಸಿ ಹಿಡಿದು,

"ನೋಡಿದೆಯಾ ಹೇಗಿದೆ ಸಿನೆಮಾ?"

"ಥೂ ಅಸಹ್ಯ. ನನಗೆ ಇದೆಲ್ಲ ನೋಡೋಕೆ ನಾಚಿಕೆ ಆಗತ್ತೆ."

ಸುರೇಶ ಮನಃಪೂರ್ವಕವಾಗಿ ನಕ್ಕ.

"ನೀವು ಇಂಥಾದ್ದೆಲ್ಲ ತುಂಬಾ ನೋಡ್ತೀರಾ?"

"ಓಹೋ ಬೇಕಾದಷ್ಟು ನೋಡಿದೀನಿ"

"ಮದುವೆಗೆ ಮುಂಚೇನೂ ನೋಡಿದ್ರಾ!"

"ಹೂಂ"

"ಛೆ ಪ್ರಮೀಳನಂಥಾ ಹುಡುಗೀರೆಲ್ಲ ಬಂದಿದಾರೆ. ಅವರೆಲ್ಲ ನೋಡಬಹುದೇ ಇದನ್ನ!"

"ನೋಡದೆ ಏನು. ಎಲ್ಲಾ ನಿನ್ನ ಹಾಗೇ ಅಂತಾ ತಿಳಕೊಂಡೆಯೇನು? ಮದುವೆಗೆ ಮೊದಲೇ ಎಲ್ಲಾ ಓದಿಕೊಂಡಿರುತ್ತಾರೆ."

"ಓದೋಕ್ಕೆ ಇದೆಲ್ಲಾ ಪುಸ್ತಕದಲ್ಲಿ ಬರೆದಿರತ್ತಾ?"

"ಓಹೋ. ನಿನಗೂ ಬೇಕಾದರೆ ಒಂದು ಕೊಡ್ತೀನಿ. ಓದ್ತೀಯಾ?"

"ಬೇಡಪ್ಪ"

ಚಿತ್ರ ಸಾಗಿತು. ಗೌರಿಗೆ, ಚಿತ್ರ ಮುಗಿದರೆ ಸಾಕೆನಿಸಿತ್ತು. ಸುರೇಶನೇನೋ ಮನೆಗೆ ಬರುವ ವೇಳೆಗೆ ಉಲ್ಲಾಸವಾಗಿದ್ದ.

ವಿಶಾಲಾಕ್ಷಮ್ಮ ಸಂತೋಷದ ಸುದ್ದಿಯನ್ನು ತಿಳಿಸುವವರಂತೆ,

"ನಾಳೆ ರಮೇಶ್, ಚಂದ್ರ ಎಲ್ಲಾ ಬರ್ತಾರಂತೆ" ಎಂದರು.

"ವಯರ್ ಬಂತೇನಮ್ಮ?"

"ಇಲ್ಲ ಫೋನ್ ಮಾಡಿದ್ದರು ಮದ್ರಾಸಿನಿಂದ."

ಗೌರಿಗೆ ಅದು ಹರ್ಷದ ಸುದ್ದಿಯಾಗಿತ್ತು.

We Wish You All a Happy Deepavali

Sri Chamundeswari Engineering College, Bellary

Registered by the Government

Offers the following Courses of Study;

a) **A. M. I. I. (India),** Day and Evening Sessions

b) **DRAUGHTSMAN'S COURSE (Civil)**
Examination Conducted by the Govt. of Andhra Pradesh

c) **AGRICULTURE COURSE**
Examination Conducted by:-
i) The Government of Andhra-Pradesh
&
ii) The Madras Government.

For further details apply to :—

Principal:
K. NAGABHUSHANAM, B. E.
Phone : 544

Manager:
B. DURGAPPA
Phone : 507

ಚಂದ್ರಳಿಗೆ ಮೂರು ವರ್ಷದ ಮಗುವೊಂದಿರು ವುದಾಗಿ ಕೇಳಿದ್ದಳು. ಅವಳಿಗೆ ಮಕ್ಕಳೆಂದರೆ ಬಲು ಅಕ್ಕರೆ. ತಂಗಿ ತಮ್ಮಂದಿರೊಡನೆ ಬೆಳೆದಿದ್ದ ಅವಳಿಗೆ ಇಲ್ಲಿ ತುಂಬ ಬೇಸರವಾಗುತ್ತಿತ್ತು.

-೯-

ಚಂದ್ರಕಲಾ, ರಮೇಶ್, ಅವರ ಮುದ್ದು ಮಗು ಆರತಿ ಅಲ್ಲದೆ ಅವರೊಡನೆ ಒಬ್ಬಳು ದಾದಿ ಸಹ ಬಂದಳು. ಚಂದ್ರಕಲಾ ಅತ್ಯಾಧುನಿಕ ಉಡುಗೆ ತೊಡುಗೆಗಳಿಂದ ಶೋಭಿಸುತ್ತಿದ್ದಳು. ರಮೇಶ್ ಅವಳ ನೆರಳಿನಂತೆ ಓಡಾಡುತ್ತಿದ್ದ. ಮಗು ಆರತಿ ಸದಾ ದಾದಿಯೊಡನೆಯೇ ಇರುತ್ತಿದ್ದಳು. ಗೌರಿಯನ್ನು ಚಂದ್ರ ಮಾತಾಡಿಸುವುದಿರಲಿ, ಸರಿಯಾಗಿ ಕಣ್ಣೆತ್ತಿ ನೋಡಲೂ ಇಲ್ಲ. ಏನೋ ಒಂದು ಬಗೆಯ ತಾತ್ಸಾರದಿಂದ ನಡೆಯುತ್ತಿದ್ದಳು.

ಆರತಿಯನ್ನು ಎತ್ತಿಕೊಂಡು ದಾದಿ ತೋಟದಲ್ಲಿ ಆಡಿಸುತ್ತಿದ್ದಳು. ಗೌರಿ, ಆ ಮುದ್ದು ಬೊಂಬೆಯಂತಹ ಮಗುವನ್ನು ಎತ್ತಿಕೊಳ್ಳುವ ಆಸೆಯನ್ನು ತಡೆಯಲಾರದೆ ಮಗುವಿನ ಹತ್ತಿರ ಹೋದಳು. ಗೌರಿ ಸ್ನೇಹದ ನಗೆ ಬೀರಿ, "ಬಾ" ಎಂದು ಕೈ ನೀಡಿದೊಡನೆ ಬಂದಳು ಆರತಿ. ಗೌರಿ ಆನಂದದಿಂದ ಮಗುವನ್ನು ಮುದ್ದಿಸಿ ತನ್ನ ರೂಮಿಗೆ ಕರೆದುಕೊಂಡು ಬಂದಳು. ಆರತಿ ತನ್ನ ಮುದ್ದು ಮಾತುಗಳಿಂದ, ರೂಮಿನಲ್ಲಿದ್ದ ಸಾಮಾನುಗಳ ಬಗ್ಗೆ ಕೇಳಿದ ಪ್ರಶ್ನೆಗಳಿಗೆಲ್ಲ ಗೌರಿ, ಅವಳ ಭಾಷೆಯಲ್ಲೇ ಉತ್ತರ ಕೊಡುತ್ತಿದ್ದಳು. ಬೆನ್ನ ಮೇಲೆ ಮಗುವನ್ನು ಕೂರಿಸಿಕೊಂಡು, "ಕೂಸು ಮರಿ" ಮಾಡಿದಳು. ಆರತಿ ಉತ್ಸಾಹದಿಂದ ಗೌರಿಯ ಜಡೆಯನ್ನು ಹಿಡಿದು 'ಹೈ ಹೈ' ಎಂದು ಕುದುರೆಯಾಟವಾಡಿದಳು. ಗೌರಿಗೆ ಹೊತ್ತು ಹೋದುದೇ ತಿಳಿಯಲಿಲ್ಲ. ಮಗುವಿನೊಡನೆ ತಾನೂ ಮಗುವಾಗಿ ಆಡಿದಳು. ಆರತಿ, ಗೌರಿ ಕೊಟ್ಟ ಪೆಪ್ಪರಮೆಂಟನ್ನು ಚೀಪುತ್ತ, "ಮಮ್ಮಿ ಮಮ್ಮಿ" ಎಂದು ತಾಯಿಯ ಬಳಿಗೆ ಓಡಿ ಬಂದಳು. ಚಂದ್ರಾ ದೂರದಿಂದಲೇ

"ಆಯಾ ಹತ್ತಿರ ಹೋಗು ಬೇಬಿ" ಎಂದಳು.

ಆರತಿ, "ಊ ಹೂಂ..." ಎಂದು ಕೆನ್ನೆ ಉಬ್ಬಿಸಿಕೊಂಡು ತಾಯಿಯ ಬಳಿಗೇ ಬಂದಳು.

ಚಂದ್ರ, "ಬೇಡ ಬೇಬಿ, ನನ್ನ ಸೀರೆ ಇಸ್ತ್ರಿ ಎಲ್ಲಾ ಕೆಟ್ಟು ಹೋಗುತ್ತೆ. ಹೋಗು ಹೊರಗೆ" ಎಂದಳು. ಆರತಿ ಹಟದಿಂದ ಬಂದು ತಾಯಿಯ ತೊಡೆ ಏರಿದಳು. ಚಂದ್ರ ಸಿಟ್ಟಿನಿಂದ,

"ಹೇಳಿದ ಮಾತು ಕೇಳ್ತಿಯೋ ಇಲ್ಲವೋ ಬೇಬಿ" ಎನ್ನುವಾಗ ಅವಳ ಬಾಯಿಯೊಳಗಿದ್ದ ಪೆಪ್ಪರಮಿಂಟು ಕಣ್ಣಿಗೆ ಬಿತ್ತು. ಅವಳ ಕೋಪ ಮತ್ತೂ ಹೆಚ್ಚಾಯಿತು. "ಎಲ್ಲಿತ್ತು ಅದು?" ಎಂದು ರೇಗಿದಳು.

"ಅಂ... ಅವರು ಕೊಟ್ರು" ಎಂದು ಆರತಿ ಗೌರಿಯ ಕಡೆ ಕೈ ತೋರಿಸಿದಳು.

"ಛಿ ಛಿ ಇದನ್ನೆಲ್ಲ ಯಾಕೆ ತಿಂತೀಯಾ? ಇನ್ನೇನು ನೀನು ಹಾಲು ಕುಡಿಯುವ ಹೊತ್ತು" ಎಂದು ಹೇಳಿ ಮಗು ಅಳುತ್ತಿದ್ದರೂ ಬಿಡದೆ ಬಾಯೊಳಗಿದ್ದುದನ್ನು ತೆಗೆದು ಆಚೆ ಬಿಸಾಕಿದಳು. ಮತ್ತು ಅಲ್ಲೇ ನಿಂತಿದ್ದ ಗೌರಿಗೆ,

"ಹಾಗೆಲ್ಲ ಏನೇನೋ ಕೊಡಬೇಡ. ನಾವು ಅವಳಿಗೆ ಘಂಟೆ ಪ್ರಕಾರ ಆಹಾರ ಕೊಡ್ತೇವೆ. ಇದೆಲ್ಲ ಅವಳಿಗೆ ಮೈಗಾಗೋಲ್ಲ" ಎಂದು ಹೇಳಿ ಆಯಾಳನ್ನು ಕರೆದು ಮಗುವನ್ನು ಗೌರಿಯ ಕೈಗೇಕೆ ಕೊಟ್ಟೆ ಎಂದು ಆಕ್ಷೇಪಿಸಿದಳು. ಗೌರಿ ಮುಖ ಚಿಕ್ಕದು ಮಾಡಿಕೊಂಡು, "ಅವಳದ್ದೇನೂ ತಪ್ಪಿಲ್ಲ. ನಾನೇ ಕರೆದೆ ಮಗೂನ. ತಪ್ಪಾಯ್ತು ಬಿಡಿ" ಎಂದಳು. ಅಳುತ್ತಿದ್ದ ಆರತಿಯನ್ನು ಎತ್ತಿ ಮುದ್ದು ಮಾಡಿ ಎದೆಗವಚಿಕೊಂಡು ಸಮಾಧಾನ ಪಡಿಸಬೇಕೆನ್ನಿಸಿತು. ಆದರೆ ಚಂದ್ರ ಅವಳನ್ನು ದಾದಿಯೊಡನೆ ಹೊರಗೆ ಕಳಿಸಿದಳು.

" ಹಾಗೆಲ್ಲ ಏನೇನೋ ಕೊಡಬೇಡ. ನಾವು ಅವಳಿಗೆ ಘಂಟೆ ಪ್ರಕಾರ ಆಹಾರ ಕೊಡ್ತೇವೆ "

ಮರುದಿನ ಚಂದ್ರ, ರಮೇಶ್, ಪ್ರಮೀಳ ಮೂರು ಚಲನಚಿತ್ರ ನೋಡುವ ಕಾರ್ಯಕ್ರಮ ಇಟ್ಟುಕೊಂಡಿದ್ದರು.

ದಾದಿ, ಊರು ನೋಡಿಕೊಂಡು ಬರುತ್ತೇನೆಂದು ಹೋದವಳು ಎಷ್ಟು ಹೊತ್ತಾದರೂ ಬಂದಿರಲಿಲ್ಲ. ಚಂದ್ರ ಒಂದೇ ಸಮನೆ "ಇನ್ನೂ ಈ ಆಯಾ ಏಕೆ ಬರಲಿಲ್ಲ." ಎಂದು ಒದ್ದಾಡುತ್ತಿದ್ದಳು. ಎರಡೂವರೆ ಘಂಟೆಯಾದರೂ ಅವಳ ಸುಳಿವಿರದ್ದನ್ನು ಕಂಡು,

"ಹಾಳು ಆಯಾ ಕರೆದುಕೊಂಡು ಬಂದದ್ದು ದಂಡವಾಯಿತು. ಕತ್ತೆ ಎಲ್ಲಿ ತಿರುಗಲು ಹೋದಳೋ. ಇವತ್ತಿನ ಪ್ರೋಗ್ರಾಮ್ ಕ್ಯಾನ್ಸಲ್ ಆದ ಹಾಗೆ ಅಂತ ಕಾಣುತ್ತೆ" ಎಂದಳು.

ವಿಶಾಲಾಕ್ಷಮ್ಮ "ಇವತ್ತು ನಮ್ಮ ವೆಲ್ ಫೇರ್ ಕೌನ್ಸಿಲಿನ ಮೀಟಿಂಗ್ ಇದೆ. ಇಲ್ಲದೆ ಇದ್ರೆ ನಾನೇ ನೋಡಿಕೊಳ್ತಾ ಇದ್ದೆ" ಎಂದರು.

ಘಂಟೆ ಮೂರಾಗುತ್ತ ಬಂದಿತ್ತು. ಪ್ರಮೀಳ,

"ಬೇಬೀನೂ ಕರಕೊಂಡೇ ಹೋಗೋಣವಾ?" ಎಂದಳು.

ಚಂದ್ರ ತಕ್ಷಣ. "ಇಂಪಾಸಿಬಲ್. ಅದು ಮಾತ್ರ ಸಾಧ್ಯವಿಲ್ಲ. ಅವಳನ್ನು ಮೂರು ಘಂಟೆ ಕಾಲ ಟಾಲರೇಟ್ ಮಾಡೋದು ನನಗಂತೂ ಸಾಧ್ಯವಿಲ್ಲಪ್ಪ" ಎಂದಳು.

ರಮೇಶ್ "ಮೊದಲೇ ರಿಸರ್ವ್ ಮಾಡಿಸದೆ ದ್ದಿದ್ದರೆ ಸಂಜೆಯ ಷೋಗಾದರೂ ಹೋಗಬಹುದಾಗಿತ್ತು" ಎಂದ. ಇವರ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಿದ್ದ ಗೌರಿ ಹಿಂದಿನ ದಿವಸದ ಪ್ರಕರಣವನ್ನು ಮರೆತು, "ಮಗೂನ ಬೇಕಾದರೆ ನಾನು ನೋಡಿಕೋತೀನಿ" ಎಂದಳು. ಅಂದಿನ ಕಾರ್ಯಕ್ರಮವನ್ನೇ ಎಲ್ಲಿ ರದ್ದುಗೊಳಿಸಬೇಕಾಗುವದೋ ಎಂದು ಹೆದರಿದ್ದ ಚಂದ್ರ ಗೌರಿಯ ಮಾತಿಗೆ ತಕ್ಷಣ ಒಪ್ಪಿದಳು.

"ರೆಫ್ರಿಜರೇಟರಿನಲ್ಲಿ ಸೇಬಿನ ಹಣ್ಣು ಹೆಚ್ಚಿ ಇಟ್ಟಿದೀನಿ. ನಾಲ್ಕು ಘಂಟೆಗೆ ಸರಿಯಾಗಿ ಕೊಡು. ಐದು ಘಂಟೆಗೆ ಒಂದು ಲೋಟ ಹಾಲು. ಇನ್ನೇನೂ ಬೇಡ" ಎಂದಳು. ಗೌರಿ ಸಮ್ಮತಿ ಸೂಚಿಸಿ ತಲೆ ಆಡಿಸಿದಳು.

ಗೌರಿಯ ಒಡನಾಟ ಮಗುವಿಗೆ ಬಹು ಪ್ರಿಯವಾಯಿತು. ಮೂರು ಘಂಟೆ ಮೂರು ನಿಮಿಷದಂತೆ ಕಳೆಯಿತು. ಸುರೇಶ್ ಮನೆಗೆ ಬಂದಾಗ ರೂಮಿನ ತುಂಬ ಸಾಮಾನು ಹರಡಿತ್ತು. ಗೌರಿ-ಆರತಿ ಮನೆ ಆಟ ಆಡುತ್ತಿದ್ದರು. ಸುರೇಶ್ ನಗುತ್ತ,

" ರೂಮಿನಲ್ಲಿರೋದು ಒಂದೇ ಮಗೂನೋ ಎರಡೋ ?" ಎಂದ. ಗೌರಿ ನಕ್ಕು ಆರತಿಯನ್ನು ಮುತ್ತಿಟ್ಟು, "ಇದೊಂದೇ" ಎಂದಳು. ಸುರೇಶ, "ಜೊತೆಯಲ್ಲಿರುವುದು ಸ್ವಲ್ಪ ದೊಡ್ಡ ಮಗು ಅಷ್ಟೆ" ಎಂದ

ಗೌರಿ, "ನನ್ನ ವಯಸ್ಸಿಗೆ ನಮ್ಮ ತಾಯಿಗೆ ಮಕ್ಕಳು ಇದ್ದುವಂತೆ" ಎಂದಳು.

ಅಂದಿನಿಂದ ಆರತಿ ಗೌರಿಯನ್ನೇ ಅಂಟಿಕೊಂಡಿದ್ದಳು. ಸ್ನಾನ ಮಾಡಿಸಬೇಕಾದರೂ ಗೌರಿ, ಊಟ ಮಾಡುವಾಗಲೂ ಗೌರಿ ಮಲಗುವಾಗಲೂ ಗೌರಿ. ಅವಳಿಗೂ ಬೇರೆ ಕೆಲಸವಿರದುದರಿಂದ ಅತ್ಯಂತ ಆನಂದದಿಂದ ಆರತಿಯ ಕೆಲಸಗಳನ್ನೆಲ್ಲ ಮಾಡುತ್ತಿದ್ದಳು. ಚಂದ್ರಳಿಗೆ ಇದರಿಂದ ಅನುಕೂಲವಾಗಿದ್ದುದರಿಂದ ಈಗ ಯಾವ ಮಾತೂ ಆಡುತ್ತಿರಲಿಲ್ಲ. ಈಗಂತೂ ಆರತಿ ಆಯಾಳ ಬಳಿ ಸುಳಿಯುತ್ತಲೂ ಇರಲಿಲ್ಲ.

ರಮೇಶನಿಗೆ ಹದಿನೈದು ದಿನಗಳ ರಜೆ ಮುಗಿದು ಅವರೆಲ್ಲ ಊರಿಗೆ ವಾಪಸು ಹೊರಟರು. ಆರತಿ, ಗೌರಿಯನ್ನು ಬಿಟ್ಟು ಹೋಗಲಾರದೆ ಅತ್ತು ರಂಪು ಮಾಡಿದಳು. ಗೌರಿ ಪೇಟೆಯಿಂದ ತಾನೇ ಆರಿಸಿ ತಂದಿದ್ದ ಮೂವತ್ತು ರೂಪಾಯಿನ ಬೊಂಬೆಯನ್ನು ಆರತಿಯ ಕೈಗೆ ಕೊಟ್ಟು,

"ಈಗ ನೀನು ಈ ಬೊಂಬೆ ಕರಕೊಂಡು ಹೋಗಿರು. ನಾಳೆ ರೈಲಲ್ಲಿ ನಾನೂ ನಿಮ್ಮೂರಿಗೆ ಬರ್ತೀನೆ" ಎಂದು ಸಮಾಧಾನ ಮಾಡಿದಳು. ಆರತಿಯ ಗಮನ-ಕೆಂಚು ಕೂದಲು, ನೀಲಿ ಕಣ್ಣುಗಳಿದ್ದ ಆ ಬೊಂಬೆಯ ಕಡೆ ಹೋಯಿತು. ಕಣ್ಣಿನಲ್ಲಿ ನೀರಿದ್ದಂತೆಯೇ ಎಲ್ಲರಿಗೂ 'ಟಾ ಟಾ' ಮಾಡಿದಳು.

ಗೌರಿಗೆ ಆರತಿ ಹೊರಟು ಹೋದ ಮೇಲೆ ಹೊತ್ತೇ ಹೋಗದಾಯಿತು. ಕನಸಿನಲ್ಲೂ,

"ಬಿದ್ದೀಯಮ್ಮಾ ಜೋಪಾನ" "ಆರತೀ ಆರತೀ" ಎಂದು ಕನವರಿಸುತ್ತಿದ್ದಳು.

ಸುರೇಶ, "ಅಂತೂ ಆರತೀನ ತುಂಬಾ ಹಚ್ಚಿಕೊಂಡು ಬಿಟ್ಟಿದೀಯ" ಎಂದ.

"ತುಂಬಾ ಮುದ್ದು ಮಗು"

"ಮಕ್ಕಳೆಲ್ಲ ಹಾಗೇ"

"ಹೌದು ಮಕ್ಕಳೆಲ್ಲ ಬಾಲಕೃಷ್ಣನ ಹಾಗೇ. ನನಗಂತೂ ಮಕ್ಕಳೆಂದರೆ ತುಂಬಾ ಇಷ್ಟ. ಆರತೀನ ಇಲ್ಲೇ ಇಟ್ಟುಕೊಳ್ಳಬಹುದಾಗಿತ್ತು. ಹೇಗೂ ಅವರಮ್ಮನಿಗೆ ಆ ಮಗು ಹತ್ತಿರ ಬಂದರೆ ಬೇಜಾರು."

"ಅದು ಹೇಗೆ ಆಗುತ್ತೆ. ಒಂದೊಂದು ಸಲ ಹೀಗೆ ಕಟ್ಟಿಕೊಂಡು ಮುದ್ದಾಡ್ತಾ ಇದ್ದಳು. ಇರೋದೊಂದು ಮಗು, ಅವರೆಲ್ಲಿ ಬಿಟ್ಟಿರ್ತಾರೆ?"

"ಹೌದು ಎಷ್ಟಾದರೂ ಇನ್ನೊಬ್ಬರ ಮಗು. ಇಟ್ಟುಕೊಂಡರೆ ನಮ್ಮದಾಗುತ್ಯೆ?"

ಆ ಮಾತಿನಲ್ಲಿ ಗೌರಿ ತನ್ನದೇ ಆದ ಒಂದು ಮಗು ಬೇಕೆಂಬ ಬಯಕೆಯನ್ನು ಅವನ ಮುಂದಿಟ್ಟಿದ್ದಳು.

ಸುರೇಶ, "ಇಷ್ಟು ಬೇಗ ನಮಗೆ ಮಕ್ಕಳ ಕಾಟ ಬೇಡ. ನಿನ್ನ ವಿದ್ಯಾಭ್ಯಾಸ ಮುಗೀಲಿ" ಎಂದ. ಗೌರಿ ಬೇಸರದಿಂದ ಬೇರೆ ಕಡೆ ತಿರುಗಿದಳು. ಅವಳಿಗಂತೂ ಓದು-ಬರಹದಲ್ಲಿ ಏನೂ ಆಸಕ್ತಿಯಿರಲಿಲ್ಲ. ಸುರೇಶನ ಬಲವಂತಕ್ಕೆ ಬಿಡಲಾರದೆ ಒಮ್ಮೊಮ್ಮೆ ಪುಸ್ತಕ ಹಿಡಿಯುತ್ತಿದ್ದಳು.

-೧೦-

ಪ್ರಮೀಳೆಯ ಗೆಳತಿಯರ ಪೈಕಿ ಇಂದಿರೆಯೊಬ್ಬಳೇ ಒಂದು ರೀತಿ. ಅವಳು ಬಂದಾಗಲೆಲ್ಲ ಗೌರಿಯನ್ನೂ ಮಾತಾಡಿಸಿ ಹೋಗುತ್ತಿದ್ದಳು. ಹೊರಡುವ ಮೊದಲು,

"ಹೇಗೆ ಸಾಗಿದೆ ವಿದ್ಯಾಭ್ಯಾಸ?" ಎಂದು ಕೇಳುವುದು ಅವಳ ಪದ್ಧತಿಯಾಗಿತ್ತು.

ಗೌರಿ, "ಇದೆ ಸುಮಾರಾಗಿ" ಎನ್ನುತ್ತಿದ್ದಳು.

ಆ ಸಲ ಬಂದಾಗ ಅವಳ ಕೈಯ್ಯಲ್ಲಿ ಎರಡು ಕನ್ನಡ ಕತೆ ಪುಸ್ತಕಗಳಿದ್ದವು. ಅವಳಾಗಿಯೇ "ಬೇಕಾದರೆ ನಿನ್ನ ಅತ್ತಿಗೆಗೆ ಕೊಡು" ಎಂದು ಹೇಳಿದ್ದರಿಂದ, ಪ್ರಮೀಳ ಅವನ್ನು ಗೌರಿಗೆ ಕೊಟ್ಟಳು. ಒಂದು ಕಾದಂಬರಿ 'ಅಪಸ್ವರ' ಇನ್ನೊಂದು ಕೊಡಗಿನ ಗೌರಮ್ಮನವರ ಸಣ್ಣ ಕತೆಗಳು. ಈ ಸರಸ ಸಾಹಿತ್ಯ ಗೌರಿಗೆ ಬಹುವಾಗಿ ಹಿಡಿಸಿತು.

ಗೌರಿ ಮುಖ ಚಿಕ್ಕದು ಮಾಡಿಕೊಂಡಳು.

ಸುರೇಶ ಮಲಗಿದ ಮೇಲೂ ಓದುತ್ತಿದ್ದಳು. ಸುರೇಶ ಹುಬ್ಬೇರಿಸಿ, "ಇದೇನಾಶ್ಚರ್ಯ!" ಎಂದ.

"ಕತೆ ಪುಸ್ತಕ ತುಂಬ ಚೆನ್ನಾಗಿದೆ"

ಸುರೇಶ ಅವಳಿಗೆ ಹೆಚ್ಚು ಹೆಚ್ಚಾಗಿ ಕತೆ ಕಾದಂಬರಿಗಳನ್ನೊದಗಿಸಲು ನಿಶ್ಚಯಿಸಿದ. ಒಮ್ಮೆ ಓದಿನಲ್ಲಿ ಆಸಕ್ತಿ ಹುಟ್ಟಿದರೆ ಮುಂದೆ ತನ್ನ ಕೆಲಸ ಸುಲಭವಾಗಬಹುದೆಂದು ಆಶಿಸಿದ.

ಲೈಬ್ರೆರಿಯಿಂದ ಪುಸ್ತಕಗಳು ಬರತೊಡಗಿದುವು. ಖಾರವಾದ ತಿಂಡಿಯನ್ನು ತಿನ್ನಲಾರದೆ ಗೋಳಾಡುವ ಮಗುವಿನ ಮುಂದೆ ಸಿಹಿತಿಂಡಿಯ ರಾಶಿಯೇ ಬಿದ್ದಂತಾಗಿತ್ತು, ಗೌರಿಯ ಸ್ಥಿತಿ. ಕಾದಂಬರಿಗಳನ್ನು ಓದುತ್ತ ತಾನೇ ಅವುಗಳ ನಾಯಕಿಯಾಗಿ ಕಷ್ಟ ಸುಖಗಳನ್ನು ಅನುಭವಿಸುತ್ತಿದ್ದಳು. 'ಮಂಗಳಸೂತ್ರ'ದ ರತ್ನಳಾಗಿ ಕಣ್ಣೀರು ಸುರಿಸಿದಳು, 'ವಸಂತಗಾನ'ದ ಸರಳೆಯಾಗಿ ನಕ್ಕು ನಲಿದಳು. 'ಮರಳಿ ಮಣ್ಣಿಗೆ' 'ಹೇಮಾವತಿ'-ಹೀಗೆ ಓದುವುದರಲ್ಲಿ ಹೊತ್ತು ಹೋಗುತ್ತಿದ್ದುದಲ್ಲದೆ ನಾನಾ ಬಗೆಯ ವ್ಯಕ್ತಿಗಳ ಜೀವನದ ರೀತಿ ನೀತಿಗಳು ಸ್ವಲ್ಪಮಟ್ಟಿಗೆ ತಿಳಿಯುತ್ತಿತ್ತು. ತನಗೆ ಅರ್ಥವಾಗದುದನ್ನು ಸುರೇಶನನ್ನು ಕೇಳಿ ತಿಳಿಯುತ್ತಿದ್ದಳು. ಇದರಿಂದ ಅವಳ ಒಳಪ್ರಪಂಚವೂ ವಿಶಾಲವಾಗಿ ಕೇವಲ ತಾನು, ತನ್ನ ಮನೆ ತನ್ನ ಹಳ್ಳಿಗಳ ಬಗೆಗಲ್ಲದೆ ಬೇರೆಯವರ ಬಗೆಗೂ ಕುರಿತು ವಿಚಾರಿಸುವ ಶಕ್ತಿ ಬೆಳೆಯಿತು.

ಇಂದಿರ, ಕಾಲೇಜು ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದಳು. ಅದರ ವಾರ್ಷಿಕೋತ್ಸವಕ್ಕೆ ಪ್ರಮೀಳೆಯೊಡನೆ ಬರಬೇಕೆಂದು ಗೌರಿಗೂ ಹೇಳಿದ್ದಳು. ಪ್ರಮೀಳೆಗೇನೂ ಅಷ್ಟು ಉತ್ಸಾಹವಿರದಿದ್ದರೂ ಆಪ್ತ ಗೆಳತಿಯ ಮನಸ್ಸನ್ನು ನೋಯಿಸಲಾರದೆ ಹೋಗಲು ಒಪ್ಪಿದ್ದಳು. ಪ್ರಮೀಳ ತಾನಾಗಿ ಕರೆದರೆ ಮಾತ್ರ ಹೋಗುವುದೆಂದು ಗೌರಿಯು ತನ್ನ ಆಸೆಯನ್ನು ಒಳಗೆ ಒತ್ತಿಹಿಡಿದಿದ್ದಳು. ಪ್ರಮೀಳ ತನ್ನ ಶೃಂಗಾರವನ್ನು ಮುಗಿಸಿ ಗೌರಿಗೂ ಹೀಗೆ 'ಡ್ರೆಸ್' ಮಾಡಿಕೊಳ್ಳಬೇಕೆಂದು ಹೇಳಿದಳು. ಕಾಲೇಜಿನಲ್ಲಿ ಯಾರಿಗಾದರೂ ಪರಿಚಯ ಮಾಡಿಕೊಟ್ಟಾಗ ಹೀಗೆ ವರ್ತಿಸಬೇಕೆಂದು ತಿಳಿಸಿದಳು.

ಗೌರಿಗೆ ಅಂದಿನ ಕಾರ್ಯಕ್ರಮ ಬಹುವಾಗಿ ಹಿಡಿಸಿತು. 'ವಾರ್ಷಿಕೋತ್ಸವ' ನಾಟಕ, ಅಲ್ಲದೆ ಇಂದಿರೆಯೇ ಹಾಡಿದ ಕೆಲವು ಕನ್ನಡ ಗೀತೆಗಳು ಅವಳಿಗೆ ಬಹಳ ಮೆಚ್ಚಿಗೆಯಾದುವು. 'ನವಿಲೂರಿನೊಳಗೆಲ್ಲ ನೀನೇ ಬಲು ಚೆಲುವೆ' ಮತ್ತು 'ನಮ್ಮೂರು ಚಂದವೋ ನಿಮ್ಮೂರು ಚಂದವೋ' ಕೇಳಿದಾಗ ಅದನ್ನು ತಾನೂ ಕಲಿಯಬೇಕೆನಿಸಿತು.

ಮತ್ತೊಮ್ಮೆ, ಇಂದಿರ ಮನೆಗೆ ಬಂದಾಗ ಅದನ್ನು ಹಾಡಿಸಿ ಕೇಳಿದಳು.

"ಈ ಹಾಡೆಲ್ಲ ನಿನಗೆ ಯಾರು ಹೇಳಿಕೊಟ್ಟರು?"

"ಅದೆಲ್ಲ ಪದ್ಯಗಳು ನಾನೇ ರಾಗ ಹಾಕಿ ಹಾಡಿದ." ಎಂದಾಗ, ಗೌರಿ "ಆ ಪದ್ಯ ಇರೋ

"ಗೌರೀ ಈ ತರಹ ಇಂಗ್ಲೀಷ್‌ನಲ್ಲಿ ತುಂಬ ಒಳ್ಳೊಳ್ಳೆಯ ಪದ್ಯಗಳಿವೆ-
ನೀನು ಬೇಗ ಆ ಭಾಷೆ ಕಲಿತರೆ ಅದನ್ನೂ ಹೀಗೆ ಓದಿಕೊಳ್ಳಬಹುದು."

ಪುಸ್ತಕ ನನಗೂ ತಂದು ಕೊಡ್ತೀರಾ?" ಎಂದು ಕೇಳಿದಳು. ಕೆಲವೇ ದಿನಗಳಲ್ಲಿ ಇಂದಿರ 'ಮೈಸೂರು ಮಲ್ಲಿಗೆ'ಯ ಹೊಸ ಪ್ರತಿಯೊಂದನ್ನು ಕೊಟ್ಟಳು. ಅದರ ಮೇಲೆ 'ಒಲವಿನ ಕಾಣಿಕೆ ಪ್ರತಿಮಾಗೆ' ಎಂದು ಬರೆದಿತ್ತು.

ಗೌರಿ ಅದರ ಒಂದೊಂದು ಪದ್ಯವನ್ನೂ ನಾಲ್ಕಾರು ಸಲ ಓದಿದಳು. ತಾನೆ ಆ ಕಾವ್ಯ ಲೋಕದ ನಾಯಕಿಯಾಗಿ ಪ್ರೇಮರಸಾನುಭವದಿಂದ ಪುಳಕಿತಳಾದಳು. ಸುರೇಶ ಕೆಲವು ಪದ್ಯಗಳನ್ನು ವಿವರಿಸಿ ಹೇಳುತ್ತ, ಮತ್ತೆ ಕೆಲವನ್ನು ಅವಳೊಂದಿಗೆ ಅಭಿನಯಿಸುತ್ತ ಆನಂದಿಸಿದ. ಅದೇ ಸಂದರ್ಭದಲ್ಲಿ,

"ಗೌರೀ, ಈ ತರಹ ಇಂಗ್ಲಿಷ್‌ನಲ್ಲೂ ತುಂಬ ಒಳ್ಳೊಳ್ಳೆಯ ಪದ್ಯಗಳಿವೆ. ನೀನು ಬೇಗ ಆ ಭಾಷೆ ಕಲಿತರೆ ಅದನ್ನೂ ಹೀಗೆ ಓದಿಕೊಳ್ಳ-ಬಹುದು" ಎಂದ.

"ಸಂಸ್ಕೃತದಲ್ಲೂ ಬಹಳ ಇದೆಯಂತೆ. ಇಂದಿರ ಹೇಳ್ತಾಳೆ".

"ಹೌದು ಆದರೆ ಸಂಸ್ಕೃತ ಕಲಿಯಲು ನಿನಗೆ ತುಂಬ ಕಷ್ಟ."

"ಅಯ್ಯೋ ಬಿಡಿ. ಮೊದಲು ಕನ್ನಡದಲ್ಲಿ ಕೊಡೆಲ್ಲ ಓದಿ ಮುಗಿಯಲಿ. ಆ ಮೇಲೆ ನೋಡೋಣ."

"ಹಾಗೆ ಓದಿ ಮುಗಿಸಲು ಸಾಧ್ಯವೇ ಇಲ್ಲ ಹುಚ್ಚಿ. ಎರಡೂ ಒಟ್ಟೊಟ್ಟಿಗೆ ಅಭ್ಯಾಸ ಮಾಡು"

"ನಿಮಗೇಕೆ ಇಂಗ್ಲಿಷ್‌ನೆಂದರೆ ಅಷ್ಟು ಇಷ್ಟ?"

"ಕಲಿತ ಮೇಲೆ ನಿನಗೇ ತಿಳಿಯುತ್ತೆ. ಮೊದಲು ನಿನಗೆ ಕನ್ನಡವೂ ಬರದೆ ಇದ್ದಾಗ ಅದರ ಬೆಲೆ ಏನು ಗೊತ್ತಿತ್ತು? ಅದೂ ಅಲ್ಲದೆ ನನ್ನ ಸ್ನೇಹಿತರು ಕೆಲವರು ಮತ್ತು ಅವರ ಮನೆಯವರಿಗೆ ಕನ್ನಡ ಬರೋದಿಲ್ಲ. ನಿನ್ನ, ಅವರ ಮನೇಗೆಲ್ಲ ಕರೆದುಕೊಂಡು ಹೋಗಬೇಕು ಅಂತ ನನಗೆ ಆಸೆ. ಆದರೆ ಈ ಭಾಷೆಯದೆ ಒಂದು ತೊಡಕಾಗಿದೆ ನೋಡು.

ಗೌರಿ ಮಾತಾಡಲಿಲ್ಲ.

ಅವಳು ವಿದ್ಯಾಭ್ಯಾಸದಲ್ಲಿ ತೋರುತ್ತಿದ್ದ ಆಲಸ್ಯ ಸುರೇಶನಿಗೆ ಬೇಸರವನ್ನುಂಟು ಮಾಡುತ್ತಿತ್ತು. ಆದರೆ, ಅದನ್ನು ಯಾರ ಮುಂದೆಯೂ ತೋರಿಸಿಕೊಳ್ಳುತ್ತಿರಲಿಲ್ಲ. ಹಾಗೂ ಒಮ್ಮೆ ವಿಶಾಲಾಕ್ಷಮ್ಮ,

"ತೀರಾ ಹಳ್ಳಿಗೊಡ್ಡು ಕಣೋ ಸುರೇಶ. ನಾನು ಮೊದಲೇ ಹೇಳಿದೆ. ಓದಿದ ಹುಡುಗೀನ ಮಾಡಿಕೊ ಅಂತ. ನೀನೇ ಹಟ ಮಾಡಿದೆ" ಎಂದರು.

ಸುರೇಶನಿಗೂ ಬೇಸರವಾಗಿದ್ದ ಘಳಿಗೆ.

"ಹೌದಮ್ಮ, ಎಷ್ಟು ಹೇಳಿಕೊಟ್ಟರೂ ತಲೆಗೆ ಹತ್ತೋದಿಲ್ಲ. ಹಳ್ಳಿ ಹುಡುಗಿಯರಾದರೇನು ಕೆಲವರು ಎಷ್ಟು ಚೂಟಿಯಾಗಿರ್ತಾರೆ. ಸಂಸ್ಕೃತ ಶ್ಲೋಕಗಳು, ದೇವರ ಹಾಡು ಹಸೆ ಕಲಿತು, ರಾಮಾಯಣ ಮಹಾಭಾರತದಂತಹ ಪುಸ್ತಕಗಳನ್ನಾದರೂ ಓದಿರ್ತಾರೆ. ಇವಳು ಶುದ್ಧ ಪೆದ್ದು-ಏನೂ ಪ್ರಯೋಜನವಿಲ್ಲ" ಎಂದ.

"ನೋಡುವುದಕ್ಕೆ ಚೆನ್ನಾಗಿದಾಳೆ, ಅಂತ ನೀನೂ ಮರುಳಾದೆ. ಇದಕ್ಕಿಂತ ಚೆನ್ನಾಗಿದ್ದ ಹುಡುಗೀರನ್ನ ನಾನೇ ತೋರಿಸುತ್ತಿದ್ದೆ. ಮೊನ್ನೆ ಮದುವೆಯಾಯಿತು ಪಂಕಜಮ್ಮನ ಮಗಳಿಗೆ. ಅದೇ ಬೊಂಬಾಯಿ ಹುಡುಗಿ. ಅದೇನು ಭಾರಿ ಮದುವೆ ಅಂತ! ರೂಪಿನಲ್ಲೂ ರತಿಯ ಹಾಗಿದ್ದಾಳೆ ಹೆಣ್ಣು. ನೀನು ಹೂಂ ಎಂದಿದ್ದರೆ ಎಂಥಾ ಸೊಸೆ ಬರ್‍ತಿದ್ದಳು ಮನೆಗೆ. ಅದೆಲ್ಲಾ ಬಿಟ್ಟು ಇದನ್ನ ಕಟ್ಕೊಂಡೆ."

"ಹೋಗಲಿ ಬಿಡಮ್ಮ. ಇದೆಲ್ಲ ಹಣೆಬರಹ. ಯಾರೇನು ಮಾಡುವುದಕ್ಕಾಗುತ್ತೆ" ಎಂದು ಮುಗಿಸಿದ ಸುರೇಶ. ಆದರೆ ಒಳಗೇ ಅಸಮಾಧಾನ ಕುದಿಯುತ್ತಿತ್ತು.

ವಿಶಾಲಾಕ್ಷಮ್ಮ, ಪ್ರಮೀಳೆಯ ಹುಟ್ಟಿದ ಹಬ್ಬವನ್ನು ಬಹಳ ವಿಜೃಂಭಣೆಯಿಂದ ನೆರವೇರಿಸುತ್ತಿದ್ದರು. ಅವರ ಆಪ್ತ ಮಿತ್ರರು, ದಂಪತಿ ಸಮೇತರಾಗಿ ಬಂದು ಪ್ರಮೀಳೆಯ ಗೆಳತಿಯರೊಂದಿಗೆ ಬೆರೆಯುತ್ತಿದ್ದರು. ಅದಕ್ಕೆ ಹತ್ತು-ಹದಿನೈದು ದಿನಗಳ ಮೊದಲೇ ಯಾರು ಯಾರನ್ನು ಕರೆಯಬೇಕು, ಡಿನ್ನರ್‌ಗೆ 'ಮೆನು' ಏನು, ಆ ದಿನ ಪ್ರಮೀಳ ಯಾವ ಪೋಷಾಕು ಧರಿಸಬೇಕು, ಎಂದೆಲ್ಲ ಚರ್ಚೆ ನಡೆಯುತ್ತಿತ್ತು. ಗೌರಿಗೆ ಈ ಸಂಭ್ರಮದಲ್ಲಿ ಯಾವ ಪಾತ್ರವೂ ಇರಲಿಲ್ಲ. ಅವಳು ಆ ಮನೆಯ ಸೊಸೆಯಾಗಿದ್ದರೂ ಹೆಚ್ಚು ಕಡಿಮೆ ಎಲ್ಲರೂ ಅವಳನ್ನು ಮನೆಗೆ ಬೇಡದ ಓರ್ವ ಅತಿಥಿಯಂತೆಯೇ ಕಾಣುತ್ತಿದ್ದರು.

ಸುರೇಶ ತಂಗಿಗಾಗಿ ಈ ಸಲ ಒಂದು 'ಟ್ರಾನ್ಸಿಸ್ಟರ್' ತಂದಿದ್ದ. ಗೌರಿ ಅದನ್ನು ಹಿಂದೆ ಮುಂದೆ ತಿರುಗಿಸಿ,

"ಇಷ್ಟು ಚಿಕ್ಕ ಪೆಟ್ಟಿಗೆ. ಇದರಲ್ಲಿ ಹಾಡು ಹ್ಯಾಗೆ ಬರುತ್ತೆ?" ಎಂದು ಕೇಳಿದಳು. ಸುರೇಶ ವ್ಯಂಗವಾಗಿ,

"ಇಷ್ಟು ದೊಡ್ಡ ತಲೆಯಿದ್ದೂ ಇದು ಯಾಕೆ ಕೆಲಸ ಮಾಡೋಲ್ಲ?" ಎಂದು ಅವಳ ತಲೆಯನ್ನು ತೋರಿಸಿದ. ಗೌರಿ ಸುಮ್ಮನಾದಳು. ತನ್ನ ಬಗ್ಗೆ ತನಗೇ ಜಿಗುಪ್ಸೆಯಾಗಿತ್ತು. ಪತಿಯೇ ದೇವರು ಎಂದು ನಂಬಿದ ಅವಳಿಗೆ ಸುರೇಶನನ್ನು ಮೆಚ್ಚಿಸಲು ತುಂಬಾ ಆಸೆ. ಆದರೆ ಏನೋ ಆಲಸ್ಯ-ನಿರಾಸಕ್ತಿ. ಪುಸ್ತಕ ಹಿಡಿದು ಕುಳಿತರೂ ಅದರೊಳಗಿರುವುದನ್ನು ಗ್ರಹಿಸಲು ಶಕ್ತಿ ಸಾಲದೆ ಮನಸ್ಸು ಯಾವುದೋ ಕಲ್ಪನಾವಿಲಾಸದಲ್ಲಿ ಓಲಾಡುತ್ತಿತ್ತು.

ಹುಟ್ಟಿದ ಹಬ್ಬ ನಾಳೆ ಎನ್ನುವಾಗ ಹಳ್ಳಿಯಿಂದ ಗೌರಿಯ ಸೋದರಮಾವ ಬಂದರು. ಆತ ವಯಸ್ಸಾದವರು. ಏನಾದರೂ ಕೋರ್ಟು ಕಛೇರಿ ಕೆಲಸಗಳಿದ್ದರೆ ಮಾತ್ರ ಬೆಂಗಳೂರಿಗೆ ಬರುತ್ತಿದ್ದರು. ಗೌರಿ ತನ್ನ ತವರಿನ ಬಳಗದವರನ್ನು ಕಂಡೊಡನೆ ಆನಂದಾತಿರೇಕದಿಂದ,

"ಬನ್ನಿ ಮಾವಯ್ಯ" ಎಂದು ಕಾಲುಮುಟ್ಟಿ ನಮಸ್ಕರಿಸಿದಳು. ಮಾವಯ್ಯ ಆಶೀರ್ವಾದವಾಗಿ ಹತ್ತು ನಿಮಿಷ ಮಂತ್ರವನ್ನೇ ಹೇಳಿದರು.

"ಈಗ ಬಂದ್ರಾ? ಕೂತ್ಕೊಳ್ಳಿ, ಮಾವಯ್ಯ" ಎಂದು ಉಪಚರಿಸಿದಳು ಗೌರಿ. ಇದು ವರೆಗೆ ಆ ಮನೆಗೆ ಹೊರಗಿನವಳಂತೆಯೇ ಇದ್ದ ಗೌರಿಗೆ ಈಗ ಅದು ತನ್ನದೇ ಮನೆ, ಇಲ್ಲಿಗೆ ಬಂದ ತವರಿನ ಬಳಗದವರನ್ನು ಚೆನ್ನಾಗಿ ಆದರಿಸಬೇಕು ಎಂಬ ಭಾವ ಮೂಡಿತು.

"ಅಮ್ಮಯ್ಯಾ, ನಿನ್ನ ಸಂಕ್ರಾಂತಿ ಹಬ್ಬಕ್ಕೆ ಕರ್ಕೊಂಡು ಬಾ ಅಂದ್ರಮ್ಮ. ಹ್ಯಾಗೂ ಒಂದು ಕೆಲಸದ ಮೇಲೆ ಬರಬೇಕಾಗಿತ್ತು, ನಾನೇ ಬಂದೆ" ಎಂದರು ಮಾವಯ್ಯ.

"ಒಳ್ಳೇದಾಯ್ತು" ಎಂದು ಹೇಳಿ ಗೌರಿ ತನ್ನ ಮಾವನಿಗೆ ಉಪ್ಪಿಟ್ಟು, ಕಾಫಿ ತಂದು ಕೊಟ್ಟಳು. ಆತ ಸೋಫಾದ ಮೇಲೆ ಪದ್ಮಾಸನ ಹಾಕಿ ಕುಳಿತು ತಿನ್ನತೊಡಗಿದರು. ಅವರನ್ನು 'ಕಾಲು ಕೆಳಗೆ ಇಟ್ಕೊಳ್ಳಿ' ಎಂದು ಹೇಳಲು ಗೌರಿಗೆ ಬಾಯಿ ಬರಲಿಲ್ಲ.

ವಿಶಾಲಾಕ್ಷಮ್ಮ ಮಾತ್ರ ಅದನ್ನು ನೋಡಿ ಹೌ ಹಾರಿದರು.

"ಪ್ರತಿಮಾ ಈತ ಯಾರು?"

"ನಮ್ಮ ಮಾವ. ಮದುವೇಲಿ ಬಂದಿದ್ರು. ನಿಮಗೆ ಜ್ಞಾಪಕ ಇಲ್ಲ ಅಂತ ಕಾಣತ್ತೆ. ನನ್ನ ಹಳ್ಳಿಗೆ ಕರ್ಕೊಂಡು ಹೋಗೋಕೆ ಬಂದಿದಾರೆ."

"ಈಗ್ಯಾಕೆ?"

ಮಾವ ಹೇಳಿದರು, "ಸಂಕ್ರಾತಿ ಮೊದಲ ವರ್ಷ. ಅಮ್ಮಯ್ಯನ ಕೈಲಿ ಹಣ್ಣು ಕೊಡಿಸಬೇಕು. ಅದೂ ಅಲ್ಲದೆ ಇಲ್ಲಿಗೆ ಬಂದ ಮೇಲೆ ಒಂದೂ ಸಲವೂ ಕರಕೊಂಡೇ ಹೋಗಿಲ್ಲ."

ವಿಶಾಲಾಕ್ಷಮ್ಮನ ಗಮನವೆಲ್ಲ ಕೆಳಗೆ ಉದುರುತ್ತಿದ್ದ ಉಪ್ಪಿಟ್ಟಿನ ಕಡೆ, ಆತನ ಮಣ್ಣು ಮೆತ್ತಿದ ಕಾಲಿನ ಕಡೆ ಇತ್ತು.

"ಸರಿ ಯಾವತ್ತು ಕರ್ಕೊಂಡು ಹೋಗ್ತೀರಾ?"

"ಇವತ್ತ ನಾಲಕ್ಕು ಘಂಟೆ ಬಸ್ಸಿಗೆ ಹೋಗೋಣಾಂತ"

ವಿಶಾಲಾಕ್ಷಮ್ಮ ಸಮಾಧಾನದ ನಿಟ್ಟುಸಿರು ಬಿಟ್ಟು, "ಆಗಲಿ ಸುರೇಶ ಬಂದ ಮೇಲೆ ಒಂದು ಮಾತು ಕೇಳಿಕೊಂಡು ಹೊರಡಬಹುದು" ಎಂದರು.

ಆತನಿಗೆ ತುಂಬಾ ಅಸಮಾಧಾನವಾಯಿತು, ನಾಲ್ಕು ದಿನ ಇದ್ದು ಹೋಗಿ ಎಂದು ಬಲವಂತ ಮಾಡಿದ್ದರೂ ತಾವೇನು ಇರುತ್ತಿರಲಿಲ್ಲ. ಬಾಯಿ ಮಾತಿನಲ್ಲೂ ಉಪಚಾರ ಬೇಡವೆ? ಮಾವಯ್ಯ ಕೋಪದಲ್ಲಿ ಮೂಗಿಗೆ ಸ್ವಲ್ಪ ಹೆಚ್ಚಾಗಿಯೇ ನಶ್ಯವನ್ನೇರಿಸಿ, ಬೇಗ ಕರವಸ್ತ್ರ ಕೈಗೆ ಸಿಕ್ಕದುದರಿಂದ ಬಾಗಿಲಿಗೆ ಹಾಕಿದ್ದ ಪರದೆಗೇ ಕೈಯನ್ನು ಒರೆಸಿದರು. ಅದನ್ನು ನೋಡಿದ ಗೌರಿ, "ಒಳಗೆ ಬನ್ನಿ ಮಾವಯ್ಯ" ಎಂದು ಅವರನ್ನು ತನ್ನ ರೂಮಿಗೇ ಕರೆದೊಯ್ದಳು.

ಮಧ್ಯಾಹ್ನ ಊಟಕ್ಕೆ ಮನೆಗೆ ಬಂದ ಸುರೇಶನಿಗೆ ತನ್ನ ರೂಮಿನಲ್ಲಿ ಬೇರೊಂದು ವ್ಯಕ್ತಿ ಇದ್ದುದನ್ನು ನೋಡಿ ಆಶ್ಚರ್ಯವಾಯಿತು. ಬಾಗಿಲಲ್ಲೇ ಮೂಗನ್ನು ಹಿಡಿದು,

"ಏನು ವಾಸನೆ?" ಎಂದ.

ಗೌರಿ, "ಏನೂ ಇಲ್ಲ... ನಮ್ಮ ಮಾವ ಬಂದಿದಾರೆ" ಎಂದಳು.

"ನಾನೇ ಅಲ್ಲವೇನಪ್ಪ ನಿನ್ನ ಹೆಂಡ್ತೀನ ಧಾರೆ ಎರೆದು ಕೊಟ್ಟದ್ದು? ಗುರುತು ಸಿಕ್ಲಿಲ್ವೆ?" ಎಂದರು ಮಾವಯ್ಯ;ಎಲೆ ಅಡಿಕೆಯಿಂದ ಕೆಂಪಾಗಿದ್ದ ಹಲ್ಲುಗಳು, ಮುಖದ ಮೇಲೆ ನಾಲ್ಕು ದಿನದ ಹುಲುಸಾದ ಬೆಳೆ, ಮಾಸಲು ಬಣ್ಣಕ್ಕೆ ತಿರುಗಿದ ಪಂಚೆ-ಒಗೆಯನ್ನೇ ಕಾಣದ ಕೋಟು. ಸುರೇಶನಿಗೆ 'ಗೆಟ್ ಔಟ್' ಎಂದು ಚೀರುವಂತಾಯಿತು.

ಸುರೇಶ ಗೌರಿಯ ಕಡೆ ತಿರುಗಿ,

"ಏನಂತೆ?" ಎಂದ.

"ಪುಟ್ಟಮ್ಮನ ಸಂಕ್ರಾಂತಿಗೆ ಕರ್ಕೊಂಡು ಹೋಗ್ತೀನಿ. ಇವತ್ತೇ ಹೊರಡಬಹುದು ಅಂತ ಅಮ್ಮಾವರು ಅಪ್ಪಣೆ ಕೊಟ್ರು" ಎಂದರು ಮಾವ.

"ನೀವು ಬೇಕಾದರೆ ಹೋಗಿ. ನಾನು ಇವಳನ್ನ ಆ ಮೇಲೆ ಕರಕೊಂಡು ಬರ್ತೀನಿ" ಎಂದ ಸುರೇಶ.

"ಹಬ್ಬ ಇನ್ನು ಎಂಟೇ ದಿನ ಇದೆಯಪ್ಪ."

"ನಮ್ಮನೇಲಿ ನಾಳೆ ಪಮ್ಮಿ ಹುಟ್ಟಿದ ಹಬ್ಬ. ಅದ್ರಿಂದ ನೀವು ಹೊರಡಿ. ನಾವು ಭಾನುವಾರ ಬರ್ತೀವಿ" ಎಂದ ಖಡಾಖಂಡಿತವಾಗಿ.

"ಪಮ್ಮಿ ಅಂದರೆ ಯಾರಮ್ಮ,ಪುಟ್ಟ? ಏನು ವರ್ಷದ ಹೆಚ್ಚೇ?"

ಗೌರಿ ನಗು ತಡೆದುಕೊಂಡು, ಹೇಳಿದಳು.

"ಇಲ್ಲ ಮಾವಾ ನನ್ನ ನಾದಿನಿ. ಅವಳಿಗೂ ನನ್ನ ವಯಸ್ಸೇ"

"ಮತ್ತೆ ಅದೆಂತಹ ಹುಟ್ಟಿದ ಹಬ್ಬವಮ್ಮಾ?"

"ಇವರ ಮನೆಯಲ್ಲಿ ಹೀಗೇ ಮಾವಯ್ಯಾ. ಹಳ್ಳಿ ಕಡೆಯ ಹಾಗಲ್ಲ."

ಸುರೇಶ ಒಳಕ್ಕೆ ಹೋದ ಸಮಯದಲ್ಲಿ ಮಾವಯ್ಯ ಪಿಸುಮಾತಿನಲ್ಲಿ,

"ನೀನು ಇಲ್ಲಿ ಸುಖವಾಗಿದೀಯಾ ಮಗೂ?" ಎಂದು ಕೇಳಿದರು.

"ಇದೀನಲ್ಲಾ ಯಾಕೆ?"

"ಏನೋ ಹೀಗೇ ಕೇಳಿದೆ. ನೀನು ಹುಟ್ಟಿ ಬೆಳೆದ ಮನೆಗೂ ಇಲ್ಲಿಗೂ ಬಲು ವ್ಯತ್ಯಾಸವಿದೆಯಮ್ಮಾ."

"ಮದುವೆಯಾದ ಮೇಲೆ ಇವರ ಮನೆಯೇ ನನ್ನ ಮನೆ ಅಲ್ಲವೆ ಮಾವಯ್ಯ? ಹೊಂದಿಕೊಂಡು ಹೋಗಬೇಕಾದ್ದು ನನ್ನ ಧರ್ಮ."

"ಒಳ್ಳೆಯ ಮಾತು ಒಪ್ದೆ. ನಾನು ಇವತ್ತೇ ಹೊರಡ್ತೀನಮ್ಮ. ನೀನು ಭಾನುವಾರ ಬರ್ತೀಯಾ?" ಎಂದು ಎದ್ದು ಬಟ್ಟೆ ಬರೆಯನ್ನು ಸರಿಪಡಿಸಿಕೊಂಡರು.

ಸುರೇಶ ಊಟ ಮುಗಿಸಿ ಹೋಗುವಾಗ ಆತನನ್ನು ಬಸ್ಸು ನಿಲ್ದಾಣಕ್ಕೆ ಬಿಟ್ಟೇ ಹೋದ. ವಾಹನ ಸೌಕರ್ಯವಿಲ್ಲದೆ ಇನ್ನು ಎಲ್ಲಿ ಉಳಿದುಕೊಂಡು ಬಿಡುವರೋ ಎಂಬ ಭಯದಿಂದ.

ಆ ಸಂಜೆ ಮನೆಮಂದಿಯೆಲ್ಲ ಸೇರಿ ಆತನನ್ನು ಟೀಕಿಸಿದರು. ವಿಶಾಲಾಕ್ಷಮ್ಮ ಹೇಳಿದರು,

"ನಾಳೆ ಪಾರ್ಟಿಗೆಂತ ಅಗಸನ ಮನೆಯಿಂದ ಬಂದಿದ್ದ ಸೋಫಾ ಕವರ್ ಹಾಕಿದ್ದೆ. ಅದರ ಮೇಲೆಲ್ಲ ಕಾಲಿಟ್ಕೊಂಡು ಕೂತುಬಿಟ್ಟರು"

"ಅಮ್ಮಾ ಈ ಕರ್ಟನ್ ಅವಸ್ಥೆ ನೋಡಮ್ಮ. ಎಲ್ಲಾ ನಸ್ಯವಾಗಿದೆ. ಇವತ್ತೇ ಬದಲಾಯಿಸಬೇಕು" ಪ್ರಮೀಳ ಚೀರಿದಳು.

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿ.

ರಿಜಿಸ್ಟರ್ಡ್ ಆಫೀಸು
ಉಡುಪಿ

ಸ್ಥಾಪನೆ
೧೯೦೬

ಆಡಳಿತ ಆಫೀಸು
ಮಂಗಳೂರು

ಸಣ್ಣ ಉಳಿತಾಯದಿಂದಲೇ ವೈಯಕ್ತಿಕ ಜೀವನದಲ್ಲಿ ಮಹತ್ಸಾಧನೆಗಳು ಸಾಧ್ಯ!

● ಸಣ್ಣ ಉಳಿತಾಯದಿಂದಲೇ ವೈಯಕ್ತಿಕ ಜೀವನದಲ್ಲಿ ಮಹತ್ಸಾಧನೆಗಳು ಸಾಧ್ಯ! ಸಣ್ಣ ನಾಣ್ಯಗಳೇ ನಿಮಗಿಂದು ಆಪದ್ಧನವಾಗುತ್ತಿತ್ತು. ಕೂಡಲೇ ಸಾಧ್ಯವಿರುವಾಗ ಉಳಿಸಿದ್ದಾದರೆ ಚಿಲ್ಲರೆ ನಾಣ್ಯಗಳೇ ನಿಮಗಿಂದು ಆಪದ್ಧನವಾಗುತ್ತಿತ್ತು. ಕೂಡಲೇ ಒಂದು "ಜನತಾ ಡಿಪೊಜಿಟ್" (ದೈನಂದಿನ ಉಳಿತಾಯ ಯೋಜನೆ) ಅಕೌಂಟನ್ನು ತೆಗೆಯಿರಿ.

ದಿನಂಪ್ರತಿ ೨೫ ಪೈಸೆ ಯಾ ಹೆಚ್ಚಿಗೆ ಮೊಬಲಗನ್ನು ಕಟ್ಟಬಹುದು.

ಬೆಂಗಳೂರಿನಲ್ಲಿ ಶಾಖೆಗಳು

೧. ಫಸ್ಟ್ ಫ್ಲೋರ್ ಹಬೀಬುಲ್ಲಾ ಬಿಲ್ಡಿಂಗ್ಸ್, ಆರ್‌ಕೋಟ್ ಶ್ರೀನಿವಾಸಾಚಾರ್ ಸ್ಟ್ರೀಟ್, ಬೆಂಗಳೂರು-ಸಿಟಿ (phone: 22761)
೨. ನಂಬ್ರ ೮, ಕೆವಲ್ರಿ ರೋಡ್, (ಕೆನ್‌ಟೋನ್‌ಮೆಂಟ್) ಬೆಂಗಳೂರು 1. (phone: 24342)
೩. ಸೌತ್ ಎಂಡ್ ರೋಡ್, ಮಿಲ್‌ಕೊರ್‌ನರ್, ಮಲ್ಲೇಶ್ವರಂ, ಬೆಂಗಳೂರು 20 (phone: 24341)
೪. 15/6, ಗಾಂಧಿಬಜಾರ್. ಬಸವನಗುಡಿ ಬೆಂಗಳೂರು 4 (phone: 71633)

ಕೆ. ರಾಮದಾಸ ನಾಯಕ, ಜನರಲ್ ಮೆನೇಜರ್

ಕ. ದೀ. ಸಂ. ೧೪

"ನನ್ನ ನ್ಯೆಫ್ ನೋಡಿ ಭಾರೀ ಬೆಲೂನಿನ ಹಾಗೆ ಊದುತ್ತಾ ಇದ್ದಾಳೆ."

"ಥೂ ಆ ಹಾಳು ವಾಸನೆ. ಕಾರನ್ನೆಲ್ಲ ಡೆಟಾಲ್ ಹಾಕಿ ತೊಳೆಯಬೇಕು." ಎಂದ ಸುರೇಶ್.

"ಶುದ್ಧ ಹಳ್ಳಿ ಸಹವಾಸ. ಮದುವೆ ಆಗೋ ವಾಗಲೇ ಹೇಳಿದೆವು ನಾವೆಲ್ಲ. ನೀನು ಕೇಳಲಿಲ್ಲ. ಬಂಧು ಬಳಗ ಅಂತ ಹೇಳಿಕೊಳ್ಳೋ ಹಾಗಿದಾರೆಯೇ ಈ ಜನ?" ಅಸಹ್ಯವನ್ನು ತೋರಿದರು ವಿಶ್ವನಾಥರಾಯರು.

"ನಾಳೆ ಪಾರ್ಟಿಯಲ್ಲಿ ಹೇಗಿ[illegible] ಪ್ರತಿಮಾಗೆ ಹೇಳಿರು, ಸುರೇಶ್. ಏನಾದರೂ ಮಾತಾಡಿ ಇಲ್ಲದ ಅ[illegible] ತಾಯಿಯ ಎಚ್ಚರಿಕೆ.

"ಅಗಲಮ್ಮ ಹೇಳ್ತೀನಿ" [illegible] ಸುರೇಶ.

-೧೧-

ಅಂದು ಮನೆಯವರಿಗೆಲ್ಲ ಮಿತಿಮೀರಿದ ಉತ್ಸಾಹ. ಟೇಬಲಿನ ಮೇಲೆ ದೊಡ್ಡ 'ಕೇಕ್' ಅನ್ನು ಇಟ್ಟು ಅದರ ಮೇಲೆ ಹತ್ತೊಂಭತ್ತು ಮೋಂಬತ್ತಿಗಳನ್ನು ನಿಲ್ಲಿಸಿದ್ದರು. ಜನರೆಲ್ಲ [illegible]ದ ಮೇಲೆ ಪ್ರಮೀಳ ಉರಿಯುತ್ತಿದ್ದ ಬತ್ತಿಯನ್ನು ಊದಿ ಆರಿಸಿದಳು. ಎಲ್ಲರೂ ಕೇಕೆ ಹಾಕಿ ನಕ್ಕು ಚಪ್ಪಾಳೆ ತಟ್ಟಿದರು. ವಿವಿಧ [illegible]ಗಳು ಶೃಂಗಾರವಾಗಿ ಜೋಡಿಸಲ್ಪಟ್ಟ[illegible]. ನಾನಾಬಗೆಯ ಸೆಂಟಿನ ಪರಿಮಳ [illegible] ತುಂಬ ಹರಡಿತ್ತು. ಗೌರಿ, [illegible] ಹೇಳಿದಂತೆ ಶೃಂಗರಿಸಿಕೊಂಡು, ಕೃತಕ ಮುಗುಳ್ನಗೆಯನ್ನು ಧರಿಸಿ ಗುಂಪಿನಲ್ಲಿ ಬೆರೆತಿದ್ದಳು. ಒಬ್ಬಿಬ್ಬರು ಇಂಗ್ಲೀಷಿನಲ್ಲಿ ಮಾತಾಡಿಸಿದಾಗ ಪಕ್ಕದಲ್ಲೇ ಇದ್ದ ಸುರೇಶನೇ ಉತ್ತರಕೊಟ್ಟ.

ಪಂಕಜಮ್ಮನ ಸೊಸೆ ಕಲ್ಯಾಣಿ ಆ ದಿನದ ಮುಖ್ಯ ಆಕರ್ಷಣೆಯಾಗಿದ್ದಳು. ನಾಲ್ಕಾರು ಭಾಷೆಗಳನ್ನು ಕಲಿತಿದ್ದ ಅವಳು ಎಲ್ಲರೊಡನೆ ಬೆರೆತು ಅವರವರ ಭಾಷೆಯಲ್ಲೇ ಮಾತಾಡುತ್ತಿದ್ದಳು.

ಎತ್ತರವಾದ ನಿಲುವು, ಮನಸೆಳೆವ ನಡತೆ, ಕಣ್ಸೆಳೆವ ರೂಪ, ಫ್ಯಾಷನ್ ಮಾಡೆಲಿನಂತೆ ಅಲಂಕಾರ. ವಿಶಾಲಾಕ್ಷಮ್ಮನಂತೂ ಇಂತಹ ಹುಡುಗಿಯನ್ನು ಬಿಟ್ಟು ಮಗ, ಪುಟ್ಟಗೌರಿಯನ್ನು ಕಟ್ಟಿಕೊಂಡನಲ್ಲಾ ಎಂದು ಮನದಲ್ಲೇ ನೂರುಬಾರಿ ಹಲುಬಿದರು. ಕಲ್ಯಾಣಿಯ ನಡಿಗೆ ಸಹ ಬಹಳ ಕಲಾತ್ಮಕವಾಗಿದ್ದು, ನೋಡುವವರಿಗೆ ತೆಳು ಮೋಡವೊಂದು ತೇಲಿಬಂದಂತೆನಿಸುತ್ತಿತ್ತು. ಗೌರಿ ಒರಟೊರಟಾಗಿ ಹೆಜ್ಜೆಯಿಡುತ್ತ ನಡೆದಾಡುವುದನ್ನು ನೋಡಲೂ ಆಕೆಗೆ ಬೇಸರವಾಗುತ್ತಿತ್ತು.

ಸುರೇಶನಿಗೆ ಕಲ್ಯಾಣಿಯನ್ನು ಅವಳ ಪತಿ ರಂಗಸ್ವಾಮಿಯೇ ಪರಿಚಯ ಮಾಡಿಕೊಟ್ಟ. ಕಲ್ಯಾಣಿ ಒಂದೇ ನಿಮಿಷದಲ್ಲಿ ತನ್ನ ಜಾಣ್ಮೆಯಿಂದ ಸುರೇಶನ ಗಮನ ಬೇರೆ ಕಡೆ ಹೋಗದಂತೆ ಮಾತಿನಜಾಲದಲ್ಲಿ ಸಿಲುಕಿಸಿದಳು. ಬೊಂಬಾಯಿಯಲ್ಲಿ ಇಂತಹ ನೂರಾರು ಪಾರ್ಟಿಗಳಲ್ಲಿ ಭಾಗವಹಿಸಿದ್ದವಳಿಗೆ ಮಾತಾಡಲು ವಿಷಯದ ಕೊರತೆಯೇನೂ ಇರಲಿಲ್ಲ. ಸುರೇಶ ಹೇಳಿದ್ದನ್ನು ಬೇಗ ಗ್ರಹಿಸಿ ಅದಕ್ಕೆ ತಕ್ಕಂತೆ ಜಾಣತನದಿಂದ ಉತ್ತರ ಕೊಡುತ್ತಿದ್ದಳು. ಸುರೇಶ ಅವಳನ್ನು ಟೇಬಲ್ ಬಳಿಗೆ ಕರೆದೊಯ್ದು ತಾನೇ ಅವಳ ತಟ್ಟೆಗೆ ಎರಡು 'ಬಾಲೂಷಾ' ಹಾಕಿದ. ಕಲ್ಯಾಣಿ ಹೇಳಿದಳು,

"ನಾನು ಸ್ವೀಟ್ಸ್ ತಿನ್ನೋದೇ ಇಲ್ಲ. ಬೇಡಿ ಪ್ಲೀಸ್"

"ಯಾಕೆ ಸೇರೋಲ್ವೆ? ಇವತ್ತು ಮಾತ್ರ ಪಮ್ಮಿಗೋಸ್ಕರ"

ಸುರೇಶನ ಬಲವಂತ

"ಸೇರತ್ತೆ. ಆದರೆ..."

"ಡಯೆಟಿಂಗ್ ಏನು?"

"ಹೂಂ"

"ಓ... ನಿಮಗೇನು ಅದು ಅವಶ್ಯಕವಿಲ್ಲ"

"ಹಾಗಂದರೇನು? ಕೇರ್‌ಫುಲ್ ಆಗಿದ್ರೆ ತಾನೆ ಇರೋ ಫಿಗರ್‌ನ ಉಳಿಸಿಕೊಳ್ಳೋಕೆ ಆಗೋದು"

"ನಮ್ಮ ಪಮ್ಮೀನೂ ಹೀಗೆ ಸರಿಯಾಗಿ ಊಟ ಸಹ ಮಾಡೋಲ್ಲ. ಬೆಳಿಗ್ಗೆ ಸಂಜೆ ಎಕ್ಸರ್‌ಸೈಜ್ ಬೇರೆ. ಅದೇ ನನ್ನ ವೈಫ್ ನೋಡಿ..." ದೂರದಲ್ಲಿ ಯಾರೊಡನೆಯೂ ಬೆರೆಯಲಾರದೆ ನಿಂತಿದ್ದ ಗೌರಿಯನ್ನು ತೋರಿಸಿ, "ಭಾರೀ ಬೆಲೂನಿನ ಹಾಗೆ ಊದುತ್ತ ಇದ್ದಾಳೆ"

ಎಂದೆ. ಕಲ್ಯಾಣಿ ನಕ್ಕಳು. ಸುರೇಶ ಸ್ವಲ್ಪ ಜೋರಾಗಿಯೇ ನಕ್ಕ.

ಗೌರಿಗೆ, ಮದುವೆಯಾಗಿ ಅತ್ತೆಯ ಮನೆಗೆ ಬಂದ ಮೇಲೆ ಊಟ, ನಿದ್ರೆ ಎರಡು ಬಿಟ್ಟು ಬೇರೆ ಕೆಲಸವೆ ಇರದಿದ್ದುದರಿಂದ ಚೆನ್ನಾಗಿ ಮೈ ಬಂದುಬಿಟ್ಟಿತ್ತು. ಸುರೇಶ, ಕಲ್ಯಾಣಿ ತನ್ನನ್ನೇ ನೋಡಿ ನಗುತ್ತಿರುವುದು ಗೌರಿಗೆ ತಿಳಿಯಿತು. ಅವಳ ಮುಖದಲ್ಲಿದ್ದ ಕೋರಿಕೆಯ ಗೆಲುವೂ ಮಾಯವಾಯಿತು.

ಕಲ್ಯಾಣಿಗೆ, ಸುರೇಶ ತನ್ನನ್ನು ನಿರಾಕರಿಸಿ ಗೌರಿಯನ್ನು ಮದುವೆಯಾದ ವಿಷಯ ಗೊತ್ತಿತ್ತು.

"ನಿಮ್ಮದು ಲವ್-ಮ್ಯಾರೇಜ್ ಅಲ್ಲವೆ?" ಎಂದು ಕೇಳಿದಳು.

"ಹೌದು..." ಎಂದು ಒಪ್ಪಿಕೊಂಡ ಸುರೇಶ. ಸೇರಿದ್ದ ಜನರೆಲ್ಲ ಹೊರಡುವ ವೇಳೆಗೆ ರಾತ್ರಿ ಹನ್ನೊಂದು ಘಂಟೆಯಾಗಿತ್ತು.

ಪ್ರಮೀಳ ತನಗೆ ಬಂದಿದ್ದ ಉಡುಗೊರೆಗಳನ್ನು ಎಲ್ಲರಿಗೂ ತೋರಿಸುತ್ತ,

"ಪಾರ್ಟಿ ಬಹಳ ಚೆನ್ನಾಗಿ ಆಯಿತಲ್ಲವಾ?" ಎಂದಳು.

"ಹೋ...ವಂಡರ್‌ಫುಲ್" ಎಂದ ಸುರೇಶ.

"ಕಲ್ಯಾಣೀನ ತುಂಬಾ ಮಾತಾಡಸ್ತಾ ಇದ್ದೆಯಲ್ಲಾ ಸುರೇಶ್. ನೋಡಿದೆಯಾ ಹೇಗಿದಾಳೆ?"

"ಹೌದಮ್ಮ ತುಂಬಾ ಸ್ಮಾರ್ಟ್ ಆಗಿದಾಳೆ"

ಗೌರಿಯೂ ಅಲ್ಲೇ ಕುಳಿತಿದ್ದಳು. ಅವಳ ಕಡೆಗೆ ಯಾರ ಗಮನವೂ ಇರಲಿಲ್ಲ. ಬೇರೆ ಒಂದು ಹೆಣ್ಣಿನೊಡನೆ ತನ್ನ ಪತಿ ಅಷ್ಟೊಂದು ಸಲಿಗೆಯಿಂದ ವರ್ತಿಸಿದುದು ಅವಳಿಗೆ ಸ್ವಲ್ಪವೂ ಸರಿಯೆನಿಸಿರಲಿಲ್ಲ. ಸುರೇಶ ಮಲಗಲು ಬಂದಾಗ ಕೇಳಿದಳು,

"ಆಕೆ ನಿಮ್ಮ ಪರಿಚಯಸ್ಥರೇನು?"

"ಆಕೆ ಎಂದರೆ?"

"ಅದೇ ನಿಮ್ಮ ಜೊತೆ ಮಾತಾಡ್ತಾ ಇದ್ದಳಲ್ಲ?"

"ಓ ಕಲ್ಯಾಣೀನೇ?"

"ಇರಬಹುದು. ಆಕೆ ಹೆಸರು ನಂಗೊತ್ತಿಲ್ಲ"

"ಇವತ್ತೇ ಪರಿಚಯವಾಯ್ತು"

"ಮತ್ತೆ ಅಷ್ಟೊಂದು ಮಾತಾಡ್ತಾ ಇದ್ರಿ?"

"ಅವಳು ತುಂಬ ಚೆನ್ನಾಗಿ ಮಾತಾಡ್ತಾಳೆ?"

"ಆದರೂ ಬೇರೆ ಹೆಂಗಸರ ಕೈಲೆಲ್ಲ ಏನು ಅಷ್ಟೊಂದು ಮಾತು?"

"ನೀನೂ ಯಾವ ಗಂಡಸರ ಕೈಲಿ ಬೇಕಾದರೂ ಮಾತಾಡು. ನಾನೇನೂ ಬೇಡ ಅನ್ನೋಲ್ಲ. ನಾಲ್ಕು ಜನ ಸೇರಿದ ಕಡೆ ಹಾಗೇನೆ"

"ಅವಳ್ಯೇನಾ ನಿಮಗೆ ಕೊಡಬೇಕು ಅಂತ ಇದ್ದದ್ದು?"

"ನಿನಗೆ ಯಾರು ಹೇಳಿದರು?"

"ಅಮ್ಮ ದಿನಕ್ಕೆ ನಾಲ್ಕು ಸಲ ಹೇಳ್ತಾಇರ್ತಾರೆ. ಅಂತಹ ಹುಡುಗೀನ ಬಿಟ್ಟು ನೀವು ನನ್ಯಾಕೆ ಕಟ್ಕೊಂಡ್ರಿ?"

ಸುರೇಶನಿಗೆ ಸಿಟ್ಟು ಏಳುತ್ತಿತ್ತು.

"ಯಾಕೋ ನಿನ್ನ ಕಟ್ಟಕೊಂಡು ಒದ್ದಾಡೋದು ನನ್ನ ಹಣೇಲಿ ಬರೆದಿತ್ತು. ಅದಕ್ಕೆ. ಈಗ ಸುಮ್ಮನೆ ಮಲಕ್ಕೋ"

ಗೌರಿ ಸುಮ್ಮನಾಗಲಿಲ್ಲ.

"ನಾನೇನು ನಿಮ್ಮನ್ನ ಕೇಳಿಕೊಂಡಿದ್ನೆ, ನನ್ನೇ ಮದ್ವೆ ಆಗಿ ಅಂತ? ನೀವಾಗೇ ಆದ್ರಿ. ಈಗ ಹೀಗಂತೀರ. ನಾನು ಶುದ್ಧ ಪೆದ್ದು, ಹಳ್ಳಿಗೊಡ್ಡು ಹೌದು. ಆದರೆ ಅದೆಲ್ಲಾ ಮೊದಲೇ ತಿಳಿದಿತ್ತಲ್ಲ. ನಾನೂ ಯಾರಾದ್ರೂ ಹಳ್ಳಿಬೆಪ್ಪನ್ನೆ ಕಟ್ಕೋತಿದ್ದೆ..." ಅಷ್ಟು ಮಾತಾಡಿದ್ದು ಹೆಚ್ಚಾಯಿತೆಂದು ನಿಲ್ಲಿಸಿದಳು ಗೌರಿ. ಸುರೇಶನಿಗೆ ಇದು ಹೊಸ ಅನುಭವ. ಹೀಗೆ ತನ್ನನ್ನು ಪ್ರಶ್ನಿಸುವಷ್ಟು ಧೈರ್ಯ ಇವಳಿಗೆ ಯಾವಾಗ ಬಂತು?

"ಡೈವೋರ್ಸ್ ಅಂತ ಕೇಳಿದೀಯಾ ನೀನು?"

"ಇಲ್ಲ."

"ಹಾಗೆಂದರೆ ವಿವಾಹ ವಿಚ್ಛೇದನ ಅಂತ. ನಾವಿಬ್ಬರೂ ಒಬ್ಬರನ್ನೊಬ್ಬರು ಬಿಟ್ಟುಬಿಡೋದು. ಆ ಮೇಲೆ ನಾನೊಂದು ಓದಿದ ಹುಡುಗೀನ, ನೀನೊಬ್ಬ ಶಾನುಭೋಗನ್ನ ಮದುವೆ ಮಾಡಿಕೊಂಡು ಸುಖವಾಗಿರೋಣ."

ಗೌರಿ ಕಿವಿ ಮುಚ್ಚಿಕೊಂಡಳು.

"ರಾಮ ರಾಮಾ, ಬಿಡತು ಅನ್ನಿ. ನಿಮಗೆ ನನ್ನಿಂದ ತುಂಬಾ ಬೇಜಾರಾಗ್ತಾ ಇದ್ದರೆ ಬೇರೆ ಮದುವೆ ಮಾಡ್ಕೋಳಿ. ನಾನು ನಿಮ್ಮನೆ ಕೆಲಸಾನಾದ್ರೂ ಮಾಡಿಕೊಂಡಿರ್ತೀನಿ. ಆದರೆ..."

ಗೌರಿಯ ಗಂಟಲುಬ್ಬಿ ಬಂತು.

ಸುರೇಶ ಮಂದವಾದ ಪ್ರಕಾಶದಲ್ಲಿ ಹಾಸಿಗೆಯ ಮೇಲೆ ಕುಳಿತಿದ್ದ ಗೌರಿಯ ಕಡೆ ನೋಡಿದ. ಸ್ವಲ್ಪವೇ ನೀರು ತುಂಬಿ ನಕ್ಷತ್ರದಂತೆ ಹೊಳೆಯುತ್ತಿದ್ದ ಕಣ್ಣುಗಳು, ತಪ್ಪಿತಸ್ಥಳಂತೆ ಅರ್ಧ ತಲೆ ಬಾಗಿಸಿ ಕುಳಿತಿದ್ದ ಆ ಭಂಗಿ, ಇನ್ನೂ ಮುಗ್ಧತೆಯ ತೆರೆಯಿಂದ ಪೂರ್ತಿ ಹೊರ ಬಂದಿರದ ಮುದ್ದುಮುಖ. ಪ್ರೇಮ ಉಕ್ಕಿ ಬಂದು.

"ಪುಟ್ಟಾ, ನಾನು ನಿನ್ನ ಬಿಡೋದೂ ಇಲ್ಲ. ನೀನೂ ನನ್ನ ಬಿಡಬೇಡ ಬಾ ಮಲಗು Marriages are made in heaven ಅಂತ, ಇದು ಬ್ರಹ್ಮ ಹಾಕಿದ ಗಂಟು. ಅದನ್ನೇ ಭದ್ರಪಡಿಸಿ ಕೋಳ್ಳೋಣ" ಎಂದ.

-೧೨-

ಭಾನುವಾರವನ್ನು ಗೌರಿ ತುದಿಗಾಲಿನಲ್ಲಿ ನಿರೀಕ್ಷಿಸುತ್ತಿದ್ದಳು. ಹಿಂದಿನ ದಿನ ಸುರೇಶನ ಜೊತೆ ಪೇಟೆಗೆ ಹೋಗಿ, ತಮ್ಮಂದಿರಿಗೆ ತಂಗಿಗೆ ಹೊಸ ಬಟ್ಟೆಗಳನ್ನೂ ಆಟದ ಸಾಮಾನನ್ನೂ ತೆಗೆದುಕೊಂಡಳು. ತನ್ನ ಬಟ್ಟೆಗಳನ್ನೆಲ್ಲ ಶುಕ್ರವಾರವೇ ಪೆಟ್ಟಿಗೆಗೆ ಸರಿಪಡಿಸಿ ಇಟ್ಟುಕೊಂಡಳು.

ಶನಿವಾರ ಸಂಜೆ ಮನೆಗೆ ಬಂದ ಸುರೇಶ,

"ಸುರೇಶ, ಕಲ್ಯಾಣಿ ತನ್ನನ್ನೇ ನೋಡಿ ನಗುತ್ತಿರುವದು ಗೌರಿಗ ತಿಳಿತು"

"ತುಂಬಾ 'ಸಾರಿ' ಪುಟ್ಟಾ, ನಾಳೆ ಜರ್ಮನಿಯಿಂದ ಒಂದು ಸ್ಟಡಿ ಟೀಮ್ ಬರುತ್ತದೆ. ನಮ್ಮ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಿದ್ದಾದರಿಂದ ನಾನು ಊರು ಬಿಟ್ಟು ಬರೋಹಾಗಿಲ್ಲ" ಎಂದ ಗೌರಿಗೆ ಏನು ಹೇಳಬೇಕೆಂದೇ ತೋಚಲಿಲ್ಲ. ಸ್ವಲ್ಪ ಯೋಚಿಸಿ,

"ನನ್ನ ಹಳ್ಳಿಗೆ ಬೆಳಿಗ್ಗೆ ಬೇಗ ಬಿಟ್ಟುಬಿಟ್ಟು, ನೀವು ಬಂದುಬಿಡೋರಂತೆ." ಎಂದಳು.

"ಆಹಾ ಎಂತಾ ಚೆನ್ನಾಗಿ ಹೇಳಿದೆಯೋ, ಹಳ್ಳಿಗೆ ಹೋಗಲು ಎರಡು ಗಂಟೆ. ವಾಪಸು ಬರಲು ಎರಡು ಗಂಟೆ ಬೇಕು. ಅವರೆಲ್ಲ ಬೆಳಿಗ್ಗೆ ಎಂಟು ಗಂಟೆಗೇ ಬರ್ತಾರೆ. ಏರೋಡ್ರೋಮಿಗೆ ಹೋಗಿ ಎದುರುಗೊಳ್ಳಬೇಕು" ಎಂದ.

"ಹಾಗಾದರೆ ಒಂದು ಕೆಲಸ ಮಾಡಿ. ನನ್ನ ರೈಲಿನಲ್ಲೋ ಬಸ್ಸಿನಲ್ಲೋ ಕೂರಿಸಿ ಬಿಡಿ. ನಾನು ತುಮಕೂರಿನಲ್ಲಿ ಕೌಸಲ್ಯತ್ತೆ ಮನೆಗೆ

ಹೋಗಿ ಅಲ್ಲಿಂದ ಹಳ್ಳಿಗೆ ಆಳು ಕಳಿಸಿ ಗಾಡಿ ತರಿಸಿಕೊಂಡು ಹೋಗ್ತೇನೆ"

"ಅಬ್ಬಾ ಅಂತೂ ಹೋಗ್ಲೇಬೇಕೂನ್ನು"

"ಹುಂ. ಸೋಮವಾರನೇ ಹಬ್ಬ. ನಾನು ಮಾವಯ್ಯನ ಜೊತೇನೇ ಹೊರಟು ಹೋಗಬೇಕಾಗಿತ್ತು."

"ಹಬ್ಬಕ್ಕೇನು. ಇಲ್ಲೇ ಆಗತ್ತೇ ಬಿಡು"

ಈಗ ಗೌರಿಗೆ ನಿಜವಾಗಿ ದುಃಖವಾಯಿತು. ಎಂಟು ದಿನದಿಂದ ಮನಸ್ಸಿನಲ್ಲೇ ತಾನು ಪಟ್ಟ ಸಂಭ್ರಮವೆಲ್ಲ ದಂಡವೇ. ಹಳ್ಳಿಯಲ್ಲಿ ತಾನು ಮೊದಲ ಸಲ ಬರುವೆನೆಂದು ಎಲ್ಲರೂ ಎಷ್ಟು ಆಸೆಯಾಗಿರುತ್ತಾರೋ...

ಸುರೇಶ ಇದ್ದಕ್ಕಿದ್ದಂತೆ ನಕ್ಕು,

"ಸದ್ಯ ಅಳು ಶುರು ಮಾಡಬೇಡ ಮಹಾರಾಯ್ತಿ. ನಾನು ಹೇಳಿದ್ದೆಲ್ಲ ಸುಳ್ಳು. ಎಂಟು ದಿನ ರಜ ಹಾಕಿದ್ದೇನೆ. ಇಬ್ಬರೂ ಹೋಗಿ ಬರೋಣ." ಎಂದ.

ಗೌರಿ ಆನಂದದಿಂದ, "ಹುಡುಗಾಟಕ್ಕೂ ಒಂದು ಮಿತಿಯಿಲ್ಲ ನಿಮ್ಮದು" ಎಂದಳು.

ಮನೆ ಬಾಗಿಲಿಗೆ ಕಾರು ಹೋದಾಗ ಹಳ್ಳಿಯ ಮಕ್ಕಳೆಲ್ಲ ಅದರ ಸುತ್ತ ಮುತ್ತಿಕೊಂಡರು. ಭಟ್ಟರು, "ಏಯ್ ನಡೀರೋ ಅತ್ಲಾಗೆ" ಎಂದು ಕೂಗಿ ಎಲ್ಲರನ್ನೂ ಚದುರಿಸಿದರು.

ಗೌರಿ, ಎಷ್ಟೋ ವರ್ಷಗಳ ನಂತರ ತವರಿಗೆ ಬಂದಂತಾಗಿತ್ತು. ಮನೆಮಂದಿಗೆಲ್ಲ ಕಾಲು ಮುಟ್ಟಿ ನಮಸ್ಕರಿಸಿದಳು. ಶಾರಿಯನ್ನು ಎತ್ತಿ ಮುದ್ದಾಡಿದಳು. ಸುಬ್ಬ, ಶೀನರನ್ನು ಕರೆದು ತಾನು ತಂದಿದ್ದ ಸಾಮಾನನ್ನೆಲ್ಲ ಕೊಟ್ಟಳು. ಮೈತುಂಬಿಕೊಂಡು ಬಂದಿದ್ದ ಮಗಳನ್ನು ತಾಯಿ ಅಕ್ಕರೆಯಿಂದ,

"ಚೆನ್ನಾಗಿಟ್ಟುಕೊಂಡಿದಾರೇನಮ್ಮ ನಿಮ್ಮ ಅತ್ತೆ?" ಎಂದು ಕೇಳಿದರು. "ಓ... ನನಗೇನಮ್ಮ ಕಮ್ಮಿ" ಎಂದಳು ಗೌರಿ.

ತಾಯಿ, ಮಗಳು ಎಷ್ಟೋ ಹೊತ್ತು ಮಾತಾಡಿದರು ಗೌರಿ ದನದ ಕೊಟ್ಟಿಗೆಗೆ ಓಡಿ ಹೋಗಿ ತನಗೆ ಸಮಾಧಾನವಾಗುವ ವರೆಗೆ ತನ್ನ ಮುದ್ದು ಕರುವನ್ನು ಮುದ್ದಿಸಿದಳು. ಕಾರಾಗೃಹದಿಂದ ಹೊರಗೆ ಬಂದ ಖೈದಿಯಂತೆ ಅವಳು ಓಡಾಡುತ್ತಿರುವುದನ್ನು ನೋಡಿದಾಗ ಸುರೇಶನಿಗೆ,

'ಅಲ್ಲೇಕೆ ಇವಳು ಹೀಗಿರಬಾರದು' ಎನಿಸಿತು. ಹಗಲೆಲ್ಲ ನೆರೆಹೊರೆಯವರು, ಮನೆಯವರು ಗೌರಿಯನ್ನು ಬಿಡಲೇ ಇಲ್ಲ. ತನ್ನ ಕೈಗೆ ಸಿಕ್ಕಿದಾಗ ಗೌರಿಯನ್ನು ಸುರೇಶ ಅದೇ ಮಾತು ಕೇಳಿದ. ಗೌರಿ, ತಡೆ ತಡೆದು ಹೇಳಿದಳು,

"ನಿಮ್ಮ ಮನೇಲಿ ಎಲ್ಲಾ ತುಂಬಾ ಬುದ್ಧಿವಂತರು. ನನಗೆ ಮಾತಾಡಿದರೆ ಎಲ್ಲಿ ತಪ್ಪಾಗುತ್ತೋ ಅಂತ ಭಯ"

"ಅದಕ್ಕೆ inferiority complex ಅಂತ ಹೆಸರು"

"ಹೆಸರು ಏನಾದರೇನು? ಇಲ್ಲಿ ಎಲ್ಲಾ ನನ್ನಂತಹವರೆ. ಅದೂ ಅಲ್ಲದೆ ನಾನು ಹುಟ್ಟಿ ಬೆಳೆದ ಮನೆ"

"ಅಲ್ವೇ ಹುಡುಗಿ, ನನ್ನ ಹತ್ರ ಮಾತ್ರ ಒಳ್ಳೇ ಬಜಾರಿಯಂತೆ ಮಾತಾಡ್ತೀಯಲ್ಲಾ!"

ಗೌರಿ ಬಿದ್ದು ಬಿದ್ದು ನಕ್ಕಳು. ನಂತರ, "ನೀವು ಅವರೆಲ್ಲರ ಹಾಗಲ್ಲ..." ಎಂದಳು.

"ಮತ್ತೆ ನನ್ನ ಹತ್ತಿರ ಮಾತ್ರ ಏನಾದರೂ ಮಂತ್ರ ವಿದ್ಯೆ ಇದೆಯೇನು?"

"ಊಂ ಹೂಂ... ನೀವು ಮನುಷ್ಯರೇ ಅಲ್ಲ"

"ಅಂ... ಮತ್ತೆ?"

"ನೀವು ದೇವರು."

"ಹುಚ್ಚು ಹುಡುಗಿ"

ಸಂತೃಪ್ತ ಭಾವ ಹಿತವಾಗಿ, ಸುಖವಾಗಿ, ಮಲ್ಲಿಗೆಯ ಪರಿಮಳದಂತೆ ಇಬ್ಬರಲ್ಲೂ ಹರಡಿತು

ದಿನಗಳು ಕ್ಷಣಗಳಂತೆ ಉರುಳುತ್ತಿದ್ದುವು. ಒಂದು ದಿನ ತೋಟದ ಕಾಲುವೆಯಲ್ಲಿ ಇಬ್ಬರೂ ಕಾಲಾಡಿಸುತ್ತ ಕುಳಿತಿದ್ದಾಗ ಗೌರಿ,

"ಹೀಗೆ ಕೇಳ್ತೀನಿ ಅಂತ ಏನೂ ತಿಳಿಕೋಬೇಡಿ. ನಿಮಗೆ ಬೇರೆ ಊರಿಗೆ ವರ್ಗ ಆಗೋಲ್ವೆ?" ಎಂದಳು.

TELEGRAMS : "TEXTILE"　　T. Phones : Res. 2, Off. 3

SREE GANESAR TEXTILE MILLS LTD.,

DAVANGERE CITY

WELL KNOWN FOR

Best quality Cotton & Staple Fibre Yarn

10s to 80s

BOTH SINGLE AND DOUBLE

MANUFACTURED ON

Rehabilitated Latest Modern Machinery

MANAGING AGENTS

G. MAHADEVAPPA & BROTHERS

DAVANGERE CITY

With Happy Deepawali Greetings

ಸುರೇಶ ಆಶ್ಚರ್ಯದಿಂದ.

"ಯಾಕೆ ಪುಟ್ಟಾ, ನಿನಗೆ ಬೆಂಗಳೂರು ಇಷ್ಟ ಇಲ್ವೆ?" ಎಂದ.

"ಇದೆ. ಆದ್ರೆ ನಾವಿಬ್ಬರೇ ಹೀಗೆ ಆನಂದವಾಗಿರೋದು ಯಾವಾಗ?"

ನಿರ್ಬಂಧದಿಂದ ದೂರವಾಗಿ ಹಕ್ಕಿಯಂತೆ ಸ್ವೇಚ್ಛೆಯಾಗಿರಲು ಬಯಸುತ್ತಿದ್ದಳು ಗೌರಿ. ಅದರಲ್ಲಿ ತಪ್ಪೇನು? ಎನಿಸಿತು ಸುರೇಶನಿಗೆ.

"ಸದ್ಯಕ್ಕೆ ಆಗೋಹಾಗಿಲ್ಲ ಪುಟ್ಟಾ. ಮುಂದೆ ನೋಡಬೇಕು"

"ಹಾಗೆ ನಾವಿಬ್ಬರೇ ಇದ್ದರೆ ನನ್ನ ವಿದ್ಯಾಭ್ಯಾಸಾನೂ ಸರಿಯಾಗಿ ನಡೀಬಹುದು".

"ಅದಕ್ಕೂ ಇದಕ್ಕೂ ಏನು ಸಂಬಂಧ?"

"ಇಲ್ಲಿ ಮಾತುಮಾತಿಗೆ ಅಮ್ಮ ಪಮ್ಮಿ ಏನಾದರೂ ಅಂದು ಹಂಗಿಸುತ್ತಾರೆ. ನನಗೆ ಮನಸ್ಸಿಗೆ ಬೇಜಾರಾಗಿ ಮಂಕು ಕವಿದ ಹಾಗಾಗುತ್ತೆ. ಮಾತಾಡಿದರೂ ತಪ್ಪು, ಸುಮ್ಮನಿದ್ದರೂ ತಪ್ಪು. ಇದೆಲ್ಲ ನಿಮ್ಮ ಹತ್ತಿರ ಹೇಳಿ ನಿಮ್ಮ ನಿಮ್ಮಲ್ಲೇಕೆ ಜಗಳ ತರಲಿ ಅಂತ ನಾನು ಸುಮ್ಮನಿರ್ತಾ ಇದ್ದೆ."

ಸುರೇಶ ಮೌನವಾಗಿ ಯೋಚಿಸತೊಡಗಿದ. ಗೌರಿ ಹೇಳುವುದರಲ್ಲೂ ಅರ್ಥವಿತ್ತು. ಹಾಗಾದರೂ ತನ್ನ ಕನಸು ನನಸಾಗುವುದಾದರೆ ಏಕೆ ಪ್ರಯತ್ನ ಪಡಬಾರದು ಎಂದುಕೊಂಡ.

ಎಂಟು ದಿನ ಕಳೆದು ಬೆಂಗಳೂರಿಗೆ ಬರುವ ವೇಳೆಗೆ ಅವನಿಗೆ ತುಂಬ ಅಸಮಾಧಾನವುಂಟು ಮಾಡುವಂತಹ ಸುದ್ದಿಯೊಂದು ಕಾದಿತ್ತು. ನಾಲ್ಕು ವರ್ಷಗಳ ಕೆಳಗೆ ಅವನ ಶಿಷ್ಯರಾಗಿದ್ದವರಿಬ್ಬರಿಗೆ ಸುರೇಶನಿಗಿಂತ ಮೇಲಿನ ಕೆಲಸಗಳಿಗೆ ಬಡ್ತಿ ಕೊಟ್ಟಿದ್ದರು. ಒಂದು ವರ್ಷದಿಂದ ಖಾಲಿಯಿದ್ದ ಆ ಕೆಲಸಗಳಲ್ಲಿ ಒಂದಂತೂ ತನಗೆ ಖಂಡಿತ ಸಿಗುವುದೆಂಬ ಭರವಸೆಯಿದ್ದ ಸುರೇಶನಿಗೆ ಈಗ ತುಂಬಾ ಜಿಗುಪ್ಸೆಯಾಯಿತು. ಆ ಅಸಮಾಧಾನದ ಬೆಂಕಿ ಉರಿಯುತ್ತಿದ್ದಾಗಲೇ ಯಾರ ಸಲಹೆಯನ್ನೂ ಕೇಳದೆ ಕೆಲಸಕ್ಕೆ ರಾಜೀನಾಮೆಯಿತ್ತು ಬಂದ. ವಿಶ್ವನಾಥರಾಯರಿಗೆ ಇದರಿಂದ ಏನೂ ಸಂತೋಷವಾಗಲಿಲ್ಲ. ವಿಶಾಲಾಕ್ಷಮ್ಮನೂ ಮೌನವಾಗಿಯೇ ಅವನು ಮಾಡಿದ ಕೆಲಸ ತಮಗಿಷ್ಟವಾಗಲಿಲ್ಲವೆನ್ನುವುದನ್ನು ತೋರ್ಪಡಿಸಿಕೊಂಡರು.

ಗೌರಿ ಮಾತ್ರ ಉತ್ಸಾಹದಿಂದ,

"ಹೋದರೆ ಹೋಗಲಿ ಬಿಡಿ. ಬೇರೆ ಯಾವುದಾದರೂ ದೂರದ ಊರಿನಲ್ಲಿ ಕೆಲಸ ಸಿಕ್ಕಿದರೆ ಹೊರಟು ಹೋಗೋಣ. ಅಷ್ಟೊಂದು ಓದಿದೀರಾ. ನಿಮಗೆ ಕೆಲಸ ಸಿಗೋದೊಂದು ಕಷ್ಟವಾ?" ಎಂದಳು.

ಅಂದಿನಿಂದಲೇ ಸುರೇಶ ನಾನಾ ವಿಶ್ವವಿದ್ಯಾನಿಲಯಗಳಿಗೆ ಅರ್ಜಿಗಳನ್ನು ಕಳಿಸಲಾರಂಭಿಸಿದ. ಜಯಪುರ, ನಾಗಪುರ, ಕಲಕತ್ತಾ, ಹೀಗೆ ಹಲವು ಕಡೆಗಳಿಗೆ 'ಇಂಟರ್‌ವ್ಯೂ'ಗೆ ಸಹ ಹೋಗಿ ಬಂದ. ಎಲ್ಲಿಯೂ ಏನಾದರೂ ಅನುಕೂಲವಾಗುತ್ತಿತ್ತು.

ಸುರೇಶ ತಾನು ಅಮೇರಿಕೆಯಲ್ಲಿದ್ದಾಗ ತನ್ನ ಬುದ್ಧಿಶಕ್ತಿಯನ್ನು ಬಹಳವಾಗಿ ಮೆಚ್ಚಿ, ಬೆನ್ನು ತಟ್ಟಿ ಪ್ರೋತ್ಸಾಹಿಸಿ, ಅಲ್ಲಿಯೇ ಬೇಕಾದರೆ ಕೆಲಸ ಕೊಡುವುದಾಗಿ ಹೇಳುತ್ತಿದ್ದ ಪ್ರೊಫೆಸರರೊಬ್ಬರಿಗೆ ಕಾಗದವನ್ನೂ ಬರೆದಿದ್ದ. ಒಂದೆರಡು ತಿಂಗಳ ನಂತರ ಅವರಿಂದ ಉತ್ತರ ಬಂದಿತ್ತು. ದೆಹಲಿಯಲ್ಲಿರುವ ತಮ್ಮ ಎಂಬೆಸಿಯವರನ್ನು ನೋಡಬೇಕಾಗಿಯೂ, ತಮ್ಮ ಕೈಲಾದ ಸಹಾಯ ಮಾಡುವುದಾಗಿಯೂ ತಿಳಿಸಿದ್ದರು.

"ಹೀಗೆ ಕೇಳ್ತೀನಿ ಅಂತ ಏನೂ ತಿಳಿಕೋಬೇಡಿ. ನಿಮಗೆ ಬೇರೆ ಊರಿಗೆ ವರ್ಗ ಆಗೋಲ್ವೆ?" ಎಂದಳು

ಸುರೇಶ ಸ್ವಲ್ಪವೂ ತಡಮಾಡದೆ ದೆಹಲಿಗೆ ಹೊರಡಲು ನಿಶ್ಚಯಿಸಿದ. ಹೇಗೂ ನಿರ್ಮಲೆಯ ಮನೆ ಇದ್ದುದರಿಂದ ಗೌರಿಯನ್ನು ಕರೆದುಕೊಂಡು ಹೋಗಲು ಯಾವ ಅಡಚಣೆಯೂ ಇರಲಿಲ್ಲ.

ಇಬ್ಬರಿಗಾಗಿಯೇ ಒಂದು 'ಕೂಪೆ' ರಿಸರ್ವ್ ಮಾಡಿಸಿದ್ದರಿಂದ ರೈಲಿನಲ್ಲಿ ಬೇರೆ ಯಾರ ಕಾಟವೂ ಇರಲಿಲ್ಲ.

ಗೌರಿಗೆ ಪರಮಾಶ್ಚರ್ಯ. ಅವಳು ರೈಲಿನಲ್ಲಿ ಹೋಗಿದ್ದುದು ಒಂದೇ ಸಲ. ಅದೂ ತಾನು ಇನ್ನೂ ಲಂಗ ಧರಿಸುತ್ತಿದ್ದಾಗ. ನಂಜುಂಡೇಶ್ವರನಿಗೊಂದು ಹರಕೆಯನ್ನು ಸಲ್ಲಿಸಲು ಭಟ್ಟರು, ತಾಯಿ, ಮಡದಿ, ಪುಟ್ಟಗೌರಿ ಮತ್ತು ಸುಬ್ಬನೊಡನೆ ಹೋಗಿದ್ದರು. ಆಗ ಶೀನಿ, ಶಾರಿ ಇನ್ನೂ ಹುಟ್ಟಿರಲಿಲ್ಲ. ರೈಲಿನಲ್ಲಿ ಅಸಾಧ್ಯ ಜನ. ಆ ಗಲಾಟೆಯನ್ನು ತಡೆಯಲಾರದೆ ತಾನು ಸುಬ್ಬ ಇಬ್ಬರೂ ಅಳುವುದಕ್ಕೆ ಶುರು ಮಾಡಿದಾಗ ತಾಯಿ ಇಬ್ಬರಿಗೂ ಎರಡೇಟು ಹಾಕಿ, ಅಲ್ಲೇ ಒಂದು ಪೆಟ್ಟಿಗೆಯ ಮೇಲೆ ಕೂರಿಸಿದ್ದರು. ಪಕ್ಕದಲ್ಲಿ ಕುರುಚಲು ಗಡ್ಡದ ಮನುಷ್ಯನೊಬ್ಬ ಬೀಡಿ ಸೇದುತ್ತಿದ್ದ. ಹಿಂದುಗಡೆ ಮುದುಕಿಯೊಬ್ಬಳು ಎಲೆಯಡಿಕೆ ಅಗಿಯುತ್ತ ಗಾಡಿಯಲ್ಲಿದ್ದವರನ್ನೆಲ್ಲ ಬಯ್ಯುತ್ತಿದ್ದಳು. ನಂಜನಗೂಡಿನಲ್ಲಿ ಸೇವೆ ಮುಗಿಸಿಕೊಂಡು ಹಿಂತಿರುಗುವಾಗಲೂ ಹೆಚ್ಚುಕಡಿಮೆ ಅದೇ ರೀತಿಯ ಅನುಭವವಾಗಿತ್ತು.

ಗೌರಿ ಆಶ್ಚರ್ಯವನ್ನು ತಡೆಯಲಾರದೆ, "ಇದೇನು ರೈಲಲ್ಲಿ ಗಲಾಟೇನೇ ಇಲ್ಲ. ಕೆಟ್ಟುಗಿಟ್ಟು ಹೋಗಿದೆಯೋ ಏನು" ಎಂದಳು. ಸುರೇಶ, "ಹೌದು ಅಂತ ಕಾಣತ್ತೆ. ನಂಗೆ ಹೊಳೀಲೇ ಇಲ್ಲ. ಬೇರೆ ಕಡೆ ಕೂತ್ಕೊಳ್ಳೋಣ ಬಾ" ಎಂದ. ಗೌರಿ ಏಳಲು ಸಮಿಸಿದಳು, ಸುರೇಶ ಅವಳ ಕೈಹಿಡಿದು ಕೂರಿಸಿ, "ಇದು ಫಸ್ಟ್ ಕ್ಲಾಸ್ ಗಾಡಿ, ಪುಟ್ಟಾ. ಥರ್ಡ್ ಕ್ಲಾಸಾದರೆ ತುಂಬಾ ಗಲಾಟೆ ಇರತ್ತೆ. ದುಡ್ಡು ಹೆಚ್ಚಾಗಿ ಕೊಟ್ಟಷ್ಟೂ ಸೌಕರ್ಯ ಜಾಸ್ತಿ" ಎಂದು ವಿವರಿಸಿದ.

ದೂರದ ಊರಿಗೆ ಹೋಗುವ ಉತ್ಸಾಹದಲ್ಲಿ ಗೌರಿ, ಸುರೇಶನ ಕುಚೋದ್ಯವನ್ನು ಸಹಿಸಿದಳು.

ಮದರಾಸಿನಲ್ಲಿ ಎರಡು ಗಂಟೆಗಳ ಕಾಲ ಅವಕಾಶವಿದ್ದುದರಿಂದ, ಒಂದು ಟ್ಯಾಕ್ಸಿ ಗೊತ್ತು ಮಾಡಿಕೊಂಡು ಅಣ್ಣ ರಮೇಶನ ಮಾವನವರ ಮನೆಗೆ ಕರೆದುಕೊಂಡು ಹೋದ. ಎಡ್ವರ್ಡ್ ಎಲಿಯಟ್ ರೋಡಿನಲ್ಲಿದ್ದ ಆ ಭವ್ಯ ಬಂಗಲೆ ಅರಮನೆಯಂತಿತ್ತು. ಗೇಟಿನ ಮುಂದೆ ಒಬ್ಬ ಗೂರ್ಖಾ ನಿಂತಿದ್ದ. ವಿಶಾಲವಾದ ಕಾಂಪೌಂಡಿನಲ್ಲಿ ಬಣ್ಣಬಣ್ಣದ ಹೂಗಿಡಗಳು, ಮರಗಳು ಮಧ್ಯೆ, ರಾಧಾಕೃಷ್ಣರ ವಿಗ್ರಹವಿದ್ದ ಒಂದು ನೀರಿನ ಚಿಲುಮೆ. ಅಲ್ಲಲ್ಲಿ ಒಂದೆರಡು ಕಾರುಗಳು, ಎರಡು ಜೀಪು ನಿಂತಿದ್ದವು. ಸುರೇಶ ಬಾಗಿಲಿನಲ್ಲಿ ನಿಂತಿದ್ದ ಜವಾನನ ಕೈಗೆ, ತನ್ನ ಹೆಸರಿದ್ದ ಒಂದು ಕಾರ್ಡನ್ನು ಕೊಟ್ಟು ಕಳಿಸಿದ. ಹತ್ತು ನಿಮಿಷಗಳ ನಂತರ ರಮೇಶನ ಮಾವ ಕೋದಂಡರಾಮ್ ಅವರು ಬಂದು ಸುರೇಶನನ್ನು ಆದರದಿಂದ ಒಳಗೆ ಕರೆದೊಯ್ದರು. ಗೌರಿ ಆ ಮನೆಯ ಶೃಂಗಾರವನ್ನು ನೋಡಿ ಬೆಕ್ಕಸ ಬೆರಗಾದಳು. ಕಾಲಿಟ್ಟರೆ ಎಲ್ಲಿ ಮಾಸುವುದೋ ಎನ್ನುವಂತಹ ರತ್ನಕಂಬಳಿಗಳು, ಡನ್‌ಲೋಪಿಲ್ಲೊ ಮೆತ್ತೆ ಹಾಕಿದ ಸೋಫಾ ಕುರ್ಚಿಗಳು. ಗೌರಿಯ ದೃಷ್ಟಿ ಬಲಗಡೆ ಮೂಲೆಗೆ ಹೊರಳಿದಾಗ, ಅವಳಿಗೆ ಚಿಟ್ಟನೆ ಚೀರುವಂತಾಯ್ತು. ಅಲ್ಲಿ ಒಂದು ಸಿಂಹ ಎರಡು ಕಾಲನ್ನು ಮೇಲೆತ್ತಿ ಇನ್ನೇನು ಮೈಮೇಲೆ ಹಾರಿ ಬರುವಂತೆ ಬಾಯ್ತೆರೆದು ನಿಂತಿತ್ತು. ಗೌರಿ, ಕೋದಂಡರಾಮ್ ಒಳಕ್ಕೆ ಹೋದಾಗ,

“ಇದೇನು ಸಿಂಹ ಸಾಕಿದಾರೆ? ” ಎಂದಳು.

“ಅದು ಸತ್ತು ಹೋಗಿರೋ ಸಿಂಹ. ಸ್ಟಫ್ ಮಾಡಿ ಇಟ್ಟಿದ್ದಾರೆ. ಹಾಗಂದರೆ ಏನು ಅಂತ ನಿಧಾನವಾಗಿ ಹೇಳ್ತೀನಿ” ಎಂದ. ಕೋದಂಡರಾಮರ ಮಡದಿ ಹೊರಗೆ ಬಂದು ಆತ್ಮೀಯತೆಯಿಂದ,

“ನಮ್ಮ ಚಂದ್ರನ ನಾದಗಿತ್ತಿ ಅಲ್ಲವೇನಮ್ಮ? ಮಗು ಆರತಿ ಅಂತೂ ಎಷ್ಟೋ ದಿನದ ವರೆಗೆ ನಿನ್ನ ಜ್ಞಾಪಿಸಿಕೊಳ್ತಾ ಇದ್ದಳು” ಎಂದರು. ದೊಡ್ಡ ಮನುಷ್ಯರಾದರೂ ತಮಗಿಂತ ದೊಡ್ಡವರ ಮಧ್ಯೆ ಓಡಾಡಿ ಅನುಭವವಿದ್ದ ಆಕೆ ಸೌಜನ್ಯದ ಮೂರ್ತಿಯಾಗಿದ್ದರು. ಅವರ ಆದರದ ಆತಿಥ್ಯವನ್ನು ಸ್ವೀಕರಿಸಿ, ಬೀಳ್ಕೊಂಡು, ಸುರೇಶ ಗೌರಿಗೆ ಸಮುದ್ರವನ್ನು ತೋರಿಸಲು ಕರೆದೊಯ್ದ.

ಆ ಜಲರಾಶಿಯನ್ನು ನೋಡಿದಾಗ ಗೌರಿ “ಅಬ್ಬಬ್ಬಾ” ಎನ್ನುತ್ತ ಅಲ್ಲೇ ನಿಂತುಬಿಟ್ಟಳು. ಅವಳ ಹಳ್ಳಿಯ ಕೆರೆಯೇ ಬಹಳ ದೊಡ್ಡದೆಂದು ತಿಳಿದಿದ್ದ ಅವಳು ನದಿ, ಸಮುದ್ರಗಳ ವರ್ಣನೆಯನ್ನು ಕೇಳಿದ್ದಳಾದರೂ ಎದುರಿಗೆ ನೋಡಿದಾಗ ಉಂಟಾದ ಭಾವನೆ ಬೇರೆಯದಾಗಿತ್ತು. ಮೇಲೆದ್ದು, ಕೆಳಕ್ಕೆ ಅಪ್ಪಳಿಸಿ ಓಡೋಡಿ ಬರುವ ಭಾರಿ ಅಲೆಗಳನ್ನು ನೋಡಿ ಗೌರಿ, “ಹತ್ತಿರ ಹೋಗೋದು ಬೇಡ. ಇಲ್ಲೇ ಇರೋಣ” ಎಂದಳು. ಸುರೇಶ ಅಲೆಯೊಡನೆ ಆಡುತ್ತಿದ್ದ ಚಿಕ್ಕ ಮಕ್ಕಳನ್ನು ತೋರಿಸಿ,

“ಏನೂ ಆಗೋಲ್ಲ. ಚೆನ್ನಾಗಿರತ್ತೆ ಬಾ” ಎಂದು ಅವಳ ಕೈಹಿಡಿದು ಮುಂದೆ ಮುಂದೆ ನಡೆದ. ಗೌರಿ ನಾಚಿ, “ಇದೇನು ಹಾಡು ಹಗಲಲ್ಲೇ ಹೀಗೆ ಹೋಗೋದು. ಯಾರಾದ್ರೂ ನೋಡಿದರೆ? ” ಎಂದು ತಲೆತಗ್ಗಿಸಿದಳು.

“ನೋಡಿದರೆ ನೋಡಿದರು. ಗಂಡ-ಹೆಂಡತಿ ಅನ್ಯೋನ್ಯವಾಗಿದ್ದಾರೆ. ಅಂದುಕೊಳ್ತಾರೆ ಅಷ್ಟೆ. ನೋ ಅಲ್ಲಿ ನೋಡು...” ಎಂದು ತೋರಿಸಿದ.

ಎಳೆವಯಸ್ಸಿನ ದಂಪತಿಗಳು ತಮ್ಮ ಅನ್ಯೋನ್ಯತೆಯನ್ನು ವಿವಿಧ ಭಾವಭಂಗಿಗಳಿಂದ ಪ್ರದರ್ಶಿಸುತ್ತ ಸುತ್ತಲಿನ ಪ್ರಪಂಚದ ಪರಿವೆಯೇ ಇಲ್ಲದೆ ತಮ್ಮಲ್ಲಿ ತಾವೇ ಲೀನವಾಗಿದ್ದರು.

“ಛಿ ಛಿ ನಾಚಿಕೆಗೇಡು” ಎಂದಳು ಗೌರಿ.

ಸುರೇಶ ನಕ್ಕು, “ನಿಮ್ಮ ಹಳ್ಳೀಲಿ ಹಾಗಿರಹುದು ಪುಟ್ಟಾ. ಇನ್ನೂ ನಾನು ಹೋಗಿದ್ದ ದೇಶಗಳಲ್ಲಿ ಅವರು ಸದಾ ಸೊಂಟ ಬಳಸಿಕೊಂಡೇ ಓಡಾಡೋದು. ಫ್ರಾನ್ಸ್ ಅಂತ ಒಂದು ದೇಶ ಇದೆ. ಅಲ್ಲಂತೂ ರೈಲ್ವೇ ಸ್ಟೇಶನ್ನಿನಲ್ಲಿ ಸಹ ಒಬ್ಬರನ್ನೊಬ್ಬರು ಕಟ್ಟಿಕೊಂಡು ಮುದ್ದಾಡ್ತಾ ಇರ್ತಾರೆ.”

“ನಂಗೆ ಕೇಳೋಕೇ ನಾಚಿಕೆ ಆಗತ್ತಪ್ಪ. ನೀವು ಅದನ್ನೆಲ್ಲ ನೋಡ್ತಾ ಇದ್ರಾ?”

“ಎದುರಿಗೇ ನಡೆದ ಮೇಲೆ ನೋಡದೆ ಇರೋದು ಹೇಗೆ ಹೇಳು. ಹೋಗಲಿ ಬಿಡು. ಈ ಸಮುದ್ರ ನೋಡು. ಬಾ. ಅಲೆಯೊಳಗೆ ಕಾಲು ಬಿಟ್ಟುಕೊಂಡು ನಿಂತುಕೊಳ್ಳೋಣ.”

“ಊಂ... ನಾನು ಬರೋಲ್ಲ.”

“ಏನೂ ಆಗಲ್ಲ ಬಾಮ್ಮ ಪರವಾಗಿಲ್ಲ....” ಎಂದು ಸುರೇಶ ಗೌರಿಯನ್ನು ಸಮುದ್ರದ ಅಂಚಿಗೆ ಕರೆದೊಯ್ದ. ಮೊದಲ ಅಲೆಗಳು ಬಂದಾಗ ಸಣ್ಣದಾಗಿ ಚೀರಿ ಸುರೇಶನನ್ನು ಭದ್ರವಾಗಿ ಹಿಡಿದುಕೊಂಡಳು. ಕ್ರಮೇಣ ಅವಳಿಗೆ ಹರ್ಷದಿಂದ ಕೂಗುವಂತಾಯಿತು.

ಮರಳಿನಲ್ಲಿ ಕಪ್ಪೆ ಚಿಪ್ಪುಗಳನ್ನಾಯ್ದುಕೊಂಡಳು. ಮತ್ತೆ ರೈಲಿಗೆ ಹೋಗಲು ಮನಸ್ಸೇ ಇಲ್ಲದೆ ಅಲ್ಲೇ ಪುನಃಪುನಃ ಕಡಲನ್ನೇ ನೋಡುತ್ತ ನಿಂತುಬಿಟ್ಟಳು. ಸುರೇಶ, “ರೈಲು ತಪ್ಪಿ ಹೋಗುತ್ತೆ. ಇನ್ನೊಂದು ಸಲ ಬರೋಣ ಬಾ” ಎಂದು ಬಲವಂತದಿಂದ ಕರೆದೊಯ್ಯಬೇಕಾಯಿತು.

-೧೩-

ಎರಡು ರಾತ್ರಿಗಳ ಪ್ರಯಾಣದ ನಂತರ ದೆಹಲಿಯನ್ನು ಸೇರಿದರು. ಇನ್ನೂ ರೈಲು ನಿಲ್ಲುವ ಮೊದಲೇ ಅಕ್ಕನನ್ನು ಗುರುತಿಸಿದ ಸುರೇಶ, ಕೈ ಬೀಸಿದ. ಅದಕ್ಕೆ ಉತ್ತರವಾಗಿ ಕೈ ಬೀಸಿದವರು ಮೂರು ಮಂದಿ. ನಿರ್ಮಲ, ಅವಳ ಪತಿ ಸ್ವಾಮಿ, ಅವರ ಮಗಳು ನಂದಿನಿ.

ನಿರ್ಮಲ, ಗೌರಿಯನ್ನು ಬಹಳ ಹಳೆಯ ಪರಿಚಯಸ್ಥಳಂತೆ ಮಾತಾಡಿಸಿದಳು. ಸ್ನೇಹಶೀಲನ ಗದ್ದಲ, ಅರಿಯದ ಭಾಷೆಯ ಗಡಿಬಿಡಿಯಲ್ಲಿ ಮಂಕಾಗಿದ್ದ ಗೌರಿಯನ್ನು ಮುಗುಳ್ನಗೆಯಿಂದ ಉತ್ತೇಜನಗೊಳಿಸುತ್ತ,

“ನನ್ನ ತಮ್ಮನ ಹೆಂಡತಿ ಇಂಥಾ ಮುದ್ದಾದ ಹುಡುಗಿ ಅಂತ ನನಗೆ ಗೊತ್ತೇ ಇರಲಿಲ್ಲ...... ಇವಳು ನನ್ನ ಮಗಳು ನಂದಿನಿ. ಹೈಸ್ಕೂಲಿನಲ್ಲಿದ್ದಾಳೆ” ಎಂದಳು.

ನಿರ್ಮಲ ಸಾದಾ ಉಡುಗೆಯಲ್ಲಿದ್ದು ಸರಳವಾಗಿ ಮಾತಾಡುತ್ತಿದ್ದಳು. ಆದರೂ ಗೌರಿಗೆ, ಏನೋ ಸಂಕೋಚ.

ಕಾರಿನಲ್ಲಿ ಐದಾರು ಮೈಲಿಗಳು ಹೋದ ನಂತರ ಸ್ವಾಮಿ, “ಇದೇ ನಮ್ಮ ಅಪಾರ್ಟ್‌ಮೆಂಟ್” ಎಂದು ನಕ್ಕರು. ನಾಲ್ಕು ಮಹಡಿಗಳಿದ್ದ ಆ ಮನೆಯನ್ನು ಕತ್ತೆತ್ತಿ ನೋಡುತ್ತಿದ್ದ ಗೌರಿಗೆ.

“ಈ ಮನೆ ಪೂರ್ತಿ ನಮ್ಮದಲ್ಲ. ಕೆಳಗೆ ಮಾಲೀಕರಿದ್ದಾರೆ. ನಮ್ಮದು ಕೊನೇ ಅಂತಸ್ತು. ಮಧ್ಯೆ ಒಬ್ಬರು ಬೆಂಗಾಲಿ, ಒಬ್ಬರು ಮದರಾಸಿ ಇದಾರೆ” ಎಂದರು. ಗೌರಿ, ಇವರುಗಳು ದಿನಾ ಅಷ್ಟೊಂದು ಮೆಟ್ಟಿಲನ್ನು ಹತ್ತಿ-ಇಳಿದು ಹೇಗೆ ಮಾಡುವರೋ ಎಂದು ಯೋಚಿಸುತ್ತಿದ್ದಳು. ಸ್ವಾಮಿ, ಸುರೇಶ್ ಇಬ್ಬರೂ ಸಾಮಾನುಗಳನ್ನೆಲ್ಲ ‘ಲಿಫ್ಟ್’ನಲ್ಲಿಟ್ಟು, ‘ಬನ್ನಿ’ ಎಂದರು. ಗೌರಿ ಮೌನವಾಗಿ ಅವರನ್ನು ಹಿಂಬಾಲಿಸಿದಳು. ಮೆಟ್ಟಿಲನ್ನು ಹತ್ತದೆ ಮೇಲಕ್ಕೆ ಬಂದ ಕೌತುಕದ ಬಗ್ಗೆ ಅವಳಿಗೆ ಬಹಳ ಕುತೂಹಲವಿದ್ದರೂ ಎಲ್ಲರೆದುರಿಗೆ ಏನೂ ಕೇಳಬಾರದೆಂದು ಸುಮ್ಮನಾದಳು.

ಮೇಲೆ ಬಂದ ಕೂಡಲೆ ನಿರ್ಮಲ,

“ನೀನು ಈ ಮೊದಲು ಲಿಫ್ಟ್‌ನಲ್ಲಿ ಬಂದಿರಲಿಲ್ಲ ಅಲ್ಲವೇ? ಐದಾರು ಮಹಡಿಗಳಿರೋ ಕಟ್ಟಡಗಳಲ್ಲಿ ಇದು ತೀರಾ ಅವಶ್ಯಕ. ಬೊಂಬಾಯಿ, ಕಲ್ಕತ್ತಾ, ಡೆಲ್ಲಿಗಳಲ್ಲಿ ಇದು ತುಂಬಾ ಕಾಮನ್. ಬೆಂಗಳೂರು ಎತ್ತರವಾಗಿ ಬೆಳೀತಾ ಇಲ್ಲ. ಹರಡಿಕೊಳ್ಳೋದಿಕ್ಕೆ ಬೇಕಾದ ಹಾಗೆ ಜಾಗ ಇದೆ. ಆದ್ದರಿಂದ ಪರವಾಗಿಲ್ಲ.” ಎಂದಳು. ಮನೆ ಚಿಕ್ಕದಾದರೂ ನೋಡಿದ ಕೂಡಲೆ ಸಂತೋಷವಾಗುವಂತೆ ಗೆಲುವಾಗಿತ್ತು. ನಾಲ್ಕಾರು ದುಂಡನೆಯ ‘ನೈಲಾನ್ ಕೇನ್’ನ ಕುರ್ಚಿಗಳು ಅಲ್ಲಲ್ಲೆ ಸಣ್ಣ ಪುಟ್ಟ ಟೀಪಾಯ್‌ಗಳ ಮೇಲೆ ಹೂದಾನಿ, ಏಷ್‌ಟ್ರೇ, ಗೋಡೆಯ ಮೇಲೆ ಒಂದು ಒಳ್ಳೆಯ ತೈಲವರ್ಣ ಚಿತ್ರ. ನಾಲ್ಕಾರು ಪುಸ್ತಕದ ಷೆಲ್ಫ್‌ಗಳು. ಅಂದವಾಗಿ ಜೋಡಿಸಿದ ಸಣ್ಣ-ದೊಡ್ಡ ಪುಸ್ತಕಗಳು. ಅವುಗಳ ಮಧ್ಯೆ, ಎಲೆಗಳ ಮಧ್ಯೆ ಅರಳಿದ ಹೂವಿನಂತೆ ಒಂದೊಂದು ಅಪರೂಪದ ಕಲಾವಸ್ತುಗಳು.

ನಂದಿನಿ ವಿದ್ಯುತ್ಪಂಖದ ಗುಂಡಿಯೊತ್ತಿ,

“ಬೆಂಗಳೂರಿನಿಂದ ಬಂದವರಿಗೆ ಇಲ್ಲಿ ತುಂಬಾ ಶೆಖೆ” ಎಂದಳು.

ನಿರ್ಮಲ ಎಲ್ಲರಿಗೂ ಉಪ್ಪಿಟ್ಟು, ಕಾಫಿ ತಂದಳು. ಸ್ವಾಮಿ ತಟ್ಟೆಗಳನ್ನು ಎಲ್ಲರ ಕೈಗೆ ಕೊಟ್ಟರು. ಗೌರಿ ಸಂಕೋಚಪಟ್ಟುಕೊಂಡಾಗ,

"ಇಲ್ಲೆಲ್ಲ ಅಡಿಗೆ, ಕೆಲಸದವರು ಸಿಕ್ಕೋದು ತುಂಬ ಕಷ್ಟ. ಎಲ್ಲಾ ಕೆಲಸ ನಾವೇ ಮಾಡಿ ಕೊಳ್ಳುತ್ತೇವೆ" ಎಂದು ವಿವರಿಸಿದರು.

ಸುರೇಶ ತನಗೆ ತಿಳಿದವರು ಕೆಲವರಿಗೆ ಫೋನ್ ಮಾಡಿ ಅವರುಗಳ ಭೇಟಿಗೆ ನಿಗದಿಯಾದ ಕಾಲವನ್ನು ಗೊತ್ತು ಮಾಡಿಕೊಂಡ.

ನಿರ್ಮಲ ಹೇಳಿದಳು,

"ನಾವಿಬ್ಬರೂ ಇವತ್ತು ರಜ ತಗೊಂಡಿದೀವಿ. ಇವತ್ತು ಪ್ರತಿಮಾಗೆ ಮನೆ ಎಲ್ಲಾ ಪರಿಚಯ ಮಾಡಿಕೊಡ್ತೇನೆ. ನಾಳೆಯಿಂದ ನಿಮ್ಮದೇ ರಾಜ್ಯ. ನಾವು ಬೆಳಗ್ಗೆ ಹತ್ತು ಗಂಟೆಗೆ ಹೋದರೆ ಸಂಜೆ ಆರು ಘಂಟೆಗೆ ಬರೋದು" ಗೌರಿ ಕೇಳಿದಳು, "ನಂದಿನಿ?"

"ಅವಳು ಮೂರೂವರೆಗೆ ಬರ್‍ತಾಳೆ. ದಿನಾ ನಾವು ಬರೋವರೆಗೂ ಕೆಳಗಡೆ ಮನೇಲೇ ಇರೋಳು. ಈಗ ಮನೆಗೆ ಬರಬಹುದು."

ಸುರೇಶ ಸ್ನಾನ ಮುಗಿಸಿ, ಗೌರಿಯನ್ನು ಕೇಳಿದ.

"ನಾನು ಕೆಲವರನ್ನ ನೋಡಬೇಕು. ಹೊರಕ್ಕೆ ಹೋಗಿ ಬರ್‍ತೇನೆ. ನೀನು ಮನೇಲೇ ಇರ್‍ತೀಯಾ?"

"ಇನ್ನೇನು ಮಾಡಲಿ?"

"ನಿರ್ಮಲ ತುಂಬ ಒಳ್ಳೆಯವಳು. ನೀನು ಏನೂ ಸಂಕೋಚಪಟ್ಟುಕೊಳ್ಳಬೇಡ..."

"ಆಗಲಿ"

ಸುರೇಶ ಮನೆ ಬಿಟ್ಟು ಹೋದ ಮೇಲೆ ನಿರ್ಮಲ ಗೌರಿಯನ್ನು ಅಡಿಗೆ ಮನೆಗೆ ಕರೆದುಕೊಂಡು ಹೋದಳು. ಅದು ಅಡಿಗೆ ಮನೆಯಂತೆಯೇ ಇರಲಿಲ್ಲ. ಹಳ್ಳಿಯಲ್ಲಿ ಹೆಚ್ಚು ಗಾಳಿ ಬೆಳಕಿಲ್ಲದ ದೊಡ್ಡ ಅಡಿಗೆ ಮನೆ. ಒಂದು ಕಡೆ ಸಾಲಾಗಿ ನೀರು ತುಂಬಿದ ಪಾತ್ರೆಗಳು. ಅಲ್ಲಲ್ಲೇ ಹಗ್ಗವನ್ನು ಕಟ್ಟಿ ತೂಗು ಬಿಟ್ಟಿದ್ದ ಹಾಲು-ಮೊಸರಿನ ಪಾತ್ರೆಗಳು, ದೊಡ್ಡ ಒಲೆ ಪಕ್ಕದಲ್ಲೊಂದು ಚಿಕ್ಕ ಇದ್ದಲೊಲೆ, ಒಂದು ಬದಿಗೆ ಒರಳು ಮತ್ತೊಂದು ಬದಿಗೆ ಒಟ್ಟಿದ ಸೌದೆ ಬೆರಣಿಗಳು-ಅತ್ತೆಯ ಮನೆಯಲ್ಲಿ ಹಾಗಿರಲಿಲ್ಲವಾದರೂ ಮನೆಯವರು ಅಡಿಗೆ ಮನೆ ಪ್ರವೇಶ ಮಾಡುತ್ತಿದ್ದುದೇ ಅಪರೂಪವಾಗಿದ್ದುದರಿಂದ ಅಲ್ಲಿ ಅವ್ಯವಸ್ಥೆಯೇ ಇರುತ್ತಿತ್ತು. ನಿರ್ಮಲ, 'ಇದು ಅಡಿಗೆಮನೆ' ಎಂದು ಹೇಳಿದಾಗ ನಂಬದೆ ಗೌರಿ, "ಲ್ಲ? ಒಲೇನೇ ಇಲ್ಲ?" ಎಂದಳು.

" ಸುರೇಶಗೆ ಹೇಗೆ ಬೇಕೋ ಹಾಗೆ ನಿನ್ನನ್ನು ನೀನು ತಿದ್ದಿಕೊಳ್ಳಬೇಕು. "

ನಿರ್ಮಲ ಅವಳನ್ನು ಒಂದು ಕಟ್ಟೆಯ ಮುಂದೆ ಕರೆದು ನಿಲ್ಲಿಸಿಕೊಂಡು, "ನೋಡು ಇದೇ ಒಲೆ. ಎಲೆಕ್ಟ್ರಿಕ್ ಹಾಟ್‌ಪ್ಲೇಟ್. ಸ್ವಿಚ್ ಒತ್ತಿದರೆ ಹತ್ತಿಕೊಳ್ಳುತ್ತೆ. ಶಾಖ ಹೆಚ್ಚು ಕಡಿಮೆ ಮಾಡಿಕೋಬಹುದು. ಇದು ನೋಡು ಪ್ರೆಷರ್ ಕುಕ್ಕರ್. ಕಾಲು ಗಂಟೆಯಲ್ಲಿ ಅಡಿಗೆ ಆಗುತ್ತೆ"

"ನೀವು ನನ್ನ ಹಾಸ್ಯ ಮಾಡ್ತಾ ಇಲ್ಲ ತಾನೆ? ಕಾಲು ಗಂಟೇಲಿ ಬೇಳೆ ಹೇಗೆ ಬೇಯುತ್ತೆ?"

"ಈಗ ಮಾಡ್ತೀನಿ ನೋಡ್ತಾ ಇರು." ಎಂದು ನಿರ್ಮಲ ಅವಳಿಗೆ ಅದರಲ್ಲಿ ಅಡಿಗೆ ಮಾಡುವ ವಿಧಾನವನ್ನು ತೋರಿಸಿದಳು.

"ಮತ್ತೆ ಒರಳಿಲ್ಲವಲ್ಲಾ ಚಟ್ನಿ, ಗೊಜ್ಜು ಮಾಡಬೇಕಾದರೆ?"

ನಿರ್ಮಲ ರುಬ್ಬುವ ಮೆಷಿನ್ ತೋರಿಸಿ,

"ಇದು ಮಿಕ್ಸಿ ಅಂತ. ಇದರಲ್ಲಿ ಬರೀ ಗೊಜ್ಜು ಚಟ್ನಿ ಮಾತ್ರ ಅಲ್ಲ. ದೋಸೆ ಹಿಟ್ಟು, ಇಡ್ಲಿ ಹಿಟ್ಟು ಎಲ್ಲಾ ರುಬ್ಬಬಹುದು"

"ಹಾ...!" ಗೌರಿ ಆಶ್ಚರ್ಯದಿಂದ ಅದನ್ನು ಹಿಂದೆ ಮುಂದೆ ತಿರುಗಿಸಿ ನೋಡಿದಳು. ತನ್ನ ತವರು ಮನೆಯಲ್ಲಿ ಕಾಯಿ ಸೇರುಗಟ್ಟಲೆ ಬೇಳೆಯನ್ನು ನೆನೆಸಿ ದಡದಡ ಎಂದು ಎಷ್ಟು ಹೊತ್ತು ರುಬ್ಬಿದರೂ ಒಮ್ಮೊಮ್ಮೆ ಅಜ್ಜ, "ಇನ್ನೂ ನುಣ್ಣಗಾಗಬೇಕಾಗಿತ್ತು" ಎನ್ನುತ್ತಿದ್ದರು!

ನಿರ್ಮಲ, ಗೋಡೆಗೆ ಸೇರಿದಂತಿದ್ದ ಬೀರು ಬಾಗಿಲನ್ನು ತೆಗೆದು ಸಾಲುಸಾಲಾಗಿ ಜೋಡಿಸಿದ ಸೀಸೆಗಳನ್ನು ತೋರಿಸಿ,

"ಗಾಜಿನ ಸೀಸೆ. ಅದ್ದರಿಂದ ಮಸಾಲೆ ಪದಾರ್ಥಗಳನ್ನು ಹುಡುಕೋ ತಾಪತ್ರಯ ಇಲ್ಲ. ಎಲ್ಲಾ ಕಾಣತ್ತೆ." ಎಂದಳು.

ಅಡಿಗೆ ಮನೆ ಕಿಟಕಿಗೂ ಸಹ ಅಂದವಾದ ಬಟ್ಟೆಯ ತೆರೆ. ಪಕ್ಕದಲ್ಲಿ ಒಂದು ಮರದ ಸ್ಟ್ಯಾಂಡಿನ ಮೇಲೆ ಒಂದು ಗಡಿಯಾರ. ಅದರ ಪಕ್ಕದಲ್ಲಿ ಮಂಡಿಯ ಮೇಲೆ ಮುಖವಿರಿಸಿ ನಗುತ್ತ ಕುಳಿತಿರುವ ಅವಳಿ ಮಕ್ಕಳ ಬೊಂಬೆಗಳು. ಗೌರಿ,

"ಈ ಗಡಿಯಾರ ಯಾಕೆ?" ಎಂದು ಕೇಳಿದಳು

"ಪ್ರೆಷರ್ ಕುಕ್ಕರ್‌ನಲ್ಲಿ ಅಡಿಗೆ ಮಾಡುವಾಗ ಗಡಿಯಾರ ಇಲ್ಲದೆ ಇದ್ದರೆ ಆಗೋದಿಲ್ಲ..."

"ಆ ಬೊಂಬೆ?"

ನಿರ್ಮಲ ನಗುತ್ತ ಆ ಬೊಂಬೆಗಳಿಗೆ ಟೋಪಿಯಂತಿದ್ದ ಮೇಲ್ಭಾಗವನ್ನು ಮುಚ್ಚಳದಂತೆ ತೆಗೆದಳು. ಒಂದರಲ್ಲಿ ಉಪ್ಪು. ಮತ್ತೊಂದರಲ್ಲಿ ಚಟ್ನಿಪುಡಿ ಇದ್ದುವು!

ಹಾಗೆ ಬಚ್ಚಲು ಮನೆಗೆ ಕರೆದೊಯ್ದು ವಾಷಿಂಗ್ ಮೆಷಿನ್ ಉಪಯೋಗಿಸುವ ವಿಧಾನವನ್ನು ತೋರಿಸಿದಳು, ಯಾರೂ ಮನೆಯಲ್ಲಿಲ್ಲದ ವೇಳೆಯಲ್ಲಿ ಫೋನ್ ಬಂದರೆ ಹೇಗೆ ಉತ್ತರಿಸಬೇಕೆಂದು ತಿಳಿಸಿದಳು.

ಸುರೇಶ ಮನೆಗೆ ಬಂದಾಗ ಒಂದು ಘಂಟೆಯಾಗಿತ್ತು. ಊಟ ಮುಗಿಸಿ ವಿಶ್ರಾಂತಿ ಪಡೆಯುತ್ತಿದ್ದಾಗ ನಿರ್ಮಲ,

"ಪ್ರತಿಮಾ, ನೀನು ಮನೆಯಲ್ಲಿ ಹೊತ್ತು ಹೇಗೆ ಕಳೀತಿದ್ದೆ?" ಎಂದಳು.

ಸುರೇಶ ನಗುತ್ತ, "ಊಟ, ತಿಂಡಿ, ನಿದ್ದೆ" ಎಂದ. ಅವನ ನಗೆಯಲ್ಲಿ ಬೇರೆ ಯಾರೂ ಬೆರೆಯಲಿಲ್ಲ.

ನಿರ್ಮಲ, "ಛೆ ಪಾಪ. ನೀನು ಸುಮ್ಮನೆ ಇರಪ್ಪ.

"ಓದೋದು ಬರೆಯೋದು ಏನಾದರೂ..." ಎಂದಳು.

"ಕನ್ನಡ ಕಲಿತುಕೊಂಡಿದೀನಿ" ಎಂದಳು ಗೌರಿ.

ಆಗ ಮಾತು ಬದಲಾಯಿಸಿದ ನಿರ್ಮಲ, ಮತ್ತೊಮ್ಮೆ ಗೌರಿಯನ್ನು ಏಕಾಂತದಲ್ಲಿ,

"ನಮ್ಮಮ್ಮ ನಿನ್ನ ಚೆನ್ನಾಗಿ ಇಟ್ಟುಕೊಂಡಿದ್ದರಾ?" ಎಂದು ಕೇಳಿದಳು. ಗೌರಿ ಆಶ್ಚರ್ಯದಿಂದ,

"ಹುಂ. ಏಕೆ?" ಎಂದಳು.

"ಯಾಕೂ ಇಲ್ಲ. ಸುಮ್ಮನೆ ಕೇಳಿದೆ. ಸುರೇಶ್ ಏನೋ ನಿನಗೆ ಇಂಗ್ಲೀಷ್ ಕಲಿಸುತ್ತಿದ್ದಾಂತ ಕೇಳಿದ್ದೆ..."

"ಅವರು ಕಲಿಸೋಕೆ ಪ್ರಯತ್ನಪಟ್ಟರು. ನನಗೆ ಬರಲಿಲ್ಲ" ಗೌರಿ ತಪ್ಪಿತಸ್ಥಳಂತೆ ನುಡಿದಳು.

"ಬೇರೆ ಯಾರೂ ಮೇಷ್ಟ್ರನ್ನ ಇಡಲಿಲ್ಲವೆ?"

"ಊಹೂಂ"

"ಸರಿ. ಇವರುಗಳ ಹತ್ತಿರ ಕಲಿತುಕೊಂಡರೆ ಬಂದ ಹಾಗೇ ಇದೆ! ಈಗ ನೋಡು ನಾನು ನಮ್ಮ ಯಜಮಾನರನ್ನು ಡ್ರೈವಿಂಗ್ ಕಲಿಸಿ ಅಂತ ಕೇಳಿ ಕೇಳಿ ಸಾಕಾಯ್ತು. ಅವರೂ ಕಲಿಸಲು ಪ್ರಯತ್ನಪಟ್ಟರು. ಸರಿಹೋಗದೆ ಕೊನೆಗೆ 'ಡ್ರೈವಿಂಗ್ ಸ್ಕೂಲಿಗೆ' ಸೇರಿ ಕಲಿತೆ"

"ನೀವೆಲ್ಲ ಬಹಳ ಬುದ್ಧಿವಂತರು"

"ನೀನೂ ಜಾಣೆ. ಮನಸ್ಸು ಮಾಡಿದರೆ ಎಲ್ಲಾ ಕಲಿಯಬಲ್ಲೆ. ನಿನಗೆ ಬೇಕಿಲ್ಲ. ಅಲ್ಲವಾ?"

ಗೌರಿ ಆಶ್ಚರ್ಯದಿಂದ ನಿರ್ಮಲೆಯನ್ನು ನೋಡಿದಳು.

"ಅದೇನು ಹಾಗೆ ಹೇಳ್ತೀರಿ?"

"ನಿನಗೆ ಅಡಿಗೆ ಕೆಲಸ, ಮಕ್ಕಳು ಅಂದರೆ ತುಂಬಾ ಇಷ್ಟ ಅಲ್ಲವೆ?"

"ನಿಮಗೆ ಹೇಗೆ ಗೊತ್ತು?"

"ನೀನು ಬೆಳೆದಿರೋ ಮನೆ ಅಂಥಾದ್ದು. ಹೆಂಗಸರು ಅಂದರೆ ಗಂಡ ಮಕ್ಕಳ ಸೇವೆ ಮಾಡಿಕೊಂಡು ಮನೇಲೇ ಇರಬೇಕು. ಅವರಿಗೆ ಓದು ಬರಹ ಎಲ್ಲಾ ಬೇಕಿಲ್ಲ ಅಂತ ನಿನಗೆ ಚಿಕ್ಕ ವಯಸ್ಸಿನಲ್ಲಿ ನಿಮ್ಮ ಅಜ್ಜಿ ಹೇಳಿರಬೇಕು."

ಈಗ ಗೌರಿಗೆ ಪರಮಾಶ್ಚರ್ಯವಾಯಿತು.

"ಅಕ್ಕಾ, ನಿಮಗೆ ಇದೆಲ್ಲಾ ಹೇಗೆ ತಿಳಿಯಿತು?"

"ತಿಳಿಯುವುದೇನೂ ಕಷ್ಟವಿಲ್ಲ. ಈಗ ನೋಡು ಮುಖ್ಯವಾಗಿ ನೀನು ಮನಸ್ಸು ಮಾಡಬೇಕು. ಸುರೇಶ್‌ಗೆ ಹೇಗೆ ಬೇಕೋ ಹಾಗೆ ನಿನ್ನನ್ನು ನೀನು ತಿದ್ದಿಕೊಳ್ಳಬೇಕು. ಅವನಿಗೆ ಎಲ್ಲಾ ವಿಚಾರದಲ್ಲೂ ಯೋಗ್ಯಳಾದ ಜೊತೆಗಾತಿಯಾಗಬೇಕು."

"ನನ್ನಿಂದ ಸಾಧ್ಯವೋ ಇಲ್ಲವೋ ನಾನು ಕಾಣೆ ಅಕ್ಕ. ನಾನೊಂದು ಶುದ್ಧ ಹಳ್ಳಿಯ ಗೊಡ್ಡು"

"ಪ್ರತಿಮಾ, ನೀನು ಹಾಗೆ ಹೇಳಿದರೆ ನಾನು ಒಪ್ಪೋದಿಲ್ಲ"

"ಊರಿನಲ್ಲಿ ಎಲ್ರೂ ಹಾಗೇ ಹೇಳ್ತಾ ಇದ್ದರು"

"ಅದಕ್ಕೇ ನೀನು ಹೀಗಾಗಿರೋದು. ಮೊದಲು ನಿನ್ನಲ್ಲಿ ನಿನಗೆ ನಂಬಿಕೆ ಬರಬೇಕು. ನಾಳೆಯಿಂದ ನಂದಿನಿ ಕೈಲಿ ಸ್ವಲ್ಪ ಪಾಠ ಹೇಳಿಸಿಕೋ. ಆಮೇಲೆ ನನಗೆ ತಿಳಿದವರೊಬ್ಬರಿಂದ ಹೇಳಿಸುತ್ತೇನೆ"

ನಿರ್ಮಲ ಗೌರಿಯಲ್ಲಿ ಹೊಸ ಚೇತನವನ್ನು ತುಂಬಿದಳು.

ಮಾರನೆಯ ದಿನ ಬೆಳಿಗ್ಗೆ ನಿರ್ಮಲ ಬಹಳ ಬೇಗ ಎದ್ದು ಅಡಿಗೆ ಕೆಲಸ ಮುಗಿಸಿ ಕೆಲಸಕ್ಕೆ ಹೊರಡಲು ಸಿದ್ಧಳಾದಳು. ಸ್ವಾಮಿ, ನಿರ್ಮಲ, ನಂದಿನಿ ಒಟ್ಟಿಗೆ ಕಾರಿನಲ್ಲಿ ಹೊರಟರು. ನಿರ್ಮಲ ಗೌರಿಗೆ,

"ನಮ್ಮದೆಲ್ಲಾ ಊಟ ಡಬ್ಬಿಗೆ ಹಾಕಿಕೊಂಡಿದ್ದೇನೆ. ನೀನು ಸುರೇಶ್ ಬಡಿಸಿಕೊಂಡು ಊಟ ಮಾಡಿ. ನಂದಿನಿ ಮೂರುವರೆ ಹೊತ್ತಿಗೆ ಬಸ್ಸಿನಲ್ಲಿ ಬಂದುಬಿಡ್ತಾಳೆ. ನಾವು ಬರೋದು ಸಂಜೆ ಆರು ಘಂಟೆಗೆ. ಬೇಜಾರು ಮಾಡಿಕೋಬೇಡ. ಆ್ಞ?...ಇಷ್ಟಕ್ಕೂ ಜೊತೆಗೆ ಸುರೇಶ್ ಇರ್ತಾನಲ್ಲ" ಎಂದು ಹೇಳಿದಳು. ಅವರೆಲ್ಲ ಹೊರಟು ಹೋದ ಮೇಲೆ ಸುರೇಶ,

"ನೀನೂ ಸ್ನಾನಮಾಡಿ ಸಿದ್ಧವಾಗು. ಎಲ್ಲಾದರೂ ಸುತ್ತಿಕೊಂಡು ಬರೋಣ" ಎಂದ.

ನಾಲ್ಕಾರು ದಿನ ಹೀಗೇ ಕಳೆಯಿತು. ಸುರೇಶ ತಾನಾಗಿ, ತನ್ನ ಕೆಲಸದ ವಿಷಯ ಏನಾಯಿತೆಂದು ಯಾರಿಗೂ ಹೇಳಲಿಲ್ಲ. ಗೌರಿಯೇ ಕೇಳಿದಳು,

"ಎಷ್ಟು ದಿನ ಹೀಗೇ ಇರೋದು?"

"ಸ್ವಲ್ಪ ನಿಧಾನಿಸಬೇಕು ಪುಟ್ಟಾ. ನಾನು ಯಾವ ಆಸೆಯಿಂದ ಬಂದೆನೋ ಅದು ನೆರವೇರುವ ಹಾಗೆ ಕಾಣೆ. ಆ ಕೆಲಸಕ್ಕೆ ಮೂರು ವರ್ಷದವರೆಗೆ ಬೇರೆ ಯಾರನ್ನೋ ನೇಮಿಸಿಕೊಂಡಿದ್ದಾರಂತೆ. ಈ ಊರಿನಲ್ಲೇ ಒಂದು ಕೆಲಸ ಸಿಕ್ಕೋ ಹಾಗಿದೆ. ಅದೂ ಇನ್ನು ಒಂದೆರಡು ತಿಂಗಳಲ್ಲಿ ಆಗುತ್ತೆ"

"ಅಬ್ಬಾ, ಅಷ್ಟೊಂದು ದಿನ ಇವರಿಗೆ ಭಾರವಾಗಿ ಇಲ್ಲೇ ಇರೋದೇನು?"

"ಭಾರವಾಗಿರೋದೇನೂ ಬೇಡ. ಕೆಲಸದಲ್ಲಿ ನೀನು ಸಹಾಯ ಮಾಡು. ನಾನು ಆಗಾಗ ಏನಾದರೂ ಹಣ್ಣು, ತರಕಾರಿ ತರ್ತೀನೆ. ಕೆಲಸ ಸಿಕ್ಕಿದ ಮೇಲೆ ಬೇರೆ ಮನೆ ಮಾಡೋಣ. ಇಲ್ಲಿ ನಿನಗೇನೂ ತೊಂದರೆ ಇಲ್ಲ ತಾನೆ?"

"ಛೆ ಛೆ ತೊಂದರೆ ಅಂತ ಯಾವ ಬಾಯಲ್ಲಿ ಹೇಳಲಿ. ನಿರ್ಮಲಕ್ಕ ಎಷ್ಟು ಒಳ್ಳೆಯವರು! ಎಲ್ಲಾ ನಿಮ್ಮ ಹಾಗೇನೆ!"

"ಆ್ಞ...ಏನೆಂದೆ? ಇನ್ನೊಂದ್ಸಲ ಹೇಳು."

"ಅಯ್ಯೋ ಪಾಪ ಎರಡೆರಡು ಸಲ ಹೊಗಳಿಸಿಕೊಳ್ಳೋಕ್ಕೆ ಆಸೆಯೆ" ಎಂದು ನಕ್ಕಳು ಗೌರಿ.

-೧೪-

ಗೌರಿ ಡೆಲ್ಲಿಗೆ ಬಂದ ಕೆಲವೇ ದಿನಗಳಲ್ಲಿ ಮೈ ಚಳಿ ಬಿಟ್ಟು ಎಲ್ಲರೊಡನೆ ಸಲಿಗೆಯಿಂದ ಮಾತಾಡುತ್ತಿದ್ದಳು. ಆ ಪರಿವರ್ತನೆ ಸುರೇಶನಿಗೆ ಪ್ರಿಯವಾಗಿತ್ತು.

ನಂದಿನಿ ಶಾಲೆಯಿಂದ ಬಂದವಳೇ ನೇರವಾಗಿ ಅಡಿಗೆ ಮನೆಗೆ ಬಂದು,

"ಅತ್ತೇ ಇವತ್ತು ಏನು ತಿಂಡಿ?" ಎಂದಳು.

"ತೊಗರಿ ನುಚ್ಚಿನ ಉಂಡೆ"

"ಅದೆಂಥಾ ತಿಂಡಿ ಅತ್ತೆ ನಾನು ತಿಂದೇ ಇಲ್ಲ"

ಗೌರಿ ನಗುತ್ತ ಬಿಸಿ ಬಿಸಿ ಉಂಡೆಗಳನ್ನು ತಟ್ಟೆಯಲ್ಲಿಟ್ಟು, ತುಪ್ಪ, ಹಸೀ ಮಜ್ಜಿಗೆ ಹುಳಿ ಹಾಕಿದಳು.

"ತುಂಬಾ ಚೆನ್ನಾಗಿದೆ ಅತ್ತೆ. ನಮ್ಮಮ್ಮನಿಗೆ ಇದೆಲ್ಲಾ ಮಾಡೋಕ್ಕೆ ಬರಲ್ಲ."

"ಬರದೆ ಏನು ನಂದಾ. ಅವರಿಗೆ ಪುರಸೊತ್ತೆ ಇರಲ್ಲ. ಇದೆಲ್ಲಾ ನಿಧಾನವಾಗಿ ಮಾಡಬೇಕಾದ ಪದಾರ್ಥಗಳು."

"ಅತ್ತೇ ತಿಂಡಿ ತಿಂದಾದ ಮೇಲೆ ಇವತ್ತಿನಿಂದ ನಿಮಗೆ ಪಾಠ ಶುರು ಮಾಡಲಾ?"

"ಬೇಡ ನಂದಾ ನಂಗೆ ಬೇಜಾರು"

"ಮತ್ತೆ ಮಾವ ಹೇಳಿದರು. ಸ್ವಲ್ಪ ಚರಿತ್ರೆ ಭೂಗೋಳ ಹೇಳಿಕೊಡು ಅಂತ."

"ಹೌದೇನು? ಹಾಗಾದರೆ ಹೇಳಿ ಕೊಡೋನಂತೆ."

ನಂದಿನಿ ಪಾಠ ಹೇಳಲು ಕುಳಿತಳು. ಅವಳು 'ಹಿಂದೂದೇಶದ ಚರಿತ್ರೆಯಲ್ಲಿ ಮೊದಲ ಪಾಠ ಹೇಳುತ್ತಿದ್ದಾಗ ಗೌರಿ ಏನನ್ನೋ ಜ್ಞಾಪಿಸಿಕೊಂಡವಳಂತೆ,

"ಉಂಡೆಗೆ ಉಪ್ಪು ಸಾಕಾಗಿತ್ತೇ ನಂದಾ?" ಎಂದು ಕೇಳಿದಳು. ನಂದಿನಿ, ತಕ್ಷಣ ವಿಷಯ ಬದಲಾಯಿಸಿದ್ದರಿಂದ ಅರ್ಥವಾಗದೆ,

"ಆ್ಞ?" ಎಂದಳು.

"ನುಚ್ಚಿನುಂಡೆಗೆ ಉಪ್ಪು ಖಾರ ಎಲ್ಲಾ ಹದವಾಗಿ ಸರಿಯಾಗಿತ್ತಾ?"

"ಹುಂ. ಎಲ್ಲಾ ಸರಿಯಾಗಿತ್ತು. ಈಗ ಪಾಠ ಮುಂದಕ್ಕೆ ಮಾಡೋಣ...?"

ಗೌರಿ ನಂದಿನಿಯ ಕೈ ಹಿಡಿದು,

"ನನಗೆ ನೀನು ಹೇಳೋದು ಒಂದೂ ಅರ್ಥವಾಗಲ್ಲ. ಸುಮ್ಮನೆ ನಿಂಗೆ ಯಾಕೆ ತೊಂದರೆ. ನಿಮ್ಮ ಮಾವ ಕೇಳಿದರೆ ಹೇಳಿ ಕೊಟ್ಟೆ ಅಂತ

ಹೇಳಿ ಬಿಡು. ಬಾ ಒಂದಾಟ ಕೇರಂ ಆಡೋಣ" ಎಂದಳು.

ನಂದಿನಿಯು ಅಚ್ಚು ಮೆಚ್ಚಿನ ಆಟ ಕೇರಂ. ಗೌರಿಯೇ ಪಾಠ ಬೇಡವೆಂದ ಮೇಲೆ ತಾನೇಕೆ ಬಲವಂತ ಮಾಡಬೇಕೆಂದು, ಆಟಕ್ಕೆ ಕುಳಿತಳು.

ಗೌರಿಯು ದಿನವೂ ಬಗೆ ಬಗೆಯಾದ ಅಡಿಗೆ, ತಿಂಡಿಗಳನ್ನು ಮಾಡುತ್ತಿದ್ದಳು. ನಿರ್ಮಲೆಗೆ ಈಗ ಸ್ವಲ್ಪ ಬಿಡವು ದೊರೆತಂತಾಗಿತ್ತು. ಆದರೆ ಗೌರಿಯ ವಿದ್ಯಾಭ್ಯಾಸ ಮುಂದುವರಿಯದೆ ಇದ್ದುದು ಅವಳಿಗೆ ಸ್ವಲ್ಪ ಬೇಸರವಾಗಿತ್ತು. ಅದರ ಬಗ್ಗೆ ಏನಾದರೂ ಮಾಡಬೇಕೆಂದು ಯೋಚಿಸುತ್ತಿದ್ದಳು.

ಅಂದು ಸಂಜೆ ಎಲ್ಲರೂ ಮನೆಗೆ ಬರುವ ವೇಳೆಗೆ ಗೌರಿ ಕಾಯಿಕಡಬು ಮಾಡಿದ್ದಳು. ಎಲ್ಲರೂ ಅದನ್ನು ತಿನ್ನುತ್ತ ಆ ದಿನದ ಪೇಪರಿನಲ್ಲಿ ಬಂದಿದ್ದ ಮಹತ್ವದ ವಿಷಯವೊಂದನ್ನು ಕುರಿತು ಚರ್ಚಿಸುತ್ತಿದ್ದರು. ಗೌರಿ ಮೂರು ಸಲ ಎಲ್ಲರಿಗೂ ಹಾಕಿ ತಿನ್ನಲು ಕುಳಿತಳು. ಕಡಬು ಬಹಳ ರುಚಿಯಾಗಿತ್ತು. ಘಂಟೆಗಟ್ಟಲೆ ತಾನು ಕಷ್ಟಪಟ್ಟು ತಯಾರಿಸಿದ ಕಡುಬಿನ ಬಗ್ಗೆ ಒಬ್ಬರೂ ಒಂದಾದರೂ ಪ್ರಶಂಸೆಯ ಮಾತನ್ನು ಆಡದೆ ಇದ್ದುದು ಅವಳಿಗೆ ಪೂರಾ ನಿರಾಸೆಯಾಗಿತ್ತು. ಯಾವುದೊ ಕಂಡು-ಕೇಳದ ದೇಶ, ಕಾಣದ ಜನರ ಬಗ್ಗೆ ಎಲ್ಲರೂ ಚರ್ಚಿಸಿದ್ದೂ ಚರ್ಚಿಸಿದ್ದೆ! ಚೀನವಂತೆ ಯುದ್ಧವಂತೆ... ಗೌರಿ ಎಲ್ಲರ ಮಾತು ನಿಂತಿದ್ದಾಗ ಮೆಲ್ಲನೆ,

"ನಿರ್ಮಲಕ್ಕ, ಕಡುಬು ಹೇಗಿದೆ?" ಎಂದಳು.

ಅದರ ಕಡೆ ಗಮನವನ್ನೇ ಕೊಡದೆ ತಿನ್ನುತ್ತಿದ್ದ ನಿರ್ಮಲ,

"ತುಂಬಾ ಚೆನ್ನಾಗಿದೆ ಪ್ರತಿಮಾ." ಎಂದಳು

ಸುರೇಶ ನಿರ್ಮಲೆಯನ್ನುದ್ದೇಶಿಸಿ,

"ಎಲ್ಲಿಗೆ ಬಂದರೂ ಈ ಹಳ್ಳಿ ಹೆಣ್ಣಿಗೆ ತೊಗರೀ ಸುಚ್ಚಿನುಂಡೆ, ಒತ್ತು ಶಾವಿಗೆ, ಕಾಯಿ ಕಡುಬು ಬಿಟ್ಟು ಬೇರೆ ವಿಚಾರ ಹೊಳೆಯೋದಿಲ್ಲ..." ಎಂದ. ಗೌರಿಯ ಮುಖ ಚಿಕ್ಕದಾಯಿತು. ಎದ್ದು ಕೈ ತೊಳೆದುಕೊಂಡು ಅಡಿಗೆ ಮನೆಗೆ ಹೋದಳು. ಹಿಂದೆಯೇ ಬಂದ ನಿರ್ಮಲ,

"ಬೇಜಾರಾಯ್ತೇ ಪ್ರತಿಮಾ?" ಎಂದಳು ಬೆನ್ನ ಮೇಲೆ ಕೈಯಿಟ್ಟು. ಗೌರಿ ಅಳುವನ್ನು ನುಂಗುತ್ತ,

"ಹೀಗೆಲ್ಲಾ ನನ್ನ ಹಂಗಿಸೋ ಬದಲು ಯಾರಾದರೂ ವಿದ್ಯಾವಂತೀನ ಮದುವೆ ಮಾಡಿಕೋಬಾರದಾಗಿತ್ತೆ. ಇವರು ಹೀಗನ್ನೋದು ಸರಿಯೇ ನೀವೇ ಹೇಳಿ ಅಕ್ಕ" ಎಂದಳು. ನಿರ್ಮಲ,

"ಪ್ರತಿಮಾ, ನಿನ್ನಂಥ ಮುದ್ದು ಹುಡುಗಿ ಕಣ್ಣಿಗೆ ಬಿದ್ದಾಗ ಅವನಿಗೆ 'ಇವಳೊಬ್ಬಳು ಸಿಕ್ಕಿದರೆ ಸಾಕು ಇನ್ನೇನೂ ಬೇಡ' ಅನಿಸಿರಬೇಕು... ದೇವರು ನಿನಗೆ ಒಳ್ಳೆ ರೂಪ, ಗುಣ, ಕೊಟ್ಟಿದಾನೆ. ಬುದ್ಧಿಯೂ ಇದೆ-ಅದನ್ನು ಸರಿಯಾದ ರೀತಿ ಉಪಯೋಗಿಸಿಕೊಂಡು ವಿದ್ಯಾವಂತಳಾಗಬೇಕು."

"ನಂದಿನಿ ನೀ ಹೇಳೋದು ನನಗೆ ಒಂದೂ ಅರ್ಥವಾಗಲ್ಲ"

"ಅದೆಲ್ಲಾ ಒಂದೊಂದು ವಯಸ್ಸು ಅಕ್ಕ. ಸಂಸಾರ ಮಾಡಿಕೊಂಡು, ಮಕ್ಕಳು ಮರಿ ಅಂತ ಇರಬೇಕಾಗಿರೋ ವಯಸ್ಸಿನಲ್ಲಿ ಓದು ತಲೆಗೆ ಹತ್ತುತ್ತ್ಯೇ?"

ನಿರ್ಮಲ ನಗುತ್ತ ಗೌರಿಯ ಗಲ್ಲ ಹಿಡಿದು,

"ಅದೆಲ್ಲಾ ಮುಂದೆ ಇದ್ದೇ ಇದೆ. ಈಗ ಒಂದೆರಡು ವರ್ಷ ಸ್ವಲ್ಪ ಕಷ್ಟಪಡಬೇಕಮ್ಮಾ" ಎಂದಳು.

ಎರಡೂವರೆ ತಿಂಗಳು ಕಳೆದಿತ್ತು. ಸುರೇಶ ಇದ್ದಕ್ಕಿದ್ದಂತೆ ಒಂದು ದಿನ,

"ನನಗೆ ಇಲ್ಲೇ ಕೆಲಸವಾಯಿತು ನಿರ್ಮಲ" ಎಂದು ಹೇಳಿದ. ಎದುರಿಗೇ ಕುಳಿತಿದ್ದ ಸ್ವಾಮಿ ಆಶ್ಚರ್ಯದಿಂದ,

"ಎಲ್ಲಿ ಏನು ಕತೆ? ನಮಗೆ ಅದರ ಸುಳಿವೇ ಹತ್ತಿರಲಿಲ್ಲವಲ್ಲಾ!" ಎಂದ.

"ಯುನೈಟೆಡ್ ನೇಶನ್ಸ್ ಎಜ್ಯುಕೇಶನ್ ಫೌಂಡೇಶನ್ನಿನಲ್ಲಿ ಕೆಲಸ. ಮೂರು ವರ್ಷಕ್ಕೆ ಕರಾರು ಪತ್ರ ಆಗಿದೆ. ಕೈತುಂಬಾ ಸಂಬಳ ಕೊಡುತ್ತಾರೆ"

"ತುಂಬಾ ಸಂತೋಷಪ್ಪ. ಯೋಗ್ಯತೆ ಇದ್ದವರಿಗೆ ಪುರಸ್ಕಾರ ದೊರೆತೇ ದೊರೆಯುತ್ತೆ"

ಕೆಲಸ ಏನೆಂದು ಗೌರಿಗೆ ಅರ್ಥವಾಗಿರಲಿಲ್ಲ.

"ನಿಮಗೆ ಸಿಕ್ಕಿರೋದು ಯಾವ ಕೆಲಸ- ಅದರ ಹೆಸರೇನ್ರೀ?" ಎಂದು ಕೇಳಿದಳು ಸುರೇಶ ಒಂದು ಬಗೆಯ ಉದಾಸೀನದಿಂದ.

"ನಿನಗೆ ಅರ್ಥವಾಗೋ ಹಾಗೆ ಹೇಳೋಕ್ಕೆ ನಂಗೆ ಬರೋದಿಲ್ಲ. ನಿರ್ಮಲನ್ನೇ ಕೇಳು ಹೇಳ್ತಾಳೆ" ಎಂದುಬಿಟ್ಟ.

ಕೆಲಸವಾದ ಕೆಲವೇ ದಿನಗಳಲ್ಲಿ ಮನೆ ಸಿಕ್ಕಿತು. ಸ್ವಾಮಿಗೆ ಅಲ್ಲಿ ಅನೇಕರ ಪರಿಚಯವಿದ್ದುದರಿಂದ, ಹಾಗೂ ಸುರೇಶ್ ಡೆಲ್ಲಿಗೆ ಬಂದಾಗಿನಿಂದಲೂ ಪ್ರಯತ್ನಿಸುತ್ತಿದುದರಿಂದ ಬೇಗನೇ ಮನೆ ಸಿಕ್ಕಿತು. ಮುನ್ನೂರೈವತ್ತು ರೂಪಾಯಿ ಬಾಡಿಗೆ ಮನೆಯನ್ನು ನೋಡಿದ ಗೌರಿ,

"ನಮ್ಮ ಬೆಂಗಳೂರು ಮನೆಯ ಕಾಲು ಭಾಗದಷ್ಟೂ ಇಲ್ಲ. ಅಷ್ಟೊಂದು ಬಾಡಿಗೆಯೇ?" ಎಂದಳು

ನಿರ್ಮಲ, "ಈ ಊರಿಗೆ ಇದೂ ಕಡಿಮೆಯೇ" ಎಂದು ಸಮಾಧಾನ ಹೇಳಿದಳು.

ತನ್ನದೇ ಆದ ಈ ಹೊಸ ಮನೆಯನ್ನು ಗೌರಿ ಬಹಳ ಉತ್ಸಾಹದಿಂದ ಶೃಂಗರಿಸತೊಡಗಿದಳು. ಅತ್ಯಗತ್ಯವಾಗಿ ಬೇಕಾಗಿದ್ದ ಕೆಲವು ಸಾಮಾನುಗಳನ್ನು ಕೊಂಡರು. ನಿರ್ಮಲೆಯೂ ಸಣ್ಣ-ಪುಟ್ಟ ಪಾತ್ರೆ ಪದಾರ್ಥಗಳನ್ನು ಕೊಟ್ಟಳು.

ಸುರೇಶ, ಗೌರಿ ತಮ್ಮ ಮನೆಯಿಂದ ಹೊರಟು ನಿಂತಾಗ ನಿರ್ಮಲೆಗೆ ಕಂಠ ಉಬ್ಬಿಬಂತು. ಗೌರಿ ತನ್ನ ನಿಷ್ಕಲ್ಮಷ ಪ್ರೇಮದಿಂದ ನಿರ್ಮಲೆಯ ಸಂಸಾರದಲ್ಲಿ ಒಬ್ಬಳಾಗಿ ಅವರೆಲ್ಲರ ಮನಸ್ಸನ್ನು ಗೆದ್ದಿದ್ದಳು.

ಹೊರಡುವ ದಿನವೂ ಅಡಿಗೆ ಮನೆಗೆ ಹೋಗುತ್ತಿದ್ದ ಗೌರಿಯನ್ನು ತಡೆದು ನಿರ್ಮಲ,

"ಇವತ್ತು ನಾನೇ ಮಾಡ್ತೀನಿ ಬಿಡು. ನಿನ್ನಷ್ಟು ರುಚಿಯಾಗಿ ಮಾಡೋಕ್ಕೆ ಮಾತ್ರ ಬರಲ್ಲ" ಎಂದಳು

ಗೌರಿ, ಒಪ್ಪದೆ, "ಇವತ್ತೊಂದು ದಿನ ನಾನೇ ಮಾಡಿಬಿಡ್ತೀನಿ ಅಕ್ಕ. ನಿಮಗೆ ವಾಂಗೀಭಾತ್

ಕೆಂದರೆ ಬಹಳ ಇಷ್ಟ. ಅದೇ ಮಾಡಲಾ?" ಎಂದು ಕೇಳಿದಳು.

"ಹೋಗಲಿ. ಇಬ್ಬರೂ ಸೇರಿ ಹಬ್ಬದಡಿಗೆ ಮಾಡಿ ಬಿಡೋಣ" ಎಂದು ಒಪ್ಪಂದಕ್ಕೆ ಬಂದಳು ಗೌರಿ.

'ಅಕ್ಕ' 'ಅಕ್ಕ' ಎಂದು ಹಿಂದೆ ಮುಂದೆ ಓಡಾಡುತ್ತಿದ್ದ ಗೌರಿಯನ್ನು ನಿರ್ಮಲ,

"ನೀನು ಹೊರಟು ಹೋದರೆ ನನಗೆ ತುಂಬಾ ಬೇಜಾರಾಗತ್ತೆ ಪ್ರತಿಮಾ" ಎಂದಳು. ಗೌರಿ,

"ನನಗೂ ಅಷ್ಟೆ ಅಕ್ಕ. ನಿನಗೆ ಹೇಗೂ ಕಾರಿದೆ. ದಿನಾ ಒಂದು ಸಲವಾದರೂ ಬರಬೇಕು. ಪ್ರತಿ ಭಾನುವಾರ ಎಲ್ಲಾ ನಮ್ಮನೆಗೇ ಬಂದು ಬಿಡಿ...ನಂದಿನಿ ಸ್ಕೂಲಿಂದ ನಮ್ಮನೆಗೇ ಬರಲಿ. ನೀವು ಮನೆಗೆ ಬರೋವಾಗ ಕರ್ಕೊಂಡು ಬರೋ ರಂತೆ" ಎಂದಳು.

ನಿರ್ಮಲ ಗೌರಿ, ಸುರೇಶರಿಗೆ ಔತಣ ಮಾಡಿ, ಗೌರಿಗೆ ಒಂದು ಪ್ರೆಷರ್ ಕುಕ್ಕರ್ ಉಡುಗೊರೆ ಕೊಟ್ಟಳು.

ಬೆಂಗಳೂರಿನ ತಮ್ಮ ಮನೆ, ಮದರಾಸಿನ ಚಂದ್ರಳ ತವರುಮನೆ, ನಿರ್ಮಲೆಯ ಮತ್ತು ಅವಳ ಕೆಲವು ಗೆಳತಿಯರ ಮನೆಗಳ ಒಪ್ಪ ಓರಣ, ಶೃಂಗಾರಗಳನ್ನು ನೋಡಿದ್ದ ಗೌರಿ ತಮ್ಮ ಮನೆಯನ್ನು ಅದಕ್ಕಿಂತ ಚೆನ್ನಾಗಿ ಇಟ್ಟು ಕೊಳ್ಳಬೇಕೆಂದು ಬಯಸುತ್ತಿದ್ದಳು. ಸುರೇಶ ನಿಗೆ, "ನಮ್ಮಲ್ಲಿರೋ ಸಾಮಾನು ಏನೇನೂ ಸಾಲದು. ಇಲ್ಲಿ ಷೋಕೇಸಿನಲ್ಲಿಡೋ ಅಂಥಾದ್ದು ಕೆಲವು ಮರದ್ದು, ದಂತದ್ದು ಬೊಂಬೆಗಳನ್ನು ತರೋಣ" ಎಂದು ಹೇಳಿದಳು.

ಸುರೇಶ,"ನಿಧಾನವಾಗಿ ತರೋಣ. ನನಗೇನು ನಾಲ್ಕು ತಿಂಗಳ ಸಂಬಳ ಒಟ್ಟಿಗೆ ಕೊಡ್ತಾರೆ ಅಂತ ತಿಳಕೊಂಡಿದೀಯಾ?" ಎಂದು ನಗೆ ಯಾಡಿದ.

"ನೀವು ತೋರಿಸ್ತಿರೋ ಪ್ರೀತಿಗೆ ತಕ್ಕ ಹಾಗೆ ನಾನು ಬಾಳ್ತಾ ಇಲ್ವಲ್ಲಾಂತ" ದುಃಖವಾಗ್ತಾ ಇದೆ.

—೧೫—

ಅತ್ತೆಯ ಮನೆಯಲ್ಲಿ ತನ್ನ ರೂಮನ್ನು ಬಿಟ್ಟು ಈಚೆ ಬರುವ ಪ್ರಮೇಯವೇ ಇರಲಿಲ್ಲ ಗೌರಿಗೆ. ಈಗ,ಅದರಲ್ಲೂ ಬೇರೆ ಮನೆ ಮಾಡಿದ ಮೇಲೆ ತರಕಾರಿ, ಮತ್ತಿತರ ಮನೆಯ ಸಾಮಾ ನುಗಳಿಗೆ ತಾನೇ ಹೋಗುತ್ತಿದ್ದಳು. ಹಾಲಿಗೆ ತಾನೇ ಹೋಗಿ 'ಕ್ಯೂ' ನಿಲ್ಲುತ್ತಿದ್ದಳು. ಇದ ರಿಂದ ವ್ಯವಹಾರಕ್ಕೆ ಬೇಕಾದಷ್ಟು ಹಿಂದಿಯನ್ನು ಕಲಿತಿದ್ದಳು. ನಾಲ್ಕು ಜನರೊಡನೆ ಸಂಕೋಚ ವನ್ನು ಬಿಟ್ಟು ಬೆರೆಯಬಲ್ಲವಳಾಗಿದ್ದಳು. ಸುರೇಶ ಮನೆಯಲ್ಲಿಲ್ಲದ ಸಮಯದಲ್ಲಿ ಚರಿತ್ರೆ, ಭೂಗೋಳದ ಪುಸ್ತಕಗಳನ್ನು ತಿರುವಿ ಹಾಕುತ್ತಿ ದ್ದಳು. ನಿರ್ಮಲೆಯ ಸಂಸಾರ ನೋಡಿದ ಮೇಲೆ ತಾನೂ ಸುರೇಶನಿಗೆ ಎಲ್ಲ ವಿಧದಲ್ಲಿ ಅನುರೂಪ ಳಾದ ಸತಿಯಾಗಬೇಕೆಂಬ ಆಸೆ ಬೆಳೆದಿತ್ತು.

ಅಪರೂಪಕ್ಕೆ ಗೌರಿಗೆ ತಂದೆಯಿಂದ ಕಾಗದ ಬಂದಿತ್ತು. ಅವಳ ಅಜ್ಜಿ ದೈವಾಧೀನರಾದುದಾಗಿ ತಿಳಿಸಿ ಸಾಧ್ಯವಾದರೆ ಕರ್ಮಾಂತರಗಳಿಗೆ ಬರ ಬೇಕೆಂದು ಬರೆದಿದ್ದರು. ಅಜ್ಜಿಗೆ ವಯಸ್ಸಾ ಗಿತ್ತು. ಸಾವು ಸಹಜವಾಗಿ ಬಂದಿತ್ತು. ಆದರೂ ಅವರ ತೊಡೆಯ ಮೇಲೆ ಬೆಳೆದ ಗೌರಿಗೆ ತುಂಬಾ ದುಃಖವಾಯಿತು. ಜೊತೆಗೇ ತವರಿಗೆ ಒಮ್ಮೆ ಹೋಗಿ ಬರಬೇಕೆಂಬ ಬಯಕೆಯೂ ಬೃಹದಾಕಾರವಾಗಿ ಬೆಳೆಯಿತು. ಒಬ್ಬಳನ್ನೇ ಕಳಿಸಲು ಮೊದಲು ಸುರೇಶ ಒಪ್ಪಲಿಲ್ಲ. ನಿರ್ಮಲೆಯ ಸಲಹೆಯ ಮೇರೆಗೆ ಏರೋಪ್ಲೇನಿ ನಲ್ಲಿ ಕಳಿಸಲು ನಿಶ್ಚಯಿಸಿದ. ಮೂರು ದಿನ ಒಬ್ಬಳೇ ರೈಲಿನಲ್ಲಿ ಹೋಗುವುದಕ್ಕಿಂತ, ಕೆಲವೇ ಘಂಟೆಗಳಲ್ಲಿ ಊರನ್ನು ಸೇರುವ ಸಲಹೆ ಗೌರಿಗೂ ಹಿಡಿಸಿತು.

ವಿಶಾಲಾಕ್ಷಮ್ಮ ಏರೋಡ್ರೋಮಿಗೆ ಕಾರನ್ನು ಕಳಿಸಿದ್ದರು. ಮನೆಗೆ ಬಂದು ಊಟ ಮುಗಿಸಿ ಮಾರನೆಯ ದಿನವೇ ಹಳ್ಳಿಗೆ ಹೊರಟಳು ಗೌರಿ.

ಮನೆ ಬಾಗಿಲಿಗೆ ಬರುತ್ತಿದ್ದಂತೆ ಅಳು ಉಕ್ಕಿ ಬಂತು. ಜಗುಲಿಯ ಮೇಲೆ ಹಸೀ ಮುತ್ತು- ಗದೆಲೆ ಹಚ್ಚುತ್ತಲೋ, ಹೂಬತ್ತಿ ಮಾಡು ತ್ತಲೋ ಕುಳಿತಿರುತ್ತಿದ್ದ ಅಜ್ಜಿ ಇನ್ನಿಲ್ಲವೆಂದು ಕೊಳ್ಳಲು ಅವಳಿಗೆ ಸಾಧ್ಯವೇ ಆಗಲಿಲ್ಲ. 'ಬಿಕೋ' ಎನ್ನುತ್ತಿದ್ದ ಆ ಜಗುಲಿಯ ಮೇಲೆ ಕುಳಿತೇ ಅಳುತ್ತಿದ್ದ ಗೌರಿಯನ್ನು ತಾಯಿ, ತಂದೆ, ತಮ್ಮಂದಿರೆಲ್ಲ ಸುತ್ತುವರೆದು ಸಮಾ ಧಾನಪಡಿಸಿದರು.

ಬಹಳ ದಿನಗಳ ಮೇಲೆ ಮನೆಯಲ್ಲಿ ಬಂಧು ಬಳಗದವರೆಲ್ಲ ಸೇರಿದ್ದರು. ತುಮಕೂರಿನಿಂದ ಬಂದಿದ್ದ ಕೌಸಲ್ಯಮ್ಮ, "ನಮ್ಮ ಗೌರಿ ಡೆಲ್ಲೀಗಲ್ಲ ದೀಪಾಂತರಕ್ಕೆ ಹೋದರೂ ಒಂದೇ ಸಮನಾಗಿ ದಾಳೆ" ಎಂದರು. ಅವರೇನೋ ಮೆಚ್ಚುಗೆ ಯಿಂದ ಹಾಗಂದಿದ್ದರೂ ಅದರಿಂದ ಗೌರಿ ಖಿನ್ನ ಳಾದಳು. ತನ್ನನ್ನು ಬೇರೆಯೇ ವ್ಯಕ್ತಿಯನ್ನಾಗಿ ಮಾಡಬೇಕೆಂದು ಸುರೇಶ ಎಷ್ಟೊಂದು ಶ್ರಮಿಸು ತ್ತಿದ್ದ. ಅವನ ಆಸೆಗಳಿಗೆಲ್ಲ ತಣ್ಣೀರೆರಚಿ ತಾನು ಅವನನ್ನು ನಿರಾಸೆಗೊಳಿಸಿರಲಿಲ್ಲವೆ? ನಿರ್ಮಲ ಹೇಳಿದಂತೆ ತನ್ನನ್ನು ತಾನು ಮರೆತು ಅಭ್ಯಾಸ ದಲ್ಲಿ ತೊಡಗಿದರೆ-ಸುರೇಶನ ಕಲ್ಪನೆಯ ಹೆಣ್ಣಾ

ಗಲು ಸಾಧ್ಯವಿಲ್ಲವೆ?...ಸುರೇಶ ಕೆಲಸ ಮುಗಿಸಿ ಬಂದೊಡನೆ ಆಫೀಸಿನ ಹಲವು ವಿಚಾರಗಳನ್ನು ಅವಳೊಡನೆ ಹೇಳುತ್ತಿದ್ದ. ಆದರೆ ಯಾವುದೂ ಅರ್ಥವಾಗದೆ ಸುಮ್ಮನೆ ಅವನನ್ನೇ ದಿಟ್ಟಿಸುತ್ತ ಕುಳಿತುಕೊಳ್ಳುತ್ತಿದ್ದ ಮಡದಿಯನ್ನು ಕಂಡಾಗ ಬೇಸರದಿಂದ ಎದ್ದುಹೋಗುತ್ತಿದ್ದ. ಅದೇ ನಿರ್ಮಲೆಯ ಮನೆಯಲ್ಲಿ-ನಿರ್ಮಲ ಸರ್ವವಿಧದಲ್ಲೂ ಪತಿಗೆ ಸಹಾಯಕಳಾಗಿದ್ದಳು. ಪತಿ-ಪತ್ನಿಯರು ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥ ಮಾಡಿಕೊಂಡು-ಪರಸ್ಪರ ಮನಸ್ಸನ್ನರಿತು ನಡೆಯುತ್ತಿದ್ದರು. ಅವರ ಮನೆಯಲ್ಲಿದ್ದ ಸ್ನೇಹಮಯ, ಸೌಹಾರ್ದಯುತ ವಾತಾವರಣ ಚೇತೋಹಾರಿಯಾಗಿತ್ತು. ಇದಕ್ಕೆ ಕಾರಣ? ನಿರ್ಮಲೆಯ ಪರಿಶುದ್ಧವಾದ ಸ್ನೇಹಮಯವಾದ ಸ್ವಭಾವ, ವಿದ್ಯೆ ಹೌದು. ವಿದ್ಯೆ, ಜ್ಞಾನ ಸಂಪತ್ತು. ಅದನ್ನು ತಾನೂ ಸಾಧಿಸಬೇಕು ಗೌರಿ ಮದುವೆಯಾದ ಮೇಲೆ ಮೊದಲ ಬಾರಿಗೆ ಪತಿಯನ್ನು ಬಿಟ್ಟು ಬಂದಿದ್ದಳು. ಜೊತೆಯಲ್ಲಿದ್ದಾಗ ಕಿವಿಗೊಡದ ನೂರು ಮಾತುಗಳಿಗೆ ಈಗ ಒಮ್ಮೆಲೆ ಒಪ್ಪಿಕೊಳ್ಳುವ ಅಭಿಲಾಷೆ-ಸುರೇಶನ ಕಿವಿಯಲ್ಲಿ, ನಾನು ನಿಜವಾಗಿ ಕಷ್ಟಪಟ್ಟು ಓದಿ ನಿಮಗೆ ಸರಿಯಾದ ಮಡದಿಯಾಗ್ತೀನಿ...ಇಷ್ಟು ದಿನ ನಾನು ಮಾಡಿದ ತಪ್ಪನ್ನು ಕ್ಷಮಿಸಿಎಂದು-ಸುರುವ ಆಸೆ ಉತ್ಕಟವಾಯಿತು. ಅಂದು ವಿದ್ಯಾಧಿದೇವತೆ ಶ್ರೀ ಸರಸ್ವತಿಯನ್ನು ಮನದಲ್ಲೇ ಸ್ಮರಿಸುತ್ತ ಮಲಗಿದಳು.

ಒಂದು ತಿಂಗಳ ನಂತರ ಗೌರಿ ಹಿಂತಿರುಗಿದಾಗ ಅವಳಲ್ಲಾಗಿದ್ದ ಬದಲಾವಣೆಯನ್ನು ನಂಬಲಾರದೆ ಸುರೇಶ, "ಇದೇನು ಪುಟ್ಟಾ ಇಷ್ಟೊಂದು ಬದಲಾಯಿಸಿಬಿಟ್ಟಿದೀಯ ನೀನು?" ಎಂದು ಕೇಳಿದ.

ಉತ್ತರವಾಗಿ ಗೌರಿ ಅವನೆದೆಯಲ್ಲಿ ಮುಖ ಹುದುಗಿಸಿ ಬಿಕ್ಕಿ ಬಿಕ್ಕಿ ಅತ್ತಳು.

"ಏನಾಯ್ತು ನನ್ನ ರಾಣಿಗೆ? ಅಳು ಯಾತಕ್ಕೆ ಚಿನ್ನಾ?"

ಎಂದಾಗ,

"ಅದಕ್ಕೇ..." ಎಂದಳು.

"ಅಂದರೆ?"

"ನೀವು ತೋರಿಸ್ತಿರೋ ಈ ಪ್ರೀತಿಗೆ"

"ಅದಕ್ಕೆ ಅಳು ಯಾಕೆ?"

"ಅದಕ್ಕೆ ತಕ್ಕ ಹಾಗೆ ನಾನು ಬಾಳ್ತಾ ಇಲ್ವಲ್ಲಾಂತ"

"ಹಾಗಾದರೆ ನೀನು ನನ್ನನ್ನ..."

"ಬಿಡ್ತು ಅನ್ನಿ. ಅದರ ಹತ್ತರಷ್ಟು, ನೂರರಷ್ಟು ಪ್ರೀತಿಸ್ತೇನೆ. ಇಂತಹ ಒಡ್ಡು ಹುಡುಗೀನ ಮದುವೆ ಮಾಡಿಕೊಂಡು, ಆಸೆಯನ್ನೆಲ್ಲ ನಿರಾಸೆಗೊಳಿಸಿದರೂ ಈಗಲೂ ಒಂದೇ ಸಮನಾಗಿದೀರಲ್ಲ. ಬೇರೆ ಯಾರಾದರೂ ಆಗಿದ್ದರೆ ಎಂದೋ ನನ್ನನ್ನು ಬಿಟ್ಟು ಬೇರೆ ಮದುವೆ ಮಾಡ್ಕೊಳ್ತಿದ್ರು"

"ಏನೇನೋ ಹೊಳೆಯುತ್ತಲ್ಲ ಈ ಪುಟ್ಟ ತಲೆಗೆ. ಹಾಗಾದರೆ ಇನ್ನು ಮೇಲೆ ತುಂಬಾ ಓದ್ತೀಯ ಅಲ್ಲವಾ?"

ಗೌರಿ ಹೌದೆಂದು ತಲೆಯಲ್ಲಾಡಿಸಿದಳು.

ಮರುದಿನವೇ ನಿರ್ಮಲೆಯ ಮನೆಗೆ ಹೋಗಿ,

"ನನಗೆ ಸರಿಯಾದ ಒಬ್ಬರು ಗುರುಗಳನ್ನು ನೇಮಿಸಿ ಅಕ್ಕಾ. ಹೆಂಗಸರಾದರೆ ಉತ್ತಮ" ಎಂದು ಹೇಳಿದಳು.

ನಿರ್ಮಲ ಅದೇ ದಿನ ಮಧ್ಯಾಹ್ನ ಗೌರಿಯನ್ನು ಮಿಸೆಸ್ ಪೈ ಎಂಬವರಲ್ಲಿಗೆ ಕರೆದೊಯ್ದಳು. ಆಕೆ ಸುಮಾರು ಐವತ್ತು ವರ್ಷಗಳ ಸುಲಕ್ಷಣವಾದ ಮಹಿಳೆ. ಮಂಗಳೂರಿನವರಾದ್ದರಿಂದ ಕನ್ನಡ ಬರುತ್ತಿತ್ತು. ಹಾಗೆ ನೋಡಿದರೆ ಆಕೆ ತಮಿಳು, ತೆಲುಗು, ಮರಾಠಿ, ಬಂಗಾಲಿ ಭಾಷೆಗಳನ್ನೆಲ್ಲ ಸುಲಲಿತವಾಗಿ ಮಾತಾಡುತ್ತಿದ್ದರು.

ನಿರ್ಮಲೆಯನ್ನು ಸ್ನೇಹದ ಮುಗುಳ್ನಗೆಯೊಂದಿಗೆ ಸ್ವಾಗತಿಸಿದರು. ನಿರ್ಮಲ ಆಕೆಗೆ ಗೌರಿಯ ಪರಿಚಯ ಮಾಡಿಕೊಟ್ಟಳು.

"ನಾಳೆಯಿಂದ ಒಂದೆರಡು ಘಂಟೆಗಳ ಕಾಲ ಪಾಠ ಹೇಳಿಕೊಡಬೇಕು" ಎಂದು ಕೇಳಿದಳು.

"ಅಗತ್ಯವಾಗಿ ಆಗಲಿ" ಎಂದರು ಮಿಸೆಸ್ ಪೈ.

ಗೌರಿಯ ಮುಖದ ಮೇಲಿದ್ದ ಅನಿಶ್ಚಯದ ಛಾಯೆಯನ್ನು ಗಮನಿಸಿದ ಆಕೆ,

"ಛಲ ಬೇಕು ಮಗೂ. ಹಿಡಿದ ಕೆಲಸ ಸಾಧಿಸ್ತೀನಿ ಅನ್ನೋ ಹಟ ಇದ್ದರೆ ಯಾವುದೂ ಅಸಾಧ್ಯವಿಲ್ಲ" ಎಂದು ಹೇಳಿದರು.

ಅವರು ಗೌರಿಯಂತಹ ಇನ್ನೂ ಹಲವು ಗೃಹಿಣಿಯರಿಗೆ ಪಾಠ ಹೇಳುತ್ತಿದ್ದರು. ಅವರೆಲ್ಲ ಬೇರೆ ಬೇರೆ ಸಮಯಗಳಲ್ಲಿ ಬರುತ್ತಿದ್ದರು. ತಿಂಗಳಿಗೊಮ್ಮೆ ಎಲ್ಲರನ್ನೂ ಒಟ್ಟಾಗಿ ಕರೆದು ಮಿಸೆಸ್ ಪೈ, ಅಲ್ಪೋಪಹಾರ ಏರ್ಪಡಿಸುತ್ತಿದ್ದರು.

ತಾವು ಕಲಿಸುತ್ತಿರುವುದು ಪುಟ್ಟ ಮಕ್ಕಳಿಗಲ್ಲ-ಪ್ರೌಢರಿಗೆ ಎನ್ನುವುದನ್ನು ಚೆನ್ನಾಗಿ ಮನಸಿನಲ್ಲಿಟ್ಟುಕೊಂಡು ಮಿಸೆಸ್ ಪೈ ಅವರು, ತಮ್ಮ ಶಿಷ್ಯೆಯರಿಗೆ ಅರ್ಥವಾಗುವಂತೆ, ಇಷ್ಟವಾಗುವಂತೆ ತಮ್ಮ ಅನುಭವದಿಂದ ಪ್ರಸಂಗಗಳನ್ನು ಉದಾಹರಿಸುತ್ತಿದ್ದರು. ಶಿಷ್ಯೆಯ ಅಭಿರುಚಿಗೆ ತಕ್ಕಂತಹ ಕತೆಗಳನ್ನು ಹೇಳುತ್ತಿದ್ದರು. ವಿಜ್ಞಾನ, ಪೌರನೀತಿ ಎಲ್ಲವನ್ನೂ ಹೇಳಿಕೊಡುತ್ತಿದ್ದರು. ಆಗಾಗ ಟೆಸ್ಟ್‌ಗಳನ್ನು ಏರ್ಪಡಿಸುತ್ತಿದ್ದರು. ಗೌರಿ ತೋರುತ್ತಿದ್ದ ಪ್ರಗತಿ ಬಹಳ ಉತ್ಸಾಹದಾಯಕವಾಗಿತ್ತು.

ವಿದ್ಯೆಯಲ್ಲಿ ಮುಂದುವರೆದಂತೆ ಗೌರಿಗೆ, ಇಷ್ಟು ದಿನ ತಾನೆಂತಹ ಕೂಪಮಂಡೂಕವಾಗಿದ್ದೆನೆನ್ನುವುದು ಗೋಚರವಾಗತೊಡಗಿತು. ಮಿಸೆಸ್ ಪೈ ತನ್ನನ್ನೇ ಕರುಣೆಯಿಂದ ನೋಡುತ್ತ ಪ್ರಪಂಚದ ಸುಪ್ರಸಿದ್ಧ ವಿಜ್ಞಾನಿಗಳು, ಕವಿಗಳು, ನಾಟಕಕಾರರ ಬಗ್ಗೆ, ತಮ್ಮ ಮಂಜುಳವಾದ ಸ್ವರದಲ್ಲಿ ಹೇಳುತ್ತಿದ್ದರೆ ಮೈಮರೆತು ಕೇಳುತ್ತಿದ್ದಳು. ಮಿಸೆಸ್ ಪೈ ಆಗಾಗ ತಮ್ಮದೇ ಆದ ಪ್ರೊಜೆಕ್ಟರಿನಲ್ಲಿ ಶಿಷ್ಯೆಯರಿಗೆ ಸಹಾಯಕವಾಗುವಂತಹ ಚಲನಚಿತ್ರಗಳನ್ನು ತೋರಿಸುತ್ತಿದ್ದರು. ಡೆಲ್ಲಿಯ ಸುತ್ತಮುತ್ತಲಿದ್ದ, ಚರಿತ್ರಾರ್ಹವಾದ ಸ್ಥಳಗಳಿಗೆ ಹೋಗಿ ಬರುವಂತೆ ಉತ್ತೇಜಿಸುತ್ತಿದ್ದರು.

ಪಾಠವನ್ನು ಮನೋರಂಜನೆಯೊಂದಿಗೆ ಬೆರೆಸುತ್ತಿದ್ದ ಈ ಕಲೆ ಆಕೆಗೆ ಚೆನ್ನಾಗಿ ಕರಗತವಾಗಿತ್ತು.

ನಿರ್ಮಲ ತಮ್ಮ ಕಾರಿನಲ್ಲೇ ಸುರೇಶ, ಗೌರಿಯನ್ನು ಆಗ್ರಾ, ಭಾಕ್ರಾನಂಗಲ್, ಚಂದೀಗಢ ಹೀಗೆ ಹಲವು ಸ್ಥಳಗಳಿಗೆ ಕರೆದುಕೊಂಡು ಹೋಗಿ ತೋರಿಸಿಕೊಂಡು ಬಂದಳು.

ವಿಶ್ವವಿಖ್ಯಾತ ಕಲಾವಿದರ ಚಿತ್ರಗಳ, ಹಾಗೂ ಭಾವಚಿತ್ರಗಳ ಪ್ರದರ್ಶನ, ವೈಜ್ಞಾನಿಕ ವಸ್ತುಪ್ರದರ್ಶನಗಳಿಗೆ ಮಿಸೆಸ್ ಪೈ ಅವರೇ ಕರೆದುಕೊಂಡು ಹೋಗಿ ವಿವರಿಸುತ್ತಿದ್ದರು.

ಗೌರಿ ಹಗಲಿರುಳೆನ್ನದೆ ಅಭ್ಯಾಸ ಮಾಡುತ್ತಿದ್ದಳು. ತನಗೆ ತಿಳಿಯದ ವಿಚಾರಗಳನ್ನು ಸುರೇಶನನ್ನು ಕೇಳುತ್ತಿದ್ದಳು. ನಿಸ್ಸಂಕೋಚವಾಗಿ ಮಿಸೆಸ್ ಪೈ ಅವರೊಡನೆ ಚರ್ಚೆ ನಡೆಸುತ್ತಿದ್ದಳು.

ಮಿಸೆಸ್ ಪೈ, ಆಧುನಿಕ ಹಾಗೂ ಪ್ರಾಚೀನ ಸಂಸ್ಕೃತಿಗಳ ಸಮ್ಮಿಶ್ರಣವಾಗಿದ್ದರು. ಅವರು ಗೌರಿಯನ್ನು ಆರ್ಷೇಯ ಸಂಸ್ಕೃತಿ-ಸಾಹಿತ್ಯಗಳ ಪ್ರಭಾವಳಿಯೊಂದಿಗೆ, ಆಧುನಿಕ ವಿಜ್ಞಾನ-ಕಲೆಗಳ, ನವಿರಾದ ನವ್ಯ ಸಂಸ್ಕೃತಿಯ ಮೆರುಗನ್ನುಳ್ಳ ಸುಂದರವಾದ ಸ್ವರ್ಣ ವಿಗ್ರಹವನ್ನಾಗಿ ಮಾರ್ಪಡಿಸುತ್ತಿದ್ದರು. ತನ್ನ ಕಣ್ಣೆದುರಿಗೇ ನಡೆಯುತ್ತಿದ್ದ ಈ ಪವಾಡವನ್ನು ಸುರೇಶ ಆನಂದದಿಂದ, ಬೆರಗಿನಿಂದ ವೀಕ್ಷಿಸುತ್ತಿದ್ದ.

ಸುರೇಶನೊಂದಿಗೆ ಅವನ ಗೆಳೆಯರ ಮನೆಗೆ ಹೋಗಲು ಎಂದೂ ಹಿಂದೇಟು ಹಾಕುತ್ತಿದ್ದ ಗೌರಿ, ಈಗ ಅವನು ಕರೆಯುವ ಮೊದಲೇ ಸಿದ್ಧಳಾಗುತ್ತಿದ್ದಳು. ಭಾಷೆಯ ತೆರೆ ಸರಿಯುತ್ತ ಹೋದಂತೆ, ವಿದ್ಯೆಯ ಬೆಳಗು ಹಿರಿದಾಗತೊಡಗಿದಂತೆ ಅವಳಲ್ಲಿ ಆತ್ಮವಿಶ್ವಾಸ ಮೂಡಿತ್ತು.

ಮಿಸೆಸ್ ಪೈ, ಅವರ ಮನೆಗೆ ಹೊಸದಾಗಿ ಸೇರಿದ್ದ ಸಾವಿತ್ರಿಗೆ ಪ್ರಾರಂಭದ ಪಾಠಗಳನ್ನು ಹೇಳಿಕೊಡುವಂತೆ ಗೌರಿಗೆ ಹೇಳಿದ್ದರು. ಸಾವಿತ್ರಿ ಗುಂಟೂರಿನ ತೆಲುಗು ಹೆಣ್ಣುಮಗಳು. ರೂಪಿನಲ್ಲಿ ಸಾಧಾರಣವಾಗಿದ್ದಳು. ಕತ್ತಿನಲ್ಲಿ ಮುತ್ತಿನ ಮತ್ತು ಚಿನ್ನದ ಸರಗಳು, ಕಿವಿಯಲ್ಲಿದ್ದ ವಜ್ರದೋಲೆ ಅವಳು ಶ್ರೀಮಂತಳೆಂದು ಸಾರಿ ಹೇಳುತ್ತಿದ್ದುವು. ಸ್ವಲ್ಪ ಸ್ಥೂಲಕಾಯಳಾಗಿದ್ದ ಸಾವಿತ್ರಿ ಯಾರೊಡನೆಯೂ ಹೆಚ್ಚು ಮಾತಾಡುತ್ತಿರಲಿಲ್ಲ. ತೆಲುಗು ಅಲ್ಲದೆ ತಕ್ಕಮಟ್ಟಿಗೆ ಹಿಂದಿ ಬರುತ್ತಿತ್ತು. ಗೌರಿ, ತನ್ನ ಸವಿ ಮಾತುಗಳಿಂದ ಸಾವಿತ್ರಿಯ ಮನವೊಲಿಸಲು ಯತ್ನಿಸುತ್ತಿದ್ದಳು. ಪಾಠದ ಮಧ್ಯೆ ಬೇಸರವಾದಾಗ, ಅವಳ ಜೀವನದ ಬಗ್ಗೆ ಒಂದೊಂದು ಪ್ರಶ್ನೆ ಕೇಳುತ್ತಿದ್ದಳು-ಅವಳ ಕಷ್ಟ ಸುಖಗಳನ್ನರಿತು ಅದರಲ್ಲಿ ಭಾಗಿಯಾಗುವ ಉದ್ದೇಶದಿಂದ.

ಸಾವಿತ್ರಿ ಲೋಯರ್ ಸೆಕೆಂಡರಿಯಲ್ಲಿ, ಮೂರು ಸಲ ಫೇಲಾದ ಮೇಲೆ ಅವಳ ಮನೆ

ಯುವರು ಶಾಲೆಯನ್ನು ಬಿಡಿಸಿ ಮನೆಯಲ್ಲೇ ವೀಣೆ ಪಾಠ ಹೇಳಿಸತೊಡಗಿದ್ದರು. ಸಾವಿತ್ರಿ ಸುಶ್ರಾವ್ಯವಾಗಿ ವೀಣೆ ನುಡಿಸುತ್ತಿದ್ದಳು. ತಾಯಿ, ತಂದೆ ಹಳೆಯ ಸಂಪ್ರದಾಯದವರಾದ್ದರಿಂದ ಚಿಕ್ಕ ವಯಸ್ಸಿನಲ್ಲೇ ಮದುವೆಯಾಯಿತು. ಸಾವಿತ್ರಿಯ ಪತಿ ಡಾಕ್ಟರ್ ಪರೀಕ್ಷೆಗೆ ಓದುತ್ತಿದ್ದರು. ಯಥೇಚ್ಛವಾಗಿ ವರದಕ್ಷಿಣೆಯನ್ನಿತ್ತು ಸಾವಿತ್ರಿಯನ್ನು ಧಾರೆಯೆರೆದು ಕೊಟ್ಟಿದ್ದರು. ಸಾವಿತ್ರಿಯ ಪತಿ ಮೊದಲ ದರ್ಜೆಯಲ್ಲಿ ಉತ್ತೀರ್ಣನಾಗಿ ಡೆಲ್ಲಿಯಲ್ಲಿ ಕೆಲಸಕ್ಕೆ ಸೇರಿದ್ದ. ಸಾವಿತ್ರಿಯೊಡನೆ ಸಂಸಾರ ಹೂಡುವ ಆಸಕ್ತಿಯನ್ನೇ ಅವನು ತೋರಲಿಲ್ಲ. ಅತ್ತೆ ಮಾವಂದಿರ ಬಲವಂತಕ್ಕೆ ಆರು ತಿಂಗಳು ಅವಳೊಡನೆ ಇದ್ದಂತೆ ಮಾಡಿ, ತಾನು ಹೆಚ್ಚಿಗೆ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ತೆರಳಿದ. ಅಲ್ಲಿಂದ ಒಂದೂ ಕಾಗದ ಬರೆಯುತ್ತಿರಲಿಲ್ಲ. ಅವನು ವಾಪಸು ಬಂದ ವಿಷಯ ತಿಳಿದ ಮೇಲೆ ತಂದೆಯೇ ಸಾವಿತ್ರಿಯನ್ನು ಡೆಲ್ಲಿಗೆ ಕರೆದುಕೊಂಡು ಬಂದು ಬಿಟ್ಟು ಹೋಗಿದ್ದರು. ಸಾವಿತ್ರಿಯ ಪತಿ, ಅತ್ಯಾಧುನಿಕ ರೀತಿ ನೀತಿಗಳುಳ್ಳ ರೂಪವತಿಯಾದ ಸ್ತ್ರೀಯರೊಡನೆ ಸ್ವೇಚ್ಛೆಯಿಂದ ವಿಹರಿಸುತ್ತಿದ್ದ. ಇತ್ತೀಚೆಗೆ ಚಾಂದ್ ಎಂಬ ಹುಡುಗಿಯೊಬ್ಬಳು ಮನೆಗೆ ಬಂದು ಹೋಗುತ್ತಿದ್ದಳು. ಆ ಬಗ್ಗೆ ಚಕಾರವೆತ್ತಿದರೆ 'ಆ ಮಾತಿಗೆ ಬಂದರೆ ಈಗಲೇ ತೌರುಮನೆಗೆ ಗಂಟು ಮೂಟೆ ಕಟ್ಟು. ಅದಲ್ಲಾ ನನ್ನಿಷ್ಟ' ಎನ್ನುತ್ತಿದ್ದ. ದಿಕ್ಕುತೋಚದ ಸಾವಿತ್ರಿಗೆ ಗೊತ್ತಿದ್ದುದು ಅಳುವುದೊಂದೇ. ಇದರಿಂದ ಬೇಸರಗೊಂಡಿದ್ದ ಸಾವಿತ್ರಿಯ ಪತಿ,

"ಈ ಅಳುಮೋರೆ ಪೆದ್ದು ಹೆಣ್ಣಿನ ಮುಖ ನೋಡೋಕ್ಕೆ ಮನೆಗೆ ಯಾಕೆ ಬರಬೇಕು?" ಎಂದು ಹೇಳಿ ಮನೆಗೆ ಬರುವುದನ್ನೇ ಕಡಿಮೆ ಮಾಡಿದ.

ಇದನ್ನೆಲ್ಲ ಅವರಿವರಿಂದ ಕೇಳಿ ತಿಳಿದ ಸಾವಿತ್ರಿಯ ತಂದೆ ಹೌಹಾರಿ ಡೆಲ್ಲಿಗೆ ಬಂದರು. ಮಾವನವರು ಊರಿನಲ್ಲಿದ್ದಷ್ಟು ದಿನ ಅಳಿಯ ಒಳ್ಳೆಯವನಂತೆಯೇ ನಟಿಸಿದ. ಅವರು ಊರಿಗೆ ಹೋದ ಮೇಲೆ ಮತ್ತೆ ಮೊದಲಿನಂತೆಯೇ.

ಸಾವಿತ್ರಿ ತೌರುಮನೆಗೆ ಹೋಗಿಬಿಡಬೇಕೆಂದು ನಿಶ್ಚಯಿಸುವುದರಲ್ಲಿದ್ದಳು ಅಷ್ಟರಲ್ಲಿ ಸಹೃದಯರಾದ ಅವಳ ನೆರೆಹೊರೆಯವರು ಮಿಸೆಸ್ ಪೈ ಅವರ ವಿಚಾರ ತಿಳಿಸಿ, ಸಾವಿತ್ರಿಯನ್ನು ಅಲ್ಲಿಗೆ ಸೇರಿಸಿದ್ದರು. ಮದುವೆಯಾಗಿ ಎಷ್ಟೋ ವರ್ಷಗಳುರುಳಿದ್ದರೂ ಪತಿಯ ಪ್ರೇಮವನ್ನೇ ಕಾಣದ ಸಾವಿತ್ರಿಗಾಗಿ ಗೌರಿ ಮರುಗುತ್ತಿದ್ದಳು. ಸಾವಿತ್ರಿಯ ಪತಿಯೊಂದಿಗೆ ಹೋಲಿಸಿ ನೋಡಿದಾಗ, ಸುರೇಶ ದೈವಾಂಶ ಸಂಭೂತನೆಂದೇ ಅವಳಿಗೆನಿಸಿತು

ಅದನ್ನೇ ಸುರೇಶನಿಗೆ ಹೇಳಿದಳು.

"ನಿಜವಾಗಿ ನಿಮ್ಮ ಸಹನೆ ಅಸಾಧ್ಯವಾದುದು. ನೋಡಿ ಪಾಪ ಆ ಸಾವಿತ್ರಿಯನ್ನು ನೋಡಿದಾಗಲೆಲ್ಲ ನನಗೆ ತುಂಬಾ ಕನಿಕರವಾಗುತ್ತೆ."

"ಪುಟ್ಟಾ...ಅವನು ಮದುವೆಯಾದದ್ದು ದುಡ್ಡಿಗಾಗಿ. ನಾನು ಒಲವಿಗಾಗಿ, ಗೊತ್ತಿಲ್ಲವೆ?"

"ಹೌದು. ನಿಜವಾಗಿ ಒಲವಿಗಿರುವ ಶಕ್ತಿ ಅಗಾಧವಾದುದು" ಎಂದು ತುಂಬಿದೊಲುಮೆಯಿಂದ ಸುರೇಶನನ್ನು ಬಳಸಿದಳು ಗೌರಿ.

ತನ್ನನ್ನು ವಿದ್ಯಾವಂತಳನ್ನಾಗಿ ಮಾಡಿದ ಮಿಸೆಸ್ ಪೈ— ಸುಲೋಚನಾದೇವಿ ಆಕೆಯ ಹೆಸರು-ಅವರ ಬಗ್ಗೆ ಮಾತ್ರ ಗೌರಿಗೆ ಏನೂ ಗೊತ್ತಿರಲಿಲ್ಲ. ಒಂದೆರಡು ಸಲ ನಿರ್ಮಲೆಯನ್ನು ಕೇಳಿದಾಗ "ನನಗೂ ಏನೂ ಗೊತ್ತಿಲ್ಲ ಪ್ರತಿಮಾ. ಆಕೆ ಹೀಗೆ ಪಾಠ ಹೇಳಿಕೊಡುತ್ತಾರೆಂದು ತಿಳಿದು ನಿನ್ನನ್ನು ಅವರ ಬಳಿಗೆ ಕರೆದುಕೊಂಡು ಹೋದೆ ಅಷ್ಟೆ" ಎಂದುಬಿಟ್ಟಿದ್ದಳು.

—೧೬—

ದಿನ ಕಳೆದಂತೆ ಸುಲೋಚನಾದೇವಿಗೆ ಗೌರಿಯಲ್ಲಿ ಆತ್ಮೀಯತೆ ಬೆಳೆಯಿತು. ತಾವು ಹೇಳಿಕೊಡುತ್ತಿದ್ದುದನ್ನು ಮನಸಿಟ್ಟು ಕಲಿಯುತ್ತಿದ್ದುದಲ್ಲದೆ, ಸ್ವಭಾವದಿಂದ ಬಹು ಒಳ್ಳೆಯವಳಾಗಿದ್ದ ಗೌರಿಯನ್ನು ಮಗಳಂತೆ ಕಾಣುತ್ತಿದ್ದರು.

ಒಮ್ಮೆ ಪಾಠ ಮುಗಿದು ಮನೆಗೆ ಹೊರಡುವ ಸಮಯವಾಗಿತ್ತು. ಹೊರಗೆ ವಿಪರೀತ ಮಳೆ ಸುರಿಯುತ್ತಿತ್ತು. ಒಳಗೆ ಬೇರೆ ಯಾವ ವಿದ್ಯಾರ್ಥಿನಿಯೂ ಇರಲಿಲ್ಲ. ಆಗ ಗೌರಿ ಸೂಕ್ಷ್ಮವಾಗಿ ಸುಲೋಚನಾದೇವಿಯನ್ನು ಅವರ ಗತ ಜೀವನದ ಬಗ್ಗೆ ಕೇಳಿದಳು.

ಸುಲೋಚನೆಯದು ಬಾಲ್ಯವಿವಾಹ. ಎಸ್. ಎಸ್. ಎಲ್. ಸಿ. ಮುಗಿಯುವ ವರೆಗೆ ತವರು ಮನೆಯಲ್ಲೇ ಬಿಟ್ಟಿದ್ದು ನಂತರ ಅತ್ತೆಯ ಮನೆಯವರೇ ಕಾಲೇಜಿಗೆ ಸೇರಿಸಿದರು. ಸುಲೋಚನೆಯದು ಆದರ್ಶ ದಾಂಪತ್ಯವಾಗಿತ್ತು. ಪತಿ ಹಿರಿಯ ವಕೀಲರಾಗಿದ್ದರು. ಮಹಾತ್ಮಾ ಗಾಂಧಿಯವರ ಶಿಷ್ಯರಾಗಿದ್ದು, ಖಾದಿಯನ್ನು ಬಿಟ್ಟು ಬೇರೆ ಬಟ್ಟೆಯನ್ನು ಧರಿಸುತ್ತಿರಲಿಲ್ಲ. ಸುಲೋಚನೆಯೂ ಅಷ್ಟೆ. ನಲವತ್ತೆರಡರ ಕಾಂಗ್ರೆಸ್ ಚಳುವಳಿಯಲ್ಲಿ ಜೈಲುವಾಸ ಮುಗಿಸಿ ಬಂದ ಮೇಲೆ ಅವಳ ಪತಿ ಹಾಸಿಗೆ ಹಿಡಿದವರು ಮೇಲೇಳಲಿಲ್ಲ.

ಸುಲೋಚನ ಜೀವನವನ್ನು ವ್ಯರ್ಥವಾಗಿ ಕಳೆಯಬಾರದು. ಏನಾದರೂ ಪ್ರಯೋಜನಕರವಾಗಿ ಕಾಲ ಕಳೆಯಬೇಕೆನ್ನುವುದು ಅವಳ ಯಜಮಾನರ ಆಶಯವಾಗಿತ್ತು. ಸುಲೋಚನೆಗೆ ವಯಸ್ಕರ ಶಿಕ್ಷಣದ ಕಡೆಗೆ ಒಲವು ಇತ್ತು. ಆದರೆ ಯಾವದೇ ಸಂಘ ಸಂಸ್ಥೆ ಸೇರಿ ಕೇವಲ ಹೆಸರಿಗಾಗಿ ದುಡಿಯಲು ಇಷ್ಟವಿಲ್ಲದೆ, ಏನಾದರೂ ಕ್ರಿಯಾತ್ಮಕವಾದ ಕೆಲಸವನ್ನು ಮಾಡಬೇಕೆಂದು ಮನೆಯಲ್ಲೇ ಒಂದು ವಯಸ್ಕರ ಶಾಲೆಯನ್ನು ಪ್ರಾರಂಭಿಸಿದ್ದರು. ಅಲ್ಲಿಗೆ ಬರುತ್ತಿದ್ದವರೆಲ್ಲ ಮದುವೆಯಾದ ಗೃಹಿಣಿಯರು, ವಿಧವೆಯರು, ಹಾಗೂ ವಯಸ್ಕರಾದ ಅವಿದ್ಯಾವಂತ ಅವಿವಾಹಿತೆಯರು.

ಸುಲೋಚನಾದೇವಿಯ ಬಗ್ಗೆ ಚಿಂತಿಸುತ್ತ ಗೌರಿ, "ಹುಟ್ಟಿದ್ದಕ್ಕೆ ಸಾರ್ಥಕವಾಯಿತು. ಬಾಳಿದರೆ ಹೀಗೆ ಬಾಳಬೇಕು. ಪಾಪ" ಎಂದುಕೊಂಡಳು.

ಸುರೇಶನ ಕೆಲಸದ ಅವಧಿ ಇನ್ನೊಂದು ವರ್ಷ ಮುಂದುವರಿಯಿತು.

"ಮುಂದಿನ ಸೆಪ್ಟೆಂಬರ್ ಹೊತ್ತಿಗೆ ನಿನ್ನನ್ನು ಕರೆದುಕೊಂಡು ಅಮೇರಿಕಾಗೆ ಹೋಗ್ತೇನೆ,

ದೀಪಾವಳಿಯು ನಮ್ಮೆಲ್ಲ ಗ್ರಾಹಕರಿಗೆ ಸುಖಸಂಪದವನ್ನೀಯಲಿ!

ಮಹಾಜನರಲ್ಲಿ ವಿಜ್ಞಾಪನೆ!

ರುಚಿಗೆ ಶುಚಿಗೆ ಸುಗಂಧಕ್ಕೆ

ಪ್ರಗತಿಗೆ ಲೇಸು ಬೆಲೆಗೆ ಬಹು ಸೊಗಸು ಎಲ್ಲೆಡೆಯಲ್ಲಿ ಹುಲುಸು

ನಮ್ಮ ಬಾಲಾಜಿ ಸುಗಂಧ ಅಡಿಕೆ ಪುಡಿ

BALAJI R.M.&CO. C.B.BELLARY SCENTED SUPARI

ತಪ್ಪದೇ ಸೇವಿಸಿರಿ! ಸೇವಿಸಿ ನೋಡಿರಿ!!

ಅನ್ಯರು ಸೇವಿಸುವಂತೆ ಮಾಡಿರಿ!!!

ಆರ್. ಯಂ. ಅಂಡ್ ಕೊ,

ಮೇನ್ ರೋಡ್, ಸಿ. ಬಿ. ಬಳ್ಳಾರಿ

(ಮೈಸೂರು ರಾಜ್ಯ)

ಏಜನ್ಸಿಗಳಿಗಾಗಿ ಈ ದಿನವೇ ಬರೆಯಿರಿ

ಬರ್ತೀಯಾ?" ಎಂದ ಸುರೇಶ. ಗೌರಿಯ ಕಣ್ಣಿನಲ್ಲಿ ನಕ್ಷತ್ರಗಳು ಮಿನುಗುತ್ತವು,

"ನೀವು ಜೊತೆಯಲ್ಲಿದ್ದರೆ ಎಲ್ಲಿಗೆ ತಾನೆ ಬರಲಾರೆ?" ಎಂದಳು.

ನಾಲ್ಕು ವರ್ಷಗಳಲ್ಲಿ ಗೌರಿ ಸಾಧಿಸಿದ್ದ ಪ್ರಗತಿ ನಂಬಲಾರದಷ್ಟಾಗಿತ್ತು. ಅದಕ್ಕೆ ದಾರಿ ತೋರಿದ ನಿರ್ಮಲೆಗೆ ಗೌರಿ ಸದಾ ಕೃತಜ್ಞಳಾಗಿದ್ದಳು. ಅದನ್ನು ಯಾವ ವಿಧದಲ್ಲಿ ತೋರಿಸಬೇಕೆಂದೇ ಅವಳಿಗೆ ಅರ್ಥವಾಗುತ್ತಿರಲಿಲ್ಲ. ತನ್ನ ಮನೆಗೆ ನಿರ್ಮಲ, ಸ್ವಾಮಿ, ನಂದಿನಿಯರನ್ನು ಊಟಕ್ಕೆ ಕರೆದು, ನಿರ್ಮಲೆಗೆ ಭಾರಿ ಸೀರೆಯೊಂದನ್ನು ಉಡುಗೊರೆಯಾಗಿ ಕೊಟ್ಟಳು ನಂದಿನಿಗೆ,

"ನೀನೂ ಸ್ವಲ್ಪ ದಿನ ನನಗೆ ಪಾಠ ಹೇಳಿಕೊಟ್ಟೆ. ನಿನಗೇನು ಗುರುದಕ್ಷಿಣೆ ಕೊಡಬೇಕೋ

"ಪ್ರತಿಮಾ. ನೀನು ವಿದೇಶದಿಂದ ಹಿಂತಿರುಗಿದ ಮೇಲೆ ಏನಾದರೂ ಕೆಲಸ ಮಾಡಬೇಕು."

ನನಗೆ ಗೊತ್ತಿಲ್ಲ ನಂದಾ" ಎಂದಳು. ನಂದಿನಿ ನಗುತ್ತ,

"ಈಗೇನೂ ಬೇಡ. ನೀವು ಅಮೇರಿಕಾದಿಂದ ಬರುವಾಗ ಒಂದು ಟ್ರಾನ್ಸಿಸ್ಟರ್ ರೇಡಿಯೋ ತಂದು ಕೊಡಿ" ಎಂದಳು. ಸುರೇಶ,

"ಪರವಾಗಿಲ್ಲ. ಹುಡುಗಿ ಭಾರಿ ಏಟೇ ಹಾಕಿದೆ" ಎಂದ.

ಒಂದು ಭಾನುವಾರ ಗೌರಿ ಸುರೇಶನನ್ನೂ ಕರೆದುಕೊಂಡು ಸುಲೋಚನಾದೇವಿಯ ಮನೆಗೆ ಬಂದಳು. ಸುರೇಶ ಆಕೆಗೆ ನಮಸ್ಕರಿಸಿ,

"ನಮಗೆ ನಿಮ್ಮನ್ನು ಹೇಗೆ ಅಭಿನಂದಿಸಬೇಕೋ ತಿಳಿಯದಾಗಿದೆ" ಎಂದ.

"ಹಾಗೋ ಬೇಡ. ಕುಳಿತುಕೊಳ್ಳಿ" ಎಂದು ಹೇಳಿ ಸುಲೋಚನಾದೇವಿ ದಂಪತಿಗಳೊಡನೆ ಅರ್ಧ ಘಂಟೆ ಆತ್ಮೀಯವಾಗಿ ಸಂಭಾಷಿಸಿದರು. ಹೊರಡುವ ಮುನ್ನ ಗೌರಿ ಕೊಡಲು ಬಂದ ದುಡ್ಡಿನ ಕವರನ್ನು ತೆಗೆದುಕೊಳ್ಳದೆ, ಆಧುನಿಕ ವಿದ್ಯಾಭ್ಯಾಸ ಕ್ರಮಗಳಿಗೆ ಸಹಾಯಕವಾಗುವಂತಹ ಕೆಲವು ಉಪಕರಣಗಳನ್ನು ಸಾಧ್ಯವಾದರೆ ಅಮೇರಿಕಯಿಂದ ತಂದುಕೊಡಬೇಕೆಂದು ಕೇಳಿದರು. ಗೌರಿಗೆ 'ಭಾರತದ ಸಂಸ್ಕೃತಿ' ಮತ್ತು 'ಭಾರತದ ಆದರ್ಶ ನಾರಿಯರು' ಎಂಬ ಎರಡು ಪುಸ್ತಕಗಳನ್ನೂ, 'ತಾಯಿ—ಮಗು' ಎಂಬ ಒಂದು ತೈಲ ವರ್ಣಚಿತ್ರವನ್ನೂ ಕೊಟ್ಟರು.

"ಪ್ರತಿಮಾ, ನೀನು ವಿದೇಶದಿಂದ ಹಿಂತಿರುಗಿದ ಮೇಲೆ ಏನಾದರೂ ಕೆಲಸ ಮಾಡಬೇಕು. ಅಲ್ಲಿ ವಿದ್ಯಾಭ್ಯಾಸದಲ್ಲಿ ಅವರು ಸಾಧಿಸಿರುವ ಪ್ರಗತಿ ಅಸಾಧ್ಯವಾದುದು. ಅದರ ಬಗ್ಗೆ ನೀನೂ ಸಾಧ್ಯವಾದಷ್ಟು ಅಭ್ಯಾಸಮಾಡು. ವ್ಯರ್ಥವಾಗಿ ಕಾಲ ಕಳೆಯಬೇಡ. ಆಲಸ್ಯ ನಮ್ಮ ಪರಮ ಶತ್ರು" ಎಂದು ಹೇಳಿದರು

ಗೌರಿ ಗೌರವಾದರಗಳಿಂದ, "ನಾನು ವಾಪಸು ಬಂದ ಮೇಲೆ ನಿಮಗೆ ಸಹಾಯಕಳಾಗಿ ನಿಮ್ಮೊಂದಿಗೆ ಕೆಲಸ ಮಾಡುತ್ತೇನೆ. ನನ್ನಂತಹ ಹಲವರಿಗೆ ಸಹಾಯವಾಗುವಂತೆ ಏನಾದರೂ ಮಾಡಬೇಕೆಂದೆ ನನಗೂ ಆಶೆ" ಎಂದಳು.

ಸುಲೋಚನಾದೇವಿ ಸುರೇಶನಿಗೆ,

"ಪ್ರತಿಮಾ ಒಂದು ಅಪೂರ್ವ ನಿಧಿ. ಅದನ್ನು ಹುಡುಕಿ ತೆಗೆದಿದ್ದೀರಿ. ಜೋಪಾನವಾಗಿ ಕಾಪಾಡಿಕೊಳ್ಳಿರಿ" ಎಂದರು.

ಸುರೇಶ, "ನಾನೇನೋ ಒಂದು ಬಂಗಾರದ ಪುಷ್ಪವನ್ನು ತಂದೆ. ಆದರೆ ಅದಕ್ಕೆ ಕಂಪು ಕೂಡಿಸಿದವರು ನೀವಲ್ಲವೇ" ಎಂದ.

ಸುಲೋಚನಾದೇವಿ, "ದೇವರು ನಿಮ್ಮನ್ನು ಚೆನ್ನಾಗಿ ಇಟ್ಟಿರಲಿ" ಎಂದು ಹರಿಸಿ ಬೀಳ್ಕೊಟ್ಟರು.

ಸುರೇಶನ ಗೌರವಾರ್ಥವಾಗಿ ಅವನ ಗೆಳೆಯರು ಕೆಲವರು ಅವನಿಗಾಗಿ ಅಶೋಕ ಹೋಟೆಲಿನಲ್ಲಿ ಒಂದು ಸತ್ಕಾರ ಕೂಟವನ್ನೇ ಏರ್ಪಡಿಸಿದ್ದರು. ಅಲ್ಲಿ ಸೇರಿದ್ದವರೆಲ್ಲ ಅತ್ಯಂತ ಆಧುನಿಕ, ನವನಾಗರಿಕ ದಂಪತಿಗಳು. ನಾಲ್ಕು ಸಲ ಜಪಾನಿಗೆ ಹೋಗಿ ಬಂದಿದ್ದ ಚಟರ್ಜಿ ದಂಪತಿಗಳು, ಮದುವೆಗೆ ಮೊದಲು ಏರ್ ಹೋಸ್ಟೆಸ್ ಆಗಿದ್ದು ಪ್ರಸಿದ್ಧ ಪತ್ರಿಕೋದ್ಯಮಿಯನ್ನು ಮದುವೆಯಾಗಿದ್ದ ಶೀಲಾ—ಸುಂದರೇಶನ್, ಸಾಂಸ್ಕೃತಿಕ ನಿಯೋಗದೊಂದಿಗೆ ರಷ್ಯಾ ದರ್ಶನ ಮಾಡಿ ಬಂದಿದ್ದ ಮಾಲತಿ ಮತ್ತು ಅವಳ ವಿಜ್ಞಾನಿ ಪತಿ ಗೌತಮ್, ಪ್ರಸಿದ್ಧ 'ಮಾಡೆಲ್' ಆಗಿದ್ದು ಅಂತರ್‌ರಾಷ್ಟ್ರೀಯ ಖ್ಯಾತಿಯ ಕಲಾವಿದನನ್ನೇ ಮದುವೆಯಾಗಿದ್ದ ಶೋಭಾ—ಸರ್ಕಾರ್-ಹೀಗೆ ಸೇರಿದ್ದವರ ಮಧ್ಯೆ ಹೇಗೆ ವರ್ತಿಸಬೇಕೆಂಬುದನ್ನು ಸುರೇಶ ಮನೆಯಲ್ಲೇ ಗೌರಿಗೆ ತಿಳಿಸಿದ್ದ. ಆದರೆ ಆ ನಿರೀಕ್ಷೆಯನ್ನೂ ಮೀರಿ ಗೌರಿ ಅತ್ಯಂತ ಸಹಜವಾಗಿ ಎಲ್ಲರೊಡನೆ ಬೆರೆತುದನ್ನು ನೋಡಿ ಸುರೇಶನಿಗೆ ಅತ್ಯಾಶ್ಚರ್ಯವಾಯಿತು. ಗೌರಿಗೆ ಹಿಂದೆ ತಮ್ಮ ಮನೆಯಲ್ಲಿ ನಡೆದ ಪ್ರಮೀಳೆಯ ಹುಟ್ಟು ಹಬ್ಬದ ಪಾರ್ಟಿಯನ್ನು ನೆನೆದು ನಗು ಬಂತು. ಅದನ್ನು ಜ್ಞಾಪಿಸಿದಾಗ ಸುರೇಶ,

"ಈಗ ಕಲ್ಯಾಣಿ ನಿನ್ನನ್ನು ನೋಡಿದರೆ ಗುರುತಿಸಲಾರಳು" ಎಂದು ನಕ್ಕ.

'ಪಾರ್ಟಿ' ಮುಗಿಸಿ ಮನೆಗೆ ಬರುವ ವೇಳೆಗೆ ಘಂಟೆ ಹನ್ನೊಂದಾಗಿತ್ತು.

ವಿಶೇಷ ಆಸಕ್ತಿಯಿಂದ ಶೃಂಗರಿಸಿಕೊಂಡಿದ್ದ ಗೌರಿ ಅಂದು ಅಪ್ಸರೆಯಾಗಿದ್ದಳು. ಸುರೇಶ ಅಕ್ಕರೆಯಿಂದ,

"ಈ ದಿನಕ್ಕಾಗಿ ನಾನು ಎಷ್ಟು ಹಂಬಲಿಸುತ್ತಿದ್ದೆ ಗೊತ್ತೇ ಪುಟ್ಟಾ!" ಎಂದ.

"ಗೊತ್ತು ದೊರೆ ಚೆನ್ನಾಗಿ ಗೊತ್ತು. ಅದಕ್ಕಾಗಿಯೇ ಅಲ್ಲವೇ ನಾನೂ ಇಷ್ಟು ಶ್ರಮ ವಹಿಸಿದ್ದು?"

"ನೀನು ಕೇಳಿದ್ದು ಜ್ಞಾಪಕ ಇದೆಯೆ? ನೀನು ಒಳ್ಳೇ ವಿದ್ಯಾವತಿಯಾದಾಗ ಒಂದು ಬಹುಮಾನ ಬೇಕು-ಕೆಂಪಿನ ಅಡ್ಡಿಗೆ ಎಂದು."

ಗೌರಿ ನಗುತ್ತ "ಹೌದು. ಆದರೆ ಈಗ ಅದು ಬೇಡ" ಎಂದಳು.

"ಮತ್ತೇನು ಬೇಕು?"

ಗೌರಿಯ ದೃಷ್ಟಿ ಮೂಲೆಯಲ್ಲಿದ್ದ ಮೇಜಿನತ್ತ ಹೋಯಿತು. ಅಲ್ಲಿ ಸುಲೋಚನಾದೇವಿ ಕೊಟ್ಟಿದ್ದ 'ತಾಯಿ ಮಗು' ಚಿತ್ರ ಶೋಭಿಸುತ್ತಿತ್ತು. ಅವಳ ಮನದ ಇಂಗಿತವನ್ನು ತಿಳಿದ ಸುರೇಶ,

"ಹೌದೇ ಇಂಥಾದ್ದು ಬೇಕೆ?" ಎಂದ.

ಗೌರಿ ಉತ್ತರವೀಯದೆ, ಕೆನ್ನೆಗಳಲ್ಲಿ ಅರಳಿದ ಚೆಂಗುಲಾಬಿಗಳನ್ನು ತನ್ನ ಸ್ವಾಮಿಗೆ ಸಮರ್ಪಿಸಿದಳು.

ವಿದೇಶಕ್ಕೆ ಹೊರಡಲು ಸಕಲ ಸಿದ್ಧತೆಗಳು ಬಿರುಸಿನಿಂದ ನಡೆದವು. ಹೊರಡುವ ಮುನ್ನ ಇಬ್ಬರೂ ಬೆಂಗಳೂರಿಗೆ, ಹಳ್ಳಿಗೆ, ತುಮಕೂರಿಗೆ ಬಂದರು.

ಹಳ್ಳಿಯಲ್ಲಿ ಸುಬ್ಬ, "ಅಕ್ಕಾ ನೀನು ಅಮೇರಿಕಾಗೆ ಹೋದ ಮೇಲೆ ನಮ್ಮನ್ನೆಲ್ಲಾ ಮರೆತ್ಬಿಡ್ತೀಯೇನೋ" ಎಂದ.

"ಎಲ್ಲಾದರೂ ಉಂಟೇನೋ ಪುಟ್ಟ, ಪ್ರಪಂಚದ ಯಾವ ಮೂಲೆಗೆ ಹೋದರೂ ತವರಿನ ಚೆಲುವನ್ನು ಬಾಲ್ಯದ ಆನಂದದ ದಿನಗಳನ್ನು ಮರೆಯಲು ಸಾಧ್ಯವಿಲ್ಲಪ್ಪ."ಎಂದಳು.

ತಾಯಿ ಕಣ್ಣೀರು ಹಾಕುತ್ತ,

"ತುಂಬಾ ದೂರ ಹೊರಟೋಗ್ತಿಯಮ್ಮ. ನಾವೇನು ಕರೆದು ಕಳಿಸಿ ಮಾಡುವ ಹಾಗೂ ಇಲ್ಲ" ಎಂದರು.

ತಂದೆ, "ನಮ್ಮ ಕೈಗೇ ಸಿಕ್ಕೋಲ್ಲ ಇನ್ಮೇಲೆ. ಈಗಲೇ ನನ್ನ ಕಣ್ಣಿಗೆ ನೀನು ಬೇರೆ ಹುಡುಗಿಯ ಹಾಗೆ ಕಾಣ್ತೀಯ" ಎಂದರು.

"ಹಾಗಂದರೇನಪ್ಪ. ವೇಷ ಭೂಷಣ ವಿದ್ಯೆ ಅದರಲ್ಲಿ ಏನು ಬದಲಾವಣೆ ಆದರೂ ನಾನು ನಿಮ್ಮ ಪುಟ್ಟೀನೇ ಅಲ್ವೆ?" ಎಂದಳು.

ತಾಯಿ ಹದಿನೈದು ದಿನ ಅಲ್ಲೇ ಇಟ್ಟು ಕೊಂಡು ಮಗಳು ಅಳಿಯನಿಗೆ ಬೇಕಾದ ಉಪಚಾರ ಮಾಡಿದರು. ಊರಿಗೆ ಹೊರಡುವ ಹಿಂದಿನ ದಿನ ತಾಯಿ, ಮಗಳನ್ನು ಗುಟ್ಟನಲ್ಲಿ ಕರೆದು,

"ನಿನಗೆ ಆಗ ನೋಡಿತ್ತಲ್ಲ ಮೇಷ್ಟ್ರ ಕಡೆ ಬಳಗದ ವರ, ಅವನಿಗ ನಿನ್ನ ಜೊತೆಯಲ್ಲೇ ಮದುವೆಯಾಗಿ ಮೂರು ಮಕ್ಕಳು. ಈಗ ನಾಲ್ಕನೇ ಬಾಣಂತನಕ್ಕೆ ಹುಡುಗಿ ತೌರಿಗೆ ಹೋಗಿದ್ದಾಳೆ. ನೀನು ಯಾರಾದರೂ ಡಾಕ್ಟರಿಗಾದರೂ ತೋರಿಸು ಅಥವಾ ನಾಗರ ಪ್ರತಿಷ್ಠೆಯಾದರೂ ಮಾಡು" ಎಂದರು. ಗೌರಿ ಮನದಲ್ಲೇ ನಕ್ಕು, "ನೋಡೋಣಮ್ಮಾ ಇವರಿಗೆ ಹೇಳ್ತೀನಿ" ಎಂದಳು.

ತುಮಕೂರಿನಲ್ಲಿ ಕೌಸಲ್ಯಮ್ಮ ಭಾರಿ ಔತಣ ಮಾಡಿ ಗೌರಿಗೆ ಮೈಸೂರು—ರೇಶ್ಮೆ ಸೀರೆಯನ್ನು ಉಡುಗೊರೆಯಾಗಿ ಇತ್ತರು. ಅವರ ಮಗಳು ಈಗ ಮದುವೆಯಾಗಿ ಹೈದರಾಬಾದಿನಲ್ಲಿದ್ದಳು

ವಿಶಾಲಾಕ್ಷಮ್ಮನೂ ಮಗ ಸೊಸೆಯರಿಗ ಉಪಚಾರ ಮಾಡುವುದರಲ್ಲಿ ಹಿಂದುಳಿಯಲಿಲ್ಲ. ಪ್ರಮೀಳ ಸುರೇಶನಿಗೆ, "ಅಂತೂ ನಿನ್ನ ಪ್ರಯೋಗದಲ್ಲಿ ಕಷ್ಟಪಟ್ಟು ಯಶ ಗಳಿಸಿದೆ" ಎಂದಳು.

"ಕಷ್ಟಪಟ್ಟೋನು ನಾನಲ್ಲ ಪಮ್ಮಿ. ನಿನ್ನ ಅತ್ತಿಗೆ" ಎಂದ ಸುರೇಶ.

ಆಗ ಇಬ್ಬರೂ ಗೌರಿ ಮೊದಲಸಲ ಆ ಮನೆಗೆ ಬಂದಾಗಿನ ಚಿತ್ರವನ್ನು ನೆನೆಸಿಕೊಂಡರು.

ಮತ್ತೆ ಡೆಲ್ಲಿಯಲ್ಲಿ ಎಂಟು ದಿನಗಳ ಸಿದ್ಧತೆಯನ್ನು ಮುಗಿಸಿ ಹೊರಟರು ಸುರೇಶ, ಗೌರಿ. ನಿರ್ಮಲ, ಸ್ವಾಮಿ, ನಂದಿನಿ, ಏರೋಡ್ರೋಮಿಗೆ ಬಂದಿದ್ದರು. ಅವರಿಗೆ "ಹೋಗಿ ಬರುತ್ತೇನೆ" ಎಂದು ಹೇಳುವಾಗ ಗೌರಿಗೆ ಗಂಟಲಿನಲ್ಲಿ ಏನೋ ಸಿಕ್ಕಿಕೊಂಡಂತಾಯಿತು.

ವಿಮಾನ ನೆಲವನ್ನು ಬಿಟ್ಟು ಮೇಲೆ ಮೇಲೆ ಹಾರಿತು

ಜನ್ಮ ಕೊಟ್ಟ ಮಾತೃಭೂಮಿಗೆ ಒಳ್ಳೆಯ ಹೆಸರನ್ನು ತರುವಂತೆ ಮಾಡೆಂದು ದೇವರನ್ನು ಪ್ರಾರ್ಥಿಸಿದಳು

ಹಾಗೆ ಬಾಳಿಗೊಂದು ಅರ್ಥ ಕೊಟ್ಟ, ಕೈ ಹಿಡಿದ ಪತಿಯನ್ನು ಕಣ್ಣಿನಿಂದಲೇ ಮೈತುಂಬ, ಮನದ ತುಂಬ ತುಂಬಿಕೊಂಡಳು.

ದಿವ್ಯ ದೀಪಾವಳಿಯ ಹಾರ್ದಿಕ ಶುಭಾಶಯಗಳು

ಹೊಟೆಲ್ ಗೋಕುಲ

(ಉಪಹಾರ, ಊಟ ವ ವಸತಿ)



HOTEL GOKUL

Restaurant, Boarding & Lodging

ಸ್ಟೇಶನ್ ರೋಡ್, ಕೊಲ್ಹಾಪುರ

Station Road - KOLHAPUR

(ಬಸ್‌ಸ್ಟ್ಯಾಂಡನಿಂದ ಕೇವಲ ೫ ನಿಮಿಷ ಮಾತ್ರ)

ಉಪಹಾರ: ಗ್ರಾಹಕರ ಆಯ್ಕೆಗೆ ಅನುಗುಣವಾಗಿ ದಿನ ನಿತ್ಯ ಬೇರೆ ಬೇರೆ ವೇಳೆಯಲ್ಲಿ ವಿವಿಧ ನಮೂನೆಯ ಸಿಹಿ-ಖಾರ ಖಾದ್ಯಗಳು, ಹಾಗೂ ಬಿಸಿ ವ ತಂಪಾದ ಪಾನೀಯಗಳು ರುಚಿಯಲ್ಲಿ ಮಿಗಿಲು. ಶುಚಿತ್ವಕ್ಕೆ ಪ್ರಾಮುಖ್ಯತೆ.

ಊಟ : ಸಸ್ಯಾಹಾರಿ ಊಟ ದಕ್ಷಿಣ-ಉತ್ತರ ಹಿಂದುಸ್ತಾನದ ಎರಡೂ ಪದ್ಧತಿಗಳ ಗ್ರಾಹಕರ ಅಭಿರುಚಿಗಳಿಗೆ ತಕ್ಕದ್ದಾಗಿದೆ.

ವಸತಿ : ನೂತನ ಕಟ್ಟಡದಲ್ಲಿ ಆಧುನಿಕ ಮಾದರಿಯ **ಸಿಂಗಲ್** ಹಾಗೂ **ಡಬಲ್** ರೂಮ್‌ಗಳು. ಅವಕ್ಕೆ ಹೊಂದಿ ಸ್ನಾನಗೃಹ-ಅದರಲ್ಲಿ ಬಿಸಿನೀರಿನ ಪ್ರತ್ಯೇಕ ವ್ಯವಸ್ಥೆ. ಸುಖನಿದ್ರೆಗಾಗಿ ಮೆತ್ತಗಿನ **'ಡನ್‌ಲಪ್'** ಹಾಸಿಗೆ ತಲೆದಿಂಬುಗಳು. ಮೇಲ್ವಿಚಾರಣೆಗೆ ದಕ್ಷ ಆಡಳಿತ ವರ್ಗ. ಕಾರುಗಳನ್ನು ನಿಲ್ಲಿಸಲು ಅನುಕೂಲವಾದ ಸ್ಥಳ.

ಇನ್ನೂ ಅನೇಕ ಸೌಲಭ್ಯಗಳನ್ನು ಹೊಂದಿರುವ ಈ ಅದ್ವಿತೀಯ 'ಹೊಟೆಲ್ ಗೋಕುಲ' ರೇಲ್ವೆ ಸ್ಟೇಶನ್, ಬಸ್ ಸ್ಟ್ಯಾಂಡ್ ವ ಮಾರ್ಕೆಟ್‌ಗಳಿಗೆ ತೀರ ಸಮೀಪವಿದ್ದು ನಗರದ ಕೇಂದ್ರ ಸ್ಥಳದಲ್ಲಿದೆ.

ಪ್ರೊ :- ಎಮ್. ಆರ್. ಪ್ರಭು ಹಾಗೂ ಎಮ್. ವಿ. ಕಾಮತ.

೧೯೪೨ ನೇ ಇಸವಿಯ
'ಕ್ವಿಟ್ ಇಂಡಿಯಾ' ಸ್ವಾತಂತ್ರ್ಯದ
ಚಳುವಳಿಯ ಸಂದರ್ಭದಲ್ಲಿ
ನಡೆದ ಒಂದು ಪ್ರಸಂಗ

ದೇಶದ್ರೋಹಿ

[ಏಕಾಂಕ ನಾಟಕ]

(ಎಲ್ಲ ಹಕ್ಕುಗಳನ್ನು ಕಾದಿರಿಸಿದೆ)

— ಅಹೋಬಲ ಶಂಕರ

ಸ್ಥಳ:— ವಿರೂಪಾಕ್ಷಿ
ಮೈಸೂರು ಸಂಸ್ಥಾನದ
ಆಂಧ್ರ-ತಮಿಳು ನಾಡಿನ
ಗಡಿಯಲ್ಲಿ ಒಂದು ಸಣ್ಣ ಊರು

—: ಪಾತ್ರಗಳು :—

ಸಾಂಬಮೂರ್ತಿ	ವಯಸ್ಸು ೫೪ ಪೋ. ಇನ್‌ಸ್ಪೆಕ್ಟರ್
ಶಾಮಾಚಾರ್ಯ. . . .	ವಯಸ್ಸು ೫೫ ಪೋಸ್ಟ್ ಮಾಸ್ಟರು
ಸೂರು [ಸೂರ್ಯನಾರಾಯಣ] .	ವಯಸ್ಸು ೨೦ ಸಾಂಬಮೂರ್ತಿಯ ಮಗ
ಯಾಸೀನ್ . . .	ವಯಸ್ಸು ೩೫ ದಫೇದಾರ

ಕಾನ್‌ಸ್ಟೇಬಲ್‌ಗಳು, ವರದಪ್ಪ, ಇತ್ಯಾದಿ....

(ದೃಶ್ಯ-ವಿರೂಪಾಕ್ಷಿಯ ಪೋಲಿಸ್ ಸ್ಟೇಷನ್ನಿನ ಆಫೀಸ್ ರೂಮ್ ಎಡ ಬಾಗಿಲು ಲಾಕಪ್ಪಿನ ಕಡೆ ಮಧ್ಯದಬಾಗಿಲು, ಒಳಗಡೆ ಇನ್‌ಸ್ಪೆಕ್ಟರ್ ವಾಸದ ಮನೆಯ ಕಡೆ-ಬಲಗಡೆಯ ಬಾಗಿಲು ಸ್ಟೇಷನ್ನಿನ ವರಾಂಡ ಮತ್ತು ಬೀದಿಯ ಕಡೆ ಇದೆ. ಆಫೀಸು ರೂಮಿನ ಮಧ್ಯದಲ್ಲಿ ದೊಡ್ಡ ಮೇಜು-೨ ಮುಂದು ಕುರ್ಚಿ ಮೇಜಿನ ಮೇಲೆ ಮಸಿ ಕುಡಿಕೆ, ಲೇಖನಿಗಳು ಒಂದೆರಡು ಪೋಲೀಸ್, ಲಾ ಪುಸ್ತಕಗಳು...ಪಕ್ಕದಲ್ಲಿ ಟೆಲಿಫೋನ್, ಕಾಲಿಂಗ್ ಬೆಲ್ ರೂಮಿನ ಬೇರೊಂದು ಪಾರ್ಶ್ವದಲ್ಲಿ ಗೋಡೆಗೆ ಸೇರಿದಂತೆ ಮತ್ತೊಂದು ಸಣ್ಣ ಮೇಜು, ಕುರ್ಚಿ, ಮೇಜಿನ ಮೇಲೆ ಕೆಲವು ರಿಜಿಸ್ಟರುಗಳು, ಪೋಲೀಸ್ ಡೈರಿ ೨, ಒಂದೆರಡು ಫೈಲುಗಳು...ಗೋಡೆಯ ಮೇಲೆ ಬ್ರಿಟಿಷ್ ಚಕ್ರವರ್ತಿ ಆರನೆ ಜಾರ್ಜ್, ಮತ್ತು ಮೈಸೂರು ಮಹಾರಾಜ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ ತಸಬೀರಗಳು ತಗುಲಿ ಹಾಕಲ್ಪಟ್ಟಿವೆ. ಬೇರೊಂದು ಕಡೆ ಒಂದ ವಾಲ್ ಕ್ಯಾಲೆಂಡರ್... ಬಾಗಿಲುಗಳಿಗೆಲ್ಲ ಪರದೆಗಳು ಹಾಕಲ್ಪಟ್ಟಿವೆ.

ಕಾನ್‌ಸ್ಟೇಬಲ್ ವರದಪ್ಪ ಬೂಟ್ಸಿಲ್ಲದ ಯೂನಿಫಾರಂ ಧರಿಸಿ ಸಣ್ಣ ಮೇಜಿನ ಬಳಿ ಕೂತು ರಿಜಿಸ್ಟರಿನಲ್ಲಿ ಏನೋ ಬರೆಯುತ್ತಿದ್ದಾನೆ- ಸಂಜೆ ಆರು ಗಂಟೆ ಕತ್ತಲಾಗುತ್ತಿದೆ. ದೀಪವಾಗಲೇ ಹೊತ್ತಿಸಿದೆ ಒಳಗಡೆ. ಮಧ್ಯದ ಬಾಗಿಲಿಂದ ಇನ್‌ಸ್ಪೆಕ್ಟರು ಸಾಂಬಮೂರ್ತಿಯ ಪ್ರವೇಶ...ಧಡೂತಿ ಆಕಾರ ಚೂಪಾದ ಬಿಳೀ ಕಪ್ಪು ಕೂದಲು ಮಿಶ್ರವಾದ ಮೀಸೆಗಳು. ಇನ್‌ಸ್ಪೆಕ್ಟರ ಬೂಟ್ಸಿನ ಶಬ್ದ ಕೇಳಿದೊಡನೆ ಬರೆಯುತ್ತಿದ್ದ ವರದಪ್ಪ ಪಟಕ್ಕನೆ ಎದ್ದು ಅಟೆನ್‌ಷನ್ ನಿಂತು ಸಲಾಮು ಮಾಡುತ್ತಾನೆ...ಮತ್ತೆ ಕೂತು ಬರೆಯಲು ತೊಡಗುತ್ತಾನೆ.)

ಸಾಂಬ :— (ಕುರ್ಚಿಯ ಮೇಲೆ ಕೂಡುತ್ತ) ಏನಯ್ಯಾ, ವರದಪ್ಪಾ, ಹೇಗಿದ್ದಾರೆ ಹುಡುಗರು, ಎಲ್ಲಾ ಗುಮ್ಮಾಗಿದಾರಾ ?

ವರದ :— ಹೂಂ, ಸಾರ್...ಗುಮ್ಮಾಗವರೆ...ಏನೂ ಗಲಾಟೆಯಿಲ್ಲ... ಮೊದಲು ಸ್ವಲ್ಪ "ರಾಂಗ್" ಮಾಡಿದರು...ಈಗೆಲ್ಲಾ ಗಪ್‌ಚುಪ್ಪಾಗವರೆ. ಬರೀ ಹುಡುಗರು ಸಾರ್ ಅವರು. ಹೆದರಿಬಿಟ್ಟವರೆ.

ಸಾಂಬ :— ನಂಬೋಕಿಲ್ಲಯ್ಯಾ ಅವರನ್ನ. ಹುಡುಗರು ಅಂತ ಸುಮ್ಮನೆ ಬಿಟ್ಟು ಬಿಡೋ ಹಾಗಿಲ್ಲ...ಬೆಂಗಳೂರು, ಮೈಸೂರುಗಳಲ್ಲೆಲ್ಲಾ ಪೋಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಾ ಇದ್ದಾರೆ...ಆ ಪೋಸ್ಟ್ ಮಾಸ್ಟರ ಮಗನೇ ಇವರಿಗೆಲ್ಲ ಪುಢಾರಿ...ಚೋಟುದ್ದ ಹುಡುಗ ಎಷ್ಟು ಗಲಾಟೆ ಎಬ್ಬಿಸಿಬಿಟ್ಟಿದ್ದಾನೆ ! ...ಯಾಸೀನ್ ಎಲ್ಲಿ ?

ವರದ :— ಸಾರ್, ಯಾಸೀನ್ ಮನೆಗೆ ಹೋಗಿ ಜಲ್ದಿ ಬಂದು ಹಾಜರಾಗ್ತೀನಿ ಅಂತ ಹೋದ...ರಾತ್ರಿ ಪೆಟ್ರೋಲ್ ಡ್ಯೂಟಿ ಇದೆಯಲ್ಲ ಸಾರ್, ಯಾಸೀನೂ, ಗಿರಿಯಪ್ಪಾ, ಕಂದವೇಲೂ !

ಸಾಂಬ : ಏನು ಹೋಗಿ ಕಡೀತಾರೋ ಗೊತ್ತಿಲ್ಲ. ಹದಿನೈದು ದಿನಗಳಾಯಿತು. ಆಸಾಮಿಯನ್ನ ಹಿಡಿದಿಲ್ಲ...ಈಗಾಗಲೇ ಏಳೆಂಟು ಕಡೆ ಟೆಲಿಗ್ರಾಫ್ ತಂತಿ ಕತ್ತರಿಸಿದಾರೆ ಪುಂಡು ಸೂಳೇಮಕ್ಕಳು; ಇವತ್ತು ನೋಡೋಣ...ಈ ಪೋಸ್ಟ್‌ಮಾಸ್ಟರ ಮಗನನ್ನ ಲಾಕಪ್ಪಿನಲ್ಲಿ ಕೋಳಿಯ ಹಾಕಿದರೆ ಗೊತ್ತಾಗತ್ತೆ...ಇವನದೇ ಕಿತಾಪತಿಯೋ ಅಥವಾ ಇನ್ಯಾರದಾದರೂ (ನೇಪಥ್ಯದಿಂದ ಇದ್ದಕ್ಕಿದ್ದಂತೆ "ಬೋಲೋ ಭಾರತ ಮಾತಾಕಿ ಜೈ ಮಹಾತ್ಮಾ ಗಾಂಧಿಕೀ...ಜೈ ಎಂಬ ಐದಾರು ಹುಡುಗರ ಕೊರಳಿಂದ ದೊಡ್ಡ ದನಿಯಲ್ಲಿ ಜಯಘೋಷ ಕೇಳಬರುತ್ತದೆ)

(ಇನ್ಸ್ಪೆಕ್ಟರರೂ, ವರದಪ್ಪನೂ ಪರಸ್ಪರ ಮುಖ ನೋಡಿಕೊಳ್ಳು ವರು. ಸಾಂಬಮೂರ್ತಿಗಳ ಮುಖ ಕೋಪದಿಂದ ಕೆಂಪಾಗಿರುವುದು. ವರದನ ಕಣ್ಣುಗಳಲ್ಲಿ ಹೆದರಿಕೆ. ಸಾಂಬಮೂರ್ತಿಗಳ ಕಣ್ಣುಗಳನ್ನು ಎದುರಿಸಲಾರ.)

ಸಾಂಬ :— ಇದೇ ಏನಯ್ಯಾ ಗುಮ್ಮಾಗಿರೋದು. ಹುಡುಗರೂ ಒಬ್ಬೊಬ್ಬರಿಗೂ ತಲಾ ಹತ್ತು ಛಡಿ ಏಟು ಕೊಟ್ಟಿದ್ದರೆ ಆಗ ನೋಡುತಾಯಿದ್ದೆ...ನೀವೆಲ್ಲಾ ಯಾಕರೋ ಪೋಲೀಸು ಹುದ್ದೆಗೆ ಸೇರಿದಿರಿ ?

ವರದ :— ಹುಡುಗರು ಸಾರ್...

ಸಾಂಬ :— (ಗರ್ಜಿಸುತ್ತ) ಮುಚ್ಚು ಬಾಯಿ...ಹುಡುಗರಂತೆ! (ಮತ್ತೆ ನೇಪಥ್ಯದಲ್ಲಿ ಧ್ವನಿ...ಜಯ ಘೋಷ) ಶಟ ಅಪ್ ! ತಡೀರಿ ಮಾಡ್ತೀನಿ ನಿಮಗೆ (ಎದ್ದು ಬೆಲ್ಟನ್ನು ತೆಗೆದು ಗಾಳಿಯಲ್ಲಿ ಬಾರಿಸುತ್ತಾ) ತಡೀರಿ! ನಿಮ್ಮ ಭಾರತ ಮಾತೆಗೆ ಜಯ ತೋರಿಸುತ್ತೀನಿ ! (ಲಾಕಪ್ಪಿನ ಬಾಗಿಲ ಕಡೆ ಹೋಗುತ್ತಿರುವಾಗ ಬೀದಿಯ ಬಾಗಿಲ ಬಳಿ ಯಾರೋ ಬಂದ ಶಬ್ದ. ವರದನೂ ಎದ್ದು 'ಸಾರ್. ಯಾರೋ ಬಂದವರೆ!' ಎಂದು ಕೂಗುವನು.)

(ಪ್ರವೇಶ ಪಾಂಡುರಂಗರಾವ್...ಸುಮಾರು ೪೫ ವರುಷ...ಸಣ್ಣಗೆ ಉದ್ದನೆಯ ವ್ಯಕ್ತಿ. ಕಚ್ಚೆ ಪಂಚೆ...ಷರಟು...ಹೆಗಲ ಮೇಲೆ ವಲ್ಲಿ)

ಪಾಂಡು :— ಇನ್ಸ್ಪೆಕ್ಟರಿದಾರೋ ?

ಸಾಂಬ :— (ಕೋಪದಿಂದ ತಿರುಗಿ) ಏನಾಗಬೇಕಯ್ಯಾ ಇನ್ಸ್ಪೆಕ್ಟರಿಂದ ? ಯಾಕೆ?

ಪಾಂಡು :— (ಹಿಂದೆ ತಿರುಗಿ) ಇನ್ಸ್ಪೆಕ್ಟರಿದಾರೆ ಬನ್ನೀ...ಪೋಸ್ಟ್ ಮಾಸ್ಟರೇ... (ಸಾಂಬಮೂರ್ತಿ ಕಡೆ ನೋಡುತ್ತಾ) ಪೋಸ್ಟ್ ಮಾಸ್ಟರು ನಿಮ್ಮನ್ನ ಭೆಟ್ಟಿಯಾಗಲಿಕ್ಕೆ ಬಂದಿದಾರೆ ಇನ್ಸ್ಪೆಕ್ಟರೇ !

(ಸಾಂಬಮೂರ್ತಿಯ ಮುಖ ಚಹರೆ ಬದಲಾಯಿಸುವುದು. ಮುಖದ ಮೇಲೆ ಅದಷ್ಟು ಗಾಂಭೀರ್ಯ. ಸೌಜನ್ಯ, ತೋರುತ್ತ ಬಾಗಿಲ ಕಡೆ ನೋಡುವನು.)

(ಪೋಸ್ಟ್‌ಮಾಸ್ಟರ್ ಶಾಮಾಚಾರ್ಯರ ಪ್ರವೇಶ. ಸ್ವಲ್ಪ ಕುಳ್ಳನೆ ಶರೀರ ಕೃಶ..ವಯಸ್ಸು ೫೫ ಆದರೂ ಹೆಚ್ಚು ಕಾಣುತ್ತದೆ. ತಲೆಯ ಮೇಲೆ ರುಮಾಲು...ಮೈ ಮೇಲೆ ಕ್ಲೋಸ್ ಕಾಲರ್ ಕೋಟು ಕಚ್ಚೆ ಪಂಚೆ...ಮುಖ ಆವೇಶಯುಕ್ತವಾಗಿದೆ...)

ಸಾಂಬಃ- (ಉಪಚಾರದ ದನಿಯಲ್ಲಿ) ಬರಬೇಕು ಪೋಸ್ಟ್‌ಮಾಸ್ಟರು! ನಿಮಗೇ ಹೇಳಿಕಳುಹಿಸಬೇಕು ಅಂತ ಇದ್ದೆ.

ಶ್ಯಾಮು :— (ಆತನ ಕಡೆ ಗಮನ ಕೊಡದೆ ಸುತ್ತಮುತ್ತ ನೋಡುತ್ತ) ಎಲ್ಲಿ ನಮ್ಮ ರಾಜೂ...(ಗಟ್ಟಿಯಾಗಿ ಕೂಗುತ್ತ) ರಾಜೂ...ರಾಜೂ...

ಸಾಂಬ :— ಅದೇ ವಿಷಯ ಮಾತಾಡಬೇಕು ಅಂತಲೇ. ಕೂತುಕೊಳ್ಳಿ ಎಲ್ಲಾ ಮಾತಾಡೋಣ.

ಶಾಮು :— ಇನ್ನು ಕೂತುಕೊಳ್ಳುವುದಕ್ಕೆ ಪುರಸೊತ್ತಿಲ್ಲ ಸ್ವಾಮಿ... ನನ್ನ ಮಗ ರಾಜೂ ಎಲ್ಲೀ...ಕರೆಸಿ...ಈಗಲೇ ಕರೆದುಕೊಂಡು ಹೋಗಿ ಬಿಡುತೇನೆ...ರಾಜೂ...

ಸಾಂಬ :— (ದುಗುಡದಿಂದ) ಕರೆದುಕೊಂಡು ಹೋಗುವಿರಂತೆ...ಕೂಡಿ ಶಾಮಾಚಾರ್ಯರೆ ನಿಧಾನವಾಗಿ ಮಾತಾಡೋಣ.

ಶಾಮು :— ಮಾತಾಡೋದೇನ್ರಿ ಇದೆ? ಇನ್ನು ನನ್ನ ಮಗನನ್ನು ಬಿಡಿ ಈಗಲೇ ಅವರಮ್ಮ ಕಾದಿದಾಳೆ—

ಸಾಂಬ :— (ಗಂಭೀರವಾಗಿ) ಹಾಗೆಲ್ಲ ಬಿಡುವುದಕ್ಕಾಗೋದಿಲ್ಲ ಶಾಮಾಚಾರ್ಯರೆ...ನೀವು ಕೂತುಕೊಂಡರೆ ಎಲ್ಲ ಎಕ್ಸಪ್ಲೇನ್ ಮಾಡಬಹುದು...(ಎಂದು ಪಾಂಡುರಂಗರಾವ್ ಕಡೆ ನೋಡುವನು. ಪಾಂಡು ಶಾಮಾಚಾರ್ಯರ ಕಡೆ ತಿರುಗಿ ದೈನ್ಯವಾಗಿ) :— ನನ್ನ ಮಾತು ಕೇಳಿ ಪೋಸ್ಟ್ ಮಾಸ್ಟರೇ...ಇನ್ಸ್ಪೆಕ್ಟರು ಏನು ಹೇಳುತಾರೋ, ಸ್ವಲ್ಪ ಕೇಳಿ.

ಶಾಮು :—(ರೇಗಿ) ನಿಮ್ಮದೇನಯ್ಯಾ ಶಿಫಾರಸು? ನನ್ನ ಮಗನನ್ನ...! ನನ್ನ ಮಗನನ್ನ ಬಿಡು ಅಂತ ಹೇಳು ಮೊದಲು. ರಾಜೂ (ನೇಪಥ್ಯದಿಂದ "ಬೋಲೋ ಭಾರತ ಮಾತಾಕಿ ಜೈ" ಎಂಬ ದನಿ ಕೇಳಿಬರುವುದು)

ಸಾಂಬ :—ಕೇಳಿದಿರಾ ಸುಪುತ್ರನ ಧ್ವನಿ...ಏನಾಗಿಲ್ಲ ನಿಮ್ಮ ಮಗ... ಜೋರಾಗಿದ್ದಾನೆ, ಅಂತೂ ಪುಣ್ಯ ಮಾಡಿದ್ದೀರಿ... Really, Mr. Shamacharya, I am Sorry for you with all respects to you of course.

ಶಾಮು:— ನಿಮ್ಮ ಸಾರಿಗಳು ಯಾರಿಗೆ ಬೇಕರಿ? ಅಲ್ರೀ ನನ್ನ ಮಗನನ್ನ ಯಾಕರೀ ಅರೆಸ್ಟ್ ಮಾಡಿದ್ದು ನೀವು...? ಈಗವನು ಕೂಗಿದ್ದು ಲಾಕಪ್ಪಿನಿಂದಲೇ? ನಿಮಗೇನರಿ ಬಂತು ಅವನನ್ನು ಲಾಕಪ್ಪಿನಲ್ಲಿ ಕೂಡಿಡುವುದಕ್ಕೆ? ಹದಿನೈದು ವರುಷದ ಹುಡುಗನ ಮೇಲೇ ನಿಮ್ಮ ಜುಲುಮೆ? ಶೇಮ್‌ಫುಲ್! ಅವನೇನು ಕಳ್ಳತನ ದರೋಡೆ ಮಾಡಿದ್ದಾನೇನ್ರಿ?

ಸಾಂಬ:— ಕೋಪಿಸಬೇಡಿ ಶಾಮಾಚಾರ್ಯರೆ, Please don't get excited. ನೀವೂ ನನ್ನ ಹಾಗೇ ಗವರ್ನಮೆಂಟ ಸರ್ವಂಟ್. ಅದರಲ್ಲೂ ಹಿಸ್ ಮೆಜೆಸ್ಟೀಜ ಸರ್ವಂಟ್.... ನೀವು ಖಂಡಿತ ನನ್ನ 'ಪೊಜಿಶನ್ ಅಪ್ರಿಶಿಯೇಟ್ ಮಾಡಲೇಬೇಕು. ಮಗನೇ ಆಗಲೀ, ಯಾರೇ ಆಗಲಿ Sedition is Sedition... ಅರೇ ನಿಂತೇ ಇದ್ದೀರಲ್ಲ, ಕೂಡಿ ಸ್ವಾಮಿ, ನಿಧಾನವಾಗಿ ಎಲ್ಲಾ ಮಾತಾಡೋಣ, ನಿಮ್ಮ ಹುಡುಗ ಕ್ಷೇಮವಾಗಿದಾನೆ...

ಶಾಮು:- ಇನ್ನು ಕೂತುಕೊಳ್ಳೋದು ಯಾಕ್ರೀ? ಬಿಟ್ಟುಬಿಡಿ ನನ್ನ ಮಗನನ್ನ, ಕರೆದುಕೊಂಡು ಹೋಗುತ್ತೇನೆ. ಮಾತೆಲ್ಲ ನಾಳೆ ಆಗಲಿ, ಇಸ್ಪೀಟಿಗೆ ಸೇರೋವಾಗ

ಸಾಂಬಃ- ಹಾಗೆಲ್ಲ ಬಿಟ್ಟುಬಿಡುವುದಕ್ಕಾಗುವುದಿಲ್ಲ, ಪೋಸ್ಟ್ ಮಾಸ್ಟರೇ- without investigatian I cant free him. This is a Sedition case... ಕಳ್ಳತನಕ್ಕಿಂತಲೂ ಸೀರಿಯಸ್!

ಶಾಮು:- ಹದಿನೈದು ವರುಷದ ಹುಡುಗ 'ಸೆಡಿಶನ್' ಏನ್ರೀ ಮಾಡ್ತಾನೆ? ರಿಡಿಕ್ಯುಲ್‌ಸ್! (ಮತ್ತೆ ನೇಪಥದಲ್ಲಿ ದನಿ- ಬೋಲೋ ಭಾರತ ಮಾತಾಕೀ- ಜೈ... ಮಹಾತ್ಮಾ ಗಾಂಧೀಕಿ... ಜೈ...)

ಸಾಂಬಃ- ಹ್ಞ ಕೇಳಿದಿರಾ... ಕೇಳಿ ಕೇಳಿ... ಹದಿನೈದು ವರುಷದ ಹುಡುಗ...! (ವ್ಯಂಗ್ಯವಾಗಿ ನಗುವನು.)

ಶಾಮು:- ಹಾಂ... ಅದರಲ್ಲೇನರಿ Sedition? ನಮ್ಮ ದೇಶಮಾತೆಗೆ ಜೈ ಅಂದ" Sedition ನೇ... ಎಲ್ಲಿರೀ ನಿಮಗೆ ಶಿಕ್ಷಣ ಆದದ್ದು, ಇಂಗ್ಲೆಂಡಿನಲ್ಲೇ! ನಾನೂ ಕೂಗ್ತೇನೆ- ಭಾರತಮಾತಾಕೀ ಜೈ... ಜೈ ಭಾರತ ಮಾತಾಕಿ' (ಅದಕ್ಕೆ ಮಾರ್ದನಿಯಾಗಿ ಒಳಗಡಿಂದ ನಾಲ್ಕಾರು ಹುಡುಗರ ಕೊರಳಿನಿಂದ ಒಟ್ಟಿಗೆ "ಬೊಲೋ ಭಾರತ ಮಾತಾಕೀ... ಎಂಬ ಜಯ ಜಯಕಾರ ಕೇಳಿ ಬರುವುದು. ಆ ಮೇಲೆ ದೊಡ್ಡ ದನಿಯಲ್ಲಿ British Swine Quit India ಎಂಬ ಕೂಗು)

ಸಾಂಬಃ- (ಉರಿದೆದ್ದು ಬಾಗಿಲ ಕಡೆ ಹೋಗುತ್ತ, ಬೆಲ್ಟನ್ನು ಮೇಜಿನ ಮೇಲೆ ಬಡಿಯುತ್ತ, "Shut up you Swine- ಹೋಗಿ ನೋಡೋ ವರದಾ!" (ಎಂದು ಕೂಗುವನು ವರದಪ್ಪ ಲಾಕಪ್ಪಿನ ಕಡೆ ಓಡುವನು.)

ಸಾಂಬಃ- (ಶಾಮಾಚಾರ್ಯರ ಕಡೆ ತಿರುಗಿ) ಕೇಳಿದಿರಾ ಸ್ವಾಮೀ, ಪುತ್ರನ ಪ್ರತಾಪ! ಕ್ವಿಟ್ ಇಂಡಿಯಾ... ಸೆಡಿಶನ್ ಅಲ್ಲವೇ...ಬ್ರಿಟಿಶ್ ನಮ್ಮ ರೂಲರ್ಸ್... ಅವರನ್ನು ಸ್ವೈನ್ ಅಂದರೆ Sedition ಅಲ್ಲದೆ ಸ್ತೋತ್ರ ಅಲ್ಲವಾ? ತಾನು ಕೆಡೋದಲ್ಲದೆ ಆ ಹುಡುಗರನ್ನೆಲ್ಲ ಕೆಡಿಸಿ ಬಿಟ್ಟಿದ್ದಾನೆ ನಿಮ್ಮ ಮಗ.

ಶಾಮು :— ಇದರಲ್ಲಿ ಕೆಡೋದೇನಿದೆಯಯ್ಯಾ? ಕೆಟ್ಟರೋದು ನಾವು, ನೀವು ! ಹೊಟ್ಟೆಗೋಸ್ಕರ ಗುಲಾಮರಾಗಿರೋವರು...

ಸಾಂಬಃ- (ಗರ್ಜಿಸುತ್ತ) What !!

ಪಾಂಡುಃ- (ಹತ್ತಿರ ಬಂದು ಶಾಮಾಚಾರ್ಯರ ತೋಳನ್ನ ಮುಟ್ಟಿ) ನನ್ನ ಮಾತು ಕೇಳಿ ಪೋಸ್ಟ್‌ಮಾಸ್ಟರೇ ! ...ಸ್ವಲ್ಪ...ನಿದಾನ... ಯಾವುದೂ ದುಡುಕಬಾರದು.

ಶಾಮು:– (ಕೈಯನ್ನು ದೂಡುತ್ತ) ಬಿಡುಬಿಡಯ್ಯ, ಸಾಕು. ನನ್ನ ಮಗನನ್ನ ಲಾಕಪ್ಪಿನಲ್ಲಿ ಹಾಕಿರುವಾಗ...?

ಸಾಂಬ:– ಪೋಸ್ಟ್ ಮಾಸ್ತರೇ; ನೀವು ಸೆಂಟ್ರಲ್ ಗವರ್ನಮೆಂಟ್ ಸರ್ವಂಟ್ ಅಂಬೋದನ್ನ ಮರೆಯಬೇಡಿ. Don't forget that. I had to do my duty as Police officer oı ವಿರೂಪಾಕ್ಷಿ...

ಶಾಮು:- (ಆವೇಶದಿಂದ) ಆಡುವ ಹುಡುಗರನ್ನು ಲಾಕಪ್ಪಿನಲ್ಲಿ ಹಾಕ್ತುವುದು ನಿಮ್ಮ ಡ್ಯೂಟಿ ಏನ್ರೀ? ಈ ಹುಡುಗರಿಂದ ನಿಮ್ಮ British ಸರ್ಕಾರಕ್ಕೆ ಅಪಾಯವಾಗೋಹಾಗಿದ್ದರೆ ಸುಟ್ಟು ಬಿಸಾಡಿ ಆ ಸರಕಾರವನ್ನ... ಅಷ್ಟ್ಯಾಕೆ ತೊಟ್ಟಿಲಲ್ಲಿರುವ ಮಕ್ಕಳನ್ನೆಲ್ಲ ಅರೆಸ್ಟ್ ಮಾಡಿ ಲಾಕಪ್ಪಿನಲ್ಲಿ ಹಾಕಿ...ನಿಮ್ಮ ಬ್ರಿಟಿಶ್ ಸರಕಾರವನ್ನ ಕಾಪಾಡಲಿಕ್ಕೆ! Talks Rubbish! ಹ್ಹ...!

ಸಾಂಬ:-(ಕೋಪವನ್ನ ತುಳಿದಿಟ್ಟುಕೊಳ್ಳುತ್ತ) Rubbish ಅಂತಲೇ ಅನ್ನಿ...ಪರವಾಯಿಲ್ಲ. You are excited ... ಆದರೆ ನಿಮ್ಮ ಬ್ರಿಟಿಶ್ ಸರಕಾರ ಅಂದಿರಲ್ಲ! ಪೋಸ್ಟ್ ಮಾಸ್ತರೇ...ಅದು ನನ್ನದೊಬ್ಬನದೇ ಅಲ್ಲ. ನಿಮ್ಮದೂ ಕೂಡ. You are living on the pay of the British Govt. ನಾನು ಮೈಸೂರು ಮಹಾರಾಜರ ಉಪ್ಪು ತಿಂತಾಯಿದೀನಿ. ... Remember that. ನಿಮ್ಮ ಮಗನ ಸೆಡಿಶನ್ ಇರಲಿ...ನಿಮ್ಮ ಬಾಯಲ್ಲಿ ಸೆಡಿಶನ್ ಬರದೇ ಇರೋ ಹಾಗೆ ನೋಡಿಕೊಳ್ಳಿ. Take care of that! ಇಷ್ಟರಲ್ಲೇ ನಿಮಗೆ ರಿಟೈರ್ ಆಗಬಹುದು. ಆದರೆ ನಿಮ್ಮ ಭಾವಮೈದ ಇವತ್ತಿಗೂ Asst. Law Secretary in Delhi...ಹ್ಹೂ...! (ಎಂದು ಶಾಮಾಚಾರ್ಯರ ಬಟ್ಟೆ ಕಡೆ ಹಠಾತ್ತಾಗಿ ನೋಡುವನು)

"ನನ್ನ ಮಗನ್ನ ಬಿಡಯ್ಯಾ"

ಶಾಮು:-[ಪಂಚೆಯ ನಿರಿಯನ್ನು ತೋರುತ್ತ] ಖಾದೀ ಕಾಣ್ರೀ... ಖಾದಿ...And I am proud of it. ನಾನು ಇನ್ನು ಆರು ತಿಂಗಳಿಗೆ ರಿಟೈರಾದರೆ ನೀವು ಇನ್ನು ಒಂದು ವರುಷಕ್ಕೆ ಆಗುತ್ತೀರಿ. ಆಗ ನೀವು ಭಾರತಮಾತೆಯ ಮಕ್ಕಳಾಗಿರದೆ ಇಂಗ್ಲೆಂಡು ಮಾತೆಯ ವೀರ ಪುತ್ರರಾಗಿರೋದಿಲ್ಲವಲ್ಲ...What nonsense are you talking!

ಸಾಂಬ:—ಇನ್ನು ನಿಮ್ಮ ಹತ್ತಿರ ಹೆಚ್ಚಿಗೆ ಮಾತಾಡಿ ಪ್ರಯೋಜನವಿಲ್ಲ. You are too much excited, [ಪಾಂಡು ಕಡೆ ತಿರುಗಿ] ಸ್ವಲ್ಪ ಹೇಳಿ ಇವರಿಗೆ...ನನಗೆ ಈಗ ಟೈಂ ಇಲ್ಲ. ನಾಳೆ ಮಾತಾಡೋಣ. ದಯುವಿಟ್ಟು ಕರೆದುಕೊಂಡು ಹೋಗಿ ಮನೆಯಲ್ಲಿ ಕಾಯ್ತಾ ಇರುತ್ತಾರೆ.

ಶಾಮು:- ನನ್ನ ಮಗನ್ನ ಕರೆದುಕೊಂಡು ಹೋಗದೆ ಇಲ್ಲಿಂದ ಕದಲೋದಿಲ್ಲ ನಾನು.You must release him at once (ಕೂಗುತ್ತ) ರಾಜೂ!

ಸಾಂಬ:- ಶಾಮಾಚಾರ್ಯರೆ. ಹಾಗೆಲ್ಲ ಬಿಡೋಕಾಗೋದಿಲ್ಲ, It is a serious case. I am sorry for you but - ಈಗ ನೀವು ದಯವಿಟ್ಟು ಹೋಗಿ.

ಶಾಮು:- (ಕೂಗುತ್ತ) ನನ್ನ ಮಗನ್ನ ಬಿಡಯ್ಯಾ!

ಸಾಂಬ:- (ಕೋಪವೇರಿ) ಏನಿದು. ನಾನೆಷ್ಟು ಮರ್ಯಾದೆಯಾಗಿದ್ದರೂ

ಪಾಂಡು:- ಶಾಮಾಚಾರ್ಯರೆ, ನನ್ನ ಮಾತು ಕೇಳಿ...ಸ್ವಲ್ಪ ತಾಳಿ... [ತೋಳನ್ನು ಹಿಡಿದು ಸಮಾಧಾನ ಮಾಡಲು ತೊಡಗುವನು]

ಶಾಮು:- [ರೋಷದಿಂದ ಕೈಕೊಡಹಿ] ಬಿಡಯ್ಯ ಅತ್ತಲಾಗೆ......ಏನು ಮಾಡ್ತಾನೋ ನೋಡೇಬಿಡ್ತೇನೆ......! ನನ್ನ ಮಗನ್ನ ಲಾಕಪ್ಪಿನಲ್ಲಿ ಹಾಕಿದಾನೆ!

ಸಾಂಬ:- ಅಗೋ ಮತ್ತೇ ಏಕವಚನ...! Give respect and take respect......ಕರಕೊಂಡು ಹೋಗಿ ಇವರನ್ನ ಪಾಂಡುರಂಗರಾಯರೇ...? He is losing control over himself! ಹೋಗಿ, ಶಾಮಾಚಾರ್ಯರೆ...Please go;

ಶಾಮು:- ಇಲ್ಲಿಂದ ಕದಲೋದಿಲ್ಲಾ! ನನ್ನ ಮಗನನ್ನ ಈ ಕ್ಷಣ ಹಾಜರು ಮಾಡಿ, ಹೋಗುತ್ತೇನೆ.

ಸಾಂಬ:- No, Impossible......ನೀವು ಹೋಗ್ತಿರೋ ಇಲ್ಲವೊ...... I am warning you!

ಶಾಮು:- I won't go! ಏನು ಮಾಡ್ತೀಯೋ ನೋಡೋಣ.

ಪಾಂಡು:- [ಅಂಗಲಾಚುತ್ತ] ಪೋಸ್ಟ್‌ಮಾಸ್ತರೇ? ದಯವಿಟ್ಟು ಬಂದು ಬಿಡಿ...ನಾ ಹೇಳ್ತೇನೆ ನೀವು ಬನ್ನಿ ಈಗ...

ಶಾಮು:- ಬಿಡಯ್ಯ ಸಾಕು...ಏನು ಮಾಡತಾನೋ ಅದನ್ನು ನೋಡಿ ಬಿಡುತ್ತೇನೆ ಇವತ್ತು!

ಸಾಂಬ:- ಬೇಡಾ, ಬೇಡಾ...ಒಳ್ಳೇ ಮಾತಲ್ಲಿ ಹೋಗಿ ಹೇಳಿದ್ದೇನೆ.

ಶಾಮು:- ನನ್ನ ಮಗನ್ನ ಬಿಡಯ್ಯಾ.

ಸಾಂಬ:- [ಕೈಯಲ್ಲಿನ ಬೆತ್ತವನ್ನು ನೆಲದ ಮೇಲೆಸೆದು] ಬಿಡೋದಿಲ್ಲ ಹೋಗಯ್ಯಾ! [ದುರುಗುಟ್ಟಿಕೊಂಡು ಶಾಮಾಚಾರ್ಯರ ಕಡೆ ಕಾಲು ಹಾಕುವನು].

ಶಾಮು:- [ಸ್ವಲ್ಪ ಬೆದರಿ ಹಿಂಜ... ...] By what right have you arrested my son, ... ? for what offience I want to know.

ಸಾಂಬ:- Sedition!

ಶಾಮು:- ಪ್ರಭಾತ್ ಫೇರಿ ಪ್ರೊಸೆಷನ್ ...ಡ್ ಮಾಡಿದರೆ seditian ಏ?

ಸಾಂಬ:- ಇಲ್ಲ ಟೆಲಿಗ್ರಾಫ್ ವೈಯರ್ ಕಟ್ ಮಾಡಿದ್ದಕ್ಕೆ!

ಶಾಮು : Rubbish! ಎವಿಡೆನ್ಸ್ ಏನಿದೆರಿ? ನಿಜವಾದ ತಪ್ಪಿತಸ್ಥನ್ನ ಹಿಡಿಯುವದಕ್ಕೆ ಕೈಲಿ ಆಗದೆ ಆಡುವ ಹುಡುಗರನ್ನು ಹಿಡಿಯೋದೇನ್ರಿ?

ಸಾಂಬ : On suspicion! ನಮಗೆ ರೈಟಿದೆ. ನಿಮಗೆ ಜಾಮೀನಾಗುವ ಹಾಗಿದ್ದರೂ ಬಿಡುವದಿಲ್ಲ. Defence of India rules ಮೇರೆಗೆ Suspicion ಮೇಲೆ detain ಮಾಡಿದ್ದೇನೆ. You must go now! At once.

ಶಾಮು : ಹಾಗಿದ್ದರೆ ಬಿಡೋದಿಲ್ಲಾ ನೀವು?

ಸಾಂಬ : ಬಿಡೋದಿಲ್ಲಾ, ಬಿಡೋದಿಲ್ಲಾ, ಬಿಡೋದಿಲ್ಲಾ. ಏನು ಮಾಡ್ತೀರೋ ಮಾಡಿಕೊಳ್ಳಿ ಹೋಗಿ.

ಪಾಂಡು: (ಕೈ ಕೈಹಿಸುಕಿಕೊಳ್ಳುತ್ತ) ಪೋಸ್ಟ್‌ಮಾಸ್ಟರೇ. ದಯವಿಟ್ಟು ಬಂದುಬಿಡಿ...... ಇನ್ನು ಸಾಕು...... ಇನ್‌ಸ್ಪೆಕ್ಟರೇ ಪ್ಲೀಜ್ ಅವರ ಮಾತನ್ನು ಸಿರಿಯಸ್ ಆಗಿ ತಗೋಬೇಡಿ... After all, you see. ಅವರ ಮಗ...! ಆ ಹುಡುಗನ ತಾಯಿಯೂ ತುಂಬಾ ಗೋಳಾಡುತ್ತಿದ್ದಾಳೆ...

ಸಾಂಬ : ನನಗೊತ್ತಿಲ್ಲವೇನ್ರೀ?... I too am a father But ಹೀಗೆ ಹುಡುಗರನ್ನು ಬೆಳಿಸೋದು ತಂದೆಯಾದವರೇ ಹೀಗೆ encourage ಮಾಡಿದರೆ...

ಶಾಮು: ಏನಾಗಿದಾನ್ರೀ ನನ್ನ ಮಗ? I am proud of my boy! ಎಲ್ಲರಿಗೂ ಅಂಥಾ ಮಕ್ಕಳು ಹುಟ್ಟಲಿ.

ಸಾಂಬ : ಸಾಕು ಬಿಡೀಪ್ಪಾ...ಆಹಾ... You must be proud of him and he must be proud of you but I would not be proud of such a son... ಅಂಥಾಪುಂಡನಾದ್ರೆ ನನ್ನ ಮಗ... God forbid ನಾನೇ ಹಿಡಿದು ಲಾಕಪ್ಪಿನಲ್ಲಿ ಹಾಕುತ್ತೇನೆ...

ಶಾಮು : ಸಂಸ್ಕಾರ ಬೇಕು ಕಣಯ್ಯಾ ಅಂಥ ಮಗ ಹುಟ್ಟೋದಕ್ಕೂ... ಸಿಂಹದ ಹೊಟ್ಟೇಲಿ ಸಿಂಹ ಹುಟ್ಟುತ್ತೆ... ಹೊರತೂ, ನರಿ ಹೊಟ್ಟೇಲಿ ನರಿಯೇ.

ಪಾಂಡು : (ತಬ್ಬಿಬ್ಬಾಗಿ) ಏನು ಮಾತಾಡ್ತೀರಿ ಪೋಸ್ಟ್‌ಮಾಸ್ಟರೇ... ಬನ್ನಿ ಬನ್ನಿ! ಹೋಗೋಣ ಇನ್ನು ಸಾಕು... (ಮತ್ತೆ ಕೈ ಹಿಡಿಯುವನು)

ಸಾಂಬ : ಅನ್ನಲಿ ಬಿಡಿ ಪಾಂಡುರಂಗರಾಯರೆ... ಅವರೇ ಸಿಂಹವಾಗಲಿ ನಾನೇ ನರಿಯಾಗಲಿ... I don't care. ಆದರೆ ಈಗ Get out at once... ಹೂ...ಕರೆದುಕೊಂಡು ಹೋಗಿ ಅವರನ್ನು. ಇಲ್ಲದೆ ಹೋದರೆ...

ಶಾಮು: ಇಲ್ಲದೆ ಹೋದರೆ ಏನಯ್ಯಾ ಮಾಡ್ತೀಯಾ? ಅರೆಸ್ಟ್ ಮಾಡ್ತೀಯಾ... ಇಗೋ ಮಾಡು... (ಕೂಗುತ್ತ) ಬೋಲೋ ಭಾರತ ಮಾತಾಕಿ!... (ನೇಪಥ್ಯದಿಂದ ಮತ್ತೆ ಜೈಕಾರ ಪ್ರತಿಧ್ವನಿಯಾಗುವುದು) British Swine! (ನೇಪಥ್ಯದಿಂದ Quit India' ಎಂಬ ಕೂಗು)

ಸಾಂಬ : (ಆವೇಶದಿಂದ ಪ್ರಜ್ಞೆ ತಪ್ಪಿ) Shut up-'Shut up! bloody Swine ತಡೀ ಮಾಡ್ತೇನೆ -Old bandy tool ಗೆ ಲಾಕಪ್ಪಿನಲ್ಲಿ ಹಾಕೋ! ಮಗನ ಜತೇಲಿ ಕೊಳೆಯಲಿ... ಲೋ ವರದಾ...! ಯಾಸೀನ್! ಯಾರೋ ಅಲ್ಲಿ Arrest the old bastard, we will teach him a lesson.

ಪಾಂಡು:- [ಗಾಬರಿಯಿಂದ ಪೋಸ್ಟ್‌ಮಾಸ್ಟರ ಮೈಮೇಲೆ ಬಿದ್ದು ಬಲಾತ್ಕಾರವಾಗಿ ಹೊರಗೆ ಎಳೆದುಕೊಂಡು ಹೋಗುವನು... ಶಾಮಾಚಾರ್ಯ ಆವೇಶದಿಂದ ಬಿಡಯ್ಯ... ನೋಡೇಬಿಡೋಣ... ಅರೆಸ್ಟ್ ಮಾಡಲಿ ನನ್ನ... ಇವನ ಇನ್‌ಸ್ಪೆಕ್ಟರಗಿರಿ ಎಷ್ಟು ದಿನ ಇರುತ್ತೊ ನೋಡ್ತೇನೆ... Damned boot licking ಗುಲಾಮ! ಎಂದು ಕೂಗುತ್ತಿದ್ದರೂ ಪಾಂಡುರಂಗರಾಯನ ಬಲವಾದ ಹಿಡಿತ ಬಿಡಿಸಿಕೊಳ್ಳಲಾರದೆ ಹೊರಗೆ ಹೋಗುವನು. ವರದಪ್ಪ ಒಳಗಡೆಯಿಂದ ಓಡಿ ಬಂದು ಕಕ್ಕಾಬಿಕ್ಕಿಯಾಗಿ ನೋಡುತ್ತಿರುವನು, ಸಾಂಬಮೂರ್ತಿ ರೋಷವನ್ನ ತುಳಿದಿಟ್ಟುಕೊಂಡು ಸುಮ್ಮನೆ ಉಸಿರುಬಿಡುತ್ತಾ ಬಾಗಿಲ ಕಡೆ ನೋಡುತ್ತಿರುವನು...]

ಸಾಂಬ:- ಆ ಹಾ ಹಾ! ಇವರು His Majesty's Government Servant! Post Master! ಯಾರು ಕೊಟ್ಟರೋ ಇಂಥವರಿಗೆ ಸೆಂಟ್ರಲ್ ಗವರ್ನ್‌ಮೆಂಟ್ ನೌಕರಿಗಳ್ನ!

ವರದ:- ಸಾರ್!

ಸಾಂಬ:- ಏನದು?

ವರದ:- ಯಾಸೀನ್ ಮಗಳಿಗೆ ಜ್ವರ ಅಂತೆ ಸಾರ್. ಇವತ್ತು ಪೆಟ್ರೋಲ್ ಡ್ಯೂಟಿ ಹೋಗಾಕೆ ಆಗ್ತದೋ ಇಲ್ಲವೋ ಅಂತಾ ಇದ್ದ ಸಾರ್.

ಸಾಂಬ:- ಮುಗಿದು ಹೋಯಿತು ಬಿಡು... ಒಳ್ಳೇ ಗ್ರಹಚಾರ... ಇನ್ಯಾರಿದ್ದಾರೆ? ದಫೇದಾರ್ ಕೆಂಚಪ್ಪ ಯಾವತ್ತು ಲೀವಿಂದ ವಾಪಸು ಬರೋದು?

ವರದ:- ಇನ್ನೂ ಒಂದು ವಾರ ಐತೆ ಸಾರ್... [ಟೆಲಿಫೋನ್ ಶಬ್ದ... ಸಾಂಬಮೂರ್ತಿ ರಿಸೀವರ್ ತೆಗೆದುಕೊಂಡು]

ಸಾಂಬ:- ಹಲೋ... ವಿರೂಪಾಕ್ಷಿ ಸ್ಟೇಷನ್ ಆಫೀಸ್... ಹೂ... ನಾನೇಪ್ಪ... ಸಾಂಬಮೂರ್ತಿ... ಏನು ವಿಷಯ-? My god-! Goods Train ಉರುಳಿಸಿದರೇ?... ಕಲ್‌ವರ್ಟ್ ಒಡಿದರೆ? Scoundrels!... ಟೆಲಿಗ್ರಾಫ್ ತಂತಿಯೂ? ಎಷ್ಟು ಕಡೆ...? ಬಿಜಲಾಪುರವೆ? ನಿನ್ನೆ ಮೂರು ಕಡೆ ಕತ್ತರಿಸಿದಾರೆ ಅಂತ ರಿಪೋರ್ಟ್ ಬಂತಲ್ಲರೀ?... ಹೂ... ಸರಿ... ಇಲ್ಲೇ? ಯಥಾ ಪ್ರಕಾರ... ಯಾರೂ ಸಿಕ್ಕಿಲ್ಲ. ಸಿಕ್ಕಿಲ್ಲಾ ಅಂದೆ! Some boys... Suspicion ಮೇಲೆ detain ಮಾಡಿದ್ದೇನೆ. But this is somebody else's mischief...ಅಂತೂ ಕಲ್‌ವರ್ಟ್ ಒಡೆದು ಹಾಕಿದ್ದು ಸಿರಿಯಸ್... ಹೂ ಪಾರ್ಡನ್‌ಹುಂ! ಹುಷಾರಾಗಿರುತೇವೆ...We must be doubly on guard. ಈ ಕಡೆಯೆಲ್ಲಾ ಮಿ ಲಿ ಟ ರಿ ಕ್ಯಾಂಪುಗಳಿವೆಯಪ್ಪಾ. ಯಾವಾಗ ಏನು ಗ್ರಹಚಾರ ಬರುತ್ತೋ ಗೊತ್ತಿಲ್ಲ. ಅಂತೂ ರಿಟೈರಾಗುವ ಮುಂಚೆ ಹೆಸರು ಕೆಡದೆ ಮನೆಗೆ ಹೋದರೆ ಪುಣ್ಯ! Yes, Yes, Thanks !..... ಇವತ್ತು ಗ್ರಹಚಾರಕ್ಕೆ ನಮ್ಮ ದಫೇದಾರ್ ಯಾಸೀನ್ ಮಗಳಿಗೆ ಜ್ವರ ಅಂತೆ... ನಾನೇ ನಿದ್ದೆ ಕೆಟ್ಟು ಪೆಟ್ರೋಲ್ ಡ್ಯೂಟಿ ಮಾಡಬೇಕಾಗುತ್ತೇನೋ... ಏನು ಮಾಡೋದು...ತಲೆ ಹೋಗತ್ತೆ ಇಲ್ಲದೆ ಹೋದರೆ...ಹೂ... ಹೂ...Thanks...good night...ಹೂ...ಫೋನ್ ಮಾಡಿ ಆಮೇಲೆ Thanks Righto. [ಫೋನ್ ಕೆಳಗಿಟ್ಟು] ಅಯ್ಯಾ ವರದಾ! ಜೀಪ್ ರೆಡಿ ಮಾಡು. ಇವತ್ತು ರಾತ್ರಿ ನಾನೂ ನೀನೂ ಮದ್ರಾಸ್ ರೋಡ್ ಪೆಟ್ರೋಲ್ ಡ್ಯೂಟಿ...ಬಹಳ ಸೀರಿಯಸ್ಸಾಗಿದೆ...ಗಿರಿಯಪ್ಪ, ಕಂದಸೇಲು ಬೆಂಗಳೂರು ರಸ್ತೆ ಪೆಟ್ರೋಲ್ ಮಾಡಿ ಅಂತ ಹೇಳಿಕಳುಹಿಸು... (ಹೊರಗಡೆ ಬೂಟ್ಸಿನ ಶಬ್ದ. "ಹುಜೂರ್—?" ಎಂಬ ದನಿ.)

ವರದಾ:- ಸಾರ್...ಯಾಸೀನ್ ಬಂದ.

(ಪ್ರವೇಶ ಯಾಸೀನ್ 40 ವರ್ಷದ ಧೃಢಕಾಯ. ದಫೇದಾರ್ ಯೂನಿಫಾರ್ಮಿನಲ್ಲಿದ್ದಾನೆ.)

ಯಾಸೀನ್:- ಸಲಾಮ್ ಹುಜೂರ್! [Attention ನಿಂತು ಸೆಲ್ಯೂಟ್ ಮಾಡುವನು]

ಸಾಂಬ:- ಹ್ಯಾಗಿದೆಯಯ್ಯಾ ನಿನ್ನ ಮಗಳಿಗೆ?

ಯಾಸೀನ್:- ಈಗೇನಿಲ್ಲ ಸಾರ್...ಡಾಕ್ಟರು ಹೇಳಿದ್ರು, ಗಾಬ್ರಿ ಏನೂ ಇಲ್ಲ ಅಂತ.

ಸಾಂಬಃ- ಪೆಟ್ರೋಲ್ ಮಾಡೋಕಾಗತ್ತಾ?

ಯಾಸೀನ್:- ಜೀ ಹುಜೂರ್...ಅದೇ ಹೇಳೋದಕ್ಕೆ ಬಂದೆ......ಮೈ ತಯಾರ್ ಹೂಂ !

ಸಾಂಬಃ- ಯೋಚನೆ ಮಾಡು ! ಆಮೇಲೇ...?

ಯಾಸೀನ್:- ಇಲ್ಲ, ಹುಜೂರ್...ಕುಛ್ ಬೀ ಫಿಕಿರ್ ನೈ. ಹುಡ್ಗೀಗೆ ಈಗ ಬರೋಬರಿದೆ.

ಸಾಂಬ : ಸರಿ ಹಾಗಿದ್ದರೆ! Very Good! ನೀನು ತಯಾರಿದ್ದೀಯಾ?

ಯಾಸೀನ್ : ಜೀ ಹುಜೂರ್...

ಸಾಂಬ : ನೀನು ಶಿವಮೊಗ್ಗೆಯಿಂದ ಇಲ್ಲಿಗೆ ಬಂದು ಎಷ್ಟು ತಿಂಗಳಾಯಿತು?

ಯಾಸೀನ್ : ಜೀ ಮೂರು ತಿಂಗಳು!

ಸಾಂಬ : ತಿರುಗಿ ಮಲೆನಾಡಿಗೆ ಟ್ರಾನ್ಸ್‌ಫರ್ ಆಗಬೇಕು ಅಂತ ಇದೆಯೇನು?

ಯಾಸೀನ್ : (ಅರ್ಥವಾಗದೆ) ಹುಜೂರ್?

ಸಾಂಬ : ಹದಿನೈದು ದಿನಗಳಿಂದ ಪೆಟ್ರೋಲ್ ಮಾಡ್ತಾ ಇದ್ದೀರಲ್ಲಾ? ಏನಯ್ಯಾ ಕಡಿದಿದ್ದೀರಿ? ಕ್ಯಾ ಮೆಹನತ್ ಕಿಯಾ ಹೈ ಬೋಲೋ ತಿರುಗಿ ಒಂದು ವಾರದಲ್ಲಿ ನಾಲಕ್ಕು ಕಡೆ ತಂತಿ ಕತ್ತರಿಸಿದಾರೆ... ನೀವೂ ಪೆಟ್ರೋಲ್ ಮಾಡ್ತಾನೇ ಇದ್ದೀರಿ...ಕೇಳಿದೆಯೇನು..! ಬಿಜಲಾಪುರದ ಹತ್ತಿರ ಕಲ್‌ವರ್ಟ್ ಒಡೆದುಹಾಕಿದ್ದಾರೆ... ಮದನಪಲ್ಲಿ ಹತ್ತಿರ ಗುಡ್ಸ್ ಟ್ರೈನ್ ಡಿರೈಲ್ ಮಾಡಿದರಂತೆ? ಈ ಕಡೆ ಎಲ್ಲಾ ಮಿಲಿಟರಿ ಕ್ಯಾಂಪ್‌ಗಳು ಹೂಳಲಕೆರೆ... ಬೇಕ್‌ಮಂಗಲ ಅಮೇರಿಕನ್ ಆರ್ಮಿ ಇದೆ ಅಲ್ಲಿ. ಇಂದು ವಾರ್ನಿಂಗ್ ಬಂದಿದೆ...ಇನ್ನು ಒಂದು ವಾರದೊಳಗಾಗಿ Culpritsನ ಹಿಡೀದೆ ಹೋದರೆ... ನನಗೆ ರಿಟೈರು, ನಿನಗೆ ಟ್ರಾನ್ಸ್‌ಫರು ಮಲೆನಾಡಿಗೆ...ಅದೂ ಈಗಂತೂ ಬಹಳ ಸೀರಿಯಸ್ಸಾಗಿದೆ.

ಯಾಸೀನ್ : ಜೀ, ಹುಜೂರ್ ...

ಸಾಂಬ : ಏನಯ್ಯಾ, ಜೀ ಹುಜೂರ್ ಅಂದರೆ ಇವತ್ತಿಂದ ಬಹಳ ಹುಷಾರಿರಬೇಕು ಅಂತ ಹೇಳ್ತಾಯಿದ್ದೇನೆ

ಯಾಸೀನ್:- ಹುಷಾರಿರ್ತೀನಿ... ಹುಜೂರ್... ಆದ್ಮೀಕೆ ಪಕಡ್‌ಕೆ ಆಯೆಂಗಾ...

ಸಾಂಬಃ- ಹೂ ಏನು ಪಕಡ್ ತೀಯೋ, ನೋಡೋಣ. ಹೋಗು... ಬೇಕಾದರೆ ವರದನನ್ನೂ ಕರೆದುಕೊಂಡು ಹೋಗು. ಮದರಾಸ್ ರಸ್ತೆ ಪೆಟ್ರೋಲ್ ಮಾಡಬೇಕು ಇವತ್ತು... ಕಂದವೇಲು, ಗಿರಿಯಪ್ಪ ಬೆಂಗಳೂರು ರೋಡ್ ಪೆಟ್ರೋಲ್ ಮಾಡಲಿ... ರಿವಾಲ್ವರ್ ಲೋಡ್ ಮಾಡಿಕೊಂಡು ಹೋಗು... ಬುಲೆಟ್ಸ್ ಇವೆಯಾ?

ಯಾಸೀನ್:- ಹೂಂ ಇದೆ ಹುಜೂರ್.

ಸಾಂಬಃ- ಇನ್ನೊಂದು ವಿಷಯ...

ಯಾಸೀನ್:- ಜೀ ಹುಜೂರ್?

ಸಾಂಬಃ- ಯಾರಾದರೂ Culvert, ಸೇತುವೆ ಒಡೆಯೋದನ್ನ ನೋಡಿದ ಅಂದರೆ ಗೊತ್ತೇ ಇದೆಯಲ್ಲ? Shoot...! ದಾಕ್ಷಿಣ್ಯ ಇಲ್ಲದೆ!... ಕ್ಯಾ? ಆರ್ಡರಿದೆ. Shoot at sight ಅಂತ ಹೆದರಲೇಬೇಡ

ಯಾಸೀನ್:- ಮಾಲುಂ ಹುವಾ ಹೂಜೂರ್!

ಸಾಂಬಃ- ಹೂಂ...ಇನ್ನು ಹೋಗು. ಜರಾ ಹುಷಿಯಾರ್ ರಖನಾ' ಹೂಂ... ಇನ್ನೊಂದು ವಿಷಯ-

ಯಾಸೀನ್:- ಹುಜೂರ್?

ಸಾಂಬಃ- ಆದ್ಮೀ...ಆಸಾಮಿ ಸಿಕ್ಕಿದರೆ ಅರ್ಧರಾತ್ರಿ ಆದರೂ ಚಿಂತೆಯಿಲ್ಲ. ಎಳೆದುಕೊಂಡು ಬಂದು ಲಾಕಪ್ಪಿನಲ್ಲಿ ಹಾಕಿ ... ಚೆನ್ನಾಗಿ ನಾಲಕ್ಕು ಬಾರಿಸಿ...ದಾಕ್ಷಿಣ್ಯ ನೋಡಬೇಡ ... ಬದ್ಮಾಷ್, ಸುವರ್‌ಗಳಿಗೆ ರಹಂ, ಗಿಹಂ ಕುಛ್ ಭೀ ದಿಖಾನಾ ನೈ...ಕ್ಯಾ?

ಯಾಸೀನ್:- ಮಾಲುಂ ಹುವಾ ಹುಜೂರ್!

ಸಾಂಬ : ಹೂ... ಹೋಗಿನ್ನು...

ಯಾಸೀನ್: (ಅಟೆನ್‌ಷನ್ ನಿಂತು ಸೆಲ್ಯೂಟ್ ಮಾಡಿ ಹೊರಗೆ ಹೊರಡುತ್ತಿರುವನು)

ಸಾಂಬ : (ಮತ್ತೆ ಜ್ಞಾಪಿಸಿಕೊಂಡು ಕೂಗುತ್ತ) ಯಾಸೀನ್?

ಯಾಸೀನ್ : (ಹೊರಗಿನಿಂದಲೇ) ಜೀ ಹುಜೂರ್

ಸಾಂಬ : ಜ್ಞಾಪಕಯಿದೆ ತಾನೇ ಯಾರಾದರೂ ಸ್ಯಾಬೋಟೇಜ್ ಮಾಡುವುದು ಕಂಡುಬಂದರೆ... Shoot at sight! ನಿರ್ದಾಕ್ಷಿಣ್ಯವಾಗಿ... That is my order...! ಹೂಂ ಹೋಗು ಇನ್ನು...

(ಈ ಮಧ್ಯೆ ವರದ ಹೊರಗಡೆ ಹೋಗಿದ್ದವನು ಪ್ರವೇಶಿಸಿ)

ವರದ : ಸಾರ್!

ಸಾಂಬ : ಏನಯ್ಯಾ ತಿರುಗೀ?

ವರದ : ಮಾಫ್ ಮಾಡಬೇಕು ಸಾರ್,

ಸಾಂಬ : ಯಾಕೋ?

ವರದ : (ಜೇಬಿನಿಂದ ಕವರೊಂದನ್ನು ತೆಗೆದು ಕೊಡುತ್ತ) ಈ ಕಾಗದ ಸಾರ್...ನಿನ್ನೆ ಪೋಸ್ಟಾಫೀಸಿನಲ್ಲಿ ಕೊಟ್ಟರು ಸಾರ್... ನಾನು ಹೋಗಿದ್ದಾಗ... ಬೇರೆ ಅಂಗಿಯಲ್ಲಿ ಇಟ್ಟದ್ದೆ ಮರೆತು ಬಿಟ್ಟೆ ಸಾರ್...

ಸಾಂಬ : (ಮಾತಾಡದೆ ಕವರನ್ನ ಬಿಚ್ಚಿ ಓದುತ್ತ ಮುಖ ಬಣ್ಣಗೆಟ್ಟು) My God...oh, My God! This is terrible... (ಎಂದು ಕೂಗುತ್ತ ಏಳುವನು. ಎದ್ದು "ಲೇ! ನೋಡಿದೆಯೇನೇ ಮಗನ ಪ್ರತಾಪಾ! ಎಂದು ಕೂಗುತ್ತ ಮನೆಯೊಳಗೆ ಧಾವಿಸುವನು)

ವರದ : (ಕಕ್ಕಾಬಿಕ್ಕಿಯಾಗಿ) ಇನ್‌ಸ್ಪೆಕ್ಟರ್ ಸಾಬ್, ಇನ್‌ಸ್ಪೆಕ್ಟರ್ ಸಾಬ್ (ಎನ್ನುತ್ತ ಹಿಂಬಾಲಿಸುವನು. ಪರದೆ ಬೀಳುವುದು)

ದಿ ಬಳ್ಳಾರಿ ತಾಲೂಕ ಅಗ್ರಿಕಲ್ಚರಲ್
ಪ್ರೊಡ್ಯೂಸ್ ಕೊ-ಆಪರೇಟಿವ್
ಮಾರ್ಕೆಟಿಂಗ್ ಸೊಸಾಯಿಟಿ ಲಿ.,
ತೇರು ಬೀದಿ, ಬಳ್ಳಾರಿ

ಫೋನ್ ನಂ. 318 .. Y. No. 124

ಈ ಕೆಳಗಿನವುಗಳಲ್ಲಿ ವ್ಯವಹರಿಸುತ್ತಾರೆ

- ಆಹಾರ ಧಾನ್ಯಗಳ ಸರಕಾರಿ ಸಂಗ್ರಹಗಳ ಕನ್‌ಸಾಯಿನಮೆಂಟುಗಳು
- ಕಂಟ್ರೋಲ ಮಾಡಿದ ಸಾರಜನಕ ಗೊಬ್ಬರಗಳು
- ಸಸಿಗಳನ್ನು ಕಾಪಾಡುವ ರಸಾಯನಗಳು
- ಗೊಬ್ಬರ ಮಿಶ್ರಣಗಳು
- ಪಾಣ್ಯಂ ಸಿಮೆಂಟುಗಳು
- ಉಕ್ಕು ಮತ್ತು ಕಬ್ಬಿಣ
- ಎಲ್ಲ ಹೈಬ್ರಿಡ್ ಬೀಜಗಳು

ದೀಪಾವಳಿಯು ಸುಖಸಮೃದ್ಧಿಯನ್ನೀಯಲಿ !

ಆರ್. ಅಂಜನೇಯುಲು
ಅಧಿಕಾರಿಗಳು

ದೃಶ್ಯ ಎರಡು

[ಸ್ಥಳ ಅದೇ ಕಾಲ ಅದೇ ರಾತ್ರಿ ಹನ್ನೆರಡು ಘಂಟೆಯ ವೇಳೆ. ಸರಬ ... ಕಾಗ ... ಂಗವು ಕತ್ತಲಿಂದ ತುಂಬಿರುತ್ತದೆ. ಬಲವಾಗಿ ಬಾಗಿಲು ಬಡಿದ ಶಬ್ದ ... ಹೊರಗಿನಿಂದ ಯಾಸೀನನ ಕೂಗು.]

ಯಾಸೀನ್ :- ಹುಜೂರ್, ಹುಜೂರ್ ಇನ್‌ಸ್ಪೆಕ್ಟರ್ ಸಾಬ್ [ಮತ್ತೆ ಬಾಗಿಲು ದಬಾದಬ್ಬೆಂದು ಬಡಿಯುವುದು] ಹುಜೂರ್... ಇನ್‌ಸ್ಪೆಕ್ಟರ್ ಸಾಬ್! [ಮತ್ತೆ ದಬಾದಬ್...] ಹುಜೂರ್!

[ಯಾರೋ ಎದ್ದು ಬಂದ ಶಬ್ದ. ಸ್ವಿಚ್ ಒತ್ತಿದ ಶಬ್ದ... ರಂಗವು ದೀಪದ ಬೆಳಕಿನಿಂದ ತುಂಬಿ ಸ್ಟೇಷನ್ನಿನ ಆಫೀಸು ರೂಂ ಮೊದಲಿನಂತೆ ಸ್ಪಷ್ಟವಾಗಿ ಕಾಣುತ್ತದೆ. ಗೋಡೆಯ ಮೇಲಿನ ಗಡಿಯಾರ ಒಂದು ಘಂಟೆಗೆ ಹತ್ತು ನಿಮಿಷ ಕಡಿಮೆಯಾಗಿ ತೋರಿಸುತ್ತಿದೆ. ಸಾಂಬಮೂರ್ತಿಗಳು ನೈಟ್ ಡ್ರೆಸ್‌ನಲ್ಲಿ ಕಣ್ಣುಜ್ಜಿಕೊಳ್ಳುತ್ತ, ಆಕಳಿಸುತ್ತ ಎದ್ದು ಬಂದು]

ಸಾಂಬ:- [ಉತ್ಸಾಹದಿಂದ] ಯಾರೊ ಯಾಸೀನ್! ಆಸಾಮಿ ಸಿಕ್ಕಿದ ನೇನೊ...

[ಎಂದು ಬಾಗಿಲು ತೆಗೆಯುತ್ತಲೇ ಹೊರಗಡಿಂದ ಯಾಸೀನನು ಒಬ್ಬ ... ಆಳ ಎತ್ತರದ ಆಳನ್ನು ಬಲವಾಗಿ ಒಳಗೆ ತಳ್ಳುತ್ತ ಬಲಗೈಯಲ್ಲಿ ರಿವಾಲ್ವರನ್ನು ಹಿಡಿದು ಅವನ ಬೆನ್ನಮೇಲೆ ಬಲವಾಗಿ ತಿವಿಯುತ್ತಾ ಬರುತ್ತಾನೆ... ಯಾಸೀನ್ ಜೋರಾಗಿ ಉಸಿರುಬಿಡುತ್ತ ಉದ್ರೇಕದ ದನಿಯಲ್ಲಿ]

ಯಾಸೀನ್ : ಪಕಡಲಿಯಾ ಹುಜೂರ್! ಬದ್ಮಾಷ್‌ಗೆ ಹಿಡದ್ಬಿಟ್ವಿ ಸಾಬ್! ಸುವರ್‌ಕೆ ಬಚ್ಚಾ ವಿರೂಪಾಕ್ಷಿ ಕೆರೆ ಪಕ್ಕದ ರೋಡಿನ ಸೇತುವೆ ಹತ್ರ ನಿಂತಿದ್ದ. ಹಿಡಿದ್ಬಿಟ್ವಿ. ಅವನ ಪಕ್ಕದಾಗೆ ಇನ್ನೊಬ್ಬ ಆದ್ಮಿ ಇದ್ದ ಸಾರ್... ಭಾಗಾ... ದೂರ್ ಕಿಧರ್ ಭಾಗಾ!

ಸಾಂಬ : (ನಿದ್ದೆಗಣ್ಣಿನಲ್ಲೇ ಆಸಾಮಿಯನ್ನು ದುರಗುಟ್ಟಿ ನೋಡುತ್ತ) ಹಾಕು ಲಾಕಪ್ಪಿನಲ್ಲಿ ಸೂಳೇಮಗನನ್ನು... ಬಾರಿಸು ಚರ್ಮ ಸುಲಿಯೋ ಹಾಗೆ ಚಾವಟಿಯಿಂದ! ಇರು, ಬರುತ್ತೇನೆ- ಜಾನ್ ನಿಕಾಲ್‌ದೇಗಾ ಸುವರ್‌ಕೋ

(ಗೊಣಗುತ್ತ ಬೇಗ ಬೇಗ ಒಳಗಡೆ ಹೋಗುವನು. ಯಾಸೀನನು ಸುಮ್ಮನೆ ತಲೆ ತಗ್ಗಿಸಿಕೊಂಡು ಕಂಬದಂತೆ ನಿಂತಿದ್ದ ಆಸಾಮಿಯ ಬೆನ್ನ ಮೇಲೆ ಬಲವಾಗಿ ಗುದ್ದುತ್ತಾ "ನಡೀ ಹರಾಮ್‌ಜಾದಾ, ನಿನ್ನ ಜೀವಾಗೆ ತೆಗ್ದು ಬಿಡ್ತಾರೆ ಇನ್‌ಸ್ಪೆಕ್ಟರ್ ಸಾಬ್.... ಬಾಯಿ ಬಿಡಾಕಿಲ್ಲ ಅಲ್ಲವಾ ಖಾಡ್ ಕೋ" ಎಂದು ಮತ್ತೆ ಅವನ ತಲೆಯ ಮೇಲೆ ಹೊಡೆಯುವನು. ಆಸಾಮಿ ಪಾಯಜಾಮಾ ಮತ್ತು ಉದ್ದನೆಯ ಷರಟನ್ನು ಧರಿಸಿದ್ದಾನೆ. ಮುಖ ಕಾಣದಂತೆ ಕಣ್ಣು ಮಾತ್ರ ಕಾಣುವ ಹಾಗೆ ಬಟ್ಟೆ ಬಲವಾಗಿ ಕಟ್ಟಿಕೊಂಡಿದ್ದಾನೆ. ಯಾಸೀನನ ಬಲವಾದ ಏಟು. ಸ್ವಲ್ಪವೂ ಸದ್ದಿಲ್ಲದೆ ತಡೆದುಕೊಳ್ಳುತ್ತಾನೆ)

ಯಾಸೀನ್ : ನಡೀ, ಈ ಕಡಿಕೆ, ಸುವ್ವರ್‌ಕೆ ಬಚ್ಚಾ

(ಎಂದು ಆಳನ್ನು ಇನ್‌ಸ್ಪೆಕ್ಟರ್ ಮೇಜಿನ ಮುಂದೆ ತಳ್ಳುತ್ತಾನೆ ಸಾಂಬಮೂರ್ತಿ ಒಂದು ಕೈಯಲ್ಲಿ ಸಣ್ಣದೊಂದು ಪೆಟ್ಟಿಗೆ ಇನ್ನೊಂದು ಕೈಯಲ್ಲಿ ದಪ್ಪನೆಯ ಪೋಲೀಸ್ ಬೆಲ್ಟನ್ನು ಝಳಪಿಸುತ್ತ ಪ್ರವೇಶ)

ಸಾಂಬ : ಕರಕೊಂಡು ಬಾ ಅವನನ್ನು ಈ ಕಡೆ. ಆ ಹಂದಿಯನ್ನು ಯಾರಂತೆ ಅವನು ಹೇಳಿದನಾ?

ಯಾಸೀನ್ : ಇಲ್ಲ ಹುಜೂರ್... ಬಾತೀಚ್ ಕರತಾ ನೈ- ಕಿತನಾ ಮಾರಾ ಮೈ! ಮದರಾಸ್ ಸೇತುವೆ ಹತ್ರ ನಿಂತಿದ್ದ ಹುಜೂರ್... ಅವನ ಕೈನಾಗೆ ಇದು ಇತ್ತು... ತಕ್ಕೊಂಡೆ.

(ಎಂದು ಜೇಬಿನಿಂದ ಡೈನಮೈಟಿನ ಕೋಲುಗಳೆರಡನ್ನೂ ಸುರುಳಿ ಸುತ್ತಿದ ಉದ್ದನೆಯ ವೈರನ್ನೂ ತೆಗೆದು ಮೇಜಿನ ಮೇಲಿಡುವನು)

ಸಾಂಬ :— (ಬೆಚ್ಚಿ ಒಂದು ಹೆಜ್ಜೆ ಹಿಂದೆ ಬಿದ್ದು ಉದ್ರೇಕದಿಂದ) ಡೈನಮೈಟ್! My God!

ಯಾಸೀನ್ : -- ಡೈನಮೈಟ್! ಸೇತುವೆ ಒಡೆಯೋದಕ್ಕೆ ಬಂದಿದ್ದ ಸೂಳೇಮಗ !

ಯಾಸೀನ್ — ನಮ್ಮ ಅದೃಷ್ಟಕ್ಕೆ ಸಿಕ್ಕಿಬಿದ್ದ! ಬದುಕಿದೆವು ನಾವು- ಇಲ್ಲದಿದ್ದರೆ ತಲೇ...ತಲೇ ಹೋಗಿ ಬಿಡುತ್ತಿತ್ತು! ನಮಗೆಲ್ಲಾ

(ತಲೆ ತಗ್ಗಿಸಿದ್ದ ಆಸಾಮಿ ಕಡೆ ತಿರುಗಿ ಆವೇಶದಿಂದ ಬೆಲ್ಟನ್ನು ಝಳಪಿಸಿ ಅವನ ಬೆನ್ನ ಮೇಲೆ ಹೊಡೆಯಲು ತೊಡಗುವನು)

ಸಾಂಬ :-- ಡೈನ್‌ಮೈಟ್ ... ಡೈನಮೈಟ್ ... ತಂದಿದ್ದೀಯೇನೋ ಬದ್ಮಾಷ್... ಸೇತುವೆ ಒಡೀತೀಯೋ-ಸೇತುವೇ!

(ಹ್ಞಂ... ಹ್ಞಂ...ಹ್ಞಂ... ಎಂದು ಏದುತ್ತಾ ಬೆಲ್ಟನ್ನು ಝಳಪಿಸಿ ಝಳಪಿಸಿ ರಪಾ ರಪಾ ಎಂದು ಪಾಶವಿಕ ಕ್ರೋಧದಿಂದ ಆಸಾಮಿಯ ಬೆನ್ನ ಮೇಲೆ ಹೊಡೆಯುತ್ತಿದ್ದರೂ ಆಸಾಮಿ ಕುಟಿ ಕಿಟ್ಟೆನ್ನದೆ ತಡೆದುಕೊಂಡಿರುವನು.)

ಸಾಂಬ :-- [ರೋಷವೃದ್ಧಿಯಾಗಿ] ಮಾತಾಡು ಸೂಳೇಮಗನೆ...! ಕ್ಷಮಾಪಣೆ ಕೇಳಿಕೋ...ಇಲ್ಲಿ ಈಗಲೇ ನಿನ್ನ ಹತ್ಯಾ ಮಾಡಿಬಿಡುತ್ತೇನೆ—ಹಂದಿ ಸೂಳೇಮಗನೆ!

(ಮತ್ತೆ ರಪಾ ರಪಾ ಎಂದು ಏಟು)ಮಾತಾಡೋದಿಲ್ಲ ಅಲ್ಲವೇ ನೀನು? ತಡೀ ಎಂದು ಹಿಂದೇ ಹೆಜ್ಜೆ ಹಾಕಿ ಇನ್ನೂ ಬಲವಾಗಿ ಬೆಲ್ಟನ್ನು ಝಳಪಿಸಿ ಬಾರಿಸುತ್ತಾ)

ಮಾತಾಡೋ ... ಬದಮಾಷ್ ... ಬಾಯಿಬಿಡೋ, ಶಡಿ! [ಎಂದು ತಕ್ಷಣ ತಡೆದು] ಯಾಸೀನ್? ಬಾಯಿಲ್ಲಿ...ಬಿಚ್ಚು ಅವನ ತಲೆ ಮೇಲೆ ಕಟ್ಟಿರೋ ಬುರುಕೀ...! ನೋಡೋಣ ಅವನ ಮುದ್ದು ಮುಖ! ಆ ಮೇಲೆ ಹೋಗಿ ನನ್ನ Horsewhip ತಗೊಂಡು ಬಾ ... ಜೀವ ತೆಗೆದುಬಿಡುತ್ತೇನೆ. ಇವನದು ಇವತ್ತು ಗಲ್ಲಿಗೆ ಹೋದರೂ ಚಿಂತೆಯಿಲ್ಲ. ಇವತ್ತು ಇವನ ಬಾಯಿಬಿಡಿಸದೆ ಹೋದರೆ ನಾನು ಪೋಲೀಸಿನವನಲ್ಲ...

(ಯಾಸೀನ್ ಆಸಾಮಿಯನ್ನು ಬಲವಾಗಿ ಹಿಡಿದು ಬಲಗೈಯಿಂದ ಅವನ ಮುಖದ ಮೇಲಿನ ಬಟ್ಟೆಯನ್ನು ಕಿತ್ತು ಬಿಸುಡುವನು... ಆಸಾಮಿಯು ಹೆಚ್ಚು ಪ್ರತಿಭಟಿಸದೆ ಮುಖವನ್ನೆತ್ತಿ ಬಿರುಸಾಗಿ ಪೌರುಷವಾಗಿ ಇನ್‌ಸ್ಪೆಕ್ಟರನ ಕಡೆ ನೋಡುವನು. ಸಾಂಬಮೂರ್ತಿ ಹ್ಞಾಂ ಎಂದು ಬೆಚ್ಚಿ ವಿಕಾರವಾಗಿ ಕೂಗಿ ನಾಲ್ಕೈದು ಹೆಜ್ಜೆ ಹಿಂದೆ ಬಂದು ತತ್ತರಿಸುತ್ತ ಏನೋ ಹೇಳಲು ಹೋಗಿ ಆಗದೆ ಮೇಜನ್ನು ಹಿಡಿದುಕೊಂಡು ಮೆಲ್ಲಗೆ ಕುರ್ಚಿಯ ಮೇಲೆ ಕುಕ್ಕರಿಸಿ ಎಲ್ಲವನ್ನೂ ಕಳೆದುಕೊಂಡವನಂತೆ ಎರಡು ಕೈಗಳಿಂದಲೂ ಮುಖ ಮುಚ್ಚಿಕೊಳ್ಳುವನು...ಎದುರಿಗೆ ಕಾಣುವುದು ಸತ್ಯವಲ್ಲ, ಸುಳ್ಳು ಅದರೂ ಭೀಕರ...ನೋಡಲಾಗದ ಸುಳ್ಳು ಎಂಬ ಭಾವನೆಯಿರುವಂತೆ ಕಣ್ಣುಮುಚ್ಚಿಕೊಳ್ಳುವನು. ಮೌನ...)

ಸಾಮಿ:-[ಇನ್‌ಸ್ಪೆಕ್ಟರ ಕಡೆ ಬೆನ್ನು ತೋರಿಸಿ] ಹೊಡೀ!ಹೊಡೆಯಪ್ಪಾ! ಹೊಡೀ ಬೆಲ್ಟಿನಿಂದ ! Horsewhip ನಿಂದ ಹೊಡೀ...!ಚರ್ಮ ಸುಲಿ ... ಯಾಕಪ್ಪಾ ಸುಮ್ಮನಾದೆ? ನನ್ನ ಚರ್ಮ ಸುಲೀದೆ ಹೋದರೆ ನೀನು ಪೋಲೀಸಿನವನು ಹ್ಯಾಗಾಗತೀಯಪ್ಪಾ? ಹೂಂ...!ಹೊಡೀ...!ಬಾಯಿ ಬಿಟ್ಟರೆ ಕೇಳು ನಾನು !

(ಯಾಸೀನ್ ಹಾರ್ಸ್‌ವಿಪ್ ಹುಡುಕಿದರೂ ಸಿಗದೆ ಬರಿಗೈಯಲ್ಲಿ ಪ್ರವೇಶಿಸಿ ಆಸಾಮಿಯ ಕಡೆ, ಮುಖ ಮುಚ್ಚಿಕೊಂಡಿದ್ದ ಇನ್‌ಸ್ಪೆಕ್ಟರನ್ನೂ ಕಂಡು ಏನೂ ಅರ್ಥವಾಗದೆ ದಿಗ್ಭ್ರಮೆಯಾಗಿ ನಿಲ್ಲುವನು.)

ಸಾಂಬ :— [ಮೆಲ್ಲನೆ ಮುಖವೆತ್ತಿ] ಕೊಂದು ಹಾಕಿ ಬಿಟ್ಟೆಯಲ್ಲೋ ನನ್ನ! ಕೊಂದೇ ಹಾಕಿ ಬಿಟ್ಟೆ! ಡೈನಮೈಟ್ ನಿನ್ನ ಕೈಯಲ್ಲಿ! ಅಬ್ಬ, ಡೈನಮೈಟ್! ನನ್ನ ಮಗ ಸೇತುವೆ ಒಡೆಯುವ ದ್ರೋಹಿ. ಸಾರ್ಥಕವಾಯಿತು ಕಣೋ ನೂರು, ನನ್ನ ಜನ್ಮ ಸಾರ್ಥಕವಾಯಿತು ಮೂವತ್ತೈದು ವರ್ಷಗಳ Service,Spot Less Loyal Service

ಇವತ್ತು ನನ್ನ ಮಗ ನನ್ನ ಊರಿನಲ್ಲಿ ಬಂದು ಡೈನಮೈಟ್ ತಗೊಂಡು ಸೇತುವೆ ಒಡೆಯೋದಕ್ಕೆ ತಯಾರಾಗಿ ಬಂದಿದಾನೆ ಸಧ್ಯ, ದೇವರು, ಯಾಸೀನ್...ಬದುಕಿಸಿದ ನನ್ನ !

ಯಾಸೀನ್ಃ- [ಕಣ್ಣುಗಳು ಬಿರಿಯುವಂತೆ ದೊಡ್ಡದಾಗಿ ತೆರೆದು ನೋಡುತ್ತ] ಮಗಾ! ಇನ್ಸ್‌ಪೆಕ್ಟರ ಸಾಬ್‌ ... ! ಯಾ ಅಲ್ಲಾ ! ಯಾ ಮೇರೆ ಅಲ್ಲಾ ಪರವರ್ದಿಗಾರ್!

ಸಾಂಬಃ- [ಮಗನ ಕಡೆ ರೋಷದಿಂದ ಸಂತಾಪದಿಂದ ನೋಡುತ್ತ ಯಾಕೋ ಮೂಕನಾಗಿ ಬಿಟ್ಟೆ-ನಾನೇನೋ ಮಾಡಿದ್ದ ನಿನಗೆ ಅನ್ಯಾಯ ? ನಿನ್ನ ಮನೆ ಹಾಳಾಗ ! ಯಾವ ನಕ್ಷತ್ರದಲ್ಲಿ ಹುಟ್ಟಿ ನನಗೆ ಮೃತ್ಯುವಾಗಿ ಬಂದೆಯೋ ? ಬೇರೆ ಯಾವ ಜಾಗವೂ ಇರಲಿಲ್ಲವೇನೋ ನಿನಗೆ ಸೇತುವೆ ಒಡೆಯೋದಕ್ಕೆ? ಹರಾಮುಖೋರೀಮಗನೆ ನಿಮ್ಮಪ್ಪನ ಊರಿಗೇ ಬರಬೇಕೇನೋ ನನಗೆ ಉರುಲು ಹಾಕೋದಕ್ಕೆ. ಲೋ, ಯಾಸೀನ್, ಕೊಡೋ ಅವನಿಗೆ ನಿನ್ನ ಲೋಡ್ ಮಾಡಿರೋ ರಿವಾಲ್ವರನ್ನು ಸುಟ್ಟುಹಾಕಿ ಬಿಡಲಿ ಅವರಪ್ಪನ್ನ ಒಂದೇ ಏಟಿಗೆ !

ಯಾಸೀನ್ಃ-[ಖೇದ, ಪಶ್ಚಾತ್ತಾಪಗಳಿಂದ ತನ್ನನ್ನೇ ಇಲ್ಲವೆನ್ನಿಸಿಕೊಳ್ಳಲು ಪ್ರಯತ್ನಿಸುತ್ತ ಮಂಕನಂತೆ ನೆಲದ ಕಡೆ ನೋಡುವನು].

"ನಿಮ್ಮಪ್ಪನ ಊರಿಗೆ ಬರಬೇಕೇನೊ ನನಗೆ ಉರುಳ್ ಹಾಕಲಿಕ್ಕೆ"

ಸಾಂಬಃ-[ಸ್ವಲ್ಪ ಹೊತ್ತು ಮತ್ತೆ ಮುಖವನ್ನು ಎರಡು ಕೈಗಳಲ್ಲೂ ಮುಚ್ಚಿಕೊಳ್ಳುವನು. ಸೂರು ದೂರದಿಂದಲೇ ಅವನ ಕಡೆ ಅನುತಾಪದಿಂದ ನೋಡುತ್ತಿರುವನು]

ಸೂರು:-ಅಪ್ಪಾ !

ಸಾಂಬಃ- [ಸರಕ್ಕನೆ ಮುಖವೆತ್ತಿ] ಮುಚ್ಚು ಬಾಯಿ, ಕಟುಕ ಸೂಳೇಮಗನೇ ಅಪ್ಪಾ ಅಂತ ಅನ್ನಬೇಡ ತಿರುಗೀ ಬಾಯಲ್ಲಿ ! ಯಾರೋ ನಿನ್ನ ಅಪ್ಪ ? Bloody swine ಅಪ್ಪಾ ಅಂತೀಯ; ಹೋಲೆಯನ್ನ ತಗೊಂಡು ಬಂದು ಲೋ, ಯಾಸೀನ್;

ಯಾಸೀನ್ಃ—ಹುಜೂರ್.

ಸಾಂಬಃ-ಒಳಗಡೆ ಹೋಗಿ ಹಜಾರದ ಬಾಗಿಲು ಮುಚ್ಚಿಬಿಟ್ಟು, ಬಾ... ಇವರಮ್ಮನಿಗೆ ಎಚ್ಚರವಾದೀತು. [ಯಾಸೀನ್ ಹೋಗುವನು]

ಸಾಂಬ ಃ— ಯಾವ ಕೃತ್ಯ ಸಾಧಿಸುವುದಕ್ಕೆ ಬಂದೆಯೊ...ಹೋದ ಜನ್ಮದಲ್ಲಿ ನಿನ್ನನ್ನು ಕೊಂದಿದ್ದನೇನೋ..ಅದಕ್ಕೇ ಹುಟ್ಟಿದೆಯೋ ನನ್ನ ಮಗನಾಗಿ ?

ಸೂರುಃ— [ನಿರಾಶನಾಗಿ ಕೂಗುತ್ತ ಅಳು ದನಿಯಲ್ಲಿ] ನನ್ನಿಷ್ಟದಿಂದ ಬರಲಿಲ್ಲಪ್ಪಾ ಅಂದರೆ. ದಯವಿಟ್ಟು ಕೇಳಪ್ಪ ನಾನು ಹೇಳೋದನ್ನ!

ಸಾಂಬಃ—[ಅವನ ಮಾತಿಗೆ ಗಮನ ಕೊಡದೆ. ಅವನ ಕಡೆ ನೋಡದೆ ಕಾಂಗ್ರೆಸ್ ಮೂವ್‌ಮೆಂಟಿಗೆ ಸೇರುತ್ತೇನೆ ಅಂತ ಬರೆದಾಗ, ಷಾಕ್ ಏನೋ ಆಯಿತು. ಆ ಮೇಲೆ ಏನೋ ಹೋಗಲಿ, ನನ್ನ ಕರ್ಮ ಚರಕಾದಲ್ಲಿ ನೂಲು ತೆಗೆದುಕೊಂಡು ಖಾದೀ ಬಟ್ಟೆ ಹಾಕಿಕೊಂಡು 'ಗಾಂಧೀಕಿ ಜೈ' ಅಂತ ಅರಚಿಕೊಂಡು ತಿರುಗಾಡುತಿರುತಾನೆ ಅಷ್ಟೇ ತಾನೆ, ಅಂದುಕೊಂಡು ಸುಮ್ಮನಿದ್ದೆ. ಆದರೆ ಕಂಬಿ ಕತ್ತರಿಸೋದು ಸೇತುವೆ ಒಡೆಯೋದು, ರೈಲು ಉರುಳಿಸೋದು—ಯಾವ ಮಹಾತ್ಮನೋ ಹೇಳಿಕೊಟ್ಟೋನು ನಿಮಗೆಲ್ಲ ? ನಮ್ಮ ಆಸ್ತಿಯನ್ನೇ ಹಾಳು ಮಾಡಿ. ನಮ್ಮ ಕಟ್ಟಡಗಳನ್ನೇ ಸುಟ್ಟು, ನಮ್ಮ ಜನಗಳಿಗೆ ಹಿಂಸೆ ಕೊಟ್ಟರೆ ಅದೆಂಥಾ ಸ್ವರಾಜ್ಯವೋ ಬರೋದು [ಎಂದು ಆವೇಶ ತಡೆಯಲಾರದೆ ಮುಷ್ಟಿಯಿಂದ ಬಲವಾಗಿ ಮೇಜಿನ ಮೇಲೆ ಗುದ್ದುವನು.] ಮಾತಾಡೋ ಯಾಕೆ ಬಾಯಿಲ್ಲವೇನೋ? ಯಾವ ಮಹಾತ್ಮನೋ ಹೇಳಿಕೊಟ್ಟದ್ದು?

ಸೂರು ಃ— [ತಲೆಯಲ್ಲಾಡಿಸುತ್ತ] ನಿನಗೆ ಅರ್ಥವಾಗೋದಿಲ್ಲಪ್ಪಾ !

ಸಾಂಬ ಃ— ಓ ಹೋ ಹೋ... ಅರ್ಥವಾಗೋದಿಲ್ಲವೋ? ಏನು ಅಂಥ ದೊಡ್ಡ ವೇದಾಂತವೋ...ಕಳ್ಳ ಕೊರಮರ ವೇದಾಂತ !

ಸೂರು ಃ— ಸ್ವರಾಜ್ಯದ ಚಳುವಳಿ ಯಾತಕ್ಕೆ ಅಂತ ಮೊದಲೇ ವಿಶದವಾಗಿ ಬರೆದಿರಲಿಲ್ಲವೇನಪ್ಪಾ...ತಿರುಗೀ...!

ಸಾಂಬ ಃ— ಅಹಾ....ಚೆನ್ನಾಗಿ ವರ್ಣಿಸಿದ್ದೆ.. ಬಿಡಪ್ಪ ಚನ್ನಾಗಿ ವರ್ಣಿಸಿದ್ದೆ.... ಮರಿಗಾಂಧಿ ನೀನಲ್ಲವೇ? ಚರಕದಲ್ಲಿ ನೂಲು ತೆಗೆದುಬಿಟ್ಟರೆ, ಗಾಂಧೀ ಕಿ ಜೈ ಅಂತ ಬೀದಿಗಳಲ್ಲಿ ಅರಚಿಕೊಂಡು ಸ್ಕೂಲುಗಳನ್ನ ಮುಚ್ಚಿಸಿಬಿಟ್ಟರೆ ಸಾಕು ಇಂಗ್ಲಿಷರು ಗಂಟು, ಮೂಟೆ ಕಟ್ಟಿಕೊಂಡು ಎಲ್ಲಾ ಹೊರಟೇ ಹೋಗಿಬಿಡ್ತಾರೆ. ಉಳಿಗಾಲವಿಲ್ಲ ಅಂದು ಬಿಟ್ಟು.. ಯಾಕೆ, ಅದರ ಬದಲಾಗಿ ಮಂತ್ರವಾದಿಗಳನ್ನ ಕರೆಸಿ ಬೂದಿತಗೊಂಡು ಕೈಯಲ್ಲಿ 'ಉಫ್' 'ಓಂ ಕಾಳೀ' ಅಂತ ಊದಿಸಿ ಬಿಡಿ ಎಲ್ಲಾ ಸಮುದ್ರಕ್ಕೆ ಹೋಗಿ ಬಿದ್ದುಬಿಡುತಾರೆ ಇಂಗ್ಲಿಷರು .ಅಹಿಂಸೆಯಂತೆ..ಅಹಿಂಸೆ!

ಸೂರು :— ಅಹಿಂಸೆಯೇ ಅಲ್ಲವೇನಪ್ಪ ನಮಗೀಗ ಉಳಿದಿರೋದು ಅಸ್ತ್ರ?

ಸಾಂಬ ಃ— ಅಹಿಂಸೆ ಎಂಥಾದ್ದೋ ಯುದ್ಧದಲ್ಲಿ? ಮಹಾಭಾರತದಲ್ಲಿ ಪಾಂಡವರು ಐದೇ ಜನ ಅಕ್ಷೋಹಿಣೀ ಸೈನ್ಯಗಳನ್ನೆಲ್ಲ ಅಹಿಂಸೆಯಿಂದಲ್ಲವೇ ಗೆದ್ದಿದ್ದು? ಮಾತಾಡುತಾನೆ! ಆ ಕೃಷ್ಣಪರಮಾತ್ಮನಿಗಿಂತಲೂ ದೊಡ್ಡವನೇನೋ ನಿಮ್ಮ ಗಾಂಧಿ? ಶಿವಾಜಿ ಅಹಿಂಸೆಯಿಂದಲೇ ಕಟ್ಟಿದನೋ ಮರಾಠೀ ರಾಜ್ಯಾನ? ಇನ್ನೂ ಹೇಳಬೇಕೇನೋ?

ಸೂರು ಃ— ಅಪ್ಪಾ, ಈಗ ನಿಮ್ಮನ್ನ ಅರ್ಥ ಮಾಡಿಕೊಳ್ಳುತ್ತಾ ಇದ್ದೀನಿ! ನಾವು ಅಹಿಂಸೆ ಬಿಟ್ಟು ಮದ್ದು, ಗುಂಡು, ಕತ್ತಿಗಳಿಂದ ಇಂಗ್ಲಿಷರ ಮೇಲೆ ಬಿದ್ದು ಓಡಿಸಬೇಕೂ ಅಂತಲೆ? ಆಗ ನೀವು ಸಪೋರ್ಟ ಮಾಡ್ತೀರಿ ನಮ್ಮನ!

ಸಾಂಬ ಃ— [ಉರಿದೆದ್ದು] Shut up—! ನನ್ನ ಬಾಯಲಿ Sedition ಮಾತಾಡಿಸಬೇಕು ಅಂತಲೋ ನಿನ್ನ ಉದ್ದೇಶ?

I am a police officer ನಾನು ನಿನಗೆ ಬ್ರಿಟಿಷ್ ಪ್ರಭುತ್ವದ ಮೇಲೆ Armed revolt ಮಾಡು ಅಂತ ಹೇಳತೇನೇನೋ You blasted... ಲೋ, ಯಾಸೀನ್!

ಯಾಸೀನ್ :— ಹುಜೂರ್!

ಸಾಂಬ :— ಏನೂ ಇಲ್ಲ...ಅಂ...ಆ ಇನ್ನೊಬ್ಬ ಅಸಾಮಿ ಅಂದೆಯಲ್ಲ... ಓಡಿ ಹೋದವನು? ಅವನ್ನೇನು ಹಾಗೇ ಬಿಟ್ಟು ಬಿಡತೀಯೇನಯ್ಯಾ? ಹೋಗು, ಕಂದವೇಲೂನೂ ಕರಕೊಂಡು ಜೀಪಿನಲ್ಲಿ ಒಂದು ಸಲ ಗಸ್ತು ಹಾಕಿಕೊಂಡು ಬನ್ನಿ...ಇಷ್ಟರಲ್ಲಿ ಇನ್ನೇನು ಮಾಡಿ ಬಿಟ್ಟಿರುತಾರೋ-ಇವರು...ನಿಗಾ ಇಟ್ಟಿರಿ. [ಮಗನನ್ನು ಕುರಿತು] ಎಷ್ಟು ಜನ ಬಂದಿದ್ದರೋ ನಿನ್ನ ಜೊತೆಯಲ್ಲಿ?

ಸೂರು :— [ಉತ್ತರ ಕೊಡುವುದಿಲ್ಲ. ಯಾಸೀನ್ ಹೊರಡುವುದಕ್ಕೆ ಮೊದಲು ಸೂರುವಿನ ಬಳಿ ಬಂದು ದೈನ್ಯದಿಂದ]

ಯಾಸೀನ್ :— ಮಾಫ್ ಮಾಡಬೇಕು ಹುಜೂರ್!

ಸೂರು :— [ಶಾಂತವಾಗಿ] ನಿನ್ನದೇನೂ ತಪ್ಪಿಲ್ಲ. ನನಗೆ ನಿನ್ನ ಮೇಲೆ ಕೋಪವಿಲ್ಲ, ಯಾಸೀನ್!

ಯಾಸೀನ್ :— [ಇನ್‌ಸ್ಪೆಕ್ಟರ ಕಡೆ ತಿರುಗಿ] ಹುಜೂರ್

ಸಾಂಬ :— ಏನದು?

ಯಾಸೀನ್ :— ನಾನೂ ಛೋಟಾ ಸರಕಾರ್‌ನ ಕರಕೊಂಡು ಬಂದಿದ್ದು ಯಾರೂ ನೋಡಿಲ್ಲ ಹುಜೂರ್. ನಾನೂ ಯಾರಿಗೂ ಹೇಳೋಕಿಲ್ಲ, ಬೇರೆ ಗುಮಾನೀ ಅಸಾಮೀನ ಎಳಕೊಂಡು ಬಂದು ಬೀಡತೀನಿ...

ಸಾಂಬ :— [ಯೋಚಿಸುತ್ತ] ಹುಂ,.. ಒಳ್ಳೇ ಕೆಲಸ ಮಾಡಿದೇ ಯಾರಿಗೂ ಹೇಳಬೇಡ. ನಿನ್ನಲ್ಲೇ ಇರಲಿ. [ಯಾಸೀನ್ ಸೆಲ್ಯೂಟ್ ಮಾಡಿ ನಿಷ್ಕ್ರಮಿಸುವನು]

ಸೂರು:— [ಆವೇಶದಿಂದ] ಏನಪ್ಪಾ ಅನ್ಯಾಯ ಇದು?

ಸಾಂಬ:— [ಸಿಗರೇಟನ್ನು ಹೊತ್ತಿಸಿ ಬಾಯಲ್ಲಿ ಕಚ್ಚಿ ಒಂದು ಸಲ ಹೊಗೆ ಬಿಟ್ಟು ಹಣೆಯ ಮೇಲೆ ಕೈಯಿಟ್ಟುಕೊಳ್ಳುವನು.] ಅನ್ಯಾಯವೇನೋ ಇದರಲ್ಲಿ? ಎಂಥ ಪ್ರಾಣ ಸಂಕಟ ತಂದೆಯೋ ನನಗೆ ರಿಟೈರಾಗೋ ವಯಸ್ಸಿನಲ್ಲಿ? ಏನೋ ಮಾಡೋದು ನಿನ್ನನೀಗ? ಎಂಥಾ disgrace ! ಪೋಲೀಸ್ ಇನ್‌ಸ್ಪೆಕ್ಟರ ಮಗನೇ ಸೇತುವೆ ಒಡೆಯೋದಕ್ಕೆ ಬಂದಿದ್ದ ಅಂತ ಡಂಗುರ ಆದರೆ... ಆ ಪೋಸ್ಟ್‌ಮಾಸ್ಟರಗೆ ನಾನು ಹೇಗೋ ಮುಖ ತೋರಿಸೋದು? ಅವರ ಮಗ ನಿರಪರಾಧಿ... ಅವನನ್ನು ಲಾಕಪ್ಪಿನಲ್ಲಿಟ್ಟೆ... ಸುಮ್ಮ ಸುಮ್ಮನೆ ಶಾಮಾಚಾರ್ಯರ ಜೊತೆಯಲ್ಲಿ ಮನಸ್ತಾಪ!- ಯಾಕೊ ಇಂಥ ಕೆಲಸ ಮಾಡಿದೆ. ಹೇಳಲಿಲ್ಲವಲ್ಲೋ...ಅಪ್ಪನಿರುವ ಊರಿಗೆ ಹೋಗಿ ಸೇತುವೆ ಒಡಿ ಅಂತ ದುರ್ಬುದ್ಧಿ ಹೇಳಿದವರು ಯಾರೋ ನಿನಗೆ?

ಸೂರು :— ಅಪ್ಪಾ...ನಾನು ಹೇಳತಾಯಿದ್ದೆ, ಅಷ್ಟರಲ್ಲಿ ನೀನು ಅಡ್ಡ ಬಂದೆ. ಇಲ್ಲಿಗೆ ಹನ್ನೆರಡು ಮೈಲಿ ದೂರದಲ್ಲಿ ಬೇತಮಂಗಲದ ಕೆರೆ. ಅದರ ದಡದಲ್ಲಿ ೧೨ ಸಾವಿರ ಅಮೇರಿಕನ್ ಸೈನಿಕರಿದ್ದಾರೆ...ಇಲ್ಲಿಗೆ ಎಂಟು ಮೈಲಿಗೆ ಹೊಳಲಕೆರೆ...ಅಲ್ಲಿ ಆರು ಸಾವಿರ ಇಂಗ್ಲಿಷ್ ಸೈನಿಕರು...ಅವರೆಲ್ಲ—

ಸಾಂಬ :— [ನಡುವೆ ಬಾಯಿ ಹಾಕಿ] ಅವರು ನಮ್ಮನ್ನೆಲ್ಲಾ ಉದ್ಧಾರ ಮಾಡೋದಕ್ಕೋ ಬಂದಿರೋದು...ಮನೆ, ಮಠ, ಹೆಂಡಿರು ಮಕ್ಕಳನ್ನೆಲ್ಲ ಬಿಟ್ಟು ಬಿಟ್ಟೊ! ಅವರಿಲ್ಲದೆ ಹೋದರೆ ಇಷ್ಟು ಹೊತ್ತಿಗಾಗಲೇ ಜಪಾನೀ ಸೈನ್ಯ, ಮದ್ರಾಸ್ Coast ನಲ್ಲಿ ಇಳಿದು ಸೀದಾ ಬೆಂಗಳೂರಿನ ತನಕ ಬಂದು ಝಂಡಾ ಹಾಕಿ ಬಿಡೋವರು...ರಾಕ್ಷಸರು...ಆಗ ನಿನ್ನ ಗಾಂಧಿಯಂಥವರು ಕೋಟಿ ಜನ ಸತ್ಯಾಗ್ರಹ ಮಾಡಿದರೂ ಕುಪ್ಪ ಕುಪ ಅಂತ ಸುಟ್ಟು ಹಾಕೋವರು ! ಮಹಾತ್ಮನೆ !

ಸೂರು :— [ಕೋಪದಿಂದ] ಬ್ರಿಟಿಷರಿರೋದರಿಂದಲೇ ಜಪಾನಿಗಳು ಇಲ್ಲಿಗೆ ದಂಡಯಾತ್ರೆ ಮಾಡುವ ಸನ್ನಾಹ ಮಾಡ್ತಾಯಿರೋದು!.. ಹೋಗಲಿ ಅವರು ಅವರ ದೇಶಕ್ಕೆ...ಅದೆಲ್ಲಾ ಬೇರೆ ಮಾತ್ರ ರಾಮಾಯಣ...ನಾನು ಹೇಳುತಾಯಿದ್ದಿದ್ದು ಈ ಅಮೇರಿಕನ್, ಬ್ರಿಟಿಷ ಸೈನಿಕರಿಂದ ನಮ್ಮ ಹಳ್ಳೀ ಜನಕ್ಕೆ, ಹೆಣ್ಣು ಮಕ್ಕಳಿಗಾಗುತ್ತಿರುವ ಅತ್ಯಾಚಾರ...ಹೆಣ್ಣು ಮಕ್ಕಳು ನೀರು ತರಲಿಕ್ಕೆ ಕೆರೆಗೆ ಹೋಗುವ ಹಾಗಿಲ್ಲ. ಮೊನ್ನೆ ಕುಡಿದು ಮನೆಗಳಿಗೆ ನುಗ್ಗಿ ಹೆಂಗಸರನ್ನ ಮಾನಭಂಗ ಮಾಡಿದರು ಅಂತ ಪೋಲೀಸಿನವರೇ ಕೇಸು ಮಾಡಲಿಲ್ಲವೇ ಬೇತಮಂಗಲದಲ್ಲಿ ? ಹನ್ನೆರಡು ಅಮೇರಿಕನ್ ಸೈನಿಕರ ಮೇಲೆ...

ಸಾಂಬ:—ಹೂಂ-ಅಂತೂ ಕೇಸು ಮಾಡಿದರಲ್ಲ ? ಶಿಕ್ಷೆ ಆಗತ್ತೆ ಲಫಂಗಿ ಮುಕ್ಕಳಿಗೆ!

ಸೂರು:— ಹೂ—ಆಗತ್ತೆ.ನಾಳೆ; ಖುಲಾಸೆ ಮಾಡಿ ಬಿಟ್ಟಿರು ಆಗಲೇ ಮ್ಯಾಜಿಸ್ಟ್ರೇಟರು...

ಸಾಂಬ:—ಯಾರು ? ಯಾವಾಗ ?

ಸೂರು:—ಪೇಪರೋದಿಲ್ಲವೇ ನಿನ್ನೆ !

ಸಾಂಬ:- ಹ್ಞಾಂ-ಏನು ಹೇಳೋದು ನೀನು ? [ಎಂದು ಕಳವಳದಿಂದ ಯೋಚಿಸುವನು]

ಸೂರು:—ಅಪ್ಪಾ ನಮಗೂ ಗೊತ್ತು..ಸೇತುವೆಗಳುರುಳಿಸುವುದರಿಂದ, ಕಂಬಿ ಕತ್ತರಿಸುವುದರಿಂದಲೇ ಇಂಗ್ಲೀಷರೋಡಿ ಹೋಗುವುದಿಲ್ಲ. ಇದೆಲ್ಲ ನಮ್ಮ ಕೋಪ, ರೋಷ ತೋರಿಸಿಕೊಳ್ಳೋದಕ್ಕೆ. ಅವರ ಮುಂದೆ ಚರಖ, ತಕಲಿಗಳು ನಮ್ಮಲ್ಲಿ ಸ್ವಾವಲಂಬನ, ನಮ್ಮ ಉಡುಪಿಗಾಗಿ ಪರದೇಶದವರನ್ನು ನಂಬಬೇಕಿಲ್ಲ ಎಂಬ ಆತ್ಮಗೌರವ ತೋರಿಸುವುದಕ್ಕೆ! . . ಸ್ವರಾಜ್ಯ ಬಂದುಬಿಡುತ್ತೆ ಅಂತ ಅಲ್ಲ ಇದರಿಂದಲೇ ! ಅವರಿಗಿರೋ ಆಯುಧ, ಮದ್ದು ಗುಂಡು, ಶಿಬ್ಬಂದಿ, ತರಬೇತು ನಮಗಿಲ್ಲ, ಸುಮ್ಮನೇ ಕೈಕಟ್ಟಿಕೊಂಡು ಕೂತಿರೋದಕ್ಕೂ ಸಾಧ್ಯವಿಲ್ಲ. ಮನುಷ್ಯರು ನಾವು ! ದನಕರುಗಳಲ್ಲ. ಅವೂ ಕೂಡ ಸಹನೆ ಮೀರಿದಾಗ ಕಾಲಲ್ಲಿ ಒದೆಯುತ್ತವೆ. ಹೇಡಿಗಳು ಅಂದುಬಿಟ್ಟೆ ನೀನು ಸುಲಭವಾಗಿ, ಬದ್ಮಾಷರು, ಅಂತ ಎಲ್ಲಾ ಮಾತುಗಳೂ ಆಡಿದೆ, ಬಾಯಿಗೆ ಬಂದ ಹಾಗೆ. ಅಪ್ಪಾ, ನಿನಗೇ ಗೊತ್ತು, ನಿಮ್ಮ ದಫೇದಾರ ಯಾಸೀನ ನನ್ನನ್ನು ರಿವಾಲ್ವರಿಂದ ಹೆದರಿಸಿ ಹಿಡಿದ ತಕ್ಷಣ ನೆಲದ ಮೇಲೆ ಕೆಡವಿದ! ಒದ್ದ- ಆ ಮೇಲೆ ಇಲ್ಲಿಯವರೆಗೂ ಬೆನ್ನ ಮೇಲೆ ಬಾರಿಸಿಕೊಂಡೇ ಬಂದ. ಅಂಥ ಏಟು ನನ್ನ ಜೀವಮಾನದಲ್ಲೇ ತಿಂದಿರಲಿಲ್ಲ. ಸಾಲದೆ ನಿನ್ನ ಬೆಲ್ಟಿನೇಟು. ನೀನು ಅಪ್ಪ... ಆದರೆ ನಿನ್ನ ಬೆಲ್ಟು ಹೂವಿನ ಹಗ್ಗವಲ್ಲ... ನೋಡು ಬೇಕಾದರೆ.. [ಎಂದು ಬಾಗಿ ಷರಟನ್ನೆತ್ತಿ ಬೆನ್ನಿನ ಬಾಸುಂಡೆ ತೋರಿಸುವನು]

ಸಾಂಬ:— [ಮುಖವನ್ನು ಓರೆಯಾಗಿಸಿಕೊಂಡು ಕೈ ಅಡ್ಡವಾಗಿ ಹಿಡಿದು] ಸಾಕೋ.., ಸಾಕು. ನನ್ನ ಪ್ರಾಣ ಹಿಂಡಬೇಡೋ...ನನ್ನ ಬೆಲ್ಟಿನಿಂದ ನನ್ನ ಸ್ವಂತ ಮಗನನ್ನೇ ಒಬ್ಬ ಕೇಡಿಗೆ ಹೊಡೆಯುವ ಹಾಗೆ ಮಾಡಿದ್ದಕ್ಕೆ ಕಾರಣ ನಾನೇ ಏನೋ, ಆ ಯಾಸೀನನ ಬಾಯಲ್ಲಿ ಕಿವಿಯಲ್ಲಿ ಕೇಳಲಾಗದಂಥ ಬೈಗಳನ್ನು ನೀನು, ನನ್ನ 'ಮಗ, ನನ್ನ ಕಣ್ಣೆದುರಿಗೆಯೇ ಬೈಸಿಕೊಂಡಿದ್ದು ನಾನು ಮಾಡಿದ ತಪಸ್ಸಿನ ಫಲವೇನೋ? ಅವನು ಆ ಹೊಲಸು ಮಾತುಗಳನ್ನಾಡುತ್ತ ಇದ್ದಾಗ ಕೇಳಿಸಿಕೊಂಡವನು ನಾನು, ನಿನ್ನಪ್ಪ... ಅದನ್ನು ಮರೆಯೋದಕ್ಕೆ ಆಗತ್ತೇನೋ! ಶೂಲ..ಶೂಲ. ಇರಿದ ಹಾಗೆ ಸಾಯುವವರೆಗೂ ಪ್ರಾಣ ಹಿಂಸೆ ಮಾಡದೆ ಇರತ್ತೆಯೇ? ಇದಕ್ಕೆ ನಾನೇ ಏನೋ ಕಾರಣ? ಎಂಥ ಕಟುಕನೋ ನೀನು. ಇದಕ್ಕೇ ಅಲ್ಲವೇ ನಿನ್ನನ್ನು ಕಾಲೇಜಿಗೆ ಕಳಿಸಿದ್ದು?

ಸೂರು :— [ಖೇದದ ದನಿಯಲ್ಲಿ] ಅಪ್ಪಾ, ನಿಜ, ನೀನು ಹೇಳಿದ್ದೆಲ್ಲ ಒಪ್ಪಿದೆ, ನನಗೇನೂ ಅದರಿಂದ ಸಂತೋಷವಿಲ್ಲ. ಅಲ್ಲಾ—ಹೇಡಿ ಅಂದೆಯಲ್ಲಾ? ಯಾವ ಹೇಡಿ ಇಷ್ಟೆಲ್ಲ ಹಿಂಸೆ, ಇಷ್ಟೆಲ್ಲ ಅವಮಾನ ಧೈರ್ಯವಾಗಿ ಎದುರಿಸಿ ದೇಶಕ್ಕೆ ಅಂತ ಮುಂದೆ ನುಗ್ಗುತಾನೆ ತೋರಿಸಿಕೊಡು. ಇರಬಹುದು, ನಾನೂ ಅಂಥ ಹೇಡಿಯೇ! ಮೊನ್ನೆ ಸಬಟೇಜ್ [Sabotage] ಮಾಡಿದವರಿಗೆ 'Shoot at Sight' ಅಂತ ಆರ್ಡರಾಗಿತ್ತು. ಅದಕ್ಕೆ ನಮ್ಮ ಕ್ಯಾಂಪ್‌ನಲ್ಲಿದ್ದ ಹುಡುಗರೆಲ್ಲ ಸೇತುವೆ ಒಡೆಯೋದಕ್ಕೆ ಮುಂದೆ ಬರಲು ಹೆದರಿದರು. ನಮ್ಮ ಲೀಡರ್ ಯಾರಿಗೆ ಗುಂಡಿಗೆ ಇದೆ. ಮುಂದೆ ಬರಲಿ ಅಂದರು. ಆಗ ಮುಂದೆ ಬಂದವನು ಈ ಹೇಡಿ...ನಿಮ್ಮ ಮಗ!

ಸಾಂಬ :— ಸಾರ್ಥಕವಾಯಿತು ಕಣೋ... ಸಾರ್ಥಕವಾಯಿತು. ನಿನ್ನ ಶೌರ್ಯಕ್ಕೆ! ಆಹಾ, ವೀರಸ್ವರ್ಗವೇ ನಿನಗೆ. ಅಲ್ಲಿ, ನಾನಿಲ್ಲಿ- ಇರೋ ಒಬ್ಬ ಮಗ, ಮನೆಗೆ ಬೆಳಕು, ವಂಶಕ್ಕೆ ಕಲಶ...ಅಂತ...ಅಲ್ಲದೆ ನನ್ನ, ನಿನ್ನ ಹೆತ್ತ ತಾಯಿಯ ಮುದಿ ವಯಸ್ಸಿಗೆ ಆಧಾರ ಅಂತ ಅಂದು ಬಿಟ್ಟು ಕಾಲೇಜಿಗೆ ಕಳಿಸಿದೆ...ಅದಕ್ಕೆ... ಇಗೋ ಈ ನಿನ್ನ ಶೌರ್ಯ ಪ್ರತಿಫಲ...ನನ್ನ ಆಸೆ, ಕನಸುಗಳೆಲ್ಲ ಹೀಗೇ ಹಣ್ಣಾಗದೇ ಬಾಯಿ ಮುಚ್ಚು ಸಾಕು.

ಸೂರು :— ಹೌದಪ್ಪ! ನಿನ್ನ ಕನಸನ್ನ ಹಣ್ಣು ಮಾಡುವುದಕ್ಕೆ ಮುಂಚೆ ದೇಶದ ಕರೆಗೆ ಕಿವಿಗೊಟ್ಟದ್ದು ನಿನಗೆ ಅನ್ಯಾಯ ಮಾಡಿದ ಹಾಗೇ, ನಿನ್ನ ದೃಷ್ಟಿಯಲ್ಲಿ, ನಾನೂ B. A. ಪಾಸು ಮಾಡಿ Police Sub inspector ಆಗಿ, A.S.P,D.S.P... ಆಗಿ, ಸಮಾಜದ ನನ್ನ ಸೋದರ, ಸೋದರಿಯರ ಸ್ಥಿತಿ ಎಷ್ಟೆ ಕೆಟ್ಟರಲಿ ನಾನು ಮಾತ್ರ ಮಾನ ಮನುಷ್ಯತ್ವ ಮಾರಿಕೊಂಡಾದರೂ ಪರವಾಯಿಲ್ಲ ದೊಡ್ಡ ಹುದ್ದೆ ಪಡೆದು, ಶಿಸ್ತಾಗಿ ಡ್ರೆಸ್ ಹಾಕಿಕೊಂಡು ಸುಂದರಿಯಾದ ಹೆಂಡತಿ ಜೊತೆಯಲ್ಲಿ ಕಾರಲ್ಲಿ ಹೋಗುವ ಹಾಗಿದ್ದಿದ್ದರೆ ನಿನ್ನ ಕಣ್ಣಿಗೆ ಹಬ್ಬ ವಾಗುವ ಹಾಗಿತ್ತು ! ನಾನಾಗ ಪುತ್ರ ರತ್ನ, ವಂಶಕ್ಕೆ ಕಲಶ, ಕಿರೀಟ. ಏನು ಮಾಡುವುದು, ಆದರೆ ಅದೆಲ್ಲ ನಿನ್ನ ಕನಸು! ನನ್ನ ಕನಸಲ್ಲ! [ಟೆಲಿಫೋನ್ ಶಬ್ದವಾಗುವುದು]

ಸಾಂಬ:— (ಫೋನ ರಿಸೀವರು ತೆಗೆದುಕೊಂಡು) ಹಲೋ...ಹೂಂ ವಿರೂಪಾಕ್ಷ ಸ್ಟೇಷನ್ oh ...ಯಾರು... ?

(ತಕ್ಷಣ ಮುಖಭಂಗಿ ಬದಲಾಗಿ, ಹೆದರಿಕೆ, ದೈನ್ಯ ಕಾಣಬರುವುದು)

Yes, Yes, Sir ! ನಾನೇ ಸಾಂಬಮೂರ್ತಿ ಸಾರ್!Pardon Sir: ಇಲ್ಲ ಸಾರ್ ಅಂಥಾ ಗಲಾಟೆ ಏನೂ ಇಲ್ಲ ... All under control sir! ಹಾಂ...ಸಿಕ್ಕಿದಾನೆ ಸಾರ್... I mean Suspicion ಮೇಲೆ ಒಬ್ಬನನ್ನ ಡಿಟೈನ್ ಮಾಡಿದ್ದೇನೆ ಸಾರ್ - Yes, ಪೋಸ್ಟ್ ಮಾಸ್ಟರ ಮಗ ! Pardan, Sir ? Release ಮಾಡಬೇಕೆ ? But.... Ah. Yes, Sir O. K. Sir. I will 'raleare him early in the moring ! you are right, Sir ! thank you, Sir yes, Sir ಹಾಂ..Sorry, no, Sir. O.K. Sir! ಹಾಂ ಹಾಂ. .ಹಾಂ.. No. Sir, I mean yes, Sir..! O.K. Sir, Good night, Sir ಏನೂ ತೊಂದರೆ ಇಲ್ಲ, ಸಾರ್. Culprit ಸಿಕ್ಕಿದರೆ ರಿಪೋರ್ಟ್ ಮಾಡ್ತೇನೆ, ಸಾರ್.... We will try to catch him Sir....of course. I am confident, Sir... good night, Sir... (ರಿಸೀವರನ್ನ ಕೆಳಗಿಡುತ್ತಾ ಮಗನ ಮುಖದ ಮೇಲಿನ ತಾತ್ಸಾರಭಾವವನ್ನು ಕಂಡು ಕೋಪದಿಂದ) ಯಾಕೋ ಯಾಕೋ ಹಾಗೆ ನೋಡ್ತೀಯಾ?

ಸೂರು:- [ಮಾತಾಡದೆ ನಿಕೃಷ್ಟ ಭಾವದಲ್ಲಿ ದಿಟ್ಟಿಸುವನು]

ಸಾಂಬ:-[ಮಗನ ಕಡೆ ನೋಡಿ ಹೆದರಿ, ನಾಚಿ ತಲೆ ಬೇರೆ ಕಡೆ ತಿರುಗಿಸಿ] —ಹೌದು ಕಣೋ ...ಇದೆಲ್ಲ ನಿನಗೆ ನಿಕೃಷ್ಟ ... ನನಗೆ. ನಿರ್ವಾಹ ವಿಲ್ಲ. ತಾಬೇದಾರಿ ಅಂದ ಮೇಲೆ ನಾಟಕ ಆಡಲೇಬೇಕಾಗುತ್ತೆ. ಹೆಂಡತಿ, ಮಕ್ಕಳಿಗೋಸ್ಕರ...ಎಲ್ಲ ಅವಮಾನಗಳನ್ನೂ ಸಹಿಸಬೇಕಾಗುತ್ತೆ.

ಸೂರು :— I am...I am ashamed...I am sorry to say!

ಸಾಂಬ :... (ವ್ಯಂಗ್ಯವಾಗಿ ನಗುತ್ತ) ನನಗೊತ್ತು ಕಣೋ ... Sorry ಯಾಕೆ...ನೀನೆಂಥ dutiful son ಅಂತ ನನಗೆ ಗೊತ್ತಿಲ್ಲದೆ ಇಲ್ಲ. ನೀನೊಬ್ಬ ರಾಮ, ಭೀಷ್ಮ ಅಂಬೋ ಭ್ರಾಂತಿ ನನಗೆಂದೂ ಇರಲಿಲ್ಲ...

ಸೂರು :... ಅಪ್ಪಾ....ನೀನು ತಪ್ಪು ತಿಳಿದುಕೊಂಡಿದ್ದೀಯ...ನೀನು Yes sir,No sir ಅಂದದ್ದಕ್ಕಲ್ಲ ನನಗೆ ನಾಚಿಕೆಯಾದದ್ದು? ಅದು ಸರ್ಕಾರದ ತಾಬೇದಾರಿ ನನಗೂ ಗೊತ್ತು—!

ಸಾಂಬ :— (ರೋಷದಿಂದ) ಮತ್ತೆ ಇನ್ಯಾತಕ್ಕೆ ಬಗುಳು!

ಸೂರು :— (ಅಷ್ಟೇ ರೋಷದಿಂದ) ಸುಳ್ಳು ಹೇಳಿದ್ದಕ್ಕೆ!

ಸಾಂಬ :— ಸುಳ್ಳು? What do you mean?

ಸೂರು :— ಹೌದೂ ಸುಳ್ಳು.... ಕೆಟ್ಟ ಸುಳ್ಳು....ರಾಕ್ಷಸ ಸುಳ್ಳು.... ಪಾಪಿಷ್ಟ ಸುಳ್ಳು! ನಿನ್ನ ಮಗನನ್ನು ಉಳಿಸಿಕೊಳ್ಳೋದಕ್ಕೆ ಇನ್ನೊಬ್ಬ ನಿರಪರಾಧಿಯನ್ನು ಅರೆಸ್ಟ್ ಮಾಡಿ ಅವನೇ ಅಪರಾಧಿ ಅಂತ ರುಜುವಾತು ಮಾಡುವುದಕ್ಕೆ ಸನ್ನಾಹ ಮಾಡ್ತಾಯಿರೋದು ನನಗೆ ಗೊತ್ತಿಲ್ಲದೆ ಇಲ್ಲ....ನೀನೂ, ಆ ಯಾಸೀನ್ ಕೂಡ, ಈಗ ನಿಮ್ಮ ಡಿ.ಎಸ್.ಪಿ. ಜೊತೆಯಲ್ಲಿ ಫೋನ್ ನಲ್ಲಿ ಮಾತಾಡಿದ ಧಾಟಿಯೂ ಅದೇ....ಅದಕ್ಕೇ ನನಗೆ ನಾಚಿಕೆಯಾದದ್ದು! ಯಾವ ನೀತಿ ಅಪ್ಪಾ ಇದು, ಯಾವ ಧರ್ಮ? ಈ ನೀತಿ ನಿನಗೆ ಹೇಳಿಕೊಟ್ಟ ಆ ಮಹಾತ್ಮ ಯಾರು ಹೇಳು ನೋಡೋಣ.

ಸಾಂಬ :— [ಉತ್ತರ ಕೊಡಲಾಗದೆ ಕಣ್ಣುಮುಚ್ಚಿಕೊಂಡು ಹಣೆ ಯೊರಸಿಕೊಳ್ಳುವನು]

ಸೂರು :— ಯಾಕಪ್ಪಾ. ಮಾತಾಡೋದಿಲ್ಲ? ಯಾವ ನೀತಿ ಹೇಳು... ನಾನು ನಿನ್ನ ಮಗ...ನನಗೂ ಹೇಳಿಕೊಡು ಆ ನೀತಿ.

ಸಾಂಬ :— ಮತ್ತೇನುಮಾಡು ಅಂತೀಯೋ ಈ ಧರ್ಮ ಸಂಕಟದಲ್ಲಿ? ನಿನ್ನನ್ನು ಜೈಲಿಗೆ ಕಳುಹಿಸಲೇನೋ? ಹತ್ತು ವರುಷ....ಹತ್ತು ವರುಷಕ್ಕೆ ಕಡಿಮೆ ಇಲ್ಲದ ಕಠಿಣಸಜಾ.... ಗೊತ್ತೇನೋ.... Sabotage ಇದು Caught red-Handed !

ಸೂರು :— ನೀನು honest police officer — 35 years of Loyal service ಅಂತ ಜಂಭಕೊಚ್ಚಿಕೊಂಡೆಯಲ್ಲ? ಈಗ ನಿನ್ನ ಡ್ಯೂಟಿ ನೀನು ಮಾಡು. ನನ್ನ ಕರ್ತವ್ಯ!

ಸಾಂಬ :— ನನ್ನ ಮಗನ ಹತ್ತಿರ ನಾನು ಕರ್ತವ್ಯ ಜ್ಞಾನ ಕಲಿತುಕೋ ಬೇಕು ಈಗ....ಹ್ಞ....ಏನು ನಗುಪಾಟಲು...ಏನು ಹಣೆಬರೆಹ! [ಎಂದು ಮುಖವನ್ನು ಕೈಯಲ್ಲಿ ಮುಚ್ಚಿಕೊಂಡು ಒಂದೆರಡು ನಿಮಿಷ ಸುಮ್ಮನಿದ್ದು ಆ ಮೇಲೆ ತಲೆಯೆತ್ತಿ] ಹ್ಯಾಗೋ ನಿನ್ನನ್ನ ಜೈಲಿಗೆ ಕಳುಹಿಸಲಿ? ನಿಮ್ಮಮ್ಮನ ಯೋಚನೆಯಾದರೂ ಇದೆಯೇನೋ ನಿನಗೆ? ಅವಳಿಗೆ ಹ್ಯಾಗೋ ಮುಖ ತೋರಿಸಲಿ? ಅವಳಿಗೆ ಈಗಿರೋ ಖಾಯಿಲೆಯಲ್ಲಿ ಎಂಥಾ ಷಾಕ್ ಆಗಬಹುದು ಅನ್ನೋ ಯೋಚನೆ ಯಾದರೂ ಬೇಡವೇನೋ?

ಸೂರು:— ಆ ಯೋಚನೆ ನಿನಗೆ ಬೇಡವಪ್ಪ. ಅಮ್ಮನಿಗೆ ಷಾಕ್ ಆಗೋದಿಲ್ಲ. ನನಗ್ಗೊತ್ತು. ನಿನಗೆ ಷಾಕ್ !

ಸಾಂಬ:— ನನಗಾಗಲೇ ಹೊಟ್ಟೆಯಲ್ಲಿ ಷಾಕ್. ಇನ್ನೂ ತತ್ತರಿಸುತ್ತಾ ಇದ್ದೀನಿ.

ಸೂರು:— ಇಲ್ಲಪ್ಪ—ಇನ್ನೂ ಒಂದು ಷಾಕ್;

ಸಾಂಬ:— ಏನು ನೀನು ಬೊಗಳೋದು? ಏನಿದೆಯೋ ಹೇಳಿ ಮುಗಿಸಿ ಬಿಡು, ಒಟ್ಟಿಗೇ ಕೊಂದು ಹಾಕಿ ಬಿಡು, ಚೂರಿ ತಿರುವಬೇಡ ಗಾಯದೊಳಗೆ.

ಸೂರು:- ಅಮ್ಮನಿಗೆಲ್ಲ ಗೊತ್ತು.

ಸಾಂಬ:- ಗೊತ್ತು?

ಸೂರು:— ಹೂ . ,ನಾನಮ್ಮನಿಗೆ ಇದೆಲ್ಲ ಬರೆದಿದ್ದೆ..ಅಮ್ಮ ನನಗೆ ಆಶೀರ್ವಾದ ಮಾಡಿದ್ದಾಳೆ.

ಸಾಂಬ:— [ಮೇಜಿನ ಮೇಲೆ ಬಲವಾಗಿ ಹೊಡೆದು] ಸುಳ್ಳು ಎಲ್ಲಾ ಸುಳ್ಳು!

ಸೂರು:— ಅಪ್ಪಾ, ಇನ್ನೂ ಒಂದು ಷಾಕ್ ನಿನಗೆ. ಇವತ್ತೇಕೋ ನಿನಗೆ ಅಹಿಂಸೆಯಲ್ಲಿ ನಂಬಿಕೆ ಹೋಗುತ್ತಾಯಿದೆ. ನಿಮಗೆ ಷಾಕ್ ಕೊಡುವುದರಲ್ಲಿ ನನಗೆ ಖುಷಿಯಾಗುತ್ತಾ ಇದೆ.

ಸಾಂಬ:- [ತಕ್ಷಣ ಮೇಲೆದ್ದು ಆವೇಶದಿಂದ ಮಗನ ಕಡೆ ನೋಡುತ್ತಿರುವನು.]

ಸೂರು:— ಅಮ್ಮ ನನ್ನ ಹತ್ತಿರ ಆಣೆ ತೆಗೆದುಕೊಂಡಿದ್ದಾಳೆ. ಪ್ರಾಣ ಹೋದರೂ ಸರಿ. ಪೋಲೀಸ ಹುದ್ದೆಗೆ ಸೇರಬೇಡ ಅಂತ.

ಸಾಂಬ:— [ದೊಡ್ಡದಾಗಿ ನರಳುತ್ತ ಹಣೆಯ ಮೇಲೆ ಕೈಯಿಟ್ಟು ಕೊಂಡು ಕುರ್ಚಿಯ ಮೇಲೆ ಮತ್ತ ಕುಕ್ಕರಿಸುವನು]

[ಹೊರಗಡೆ ಬೂಟ್ಸಿನ ಶಬ್ದ. ಯಾಸೀನನ ಧ್ವನಿ. "ಸಾಬ್... Inspector ಸಾಬ್" ಸೂರು ಬಾಗಿಲು ತೆಗೆಯುವನು.]

ಯಾಸೀನ :- [ಗಾಬರಿಯಿಂದ ಓಡಿ ಬಂದು ಸಾಬ್,.. D. S. P. ಸಾಬ್ ಬಂದವರೆ ಬೇತಮಂಗಲಗೆ... ಹುಜೂರ್ ನಾಳೆ ಇಲ್ಲಿಗೆ Inspection ಗೆ ಬರತವರಂತೇ.

"ಅಪ್ಪಾ ಹರಸಪ್ಪಾ"

ಸಾಂಬ:— [ಗಾಬರಿಯಿಲ್ಲದೆ] ಗೊತ್ತು ಕಣೋ ಯಾಸೀನ್. D S P ನನಗೆ ಫೋನ್ ಮಾಡಿದ್ದರು. ಅದಿರಲೋ.. ಹೋದ ಕೆಲಸ ಏನಾಯಿತು. ಯಾರೂ ಸಿಗಲಿಲ್ಲವಾ?

ಯಾಸೀನ:— 'ಇಲ್ಲ ಹುಜೂರ್, ನಾಲಕ್ಕು ಗಸ್ತು ಹೊಡದಿವಿ, ಜೀಪ್ ನಾಗೆ... ಯಾರೂ ಸಿಕ್ಕಲಿಲ್ಲ...

ಸಾಂಬ:- ಬೇರೇನೂ Wire cutting. Bridge breaking ಆಗಿಲ್ಲವಾ?

ಯಾಸೀನ್:- ಇಲ್ಲ ಹುಜೂರ್...ಎಲ್ಲಾ ಬರೋಬರಿದೆ.., [ಸೂರು ಕಡೆ ನೋಡುತ್ತ, ಅವನ ಕಡೆ ಕೈ ತೋರಿಸಿ] ಹುಜೂರ್? ಛೋಟಾ ಸಾಬ್ ಗೆ ಏನು ಮಾಡೋದು?

ಸಾಂಬ:- [ಗಂಭೀರವಾಗಿ ನಿಂತು] ಯಾಸೀನ್!

ಯಾಸೀನ್:- ಹುಜೂರ್!

ಸಾಂಬ :- ಈ ಆಸಾಮಿಯನ್ನು ತಗೊಂಡು ಹೋಗಿ ಲಾಕಪ್ಪಿನಲ್ಲಿ ಕೂಡಿಬಿಟ್ಟು ಬಾ... ಹುಡುಗರಿರೋ ರೂಮಲ್ಲಿ ಅಲ್ಲ...ಬೇರೆ ಕಡೆ, ಮಾಲು ಜಪ್ತಮಾಡಿ ರಿಜಿಸ್ಟರನಲ್ಲಿ enter ಮಾಡು. ನಿನ್ನ ಸ್ಟೇಟ್‌ಮೆಂಟು ಬರೆದಿಟ್ಟು ರುಜು ಹಾಕಿ ಡೈರಿಯಲ್ಲಿ ಎಂಟರ್ ಮಾಡು. ನಾಳೆ ಬೆಳಗ್ಗೆ ಛಾರ್ಜ್‌ಷೀಟು ಹಾಕೋಣ. ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಮಾಡಬೇಕು.

ಯಾಸೀನ :— [ಅರ್ಥವಾಗದೆ] ಆಸಾಮಿ ಯಾರು ಹುಜೂರ್ ?

ಸಾಂಬ :— [ಗದರುತ್ತ] ಯಾರನ್ನ ನೀನು ಮಾಲು ಸಮೇತ ಅರೆಸ್ಟ್ ಮಾಡಿಕೊಂಡು ಬಂದದ್ದು ರಾತ್ರಿ ?

ಯಾಸೀನ :— [ತಬ್ಬಿಬ್ಬಾಗಿ] ಸಾಬ್...ಹುಜೂರ್...ಯೇ ತೋ ಆಪ್ ಕಾ ಬೇಟಾ ಹುಜೂರ್ !

ಸಾಂಬ :— ಹೇಳಿದ ಕೆಲಸ ಮಾಡು

ಯಾಸೀನ :— ಏ ಗರೀಬ್ ಕೋ ಮಾಫ್ ಕರನಾ ಹುಜೂರ್... ಮಗರ್ ಜರ್‍ರಾ ಸೋಚನಾ !

ಸಾಂಬ :— [ಗದರುತ್ತ] ಖಬರ್‌ದಾರ್...ಏನು ಮಾತಾಡತಾಯಿದ್ದೀಯಾ ? ಅವನನ್ನ ಲಾಕಪ್ಪಿಗೆ ತಗೊಂಡು ಹೋಗುತ್ತೀಯೋ ಇಲ್ಲವೋ...?

ಯಾಸೀನ :—ಅಚ್ಛಾ...ಹುಜೂರ್...ಆಪ್ ಕಾ ಹುಕುಂ ಹುಜೂರ್...

ಸಾಂಬ :- ಇನ್ನೊಂದು ಕೆಲಸ ಬೆಳಗಾಗುತ್ತಲೂ ಆ ಪೋಸ್ಟ್ ಮಾಸ್ಟರ ಮಗನನ್ನೂ ಆ ಮೂರು ಜನ ಹುಡುಗರನ್ನೂ ಅವರವರ ಮನೆಗೆ ತಲುಪಿಸಿಬಿಟ್ಟು ಬಂದುಬಿಡು.

(ಟೆಲಿಫೋನ್ ಬಳಿ ಹೋಗಿ ಡೈಯಲ್ ಮಾಡಿ ರಿಸೀವರ್ ಕೈಗೆ ತೆಗೆದುಕೊಳ್ಳುವನು)

ಹಲೋ...ಯಾರದು...? ನಾನು ವಿರೂಪಾಕ್ಷಿ ಸ್ಟೇಷನ್ ಆಫೀಸರ್...ಸಾಂಬಮೂರ್ತಿ. ಅದು ಯಾರು...ರೆಡ್ಡಿಯಾ ? ಹಲೋ ರೆಡ್ಡೀ...D.S.P ಸಾಹೇಬರು ಮಲಗಿಬಿಟ್ಟರಾ ? ಸರಿ...ಏನೂ ಇಲ್ಲ...ನಾಳೆ ಫೋನ್ ಮಾಡ್ತೀನಿ. ಏನೂ ಇಲ್ಲ.,.ಅವರೆದ್ದು ಕೇಳಿದರೆ ಹೇಳಿ ಬಿಡಿ...Sabotage ಮಾಡುವುದಕ್ಕೆ Madras Road ಸೇತುವೆ ಒಡೆಯುವುದಕ್ಕೆ ಬಂದ ಒಬ್ಬ ಆಸಾಮಿಯನ್ನು ಡೈನಮೈಟ್ ಸಮೇತ ಹಿಡಿದಿದ್ದೇವೆ ಅಂತ ರಿಪೋರ್ಟ್ ಮಾಡಿಬಿಡಿ...ಯಾರೇ...? ನಾಳೆ ಹೇಳ್ತೀನೆ...ರೆಡ್ಡೀ...! ನಿಮ್ಮ ಹತ್ತಿರ ಯಾಕೆ ಬಚ್ಚಿಡೋದು...ಅವನು ನಿಮಗೆ ಗೊತ್ತಿರುವವನೇ...ನಮ್ಮ ಸೂರು. ಯಾಕೆ ? ನಂಬೋದಿಲ್ಲವೇನು ? ನಮ್ಮ ಸೂರು ಕಾಣ್ರಿ...My only son Soorya narayana...why not ? ಹೇಳಿಬಿಡಿ, D.S.P. ಸಾಹೇಬರಿಗೆ...

(ಸೂರು ತಂದೆಯ ಕಡೆ ಒದ್ದೆಗಣ್ಣುಗಳಿಂದ ನೋಡುತ್ತಿರುವನು... ಯಾಸೀನ್ ತಲೆ ತಗ್ಗಿಸಿಕೊಂಡಿರುವನು...)

ಸಾಂಬ :- ಯಾಕೋ ಯಾಸೀನ್. ಯಾಕೆ ಸುಮ್ಮನೆ ನಿಂತಿದ್ದೀಯಾ? ಲೇಕೆ ಜಾವ್ ಆಸಾಮೀ ಕೋ...

(ಅಷ್ಟರಲ್ಲಿ ಸೂರು ತಂದೆಯ ಹತ್ತಿರ ಬಂದು ಮೊಣಕಾಲೂರಿ ಬಾಗಿ ತಲೆ ಬಾಗಿಸಿ "ಅಪ್ಪಾ" ಎನ್ನುವನು.)

ಸಾಂಬ :- [ಆಶ್ಚರ್ಯದಿಂದ] ಇದೇನಿದು ತಿರುಗಿ ?

ಸೂರು :- ಅಪ್ಪಾ! ಹರಸಪ್ಪಾ....ಜೈಲಿಗೆ ಹೋಗ್ತೇನೆ ಹರಸಪ್ಪಾ. ಅಮ್ಮ ಹರಸಿದ್ದಾಳೆ...ನೀನೂ ಹರಸಪ್ಪಾ !

ಸಾಂಬ :- [ಮಾತಾಡಲಾಗದೆ] ಎರಡು ಕೈಗಳನ್ನೂ ಮಗನ ತಲೆಯ ಮೇಲಿಡುವನು...[ತೆರೆ ನಿಧಾನವಾಗಿ ಬೀಳುವುದು.]

◆◆◆◆◆◆◆◆◆◆◆◆◆◆

ಭಾರತದಲ್ಲಿ ಮೋಟರ ಉದ್ದಿಮೆ

— ಎನ್. ಸಿ. ದೇಸಾಯಿ —

ಈ ಯುಗದಲ್ಲಿ, ಮಾನವನ ದೈನಂದಿನ ಜೀವನದಲ್ಲಿ ಒಂದಿಲ್ಲೊಂದು ರೀತಿಯಿಂದ ಮೋಟಾರು ವಾಹನದ ಉಪಯೋಗ ಆಗಿಯೇ ಇರುತ್ತದೆ, ಎಂಬುದರಲ್ಲಿ ಸಂಶಯವೇ ಇಲ್ಲ! ಅವನು ಹಳ್ಳಿಯಲ್ಲಿಯೇ ಇರಲಿ। ಪಟ್ಟಣದಲ್ಲಿಯೇ ವಾಸಿಸಿರಲಿ, ಪ್ರವಾಸ, ಉದ್ಯೋಗ, ಒಕ್ಕಲುತನ (ಬೇಸಾಯ) ವ್ಯಾಪಾರ, ಹಾಗು ಸಾರಿಗೆ, ಹೀಗೆ ಒಂದಿಲ್ಲೊಂದು ರೀತಿಯಿಂದ ಮೋಟಾರು ವಾಹನ



ಅನಿವಾರ್ಯವಾಗಿದೆ; ಆಹಾರ, ಧಾನ್ಯ, ಬಟ್ಟೆ, ಕಲ್ಲೆಣ್ಣೆ ಮುಂತಾದ ನಿತ್ಯೋಪಯೋಗಿ ವಸ್ತುಗಳು ಒಂದು ಸಲವಾದರೂ ಈ ವಾಹನದ ಉಪಯೋಗ ಪಡೆದೇ ಇರುತ್ತವೆ! ಅಷ್ಟೇಕೆ ಇಂದು ತೀರ ಚಿಕ್ಕ ಹಳ್ಳಿಯಲ್ಲಿಕೂಡ ಈ ವಾಹನದಲ್ಲಿ ಸಾಕಷ್ಟು ಉಪಯೋಗ ಆಗುತ್ತಲಿದೆ, ಹೊಲಕ್ಕೆ ಗೊಬ್ಬರ ಹೇರುವದಕ್ಕೂ ಬೆಳೆದ ಧಾನ್ಯವನ್ನು ಪೇಟೆಗೆ ಸಾಗಿಸಲಿಕ್ಕೂ ಈ ವಾಹನ ಸಾಕಷ್ಟು ಉಪಯೋಗಿಸಲ್ಪಡುತ್ತಲಿದೆ.

ಆದಿ ಮಾನವನಲ್ಲಿ ಒಂದೊಂದು ರೀತಿಯಲ್ಲಿ ಪ್ರಗತಿಯಾದಂತೆ ತನ್ನ ಓಡಾಡುವ ಸೌಕರ್ಯಕ್ಕೂ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸತೊಡಗಿದ ಈ ಉದಾಹರಣೆಗಳು ಇತಿಹಾಸ ಪೂರ್ವದಿಂದಲೂ ಸಿಕ್ಕುವವು, ಸದ್ಯಕ್ಕೆ ಸಿಕ್ಕುವ ಅತಿ ಪೂರ್ವದ ಆಧಾರವೆಂದರೆ ಮೆಹೆಂಜೋದಾರೋ ಪ್ರಾಚ್ಯವಸ್ತುಗಳು. ಆಗ ಅಲ್ಲಿ ಸುವ್ಯವಸ್ಥಿತ ಮಾರ್ಗಗಳು ಇದ್ದದ್ದೂ ಎತ್ತಿನ ಬಂಡಿಗಳ ಉಪಯೋಗವಿದ್ದದ್ದೂ ತಿಳಿದು ಬರುತ್ತದೆ.

ಪ್ರಪ್ರಥಮ ಮೋಟಾರು

ಮೊಟ್ಟಮೊದಲು ಮೋಟಾರು ವಾಹನವನ್ನು ತಯಾರಿಸುವ ಪ್ರಯತ್ನ ನಡೆದುದು ಫ್ರಾನ್ಸ್ ದೇಶದಲ್ಲಿ ೧೭೭೦ರಲ್ಲಿ. ಉಗಿಯಂತ್ರದಿಂದ ನಡೆಯುವ ಮೂರು ಚಕ್ರಗಳುಳ್ಳ ವಾಹನ, ನಿಕೋಲಾಸ ಕುನೊ (Mr. Nicholas Cugnot) ಎಂಬ ವೈಜ್ಞಾನಿಕನಿಂದ ಆ ವಾಹನಕ್ಕೆ ಎತ್ತಿನ ಬಂಡೆಯ ಚಕ್ರಗಳೇ ಇದ್ದು ವೇಗವೂ ಹೆಚ್ಚು ಕಡಿಮೆ ಅಷ್ಟೇ ಇದ್ದದು ತಿಳಿದು ಬರುತ್ತದೆ. ಮುಂದೆ ಒಂದು ಶತಕದ ವರೆಗೂ ಈ ವಿಷಯವಾಗಿ ಪ್ರಯತ್ನಗಳು ನಡೆಯಲಿಲ್ಲ, ಆದರೆ ಮುಂದೆ ಯುರೋಪ ಅಮೇರಿಕೆಗಳಲ್ಲಿ, ಉಗಿ, ವಿದ್ಯುತ್, ಮತ್ತು ಪೆಟ್ರೋಲ್‌ಶಕ್ತಿಗಳಿಂದ ನಡೆಯುವ ವಾಹನಗಳನ್ನು ತಯಾರಿಸಲು ನೂರಾರು ಪ್ರಯತ್ನಗಳು ನಡೆದುದು ಕಂಡು ಬರುತ್ತದೆ.

ಪೆಟ್ರೋಲ್ ಮೇಲೆ ಚಲಿಸುವ ಪ್ರಥಮ ವಾಹನಗಳು

ಇಂಥ ಪ್ರಯತ್ನಗಳಲ್ಲಿ ಪ್ರಥಮತ : ಜಯಶಾಲಿಗಳಾದವರೆಂದರೆ ಜರ್ಮನಿಯ ಇಬ್ಬರು ತಜ್ಞರು, ಗಾಟ್ಲಬ್ ಡ್ಯಾಮ್ಲರ್ ಮತ್ತು ಕಾರ್ಲ್‌ಬೆಂಝ್ ಇವರು ೧೮೮೫ರಲ್ಲಿ ಪ್ರಥಮತಃ ಗ್ಯಾಸೊಲಿನ್ (ಪೆಟ್ರೋಲ್) ಮೇಲೆ ನಡೆಯುವ ಕಾರುಗಳನ್ನು ತಯಾರಿಸಿದರು! ಇದೇ ಭವ್ಯಾಕಾರವಾಗಿ ಬೆಳೆದು ನಿಂತ ಇಂದಿನ ಮೋಟಾರು ವ್ಯವಸಾಯಕ್ಕೆ ನಾಂದಿಯಾಯಿತು!!

ಉಗಿಯಂತ್ರದಿಂದ ಚಲಿಸುತ್ತಿದ್ದ 'ಪ್ರಥಮ' ಕಾರು (೧೭೭೦)



ಬೆಂಝ್ ಕಾರು (೧೮೮೫) ↑

ಅಮೇರಿಕೆಯಲ್ಲಿ ಇವುಗಳ ಪ್ರವೇಶ

ಮುಂದೆ ಹತ್ತು ವರ್ಷಗಳ ನಂತರ ೧೮೯೫ರಲ್ಲಿ ಮೂರು ಬೆಂಝ್ ಕಾರುಗಳು ಅಮೇರಿಕೆಯನ್ನು ಪ್ರವೇಶಿಸಿದವು, ನಾಲ್ಕೇ ವರ್ಷಗಳಲ್ಲಿ ಅಮೇರಿಕೆಯಲ್ಲಿ ಕಾರು ತಯಾರಿಸಲು ೧೦೬ ಚಿಕ್ಕ ಕಾರಖಾನೆಗಳು ಹುಟ್ಟಿಕೊಂಡವು. ಅಂದಿನಿಂದ ಇಂದಿನವರೆಗೂ ಅಮೇರಿಕೆಯೆ ಈ ದಿಶೆಯಲ್ಲಿ ಮುನ್ನಡೆ ಇಡುತ್ತಲಿದೆ!

೧೮೯೫ನೇ ವರ್ಷ ಈ ವಾಹನಗಳ ತಾಂತ್ರಿಕ ಪ್ರಗತಿಯಲ್ಲಿಯೂ ಮಹತ್ವದ ಕಾಲ! ಆ ವರ್ಷವೇ ಗಾಳಿ ತುಂಬಿದ ಚಕ್ರಗಳ ಶೋಧವು ಆಯಿತು!! ಈ ಮೊದಲು ವಾಹನಗಳು ಕುದುರೆ ಗಾಡಿಗಳ ಆಕಾರದಲ್ಲಿಯೇ ಇದ್ದು ಚಕ್ರಗಳೂ ಅದೇ ರೀತಿಯಲ್ಲಿಯೇ ಇದ್ದವು. ಅಂತೆಯೇ ಅಂದು ಈ ವಾಹನಕ್ಕೆ 'ಅಶ್ವರಹಿತ ವಾಹನ' (Horseless Vehicle) ಎಂದು ಕರೆಯಲ್ಪಡುತ್ತಿತ್ತೇನೋ!

ಮುಂದೆ ಐದು ವರ್ಷಗಳ ನಂತರ 'ಚುಕ್ಕಾಣಿಯ ಕೋಲಿ'ಗೆ (Steering Rod) ಬದಲಾಗಿ 'ಚುಕ್ಕಾಣಿ ಚಕ್ರ' (Steering Wheel) ಬಂತು!

ಪ್ರಥಮ ಸುವ್ಯವಸ್ಥಿತ ಕಾರಖಾನೆ

ಇಷ್ಟೆಲ್ಲ ಪ್ರಗತಿ ನಡೆದರೂ ಸುವ್ಯವಸ್ಥಿತವಾದ ಕಾರಖಾನೆ ಮಾತ್ರ ಇದುವರೆಗೂ ಇರಲಿಲ್ಲ. ಆ ಕೀರ್ತಿ ಅಮೇರಿಕೆಯ ಹೆನ್ರಿ ಫೋರ್ಡನಿಗೆ ಸಲ್ಲುತ್ತದೆ! ೧೯೦೮ರಲ್ಲಿ ಅವನು ಸುವ್ಯವಸ್ಥಿತವಾಗಿ ಬಿಡಿಭಾಗಗಳನ್ನು ತಯಾರಿಸಿ ಅವುಗಳನ್ನು ಒಂದೆಡೆ ತಂದು ಸುಗಮವಾಗಿ ಅವನ್ನು ಜೋಡಿಸುವ ವ್ಯವಸ್ಥೆ ಮಾಡಿದನು. ಈ ವ್ಯವಸ್ಥೆಯಿಂದಾಗಿ ಹೆಚ್ಚು ಕಾರುಗಳನ್ನು ಕಡಿಮೆ ವೇಳೆಯಲ್ಲಿ ತಯಾರಿಸಲು ಅನುಕೂಲವಾಯಿತು. ಅಂದಿನಿಂದ ದಿನೇ ದಿನೇ ತಾಂತ್ರಿಕವಾಗಿಯೂ,

ಡ್ಯಾಮಲರ್ (೧೮೮೫) ↑

ಬಾಹ್ಯಾಕಾರದ ಅಂದ ಚಂದಗಳಲ್ಲಿಯೂ ಪ್ರಗತಿ ನಡೆಯುತ್ತಲೇ ಹೋಯಿತು!

ಆ ಕಾಲದಲ್ಲಿ ಈ ಉದ್ಯೋಗದಲ್ಲಿ ತೊಡಗಿದವರು ಹೆಚ್ಚು ಜನ ಕಾರು ತಯಾರಿಸುವದರಲ್ಲಿಯೇ ತೊಡಗಿದ್ದರು. ೧೮೯೯ರಲ್ಲಿ ಪ್ರವಾಸಿಕರ ಬಸ್ಸೊಂದು ಅಮೇರಿಕೆಯಲ್ಲಿ ನಿಯಮಿತವಾಗಿ ನಡೆದುದು ಕಂಡುಬರುತ್ತದೆ.

ಈ ರೀತಿಯಲ್ಲಿ ಕಾರುಗಳು ಪ್ರಗತಿ ಹೊಂದುತ್ತ ಜನಪ್ರಿಯವೂ ಆಗುತ್ತ ನಡೆದರೂ ಆದಿಯಲ್ಲಿ ಜನರ ಟೀಕೆ ಚೇಷ್ಟೆಗಳಿಗೆ ಗುರಿಯಾದುದು ಉಂಟು. ಯಾಂತ್ರಿಕ ತೊಂದರೆಯಾಗಿ ಕೆಟ್ಟು ನಿಂತಾಗ, ಕುದುರೆಗಾಡಿನಡೆಸುವವರು ಕೊಂಕು ಮಾತನಾಡಿ ಚೇಷ್ಟೆ ಮಾಡಿದ್ದು ಉಂಟು.

↓ ಅಮೇರಿಕೆಗೆ ಬಂದ ಮೊದಲ ಕಾರು (೧೮೯೫)



ಪ್ರಥಮ ಗಾಳಿ ತುಂಬಿದ ಚಕ್ರಗಳು (೧೮೯೫) ↑

ಅಶ್ವರಹಿತ ವಾಹನ

ಮೊದಮೊದಲು ಕುದುರೆಗಾಡಿಗಳಿಗೆ ಎಂಜಿನ್ ಹಚ್ಚಲಾಗಿದ್ದೆ ಎಂದು ಹೇಳಲಾಗಿದೆ. ಯಂತ್ರದ ಶೋಧವಾದಾಗ ಕುದುರೆ ಶಕ್ತಿಯನ್ನು ಆ ಯಂತ್ರವು ಆವರಿಸಿತು. ಆಗಲೇ ಅದು 'ಹಾರ್ಸ್‌ಲೆಸ್' ವಾಹನವೆಂದು ಕರೆಯಲ್ಪಟ್ಟದ್ದು. ಆದರೆ ಈ ಸಂದರ್ಭದಲ್ಲಿ ಕೆಲವೊಂದು ಕಾರು ತಯಾರಕರು ಈ ವಾಹನದಿಂದ ಕುದುರೆಯ ಸಂಪರ್ಕವನ್ನು ಬೇರ್ಪಡಿಸದಷ್ಟು ಮೋಹಿತರಾಗಿದ್ದ ಮೋಜಿನ ಸಂಗತಿಗಳು ದೊರೆಯುತ್ತವೆ. ಒಬ್ಬ ಯುರಿಯಾ ಸ್ಮಿತ್ ಎಂಬವನು ಈ 'ಹಾರ್ಸ್‌ಲೆಸ್' ವಾಹನಕ್ಕೆ ಕಟ್ಟಿಗೆಯ ಕುದುರೆಯ ಮುಖವನ್ನು ಹಚ್ಚಿದ್ದನೆಂದು ಕೇಳಿದರೆ ನಗು ಬರುತ್ತದೆ.

ಫೋರ್ಡ್ ಟಿ-ಮೊಡೆಲ್ (೧೯೦೮) ಸುವ್ಯವಸ್ಥಿತ ಕಾರಖಾನೆಯಲ್ಲಿ ತಯಾರಿಸಿದ ಮೊದಲ ಕಾರು

ಭಾರತದಲ್ಲಿ ಈ ವಾಹನಗಳ ಪ್ರವೇಶ

ಭಾರತೀಯ ಸಂಸ್ಕೃತಿ ತೀರ ಹಳೆಯದು! ಪುರಾಣ ಕಾಲದಲ್ಲಿಯೇ ರಥ, ಎತ್ತಿನಗಾಡಿ, ಕುದುರೆ ಗಾಡಿಗಳು ಉಪಯೋಗವಿದ್ದುದನ್ನು ಕಾಣುತ್ತೇವೆ! ಇತಿಹಾಸ ಪೂರ್ವದಲ್ಲಿಯೂ ಈ ವಾಹನಗಳ ವಿಷಯವಾಗಿ ಕೇಳುತ್ತೇವೆ. ಕೌಟಿಲ್ಯ, ಅಶೋಕರು ತಮ್ಮ ರಾಜ್ಯಗಳಲ್ಲಿ ಸುಗಮವಾಗಿ ರಾಜಮಾರ್ಗಗಳನ್ನು ಕಟ್ಟುವದಕ್ಕೆ ವಿಶೇಷ ಆಸ್ಥೆ ವಹಿಸಿದ್ದು ಗೋಚರವಾಗುತ್ತದೆ. ಆದರೆ ನಮ್ಮ ದೇಶವು ಪರಕೀಯರ ಆಡಳಿತದಿಂದಾಗಿ ದೇಶೀಯ ಪ್ರಗತಿಗೆ ಕುಂದು ಬಂದುದನ್ನು ಬೇರೆ ಹೇಳಬೇಕಿಲ್ಲ!

ಆಧುನಿಕ ಮೋಟಾರು ವಾಹನಗಳು ಬೇರೆ ದೇಶಗಳಲ್ಲಿ ಪ್ರಗತಿ ಹೊಂದುತ್ತಿದ್ದಂತೆ ಭಾರತ ದೇಶದಲ್ಲಿ ಪ್ರವೇಶವಾಗಲು ಅಷ್ಟೊಂದು ವಿಲಂಬವಾಗಲಿಲ್ಲ. ೧೮೯೮ನೇ ಇಸ್ವಿಯಲ್ಲಿ ಮೂರು "ಓಲ್ಡ್ಸ್‌ಮೊಬಾಯಿಲ್" ಕಾರುಗಳು ಭಾರತವನ್ನು ಪ್ರವೇಶಿಸಿದವು. ಈ ಕಾರುಗಳನ್ನು ಅಮೇರಿಕೆಯ ಒಂದು ಆಯಾತ ನಿರ್ಯಾತ ಕಂಪನಿಯು (ಒಬ್ಬ ಮಿ. ಡಾಜ್ ಎಂಬವನ ಮಾಲಕೀಯಲ್ಲಿದ್ದುದು) ಈ ಕಾರುಗಳನ್ನು ಭಾರತದಲ್ಲಿ ನಿರ್ಯಾತಮಾಡಿತು. (ಈ ಕಂಪನಿ ಈಗ ಅಸ್ತಿತ್ವದಲಿಲ್ಲ) ಆಯಾತವಾದ ಈ ಕಾರುಗಳಲ್ಲಿ ಮೊಟ್ಟಮೊದಲನೆಯದು ಶ್ರೀ ಜೇಮಶೇಟಜಿ ಟಾಟಾ ಅವರ ಸೊತ್ತಾಯಿತು. ಎರಡನೆಯದು ಶ್ರೀ ಕಾಮಾರವರದು. ಮೂರನೆಯ ಕಾರು ಕಾವಸಜೀ ವಾಡಿಯಾರವರರಿಂದ ತೆಗೆದುಕೊಳ್ಳಲ್ಪಟ್ಟಿತು.

ಭಾರತದಲ್ಲಿ ಅಸೆಂಬ್ಲಿ ಪ್ಲಾಂಟ್ಸ್

ಆದರೆ ಕಾರುಗಳನ್ನು ಭಾರತದಲ್ಲಿ ತಯಾರಿಸುವ ಪ್ರಯತ್ನಗಳು ಮಾತ್ರ ಬಹಳ ತಡವಾಗಿ ನಡೆದವು! ನಮ್ಮ ದೇಶದಲ್ಲಿ ಇವುಗಳ ವ್ಯಾಪಾರಕ್ಕೆಂದು ಮೊಟ್ಟ ಮೊದಲು ಕಚೇರಿಯನ್ನು ತೆಗೆದವರೆಂದರೆ 'ಫೋರ್ಡ್ ಮೋಟಾರ್ ಕಂಪನಿ ಆಫ್ ಇಂಡಿಯಾ' ಅವರು. ೧೯೨೬ ರಲ್ಲಿ ಮೋಟಾರ್ ವ್ಯವಸಾಯಕ್ಕೆಂದು ಕಾಲಿಟ್ಟರು. ಮುಂದೆ ೪ ನೆಯ ಡಿಸೆಂಬರ್ ೧೯೨೮ ರ ದಿನ "ಜನರಲ್ ಮೋಟರ್ ಆಫ್ ಇಂಡಿಯಾ ಲಿಮಿಟೆಡ್" ಇವರು ಪ್ರವೇಶಿಸಿದರು. ವ್ಯಾಪಾರ ಹೆಚ್ಚಾದಂತೆ, ಇನ್ನೂ ಹೆಚ್ಚಾಗಬಹುದೆಂಬ ಆಶೆ ತೋರಿದಾಗ

೧೮೯೮ ರಲ್ಲಿ ಭಾರತಕ್ಕೆ ಬಂದ ಕಾರುಗಳಲ್ಲಿ ಒಂದು

ಈ ಎರಡೂ ಕಂಪನಿಗಳು ಕಾರು ಮತ್ತು ಟ್ರಕ್ಕುಗಳ ಬಿಡಿಭಾಗಗಳನ್ನು ಆಯಾತ ಮಾಡಿ ಅವುಗಳನ್ನು ಇಲ್ಲಿಯೇ ಜೋಡಿಸುವದಕ್ಕೋಸ್ಕರ ''ಅಸೆಂಬ್ಲಿ ಪ್ಲಾಂಟ್ಸ್''ಗಳನ್ನು ತೆರೆದರು. ಈ ವ್ಯವಸ್ಥೆಯಿಂದಾಗಿ (ಇಡೀ ಕಾರು, ಟ್ರಕ್ಕು ತರುವ) 'ಸಾರಿಗೆ' (Transport) ವೆಚ್ಚ ಕಡಿಮೆಯಾಯಿತು. ಈ ಸೌಕರ್ಯದ ಪರಿಣಾಮವೆಂದರೆ, ಸಾಧಾರಣ ಶ್ರೀಮಂತರೂ ಕಾರುಗಳನ್ನು ತೆಗೆದುಕೊಳ್ಳುವಂತಾಯಿತು !

ಮೊದಲನೇ ಮಹಾಯುದ್ಧದ ನಂತರ 'ಅಸ್ಟಿನ್' ಮತ್ತು 'ಮಾರೀಸ್' ಈ ಕಂಪನಿಗಳು ಇಂಗ್ಲೆಂಡಿನಲ್ಲಿ, ವಿಪುಲವಾಗಿ ಕಾರುಗಳನ್ನು ತಯಾರಿಸಲೂ, ಹಾಗೆ: ತಯಾರಿಸಿದವುಗಳನ್ನು ಬೇರೆ ಬೇರೆ ದೇಶಗಳಿಗೆ ನಿರ್ಯಾತ ಮಾಡುವ ಉದ್ದೇಶದಿಂದಲೂ, ದೊಡ್ಡ ಕಾರಖಾನೆಗಳನ್ನು ಸ್ಥಾಪಿಸಿದರು. ಭಾರತದಲ್ಲಿಯೂ ತಮ್ಮ ಕಾರುಗಳನ್ನು ಮಾರುವ ಉದ್ದೇಶದಿಂದ ಇಲ್ಲಿ ತಮ್ಮ ಪ್ರತಿನಿಧಿ Dealers ಗಳನ್ನು ನೇಮಿಸಿಕೊಂಡರು. ಇದರಿಂದಾಗಿ ಭಾರತದ ಮಾರ್ಗಗಳ ಮೇಲೆ ಹೆಚ್ಚು ಹೆಚ್ಚು ಕಾರುಗಳು ಕಾಣುವಂತಾದವು !

ಭಾರತೀಯ ಮೋಟಾರುಗಳನ್ನು ತಯಾರಿಸುವ ಯತ್ನ

ಪರಕೀಯ ದೇಶಗಳಲ್ಲಿ ಮೋಟಾರು ತಯಾರಿಸುವ ಉದ್ಯೋಗ ವಿಪುಲವಾಗಿ ಬೆಳೆಯುತ್ತಿದ್ದಂತೆಯೇ ಇಲ್ಲಿ ಅವುಗಳ ಮಹತ್ವ, ಅವುಗಳ ಅವಶ್ಯಕತೆಯನ್ನು ಗ್ರಹಣಮಾಡಿಕೊಂಡು ಅವುಗಳ ತಯಾರಿಕೆ ನಮ್ಮ ದೇಶದಲ್ಲಿಯೇ ಆಗಬೇಕು, ನಮ್ಮ ಜನಕ್ಕೆ ಉದ್ಯೋಗ ದೊರಕಬೇಕು, ಲಾಭ ನಮ್ಮ ದೇಶಕ್ಕೆ ಉಳಿಯಬೇಕು, ಎಂದು ಮೊದಲು ತಳಮಳಿಸಿದವರು

ದಿ. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು

ನಮ್ಮವರೇ ! ಭಾರತರತ್ನ ದಿವಂಗತ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು !! .

ಆದರೆ ಭಾರತ, ಭಾರತೀಯರು, ಎಂದೂ ಮುಂದು ಬರಬಾರದೆಂಬ ಉದ್ದೇಶವಿಟ್ಟುಕೊಂಡ ಇಂಗ್ಲರು, ನಮ್ಮನ್ನು ಅಷ್ಟು ಸುಲಭವಾಗಿ ಮುಂದುಬಿಡಲು ಸಾಧ್ಯವೇ ?

ಈ ಉದ್ಯೋಗದ ರೂಪರೇಷೆಯನ್ನು ಎಂ. ವಿ. ಅವರು ೧೯೩೫ ರಷ್ಟು ಹಿಂದೆಯೇ ಚಿತ್ರಿಸಿದರು ಮತ್ತು ಆ ವಿಷಯವಾಗಿ ಯುರೋಪ ಖಂಡವನ್ನು ಸುತ್ತಿಬಂದರು. ವಿವರಗಳನ್ನು ಕೂಡ ಪ್ರಕಟಿಸಿದರು. ಇಂತಹ ಉದ್ಯೋಗವನ್ನು ಸ್ಥಾಪಿಸಲು ಸರಕಾರದ ಸಹಾಯವಿಲ್ಲದೇ ಸಾಧ್ಯವಿಲ್ಲವೆಂದು ಅವರು ಅದನ್ನು ಕೈಗೂಡಿಸುವದಕ್ಕೋಸ್ಕರ, ಸರಕಾರದ ಮನ್ನಣೆ ಪಡೆಯಲೋಸುಗ, ಅತ್ತಿಂದಿತ್ತ ಅಲೆದಾಡಬೇಕಾಯಿತು. ಅಲೆದಾಡಿದರು !

ಆದರೆ ೧೯೩೬ ರಲ್ಲಿ ಆ ಆಂಗ್ಲ ಕೇಂದ್ರ ಸರಕಾರ ಸರ್ ಎಂ. ವಿ. ಅವರಿಗೆ ಅವರ ಕೇಳಿಕೆಯ ವಿಷಯವಾಗಿ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿ ಅದರ ವರದಿಯ ಪ್ರಕಾರ ಈ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳಲಾಗುವದೆಂದು ತಿಳಿಸಿತು. ಇದೊಂದು ಗೊಳ್ಳು ಭರವಸೆಯಾಗಿತ್ತೇ ವಿನಾ ಮನಃಪೂರ್ವಕವಾದ ಮಾತಾಗಿರಲಿಲ್ಲ! ಹಿಂದಿನಿಂದ ಇಂಥ ವಿಚಾರಣೆಯೇ ಸಾಧ್ಯವಾಗಲಾರದು ಎಂದು ಹೇಳಿ ಅದಕ್ಕೆ ತಾಂತ್ರಿಕ ಅಡಚಣೆಗಳಿವೆ ಎಂದು ಮುಖಹೊರಳಿಸಿತು. ಇದನ್ನು ಕೇಳಿದ 'ಎಂ. ವಿ.' ಅವರು ಎದೆಗುಂದಲಿಲ್ಲ. ಆಶೆಯನ್ನೂ ಬಿಡಲಿಲ್ಲ. ಪ್ರಯತ್ನ ನಡದೇ ಇತ್ತು. ಮೂರು ವರ್ಷಗಳು ಕಳೆದವು. ಈ ಮೂಲ ಉದ್ಯೋಗದ ಮಹತ್ವವನ್ನರಿತ ಧೂರ್ತ ಉದ್ಯೋಗಪತಿ ಶೇಠ ವಾಲ-ಚಂದ ಹಿರಾಚಂದ ಅವರು ೧೯೩೯ ರಲ್ಲಿ ಸರ್ ಎಂ. ವಿ. ಯವರ ಈ ಮಹತ್ವಾಕಾಂಕ್ಷೆಗೆ ಒಂದು ಮೂರ್ತ ಸ್ವರೂಪ ಕೊಡುವದಕ್ಕೋಸ್ಕರ ಮುಂದೆ ಬಂದರು !!

ಅದೇ ವರ್ಷ ಮುಂಬಯಿ ಸರಕಾರವನ್ನು ಕಂಡು ತಮ್ಮ ಈ ವಿಚಾರವನ್ನು ಅದರ ಮುಂದಿಟ್ಟರು. ಆಗ ಆ ಸರಕಾರ ಈ ಸೂಚನೆಯನ್ನು ಆದರದಿಂದಲೇ ಬರಮಾಡಿಕೊಂಡು ತನ್ನ ಕುತೂಹಲವನ್ನು ಈ ಬಗ್ಗೆ ವ್ಯಕ್ತಪಡಿಸಿತಲ್ಲದೇ ಈ ವಿಷಯವಾಗಿ ಒಂದು ಕಂಪನಿಯನ್ನು ಸ್ಥಾಪಿಸಿದರೆ, ನೂರಕ್ಕೆ ಮೂರುವರೆ ಬಡ್ಡಿಯ ಮೇಲೆ ಒಂದುವರೆ ಕೋಟಿ ರೂಪಾಯಿಗಳ ಅಧಿಕೃತ ಭಂಡವಾಲು ಕೊಡುವದಾಗಿಯೂ ಭರವಸೆ ನೀಡಿತು. ಬಹುಶಃ ಈ ವಾಗ್ದಾನವನ್ನು ಮಾಡುವಾಗ ಕೇಂದ್ರ ಸರಕಾರದ ಉತ್ತರ ಏನು ಬಂದೀತು ಎಂದು ಮುಂಬಯಿ ಸರಕಾರ ವಿಚಾರಿಸಿದಂತೆ ಕಾಣಲಿಲ್ಲ !

ಮುಂಬಯಿ ಸರಕಾರದ ಈ ಸಲಹೆಯನ್ನು ಕೇಳಿದೊಡನೆ ಆತುರರಾಗಿ ಶೇಠ ವಾಲಚಂದರು ಕಾಲ ವಿಲಂಬ ಮಾಡದೇ ''ವಾಲಚಂದ ಎಂಡ್ ಕಂಪನಿ'' ಎಂಬ ಸಂಸ್ಥೆಯನ್ನು ಸ್ಥಾಪಿಸಿಯೇ ಬಿಟ್ಟರು. ಹಾಗು ಅಮೇರಿಕೆಯ ಕ್ರೈಸಲರ್ ಕಾರ್ಪೊರೇಶನ್ನದವರೊಡನೆ ಮಾತುಕತೆ ನಡೆಸಿ ಅವರಿಂದ ಎಲ್ಲ ರೀತಿಯ ತಾಂತ್ರಿಕ ಸಹಕಾರವನ್ನು ಪಡೆಯುವ ಬಗ್ಗೆಯೂ, ಅವರು ತಯಾರಿಸುತ್ತಿರುವ ಮೋಟಾರು ವಾಹನಗಳನ್ನು ಇಲ್ಲಿ ತಯಾರಿಸುವ ಬಗ್ಗೆಯೂ ಭರವಸೆಯನ್ನು ಪಡೆದುಕೊಂಡರು !

....ತುತ್ತು ಬಾಯಿಗೆ ಬರಲಿಲ್ಲ !

ಫಲ ಕೈಗೆ ಬರುತ್ತಿದೆ ಎಂದು ಸರ್ ಎಂ.ವಿ. ಮತ್ತು ಶೇಠ ವಾಲಚಂದರು ಸಂತೋಷಪಟ್ಟರು. ಆದರೆ ಕೈಯಲ್ಲಿ ಕೊಡಲಿಯನ್ನೇ ಹಿಡಿದು ನಿಂತಿದ್ದ ಕೇಂದ್ರ ಸರಕಾರ ಬುಡಕ್ಕೇ ಪೆಟ್ಟು ಹಾಕಿತು. ಎರಡನೇ ಮಹಾಯುದ್ಧದ ಸಮಯವದು. ಯುದ್ಧದ ವಿಷಯವಾಗಿ ಈ ಉದ್ಯೋಗದಿಂದ ಏನೂ ಪ್ರಯೋಜನವಾಗಲಾರದು! ಎಂಬ ಕುಂಟು ನೆವ ಮುಂದುಮಾಡಿ ಕೇಂದ್ರಸರಕಾರ, ಮುಂಬಯಿ ಸರಕಾರಕ್ಕೆ ಈ ವಿಷಯವಾಗಿ ತನ್ನ



ದಿ. ವಾಲಚಂದರು

ಒಪ್ಪಿಗೆಯನ್ನು ನಿರಾಕರಿಸಿತು ! ಮುಂಬಯಿ ಸರಕಾರ, ಕೇಂದ್ರ ಸರಕಾರದ ಒಪ್ಪಿಗೆ ಮತ್ತು ಸಹಾಯವಿಲ್ಲದೆ ತನಗೇನೂ ಮಾಡಲಿಕ್ಕಾಗುವದಿಲ್ಲವೆಂದು ವಾಲಚಂದರಿಗೆ ತನ್ನ ಅಸಹಾಯಕತೆಯನ್ನು ತಿಳಿಸಿತು. ಹೀಗಾಗಿ ಮೊಳಕೆಯಲ್ಲಿಯೇ ಕಮರಿತು ವಾಲಚಂದರ ವಿಚಾರ !

ಮೈಸೂರು ಮಹಾರಾಜರೆಡೆ

'ಪ್ರಯತ್ನವಿದ್ದಲ್ಲಿ ಫಲವಿದೆ' ಎಂಬುದರಲ್ಲಿ ನಂಬಿಕೆಯಿದ್ದ ವಾಲಚಂದರು ಪ್ರಯತ್ನವನ್ನು ಮಾತ್ರ ಬಿಡಲಿಲ್ಲ. ೧೯೪೧ ನೇ ಇಸ್ವಿಯಲ್ಲಿ ಮೈಸೂರು ಮಹಾರಾಜರೆಡೆಗೆ ಬಂದರು. ಅವರ ಸಹಾಯವನ್ನು ಕೇಳಿದರು. ಆಗಲೂ ಕೇಂದ್ರ (ದಿಲ್ಲಿ) ಸರಕಾರ ಈ ಉದ್ಯೋಗದಿಂದ ಯುದ್ಧದ ಉಳಿದ ಚಟುವಟಿಕೆಗಳು ಸಂಕುಚಿತವಾದಾವು ಎಂಬ ನೆವದಿಂದ ಈ ಉದ್ಯೋಗಕ್ಕಾಗಿ ಏನೂ ಸಹಾಯಮಾಡಬಾರದು ಎಂದು ಆಜ್ಞೆಯನ್ನಿತ್ತಿತು. ಆದರೆ, ಕಂಪನಿಯು ಕೇವಲ ಯುದ್ಧಕ್ಕಾಗಿಯೇ ಬೇಕಾಗುವ ವಾಹನಗಳನ್ನೆ ತಯಾರಿಸುವಂತಿದ್ದರೆ ಮಾತ್ರ ತನ್ನ ಸಮ್ಮತಿಯನ್ನು ಸೂಚಿಸಿತ್ತು. ವಾಲಚಂದರು 'ಆಗಲಿ' ಎಂದು ಉತ್ತರಿಸುತ್ತಿದ್ದಂತೆಯೇ ಅದೇ ಯುದ್ಧದ ಕಾರಣವನ್ನು ಮತ್ತೂ ಮುಂದೆ ಮಾಡಿ 'ಬೇಡ'ವೆಂದು ಕೇಂದ್ರ ಸರಕಾರ ಆದೇಶವನ್ನಿತ್ತಿತು !!

ಇದೇ ರೀತಿ ಒಂದಿಲ್ಲೊಂದು ಕಾರಣವನ್ನು ಹೇಳಿ ಅಂದಿನ ಆ ಆಂಗ್ಲ ಸರಕಾರ ಭಾರತವನ್ನು ಆಪರಿಸಿಕೊಂಡು ಇರುವವರೆಗೂ ಈ ಉದ್ಯೋಗವನ್ನು ಸ್ಥಾಪಿಸುವದಕ್ಕೆ ಯಾವ ಉತ್ತೇಜನವನ್ನೂ ನೀಡಲಿಲ್ಲ !

ಭಾರತ ಸ್ವಾತಂತ್ರ್ಯವನ್ನು ಗಳಿಸಿದ ನಂತರ ಸರ್. ಎಂ. ವಿ. ಅವರು ಈ ವಿಷಯವಾಗಿ ಹೇಳಿದ್ದನ್ನು ಕೇಳಿದರೆ ಅಂದಿನ ಪರಿಸ್ಥಿತಿಯ ಅರಿವು ಚನ್ನಾಗಿ ಆಗುತ್ತದೆ. ಅದನ್ನು ಅವರ ಮಾತಿನಲ್ಲಿಯೇ ಕೇಳಬೇಕು :

> "Those were the days when we had a foreign bureaucratic Government in India whose chief aim was the support of non-Indian industrialists who desired that India should ever remain in economic bondage and allow its vast resources to be exclusively exploited by the Britishers" [1]

* * *

ಎರಡನೇ ವಿಶ್ವಯುದ್ಧದಲ್ಲಿ ಮುಳುಗಿದ ಕಾರಣದಿಂದಲೋ, ಭಾರತದಲ್ಲಿ ಭಾರತೀಯರು ಹೂಡಿದ ಸ್ವಾತಂತ್ರ್ಯಾಂದೋಲನದ ನಿಮಿತ್ತವಾಗಿ ನಾವಿನ್ನು ಬಹುದಿನ ಬಾಳಲಾರೆವೆಂಬ ನಂಬಿಕೆಯಿಂದಲೋ ನಂತರ ಆಂಗ್ಲರು ಈ ದಿಶೆಯಲ್ಲಿ ಸ್ವಲ್ಪ ಉತ್ತೇಜನ ನೀಡಿದ್ದು ಕಂಡುಬರುತ್ತದೆ.

೧೯೪೨-೪೪ ರ ಅವಧಿಯಲ್ಲಿ ವಾಲಚಂದ ಸಮೂಹ ಹಾಗು ಬಿರ್ಲಾ ಸಮೂಹದವರು ಭಾರತದಲ್ಲಿ ಮೋಟಾರು ತಯಾರಿಕೆಗಾಗಿ ಎರಡು ಕಾರಖಾನೆಗಳನ್ನು ಸ್ಥಾಪಿಸಿದರು.

ವಾಲಚಂದರು ಮುಂಬೈಯಲ್ಲಿ "ದಿ ಪ್ರಿಮಿ-ಯರ್ ಆಟೋಮೋಬಾಯಿಲ್ಸ್ ಲಿ." ಕಂಪನಿಯನ್ನು ಸ್ಥಾಪಿಸಿ ಆ ಮೂಲಕ ಕ್ರೈಸ್ಲರ್ ಕಾರ್ಪೊರೇಶನ್ (ಅಮೇರಿಕೆ) ಅವರ ಗಾಡಿಗಳನ್ನು ಕ್ರಮೇಣವಾಗಿ ಇಲ್ಲಿಯೇ ತಯಾರಿಸುವದಾಗಿ ನಿರ್ಧರಿಸಿದರು.

ಬಿರ್ಲಾರವರು ''ಹಿಂದುಸ್ಥಾನ ಮೋಟರ್ಸ್, ಲಿ.'' ಕಂಪನಿಯನ್ನು ಕಲಕತ್ತಾದಲ್ಲಿ ಸ್ಥಾಪಿಸಿದರು. ಅಲ್ಲಿ ಹಿಂದುಸ್ಥಾನ ಕಾರುಗಳನ್ನು ತಯಾರಿಸುವದಾಗಿ ನಿಶ್ಚಯಿಸಿದರು.

ಆ ಕಾರಖಾನೆಗಳು ಕೇವಲ 'ಅಸೆಂಬ್ಲಿ' ಮಾಡುವ ಉದ್ದೇಶವನ್ನು ಇಟ್ಟುಕೊಳ್ಳದೆ ಭಾರತದಲ್ಲಿ ಅವುಗಳ ಬಿಡಿಭಾಗಗಳನ್ನು ಪ್ರಗತಿಪರವಾಗಿ ತಯಾರಿಸಿ 'ಭಾರತೀಯ ಮೋಟಾರು' ನಿರ್ಮಾಣದ ಉದ್ದೇಶವನ್ನಿಟ್ಟುಕೊಂಡರು.

ಈ ಕಂಪನಿಗಳು ಸ್ವಾತಂತ್ರ್ಯಕ್ಕೆ ಮುಂಚೆಯೇ ಹುಟ್ಟಿಕೊಂಡಿದ್ದರೂ ಇವುಗಳಲ್ಲಿ ಪ್ರಗತಿ ಕಂಡದ್ದುಮಾತ್ರ ಸ್ವಾತಂತ್ರ್ಯ-ನಂತರವೇ ! ಅದಕ್ಕೆ ಬಲವಾದ ಕಾರಣವೂ ಉಂಟು. ಆಗ ಇನ್ನೂ ಆಡಳಿತದಲ್ಲಿದ್ದ ಆ ಸರ್ಕಾರ ಪರಕೀಯ ಕಂಪನಿಗಳಿಗೆ ಗುಟ್ಟಾಗಿ ಉತ್ತೇಜನ ನೀಡುತ್ತಿತ್ತು. ಭಾರತೀಯ ಕಂಪನಿಗಳ ಬಗ್ಗೆ ನಿರ್ಲಕ್ಷ್ಯವನ್ನು ತಾಳಿತ್ತು.

ಭಾರತೀಯ ರಾಜ್ಯ ಕಾರಭಾರ ಭಾರತೀಯರ ಕೈಯಲ್ಲಿ ಬಂದೊಡನೆ ಮೊದಲಿದ್ದ ಪರಕೀಯ ಕಂಪನಿಗಳಿಗೆ, "ನೀವು ಪರದೇಶದಿಂದ ಬಿಡಿಭಾಗಗಳನ್ನು ತಂದು ಇಲ್ಲಿ ಕೇವಲ 'ಅಸೆಂಬ್ಲಿ' (ಜೋಡಣೆ) ಮಾಡುವಂತಿದ್ದರೆ ನೀವಿಲ್ಲಿರಲಿ

---

1 from 'India Today'

ಕ್ಕಾಗದು ಎಲ್ಲವನ್ನೂ ಇಲ್ಲಿಯೇ ಪ್ರಗತಿಪರವಾಗಿ ನಿರ್ಮಾಣ ಮಾಡುವಂತಿದ್ದರೆ ಮಾತ್ರ ನಿಮ್ಮ ಕಂಪನಿಗಳನ್ನು ಇಲ್ಲಿರಲು ಮುಂದುವರಿಸಲಿಕ್ಕಾಗುವದು" ಎಂದು ಹೇಳಿದ್ದಕ್ಕೆ ಆ ಕಂಪನಿಗಳು ಹೇಳಿದ ಉತ್ತರವನ್ನು ಕೇಳಿದರೆ ಆಶ್ಚರ್ಯವಾಗುತ್ತದೆ! "ಭಾರತದಲ್ಲಿ ಪೂರ್ಣವಾದ ಮೋಟಾರನ್ನು ಎಂದೂ ನಿರ್ಮಾಣ ಮಾಡಲು ಸಾಧ್ಯವಾಗಲಾರದು" ಎಂದು. ಇಷ್ಟೇ ಅಲ್ಲ ಮುಂದೆ ಕಂಬಕಿತ್ತುವ ಕಾಲ ಬಂದಾಗ ತಮ್ಮಲ್ಲಿದ್ದ ಅಲ್ಪ ಯಂತ್ರೋಪಕರಣಗಳನ್ನೂ ನಾಶಪಡಿಸಿ ದೇಶ ಬಿಟ್ಟರು !!

ಮೇಲೆ ಹೇಳಿದ ಎರಡು ಭಾರತೀಯ ಕಂಪನಿಗಳಲ್ಲದೆ ಇನ್ನೂ ಕೆಲವು ಕಂಪನಿಗಳು ಬೇರೆ ಮಾದರಿಯ ಮೋಟಾರ ವಾಹನವನ್ನು ತಯಾರಿಸುವದಾಗಿ ಜನ್ಮತಾಳಿದವು.

ಈ ವ್ಯವಸಾಯ ವಿಷಯವಾಗಿ ಸರಕಾರವೂ ಹೆಚ್ಚು ಲಕ್ಷವನ್ನು ಹಾಕತೊಡಗಿತು. ಅಲ್ಲದೇ ಈ ಉದ್ಯೋಗದಲ್ಲಿಯ ಕುಂದುಕೊರತೆಗಳನ್ನು ಹುಡುಕಿ ತೆಗೆದು ಪೂರ್ಣ ಭಾರತೀಯ ವಾಹನ ನಿರ್ಮಾಣಕ್ಕೆ ಬೇಕಾದ ಸಹಾಯ ಸೂಚನೆಗಳನ್ನು ಸರಕಾರಕ್ಕೆ ಸೂಚಿಸಲು ಸರಕಾರ ೧೯೫೨ ರಲ್ಲಿ 'ಟರೀಫ್ ಕಮಿಶನ್'ನ್ನು ನೇಮಕ ಮಾಡಿತು. ಕಮಿಶನ್‌ನಿನ ಆದೇಶದ ಮೇರೆಗೆ ಕೇವಲ 'ಅಸೆಂಬ್ಲರ್ಸ್' ಆಗಿರುವವರಿಗೆ ಕಾರ್ಖಾನೆ ಮುಚ್ಚಲು ಹೇಳಲಾಯಿತು. ಪ್ರಗತಿಪರವಾಗಿ ಮೋಟಾರ್ ವಾಹನವನ್ನು ತಯಾರಿಸುವವರಿಗೇ ತನ್ನ ಎಲ್ಲ ಸಹಾಯ ನೀಡುವದಾಗಿ ಹೇಳಿತು. ೧೯೫೩ ರಲ್ಲಿ ಹೇಳಿದ ಈ ಹೇಳಿಕೆಯಿಂದ ನಿರ್ಮಾಪಕರಿಗೆ ತಮ್ಮ ಪಾಯವನ್ನು ಭದ್ರಪಡಿಸಿಕೊಳ್ಳಲು ಅನುವಾಯಿತು !

ಮಧ್ಯವರ್ತಿ ಸರಕಾರ ೧೯೫೫ ರಲ್ಲಿ ಟರೀಫ್ ಕಮೀಶನ್‌ಗೆ ಈ ನಿರ್ಮಾಪಕರಲ್ಲಿ ಪ್ರಗತಿಯ ಮಟ್ಟ ಎಲ್ಲಿಯವರೆಗೆ ಬಂದಿದೆ ಎಂದು ತಿಳಿಸಲು ಹೇಳಿದ್ದರ ಪರಿಣಾಮವಾಗಿ ಕಮೀಶನ್ ಅವರು ಅಭ್ಯಾಸ ಮಾಡಿ ೧೯೫೬ ರಲ್ಲಿ, ಭಾರತೀಯ ವಾಹನವನ್ನು ನಿರ್ಮಿಸುವ ಉದ್ದೇಶವಿಟ್ಟುಕೊಂಡ ಉದ್ಯಮದಾರರಿಗೇ ಮಹತ್ವಕೊಟ್ಟು-ಅವರಿಗೇ ಹೆಚ್ಚಿನ ಪ್ರೋತ್ಸಾಹನವನ್ನು ಕೊಡಬೇಕು. ಹಾಗು ಹೊಸ ಕಾರಖಾನೆಗಳನ್ನು ತೆರೆಯಲು ನಿರ್ಭಂಧಿಸಿತ್ತು. ಇದರಿಂದಾಗಿ ಅಸ್ತಿತ್ವದಲ್ಲಿದ್ದ ಕಾರಖಾನೆದಾರರಿಗೆ ಉತ್ಸಾಹ ಇಮ್ಮಡಿಸಿತು.

ಕಮೀಟಿಯೊಂದರೆ ಸೂಚನೆಯ ಅವಗಾಹನವನ್ನು ಮಾಡಿ, ಸರಕಾರವು ಒಂದು ನಿರ್ಣಯಕ್ಕೆ ಬಂತು : ಟ್ರಕ್ಕುಗಳ ನಿರ್ಮಾಣ ಹೆಚ್ಚಾಗಬೇಕು, ಡೀಜಲ್ ಗಾಡಿಗಳ ತಯಾರಿಕೆ ಬೆಳೆಯಬೇಕು, ಮತ್ತು ವಿವಿಧ ಮಾದರಿಯ ಟ್ರಕ್ ಮತ್ತು ಕಾರುಗಳನ್ನು ಇಂತಿಂತಹ ಕಾರಖಾನೆಯವರೇ ತಯಾರಿಸಬೇಕು ಎಂದು ನಿರ್ಧರಿಸಿ, ಮೂರು ತರಹದ ಕಾರುಗಳು, ಮೂರು ಮಾದರಿಯ ಮಧ್ಯಮ (Medium) ಟ್ರಕ್, ಒಂದು ಹೆಚ್ಚು ಭಾರಹೊರುವ (Heavy) ಟ್ರಕ್, ಒಂದು ಲಾಯಿಟ್ ಟ್ರಕ್ ಮತ್ತು ಒಂದು 'ಜೀಪ್' ಇಷ್ಟನ್ನು ತಯಾರಿಸಲು ಕೆಳಗಿನ ಪ್ರಕಾರ ನಿರ್ಧಾರವಾಯಿತು :

(೧) ಪ್ರಿಮಿಯರ್ ಅಟೋಮೋಬಾಯಿಲ್ಸ್, ಮುಂಬಯಿ ಇವರು ಫಿಯಟ್ ೧೧೦೦ ಕಾರು, ಡಾಜ್, ಫಾರ್ಗೊ ಲಾಯಿಟ್ (ಪೆಟ್ರೋಲ್), ಮಧ್ಯಮ (೫ ಟನ್ನ ಪೆಟ್ರೋಲ್ ಮತ್ತು ಡೀಜೇಲ್) ಟ್ರಕ್ಕುಗಳನ್ನು ಮಾಡುವದೆಂದೂ, (೨; ಹಿಂದುಸ್ಥಾನ ಮೋಟರ್ಸ್ ಲಿ., ಕಲಕತ್ತಾ ಇವರು ಹಿಂದುಸ್ಥಾನ ಅಂಬಾಸೆಡರ್ ಕಾರು ಹಾಗು 'ಬೆಡಫೋರ್ಡ' (೫ ಟನ್ ಪೆಟ್ರೋಲ್-ಡೀಜೇಲ್) ಟ್ರಕ್ಕನ್ನೂ, (೩) ಟಾಟಾ ಇಂಜಿಯನಿಯರಿಂಗ್ ಎಂಡ್ ಲೋಕೋಮೋಟಿವ್ ಕಂ. ಲಿ, ಜೇಮಶೇಟಪುರ ಇವರು "ಟಾಟಾ ಮರ್ಸಿಡೀಸ್" ಟ್ರಕ್(ಡೀಜೇಲ್)ಗಳನ್ನೂ, (೪) ಅಶೋಕ ಲೇಲೆಂಡ್ ಲಿ., ಮದ್ರಾಸ್ ಇವರು "ಲೇಲೆಂಡ್ ಕಾಮೆಟ್-ಟಾಯಿಗರ್/ಟಟಾನ್ (ಡೀಜೇಲ್) ಈ ಟ್ರಕ್ಕುಗಳನ್ನೂ, (೫) ಮಹೀಂದ್ರ ಎಂಡ್ ಮಹೀಂದ್ರ, ಮುಂಬಯಿ ಇವರು'ಯುನಿವರ್ಸಲ್ ಜೀಪ್' ಗಳನ್ನೂ ಮತ್ತು (೬) ಸ್ಟಾಂಡರ್ಡ್ ಮೋಟರ್ ಪ್ರೊಡಕ್ಟ್ಸ ಆಫ್ ಇಂಡಿಯಾ ಲಿ,

We wish you all a Happy Deepavali

THE BELLARY CENTRAL CO-OPERATIVE STORES LTD.,

Head Office:
BELLARY.

Sugar Factory,
KAMPLI. (Bellary Dist)

First Sugar Factory of its kind run on Co-operative basis in the enlarged Mysore State, started crushing in 1958. Proposes to increase its crushing capacity from 800 tons to 1500 tons per day in two stages.

Factory will start crushing from November 1967.
and will manufacture 30 E. grade sugar.

Those intended in purchase of the de-controlled stocks of our sugar are requested to apply to the undersigned.

J T. Viswanathan,
Chairman & Managing Director.

ಮದ್ರಾಸ ಇವರು 'ಸ್ಟ್ಯಾಂಡರ್ಡ ಹೆರಾಲ್ಡ' ಕಾರುಗಳನ್ನೂ ತಯಾರಿಸಬೇಕೆಂದು ನಿರ್ಧಾರವಾಯಿತು. ಈ ಆರು ಕಾರಖಾನೆಗಳ ಪಾಯ ಭದ್ರವಾಯಿತು !

ಈ ತೆರನಾಗಿ ವ್ಯವಸ್ಥೆಯನ್ನು ಸರಕಾರವು ಮಾಡಿದ್ದು ೧೯೫೭ ರಲ್ಲಿ. ಇದಕ್ಕೆ ಇನ್ನೊಂದು ಮುಖ್ಯ ಕಾರಣವೆಂದರೆ, ಆದಷ್ಟು ಬೇಗ ಪರ-ದೇಶಿ ಹಣಕಾಸಿನ ವಿನಿಮಯವನ್ನು ಸ್ಥಗಿತಗೊಳಿಸಬೇಕಿತ್ತು.

(ಈ ವರ್ಷ, (೧೯೬೭) ಇನ್ನೆರಡು ಹೊಸ ಲಾಯಿಟ ಟ್ರಕ್ಕುಗಳು ಹೊರಬಂದಿವೆ ; ಸ್ಟ್ಯಾಂ-ಡರ್ಡ ೨೦' (Standard 20') ಹಾಗು 'ಬಜಾಜ ಟೆಂಪ್ರೋ ವಿಕಿಂಗ.'(ನಾಲ್ಕು ಚಕ್ರ))

ಇನ್ನು ಟ್ರಕ್ಕುಗಳಿಗೆ ಬೇಕಾಗುವ ವಿಶಿಷ್ಟ ಡೀಜಲ್ ಇಂಜಿನುಗಳನ್ನು ತಯಾರಿಸಲು ಕೆಳಗಿನ ಕಂಪನಿಗಳಿಗೆ ಪರವಾನಿಗೆ ಕೊಡಲಾಯಿತು:

ಪರ್ಕಿನ್ಸ : ಇಂಜಿನ್ ಸಿಂಪಸನ್ಸ ಎಂಡ ಕಂಪನಿ, ಮದ್ರಾಸ.

ಮೆಡೋಸ್ : ಇಂಜಿನ್ ಅಟೋಮೋಬಾ-ಯಿಲ್ಸ ಪ್ರೊಡಕ್ಟ ಆಫ್ ಇಂಡಿಯಾ, ಮುಂಬೈ.*

ತಯಾರಕರು ಸಾಮಾನ್ಯವಾಗಿ ಜನರಲ್ಲಿ ಟ್ರಕ್ಕುಗಳಿಗೆ ಬೇಕಾಗುವ ಚಿಕ್ಕ ದೊಡ್ಡ ಬಿಡಿ ಭಾಗಗಳೆಲ್ಲವನ್ನೂ ತಮ್ಮ ಕಾರಖಾನೆಯಲ್ಲಿಯೇ ತಯಾರಿಸುತ್ತಾರೆಂಬ ಭಾವನೆಯಿರುವದು ಸಹಜ.

---

* ಅಟೋಮೋಬಾಯಿಲ್ಸ ಪ್ರಾಡಕ್ಟ್ಸ ಆಫ್ ಇಂಡಿಯಾದವರು ಇವುಗಳನ್ನು ತಯಾರಿಸುವದನ್ನು ನಿಲ್ಲಿಸಿದ್ದರಿಂದ ಮೆಡೋಸ್ ಇಂಜಿನ್‍ಗಳು ಈಗ ಪ್ರಿಮಿಯರ ಆಟೋಮೋಬಾಯಿಲ್ಸ ಲಿಮಿಟೆಡ್‍ದವರಿಂದಲೇ ತಯಾರಿಸಲ್ಪಡುತ್ತವೆ.

ಅದು ಅಮೇರಿಕೆಯಂಥ ಮುಂದುವರಿದ ದೇಶದಲ್ಲಿಯೂ ಸಾಧ್ಯವಿಲ್ಲ ! ಒಂದು ಮೋಟಾರು ವಾಹನಕ್ಕೆ ಬೇಕಾಗುವ ೫೦೦೦ (ಅಂದಾಜು) ಬಿಡಿಭಾಗಗಳಲ್ಲಿಯ ಎಷ್ಟೋ ಭಾಗಗಳನ್ನು ಬೇರೆ ಚಿಕ್ಕ ದೊಡ್ಡ ಕಾರಖಾನೆಯಲ್ಲಿ ಮಾಡಿಸಿಕೊಳ್ಳಲೇಬೇಕಾಗುತ್ತಿದೆ. ಇದರಿಂದಾಗಿ ಪ್ರತಿ ತಯಾರಕರ ಅವಾಂತರದಲ್ಲಿ ನೂರಾರು ಚಿಕ್ಕ ಕಾರಖಾನೆಗಳು ಬದುಕಿಕೊಳ್ಳುತ್ತವೆ, ಸಾವಿ-ರಾರು ಜನಕ್ಕೆ ಉದ್ಯೋಗ ದೊರೆಯುತ್ತದೆ !

ಇನ್ನೂ ಬೇರೆ ಕಾರಖಾನೆಗಳ ಅವಶ್ಯಕತೆಯೆಂದರೆ ಟಾಯರ ತಯಾರು ಮಾಡುವವರು, ಪ್ಲಾಸ್ಟಿಕಿನ ಸಾಮಾನುಗಳು ಸಿದ್ಧಪಡಿಸುವವರು, ಕಾಜಿನ ಕಾರಖಾನೆಯವರು, ಮೇಣಗಮಟ ಮಾಡುವವರು, ಇಲೆಕ್ಟ್ರಿಕ್ ವಾಯರ್, ಬಲ್ಬ, ಬಣ್ಣ ಇಂತಹ ಇನ್ನೂ ಎಷ್ಟೋ ತಯಾರಕರು, ಈ ಉದ್ಯೋಗದ ಮೇಲೆ ಬದುಕಿಕೊಳ್ಳುತ್ತಾರೆಂದರೆ ಅತಿಶಯೋಕ್ತಿಯಾಗಲಾರದು !!

ಈ ಚಿಕ್ಕ ದೊಡ್ಡ ಕಾರಖಾನೆಗಳಿಗೆ ಈ ಬಿಡಿ ಭಾಗಗಳನ್ನು ತಯಾರಿಸಲು ಯಂತ್ರೋಪಕರಣಗಳ ಅವಶ್ಯಕತೆ ಬೀಳುತ್ತದೆ. ಇದರಿಂದ ಯಂತ್ರೋಪಕರಣಗಳನ್ನು (Machine Tools) ತಯಾರಿಸುವ ಕಾರಖಾನೆಗಳಿಗೆ ಉತ್ತೇಜನ ಸಿಕ್ಕುತ್ತದೆ. ಹೀಗೆ ಈ ಮೋಟಾರು ವಾಹನ ತಯಾರಿಕೆಯ ಉದ್ಯೋಗದಿಂದ ನಾನಾ ರೀತಿಯಿಂದ ಎಷ್ಟೋ ಔದ್ಯೋಗಿಕ ಕಾರಖಾನೆಗಳಿಗೆ ನೆರವು ಸಿಗುವದು !

ಸರಕಾರವು ಆಗಾಗ್ಗೆ ಬೇರೆ ಬೇರೆ ಕಮಿಟಿ, ಕಮಿಶನ್‍ಗಳನ್ನು ನೇಮಿಸಿ, ಈ ಕಾರಖಾನೆಗಳ ಪ್ರಗತಿ, ಅವುಗಳ ಅಡಚಣಿ, ಬೇಕಾದ ಸಹಾಯ ಇವುಗಳ ಬಗ್ಗೆ ಕಾಳಜೀ ತೆಗೆದುಕೊಳ್ಳುತ್ತಲೇ ಇದೆ. ಈ ಕಮಿಟಿಗಳ ಆದೇಶದ ಮೇರೆಗೆ ಹೊಸ ಕಾರಖಾನೆಗಳನ್ನು ತೆರೆಯಲು ಪರವಾನಿಗೆ ಕೊಡಬಾರದು ಹಾಗು ಈಗಿದ್ದವುಗಳಿಗೆ, ೧೯೬೭ರ ವರೆಗೆ ಎಲ್ಲ ರೀತಿಯ ಭದ್ರತೆ (Protection) ಯನ್ನು ನೀಡಬೇಕೆಂದು" ಹೇಳಿಕೆಯಿದ್ದರೂ ಕೂಡ ಸರಕಾರವು ತನ್ನದೇ ಆದ ಕಾರಖಾನೆಯನ್ನು ಸುರು ಮಾಡಿತ್ತು. ಕೇಂದ್ರ ಸರಕಾರದ ಸಂರಕ್ಷಣ ಖಾತೆಯವರು, ೧೯೫೯ನೇ ವರ್ಷ ' ಶಕ್ತಿಮಾನ್ ' ಎಂಬ ವಾಹನವನ್ನು (ಕೇವಲ ಸೈನಿಕ ಉಪಯೋಗಕ್ಕಾಗಿ) ಜರ್ಮನಿಯ 'ಮ್ಯಾನ' (MAN) ಈ ಕಂಪನಿಯ ಸಹಕಾರದಿಂದ ಮೊದಲು ಅವುಗಳ ಜೋಡಣೆ ಹಾಗೂ ಪ್ರಗತಿಪರ ನಿರ್ಮಾಣ ಮಾಡಲು ಪ್ರಾರಂಭಿಸಿದ್ದಾರೆ. ಇದಲ್ಲದೆಯೇ ಜಪಾನದ 'ನಿಸಾನ' ಕಂಪನಿಯವರ ಸಹಕಾರದೊಂದಿಗೆ ಕ್ರೌಲರ್ಸ ಟ್ರ್ಯಾಕ್ಟರ್ಸ ಮತ್ತು 'ನಿಸಾನ' ಒಂದು ಟನ್ - ಟ್ರಕ್ಕನ್ನು ಹಾಗು 'ಜೀಪ' ತರಹದ ವಾಹನಗಳನ್ನು ಸಿದ್ಧಪಡಿಸುವದಾಗಿ ನಿರ್ಧರಿಸಿದೆ. ಈಗ ಮಾಡುತ್ತಲಿದ್ದಾರೆ !

ಈ ಉದ್ಯೋಗವು ಈ ದೇಶದಲ್ಲಿ ಪ್ರಾರಂಭವಾಗಿ ೨೦ ವರ್ಷಗಳಾಗಿವೆ ಎಂದು ಇಟ್ಟುಕೊಂಡರೂ. 'ಭಾರತೀಯ' ವಾಹನಗಳ ನಿರ್ಮಾಣ ಕಾರ್ಯದಲ್ಲಿ ಕೆಲವು ಕಾರಖಾನೆಗಳು ಅತ್ಯಂತ ಪ್ರಗತಿಯನ್ನು ಸಾಧಿಸಿವೆ ಎಂದು ಹೇಳಬಹುದು. ಉದಾಹರಣೆಗೆ ' ಫಿಯಟ್ ' ಕಾರನ್ನೇ ತೆಗೆದುಕೊಳ್ಳುವ. ನೂರಕ್ಕೆ ೯೮ರಷ್ಟು ಭಾಗ ಇಲ್ಲಿಯೇ ಸಿದ್ಧವಾಗುತ್ತವೆ. ಇನ್ನುಳಿದ ಕೇವಲ ನೂರಕ್ಕೆ ೨ರಷ್ಟು ಭಾಗ ಮಹತ್ವದ ವಸ್ತುಗಳು ಅದಕ್ಕಾಗಿ ಪರದೇಶದಿಂದ ತರಿಸಲಾಗುವುದೆಂದಲ್ಲ ಅವುಗಳ ನಿರ್ಮಾಣಕ್ಕೆ ಬೇಕಾಗುವ 'ಮೂಲವಸ್ತು' Raw Material ಇಲ್ಲಿ ಸಿಗವದಿಲ್ಲವೆಂಬ ಕಾರಣದಿಂದಲೋ ಅಥವಾ ಆದನ್ನು ತಯಾರಿಸುವ ತಯಾರಕರು ಇಲ್ಲಿ ಸಿಗುವದಿಲ್ಲವೆಂಬ ಕಾರಣದಿಂದಲೋ ಅನಿವಾ

ಮೈಸೂರು ಸ್ಟೇಟ್ ಕೋ-ಆಪರೇಟಿವ್ ಯೂನಿಯನ್, ಲಿ.,

32, 'ಶಾಂತಿ ಕುಟೀರ', ರೇಸ್ ಕೋರ್ಸ್ ರೋಡ್, ಬೆಂಗಳೂರು–1

ಧ್ಯೇಯೋದ್ದೇಶಗಳು :

೧ ಸಹಕಾರಿ ಕ್ಷೇತ್ರ ನಿರ್ಮಾಣ ಕಾರ್ಯದಲ್ಲಿ ಜನತೆಗೆ ಶಿಕ್ಷಣ, ನೆರವು ಮತ್ತು ಮಾರ್ಗದರ್ಶನ ನೀಡುವುದು.

೨ ಸಹಕಾರಿ ಅಭಿಪ್ರಾಯದ ಪ್ರತಿ-ಪಾದಕನಾಗಿ ಸೇವೆ ಸಲ್ಲಿಸುವುದು.

ಎಂ. ಶಿವಣ್ಣ
ಕಾರ್ಯದರ್ಶಿ

ಕಾರ್ಯಕ್ರಮಗಳು :

೧ ಸಹಕಾರಿ ಸದಸ್ಯ ಶಿಕ್ಷಣ ಮತ್ತು ಸಹಕಾರಿ ಸಂಘ-ಸಂಸ್ಥೆಗಳ ನೌಕರರ ತರಬೇತಿ.

೨ ಸಹಕಾರಿ ಸಮಸ್ಯೆಗಳ ಬಗೆಗೆ ಸಂಶೋಧನೆ.

೪ 'ಮೈಸೂರು ಸಹಕಾರ ಪತ್ರಿಕೆ' ಮತ್ತು ಸಹಕಾರಿ ಸಾಹಿತ್ಯದ ಪ್ರಕಟನೆ.

- ಇಂದಿನ ಪರಿಸ್ಥಿತಿಯಲ್ಲಿ ಸಹಕಾರದ ಪಾತ್ರ ಹಿರಿದು.
- ಆಹಾರ ಸಮಸ್ಯೆ ಬಿಡಿಸಲು ಮತ್ತು ಬೆಲೆಯನ್ನು ಹತೋಟಿಗೆ ತರಲು ಸಹಕಾರಿಗಳು ಮುಂದಾಗಲಿ
- ಯೂನಿಯನ್ನಿನ ಶಕ್ತಿಯೇ ಚಳವಳಿಯ ಶಕ್ತಿ. ಸಹಕಾರಿ ಶಿಕ್ಷಣ ನಿಧಿ ಸಲ್ಲಿಸಿ ಯೂನಿಯನ್ನಿನ ಶಕ್ತಿ ಬೆಳೆಸಿರಿ.

ಎ ಎಸ್. ಪಾಟೀಲ್, ಬಿ.ಎ., ಎಲ್ಎಲ್.ಬಿ.
ಅಧ್ಯಕ್ಷ

ಸ್ಟೇರಿಂಗ್ ವ್ಹೀಲ್ ಇಲ್ಲದ, ಟೆಲಿವಿಜನ್ ಇದ್ದ ಕಾರು ↑

ಟರ್‌ಬಾಯಿನ ಇಂಜಿನ್ ಕಾರು ↓

ಫ್ಯಾಕ್ಚರರ್‍ಸ ಈ ಎರಡು ಸಂಸ್ಥೆಗಳು ಸಂಯುಕ್ತ ರೀತಿಯಿಂದ ಭಾರತೀಯ ಮೋಟಾರ ಡಿಜಾಯಿನ್ ತಯಾರಿಸುವ ಶೀಘ್ರ ಪ್ರಯತ್ನದಲ್ಲಿದ್ದಾರೆ. !

ಇಂದು ಭಾರತದ ಮೋಟಾರುಗಳ ಸಂಖ್ಯೆ

೧೯೬೬ರ ಮಾರ್ಚ ೩೧ನೇ ದಿನಕ್ಕೆ ಸಿಕ್ಕುವ ವಾಹನ ಗಣನೆಯ ಲೆಕ್ಕದ ಪ್ರಕಾರ ಭಾರತದಲ್ಲಿ ೧೧, ೦೯, ೩೪೯ ವಾಹನಗಳು ಚಲಿಸುತ್ತಲಿವೆ. (ಇವುಗಳಲ್ಲಿ ಮೋಟಾರ ಸಾಯಿಕಲ್ ಅಟೋರಿಕ್ಷ ಮತ್ತು ಟೆಂಪೊಗಳು ಸೇರಿವೆ) ವಾಹನಗಳು ಮೈಸೂರ ರಾಜ್ಯದಲ್ಲೆಷ್ಟಿವೆ ಗೊತ್ತೆ? ೭೪, ೩೬೦.

ಇಂದು ವಾಹನಗಳ ತಾಂತ್ರಿಕ ಪ್ರಗತಿ ವಿಚಿತ್ರವಾಗಿದೆ. ಸ್ಟೇರಿಂಗ ವ್ಹೀಲ ಬದಲಾಗಿ ಆದಿಯಲ್ಲಿದ್ದಂತೆ ಅರವತ್ತು ವರ್ಷಗಳ ನಂತರ ಸ್ಟೇರಿಂಗ ರಾಡ ಕಾಣಿಸಿಕೊಳ್ಳುತ್ತಲಿದೆ, ಹಿಂಬದಿಯ ನೋಟ ಚಾಲಕನಿಗೆ ಚನ್ನಾಗಿ ಕಾಣಲೆಂದು

ಯರ್ವಾಗಿ ಈ ವಸ್ತುಗಳನ್ನು ಸದ್ಯ ಆಯಾತ ಮಾಡಲಾಗುತ್ತಿದೆ. ಈ ಕೊರತೆಗಳು ಸದ್ಯದಲ್ಲಿಯೇ ದೂರವಾಗುವ ಚಿನ್ಹಗಳು ಕಾಣುತ್ತಲಿವೆ. ಇದೇ ರೀತಿಯಲ್ಲಿ ಉಳಿದ ಎಲ್ಲ ನಿರ್ಮಾಪಕರೂ ಸಾಕಷ್ಟು ಮುನ್ನಡೆ ಇಡುತ್ತಲೇ ಇದ್ದಾರೆ. ಪೂರ್ಣ ಭಾರತೀಯ ವಾಹನ ಸಿದ್ಧವಾಗುವ ದಿನಗಳು ದೂರವಿಲ್ಲ !

ಇನ್ನು ಇಷ್ಟೆಲ್ಲ ಪ್ರಗತಿ ಹೊಂದಿದ್ದರೂ ಈಗಿರುವ ವಾಹನಗಳ ಹೆಸರುಗಳೆಲ್ಲ (ಹಿಂದುಸ್ಥಾನ ಕಾರನ್ನು ಬಿಟ್ಟು)ಪರದೇಶದಲ್ಲಿದ್ದ ಮೂಲ ಹೆಸರುಗಳಲ್ಲಿಯೇ ಇವೆ. ಅವುಗಳ ಆಕಾರವು (Design) ಬದಲಾಗಿಲ್ಲ ! ಈ ಕೊರತೆಯನ್ನು ನಿವಾರಿಸಿಕೊಳ್ಳುವ ಪ್ರಯತ್ನಗಳೂ ನಡೆದಿವೆ. ಕೌನ್ಸಿಲ್ ಆಪ್ ಸಾಯಿನ್ಸ ಎಂಡ ಇಂಡಸ್ಟ್ರಿಯಲ್ ರಿಸರ್ಚ' ಮತ್ತು ಅಸೋಸಿಯೇಶನ್ ಆಫ್ ಇಂಡಿಯನ್ ಅಟೋಮೋಬಾಯಿಲ್ ಮ್ಯಾನು-



'ಟೆಲಿವಿಜನ್' ಇಡಲಾಗಿದೆ. ಟರಬಾಯಿನ್ ಇಂಜಿನ ಬಂದಿದೆ. ಗಾಲಿಗಳೂ ಇಲ್ಲದ ಕಾರು ಅಸ್ತಿತ್ವದಲ್ಲಿ ಬಂದಿದೆ ಎಂದರೆ ಆಶ್ಚರ್ಯವಾಗಬಹುದಲ್ಲವೆ ! ಈ ಚಕ್ರವಿಲ್ಲದ ವಾಹನ ಎಂತಹ ರಸ್ತೆಯಿಲ್ಲದ ಹಳ್ಳಿಗೂ ಹೋಗಬಹುದು. ಇದ್ದ ಸ್ಥಳದಿಂದಲೇ ಯಾವ ದಿಕ್ಕಿಗೂ ಹೊರಳಬಹುದು. ಇದು ಭೂಮಿಯಿಂದ ೯ ಅಂಗುಲ ಅಂತರದ ಮೇಲೆ ಚಲಿಸುತ್ತದೆ. ಈ ಕಾರನ್ನು ೧೯೬೧ ರ ಔದ್ಯೋಗಿಕ ಪ್ರದರ್ಶನದಲ್ಲಿ ಹೊಸದಿಲ್ಲಿಯಲ್ಲಿ ಚಲಿಸಿ ತೋರಿಸಲಾಯಿತು. ತಾಂತ್ರಿಕ ಪ್ರಗತಿಯ ಮುಕ್ತಾಯ ಇಲ್ಲಿಗೇ ಆಗಲಿಲ್ಲ, ನಡೆದೇ ಇದೆ !

← ಗಾಲಿಗಳೇ ಇಲ್ಲದ ಕಾರು

ಮುಂಬಯಿ ಕಲಾಕೇಂದ್ರದವರು ಏರ್ಪಡಿಸಿದ
ಅಂತರ್ ಮಹಾವಿದ್ಯಾಲಯ ಏಕಾಂಕ ನಾಟ್ಯ
ಸ್ಪರ್ಧೆಯಲ್ಲಿ ಪ್ರಥಮ ಪುರಸ್ಕಾರ ಪಡೆದ
ಕನ್ನಡ ಏಕಾಂಕ ನಾಟಕ (೧೯೬೩)

ಅಳು ನುಂಗಿ ನಗು ಒಮ್ಮೆ

[ಏಕಾಂಕ ನಾಟಕ]

— ಶ್ರೀ ಪ್ರಕಾಶ ಬಿ. ಪ್ರಭು

ಪಾತ್ರಗಳು :

೧ ರಂಗನಾಥ
೨ ಚಂದಾ
೩ ರಾಧಾ
೪ ಜರೀವಾಲಾ
೫ ಶ್ರೀನಾಥ

[ಭಾರತೀಯ ಚಿತ್ರಗಾರನ ಬಡತನದ ಮನೆ. ಆತನ ತಪಸ್ಸಿನ ಪಲವನ್ನು ಸೂಚಿಸುವ ಕೆಲವು ದೇವಾನುದೇವತೆಗಳ (ಲಕ್ಷ್ಮಿ, ಸರಸ್ವತಿ, ಬುದ್ಧ ಮತ್ತು ಗಾಂಧಿಯ) ಬಣ್ಣದ ಚಿತ್ರಗಳು ಭಿತ್ತಿಯಲ್ಲಿ ಕಾಣುತ್ತಿವೆ. ಮುರಿದ ಸ್ಟ್ಯಾಂಡಿನ ಕಾಲಿಗೆ ಹಗ್ಗದ ಆಧಾರ ಕಟ್ಟಿ ನಿಲ್ಲಿಸಿ ಅದರ ಮೇಲೆ ಅರ್ಧದಲ್ಲೇ ನಿಂತ ಚಿತ್ರ ಆತನ ಜೀವನದ ನಿರಾಶೆಯನ್ನು ಸೂಚಿಸುತ್ತಿದೆ. ಬಣ್ಣ ಒಣಗಿ ಅಲ್ಲಲ್ಲಿ ಮಣ್ಣಿನ ಬಟ್ಟಲುಗಳು ಬಿದ್ದಿವೆ. ಕುಂಚಗಳಿಂದ ತುಂಬಿದ ಬಣ್ಣದ ಹಲಗೆ ಮತ್ತೊಂದು ಬದಿಯಲ್ಲಿದೆ. ಚಿತ್ರಗಾರನು ಹೊರಗಿನ ಆಕಾಶವನ್ನು ಕಿಟಕಿಯ ಮೂಲಕ ನಿರೀಕ್ಷಿಸುತ್ತಿದ್ದಾನೆ. ಗುಡುಗು ಕೇಳುತ್ತಿದೆ. (ಪರದೆ ಸರಿಯುತ್ತಿದೆ)]

ರಂಗನಾಥ : "ಓ...ವಿಶ್ವದ ಚಿತ್ರಗಾರ, ಮೋಡಗಳಲ್ಲಿ ಕೈ ಕದಡಿ ಪೊಡವಿಗಿನ್ನಾವ ಬಣ್ಣ ಕೊಡಲಿರುವೆ ? ನೋಡುತ್ತ, ಬೆಂದೊಡಲ ಹಸುರಡಗಿ ಕಂದಿಹಳು ಭೂ ಬಡವಿ, ಹನಿಯೊಂದು ಬೇಕೆಂದು ಬಾ ತಂದೇ ಸುರಿ ತಂದು, ಸುರಿ ತಂದು...ನೀ ವಿಶ್ವಬಂಧು ನಿನ್ನೊಳೀ ಪೊಡವಿ ಒಂದು ಬಿಂದು..." ವಿಶ್ವಕವಿ ರವೀಂದ್ರನಾಥ ಟಾಗೋರರು ಕೊನೆಯಲ್ಲಿ ಚಿತ್ರಕಾರರಾಗಲು ಸೃಷ್ಟಿಯ ಇಂಥ ವೈಚಿತ್ರಗಳೇ ಕಾರಣವಾಗಿರಬಹುದಲ್ಲವೇ ? ಬಾಯಾರಿದವನಿಗೆ ಬೇಕಾದ ನೀರಹನಿಗಳನ್ನು ತನ್ನಲ್ಲಿಟ್ಟುಕೊಂಡು ಬಹು ದೂರ ದರ್ಪದಿಂದ ಗುಡುಗುವ ಮೋಡಗಳು ಪೊಡವಿಯ ಸಿರಿವಂತರಂತೆ, ಗಾಳಿ ಬಂದಂತೆ ಹೊಯ್ದಾಡಿ ಬಗೆಬಗೆಯ ರೂಪ ತಾಳುವದನ್ನು ನೋಡಿಯೇ, ಟಾಗೋರರು ಗೀತಾಂಜಲಿಯಲ್ಲಿ ಈ ಹಾಡನ್ನು ಬರೆದಿರಬಹುದೇ !!

......"ಬೆಂದೊಡಲ ಹಸುರಡಗಿ ಕಂದಿಹಳು ಭೂ ಬಡವಿ
ಹನಿಯೊಂದು ಬೇಕೆಂದು ಹನಿಯೊಂದು...ಬೇಕೆಂದು..."
(ಕಣ್ಣೀರು ಒರಿಸುತ್ತ) ಹನಿ, ನಾವು ಬೇಡುವದೊಂದು ಆತನು ಕೊಡುವದಿನ್ನೊಂದು. ಜೀವ ಬೇಡುತ್ತಿದೆ. ಬಾಯಾರಿ ಬರಿ ನೀರು. ಆತ ಕೊಡುವ ಧಾರೆಯ ಕಣ್ಣೀರು......(ಒಳಗಿನಿಂದ ಕೆಮ್ಮು ಕೇಳುತ್ತದೆ.) ಶೂನ್ಯ ದೃಷ್ಟಿಯಿಂದ ಆ ಕಡೆ ನೋಡುತ್ತಾ, ಮುಖ ತಿರುಗಿಸಿ ಕಣ್ಣು ಮುಚ್ಚಿಕೊಂಡು ನಿಲ್ಲುವನು.)

ಚಂದಾ : (ಕೈಯಲ್ಲಿ ಕೆಂಪು ಚಿಕ್ಕಿಗಳು ಕಾಣುವ ಬಟ್ಟೆ ಸಹಿತ) ಅಪ್ಪಾ...ಹೊಸದೊಂದು ಚಿತ್ರಬಿಡಿಸುವ ಪ್ರೇರಣೆಗಾಗಿ ಮುಖ ಮುಚ್ಚಿಕೊಂಡಿರುವೆಯಾ ? ಮೂಕ ಚಿತ್ರಗಳಲ್ಲಿ ಮೈಮರೆತು ನೀನು ಸಹ ಮೂಕನಾಗಿರುವೆ. ನಾನೊಂದು ಚಿತ್ರ ನಿನಗೆ ತೋರಿಸಲೇ ? ನಿನ್ನ ಮರೆವಿನಿಂದಾದ ಚಿತ್ರ ನೋಡುವೆಯಾ ?

ರಂಗ : ಚಂದಾ, ಧೈರ್ಯಗೆಡದಿರು. ನನ್ನ ತಪಸ್ಸಿನ ಮೇಲೆ ನನಗೆ ವಿಶ್ವಾಸವಿದೆ.

ಚಂದಾ : ಅದರ ಫಲವನ್ನೆ ನಾನೀಗ ನಿನಗೆ ತೋರಿಸಲು ತಂದಿರುವೆ. ನನ್ನ ತಾಯಿಯ ಸ್ಥಿತಿಗಾಗಿ ನಿನಗೊಂದಿಷ್ಟಾದರೂ ಯೋಚನೆ ಇದೆಯೇ ?

ರಂಗ : (ಏನೋ ಹೇಳಲು ಕೈ ಮಾಡುವಷ್ಟರಲ್ಲಿ) ನಾನು...

ಚಂದಾ : ಔಷಧ ತಂದಿರುವಿ; ಆದರೆ ಅಪ್ಪಾ ನಾನು ಅವಳಿಗೆ ಔಷಧ ಕುಡಿಸುತ್ತಿದ್ದೆ...(ಅಳುತ್ತ) ಆಗ ಒಮ್ಮೆಲೇ...ಕೆಮ್ಮಿದಳು. ಈ ಕರ-ವಸ್ತ್ರದಿಂದ ಮುಖ ಒರೆಸುವಾಗ (ತೋರಿಸಿ) ನೋಡಪ್ಪಾ, ರಕ್ತದ ಹನಿಗಳು ಹಾರಿ ಇದರ ಮೇಲೆ ಕಲೆ ಆಯಿತು. ನೋಡು ಈ ಚಿತ್ರ ಕಲೆ. ಅವಳ ವಾತ್ಸಲ್ಯದ ಎದೆಯಿಂದ ಹೊರಚಿಮ್ಮಿದ ಈ ಕೆಂಪು ಬಣ್ಣ ನೋಡಪ್ಪಾ. ಕ್ಷಯದ ಕ್ರಿಮಿಗಳು ತಿಂದುಗುಳಿದ ನನ್ನ ತಾಯಿಯ ಎದೆ ರಕ್ತ ನೋಡಪ್ಪಾ.

ರಂಗ : (ಬಟ್ಟೆ ಎಸೆದು) ಚಂದಾ, ನೀನು ಅದನ್ನು ಮುಟ್ಟಬಾರದು.

ಚಂದಾ : ಆ ಬಟ್ಟೆ ದೂರಕ್ಕೆ ಕಿತ್ತೆಸೆದಂತೆ, ನನ್ನ ತಾಯಿಯನ್ನು ಮರಣದ ದವಡೆಗೆ ಎಸೆಯಬೇಡಪ್ಪಾ. ಅವಳನ್ನು ಬದುಕಿಸು ಬದುಕಿಸು.

ರಂಗ: ಚಂದಾ...ಏನು ಮಾಡಲಿ? ಎಲ್ಲಿಗೆ ಹೋಗಲಿ? ಸಾಲ ತಂದಾಯಿತು. ಬೇಡುವ ಸ್ಥಳಗಳೂ ಮುಗಿದವು. ಇದು ಹರಿಶ್ಚಂದ್ರನ ಕಾಲವಾಗಿದ್ದರೆ ನನ್ನನ್ನೆ ನಾನು ಮಾರಿಕೊಂಡಾದರೂ...

ಚಂದಾ : ಅಪ್ಪಾ ನನ್ನ ಮಾತು ಕೇಳು. ತಂದೆ ತಾಯಿಗಳ ಕಷ್ಟದಲ್ಲಿ ಸಹಾಯಕಳಾಗುವದು ಮಗಳಾದ ನನ್ನ ಕರ್ತವ್ಯವಲ್ಲವೇ ?

ರಂಗ : ಚಂದಾ, ಇನ್ನೊಮ್ಮೆ ನಿನ್ನ ಬಾಯಿಯಿಂದ ನಾನೀ ಶಬ್ದಗಳನ್ನು ಕೇಳಲಾರೆ. ಒಂದಿಷ್ಟು ಹಣಕ್ಕಾಗಿ, ನೀತಿಯ ಕಣ್ಣಿಲ್ಲದ ಕುರುಡು ಜನತೆಯ ಆಶೆಗೆ ನಿನ್ನನ್ನು ಬಲಿಕೊಡಲಾರೆ. ನನ್ನಲ್ಲಿ ಏನಿಲ್ಲದಿದ್ದರೂ ನೀತಿಯ ಅಪಾರ ಸಂಪತ್ತಿದೆ. ಅದರ ಮೇಲೆಯೇ ನಿಂತಿದೆ ನನ್ನ ಸಂಸಾರ. ಜೀವ ಇರಲಿ; ಸಾವು ಬರಲಿ. ಹೇಯ ಗಳಿಕೆಗೆಂದೂ ಕೈಯೊಡ್ಡಲಾರೆ; ಮೂಕ ಚಿತ್ರಗಳಲ್ಲಿ ಮಾನವನ ಪವಿತ್ರ ಭಾವನೆ ತುಂಬಲು ದುಡಿದ ಕೈಗಳಿವು ಚಂದಾ, ದೇವಿ ಸರಸ್ವತಿಗೆ ಜೋಡಿಸುವ ಕೈಗಳಿವು.

ಚಂದಾ : ನಿನಗೊಲಿದ ಸರಸ್ವತಿ, ಇದೇ— ನಾವೀಗ ಅನುಭವಿಸುವ ದಾರಿದ್ರ್ಯದ ಸ್ಥಿತಿ. ಆದರೆ ಅವಳಿಗಿಂತ ನೀನು ಕಠೋರ ಪಾಷಾಣ ಮೃತ್ಯುದೂತರ ಉಕ್ಕಿನ ಮುಳ್ಳಿಗೆಡೆಯಾಗಿ ನನ್ನ ತಾಯಿ ರಕ್ತ ಕಾರುತ್ತಿದ್ದಾಳೆ. ಅವಳನ್ನು ಬದುಕಿಸುವದು ನನ್ನ ನಿನ್ನ ಮೊದಲ ಧರ್ಮ. ಆ ಧರ್ಮಕ್ಕಾಗಿ ನಾನು ಯಾವ ತ್ಯಾಗವನ್ನೂ ಮಾಡಬಲ್ಲೆ.

ರಂಗ : ಏನು ಮಾಡಬೇಕೆಂದಿರುವೆ ?

ಚಂದಾ : ತಾಯಿಯ ಬದುಕಿಗಾಗಿ ನೀನು ಹೇಳುವ ನೀತಿಯ ತಡೆ ದಾಟಿ......

ರಂಗ : ಚಂದಾ...(ಕೈ ಮುಂದೆ ಮಾಡುವನು)...

ಚಂದಾ : ಏಕೆ ತಡೆದೆ? ಅಪ್ಪಾ ಹುಟ್ಟಿದಂದಿನಿಂದ ಇದೇ ಅಭ್ಯಾಸದಲ್ಲೇ ಬೆಳೆಸಿರುವೆ. ನನಗೆ ಸಿಕ್ಕ ಸುಖ ನಿನ್ನ ಸಿಟ್ಟು ಹೆಚ್ಚಾದರೆ ಕೈ ಬೀಸಿ ಕೊಟ್ಟ ಆಶೀರ್ವಾದಗಳು. ಬಡತನದಲ್ಲಿ ಮತಿಗೆಟ್ಟ ಮಾನವನು ಮನೆಯವರಿಗೆ ಶತ್ರುವಾಗುತ್ತಾನೆ. ತಾನೊಬ್ಬ ತಪಸ್ವಿಯೆಂಬ ಹೆಮ್ಮೆಯಿಂದ ಮಡದಿಯನ್ನು ಬಲಿಕೊಡಲು ಸಿದ್ಧನಾದ ನಿನ್ನ ಮಾತು ಮೀರಿ ಮಗಳ ಕರ್ತವ್ಯವನ್ನು ನಾನು ಮಾಡಲೇಬೇಕಾಗಿದೆ. ನಿನಗಿಂತ, ನಿನ್ನ ಭಾವನೆಗಿಂತ, ನನಗೆ ನನ್ನ ತಾಯಿಯೇ ಹೆಚ್ಚು.

ರಂಗ : ನಿನಗೂ ನಾನೀಗ ಶತ್ರುವಾಗಿ ಕಂಡೆನೆ ? ಮಗಳೇ, ಯಾವ ತಪ್ಪಿಗಾಗಿ ನನಗೆ ಅಂದಾಡುವೆ ? ಚಂದಾ, ನೀನು ಕೇವಲ ರಾಧೆಯ ಬದುಕಿಗಾಗಿ ಕಳವಳಿಸುತ್ತಿರುವೆ. ಆದರೆ ನಾನು ನಿಮ್ಮಿಬ್ಬರನ್ನೂ ಬದುಕಿಸಬೇಕೆಂದು ಬೇಯುತ್ತಿರುವೆನು. ರಾಧೆಯ ಕ್ಷಯಕ್ಕೆ ಔಷಧ ಸಿಗಬಹುದು. ನೀತಿಕ್ಷಯಕ್ಕೆ ನಿವಾರಣೆ ಇಲ್ಲ, ಮಗಳೇ, ನಿವಾರಣೆಯಿಲ್ಲ.

ಚಂದಾ : ಚಿತ್ರಗಾರನು ತನ್ನ ಮಗಳ ಚಿತ್ರಗಳನ್ನು ಮಾರಿ ಏಕೆ ಸಂಪಾದಿಸಬಾರದು? ಇದರಲ್ಲಿ ನೀತಿಯ ಹಾನಿ ಏನಿದೆ ?

ರಂಗ : ಅವರ ಬಯಕೆಯ ಚಿತ್ರಗಳು ಯಾವುದೆಂಬುದನ್ನು ಬಲ್ಲೆಯಾ ?

ಚಂದಾ : ಅಪ್ಪಾ, ಹೃದಯದ ಭಾವನೆ ಮಿಡಿಯುವ ನಿನ್ನ ಚಿತ್ರಗಳು ಮೂಲೆಗುಂಪಾಗಲು ಕಾರಣರಾದ ಜನರ ರಸಿಕತೆಯ ದೃಷ್ಟಿಗೆ ಏನು ಬೇಕೋ ಅದನ್ನು ಪೂರೈಸಬೇಕು. ಜಗದ ಜೊತೆಗೆ ಬದಲಾಗದಿದ್ದ ಕಲಾವಿದ ಅಪೂರ್ಣನಲ್ಲವೇ ?

ರಂಗ : ಜನರ ರಸಿಕತೆಯ ದೃಷ್ಟಿ! ಅವರಿಗೆ ಅರೆಬತ್ತಲೆಯಾದ ಯುವತಿಯರ ಚಿತ್ರಗಳು ಬೇಕು.

ಚಂದಾ : ನೀತಿಗೂ ವ್ಯವಹಾರಕ್ಕೂ ಅಂತರವನ್ನುಂಟುಮಾಡಿದ ಈ ಕಾಲದಲ್ಲಿ ತಮ್ಮ ಲಾಭವನ್ನೇ ನೋಡಿಕೊಳ್ಳುವ ಚಿತ್ರಗಾರರು, ಜನರನ್ನು ಅನುಸರಿಸಲೇಬೇಕು.

ರಂಗ : ಚಂದಾ, ಪಂಚಮಹಾಪತಿವ್ರತೆಯರ ಸೆರಗು ಸರಿಸಿ, ಕೇವಲ ಸೌಂದರ್ಯ ನೋಡಬಯಸುವ ಕಾಮುಕ ಕಣ್ಣುಗಳಿಗೆ ನನ್ನ ಭಾವನೆ ಮಾರಿಕೊಳ್ಳಲೇ ?

ಚಂದಾ : ಹಂದಿಗಳಿಗೆ ಹಾಲುಣಿಸುವ ಹವ್ಯಾಸ ನಿನಗೇಕೆ ?

ರಂಗ : ನನ್ನ ಮಾನವನ್ನು ನಾನು ದೇವರಿಗೆ ಅರ್ಪಿಸಿದ್ದೇನೆ. ಈ ಪಾಪಿಗಳಿಗೆ ತಲೆಬಾಗಲಾರೆ.

ಚಂದಾ : ಇನ್ನು ಈ ಹುಚ್ಚು ಮಾತಿನ ರಗಳೆಯಿಂದ ಉಪಯೋಗವಿಲ್ಲ. ನಿನ್ನ ಹಾದಿ ನಿನಗೆ; ನನ್ನ ಕರ್ತವ್ಯ ನನಗೆ.

ರಂಗ : ಇದೇ ನಿನ್ನ ನಿರ್ಧಾರವೇ ?

ಚಂದಾ : ನಿರ್ಧಾರವಲ್ಲ; ಪರಿಸ್ಥಿತಿಗೆ ಬಲಿಯಾದ ಮನಸ್ಸಿನ ಸೆಳೆತ. (ಹಿಂದಿನಿಂದ ಕೆಮ್ಮಿನ ಶಬ್ದ ಕೇಳುತ್ತದೆ.) ಅದೋ ಕೇಳು, ಹಾಸಿಗೆಗೆ ಅಂಟಬಿದ್ದು ಬಿಕ್ಕಿ ಬಿಕ್ಕಿ ಕೆಮ್ಮುವ ಆ ದೀನ ಆತ್ಮದ ಕರೆ ಕೇಳು. ಅದೇ ದೇಹದಿಂದ ಜೀವ ಪಡೆದುಬಂದ ನಾನು ಅವಳಿಗಾಗಿ ಸಾಯಬಾರದೇಕೆ ?

ರಾಧಾ : (ಕೆಮ್ಮುತ್ತಾ ಪ್ರವೇಶಿಸಿ) ಚಂದಾ...ಚಂದಾ...

(ಕೋಲನ್ನೂರಿಕೊಂಡು ಕಾಲನ್ನೆಳೆಯುತ್ತಾ ಸಾವಕಾಶವಾಗಿ ಪ್ರವೇಶಿಸುವಳು)

ಚಂದಾ : ಅಮ್ಮಾ...ಅಮ್ಮಾ...ನೀನೇಕೆ ಎದ್ದು ಬಂದೆ ?

ರಾಧಾ : ಶಕ್ತಿ ಇರುವತನಕ ಈ ಮನೆಯ ಸುಖದುಃಖಗಳ ಭಾರ ಹೊರುವ ಪ್ರತಿಜ್ಞೆ ಮಾಡಿಯೇ, ನಾನೀ ಮನೆಯ ಹೊಸ್ತಿಲ ಮೇಲಿಟ್ಟ ಅಕ್ಕಿಯ ಕಲಶವನ್ನು ತೂರಿ ಬಂದಿದ್ದೆ ಮಗಳೇ. ಬಡತನಕ್ಕೆ ನೀನು

ಹೆದರಿದೆಯಾ ? ನನ್ನ ಮಗಳು ನನ್ನ ಆಯುಷ್ಯದ ಸಹನೆಗೆ ಮೀರಿ ನಿಂತಿರುವಳೇ ? ಅಯ್ಯೋ ದೇವರೇ ! (ಕುಸಿಯುವಳು)

ರಂಗ : ರಾಧಾ...ರಾಧಾ (ಹಿಡಿಯುವನು)

ರಾಧಾ : ಬುದ್ಧಿ ಇಲ್ಲದ ಹುಡಿಗಿ...ಏನಾದರೂ ತಪ್ಪಿ ನುಡಿದಿದ್ದರೆ ಕ್ಷಮಿಸಿ. ಇದೋ ನೋಡಿ, ನಿಮ್ಮ ಸ್ವಾಭಿಮಾನದ ಕಲ್ಪನೆ ಇವಳಿಗಿಲ್ಲ.

ಚಂದಾ : ಅಮ್ಮಾ...ಅಮ್ಮಾ...ನಿನ್ನ ಮನಸ್ಸೆಷ್ಟು ವಿಶಾಲವಾದದ್ದು !! ನಿನೇ ನನ್ನ ಮಾಯೆಯ ಸಂಪತ್ತು. ನೀನು ನನಗೆ ಬೇಕು. ನಿನ್ನ ಸಹನೆ ಬೇಕು. ನಿನ್ನ ಪ್ರೀತಿ ಬೇಕು.

ರಾಧಾ : ಚಂದಾ ಮೊದಲು ನಿನ್ನ ತಂದೆಯೊಡನೆ ಕ್ಷಮೆ ಬೇಡು.

ರಂಗ : ರಾಧಾ, ಏತಕ್ಕಾಗಿ ? ಅವಳೇನೂ ತಪ್ಪು ನುಡಿದಿಲ್ಲ.

ರಾಧಾ : ನಾನೆಲ್ಲಾ ಕೇಳಿದ್ದೇನೆ ಇವಳು ನನಗಾಗಿ, ಬಿದ್ದುಹೋಗುವ ಅಸ್ಥಿಪಂಜರವನ್ನು ಸ್ವಲ್ಪ ದಿನ ಉಳಿಸುವದಕ್ಕಾಗಿ ನಿಮ್ಮ ಆದರ್ಶಕ್ಕೆ ಅವಮಾನ ಮಾಡಿದ್ದಾಳೆ. ಚಂದಾ...

ಚಂದಾ : (ತಂದೆಯ ಕಾಲಿಗೆರಗಿ) ಅಪ್ಪಾ ನನ್ನನ್ನು ಕ್ಷಮಿಸು.

ರಂಗ : ಯಾವ ಲೋಕದ ದೇವತೆ ನೀನು ರಾಧಾ ? ಇವಳು ನನ್ನ ಮಗಳಾದರೂ ಅವಳ ಮನದಲ್ಲಿರುವ ಮಮತೆ ನಿನ್ನ ಋಣಕ್ಕೆ ತಕ್ಕ ಕಾಣಿಕೆಯಾಗಿದೆ. ಚಂದಾ, ನಿನ್ನ ತಾಯಿಯನ್ನು ಒಳಗೆ ಕರೆದೊಯ್ದು ಮಲಗಿಸು. ಇಂದು ಏನೇ ಆಗಲಿ, ಎಷ್ಟೇ ಖರ್ಚಾಗಲಿ. ಅವಳನ್ನು ಸೆನಿಟೋರಿಯಮಿಗೆ ಕಳುಹಿಸುತ್ತೇನೆ.

ಚಂದಾ : (ಆನಂದದಿಂದ) ಅಪ್ಪಾ, ನಿಜವಾಗಿ...?

ರಂಗ : ನಿನ್ನಾಣೆ, ರಾಧೆಯ ಆಣೆ, ನನ್ನ ಸರಸ್ವತಿಯ ಆಣೆ. ಚಂದಾ... ಒಳಗೆ ಕರದೊಯ್ಯು.

ಚಂದಾ : ಅಮ್ಮಾ...ಬಾ...ನಿಧಾನ...ಬಾ...ಅಮ್ಮ

ರಾಧಾ : (ಹೋಗುತ್ತ) ಒಂದು ಪ್ರಾರ್ಥನೆ ಕೇಳುವಿರಾ ?

ರಂಗ : (ಕಳವಳದಿಂದ ಸಮೀಪಿಸುವನು)

ರಾಧಾ : ನನಗಾಗಿ ಹೊಸ ಸಂಕಟಗಳನ್ನು ಮೈಮೇಲೆ ಎಳೆದುಕೊಳ್ಳ ಬೇಡಿ. ಇನ್ನು ಔಷಧವೂ ಬೇಡ, ಆರೈಕೆಯೂ ಬೇಡ. ನನ್ನ ನಿರ್ಣಯ ಆಗಿಹೋಗಿದೆ. ನನ್ನ ಮೇಲಿರುವ ಮಮತೆಯನ್ನು ಈ ಮಗಳ ಮೇಲೆ ತೋರಿಸಿ. ನಾನು ಬಿಟ್ಟು ಹೋಗುವ ಮುನ್ನ ಕುಂಕುಮದ ಕರಡಿಗೆಯಿಂದ ಇವಳ ಉಡಿ ತುಂಬಿಸಿ. "ಇಹದ ಹಗಲು ಮುಗಿದಿದೆ. ಪರದ ಮುಂಬೆಳಕು ಕಾಣುತಿದೆ."

ಚಂದಾ : ಅಮ್ಮಾ ಹೀಗೇಕೆ ಮಾತಾಡುವೆ ?

ರಾಧಾ : ಸಾವಿಗೀಡಾದ ಪುಣ್ಯ ಜೀವಕ್ಕೆ, ಮೊದಲೇ ಜ್ಞಾನ ಬೆಳಗುತ್ತದೆ. ಆಶೆಗಳನ್ನೆಲ್ಲಾ ಹೇಳಿಕೊಂಡ ನಂತರ ನಾಲಿಗೆ ಬೀಳುತ್ತದೆ. ನಾನು ಮಾಡಿದ ಪತಿಸೇವೆಯ ಪುಣ್ಯ ಲಭಿಸಿರುವಾಗ, ಪಾಪಿಗಳಂತೆ ಬಾಯಿ ಮುಚ್ಚಿ ಸಾಯಲಾರೆ.

ಚಂದಾ : (ಅಳುತ್ತ) ಅಮ್ಮಾ...ಅಮ್ಮಾ...ಹೀಗೆಲ್ಲಾ ಮಾತಾಡಬೇಡ. ನನಗೆ ಅತ್ಯಂತ ಕಸಿವಿಸಿಯಾಗುವದು. ಹಿಂದೊಮ್ಮೆ ನೀನೆ ಹೇಳಿದ್ದೆ. ನನ್ನ ಚಂದಾ ಮದುಮಗಳಾಗಬೇಕು. ಕನ್ಯಾದಾನದ ನೀರಿನ ಧಾರೆಯು ನನ್ನ ಸಂಸಾರದ ತಪೋಭೂಮಿಯ ಗಂಗೆಯಾಗಬೇಕು. ಮಗಳ ಮನೆ ತುಂಬುವದನ್ನು ಕಂಡು, ಕೊನೆಗೆ ಕಾಶಿಯ ವಿಶ್ವನಾಥನ ಅಡಿಗಳಲ್ಲಿ...

ರಾಧಾ : ಚಂದಾ, ಮನುಷ್ಯನು ಮಾಡಿದ ಎಲ್ಲಾ ಆಶೆಗಳು ಪೂರ್ಣವಾಗು ವಂತಿದ್ದರೆ, ಪವಿತ್ರ ಭಾವನೆಯ ಪ್ರತಿರೂಪದಂತಿದ್ದ ಈ ದೇವತೆಗಳು ಇಂದು ಬಡತನದ ಸುಡುಗಾಡಿನಲ್ಲಿ ಬಿದ್ದಿರುತ್ತಿದ್ದವೇ ? ಇದೆಲ್ಲಾ ಚಿಂತೆ ಇನ್ನೇಕೆ ?...ಮರವೇ ಮುರಿದ ಮೇಲೆ ಚಿಗುರಿನ ಮೋಹವೇಕೆ ? ...(ಒಳಗೆ ಹೋಗುವಳು.)

ರಂಗ : (ರಾಧಾ ಹೋದೆಡೆ ನೋಡುತ್ತ) ಹೌದು, ಬದುಕುವವನಿಗೆ ಹಣ ಬೇಕು ಧನ ಬೇಕು, ಸಿರಿ ಬೇಕು...ಆದರ್ಶವನ್ನು ಸುಟ್ಟು ಹೋಳಿ ಯಾಡಿ ಸಿರಿವಂತಿಕೆಯ ಬಾಗಿಲು ಕಾಯಬೇಕು. ಆಯುಷ್ಯದ ಬಹು ಕಾಲವನ್ನು ನನ್ನನ್ನೇ ನಾನು ನಾಶಮಾಡಲಿಕ್ಕೆ ಕಳೆದೆ. ಆದರೆ ಈ ಕೊನೆಯಲ್ಲದಾರೂ ನನ್ನ ನಾಶಕ್ಕೆ ಕಾರಣವಾದ ಈ ಕಲೆಯ ಮೋಹ ಬಿಟ್ಟು ಪೇಟೆಗಿಳಿಯುತ್ತೇನೆ. ಗೋಡೆಯ ಮೇಲಿನ (ಪಟಗಳನ್ನೆಲ್ಲಾ ಕಟ್ಟಲು ಪ್ರಾರಂಭಿಸುವನು.) ನನ್ನ ಕೈಯಿಂದಲೇ ಬಣ್ಣ ಬಳಿಸಿ ಕೊಂಡು ನನ್ನ ನಾಶಕ್ಕೆ ಕಾರಣಳಾದ ಲಕ್ಷ್ಮೀ...ಲೋಕೋದ್ಧಾರದ ಸಿದ್ಧಿಗಾಗಿ ಪದ್ಮಾಸನಾರೂಢನಾದ ಬುದ್ಧ ! ಹೊಲೆಯರನ್ನು ಸಹ ಪ್ರೀತಿಸಿ ಎಂದು ಹೇಳಿ ತನ್ನ ಬಾಂಧವರಿಂದಲೇ ಮರಣ ಹೊಂದಿದ ಗಾಂಧಿ !!! ಭಾರತೀಯರ ಮನವು ನೈತಿಕ ಭಾಂಡಾರವಾಗಬೇಕು, ''ಬಡತನದ ಭಾರತ, ಅಧ್ಯಾತ್ಮದ ಭೂಮಿಯಾಗಬೇಕು'' ಎಂದು ಸಿಂಹಗರ್ಜನೆ ಮಾಡಿದ ನರೇಂದ್ರ!!! ವಿವೇಕದಿಂದ ಆನಂದ ಹೊಂದಿದ ರೂಪವಿದು. ನಿಮಗಂತೂ ಬೆಲೆಯಿಲ್ಲ. ನಿಮ್ಮನ್ನು ನಂಬಿದ ನನಗೂ ಬೆಲೆಯಿಲ್ಲ. ಯಾವುದಕ್ಕೆ ಬೆಲೆಯಿಲ್ಲವೋ ಅದೇ ಕಲೆಯೆಂದು ತಿಳಿದ ನನ್ನ ಕುರುಡು ಬುದ್ಧಿಗೆ ಈಗ ಬೆಳಕು ತೋರಿತು. ನೋಡುವಾ ! ನಾನು ಕಂಡ ಬೆಳಕಿನ ಪೇಟೆಯಲ್ಲಿ ನಿಮ್ಮ ಬೆಲೆ ಎಷ್ಟಿದೆ ನೋಡುವಾ ! (ಹಿನ್ನೆಲೆಯಿಂದ ಜರೀವಾಲನ ಕೂಗು ಕೇಳುವದು.)

ಜರೀವಾಲಾ : ಜರೀವಾಲಾ......ಪುರಾನಾ ಜರೀ......ಕಪಡಾ, ಖುರ್ಚಿ, ತಾಂಬಾ, ಪಿತ್ತಲ, ಧೋತಿ, ಖುಡ್ತಾ, ಗಾದೀ...ಕಂಬಲ...ಜರೀವಾಲಾ, ಪುರಾನಾ ಜರೀ...ರದ್ದಿ...

ರಂಗ : (ಓಡುತ್ತಾ ಹೋಗಿ) ಏ...ಜರೀವಾಲಾ...

ಜರೀ : ಆಯಾಜೀ...ಆಯಾ...

ರಂಗ : (ವಿಚಿತ್ರವಾಗಿ ನಗುತ್ತಾ) ಮುಖ ಮುಚ್ಚಿಕೊಳ್ಳಿ ಆದರ್ಶ ರೂಪ ಗಳೇ. ನನ್ನ ಸ್ಥಿತಿ ನಿಮಗೂ ಬಂತೆಂದು ಕಣ್ಣೀರು ಹಾಕಬೇಡಿ. ಮುಖದ ಬಣ್ಣ ಬರಿದಾದೀತು. ಗಲ್ಲದ ಕೆಂಪು ಕರೀದಾದೀತು.

ಜರೀ : (ಪ್ರವೇಶಿಸಿ) ಆಪ್ ಮುಸಲ್ಮಾನ ಹೈತೋ ಸಲಾಂ, ಹಿಂದೂ ಹೈತೋ ರಾಮ ರಾಮ. ಅಪ್ನೇಕೋ ಕ್ಯಾಜಿ ? ಧರಮ ಕರಮ ಸಬ್ ಗಯಾ ಬಿಂಭಿಧಿ ಫಾಟಪರ್ ಬಿಜಣೆಸ್ ತೋ ಬಿಜಣೆಸ್. ಸೈಯಾ ಭೋಲೆ ಭಯ್ಯಾ...ಸಬಸೆ ಬಡಾ ರುಪೈಯ್ಯಾ ಗುಲಾಮ ಜಾಜೀರ್ ಹೈ. ರದ್ದಿ ಲಾವ್, ಗದ್ದಿ ಲಾವ್. ಮಾಲ್ ದೇಖಾ ಮಾಮೂಲ್ ಫೇಂಕಾ...

ರಂಗ : ಇದು ರದ್ದಿಯಲ್ಲವಯ್ಯಾ. ಉತ್ತಮ ತರಗತಿಯ ಚಿತ್ರಗಳಿವು. ನಿನ್ನಿಷ್ಟವಿದ್ದರೆ ನೋಡು.

ಜರೀ : ಕ್ಯಾ......ಚಿತ್ತರ್ ಹೋ ಯಾ ತಸ್ವೀರ್. ಪಿಚ್ಚೇಕಾ ಬೇಜ್ ದೇಖನಾ ಅಪನಾ ಕಾಮ ಹೈ. (ಬಡಿದು ನೋಡಿ) ಎ...ಕ್ಯಾ ಪತ್ರಾ ತೋ ನಹಿ ?

ರಂಗ : ಕ್ಯಾನವಾಸ್...

ಜರೀ : ಕ್ಯಾಣವಾಸ್. ಇಸ್ಕಾ ಮಾರ್ಕೇಟ್ ಕಭೀ ಡುಬ್ ಗಯಾ. ಅಪನಾ ಚಾಚಾ ಬುಡಾನ್ ಸಾಬಿ ಜರೀವಾಲಾ ಇಸೀಕೆ ಸಾತ ಸಾಡೇ ಸಾತ ಬನಗಯಾ. ಔರ್ ದಿಖಾವ್. ಅಂ. ಏ ಕೌನ್ ?! ಮಿರ್ಜಾ ಪಹೇಲ್ವಾನ್. (ವಿವೇಕಾನಂದರ ಪಟ ನೋಡಿ.)

ರಂಗ : ಅಲ್ಲವಯ್ಯಾ, ದೊಡ್ಡ ಮಹಾತ್ಮಾರೊಬ್ಬರ ಪ್ರತಿರೂಪವಿದು.

ಜರೀ : ಅರೇರೆ ಬಿಚಾರಾ. ಮಹಾತ್ಮಾ ಹೈತೋ ಐಸಾ ಕೋನ್ ಜಿ? ಕುಡ್ತಾ ಪೇನ್ಕೆ ಖಡಾ ಹೈ? ದೇಖೋ ತೋ ಮುಹ ಮೀನಾಕುಮಾರಿ ಜೈಸಾ ಹೈ. ಅಗರ್...ಸಾಡೀ... ಪೆಹನಾ ಹೋತಾ ತೋ...ಅರೆರೆ... ಏ ಸಬ್ ಬಡಾ ಖುಬ್‌ಸೂರತ್ ಹೈ ಮಗರ, ಬೋಲೆ, ಏ ಸಬ್ ಲಾಟ್ ಕ್ಯಾ ದೇನಾ ?

ರಂಗ : ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟಾಗಲೇ ನಾನು ನನ್ನ ಬೆಲೆಯನ್ನು ಮರೆತಿದ್ದೇನೆ. ದೇವರಿಗೆ ಸಾಕ್ಷಿಯಾಗಿ ನೀನು ತಿಳಿದದ್ದನ್ನು ಕೊಟ್ಟುಬಿಡಪ್ಪ.

ಜರೀ : ಸಚ್ ಬೋಲೂಂ...ಇಸ್ಕಾ ಬಾಜೂ ಮೆ ಲಕಡಾ ಹೈ. ಏ ಮುಖಡಾ ಅಚ್ಛಾ ಹೈ. ಮಗರ್, ಅಂಗ ಭರ ಕಪಡಾ ಹೈ. ಏ ಕೌನ್ ಲೇಗಾ? ಆಪ್ ಐಸಾ ಕರೋ. ಅಂಗ್ ಕಾ ಕಪಡಾ ಜರಾ ಕಮ್ ಕರ್ಕೇ, ಕುಛ್ ಕರಾಮತ್ ಕರೇ ತೋ ... ಏಕೇಕ್ಕಾ ಪಾಂಚ್ ಪಾಂಚ್ ರುಪಯಾ ದೇ ಸಕತಾ ಹೂಂ...

ಹೊಸ ದೀಪಾವಳಿಯು ನಮ್ಮ ಗ್ರಾಹಕರಿಗೆಲ್ಲ
ಆಯುರಾರೋಗ್ಯ ಭಾಗ್ಯದ ಬೆಳಕನ್ನು ಪ್ರಕಾಶಿಸಲಿ !

ರೈತರಿಗೆ ಸುಸಮಯ ಶ್ರೇಷ್ಠ ಮಿಶ್ರಣ ಗೊಬ್ಬರಗಳು
ನಿಮ್ಮ ಜಮೀನುಗಳಲ್ಲಿ ಹೆಚ್ಚು ಬೆಳೆ ಬೆಳೆಯಲು
— ಮುಖ್ಯ ಸಾಧನವಾದ ನಮ್ಮ —

ಸೂರ್ಯ ಕಮಲ

N.P.K. FERTILISERS BRAND DAVANGERE SHAMANUR KALLESHAPPA

ಬ್ರ್ಯಾಂಡಿನ ಮಿಶ್ರಣ ಗೊಬ್ಬರಗಳನ್ನೇ ಉಪಯೋಗಿಸಿ
ಖಾತ್ರಿ ಮಾಡಿಕೊಳ್ಳಿರಿ !

Gram : SHAMANURCO PHONE : 42 & 130

Shamanur Kalleshappa

Manufacturers of Famous

SURYA KAMAL

Brand mixed fertilisers

Vijayalaxmi Road — DAVANGERE CITY

Partner :

SHAMANUR SANGAPPA & SONS

Sri Kalleswar Industries

ರಂಗ : ಏನು? ಏನೆಂದೆ?

ಜರೀ : ಆಜಕೀ ದುನಿಯಾ ... ಆಜಕಾ ಬಾಜಾರ್ ಹೈ. ಬಜಾರ್ ಹೀ ಬಡೆ ಲೋಗೊಂಕಾ ಪೇಟ ಹೈ. ಆದ್ಮೀಕೆ ದಿಲ್ ಕೋ ಕೀಮತ್ ನಂಹೀ ಬಡೆ ಮಿಯಾಂ...ಪೇಟಕೋ ಹೈ...ಪೇಟ್ಕೋ...

ರಂಗ : ನಾನು ನಿನ್ನಷ್ಟು ಹೊಟ್ಟೆಯ ಗುಲಾಮನಾಗಿಲ್ಲ. ದೇವತೆಗಳ ಚಿತ್ರವನ್ನು ಸೂಳೆಯರ ವ್ಯಾಪಾರದಲ್ಲಿ ಕಲ್ಪಿಸುವ ಧೈರ್ಯವೂ ನನ ಗಿಲ್ಲ....ನಿನಗೆ ತೊಂದರೆ ಕೊಟ್ಟದ್ದಕ್ಕಾಗಿ ಕ್ಷಮಿಸು. ದಯಮಾಡಿ, ಹೊಟ್ಟೆಗಾಗಿ ಪಾಪದ ಮೊಟ್ಟೆ ಹೊರುವ ನಿನ್ನ ದೇಹವನ್ನು ತೊಲಗಿಸು, ಇಲ್ಲಿಂದ ತೊಲಗಿಸು.

ಜರೀ : ಏ ಕೈಸಾ ಪಾಗಲ್ ಆದ್ಮೀ ಹೈ? ರದ್ದೀವಾಲಾಕೂ ಕ್ಯಾಂ ಫಕೀರ್ ಸಮಜ್ತಾ ಹೈ? ಭಾಯಿ ಅಪ್ನೇಕೊ ಪೇಟಹಿ ತಖ್ತ ಹೈ. ಔರ್ ಬಿಜಣೆಸ್ ಉಸ್ಕಾ ಬಾದಶಾಹ ಹೈ. (ಹೋಗುವನು.)

ರಂಗ: (ಅವನತ್ತಲೇ ನೋಡುತ್ತ) ಹೊಟ್ಟೆ ಸಿಂಹಾಸನ, ಗಳಿಕೆ ಅದರರಸು ಬುದ್ಧಿ ಇಲ್ಲದವನ ಅನುಭವದ ಮಾತಿದು. ನಿಜ! ನಿಜ! ಅವನತ್ತ ಯತ್ತ ಅಧೋಮುಖವಾಗಿ ಹರಿಯುವ ಅವಿವೇಕಿಗಳ ಪ್ರವಾಹದಲ್ಲಿ ನಾನೊಬ್ಬ ಬುಡ ಮುರಿದ ಗಿಡ. ಇದರಲ್ಲಿಯೇ ತೇಲಬೇಕು. ಇದರ ಲ್ಲಿಯೇ ಮುಳಗಬೇಕು. ಗಂಡಿನ ಆದರ್ಶ, ಹೆಣ್ಣಿನ ಶೀಲ ಇವೆಲ್ಲಾ ಕಥೆ ಕಾದಂಬರಿಗಳಲ್ಲಿ. ಜೀವನದಲ್ಲಿ ಇವುಗಳನ್ನು ಅರಗಿಸಿಕೊಳ್ಳಲು ಬಡತನದ ದರಿಯಲ್ಲಿ ಬಿದ್ದ ಕಲಾವಿದನಿಗೆ ಅಸಾಧ್ಯ. ಕಲೆಯ ಹೊಲೆ ಯಾಗದೇ ಅದಕ್ಕೆ ಬೆಲೆಯಿಲ್ಲ ! ಬೆಲೆ... ಇಲ್ಲ !!!

ಶ್ರೀನಾಥ : [ಪ್ರವೇಶಿಸಿ] ಏಕಿಲ್ಲ?! ಇದೆ. ಅಪಾರ ಬೆಲೆ ಇದೆ. ಆದರೆ ಅದು ಬದುಕಿರುವಾಗ ನಿಮಗೆ ಸಿಗಲಾರದು. ಸತ್ತ ಮೇಲೆ ಸ್ಮಾರಕ ಕಟ್ಟಿಸುವದಕ್ಕಾಗಿಯೇ ನಿಮ್ಮಂಥ ಕೆಲವು ಕಲಾಕಾರರನ್ನು ಜಗತ್ತು ಕಾದಿಟ್ಟಿದೆ.

ರಂಗ : ಶ್ರೀನಾಥ ......

ಶ್ರೀನಾಥ : ಆದರ್ಶ ಕಲಾವಿದನಿಗೆ ನನ್ನ ಬರುವಿಕೆಯಿಂದ ಆಶ್ಚರ್ಯವಾಗಿ ರಬಹುದಲ್ಲವೇ? ನಿನ್ನೆ ಕುತ್ತಿಗೆಗೆ ಕೈ ಹಾಕಿ, ಹೊರಗಟ್ಟಿದರೂ, ಮತ್ತೆ ಈ ಹೊತ್ತು ನಾಚಿಕೆಗಟ್ಟು ಬಂದನಲ್ಲಾ ಎಂದು ವಿಸ್ಮಯ್ ರಂಗು, ಆರ್ಟ್ಸ್ ಕಾಲೇಜಿನಲ್ಲಿ ಒಟ್ಟಾಗಿದ್ದ ಬಾಲ್ಯಸ್ನೇಹಿತರು ನಾವು. ಆಗಿನಿಂದಲೂ ನಿನ್ನ ಗುಣಗಳನ್ನು ನಾನು ಬಲ್ಲೆ. ಸೀನಿಯರ್ ಸ್ಕಾಲರ್ ಆಗಿ, ನೀನು ಕಲಿತಿದ್ದು ಇವೇ ದುರ್ಗುಣ. ಭಾವನೆ, ಮನಸ್ಸು, ಆದರ್ಶ, ನೀತಿ; ಮೊರಲ್ ಆ್ಯಂಡ್ ಪ್ರಿನ್ಸಿಪಲ್ಸ್.

ರಂಗ : ಕಲೆಯ ಆರಾಧಕರು ತನುಮನಗಳಿಂದ ಪರಿಶುದ್ಧರಾಗಿರಬೇಕು !

ಶ್ರೀನಾಥ : ಇರಬೇಕು. ಯಾವಾಗ ಗೊತ್ತೇ? ಧನದಿಂದ ಪರಿಪೂರ್ಣರಾದ ಮೇಲೆ. ಯೌವನದ ಹೋರಾಟ ಮುಗಿಸಿ, ಮುಪ್ಪಿನ ಮರುಳಿಗೆ, ತತ್ತ್ವಜ್ಞಾನದ ಕಿರೀಟವನ್ನಿಟ್ಟು ಕೂಡ್ರಬೇಕು. "ಸೂಳೆ ಮುಪ್ಪಾಗಿ ಜೋಗತಿಯಾದಂತೆ."

ರಂಗ : ಮನುಷ್ಯತ್ವದ ಮನಸ್ಸನ್ನೇ ಮಾರಿಕೊಂಡ ಬಾಳಿನಿಂದ ಏನು ಪುರುಷಾರ್ಥ ಸಾಧಿಸಬಹುದು !

ಶ್ರೀನಾಥ : ನಿನ್ನ ಮಾತಿಗೆ ನನ್ನ ಜೀವನವೇ ಉತ್ತರ. ಕಸಡಾ, ಪಸಡಾ ಒಂದಿಷ್ಟು ಕಮರ್ಶಿಯಲ್ ಆರ್ಟ್ಸ ಮುಗಿಯಿಸಿ ಪೇಟಿಗಿಳಿದೆ, ಲೇಬಲ್ ಡಿಝಾಯಿನರ್ ಅಂತಾ. ಈಜೀ ವರ್ಕ್ ! ಹೆಣ್ಣಿನ ಯೌವನದ ಬಗೆಬಗೆಯ ಭಂಗಿಗಳನ್ನು ಚಿತ್ರಿಸಿದರಾಯಿತು. ಐದಾರು ವರುಷಗಳೊಳಗೆ ಮನೆ ಕಟ್ಟಿಸಿದೆ. ಮೋಟಾರು ಕ್ರಯಿಸಿದೆ. ಹತ್ತಾರು ಕಂಪನಿಗಳಿಗೆ ಪ್ರಚಾರ ಕಾರ್ಯದ ಅಕ್ಷಯಪಾತ್ರೆಯಂತಾದೆ. ಹೇಗೆ ಬಲ್ಲೆಯಾ? ಸಗಣಿಗೆ ಅತ್ತರ ಹಾಕಿ ಅಗರಬತ್ತಿ ಮಾಡಿ ಮಾರುವವರಿಗೆ, ಮೋಹಕ ಹೆಣ್ಣಿನ ಕಣ್ಣುಸನ್ನೆ ಮಾಡುವ ಚಿತ್ರದ ಲೇಬಲ್ ನಾನು ಮಾಡಿಕೊಡಬೇಕು. ಹಂದಿಯ ಕೊಬ್ಬಿಗೆ ಗ್ರೀಸ್ ಬೆರಯಿಸಿ ಪರಿಮಳದ ವೆಸಲೀನು ಮಾಡಿ ಮಾರುವವರಿಗೆ ಮೈಮುರಿದು ರತಿಕೇಳಿಗೆ ಕರೆಯುವ ಹೆಣ್ಣಿನ ವಿಕಾರದ ಲೇಬಲ್ ನಾನು ಮಾಡಿಕೊಡಬೇಕು. ಕೊಳಕ ಬಟಾಟೆಗಳಲ್ಲಿ ಕಡಲೆ ಹಿಟ್ಟನ್ನು ಬೆರಯಿಸಿ, ಗಂಧದ ಎಣ್ಣೆ ಹಾಕಿ, ಗಂಧದ ಸಾಬೂನು ತಯಾರಿಸಿ ಮಾರುವವರಿಗೆ, ಮಂಗಲಸ್ನಾನ ಮುಗಿಯಿಸಿ ಮೈಬಿಟ್ಟು ನಿಂತ ಮಹಾರಾಣಿಯ ಮುದ್ರೆ ನಾನು



ಫೋರ್‌ಹಾನ್ಸ್‌ನಿಂದ ದಂತರಕ್ಷಣೆ ಮಾಡಿಕೊಳ್ಳಲು ಅವಳಿಗೆ ಕಲಿಸುವುದಕ್ಕೆ ತಕ್ಕ ಸಮಯ

ಅವಳು ದಿನೇ ದಿನೇ ಜಾಣೆಯಾಗಿ ಬೆಳೆಯುತ್ತಿದ್ದಾಳೆ. ಮುಂದಿನ ಜೀವನದಲ್ಲಿ ಬಹಳ ಮುಖ್ಯವಾದ ಅನೇಕ ವಿಷಯಗಳನ್ನು ಅವಳು ನಿಮ್ಮ ಮಾರ್ಗದರ್ಶನದಲ್ಲಿ ಕಲಿಯುವಳು. ಸರಿಯಾಗಿ ದಂತರಕ್ಷಣೆ ಮಾಡಿಕೊಳ್ಳುವುದನ್ನು ಅವಳಿಗೆ ನಿಶ್ಚಯವಾಗಿ ಕಲಿಸಿರಿ. ಫೋರ್‌ಹಾನ್ಸ್ ಹೇಗೆ ಒಸಡುಗಳ ತೊಂದರೆಗಳನ್ನೂ ದಂತಕ್ಷಯವನ್ನೂ ತಡೆಯಲು ನೆರವಾಗುವುದೆಂಬುದನ್ನು ಅವಳಿಗೆ ಹೇಳಿ ಕೊಡಿರಿ. ಅವಳಿಗೆ ಇದನ್ನೆಲ್ಲ ಕಲಿಸಿಕೊಡಲು ಇದೇ ಯೋಗ್ಯ ಸಮಯ. ಏಕೆಂದರೆ, ಅವಳ ಹಲ್ಲುಗಳು ಅವಳ ಜೀವನಪರ್ಯಂತ ಉಳಿಯಬೇಕಲ್ಲವೆ ?

ಓರ್ವ ದಂತವೈದ್ಯರಿಂದ ಸೃಷ್ಟಿಸಲ್ಪಟ್ಟ ಫೋರ್‌ಹಾನ್ಸ್ ಟೂಥ್‌ಪೇಸ್ಟ್‌ನಲ್ಲಿ ಒಸಡುಗಳಿಗಾಗಿ ವಿಶೇಷವಾದ ಸ್ತಂಭಕ ಘಟಕಗಳಿವೆ. ಅದು ನಿಮಗೆ ಒಳ್ಳೆಯದಾದ, ಅವಳಿಗೂ ಒಳ್ಳೆಯದಾದ ಟೂಥ್‌ಪೇಸ್ಟ್ ಎಂದು ನಿಮಗೆ ಗೊತ್ತಿದ್ದೆ. ಆದ್ದರಿಂದ ದಿನಾಲೂ ರಾತ್ರಿ ಮತ್ತು ಬೆಳಿಗ್ಗೆ ಫೋರ್‌ಹಾನ್ಸ್‌ನಿಂದ ಹಲ್ಲು ಉಜ್ಜಿ, ಜೀವಮಾನವಿಡೀ ದಂತರಕ್ಷಣೆ ಮಾಡಿಕೊಳ್ಳುವಂತೆ ಅವಳಿಗೆ ಕಲಿಸಿರಿ.

ಫೋರ್‌ಹಾನ್ಸ್‌ನಿಂದ ದಂತರಕ್ಷಣೆ ಮಾಡಿಕೊಳ್ಳುವ ಕುಂತು ಕಲಿಸಲು ಮಕ್ಕಳಿಗೆ ಪ್ರಾಯ ಸಣ್ಣದೆಂದಿಲ್ಲ

ಉಚಿತ : "ಹಲ್ಲು ಮತ್ತು ಒಸಡುಗಳ ರಕ್ಷಣೆ" ಎಂಬ, 10 ಭಾಷೆಗಳಲ್ಲಿ ಸಿಗುವ, ಬೋಧಪ್ರದವಾದ ಬಣ್ಣದ ಸಣ್ಣ ಪುಸ್ತಕ

ಇದನ್ನು ಪಡೆಯಲು 10 ಪೈಸೆ ಸ್ಟ್ಯಾಂಪನ್ನು (ಅಂಚೆ ಖರ್ಚಿಗಾಗಿ) ಮ್ಯಾನರ್ಸ್ ಡೆಂಟಲ್ ಅಡ್ವೈಸರಿ ಬ್ಯೂರೋ, ಪೋಸ್ಟ್ ಬ್ಯಾಗ್ ನಂ. 10031, ಬೊಂಬಾಯಿ-1. ಇವರಿಗೆ ಕಳುಹಿಸಿರಿ

ಹೆಸರು ....

ವಿಳಾಸ ....

† ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ, ಗುಜರಾತಿ, ಉರ್ದು, ಬಂಗಾಳಿ, ತಮಿಳು, ತೆಲುಗು ಅಥವಾ ಮಲಯಾಳಂ— ಇವುಗಳಲ್ಲಿ ಯಾವ ಭಾಷೆಯ ಪುಸ್ತಕವನ್ನು ಬೇಕೋ ಅದರ ಕೆಳಗೆ ಗೆರೆ ಎಳೆಯಿರಿ

* ಇದು ನಿಮ್ಮ ಹುಡುಗಿಯು ಓದುವ ಅತಿ ಮುಖ್ಯ ಪುಸ್ತಕಗಳಲ್ಲಿ ಒಂದು ಎಂದು ಹೇಳಬಹುದು.

ಓರ್ವ ದಂತವೈದ್ಯರಿಂದ ಸೃಷ್ಟಿಸಲ್ಪಟ್ಟ ಫೋರ್‌ಹಾನ್ಸ್ ಟೂಥ್‌ಪೇಸ್ಟ್

D

ಚಿತ್ರಿಸಿಕೊಡಬೇಕು. ಮೈಬಿಟ್ಟ ಹೆಣ್ಣಿನ ಲೇಬಲ್ ಹಚ್ಚಿದರೆ ಮಣ್ಣು ಸಹ ಮಾರಾಟವಾಗುತ್ತದೆ. ಮಿಸ್ಟರ್ ರಂಗಣ್ಣ, ಇಂದ್ರಿಯಗಳ ಸುಖ ಹು.ಡು.ಕು.ವ ಪೇಟೆಯೊಳಗೆ ನಿನ್ನ ಆತ್ಮದ ಕಲೆ ಯಾರಿಗೆ ಬೇಕಾಗಿದೆ!

ರಂಗ : ಚಾಂಡಾಲ...ಜನ್ಮ ನಿನ್ನದು.

ಶ್ರೀನಾಥ : ಹೇಗಾದರೂ ನಾವು ಹೆಣ್ಣು ಕುರಿಗಳನ್ನು ಕೊಯ್ಯುವವರು. ಇರಲಿ. ನಿನ್ನ ಹೆಂಡತಿ ಹೇಗಿದ್ದಾಳೆ?

ರಂಗ : ಇದ್ದಾಳೆ!

ಶ್ರೀನಾಥ : ಇನ್ನೆಷ್ಟು ದಿನ ಅವಳು ಹೀಗೆಯೇ ಹಾಸಿಗೆಯ ಮೇಲೆ ಹೊರಳಾಡುತ್ತಿರಬೇಕು?

ರಂಗ : ದೇವರಿಷ್ಟ...

ಶ್ರೀನಾಥ : ದೇವರು! ಯಾವ ದೇವರು? ನಿನ್ನ ಕಲ್ಪನೆಯಲ್ಲಿರುವ ದೇವರೋ ನನ್ನ ಕಿಸೆಯೊಳಗಿರುವ ದೇವರೋ? (ರೂಪಾಯಿಗಳ ಕಂತೆಯನ್ನು ತೋರಿಸುವನು).

ರಂಗ : ನನ್ನ ದೇವರು.

ಶ್ರೀನಾಥ : ಆ ಕಲ್ಪನೆಯೇ ನಿನ್ನ ಶತ್ರು.

ರಂಗ : ಕಲ್ಪನೆ ನನ್ನ ಶತ್ರು!?

ಶ್ರೀನಾಥ : ಅಲ್ಲವೇನು? ಆ ಕಲ್ಪನೆಯೊಳಗಿರುವದೇನಪ್ಪಾ! ಸ್ವರ್ಗ ಇಲ್ಲವೇ ನರಕ. ಅವೆರಡರ ಮಧ್ಯ ಇರುವ ಇನ್ನೊಂದು ವಸ್ತುವನ್ನು ನೀನು ಮರೆತಿರುವೆ.

ರಂಗ : ಏನದು?

ಶ್ರೀನಾಥ : ಒಂದು ಸ್ವರ್ಗದ ಸಿಟಿ ಮತ್ತೊಂದು ನರಕದ ಸಿಟಿ. ಅವನ್ನು ಬಿಟ್ಟುಬಿಡು. ಅಂದರೆ ಮಧ್ಯದಲ್ಲಿರುವ ಪಬ್ಲಿಸಿಟಿ ನಿನಗೆ ಸಿಗುತ್ತದೆ.

ರಂಗ : ಪಬ್ಲಿಸಿಟಿ!

ಶ್ರೀನಾಥ : ಪ್ರಚಾರ...ನಾನು ಹೇಳಿದಂತೆ ಕೇಳು. ಕೆಲವು ಕೆಲೆಂಡರುಗಳಿಗಾಗಿ ಚಿತ್ರಗಳನ್ನು ಬಿಡಿಸಿಕೊಡು. (ತನ್ನ ಬ್ಯಾಗಿನಿಂದ ಒಂದು ಕೆಲೆಂಡರನ್ನು ತೆಗೆದು ತೋರಿಸುತ್ತಾ) ಲವ ಕುಶರ ಮಧ್ಯ ಯೋಚನಾಮಗ್ನಳಾದ ಸೀತೆ. ಪ್ರಾರ್ಥನೆಯಲ್ಲಿ ಪರವಶಳಾದ ಮೀರಾಬಾಯಿ. ಸಂನ್ಯಾಸಿಯನ್ನು ಮೋಹಿಸಿದ ಸುಭದ್ರೆ. ಖಡ್ಗ ಹಿಡಿದು ಕುದುರೆ ಏರಿದ ಲಕ್ಷ್ಮೀಬಾಯಿ... ಇತ್ಯಾದಿ. ಇತ್ಯಾದಿ. ಥೀಮ್ ಏನೇ ಇರಲಿ, ಅದರಲ್ಲಿರುವ ಹೆಣ್ಣಿನ ರೂಪ ಮಾತ್ರ ಕಣ್ಣಿನಲ್ಲಿ ಮೂಡುವಂತೆ ಇರಬೇಕು. ನೀನು ಕಲ್ಪಿಸುವ ಕಾಮರತಿಯರ ಸೌಂದರ್ಯ ಯಾವ ಬಟ್ಟೆಯಲ್ಲಿಯೂ ಮುಚ್ಚಿಹೋಗದಂತೆ ಆರ್ಟಿಸ್ಟಿಕ್ ಆಗಿ, ಬ್ರಶ್ ಫಿನಿಶಿಂಗ್ ಮಾಡಿಬಿಡು. ಆಮೇಲೆ ನೋಡು, ಹಣದ ಹಾಸಿಗೆಯ ಮೇಲೆ ಉರುಳಾಡುವಿ.

ರಂಗ : ಹೋಗು, ಹೋಗು. ಶ್ರೀನಾಥ ದಯಮಾಡಿ ನನ್ನನ್ನು ಈ ಪಾಪಕ್ಕೆ ಎಳೆಯಬೇಡ. ಪವಿತ್ರ ಗಂಗೆಯಲ್ಲಿ ಗೋಮಾಂಸ ತೊಳೆಯುವ ಉಪದೇಶ ನನಗೆ ಮಾಡಬೇಡ.

ಶ್ರೀನಾಥ : ಗಂಗೆ ಪವಿತ್ರಳೆಂದು ಅವಳ ಗರ್ಭದಲ್ಲಿರುವ ಮೀನು ಮೊಸಳೆಗಳೆಲ್ಲಾ ಪವಿತ್ರವಾದವುಗಳಲ್ಲ.

ರಂಗ : ನಿನಗೆ ನಾಚಿಕೆಯಿಲ್ಲ.

ಶ್ರೀನಾಥ : ನಾಚಿಕೆ... ಡ್ಯಾಮ್ ದ್ಯಾಟ್ ಸೆಂಟಿಮೆಂಟಲ್ ಫೀಲಿಂಗ್.

ರಂಗ : ಆಯ್ ಸೇ ಗೆಟ್ ಆವುಟ್.

ಶ್ರೀನಾಥ : ಸಾರಿ. ಬಂದ ಕೆಲಸವಾಗದೆ ನಾನಿಲ್ಲಿಂದ ಹೋಗಲಾರೆ.

ರಂಗ : ನಿನಗೇನು ಬೇಕು?

ಶ್ರೀನಾಥ : ನೀನು ಮನುಷ್ಯನಾಗಬೇಕು.

ರಂಗ : ನಿನ್ನ ಹಾಗೆ!?

ಶ್ರೀನಾಥ : ಅದಕ್ಕೆ ಬೇರೊಂದು ಯೋಗ್ಯತೆ ಬೇಕು. ಸದ್ಯ ನೀನು ನಿನ್ನ ಮನೆಗಾಗಿ ಮನುಷ್ಯನಾದರೆ ಸಾಕು. ಸಾವಿಗೀಡಾದ ಹೆಂಡತಿಯ ಪ್ರಾಣ ಉಳಿಸುವಷ್ಟು ಮನುಷ್ಯತ್ವ ನಿನ್ನಲ್ಲಿ ಬಂದರೆ ಸಾಕು. ಹೇಳು, ಅವಳು ಬದುಕಬೇಕೋ...ಸಾಯಬೇಕೋ?

ರಂಗ : ದೇವಾ...ದೇವಾ.

ಶ್ರೀನಾಥ : ನಿನ್ನ ದೇವರು ಬಹುದೂರವಿದ್ದಾನೆ; ಮೊದಲು ನನ್ನ ದೇವರನ್ನು ತೆಗೆದುಕೊ (ರೂಪಾಯಿಯ ಕಂತೆ ಕೈಯಲ್ಲಿ ಹಿಡಿದು) ಈತನೇ ಈಗ ರಾಧೆಯ ಪ್ರಾಣ ಉಳಿಸಬಲ್ಲ. ತೆಗೆದುಕೊ. ತೆಗೆದುಕೊ... ಹಣ! ನಿನ್ನಲ್ಲಿ ಮನುಷ್ಯತ್ವ ತುಂಬುವ ಮೂಲಶಕ್ತಿ ಇದು. ತೆಗೆದುಕೋ ತೆಗೆದುಕೊ!

ರಂಗ : ಇದಕ್ಕೆ ಪ್ರತಿಫಲವಾಗಿ ನಿನಗೇನು ಬೇಕು?

ಶ್ರೀನಾಥ : ನಿನ್ನ ಮಗಳನ್ನು ಕರೆ. [ರಂಗನಾಥನು ಶ್ರೀನಾಥನ ಕುತ್ತಿಗೆಗೆ ಕೈ ಹಾಕುವನು.] ಕಾಡು ಮನುಷ್ಯ ಸ್ವಲ್ಪ ಸೋಸಿಯಲ್ಲಾಗಿರಬೇಕು. [ಅವನ ಕೈಯನ್ನು ಝಾಡಿಸಿ ಒಗೆಯುವನು.] ನಾನು ಅವಳೊಡನೆ ಮದುವೆಯಾಗಬಯಸುವದಿಲ್ಲ. ನನಗೂ ಮಕ್ಕಳಿದ್ದಾರೆ ನಿನಗೆ ಹೇಗೋ ಹಾಗೆಯೇ ನನಗೆ ಸಹ ಅವಳು ಮಗಳೇ. ಆದರೆ ಅವಳ ಸೌಂದರ್ಯ ಮಾತ್ರ!

ರಂಗ : ಅಂಥ ಮಗಳ ಸೌಂದರ್ಯದ ಬೆಲೆಯಿಂದ ಅವಳ ತಾಯಿಯ ಪ್ರಾಣ ಉಳಿಸಬೇಕೆನ್ನುವಿಯಾ?

ಶ್ರೀನಾಥ : ಇಂದಿನ ಜಗತ್ತು ಬೆಲೆ ಕೊಡುವ ಇದೊಂದೆ ವಸ್ತು ನಿನ್ನ ಮನೆಯಲ್ಲಿದೆ.

ರಂಗ : ಅವಳ ಸೌಂದರ್ಯಕ್ಕೆ ಎಷ್ಟು ಬೆಲೆ ಕಟ್ಟಿರುವೆ?

ಶ್ರೀನಾಥ : ಪಬ್ಲಿಸಿಟಿ ಶಾಸ್ತ್ರದಲ್ಲಿ ಎ. ಬಿ. ಸಿ. ಹೀಗೆ ಮೂರು ವರ್ಗಗಳಿವೆ. ಅದರಲ್ಲಿ ನಿನ್ನ ಮಗಳು ಎ ಕ್ಲಾಸ್. ಒಂದೊಂದು ಪೋಜಿಗೆ ನೂರು ರೂಪಾಯಿಗಳ ಪ್ರಕಾರ ಕೇವಲ ಆರು ಪೋಜುಗಳು ಸಿಕ್ಕರೆ ಸಾಕು. ನೋ ಎಕ್ಸ್ಟ್ರಾ ರಾಯಲ್ಟಿ... ಕಾಪಿ—ರಾಯಿಟ್ ನನ್ನದು. ಪೋಜುಗಳು ನಾನು ಹೇಳಿದಂತೆ ಇರಬೇಕು. ಯಾವ ಕಾರಣದಿಂದಲೂ ಯಾರೂ ಅವಳ ಮೈ ಮುಟ್ಟುವದಿಲ್ಲ. ಅವಳ ವಿನಯಭಂಗವಾಗುವದಿಲ್ಲ ಒಪ್ಪುವಿಯಾ?

ರಂಗ : ನನ್ನ ಕೈಯಿಂದ ನನ್ನ ಮಗಳ ಯೌವನದ ಚಿತ್ರ! ಶಿವ ಶಿವ...

ಶ್ರೀನಾಥ : ಅದು ನಿನ್ನಂಥಾ ಅಳುಬುರಕನಿಂದ ಸಾಧ್ಯವಿಲ್ಲ. ಬಿಟ್ಟುಬಿಡು. ಜೊತೆಗೆ ಫೋಟೋಗ್ರಾಫರನ್ನು ತಂದಿದ್ದೇನೆ. ಕಲರ್ ಎಕ್ಸಪೋಜ್ ಮಾಡಬಿಟ್ಟರಾಯಿತು. ಇನ್ನಾದರೂ ಒಪ್ಪುವೆಯಾ ನೀನಿಲ್ಲೇ ಇರು. ನಾನೇನೂ ಅವಳನ್ನು ನುಂಗುವದಿಲ್ಲ.

ರಂಗ : ಯೌವನದ ದುರುಪಯೋಗ?! ಸೌಂದರ್ಯದ ಅವಮಾನ!! ದೃಷ್ಟಿ ವ್ಯಭಿಚಾರದ ಸವಿ ಹತ್ತಿದ ಜಗತ್ತಿಗೆ ನನ್ನ ಮಗಳ ಬಲಿ ಕೊಡಿಸುವೆ (ಕರೆಯುವ ಧ್ವನಿಯಲ್ಲಿ) ಚಂದಾ...ಚಂದಾ...

ಚಂದಾ : (ಧಾವಿಸಿ ಬಂದು) ಅಪ್ಪಾ ಅಪ್ಪಾ ಅಮ್ಮ ಹ್ಯಾಗ್ಯಾಗ್ಯೋ ಮಾಡುತ್ತಿದ್ದಾಳೆ. ಬೇಗ ಹೋಗು ಬೇಗ...ನೀವು! (ಕೆಳಗೆ ಬಿದ್ದ ನೋಟಿನ ಕಂತೆಯನ್ನು ಕೈಯಲ್ಲಿ ಹಿಡಿದುಕೊಂಡು ಮೆಲ್ಲನೆ ಎದ್ದು ನಿಲ್ಲುವಾಗ ಶ್ರೀನಾಥನನ್ನು ಕಂಡು) ಈ ಹಣ ನನಗೆ ಕೊಡುವಿರಾ?

ನನ್ನ ತಾಯಿಯನ್ನು ಬದುಕಿಸಲು ಸಹಾಯ ಮಾಡುವಿರಾ? ನೀವು ಹೇಳಿದಂತೆ ಕೇಳುತ್ತೇನೆ. ಬೇಕಾದರೆ ನನ್ನ ಮೈ ಮಾಂಸ ಕಿತ್ತು ತಿನ್ನಿ. ಆದರೆ ನನ್ನ ತಾಯಿಯನ್ನು ಉಳಿಸಿ.

ಶ್ರೀನಾಥ : ಗಾಬರಿಯಾಗಬೇಡ, ನಾನೀಗಲೇ ಡ್ರಾಯ್ವ್ಹರನಿಗೆ ಹೇಳಿ ಎಂಬ್ಯುಲೆನ್ಸ್ ತರಿಸುತ್ತೇನೆ. ಅವಳನ್ನು ಸೆನಿಟೋರಿಯಂವರೆಗೆ ಕಳುಹಿಸಿ ಬಿಡೋಣ. (ಹೊರಬಾಗಿಲಿನ ಬಳಿ ಸಾಗಿ) ಡ್ರಾಯ್-ವ್ಹರ್... ಎಂಬುಲೆನ್ಸ್... ಎಂಬುಲೆನ್ಸಿಗೆ ಫೋನ್ ಮಾಡೋ... ಹೌದೌದು...ನನಗಲ್ಲ ಬೇಗ ಹೋಗೋ...

(ರಂಗನಾಥನ ಪ್ರವೇಶ)

ಚಂದಾ : ಅಮ್ಮ ಹೇಗಿದ್ದಾಳೆ.. ?!

ರಂಗ : ಇದ್ದಾಳೆ...ಇದ್ದಾಳೆ...

ಚಂದಾ : ಇವರು ಎಂಬುಲೆನ್ಸಿಗೆ ಫೋನ್ ಮಾಡಿಸಿದ್ದಾರೆ. ಈ ಹಣ ಹಣ ಕೊಡುತ್ತಾರಂತೆ. ಈ ಹಣ ನನಗೆ ಕೊಡ್ತಾರಂತೆ. ಅಪ್ಪಾ ಇವರ ಋಣವನ್ನು ನಾವು ಇಟ್ಟುಕೊಳ್ಳಬಾರದಲ್ಲವೆ?

ರಂಗ : ಅಹುದು ಮಗಳೇ ಅಹುದು.

ಚಂದಾ : ಅವರಿಗೇನು ಬೇಕಂತೆ ?

ರಂಗ : ಚಂದಾ ನಿನ್ನ ಸೌಂದರ್ಯದ ಬೆಲೆಯಿದು.

ಚಂದಾ : ಸೌಂದರ್ಯ? ನಿಜವಾಗಿಯೂ ಇದಕ್ಕೆ ಇಷ್ಟು ಬೆಲೆ ಇದೆಯೇ ? ತಂದೆಯ ಪವಿತ್ರ ಭಾವನೆಯ ಮನಸ್ಸಿನ ಸೌಂದರ್ಯ ತಿಳಿಯದ ಕುರುಡನಿಗೆ, ನನ್ನ ಮುಖದ ಮೇಲಿನ ಚರ್ಮಸೌಂದರ್ಯ ಕಂಡೀತೆ ?...ಆಗಲಿ ನಿಮ್ಮಿಷ್ಟ

ರಂಗ : ಮಗಳೇ...ಮಗಳೇ ನನ್ನ ಅಪರಾಧ ಕ್ಷಮಿಸು.

ಚಂದಾ ; ಅಳಬೇಡ ಅಪ್ಪಾ, ಅಳಬೇಡ. ಮುಳುವಾಯ್ತು ಬರಿ ಹೆಮ್ಮೆ ! (ರಂಗನಾಥ ಒಳಗೆ ಹೋಗುವನು.) ಅಳು ನುಂಗಿ ನಗು ಒಮ್ಮೆ !! (ಶ್ರೀನಾಥನನ್ನು ಉದ್ದೇಶಿಸಿ) ಹೇಳಿ ನಿಮ್ಮ ಪೇಟಿ ನನ್ನ ಸೌಂದರ್ಯದ ಯಾವ ವಿಕಾರವನ್ನು ಬೇಡುತ್ತದೆ. ಕುರುಸಭೆಯ ದ್ರೌಪದಿಯಂತಾಗಲೇ ಅಥವಾ ತ್ರಿಮೂರ್ತಿಗಳಿಗೆ ಉಣ ಬಡಿಸಲು ಬಂದ ಅತ್ರಿಪತ್ನಿ ಅನುಸೂಯೆಯಾಗಲೇ ?

ಶ್ರೀನಾಥ : ಮಗಳೇ...ಮಗಳೇ

ಚಂದಾ : ಮೈ ಮುಟ್ಟುವದಕ್ಕಷ್ಟೆ ಮಗಳೇ ಎಂದು ಕರೆಯಬೇಡಿ ನಾನೀಗ ಕ್ಷಣಕಾಲ ನಿಮ್ಮ ಮುಂದಿಟ್ಟ ಪೇಟಿಯ ವಿತಾಯಿ. ನೀವು ನೊಣಗಳು. ನೀತಿಯ ನೆರಳಿನಲ್ಲಿ ಅರಳಿದ ನನ್ನ ಸೌಂದರ್ಯವನ್ನು, ತಾಯಿಯ ಬದುಕಿಗಾಗಿ ಮಾರುವೆ. ಇದನ್ನೊಯ್ದು ಪೇಟಿಯಲ್ಲಿ ತೂಗಹಾಕಿ... ಎಲ್ಲರೂ ನೋಡಲಿ. ಚರ್ಮ ಸೌಂದರ್ಯ ! ನನ್ನಂತಹ ತಂಗಿಯಂದಿರುವ ಅಣ್ಣಂದಿರು ನೋಡಲಿ. ಮಕ್ಕಳಿರುವ ತಂದೆಯರು ನೋಡಲಿ. ಎಲ್ಲರಲ್ಲೂ ಒಂದೇ ಭಾವನೆ ಮೂಡಲಿ. ಪೇಟಿಯ ಭಾವನೆ ವಿಕ್ರಯಿಸುವ ಭಾವನೆ, ಅನುಭವಿಸುವ ಭಾವನೆ. ತಡವೇಕೆ ? ಆ ಪೇಟಿಯ ಬಟ್ಟಲಲ್ಲಿ...ಹೀರಿ ಮೂಡಿಸಿಕೊಳ್ಳಿ. ನನ್ನದೆ ನೆತ್ತರ ಚಿತ್ರ ಓ... ಅಹುದು ನಾನೀಗ ಅಳಬಾರದಲ್ಲವೆ ?... ನಗಬೇಕು. ಹ್ಹ ಹ್ಹ ಹ್ಹಾ... ನಗಬೇಕು. ಅಳು ನುಂಗಿ ನಗಬೇಕು. ಸೆರಗು ತೂರಿ ನಗಬೇಕು.

ರಂಗ : (ಒಳಗಿನಿಂದ) ರಾಧಾ...ರಾಧಾ...ರಾಧಾ...ನನ್ನನ್ನು ಬಿಟ್ಟು ಹೋದೆಯಾ ? ರಾಧಾ...ಮಾತಾಡು ಮಾತಾಡು

ಚಂದಾ : ಅಮ್ಮಾ ಅಮ್ಮಾ .ಅಮ್ಮಾ .(ಚೀರಿದಳು)

(ರಂಗದ ಮೇಲೆ ಕತ್ತಲೆ ಆವರಿಸುವದು. ಮಂದಪ್ರಕಾಶದಲ್ಲಿ ರಾಧೆಯ ಆತ್ಮ ಹೊಯ್ದಾಡುತ್ತಾ ರಂಗ ಪ್ರವೇಶಿಸುವದು ಒಳಗಿನಿಂದ ತಂದೆ, ಮಗಳು ಅಳುತ್ತಿರುವ ಧ್ವನಿ ಕೇಳುತ್ತಿರುವದು.)

ಆತ್ಮ : ಸೆರಗು ಸರಿಸದಿರು ಮಗಳೇ, ಸೆರಗು ಸರಿಸದಿರು. ಸೆರಗು ಮರೆಯಲ್ಲಿಯೇ ಮಲಗಿರುವ ಮಾನವತೆಯನ್ನು ಹೊರತಳ್ಳದಿರು ಮಗಳೇ ..ಸೆರಗು ಸರಿಸದಿರು. ನನಗಾಗಿ ನಿನಗೀಗತಿ ಬಂದುದು ತಿಳಿದೇ ನಾನೇ ನನ್ನ ದೇಹದಿಂದ ಹೊರಬಿದ್ದೆ ಮಗಳೇ. ಮಗಳ ಯೌವನದಬೆಲೆ ಹೊಂದುವ ದೇಹ ಬೇಡೆಂದು ಬಿಟ್ಟದ್ದೆ ಗುಣವಾಯ್ತು. ಬರಿ ದೇಹ ಮಾತ್ರ ಹೆಣವಾಯ್ತು ಅದಕ್ಕಾಗಿ ಅಳಬೇಡ. .ಅಳಬೇಡಾ ದೇಹ ಬಿಟ್ಟರೂ ನಾ ನಿನ್ನ ಬಿಟ್ಟಿರಲಾರೆ. ನಿನ್ನೊಡಲ ಮಗಳಾಗಿ ಮರುಜನ್ಮ ಪಡೆವ ತನಕ ನಾನಿಲ್ಲಿ ಉಳಿಯುವೆ ಈ ಕಲೆಯ ಗುಡಿಯಲ್ಲಿ, ಸರಸ್ವತಿಯ ಉಡಿಯಲ್ಲಿ ಉಳಿಯುವೆ . ಸರಸ್ವತಿಯ ಉಡಿಯಲ್ಲಿ.

(ಪರದೆ ಮೆಲ್ಲನೇ ಸರಿಯುವದು)

ಈ ನಾಟಕವನ್ನು ರಂಗಭೂಮಿಯ ಮೇಲೆ ಪ್ರದರ್ಶಿಸಲಿಚ್ಛಿಸುವವರು ಲೇಖಕರ ಲಿಖಿತ ಅಪ್ಪಣೆ ಪಡೆಯುವದು ಅವಶ್ಯವಿದೆ. ಜೊತೆಗೆ ಮಾನಧನ ೨೦ ರೂಪಾಯಿ ಕೆಳಗೆ ಬರೆದ ವಿಳಾಸಕ್ಕೆ ಕಳಿಸಬೇಕು.

ವಿಳಾಸ : ಸೌ. ಇಂದುಮತಿ. ಅ. ನಾಯಿಕ C/o ಎ. ಬಿ. ನಾಯಿಕ ಅಡ್ವೋಕೇಟ್ ಹುಕ್ಕೇರಿ, ಜಿ. ಬೆಳಗಾಂವ

ಫಲಕ್ಕೆ ಪ್ರತಿಫಲ !

ಡಿಝು

ನಮ್ಮ
ಗ್ರಾಹಕರಿಗೆ



ದೀಪಾವಳಿಯ
ಹಾರ್ದಿಕ ಅಭಿನಂದನೆ!

ರೈತರ ನೆಚ್ಚಿನ ಬೀಡಿಗಳು



ಅನೇಕ ವರ್ಷಗಳ ಅನುಭವದಿಂದ ತಯಾರು ಮಾಡಲ್ಪಟ್ಟ ಉತ್ತಮ ಬೀಡಿಗಳು. ಉಬ್ಬಸ, ಕೆಮ್ಮು ರೋಗಗಳು ಬರುವುದಿಲ್ಲ. ಉತ್ಕೃಷ್ಟ ತಂಬಾಕು ಮತ್ತು ಎಲೆಗಳಿಂದ ಪ್ರತ್ಯೇಕವಾಗಿ ರೈತ ಬಂಧುಗಳಿಗಾಗಿ ತಯಾರಿಸಲ್ಪಡುತ್ತವೆ.

ಅಧಿಕ ಉತ್ಸಾಹಕ್ಕೆ ಮತ್ತು ಇಮ್ಮಡಿ ದುಡಿಮೆಗೆ ಈ ಬೀಡಿಗಳನ್ನು ಸೇದಲೇಬೇಕು.

ಈ ದಿನವೇ ಪರೀಕ್ಷಿಸಿರಿ.

ಅಸಲಿ ಡಬಲ್ ಸವರನ್

ಅಸಲಿ ಡಬಲ್ ಸವರನ್

ಸವರನ್ ಬೀಡಿ ಫ್ಯಾಕ್ಟರಿ,
ಸಿ.ಬಿ., ಬಳ್ಳಾರಿ-೧.

DESAI-S. B. 6

ಕೈಗಡ

— ಕೃಷ್ಣಮೂರ್ತಿ ಕಿತ್ತೂರ

ಶ್ರೀ ಬೇಂದ್ರೆಯವರು ನಿಜವಾಗಿಯೂ ಸುದೈವಿಗಳು. ಯಾಕೆಂದರೆ ಅವರಿಗೆ ತಿರುಕರ ಪಿಡುಗು ಮಾತ್ರ ಅನುಭವಕ್ಕೆ ಬಂದಿದೆ. ಕೈಗಡದ ಪಿಡುಗಿನ ಬಾಧೆ ಅವರಿಗೆ ಬಹುಶಃ ತಟ್ಟಿದಂತೆ ಕಾಣುವುದಿಲ್ಲ. ಹಾಗಾಗಿದ್ದರೆ ಅವರು ಕೈಗಡದ ಮೇಲೆ ಮೂರಂಕಿನ ಒಂದು ನಾಟಕವನ್ನೇ ಬರೆಯಬಹುದಿತ್ತು ಅಥವಾ ಅದನ್ನು ಕುರಿತು ಬರೆಯಲು ಇನ್ನೊಬ್ಬರಿಗೆ ಚಾನ್ಸ ಕೊಡೋಣ ಎಂಬ ಉದಾರ ಬುದ್ಧಿಯಿಂದ ಬರೆಯದೆ ಬಿಟ್ಟಿರಲೂಬಹುದು.

"Neither a lender nor a borrower be" ಎಂದು ಶೇಕ್ಸಪಿಯರ್‌ನು ಎಂದೋ ಎಚ್ಚರಿಕೆ ಕೊಟ್ಟಿದ್ದಾನೆ. ಸಾಲವನ್ನು ಕೊಡಲೂ ಬೇಡ, ತರಲೂ ಬೇಡ; ಅದರಿಂದ ಸಾಲವೂ ಹೋಗುತ್ತದೆ, ಗೆಳೆತನವೂ ನಷ್ಟವಾಗುತ್ತದೆ ಎಂದು ಆತ ಹೇಳಿರುವದು ಸರಿಯಾಗಿರಬಹುದು. ಆದರೆ ಕೈಗಡ ಕೊಡುವದನ್ನೂ ತರುವುದನ್ನೂ ಯಾರು ಬಿಟ್ಟಿದ್ದಾರೆ?

ಕೈಗಡ ನಿತ್ಯದ ಮಾತು. "ಒಂದು ವಾಟಗ ಅಕ್ಕಿ ಇದ್ದರೆ ಕೊಡರಿ 'ಇವರು' ಪ್ಯಾಟ್ಯಾಗ ಹೋಗ್ಯಾರ, ತಂದ ಕೂಡಲೆ ಕೊಡತೀನಿ" ಎನ್ನುವ ಗೃಹಿಣಿ. 'ಒಂದು ಕಪ್ಪಿನ ಚಹಾದ ಪುಡಿ'ಯನ್ನು ಕೇಳುವ ನೆರೆಮನೆಯವಳು. "ಒಂದು ನಾಕಾಳು ಸಾಸವಿ ಲಗೂನ ಕೊಡ್ರಿ ಒಗ್ಗರಣಿ ಕಾಯಲಿಕ್ಕೆ ಒಲಿ ಮ್ಯಾಲ ಇಟ್ಟು ಬಂದೀನಿ" ಎಂದು ತ್ವರೆ ಮಾಡಿ ನಮ್ಮ ಮೇಲೆಯೇ ಅಧಿಕಾರ ಚಲಾಯಿಸುವ ಅಧಿಕಾರಸ್ಥನ ಹೆಂಡತಿ, ಒಂದನೆಯ ತಾರೀಖಿನ ವರೆಗ ಐದು ರೂಪಾಯಿ ಕಡ ಬೇಡುವ ಮಿತ್ರ-ಇವರೆಲ್ಲ ನಮಗೆ ದಿನಾಲೂ ಕಾಣ ದೊರೆಯುತ್ತಾರೆ.

ಹಾಗೆ ಕೈಗಡ ಕೇಳಬಾರದು ಎಂದಲ್ಲ. ಕೇಳದಿದ್ದರೆ ವ್ಯವಹಾರವೇ ನಡೆಯದು. ಒಗ್ಗರಣಿ ಕಾಯಲಿಕ್ಕೆ ಇಟ್ಟವಳು ಸಾಸುವೆ ಕಡ ಕೇಳದಿದ್ದರೆ ಅವಳ ಅಡಿಗೆಯ ಗತಿಯೇನು? ನಮ್ಮ ಮನೆಯ ಒಗ್ಗರಣೆ ಹಾಕಿದ ಸಾರನ್ನೇ ನೆರೆಮನೆಗೆ ಸಾಗಿಸಬೇಕಾದೀತು. ಇಂಥ ಪ್ರಸಂಗಗಳಲ್ಲಿ ಕೈಗಡ ಬೇಡುವುದು ವಿಹಿತ. ಕೊಡುವುದು ಇನ್ನೂ ಹೆಚ್ಚು ವಿಹಿತ.

ಆದರೆ ಕೆಲವರು ಕೈಗಡ ಕೇಳುವ ರೀತಿ ನಿಮ್ಮನ್ನು ರೊಚ್ಚಿಗೆಬ್ಬಿಸುತ್ತದೆ. ಮುನ್ನೂರು ರೂಪಾಯಿ ಕೊಟ್ಟು ಕೊಳ್ಳುವ ಯಂತ್ರ ಕೊಂಡ ಗೃಹಿಣಿ ಕ[illegible]ಗಿ ದಿನಾಲೂ ಬಂದು ನಿಮ್ಮನ್ನು ಕೇಳುತ್ತಾಳೆ. ಐನೂರು ರೂಪಾಯಿ ಸಂಬಳದ ಸಾಹೇಬರ ಆಳು ದಿನಾಲು ಬಂದು ನೀವು ದುಡ್ಡು ಕೊಟ್ಟು ಕೊಂಡ ದಿನಪತ್ರಿಕೆಯನ್ನು, ನೀವು ಓದುವ ಮೊದಲೇ ತನ್ನ ಸಾಹೇಬರಿಗೆ ಒಯ್ಯುತ್ತಾನೆ! ಹಾಗೆ ಪೇಪರು ಪುಕ್ಕಟೆ ಓದುವವರ ಸಂಖ್ಯೆ ನಮ್ಮ ನಾಡಿನಲ್ಲಂತೂ ವಿಪರೀತ ಬೆಳೆದುಬಿಟ್ಟಿದೆ. ಟಿಳಕರ ಬಗ್ಗೆ ಒಂದು ಕಥೆಯನ್ನು ಹೇಳುತ್ತಾರೆ. ಒಮ್ಮೆ ಅವರು ರೈಲಿನಲ್ಲಿ ಪೇಪರು ಓದುತ್ತ ಕುಳಿತಾಗ ಬದಿಗೆ ಕುಳಿತ ಪ್ರವಾಸಿಯು ಪೇಪರಿಗೆ ಕೈಚಾಚಿದ. ಟಿಳಕರು ಆ ಚಾಚಿದ ಕೈಯಲ್ಲಿ ಒಂದಾಣೆಯನ್ನಿಟ್ಟು "ಬೇರೆ ಪೇಪರು ಕೊಂಡು ಓದಿರಿ" ಎಂದರಂತೆ! ಧನ್ಯ ಟಿಳಕರೆ ಧನ್ಯ! ಆದರೆ ನಿಮ್ಮ ಧೈರ್ಯ ಪ್ರಾಮಾಣಿಕತೆಗಳು ಎಷ್ಟು ಜನರಿಗೆ ಬಂದಾವು?

ಟಿಳಕರ ನೀತಿಯನ್ನು ಕೆಲವರು ಮೆಚ್ಚದೆಯೂ ಇರಬಹುದು; ಒಂದಿಷ್ಟು ಪೇಪರು ಓದಲು ಕೊಟ್ಟರೆ ಅದೇನು ಸವೆದು ಹೋಗುತ್ತಿತ್ತೇ?-ಎಂದೂ ಕೇಳಬಹುದು. ಆದರೆ ಇಲ್ಲಿ ಪೇಪರು ಸವೆಯುವ ಪ್ರಶ್ನೆಯೊಂದೇ ಇಲ್ಲ. ಕೈಗಡ ಕೇಳುವವರ ಮತ್ತು ಕೈಗಡ ಕೊಟ್ಟು ಕೊಟ್ಟು ಬೇಸತ್ತವರ ಸೈಕೋಲಜಿ (Psychology) ಯೂ ಅಡಕವಾಗಿದೆ. ಕೈಗಡ ಕೇಳುವವರು ಅದೆಷ್ಟು ಸಹಜವೆಂಬಂತೆ ಮತ್ತು ಕೈಗಡ ಕೇಳುವವರದೇ ಜನ್ಮಸಿದ್ಧ ಹಕ್ಕೋ ಎಂಬಂತೆ ಕೇಳುತ್ತಾರಲ್ಲ-ಎಂದು ನನಗೆ ಅನೇಕ ಸಲ ಅಚ್ಚರಿ ಎನಿಸುತ್ತದೆ. ಬಹುಶಃ ಕೆಲವರಿಗೆ ಕೈಗಡವನ್ನು ಕೇಳದ ದಿವಸ ಊಟವೇ ರುಚಿಸುವುದಿಲ್ಲ ಮತ್ತು ರಾತ್ರಿ ನಿದ್ರೆಯೇ ಹತ್ತುವುದಿಲ್ಲವೇನೋ!

ನಮ್ಮ ನೆರೆಮನೆಯಲ್ಲಿ ಒಬ್ಬ ಪ್ರತಿಷ್ಠಿತ ವತನದಾರ ಜಹಾಗೀರದಾರರಿದ್ದರು. ಅವರ ಮಗಳು ಪ್ರತಿ ಶುಕ್ರವಾರ ತಪ್ಪದೆ ಬಂದು ನನ್ನ ವಳಿಂದ ಸೂಜಿ-ದಾರ ಇಸಿದುಕೊಳ್ಳುತ್ತಿದ್ದಳು, ಶನಿವಾರದ ಪರೀಕ್ಷೆಯ ಪೇಪರು ಕಟ್ಟಲಿಕ್ಕೆ ಸೂಜಿಯಂತೂ ಸವೆಯುವುದಿಲ್ಲ ; ಗೇಣು ದಾರದ ಬೆಲೆಯೇನು ? ಹೌದು. ಆದರೆ ಪ್ರತಿ ಸಲವೂ ಆ ಹುಡುಗಿ ಬಂದಾಗ ಕೈಯಲ್ಲಿಯ ಕೆಲಸ ಬಿಟ್ಟು, ಕೊಡುವುದಕ್ಕೆ ಯಾವ ಗೃಹಿಣಿ ಗೊಣಗುವುದಿಲ್ಲ? ಒಮ್ಮೆ ಅವಳು ಬಂದಾಗ ನನ್ನ ಸೌಭಾಗ್ಯವತಿಯು ಏನೋ ಹೆಣೆಯುತ್ತ ಕುಳಿತಿದ್ದಳು. ಅವಳಿಗೆ ಸೂಜಿಯನ್ನು ಕೊಟ್ಟು "ದಾರ ಖಾಲಿ ಇಲ್ಲವಾ, ಹೆಣೀಲಿಕ್ಕೆ ಹತ್ತೀನಿ" ಎಂದಳು. ಅದಕ್ಕೆ ಆ ಹುಡುಗಿ "ಸ್ವಲ್ಪ ಹರಿದು ಕೊಡ್ರಿ" ಎಂದುಬಿಟ್ಟಳು, ಸಹಜವಾಗಿ. ಇಂಥವರ ಬಗ್ಗೆ ನೀವೇನೆನ್ನುತ್ತೀರಿ? ಅವಳು ಪಡೆಯುವ ಸೂಜಿ-ದಾರ ಕೈಗಡದಲ್ಲಿ ಬರುತ್ತದೆಯೋ ಇಲ್ಲವೋ. ಅದೂ ಸಂದೇಹವೇ!

ಒಂದಿಷ್ಟು ಹಣಕಾಸು ಬದ್ಧಾಗ ಕಡವನ್ನು ಕೊಡದಿದ್ದರೆ ನೆರೆಹೊರೆಯಾದರೂ ಯಾಕಿರಬೇಕು? ನಿಜ. ಆದರೆ ನೆರೆಯವರಿಗೆ ಹೊರೆಯಾಗುವಂತೆ ಇರಬಾರದಷ್ಟೆ. ಆದರೆ ಕೊಟ್ಟ ಕಡ ಬಹಳ ಸಲ ತಿರುಗಿ ಬರುವುದೇ ಕಷ್ಟ. ಕೈಗಡವೆಂದರೆ ಅದೇನು ಸಾಲವೆ? ಸಾಲವಾದರೆ ಕೊಟ್ಟವನಂತೆ ತೆಗೆದು ಕೊಂಡವನಿಗೂ ನೆನಪಿರುತ್ತದೆ. ಅಂದರೆ ಸಾಲ ಪತ್ರ ಬರೆದು ಕೊಟ್ಟಿರುವುದರಿಂದ. ಆದರೆ ಕೈಗಡವು ಸಾಲವಲ್ಲವಲ್ಲ. ಏನೋ ಚಿಕ್ಕ ಪುಟ್ಟ ವಸ್ತುವಿನ ಅವಶ್ಯಕತೆಯುಂಟಾದಾಗ ಇಸಿದುಕೊಳ್ಳುತ್ತಾರೆ. ಅವಶ್ಯಕತೆ ಮುಗಿದ ನಂತರ ಅದು ಮರೆತು ಹೋಗುವುದೂ ಸ್ವಾಭಾವಿಕ.

ಮರೆವು ಮನುಷ್ಯನ ಹುಟ್ಟು ಗುಣ. ಕೈಗಡ ಇಸಿದುಕೊಂಡವರೂ ಮನುಷ್ಯರೇ ಅಲ್ಲವೇ? ಅಂದ ಮೇಲೆ ಅವರು ಒಯ್ದು ಕೈಗಡವನ್ನು ಮರೆತರೆ ಏನು ತಪ್ಪು? ಹಾಗೆ ಮರೆ

ಹಾಗ "ಅಂದು ಗುರುವಾರ ಜನೇವರಿ ಒಂದನೇ ತಾರೀಖು, ನಿಮ್ಮ ಮೂರನೆಯ ಮಗಳನ್ನು ಹಾಸ್ಪಿಟಲಿಗೆ ಸೇರಿಸುವಾಗ ಟ್ಯಾಕ್ಸಿಗೆಂದು ಐದು ರೂಪಾಯಿ ಇಸಿದುಕೊಂಡಿದ್ದಿರಿ...." ಎಂದೆಲ್ಲ ಅವರಿಗೆ ನೆನಪು ಹೇಳಿ ತಿರುಗಿ ಇಸಿದುಕೊಳ್ಳಲು ಸಾಧ್ಯವೇ? ಹಾಗೆ ನೆನಪು ಮಾಡಿ ಕೊಟ್ಟು ಹಣವನ್ನು ತಿರುಗಿ ಬೇಡಲು ನಿಮಗೇ ಸಂಕೋಚವೆನಿಸುವುದಿಲ್ಲವೆ? ಇಷ್ಟಾಗಿ ನಾವು ಕೊಟ್ಟ ಕೈಗಡವೆಲ್ಲ ತಿರುಗಿ ಬರಲಿ ಎಂದೇಕೆ ನಾವು ಬಯಸಬೇಕು? ಹಾಗೆ ಬಯಸಿ ಅದು ತಿರುಗಿ ಬಾರದಿದ್ದಾಗ ನಾವು ವ್ಯರ್ಥವಾಗಿ ಕೊರಗುತ್ತೇವೆ. ಹಾಗೇ ನೀವೇನಾದರೂ ಯಾರಿಗಾದರೂ ಕೈಗಡ ಕೊಟ್ಟು ಕೊರಗಿ ಸೊರಗುತ್ತಿದ್ದರೆ Leacock ಅವರು ಬರೆದ My Lost Dollar ನ್ನು ಅವಶ್ಯವಾಗಿ ಓದಿರಿ.

ಇದೇನೊ ಒಂದು ಮಾತಾಯಿತು. ಕೆಲವರು ಮರೆಯುವ ಸ್ವಭಾವದವರೇ ಇರುತ್ತಾರೆ. ಕೈಗಡ ಒಯ್ದುದ್ದನ್ನು ಮರೆಯುವಂತೆ ಅವರು [ತಪ್ಪಿ ಎಂದಾದರೂ ಕೊಟ್ಟಿದ್ದರೆ.] ಕೊಟ್ಟ ಕೈಗಡವನ್ನೂ ಮರೆಯಬಹುದು. ಆದರೆ ಕೆಲವರ ಮರೆಯುವ ಸ್ವಭಾವ ವಿಚಿತ್ರವಾಗಿರುತ್ತದೆ. ಹ್ಯಾಂಲೆಟ್ಟನ ಹುಚ್ಚಿನಲ್ಲಿಯೂ ಒಂದು ವೈಶಿಷ್ಟ್ಯವಿರಲಿಲ್ಲವೆ? ಹಾಗೆ ಅವರು ಒಯ್ದುದ್ದನ್ನಷ್ಟೇ ಮರೆಯುತ್ತಾರೆ, ಪಾಪ! ಆಗ ನಾವು ಕೇಳಿದರೆ ಸುಮ್ಮಸುಮ್ಮನೆ ನೆನಪಿದ್ದರೂ ಮರೆತಂತೆ ನಟಿಸುತ್ತಾರೆ.

ಆದರೆ ಎಲ್ಲರೂ ಮರೆಯುವುದಿಲ್ಲ, ಕೆಲವರು ನೆನಪಿನಿಂದ ನಿಮ್ಮ ವಸ್ತುವನ್ನು ಮರಳಿ ಮುಟ್ಟಿಸುತ್ತಾರೆ. ಆದರೆ ಅದು ನೀವು ಕೊಟ್ಟದ್ದೇ ಇರಬೇಕೆಂದಿಲ್ಲ, ಕೊಟ್ಟಂತೆಯೇ ಇರಬೇಕೆಂದೂ ಇಲ್ಲ. ಈಗ ನೋಡಿರಿ. ನೀವು ಕೊಟ್ಟ ಪುಸ್ತಕ ತಿರುಗಿ ಬಂದುದೇ ಪುಣ್ಯ ಎನ್ನುವಾಗ, "ಅದು ಹೊಲಸಾಗಿದೆ, ನಡುವಿನ ಪುಟಗಳು ನಾಯಿಯ ಕಿವಿಗಳಂತೆ ಮಡಚಿವೆ. ಕವ್ಹರು ಕಿತ್ತಿ ಹೋಗಿದೆ. ಮಧ್ಯೆ ಮಧ್ಯೆ ಕೆಂಪು-ನೀಲಿ ಪೆನ್ಸಿಲಿನ ಗೆರೆಗಳಿವೆ" ಎಂದೆಲ್ಲ ತಕರಾರು ಮಾಡುವುದರಲ್ಲಿ ಏನು ಅರ್ಥವಿದೆ? ಕೊಟ್ಟ ಸೈಕಲ್ಲು ಪಂಕ್ಚರಾಗಿ ತಿರುಗಿ ಬಂದರೆ ಪಂಕ್ಚರು ತೆಗೆಯಿಸಿ ಕೊಡಿರಿ ಎನ್ನುವಿರೋ? ಅಥವಾ ಅದಕ್ಕೆ ಬದಲಾಗಿ ಹದಿನೈದು ಪೈಸೆ ಬೇಡುವಿರೋ? ಹಾಗೆ ಎರಡೂ ಮಾಡಲಾರದೆ ಆದದ್ದೆಲ್ಲ ಒಳಿತೇ ಎನ್ನಬೇಕು. ಯಾಕೆ ಎನ್ನುವಿರಾ? ಮತ್ತೆ ಯಾರಾದರೂ ಸೈಕಲ್ಲು ಕಡ ಕೇಳಲು ಬಂದಾಗ ಪಂಕ್ಚರಾಗಿದೆ ಎಂದು ತೋರಿಸಲಿಕ್ಕೆ ಅನುಕೂಲವಾಗಲಿಲ್ಲವೆ?

ನಾನು ಈ ಮಾತನ್ನು ನನ್ನ ಹೆಂಡತಿಗೆ ಹಲವಾರು ಬಾರಿ ಹೇಳಿದ್ದೇನೆ. ಆದರೂ ಅವಳು "ಈ ದರಿದ್ರ ಕೆಂಪು ಭಕ್ಕರಿ ತಿನ್ನಲಾರೆ!" ಎನ್ನುವುದು ತಪ್ಪಿಲ್ಲ. ಬಿಳಿ ಜೋಳದ ಹಿಟ್ಟನ್ನು ಕಡ ಒಯ್ದು ಕೆಂಜೋಳದ ಹಿಟ್ಟನ್ನೇ ಯಾವಾಗಲೂ ತಿರುಗಿ ಕೊಡುವ ನೆರೆಮನೆ ದೇಸಾಯಿಯವರ ಬಗ್ಗೆ ಇದು ಅವಳ ತಕರಾರು. ಆದರೆ ಪಾಪ! ದೇಸಾಯರ ಹೊಲದಲ್ಲಿ ಕೆಂಜೋಳವೇ ಬೆಳೆದರೆ ಅದು ಅವರ ತಪ್ಪೇ? ಕಡ ತಿರುಗಿ ಕೊಡಲು ಅವರು ಬಿಳಿ ಜೋಳವನ್ನು ಕೊಂಡುತರಬೇಕೆ?

ಹೆಂಗಸರು ಭಕ್ಕರಿ ಹಿಟ್ಟು, ಅಕ್ಕಿ, ಅವಲಕ್ಕಿ, ಬೇಳೆ, ಎಣ್ಣೆ, ಸಾಸವಿ, ಅಷ್ಟೇ ಏಕೆ ನೆರೆಮನೆಯಲ್ಲಿ ಅವೇಳೆಯಲ್ಲಿ ಅಭ್ಯಾಗತರು ಯಾರಾದರೂ ಬಂದರೆ ಚಿಮಣಿ ಎಣ್ಣೆ ತುಂಬಿದ ಸ್ಟೋವನ್ನೋ ಅಥವಾ ನಾಲ್ಕಾರು ಚಪಾತಿಗಳನ್ನೂ ಎರಡು ಬಟ್ಟಲು ಸಾರನ್ನೂ, ನೆರೆಮನೆ ಕನ್ಯಾಮಣಿಯ ಶೃಂಗಾರಕ್ಕೆ ಸ್ನೋ-ಪೌಡರುಗಳ ಬಾಟಲಿಯನ್ನು ಕೊಡಲು ಸಿದ್ಧರಿರಬೇಕು. ಅಷ್ಟೇ ಅಲ್ಲ, ಕೊಟ್ಟು ಮರೆಯಲೂ ಕಲಿತಿರಬೇಕು. ಅದರಂತೆ ಗಂಡಸರು ವಾಚು ಸೈಕಲ್ಲು, ರೇಡಿಯೋ, ಪೆನ್ನು, ಪುಸ್ತಕ, ಕೊಡೆ, ಗೆಳೆಯ ಕನ್ಯಾ ಪರೀಕ್ಷೆಗೆ ಹೊರಟಾಗ, ತಮ್ಮ ಹೊಸ ಟೆರಲಿನ ಪ್ಯಾಂಟನ್ನು ಕಡ ಕೊಡುವ ಸಿದ್ಧತೆಯಲ್ಲಿರಬೇಕು. ಕಡ ಸಿಗುತ್ತದೆ ಎಂದರೆ ಜನರು ಏನೇನು ಬೇಡಲಿಕ್ಕೆ ಸಾಧ್ಯವಿದೆಯೋ ಅದೆಲ್ಲವನ್ನೂ ಕೇಳುವವರೇ! ಅಷ್ಟೇ ಏಕೆ "ನಮ್ಮ ಹುಡುಗಿನ್ನ ನೋಡಲಿಕ್ಕೆ ಬರುವವರಿದ್ದಾರೆ. ನಿಮ್ಮ ನೀಳವಾದ ಮೂಗನ್ನೂ ಒಂದು ತಾಸು ಕೊಡಿರಿ." ಎಂದೂ ಬೇಡುವವರೇ! ಆದರೆ ನಮ್ಮ ಪುಣ್ಯ ಹೆಚ್ಚಿನದು. ಕಿವಿ, ಮೂಗು, ಬಣ್ಣಗಳನ್ನು ಕಿತ್ತು ಒಯ್ಯಲಿಕ್ಕೆ ಬರುವುದಿಲ್ಲ. ಅಂತೇ ಅವು ಇನ್ನೂ ನಮ್ಮ ಹತ್ತಿರ ಸುರಕ್ಷಿತವಾಗಿ ಉಳಿದುಕೊಂಡಿವೆ.

ನನ್ನ ಮೇಲಿನ ಸಹಾನುಭೂತಿಯಿಂದ ನನ್ನ ಆತ್ಮೀಯ ಗೆಳೆಯರೊಬ್ಬರು ನನಗೆ ಒಂದು ಕಿವಿಮಾತು ಹೇಳಿದ್ದಾರೆ. ಅದನ್ನು ನಿಮಗೂ ಹೇಳಿಬಿಡುತ್ತೇನೆ. ಅದೇನಂದರೆ ವಸ್ತುಗಳನ್ನು ಕಡ ಕೊಡುವುದಕ್ಕಿಂತ ರೋಖ ಹಣವನ್ನು ಕಡ ಕೊಡುವುದು ಕಡಿಮೆ ಹಾನಿಕರ! ಎಂಥ ಯುಕ್ತಿಯಂಥ ಸಲಹೆ! ಕೈಗಡಿಯಾರದ ಸ್ಪ್ರಿಂಗು ಹರಿದುಕೊಂಡೊ, ಪೆನ್ನಿನ ನಿಬ್ಬನ್ನು ಮುರಿದುಕೊಂಡೋ ಅಥವಾ ಹೆಣ್ಣನ್ನು ನೋಡಿ ಗಾಬರಿಯಾದಾಗ ಪ್ಯಾಂಟಿನ ಮೇಲೆ ಚಹ ಕೆಡವಿಕೊಂಡು ಕಲೆ ಬೀಳಿಸಿಕೊಂಡೋ-ನಿಮ್ಮ ವಾಚು, ಪೆನ್ನು, ಪ್ಯಾಂಟುಗಳನ್ನು ತಿರುಗಿ ತಂದು ಕೊಟ್ಟರೆ ನಿಮಗೆ ಏನು ಮಾಡಲು ಸಾಧ್ಯ? ಕಡ ಒಯ್ದ ರೂಪಾಯಿಗಳನ್ನು ತಿರುಗಿ ಕೊಡದೆ ಇರಬಹುದು. ಆದರೆ ರೂಪಾಯಿಯನ್ನು ಕೆಡಿಸಿ ತರಲು ಅವರಿಗೆ ಹೇಗೆ ಸಾಧ್ಯ? ಹಾಗೆ ಕೆಡಿಸಬೇಕೆಂದು ಅವರು ಪಣ ತೊಟ್ಟರೂ ಅವರ ಹತ್ತಿರ ಅದು ಉಳಿದಿದ್ದರಲ್ಲವೇ? ಅದಕ್ಕೇ ನಾನು "ಇಲ್ಲಿ ಹಣ ಮಾತ್ರ ಕೈಗಡ ದೊರೆಯುತ್ತದೆ" ಎಂಬ ಬೋರ್ಡನ್ನು ಬರೆಯಿಸಿ ಮನೆ ಹೊರಗೆ ತೂಗ ಹಾಕಬೇಕೆಂದಿದ್ದೇನೆ!

ಅಥವಾ ನನಗೆ ಇನ್ನೊಂದು ವಿಚಾರವೂ ಹೊಳೆಯುತ್ತಿದೆ. ನೀವು "ಗಾಳಿ ಮತ್ತು ಮರ" ಎಂಬ ಕಥೆ ಕೇಳಿಲ್ಲವೇ? ಒಮ್ಮೆ ಅವುಗಳಲ್ಲಿ ಯಾರು ಹೆಚ್ಚಿನವರು ಎಂದು ಜಗಳ ಬಂದಿತಂತೆ. ಗಿಡವು ತನ್ನ ವಿಶಾಲವಾದ ಶಾಖೆಗಳನ್ನೂ, ನಿಬಿಡವಾದ ಎಲೆಗಳನ್ನೂ ಹೂ, ಕಾಯಿ, ಹಣ್ಣುಗಳ ಗೊಂಚಲುಗಳನ್ನೂ ತೋರಿ, ಕಣ್ಣಿಗೇ ಕಾಣದ ಗಾಳಿಯನ್ನು ನಿಂದಿಸಿತಂತೆ. ಸಿಟ್ಟಿಗೆದ್ದ ಗಾಳಿ ಮರವನ್ನೇ ಬುಡಮೇಲು ಮಾಡೇನೆಂದು ಗರ್ಜಿಸಿತು. ಈ ಆಹ್ವಾನವನ್ನು ಮರವು ಸ್ವೀಕರಿಸಿ ಬಿರುಗಾಳಿ ಬೀಸುವ ಮೊದಲೇ ತನ್ನೆಲ್ಲ ಟೊಂಗೆಗಳನ್ನೂ ಕಳಚಿಕೊಂಡು ಬೋಳಾಗಿ ನಿಂತುಬಿಟ್ಟಿತಂತೆ, ಜಗತ್ತನ್ನೇ ಗೆದ್ದ ಜಟ್ಟಿಯಂತೆ!

ನನ್ನ ವಿಚಾರವೂ ಇದೇ. ನಾಳೆಯಿಂದ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳನ್ನು ತರಿಸುವುದನ್ನೇ ನಿಲ್ಲಿಸಿಬಿಡೋದು. ವಾಚು, ಪೆನ್ನು, ಪುಸ್ತಕ, ಟ್ರಾಂಜಿಸ್ಟರು, ಮನೆಗೆ ಹಾಕುವ ಕೀಲಿ ಸಹಿತ ಕೈಗಡ ಕೇಳಬಹುದಾದ ಎಲ್ಲ ವಸ್ತುಗಳನ್ನೂ ದಾನ ಮಾಡಿ ಬಿಡುವುದು! ಹೇಗಿದೆ ವಿಚಾರ? ಕೈಗಡ ಕೊಟ್ಟು ಕೊಟ್ಟು ಕೈಸುಟ್ಟುಕೊಂಡ ಎಲ್ಲರೂ, ನನ್ನ ಈ ನವೀನ ಮುಕ್ತಿ ಅನುಕೂಲ ವಿಚಾರವನ್ನು ಮೆಚ್ಚುವರೆಂಬ

ಭರವಸೆ ನನಗಿದೆ. ಇದಕ್ಕೆ ನೀವೇನೆನ್ನುತ್ತೀರಿ?

ಆದರೆ ಇದರಲ್ಲಿ ಒಂದು ಗಂಡಾಂತರವೂ ಇದೆ. ನಾನು ಇಂಥ ದಿನ ಎಲ್ಲ ವಸ್ತುಗಳನ್ನೂ ದಾನ ಮಾಡುತ್ತೇನೆ, ಎಂದು ತಿಳಿದು ಬಿಟ್ಟರೆ ನನ್ನ ಆಪ್ತ-ಇಷ್ಟ-ಮಿತ್ರ-ಬಂಧು-ಬಳಗ-ನೆರೆ ಹೊರೆಯವರೆಲ್ಲರೂ "ಇವನು ಇನ್ನು ನಮ್ಮ ಕೈಯಲ್ಲಿ ಸಿಗುವುದಿಲ್ಲ. ಈಗಲೇ ಇವನನ್ನು ಒಂದು ಕೈ ನೋಡೋಣ" ಎಂದು ಬಂದು ನನ್ನ ಮನೆಯ ಮುಂದೆ ನೆರೆದು ಗದ್ದಲ ಹಾಕಬಹುದು. ಹಾಗೆ ಅವರ ಕೈಯಲ್ಲಿ ಸಿಕ್ಕು ಒಮ್ಮೆಲೇ ನಾಗ್ನಾಗುವ ಧೈರ್ಯವಾಗಲಿ, ಅದನ್ನು ಸಹಿಸುವ ಶಕ್ತಿಯಾಗಲಿ ನನ್ನಲ್ಲಿಲ್ಲ. ಅದಕ್ಕೇ ಈ ವಿಚಾರವನ್ನು ಕೈಬಿಡಬೇಕಾಗಿದೆ.

ಅಂತೂ ಈ ಕೈಗಡದವರ ಕೈಯಿಂದ ಪಾರಾಗಲು ದಾರಿಯೇ ಇಲ್ಲವೆಂದಂತಾಯಿತು. ಕೈಗಡವೆಂಬುದು ಒಂದು ಅನಿವಾರ್ಯ ಪಿಡುಗು. ಅದಕ್ಕೆ ಆ್ಯಂಟಿ-ಕಾಲರಾ, ಆ್ಯಂಟಿ-ಟೈಫೈಡ್ ದಂಥ ಯಾವ ಮದ್ದೂ ಇನ್ನೂ ಶೋಧವಾಗಿಲ್ಲ. ಈಗ ಇರುವ ಒಂದೇ ಒಂದು ಉಪಾಯವೆಂದರೆ ಈ ಕೈಗಡ ಬೇಡುವವರ ಜೊತೆಗೇ ಹೊಂದಿಕೊಂಡು ಹೋಗುವುದು. ಇದರಲ್ಲಿ ಉಪಾಯವೇನು ಬಂತು ಎಂದು ನೀವು ಕೇಳಬಹುದು. ಆದರೆ ಅನ್ಯಥಾ ಶರಣಂ ನಾಸ್ತಿ! ನಮ್ಮ ಜೀವನದಲ್ಲಿ ನಮಗೆ ಬೇಡದಾದ ಎಷ್ಟೋ ವಿಷಯಗಳೊಂದಿಗೆ ನಾವು ಬೇರೆ ಮಾರ್ಗವಿಲ್ಲದೆ ಹೊಂದಿಕೊಂಡು ಹೋಗುವುದಿಲ್ಲವೇ? ನೊಣ, ಇರುವೆ, ತಗಣೆ, ಸೊಳ್ಳೆಗಳಿಂದ ಹಿಡಿದುಕೊಂಡು ಕೆಲಸಿಗ, ಸಿಂಪಿಗ, ಮಡಿವಾಳ, ಗೌಳಿ ಮೊದಲಾದವರ ಜೊತೆಗೆ ಬಾಳುವೆ ಮಾಡುವುದಿಲ್ಲವೇ? ಇವೆಲ್ಲ ತಾವಾಗಿಯೇ ಅಂಟಿಕೊಂಡ ಅಥವಾ ನಾವಾಗಿಯೇ ಕಟ್ಟಿಕೊಂಡ ಪೀಡೆಗಳೇ ಆಗಿವೆ.

ಸ್ವಲ್ಪ ಸಹನೆ, ತುಸುವೇ ಉದಾರ ಬುದ್ಧಿ, ಕೇವಲ ಒಂದಿಷ್ಟು ಮರೆವು ಇಂಥ ಕೆಲವು ಸದ್ಗುಣಗಳನ್ನು ನಾವು ಕಷ್ಟಪಟ್ಟಾದರೂ ಬೆಳೆಯಿಸಿಕೊಂಡರೆ ಈ ಉಪಾಯ ಕಠಿಣವೆನಿಸಲಾರದು. ಸಿಗುತ್ತದೆ ಎಂದಾಗ ಕೊತ್ತಂಬರಿಯನ್ನು ಕಡಕೇಳುವ ನೆರೆಮನೆಯವರ ಬಗ್ಗೆ ಸ್ವಲ್ಪ ಸಹನೆ, ಹತ್ತು ಕೇಳಿದವರಿಗೆ ಐದಾದರೂ ಕೊಡುವ ಉದಾರಬುದ್ಧಿ, ನಮ್ಮ ಗೆಳೆಯನಿಗೆ ಕೊಟ್ಟ ಚಿಲ್ಲರೆ ಒಂದೆರಡು ರೂಪಾಯಿಗಳು ಲಕ್ಷಕ್ಕೆ ಬಾರದಷ್ಟು ಮರೆವು ಇವನ್ನು ಆ ದಯಾಘನನು ನಮಗೆ ದಯಪಾಲಿಸಲಿ! ಅಂದರೆ ತಿರುಗಿ ಬೇಡಿದಾಗ "ಎಂಥಾ ಕ್ಷುಲ್ಲಕ ಇದ್ದಾನಿವ?" ಎಂಬ ಬಿರುದನ್ನು ಪಡೆಯುವ ಭಾಗ್ಯ ನಮಗೆ ತಪ್ಪುತ್ತದೆ.

ಮೊನ್ನೆ ಒಬ್ಬ ಜೋತಿರ್ಮಾರ್ತಾಂಡರು ನನಗೆ ಒಂದು ಮಾತು ಹೇಳಿದರು. "ಈಗ ನಿಮಗೆ ಸಾಡೇಸಾತಿ ಸುರು ಆಗಿದೆ. ಯಾರಿಗೂ ಜಾಮೀನ ಆಗಬೇಡಿರಿ, ಸಾಲ ಕೊಡಬೇಡಿರಿ. ಹಂ ಕೇಳಿದಾಗ ಏದೇ ಕೊಟ್ಟು ಅದು ತಿರುಗಿ ಬರುವುದಿಲ್ಲ ಎಂಧೇ ತಿಳಿಯಿರಿ..." ಇತ್ಯಾದಿ. ಇತ್ಯಾದಿ.

ಅವರು ಹೇಳಿದ ಭವಿಷ್ಯಕ್ಕಿಂತ ಅವರ ಉಪದೇಶ ನನಗೆ ಹೆಚ್ಚಾಗಿ ಹಿಡಿಸಿತು. ಕೈಗಡ ಎಂದರೇ ಸಾಡೇಸಾತಿ ಶನಿ ಇದ್ದಂತೆ. ಈ ಕಾಟ ಕಡಿಮೆ ಮಾಡಿಕೊಳ್ಳುವ ಒಂದೇ ಉಪಾಯವೆಂದರೆ ಹಂ ಬೇಡಿದಾಗ್ಯೂ ಕೊಡೋಣ, ಮತ್ತು ಆ ಐದನ್ನೂ ಕೃಷ್ಣಾರ್ಪಣ ಎಂದುಕೊಂಡೇ ಕೊಡೋಣ. ಅಷ್ಟೇ ಅಲ್ಲ ನಮ್ಮಿಂದ Compulsory ದಾನ ಮಾಡಿಸಿ ನಮಗೆ ಪುಣ್ಯ ಸಂಚಯ ಮಾಡಿಕೊಡುವ ಈ ಮಹಾಶಯರಿಗೆ ನಾವು [ಮನದಲ್ಲಿಯೇ] ಕೃತಜ್ಞರಾಗಿರೋಣ.

ಆದರೆ ಶನಿ ಮಹಾರಾಜನಲ್ಲಿ ನನ್ನ ಒಂದೇ ಒಂದು ಸಣ್ಣ ಕೋರಿಕೆ. "ನನ್ನಿಂದ ಕೈಗಡ ಬೇಡುವವರಿಗೆ ನನ್ನ ಈ ನಿರ್ಧಾರ ತಿಳಿಯದಂತೆ ಮಾಡಪ್ಪಾ ಮಹಾರಾಯಾ" ಎಂಬುದೇ ಆ ಕೋರಿಕೆ. ಇಲ್ಲವಾದರೆ ಇಂದು ಐವತ್ತು ಬೇಡುವವರು ನಾಳೆಯಿಂದ ಐದುನೂರರ ಬೇಡಿಕೆಯನ್ನೇ ಮುಂದಿಡಬಹುದು!

ಶ್ರಮವಿಭಜನೆ....?

— ಡಿಬಿ





— ಜಿ. ಟಿ. ನಾರಾಯಣರಾವ್

ಅಂದು ನಾನೊಬ್ಬ ಸಶಕ್ತ ಜೀವಂತ ವ್ಯಕ್ತಿಯಾಗಿದ್ದೆ. ನನ್ನನ್ನು ವಿಶ್ವದ ಒಂದು ಕಣ ಅಥವಾ ವಿಶ್ವಕಣ ಎಂದು ನೀವು ಕರೆಯಬಹುದು. ವಾಸ್ತವದಲ್ಲಿ ವಿಶ್ವದಲ್ಲಿರುವ ಎಲ್ಲರೂ, ಎಲ್ಲವೂ ವಿಶ್ವಕಣಗಳೇ.

ನನ್ನ ಆತ್ಮಚರಿತ್ರೆ ಎಲ್ಲ ಆತ್ಮಚರಿತ್ರೆಗಳಂತ ಒಂದು ದಿನ ಪ್ರಾರಂಭವಾಗಬೇಕಷ್ಟೆ. ಅದು ತೊಡಗುವ ಆ ಮುಹೂರ್ತದಲ್ಲಿ ಎಲ್ಲೆಲ್ಲಿಯೂ ದಟ್ಟವಾದ ಕತ್ತಲೆ ವ್ಯಾಪಿಸಿತ್ತು. ಭಯಂಕರ ನಿಶ್ಶಬ್ದ. ಮುಂದೆ ಬರಲಿರುವ ಯಾವುದೋ ಒಂದು ಭೀಕರ ಘಟನೆಯ ಪೂರ್ವ ಸೂಚನೆಯೋ ಎನ್ನುವಂತಹ ಉದ್ವೇಗಪೂರಿತ ಕ್ಷಣಗಳು ನಾನು, ನನ್ನಂತಹ ಇತರ ವಿಶ್ವ ಕಣಗಳು ಯಾರೂ ಕದಲುವಂತಿರಲಿಲ್ಲ.

ನಿರಂತರ ಚಲನೆ ನನಗೆ, ನನ್ನ ಮಿತ್ರರಿಗೆ ಜನ್ಮಸಿದ್ಧ ಸ್ವಭಾವ. ವಿಶ್ವನಾಟಕದ ಪಾತ್ರಧಾರಿಗಳು



ಪ್ರಥಮಾಸ್ಫೋಟನೆ

ನಾವು ಸೂತ್ರಧಾರನಿದ್ದಾನೋ ಇಲ್ಲವೋ ನಮಗೆ ತಿಳಿಯದು. ನಾವೆಲ್ಲರೂ ಪೂರ್ಣ ಸ್ವತಂತ್ರರಾಗಿದ್ದೇವೆ, ನಾವು ಆಡಿದ್ದೇ ನಾಟಕ ಎಂದು ನಂಬಿದ್ದೆವು. ಆದರೆ ನನ್ನ ಕತೆ ತೊಡಗುವ ವೇಳೆಗೆ ಈ ಸ್ವಾತಂತ್ರ್ಯ ನಮಗೆ ತಿಳಿಯದಂತೆ ಅಪಹೃತವಾಗಿತ್ತು.

ಆಗ ನಾವೆಲ್ಲರೂ ಪ್ರತಿಬಂಧಿತರಾಗಿದ್ದೆವು ಹೀಗೆ ಬಲಾತ್ಕಾರದಿಂದ ತಡೆಹಿಡಿದ ನಮ್ಮ ಚೈತನ್ಯವು ಪ್ರತಿಯೊಬ್ಬನಲ್ಲಿಯೂ ತುಂಬಿ ಅದೊಂದು ಅಪಾಯದ ಮಿತಿಯನ್ನು ಮುಟ್ಟಿತು. ಪ್ರವಾಹದ ನೀರನ್ನು ತಡೆಗಟ್ಟಿದರೇನಾಗಬಹುದು? ಕಟ್ಟೆಯೊಡೆಯುವ ಪರಿಸ್ಥಿತಿ ಶೀಘ್ರವಾಗಿ ಬರಲೇಬೇಕಷ್ಟೆ. ಸ್ವಾಭಾವಿಕವಾಗಿ ಹರಿದು ವ್ಯಯವಾಗುವ ಚೈತನ್ಯವನ್ನು ತಡೆದಿಟ್ಟು ಒಂದೇ ಸಲ ಅದನ್ನು ಹರಿಯಗೊಟ್ಟರೆ ಅನಾಹುತ ತಪ್ಪಿದ್ದಲ್ಲ. ಈ ಅನಾಹುತದ ಅಪಾಯಕಾರೀ ಪರಿಣಾಮವು ತಡೆಹಿಡಿದಿಡಲು ಕಾರಣವಾದ ಆ ಬಾಹ್ಯ ಶಕ್ತಿಗಿಂತಲೂ ಅದರಲ್ಲಿ (ಬಹುಶಃ ನಮ್ಮ ಅರಿವಿಲ್ಲದೆಯೇ) ಭಾಗಿಗಳಾದ ನಮ್ಮಂಥವರಿಗೇ ಹೆಚ್ಚು.

ಏನು ಬರುವುದೋ ಗೊತ್ತಿಲ್ಲ. ಆದರೆ ಒಂದು ಸಮಾಧಾನ: ನಾವೆಲ್ಲರೂ ಒಟ್ಟಿಗೆ ಇದ್ದೇವೆ; ಅಪಾಯವನ್ನು ಒಟ್ಟಾಗಿ ಎದುರಿಸುತ್ತಿದ್ದೇವೆ. ಒಬ್ಬರನ್ನೊಬ್ಬರು ನೂಕುತ್ತಿದ್ದರೂ ಈ ನೂಕು ನುಗ್ಗಲಿನಲ್ಲಿ ನಾವು ನುಚ್ಚು ನೂರಾಗಿ ನಾಶವಾಗಿಬಿಡುವೆವೋ ಎಂದು ಭಯವಾಗುತ್ತಿದ್ದರೂ ಮುಂದೆ ಬರಬಹುದಾದ, ಬರಲೇಬೇಕಾದ ಅಪಾಯಕ್ಕಿಂತ ಇದೇನೂ ಹೆಚ್ಚಿನದಾಗಿರದು, ಎಂದೆನ್ನಿಸುತ್ತಿತ್ತು. ಆದರೆ ಅಂತ್ಯದಲ್ಲಿ ಸ್ವಾರ್ಥವೇ ಬೇರೆಲ್ಲ ಭಾವನೆಗಳನ್ನು ಮೆಟ್ಟಿ ನಿಲ್ಲುವುದು. ಆ ಕ್ಷಣದಲ್ಲಿಯೇ ಬೇರೆ ಎಲ್ಲರೂ ನಿರ್ನಾಮವಾಗಿ ತಾನು ಮಾತ್ರ ಉಳಿದರೆ ಸಾಲದೇ ಎಂದು ನಮ್ಮಲ್ಲಿ ಪ್ರತಿಯೊಬ್ಬನಿಗೂ ಭಾಸವಾದರೆ ಅದು ತಪ್ಪಲ್ಲ ಅದು ಕಟ್ಟೆಯಲ್ಲಿ ಬಿರುಕು ಬಿಡುವ ಸನ್ನಿವೇಶ.

ಆ ಆಸ್ಫೋಟನೆ! ಅದರ ಸ್ಮರಣೆಯೇ ಇಂದು ನಡುಕ ಹುಟ್ಟಿಸುವಂತಿದೆ. ಅದೇನು ಶಬ್ದ, ಅದೇನು ಸಂಘರ್ಷಣೆ, ಅದೇನು ರುದ್ರ ಶಕ್ತಿಗಳ ಭೀಕರ ತಾಂಡವ. ನಾವೆಲ್ಲರೂ ಅನಾರಂಭದುದರಿಂದ, ರೂಪಾಂತರಗೊಳ್ಳುವ ಶಕ್ತಿಯಿರುವವರಾದುದರಿಂದ ಆ ಆಸ್ಫೋಟನೆಯಲ್ಲಿ ಸಾಯದೇ ಉಳಿದೆವು. ರೆಪ್ಪೆ ಮಿಟುಕಿಸುವಷ್ಟು ಸೂಕ್ಷ್ಮಾವಧಿಯಲ್ಲಿ ಅದು ಸಂಭವಿಸಿತು. ಆದರೆ ಅದರ ಹೊಡೆತದಿಂದ ಛಿದ್ರವಿಚ್ಛಿದ್ರವಾಗಿ ನಾವೆಲ್ಲರೂ ವಿವಿಧ ದಿಕ್ಕುಗಳಿಗೆ ಮಹಾವೇಗದಿಂದ ಉಚ್ಚಾಟನೆ ಹೊಂದಿದೆವು.

ಸ್ವಾತಂತ್ರ್ಯದ ಪೂರ್ಣ ಮದ ನಮಗೇರಿದುದರಿಂದ ಈ ದುರವಸ್ಥೆ ಪ್ರಾಪ್ತವಾಯಿತೇ ಅಥವಾ ಈಗ ನಾನು ಖಂಡಿತವಾಗಿಯೂ ನಂಬುತ್ತಿರುವ ಆದರೂ ಕಾಣದ ಸೂತ್ರಧಾರನ ದೊಡ್ಡ ಒಂದು ಯೋಜನೆಯಲ್ಲಿನ ಅಂಕವೇ ಇದು ಎಂದು ನನಗಿನ್ನೂ ಅರ್ಥವಾಗಿಲ್ಲ.

'ನೀಹಾರ ಪರಿವಾರ ವಿಶ್ವ ಸಂಪುಟ'

ಮುಂದಿನ ದಿನಗಳಲ್ಲಿ ನಾನು ಪುನಃ ಸ್ವಾತಂತ್ರ್ಯದ ಸವಿ ಅನುಭವಿಸಿದೆ. ವ್ಯತ್ಯಾಸವಿಷ್ಟೆ, ಮೊದಲು ವಿಶ್ವಸಂಚಾರಿಯಾದ ನಾನು ಈಗ ಅದರ ಒಂದು ಪ್ರದೇಶಕ್ಕೆ ಸೀಮಿತಗೊಂಡಿದ್ದೆ. ನನ್ನ ಮನೆ ವಿಶಾಲಾಕಾಶದಲ್ಲಿ ಸ್ವಚ್ಛಂದವಾಗಿ ವಿಹರಿಸುವ ಮಹಾಗಾತ್ರದ ನೀಹಾರ. ನೆಬ್ಯುಲಾ ಎಂದು ಇದರ ಹೆಸರು. ನನ್ನಂತಹ ಅಸಂಖ್ಯಾತ ಆದರೆ ಅತಿ ವಿರಳವಾಗಿ ಹರಡಿರುವ ಕಣಗಳ ಸಮುದಾಯ ಈ ನೆಬ್ಯುಲಾ. ನನ್ನ ಹಿಂದಿನ ಮಿತ್ರರು ಇದರಲ್ಲಿಲ್ಲ. ಹೊಸಬರು ಬಂದಿದ್ದಾರೆ. ನಾಲ್ಕು ದಿನಗಳ ಬಾಂಧವ್ಯ ಮತ್ತೆ ವ್ಯತ್ಯಾಸ, ಹೊಸಬರೊಡನೆ ವ್ಯವಹಾರ, ಪುನಃ ವ್ಯತ್ಯಾಸ ಈ ಆಂದೋಳನದಲ್ಲಿ ನಾನು ಪೂರ್ಣವಾಗಿ ಭಾಗಿಯಾದೆ, ಸವಿ, ಕಹಿಯುಂಡೆ ನನ್ನ ಹಲವರು ಮಿತ್ರರು ಇದರೊಂದಿಗೆ ಹೊಂದಿಕೊಳ್ಳಲಾರದೇ ಅವರ ವ್ಯಕ್ತಿತ್ವ ಕಳೆದುಕೊಂಡರು, ರೂಪಾಂತರಗೊಂಡರು.

ನನ್ನ ಮನೆಯಾದ ನೆಬ್ಯುಲಾ ಎಷ್ಟು ದೊಡ್ಡದಾಗಿದೆ ಎಂದು ತಿಳಿಯಲು ಪ್ರಯತ್ನಿಸಿ ವಿಫಲನಾದೆ. ನನ್ನ ಚಲನೆಯ ವೇಗ ಸೆಕೆಂಡಿಗೆ

ಲಕ್ಷಾಂತರ ವೈಲುಗಳು. ಇಷ್ಟು ವೇಗದಿಂದ ಚಲಿಸಿಯೂ ಈ ಮೋಡದ ಆದಿ ಅಂತ್ಯ ವೆಲ್ಲಿ ಎಂದು ತಿಳಿಯಲಾಗಲಿಲ್ಲ. ನನ್ನ ಹೊಸ ಸ್ನೇಹಿತರನ್ನು ಕೇಳಿದೆ—ಅವರೂ ತಮಗೆ ತಿಳಿಯದೆಂದರು. ಮೊದಲಿನ ಒತ್ತಡ ಈಗ ಇಲ್ಲ. ನಾವೆಲ್ಲರೂ ಎಷ್ಟೇ ವೇಗದಿಂದ ಯಾವುದೇ ದಿಕ್ಕಿಗೆ ಓಡಿದರೂ ಒಬ್ಬರೊಬ್ಬರಿಗೆ ಢಿಕ್ಕಿಯಾಗ ದಂತಹ ಅತಿ ವಿಶಾಲವಾದ ಮನೆಯಲ್ಲಿದ್ದೆವು. ಪಾರದರ್ಶಕತೆ ನಮ್ಮ ಈ ತೆಳು ಮೋಡದ ಮನೆಯ ಒಂದು ವೈಶಿಷ್ಟ್ಯ. ಆಕಾಶದ ಅದೆಷ್ಟೋ ಆಳದಲ್ಲಿ ನನ್ನ ನೆಬ್ಯುಲಾದಂತಹ ಅಸಂಖ್ಯಾತ ನೆಬ್ಯುಲಾಗಳು ಚದರಿ ಓಡುತ್ತಿದ್ದುದು ನನಗೆ ತಿಳಿಯಿತು. ಅವೆಲ್ಲವೂ ನಮ್ಮ ಮೋಡಕ್ಕೆ ಹೆದರಿ ಹಾಗೆ ಸಾಗುತ್ತಿರುವುವೆಂದು ಮೊದಲು ಭಾವಿಸಿದೆ. ಆದರೆ ಸ್ವಲ್ಪ ಯೋಚಿಸಿದಾಗ ವಾಸ್ತವಿಕಾಂಶ ಸ್ಪಷ್ಟವಾಯಿತು.

ಒಂದು ಜೇನುಗೂಡಿಗೆ ಅಕಸ್ಮಾತ್ತಾಗಿ ಬೆಂಕಿ ಬಿದ್ದರೇನಾದೀತು? ಅಲ್ಲಿರುವ ಜೇನ್ನೊಣಗಳು ಒಂದೇ ಗಳಿಗೆಯಲ್ಲಿ ಗೂಡಿನಿಂದ ತಮ್ಮ ಮೂಗಿನ ನೇರವಾಗಿ ಧಾವಿಸಿಬಿಡುವುವು. ಅಂದರೆ ಎಲ್ಲ ದಿಕ್ಕುಗಳಿಗೂ ಅವು ಹಾರುವುವೆಂದಾಯಿತು. ಹೀಗೆ ಸಾಗುವಾಗ ಪ್ರತಿ ಎರಡು ನೊಣಗಳ ನಡುವೆ ಇರುವ ದೂರ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಿರುವುದು. ಆದರೆ ಯಾವುದೇ ಒಂದು ನೊಣ ಭಾವಿಸುವುದೇನು? ಇತರ ಎಲ್ಲ ನೊಣಗಳೂ ತನಗೆ ಹೆದರಿ ದೂರ ದೂರ ಧಾವಿಸುತ್ತಿವೆಯೆಂದು!

ನಮ್ಮ 'ಜೇನುಗೂಡಿ'ಗೆ ಬೆಂಕಿಯಿಟ್ಟವರಾರೋ, ಆ ಪ್ರಥಮಾಸ್ಫೋಟನೆಯ ಕುದುರೆ ಯೊತ್ತಿದವರಾರೋ ತಿಳಿಯದು. ಆದರೆ ಪ್ರತಿಯೊಂದು ಮೋಡವೂ ಈಗ ಆಕಾಶದ ವಿಸ್ತಾರದಲ್ಲಿ ಮಹಾವೇಗದಿಂದ ದೂರ ದೂರ ಚಲಿಸುತ್ತಿರುವ 'ಜೇನ್ನೊಣ'ವಾಗಿತ್ತು.

'ಅಮ್ಮ! ದೇವರು ತಟ್ಟಿದ ಉಂಡೆಯೆ ನಕ್ಷತ್ರ?'

ನೀರಿನ ಮಹಾಪೂರದ ವಿರುದ್ಧ ದಿಕ್ಕಿಗೆ ದೋಣಿ ನಡೆಸಲು ಪ್ರಯತ್ನಿಸಿ ನೋಡಿ. ಹುಟ್ಟು ಹೊಡೆದು, ಬೆವರು ಸುರಿಸಿ, ಏರುಬ್ಬಸ ಬಟ್ಟು ಮೇಲೆ ಹೋಗುತ್ತಿದ್ದೇವೆ ಎಂದು ನೋಡುತ್ತಿರುವಂತೆಯೇ ಪ್ರವಾಹ ನಿಮ್ಮನ್ನು ಅದೆಷ್ಟೋ ಕೆಳಗೆ ಒಯ್ದಿರುವುದು. ನಿಮ್ಮ ಸ್ನಾಯು ಶಕ್ತಿ ನೈಸರ್ಗಿಕ ಶಕ್ತಿಯ ವಿರುದ್ಧ ಪ್ರಭಾವಿಯಾಗಲಾರದು.

ನಾನೇನೋ ಸ್ವತಂತ್ರ, ಸ್ವೇಚ್ಛಾವಿಹಾರಿ ಎಂದು ತಿಳಿದಿದ್ದೆ. ಆದರೆ ನೆಬ್ಯುಲಾದೊಳಗಿನ ಮಹಾಪ್ರವಾಹದಲ್ಲಿ ನಾನೂ ಒಂದು ಅಣುವಾಗಿದ್ದೆ ಎಂದು ಗೊತ್ತಾದದ್ದು ಬಹಳ ತಡವಾಗಿ. ಈ ನೂತನಾನುಭವವನ್ನೂ ಗಳಿಸೋಣ, ಅನುಭವಿಸೋಣ ಎಂದು ಸಂತೋಷವಾಗಿ ಅದರಲ್ಲಿ ಭಾಗಿಯಾದೆ. ಮೋಡ ಮಂದ ಗತಿಯಿಂದ ಆವರ್ತಿಸುತ್ತಿತ್ತು. ನನ್ನಂತಹ ಕೋಟ್ಯಂತರ ಅಣುಗಳು ವಿಶ್ವದ ಈ ಮಹಾ ತಾನದಲ್ಲಿ ಲಯಬದ್ಧವಾಗಿ ನರ್ತಿಸುತ್ತಿದ್ದ ನರ್ತಕರು.

ಹೊಳೆಯಲ್ಲಿ ಸುಳಿ ಅಥವಾ ತಿರುಗಣಿ ಮಡುವನ್ನು ನೀವು ನೋಡಿದ್ದೀರಷ್ಟೇ (ಇಳಿದು ನೋಡಬೇಡಿ!), ಅದು ಅಕ್ಕ ಪಕ್ಕದ ಕಸ ಕಡ್ಡಿ ಹುಳ ಹುಪ್ಪಟೆಗಳನ್ನು ತನ್ನೆಡೆಗೆ ಹೀರಿ ಬಿಡುವುದು. ಮೊದಲು ದೂರ ದೂರ ಇದ್ದ ಈ ವಸ್ತುಗಳು ಮಡುವಿನ ಆವರ್ತನೆಗೆ ಸಿಕ್ಕಿದ ಕ್ಷಣ ಮುದ್ದೆಯಾಗಿ ಒಂದುಗೂಡುವುವು. ನಮ್ಮ ನೆಬ್ಯುಲಾ ಆಕಾಶದ ಒಂದು ದೊಡ್ಡ ತಿರುಗಣಿ ಮಡುವಾಯಿತು. ಅದು ಆವರ್ತಿಸುತ್ತಿದ್ದುದು ಮೊದ ಮೊದಲು ನಮಗೆ ಯಾರಿಗೂ ತಿಳಿಯಲಿಲ್ಲ, ಆದರೆ ಕ್ರಮೇಣ ಅದರ ವೇಗವೇರಿದಂತೆ ನಾವೆಲ್ಲರೂ ಪರಸ್ಪರ ಸಮೀಪವಾಗುತ್ತ ಅತಿ ವೇಗದಿಂದ ಸುತ್ತು ಸುತ್ತು ಓಡಲು ತೊಡಗಿದೆವು. ಸುಳಿಗೆ ಸಿಕ್ಕ ಹುಳದಂತಾಯಿತು ನಮ್ಮ ಅವಸ್ಥೆ.

ನಾವು ಹಲವಾರು ಕಣಗಳು ಒಂದುಗೂಡಿ ದೊಡ್ಡ ಮುದ್ದೆಯಾದೆವು. ಈಗ ನಾನು ಮೋಡದ ಅಂಚಿಗೆ ಬಂದಿದ್ದ ಬಲು ದೊಡ್ಡ



ನೆಬ್ಯುಲಾದಿಂದ ನಕ್ಷತ್ರ

ಗೋಳಾಕಾರದ ವಸ್ತುವಿನೊಳಗಿನ ಒಂದು ಕಣವಾಗಿದ್ದೆ. ಹಿಟ್ಟಿನ ರಾಶಿಗೆ ನೀರು ಸುರಿದು ಕಲಸಿ, ನಿಷ್ಣಾತ ಬಾಣಸಿಗ ಉಂಡೆ ಉಂಡೆ ಮಾಡಿ ಉರುಳಿಸುವಂತೆ ನನ್ನ ಮನೆಯಾದ ನೆಬ್ಯುಲಾದಿಂದ ಹಲವಾರು ಬೃಹದ್ಗೋಳಗಳು ಉರುಳಿದವು. ಪುನಃ ಮೊದಲಿನಂತೆಯೇ ಚಲಿಸಿ—ಒಂದೊಂದೂ ಒಂದೊಂದು ದಿಕ್ಕಿಗೆ; ಒಂದರಿಂದ ದೂರವಾಗಿ ಇನ್ನೊಂದು ವಿಪರೀತ ವೇಗದಿಂದ ಧಾವಿಸುತ್ತಿದ್ದುವು. ಈ ವೇಗ ಈ ಓಟ ಎಲ್ಲಿಗೆ ? ಗುರಿಯಿದೆಯೇ ಪ್ರಯಾಣಕ್ಕೆ? ಅರ್ಥವಿದೆಯೇ? ಕೇಳುವುದಾರನ್ನು? 'ಎಲ್ಲಿಗೆ ಪಯಣವೊ ದಾರಿಗ, ನಿನಗೆ?'

'ನಕ್ಷತ್ರ ಗರ್ಭದಲ್ಲಿ ಕಿಡಿಯಾಗು!'

ನನ್ನ ಈಗಿನ ಮನೆಯ ಹೆಸರು ನಕ್ಷತ್ರ. ನಾನು ಇದರೊಳಗಿನ ಒಂದು ಅಣು. ಈ ಮನೆಯ ಗಾತ್ರವೇನು ಸಾಮಾನ್ಯವೇ ? ಸೆಕೆಂಡಿಗೆ ಲಕ್ಷಾಂತರ ಮೈಲು ವೇಗದಿಂದ ಚಲಿಸುವ ನನಗೆ ಇದರ ಒಂದು ಅಂಚಿನಿಂದ ಇನ್ನೊಂದು ಅಂಚಿಗೆ ಹೋಗಲು ನೂರಾರು ವರ್ಷಗಳು ಬೇಕು. ಇಂಥ ಒಂದು ನಕ್ಷತ್ರ ನೀವಿರುವ ಸೌರ ವ್ಯೂಹವನ್ನೇ ವಿಶಿಷ್ಟ ಭಾಗವನ್ನೂ ಸುಲಭವಾಗಿ ನುಂಗಬಲ್ಲದು, ಎಂದರೆ ನಂಬುವಿರಾ? ನೆಬ್ಯುಲಾದ ಮರಿಯಾದ ಈ ನಕ್ಷತ್ರ ಸ್ವಾಭಾವಿಕವಾಗಿಯೇ ಅದಕ್ಕಿಂತ ಚಿಕ್ಕದು. ಅದು ಕೋಚೆ ಮಣ್ಣಿನ ಪರ್ವತ, ಇದು ಕುಂಬಾರನ ಮಡಿಕೆ.

ಇಲ್ಲಿ, ಈ ನಕ್ಷತ್ರದಲ್ಲಿ, ನನ್ನಂತಹ ಅಸಂಖ್ಯಾತ ಅಣುಗಳು ನಿಬಿಡವಾಗಿ ಸೇರಿವೆ. ನಿರಂತರ ಕ್ಷೋಭೆ, ಆವರ್ತನೆ (ಅರಾಜಕತೆಯೆನ್ನಿ ಬೇಕಾದರೆ) ಇಲ್ಲಿನ ಧರ್ಮ. ಇದರ ದೆಸೆಯಿಂದ ಶಾಖ ಉತ್ಪನ್ನವಾಗಿದೆ. ಅಣು ಅಣುಗಳ ಢಿಕ್ಕಿಯಿಂದ ಶಾಖ, ಶಾಖದಿಂದ ಬೆಳಕು. ನನ್ನ ನಕ್ಷತ್ರದ ಬೆಳಕು ಕೆಂಪು. ಕಬ್ಬಿಣವನ್ನು ಕಾಸಿದಂತೆ ಮೊದಲು ಕೆಂಬಣ್ಣವನ್ನು ಸೂಸುವಂತೆ ಆಕಾಶದ ಆಳದಲ್ಲಿ ಇಂತಹ ಹಲವಾರು ಕೆಂಪು ಉಂಡೆಗಳನ್ನು ನಾನು ಕಾಣುತ್ತಿದ್ದೇನೆ. ಮೊದಲಿದ್ದ ಸಂಪೂರ್ಣ ಕಗ್ಗತ್ತಲೆ ಈಗ ಈ ಬೆಳಕಿನ ಉಂಡೆಗಳಿಂದ ಅವಿರುವ ವಲಯಗಳಲ್ಲಿಯಾದರೂ ಮಾಯವಾಗಿದೆ. ಒಂದು ವಿಚಾರ-ನಾನಿರುವ ನಕ್ಷತ್ರ ಎಷ್ಟೇ ದೊಡ್ಡದಿರಬಹುದು, ಇಂತಹ ನಕ್ಷತ್ರಗಳು ಆಕಾಶದಲ್ಲಿ ಅಸಂಖ್ಯಾತವಾಗಿಯೇ ಇರಬಹುದು, ಆದರೆ ಆಕಾಶ ಮಾತ್ರ ಶೂನ್ಯವಾಗಿಯೇ ಕಾಣುವುದು. ಆಕಾಶದ ವಿಸ್ತಾರವನ್ನು ನನಗೆ ಊಹಿಸಲೂ ಸಾಧ್ಯವಿಲ್ಲ.

ಕೆಂಬಣ್ಣದ ರಾಕ್ಷಸಾಕಾರದ ನಕ್ಷತ್ರ-ಇದನ್ನು ಕೆಂಪು ರಾಕ್ಷಸ ಎಂದು ನೀವು ಕರೆಯಬಹುದು. ಇಂಥ ನಕ್ಷತ್ರಗಳ ಮಹಾಸಮುದಾಯ ವಿಶ್ವದ ಒಂದು ಪ್ರದೇಶ. ಅಲ್ಲಿ ನಾವಿದ್ದೆವು. ಇಂಥ ಸಮುದಾಯಗಳು ಹಲವಾರು. ನಿಮ್ಮ ನಕ್ಷತ್ರವಾಗಿರುವ ಸೂರ್ಯ ಇಂಥ ಒಂದು ನಕ್ಷತ್ರ ಸಮುದಾಯದ ಬಾಹ್ಯ ವಲಯದಲ್ಲಿರುವ ಸಾಮಾನ್ಯ ಸದಸ್ಯ. ಈ ಸಮುದಾಯವನ್ನು ಆಕಾಶಗಂಗೆ ಎಂದು ನೀವು ಕರೆಯುತ್ತೀರಿ. ಒಂದು ತೆಳು ಬೆಳಕಿನ ಹೊಳೆ ದಕ್ಷಿಣದಿಂದ ಉತ್ತರಕ್ಕೆ ಆಕಾಶದಲ್ಲಿ ಹರಿಯುತ್ತಿರುವಂತೆ ಕಾಣುತ್ತೀರಿ.

ಕೆಂಪು ರಾಕ್ಷಸ ಆವರ್ತಿಸುತ್ತಿದೆ, ಜೊತೆಯಲ್ಲಿಯೇ ಆಕಾಶದಲ್ಲಿ, ಅದೆಲ್ಲಿಗೊ ಧಾವಿಸುತ್ತಿದೆ. ಈ ಆವರ್ತನೆಯ ವೇಗವೇರಿದಂತೆ ಪುನಃ ನಾವೆಲ್ಲರೂ ಹತ್ತಿರ ಹತ್ತಿರವಾಗತೊಡಗಿದೆವು. ಕಾವು ಏರಲಾರಂಭಿಸಿತು. ನಕ್ಷತ್ರದ ಬಣ್ಣ ಕೆಂಪಿನಿಂದ ಕ್ರಮವಾಗಿ ಕಿತ್ತಳೆ, ಅರಿಸಿನ, ಹಸುರು, ನೀಲಿ, ನೇರಿಳೆ. ನೀಲ ನೇರಿಳೆ ಬಣ್ಣಕ್ಕೆ ಪರಿವರ್ತನೆಗೊಂಡಿತು. ಜೊತೆಯಲ್ಲಿಯೇ ನಕ್ಷತ್ರದ ಗಾತ್ರ ಕುಗ್ಗಲಾರಂಭಿಸಿತು. ಕೆಂಪು ರಾಕ್ಷಸನೀಗ ಬಿಳಿಯ ಸಾಮಾನ್ಯ ದರ್ಜೆಯ (ನಿಮ್ಮ ಸೂರ್ಯನಂತಹ) ನಕ್ಷತ್ರವಾದನು. ಸೂರ್ಯ ಚಿಕ್ಕವನೆಂದೇನೂ ಭಾವಿಸಬೇಡಿ-ನೀವಿರುವ ಭೂಮಿಯಂತಹ ೧೦೦೦,೦೦೦ ಗೋಳಗಳನ್ನು ಸೂರ್ಯನಲ್ಲಿ ಸುಲಭವಾಗಿ ತುಂಬಬಹುದು! ಸಾಮಾನ್ಯ

ನಕ್ಷತ್ರದ ಗಾತ್ರವೇ ಇಷ್ಟು ದೊಡ್ಡದು ಆದರೂ ಗುಡ್ಡೆಗೆ ಗುಡ್ಡೆ ಅಡ್ಡವಷ್ಟೆ.

ನಾನಿರುವ ನಕ್ಷತ್ರ ಬೆಳಕು, ಉಷ್ಣ ಮುಂತಾದ ಚೈತನ್ಯದ ವಿವಿಧ ರೂಪಗಳನ್ನು ನಿರಂತರವಾಗಿ ಅಖಂಡವಾಗಿ ಬಲು ದೀರ್ಘಕಾಲ ಆಕಾಶಕ್ಕೆ ಚೆಲ್ಲುತ್ತಿತ್ತು. ಇಂತಹ ವಿವಿಧ ಗಾತ್ರಗಳ ವಿವಿಧ ವರ್ಗಗಳ ನಕ್ಷತ್ರಮಾಲೆಯನ್ನೇ ಆಕಾಶ ಧರಿಸಿದ್ದರೂ, ನಕ್ಷತ್ರಗಳ ಹೊಳೆಯೇ ಆಕಾಶದಲ್ಲಿ ಹರಿದಿದ್ದರೂ ಆಕಾಶದ ಕತ್ತಲೆ ಮತ್ತು ಶೈತ್ಯ ನಿವಾರಿಸಲಾಗದಷ್ಟಿತ್ತು.

ನಕ್ಷತ್ರ ಗರ್ಭವೊಂದು ದೊಡ್ಡ ಕುಲುಮೆ. ಅದರೊಳಗೆ ಅತಿಯಾದ ಒತ್ತಡದಿಂದ, ಉಷ್ಣದಿಂದ ಹೈಡ್ರೋಜನ್ ಅಣುಗಳು ಜರ್ಝರಿತವಾಗಿ ರೂಪಾಂತರಗೊಳ್ಳುವುವು. ಈ ಪರಿವರ್ತನೆಯಲ್ಲಿ ಅವು ಉಷ್ಣ, ಬೆಳಕು ಮುಂತಾದ ಚೈತನ್ಯದ ವಿವಿಧ ರೂಪಗಳನ್ನು ಹೊರಸೂಸುವುವು. ಅಸಂಖ್ಯಾತ ಹೈಡ್ರೋಜನ್ ಬಾಂಬುಗಳು ನಿರಂತರ ಸ್ಫೋಟಿಸುತ್ತಿರುವ ದೊಡ್ಡ 'ಒಲೆ' ಈ ಕುಲುಮೆ. ಇದಕ್ಕೆ ಸುರಿಯುವ 'ತುಪ್ಪ' ನನ್ನಂತಹ ಅಣುಗಳು. ನಕ್ಷತ್ರದ ಯಾವ ಭಾಗದಲ್ಲಿ ನಾವಿದ್ದರೂ, ನಾವೆಲ್ಲರೂ ಒಂದಲ್ಲ ಒಂದು ದಿವಸ ಈ ಅಗ್ನಿಗೆ ಆಹುತಿಯಾಗಲೇಬೇಕು. ಬೆಳಕಾಗಿ, ಕಾವಾಗಿ ರೂಪಾಂತರಗೊಳ್ಳಲೇಬೇಕು. ಹೀಲಿಯಂ ಮುಂತಾದ 'ಬೂದಿ'ಯಾಗಿ ಅಲ್ಲಿಯೇ ಉಳಿಯಲೂ ಬೇಕು. ಆದರೆ ಎಂದು ಯಾರ ಸರತಿ ಎನ್ನುವುದು ತಿಳಿಯಲಾರದಂತಹ ಗೂಢ ವಿಚಾರ.

'ಮಾರಿಗೌತಣವಾಯ್ತು'

ನಾನಿದ್ದ ನಕ್ಷತ್ರ ವಿಶ್ವದ ಪ್ರಾಯದ ದೃಷ್ಟಿಯಿಂದ ಒಂದು ತರುಣ ನಕ್ಷತ್ರ. ಮನುಷ್ಯರ ಪ್ರಾಯದ ಅಳತೆಯ ಮಿತಿಯಲ್ಲಿ ೧೫ರ ಹರೆಯ. ಅಷ್ಟರಲ್ಲಿಯೇ ಇದರ ಪ್ರಕಾಶ, ಶಾಖ, ಪ್ರತಾಪ ಅದೆಷ್ಟೋ. ವಿಶ್ವದಲ್ಲಿ ತನ್ನಷ್ಟು ಪ್ರಬಲ ನಕ್ಷತ್ರ ಇಲ್ಲವೆನ್ನುವಂತಹ ಅಹಂಕಾರದಿಂದ ಇದು ವರ್ತಿಸುತ್ತಿತ್ತು. ಕಾರಣವೂ ಇಲ್ಲದಿಲ್ಲ–ಆಕಾಶದಲ್ಲಿ ಎಲ್ಲಿ ಯಾವ ದಿಕ್ಕಿಗೆ ಎಷ್ಟು ವೇಗದಿಂದ ಚಲಿಸಿದರೂ ಇದರ ಎದುರಾದ ನಕ್ಷತ್ರ ಇನ್ನೊಂದಿಲ್ಲ. ಅಲ್ಲಿ ಇಲ್ಲಿ ದೂರದಲ್ಲಿ ಒಂದೆರಡು ನಕ್ಷತ್ರ ಅಪೂರ್ವವಾಗಿ ಕಂಡರೆ ಅವು ಪಲಾಯನ ಸೂತ್ರ ಸಾಹಸ ಪ್ರದರ್ಶನದ ಉತ್ತಮ ರೂಪವೆಂದು ತಿಳಿದು ವರ್ತಿಸಿದುದರಿಂದ ಈ ಭಾರ್ಗವ ರಾಮನೆದುರು ನಿಲ್ಲುವವರಿಲ್ಲವಾಯಿತು.

ಆಕಾಶದ ಅನಂತ ವಿಸ್ತಾರದಲ್ಲಿ ಎರಡು ನಕ್ಷತ್ರ ಪರಸ್ಪರ ಸಮೀಪವಾಗುವುದು ಅತಿ ವಿರಳವಾದ ಘಟನೆ. ವಿಶಾಲವಾದ ಒಂದು ದೇಶದ ನಾಲ್ಕು ಕೊನೆಗಳಲ್ಲಿ ಒಂದೊಂದು ಇರುವೆಯನ್ನು ಸ್ವಚ್ಛಂದವಾಗಿ ಹರಿಯಲು ಬಿಟ್ಟರೆ ಅವು ಪರಸ್ಪರ ಸಂಧಿಸುವುದು ಹೇಗೆ ಅಸಾಧ್ಯವೆನ್ನಿಸುವಷ್ಟು ವಿರಳವೋ ಹಾಗೆ.

ಅತಿ ಅಹಂಕಾರ ಯಾರಿಗೂ ಸಲ್ಲದು. ಒಂದು ದಿನ ಅಕಸ್ಮಾತ್ತಾಗಿ ಇನ್ನೊಂದು ಸಮಗಾತ್ರದ ನಕ್ಷತ್ರ, ನಾನಿದ್ದ ನಕ್ಷತ್ರದ ಸಮೀಪ ಬಂದಿತು. ಆಕಾಶರಂಗದ ಈ ಯುದ್ಧ ಅತಿ ಭಯಂಕರ. ಒಂದು ನಕ್ಷತ್ರ ಇನ್ನೊಂದನ್ನು ತನ್ನಡೆಗೆ ಸೆಳೆಯಿತು. ಅವೆರಡೂ ಒಂದೇ ಗೆರೆಯ ಮೇಲೆ ಚಲಿಸುತ್ತಿದ್ದಿದ್ದರೆ ಎರಡು ಜಟ್ಟಿಗಳು ಪಟ್ಟು ಹಿಡಿದು ಒಬ್ಬರ ಮೇಲೊಬ್ಬರು ಬೀಳುವಂತೆ ಎಗರುತ್ತಿದ್ದರು. ಆದರೆ ಒಂದೊಂದೂ ಬೇರೆ ಬೇರೆ ದಾರಿಯಲ್ಲಿ ಸಾಗುತ್ತಿದ್ದಾಗ ಅವು ಅಪಾಯದ ಮಿತಿಯೊಳಗೆ ಬಂದುದರಿಂದ ಈ ಆಕರ್ಷಣೆ ಒಂದು ರೀತಿಯ ಪರಾಕರ್ಷಣೆ, ಒಂದೊಂದನ್ನೂ ಬೇರೆ



ಆವರ್ತಿಸುತ್ತಿರುವ ಎರಡು ಮುದ್ದೆಗಳು ಸ್ಪರ್ಶಿಸುವಲ್ಲಿ (A) ಗ್ರಹ ಉಂಟಾಗುವ ಕ್ರಮ

ಬೇರೆ ದಾರಿಗಳಿಗೆ ಉಚ್ಚಾಟನೆ ಮಾಡುವ ಮಹಾಶಕ್ತಿಯಾಯಿತು. ಅದೇ ಸಮಯದಲ್ಲಿ ಅವುಗಳ ಸುತ್ತಲೂ ಅನಿಲದ ಒಂದು ತೆಳು ಮತ್ತು ವಿಶಾಲವಾದ ಮುಸುಕು ಅಥವಾ ಅವಕುಂಠನ ಉತ್ಪನ್ನವಾಯಿತು. ಹಿಮ ಮುಸುಕಿದ ರಾತ್ರಿ ನೀವೊಂದು ಪೆಟ್ರೋಮ್ಯಾಕ್ಸ ದೀಪ ಉರಿಸಿಟ್ಟು ನೋಡಿ–ಅದರ ಸುತ್ತಲೂ ಬೆಳಕಿನ ಒಂದು ಹೊದಿಕೆ ಕವಿದಂತೆ ಕಾಣುವುದು. ನನ್ನ ನಕ್ಷತ್ರ ಈ ನೂತನ ಅವಕುಂಠನದ ಸಮೇತ ಆವರ್ತಿಸಲು ತೊಡಗಿತು.

ಆವರ್ತಿಸುತ್ತಿರುವ ಹೊದಿಕೆ, ಅದರೊಳಗೆ ನಿರಂತರ ಚಲನೆಯಲ್ಲಿರುವ ಅನಂತ ಕಣಗಳು ಇಂತಹ ಕಣಗಳು ಅಲ್ಲಲ್ಲಿ ಒಂದುಗೂಡಿ ಕಣಗಳ ಮುದ್ದೆಗಳಾದುವು. ನೆಬ್ಯುಲ್ಯಾದಿಂದ ನಕ್ಷತ್ರ ಉಂಟಾದ ಚಿತ್ರವನ್ನು ನೀವಿಲ್ಲಿ ಸ್ಮರಿಸಬಹುದು. ಅವಕುಂಠನವೀಗ ನಕ್ಷತ್ರದ ಸುತ್ತಲೂ ಒಂದರ ಹಿಂದೆ ಇನ್ನೊಂದು ವಿವಿಧ ದೂರಗಳಲ್ಲಿ ಸುತ್ತುವ ಅಸಂಖ್ಯಾತ ಮುದ್ದೆಗಳಾಗಿ ರೂಪಾಂತರವಾಯಿತು. ಪ್ರತಿ ಮುದ್ದೆಯೂ ತನ್ನ ಸುತ್ತಲೂ ಸಹ ಆವರ್ತಿಸುತ್ತಿತ್ತು ಹೀಗೆ ಸುತ್ತುತ್ತಿದ್ದ ಒಂದು ಮುದ್ದೆ ಮತ್ತು ಅದರ ಎಡ ಅಥವಾ ಬಲಬದಿಯ ಇನ್ನೊಂದು ಮುದ್ದೆ ಇವು ಸ್ಪರ್ಶಿಸಿರುವ ಪ್ರದೇಶದಲ್ಲಿ ಕಣಗಳು ನಿಬಿಡವಾಗಿ ಸೇರತೊಡಗಿದುವು. ಇಂತಹ ಕೇಂದ್ರಗಳು ತೆಳು ಹೊದಿಕೆಯ ಕಣಗಳನ್ನು ಕ್ರಮೇಣ ತಮ್ಮೆಡೆಗೆ ಆಕರ್ಷಿಸಿ ನಿಬಿಡವಾಗಿ ಬೆಳೆದು ದೊಡ್ಡದಾದುವು. ಕಾಲಾಂತರದಲ್ಲಿ ಹೊದಿಕೆ ನಶಿಸಿಹೋಯಿತು, ನಕ್ಷತ್ರದಿಂದ ವಿವಿಧ ದೂರಗಳಲ್ಲಿ ಬೆಳೆದು ಆವರ್ತಿಸುತ್ತ, ಪರಿಭ್ರಮಿಸುತ್ತಿದ್ದ ಕಣಗಳ ಮೊತ್ತಗಳು ಗ್ರಹಗಳಾದುವು. ನಕ್ಷತ್ರದ ಗಾತ್ರದೊಂದಿಗೆ ಹೋಲಿಸಿದಾಗ ಇವೆಲ್ಲವೂ ಬಲು ಕಿರಿಯವು. ಆದರೂ ಅವುಗಳ ಜನನ ನಕ್ಷತ್ರದ ವಿಕಾಸದಲ್ಲಿ ಒಂದು ಪ್ರಮುಖ ಸೋಪಾನ. ನೀವಿರುವ ಭೂಮಿ, ನಿಮ್ಮ ರಾತ್ರಿಯ ಆಕಾಶಕ್ಕೆ ಸೌಂದರ್ಯ ನೀಡುವ ಶುಕ್ರ, ಮಂಗಳ, ಗುರು ಮುಂತಾದುವು ನಿಮ್ಮ ನಕ್ಷತ್ರವಾದ ಸೂರ್ಯನಿಗೆ ಈ ರೀತಿಯಲ್ಲಿ ಜನಿಸಿದ ಮರಿಗಳು.

'ಅನಾದಿ ಬಸುರೊಳಗನಂತ ಸತ್ತ್ವದ ಹೊತ್ತು'

"ಹಾಗಾದರೆ ವಿಶ್ವದಲ್ಲಿ ಎಷ್ಟು ನಕ್ಷತ್ರಗಳಿಗೆ ಈ ರೀತಿ ಗ್ರಹವಲಯಗಳಿರಬಹುದು ? ಅವುಗಳಲ್ಲಿ ನಮ್ಮಂತೆಯೇ ಬುದ್ಧಿವಂತ ಜೀವಿಗಳ ವಿಕಾಸವಾಗಿರಬಹುದೇ ಅಥವಾ ವಿಶ್ವದಲ್ಲಿ ನಾವು ಏಕಾಂಗಿಗಳೇ?" ಎಂದು ನಿಮಗೆ ಪ್ರಶ್ನೆ ಮಾಡುವುದು ಸಹಜ.

ವಿಶ್ವದ ಆಳದಲ್ಲಿ, ಅನಂತ ಕಾಲದ ಪರಿಮಿತಿಯಲ್ಲಿ ಸುಮಾರು ೧೦^{೨೦} [೧ನ್ನು ಬರೆದು ಬಲಕ್ಕೆ ೨೦ ಸೊನ್ನೆ ಬರೆದಷ್ಟು ದೊಡ್ಡ ಸಂಖ್ಯೆ] ನಕ್ಷತ್ರಗಳಿಗೆ ಮೇಲೆ ನಾನು ಹೇಳಿದ ಅಪೂರ್ವದ ಸಂಘರ್ಷಣೆ ಸಂಭವಿಸಿ ಗ್ರಹವಲಯಗಳು ಜನಿಸಿರಬಹುದು. ಇವುಗಳಲ್ಲಿ ಕೆಲವಲ್ಲಾದರೂ ಬುದ್ಧಿ ಜೀವಿಗಳ ವಿಕಾಸವಾಗಿರುವುದು ಅಸಂಭವನೀಯವಲ್ಲ. ಆಯಾ 'ಗ್ರಹದ' ಅದರ ನಕ್ಷತ್ರದ ಸನ್ನಿವೇಶ, ಆವರಣಗಳನ್ನು ಅನುಸರಿಸಿ ಅಲ್ಲಿನ ಜೀವ ವಿಕಾಸಗೊಂಡಿರುವುದು. ಭೂಮಿಯ ಮೇಲಿರುವಂತಹ ಮನುಷ್ಯರನ್ನೇ ಸಮುದ್ರದಲ್ಲಿರುವಂತಹ ಮೀನನ್ನೇ, ಮೇಲೆ ಹಾರುವ ಹಕ್ಕಿಗಳನ್ನೇ ಇತರ ನಕ್ಷತ್ರಗಳ ಗ್ರಹಗಳಲ್ಲಿ ನಿರೀಕ್ಷಿಸಬೇಡಿ. ಅವುಗಳಲ್ಲಿ ಕೆಲವು ಗ್ರಹಗಳಲ್ಲಿಯಾದರೂ ನಿಮಗಿಂತ ಶಾಸ್ತ್ರ, ತಂತ್ರ ಇವುಗಳಲ್ಲಿ ಬಹಳ ಮುಂದುವರಿದಿರುವ ಬುದ್ಧಿವಂತ ಜೀವಿಗಳಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಅವರೊಡನೆ ನಿಮಗೆ ಸಂಪರ್ಕ ಬೆಳೆಸಲಿರುವ ಒಂದೇ ಒಂದು ಸಾಧನ ಸೆಕೆಂಡಿಗೆ ೧,೮೬,೦೦೦ ಮೈಲು ವೇಗದಲ್ಲಿ ಧಾವಿಸುವ ರೇಡಿಯೋ ತರಂಗಗಳ ಪ್ರಸಾರ. ಇದೇ ರೀತಿ ಅವರೂ ನಿಮ್ಮೆಡೆಗೆ (ನೀವಿದ್ದೀರೆಂದು ತಿಳಿದೋ ತಿಳಿಯದೆಯೋ, ಅಂತೂ ಆಕಾಶದ ಎಲ್ಲೆಡೆಗೂ) ರೇಡಿಯೋ ತರಂಗ ಪ್ರಸರಿಸಬಹುದು, ಎಂದು ನೀವು ಈ ತರಂಗಗಳನ್ನು ಸೆರೆಹಿಡಿದು ಸಂಗ್ರಹಿಸಿ, ವಿಶ್ಲೇಷಿಸಿ ಅದರ ಭಾಷೆಯನ್ನು ಅಥವಾ ಸಂದೇಶವನ್ನು ಅರ್ಥ ಮಾಡಲು ಶಕ್ತರಾಗುವಿರೋ ಅಂದು ನಿಜವಾಗಿಯೂ ನೀವು ವಿಶ್ವಜೀವಿಗಳಾಗುತ್ತೀರಿ. ಆದರೆ ಒಂದು ವಿಚಾರ ಆಕಾಶದ ಆಳದಲ್ಲಿ ನಿಮ್ಮಲ್ಲಿಂದ ಪ್ರಸಾರವಾದ ತರಂಗ ನೆರೆನಕ್ಷತ್ರದ ಗ್ರಹವನ್ನು ತಲುಪಲು ಎಷ್ಟೋ ವರ್ಷಗಳೇ ಬೇಕು. ಆದ್ದರಿಂದ "ವಿಶ್ವಸಾರಿಗೆ ಸಂಪರ್ಕ"ದಲ್ಲಿ ನಿಮ್ಮ ನೂರುವರ್ಷಗಳ ಅಂದರೆ ಒಂದು ತಲೆಮಾರಿನ ಆಯುಷ್ಯವನ್ನು ಒಂದು ಮಾನವಾಗಿಟ್ಟುಕೊಳ್ಳುವುದು ಒಳ್ಳೆಯದು.

'ವಿನಗ್ನಿ ಗೋಳಗಳು ವಿನಂತರಾಳಗಳು ?

ನಾನಂತೂ ನಕ್ಷತ್ರದೊಳಗಿನ ನಿರಂತರ ಕೋಲಾಹಲದಲ್ಲಿ ಸದಾ ಭಾಗಿಯಾಗಿದ್ದೆ. ಇಲ್ಲಿ ವಿಶ್ರಾಂತಿಯೆಂದರೆ ಕೇಂದ್ರಕುಲುಮೆಗೆ ಆಹ್ವಾನ ವಿತ್ತಂತೆ. ಇದರಿಂದ ನನ್ನ ರೂಪನಾಶವಾಗುವುದು ನಿಶ್ಚಯ. ಅಂತೂ ನಾನು ಕುಲುಮೆಗೆ ಎರೆದ 'ತುಪ್ಪ'ವಾಗಲಿಲ್ಲ. ಕುಲುಮೆಯೊಂದು ಬಕಾಸುರ. ಯುಗ ಯುಗಾಂತರ ಅದು ಉರಿಯಿತು. ಕ್ರಮೇಣ ಅದರ ದಾಹವೇರುತ್ತಿತ್ತೇ ವಿನಾ ಕಡಿಮೆಯಾಗುತ್ತಿರಲಿಲ್ಲ—ದುಷ್ಟ ಶಕ್ತಿಗಳಿಗೆ ಅವೇ ಆಹಾರವಾಗಿ ವರ್ಧನೆಯಂತೆ. ನಕ್ಷತ್ರದ 'ತುಪ್ಪ'ವಾದ ಹೈಡ್ರೊಜನ್ ಪೂರೈಕೆ ಕಡಿಮೆಯಾಗುತಿತ್ತು. ಕುಳಿತು ತಿನ್ನುವವನಿಗೆ ಕೊಪ್ಪರಿಗೆ ಹೊನ್ನು ಸಾಕೇ ? ಒಂದು ಹುಲ್ಲುಮೆದೆಯ ನಡುವಿನಿಂದ ಹುಲ್ಲುಕಂತೆಗಳನ್ನು ಬಗಿದೆಳೆದು ಬಿಟ್ಟರೆ ಏನಾದೀತು ? ಅದು ಎಲ್ಲ ದಿಕ್ಕಿನಿಂದಲೂ ಒಳಗೊಳಗೆ ಕುಸಿದು ಕುಗ್ಗುವುದು. ಹೀಗೆಯೇ ಆಯಿತು ನನ್ನ ನಕ್ಷತ್ರದ ಪರಿಸ್ಥಿತಿ. ಕೇಂದ್ರ ಕುಲುಮೆಯ ಚೈತನ್ಯವಿಸ್ತರಣೆಯಿಂದ ನಕ್ಷತ್ರ ಗಾತ್ರ ಕುಗ್ಗದೇ ಅದರ ಭಾರವನ್ನು ಅದೇ ತಡೆದುಕೊಂಡು ನಿಂತಿತ್ತು. ಆದರೆ ಯಾವಾಗ ಕುಲುಮೆಗೆ ದೊರೆಯುವ ಹವಿಸ್ಸು ಕಡಿಮೆಯಾಯಿತೋ ಆಗ ಅದರ ಚೈತನ್ಯ ವಿಸರಣೆ ಕಡಿಮೆಯಾಯಿತು. ಇದರಿಂದ ನಕ್ಷತ್ರದ ಹೊರವನ್ನು ಭಾರವನ್ನು ಅದಕ್ಕೆ ತಡೆಯಲಾಗಲಿಲ್ಲ. ನಕ್ಷತ್ರವು ಸುತ್ತಲೂ ಕೇಂದ್ರದೆಡೆ ಕುಸಿಯಿತು. ಇದೊಂದು ಮಹಾ ಅಂತಃಸ್ಫೋಟ ದಿವಾಳಿ ತೆಗೆಯುವ ಮುನ್ನ ಇದ್ದುದನ್ನೆಲ್ಲ ಒರಗಿ ಮೆರೆಯುವಂತೆ.

ಈಗ ನನ್ನ ನಕ್ಷತ್ರದ ಗಾತ್ರ ಬಹಳ ಸಂಕೋಚಗೊಂಡಿದೆ. ಆದರೆ ಇದರಿಂದ ಹೊರ ಹೊಮ್ಮುವ ಬೆಳಕು, ಉಷ್ಣ ಮುಂತಾದ ಚೈತನ್ಯರೂಪಗಳು ಇದರ ಗಾತ್ರಕ್ಕೆ ಮೀರಿ ಅದೆಷ್ಟೋ ಪಾಲು ಹೆಚ್ಚು ಇವೆ. ಇಂತಹ ನಕ್ಷತ್ರವನ್ನು ಬೇಕಾದರೆ ಬಿಳಿಯ ಗುಜ್ಜಾರಿ ಅಥವಾ ಶ್ವೇತ ಕುಬ್ಜನೆಂದು ಕರೆಯಬಹುದು. ಹಣ್ಣು ಮುದುಕನಾದರೂ ನಾಲಿಗೆಯ ಹರಿತ ಕಡಿಮೆಯಾಗದವನಂತೆ ಈ ಶ್ವೇತ ಕುಬ್ಜದ ಅವಸ್ಥೆ. ಆದರೆ ಈ ರೀತಿಯಾದರೂ ಎಷ್ಟು ಕಾಲ ಮುಂದುವರಿಯಬಹುದು? ವಿನಾಶ ಪಥದಲ್ಲಿ ಜಾರಿದವನಿಗೆ ತಡೆಯೆಲ್ಲಿ, ಕೊನೆಯಲ್ಲಿ? ಪುನಃ ಇನ್ನೊಂದು ಭಾರೀ ಅಂತಃಸ್ಫೋಟ. ನಕ್ಷತ್ರ ಗಾತ್ರ ಮತ್ತಷ್ಟು ಕುಗ್ಗಿತು. ಇನ್ನೇನು ಈ ನಕ್ಷತ್ರ ತನ್ನ 'ಕೊನೆಯ ಹೆಜ್ಜೆ' ಇಡಬೇಕು. ಆಗ ಸಾಯುವವನು ಭೀಕರವಾಗಿ ಕಂಪಿಸಿ, ಧುಮಾಡಿಸಿ ಒದ್ದಾಡುವಂತೆ ಈ ನಕ್ಷತ್ರ ಕಂಪಿಸಿತು. ಭಯಂಕರವಾಗಿ ಆಸ್ಫೋಟಿಸಿತು. ಅಗ್ನಿ ಜ್ವಾಲೆ ಪ್ರಜ್ವಲಿಸಿತು. ನಕ್ಷತ್ರದ ಸಿಡಿದ ಭಾಗಗಳು ಆಕಾಶದಲ್ಲಿ ತೂರಾಡಿದವು. ಈ ಹೊತ್ತಿಗೆ ಅದು ತನ್ನ ಮರಿಗಳಾದ ಗ್ರಹಗಳನ್ನು ನುಂಗಿ ನೀರುಕುಡಿದಿದ್ದಿತು. ಹೀಗೆ ನನ್ನ ನಕ್ಷತ್ರ ಆತ್ಮಾಹುತಿ ಹರಾಕಿರಿ ಮಾಡಿಕೊಂಡು ನಾಶವಾಯಿತು. ಹೇಡಿಗಳ ಕ್ಷಣಕ್ಷಣ ಸಾವಿಗಿಂತ ಶೌರ್ಯವಂತರ ಆತ್ಮಾರ್ಪಣೆಯೇ ಲೇಸು ಎಂಬಂತೆ.

ಅತಿ ದೂರದ ಬುದ್ಧಿವಂತ ಜೀವಿಯೊಬ್ಬನು ಈ ಆತ್ಮಾಹುತಿಯನ್ನು ಸಾವಿರಾರು ವರ್ಷಗಳ ಮೇಲೆ ನೋಡಿ ಬೆರಗಾದನು. ಇದರ ಬೆಳಕು ಅವನಿಗೆ ತಲುಪಲು ಅಷ್ಟು ವರ್ಷ ಬೇಕಾದುವು. ಇಂಥ ನಕ್ಷತ್ರವನ್ನು ಅವನು ಮಹಾನೋವಾ ಎಂದು ಕರೆದನು. ಆದರೆ ಅವನು ಹಾಗೆ ಕರೆಯುವಾಗ ನಕ್ಷತ್ರವೆಲ್ಲಿದೆ? ಘಟನೆ ಸಂಭವಿಸಿದ್ದೆಂದೋ, ಇವನು ಕಂಡದ್ದೆಂದೋ! ಅವನ 'ಈಗ' ವಿಶ್ವದಲ್ಲಿ 'ಪುರಾತನ'

ನಾನು ಈ ಮಹಾನೋವಾದಿಂದ ಬಿಡುಗಡೆ ಹೊಂದಿ ವಿಶ್ವದ ವಿಶಾಲ ವಿರಳ ಪ್ರದೇಶದಲ್ಲಿ ಗೊತ್ತು ಗುರಿಯಿಲ್ಲದೆ ಅಲೆಯುವ ವಿಶ್ವ ಸಂಚಾರಿಯಾಗಿದ್ದೇನೆ.

ನಾನು ಬೇರೆ ಹಲವಾರು ನಕ್ಷತ್ರಗಳ ಸಾವನ್ನೂ ಕಂಡಿದ್ದೇನೆ. ಅವು ಉರಿದುರಿದು ಕ್ರಮೇಣ ತಣ್ಣಗಾಗುವ ಬೆಂಕಿಯಂತೆ. ತಣ್ಣಗಾದ ಮೇಲೆ ಅವು ನಿಮ್ಮ ಭೂಮಿಯಂತೆ ಕಲ್ಲು ಮಣ್ಣಿನ ಹೆಂಟೆಗಳು. ಇಂಥವು ವಿಶ್ವದಲ್ಲಿ ಹಲವಾರು ಇವೆ. ಇವು ಸಮಾಧಿಯಾಗದ ನಕ್ಷತ್ರಗಳ ಕಳೇಬರಗಳು.

'ನಿರಂತರ ಸೃಷ್ಟಿ, ನಿರಂತರ ಚಲನೆ'

ಒಂದುಕಡೆ ಸಾಯುವವರ, ಆತ್ಮಾಹುತಿಮಾಡಿಕೊಳ್ಳುವವರ ಆರ್ತನಾದವಿದ್ದರೆ ಇನ್ನೊಂದು ಕಡೆ ನೆಬ್ಯುಲಾದಿಂದ ಆಗ ತಾನೇ ಉರುಳಿ ಆಕಾಶದಲ್ಲಿ ತೇಲುತ್ತಿರುವ ನವನಕ್ಷತ್ರಗಳ ಮಂದಹಾಸ. ಒಂದು ನಕ್ಷತ್ರ ನಟ ತೆರೆಯ ಹಿಂದೆ ಮಾಯವಾಗುವ ಇನ್ನೆರಡು ನೂತನ ನಟರು ಅಲ್ಲಿ.

ಹೀಗೆ ನಡೆದಿದೆ ವಿಶ್ವನಾಟಕ ಚಕ್ರ.



ಮೊದಲೇ ತಿಳಿದಿದ್ದರೆ....

— ಶ್ರೀನಿವಾಸ ಕುಲಕರ್ಣಿ

ಇದು ಮೊದಲೇ ತಿಳಿದಿದ್ದರೆ ಎಷ್ಟು ಚೆನ್ನಾಗಿತ್ತು, ಅಂತಾ ಈಗ ಅನಸ್ತಾ ಇದೆ. ಅದೇನು ಅಂತೀರಾ? ಅದೇ ಸ್ವಾಮಿ 'ರೆ' ರಾಜ್ಯದ ವಿಷಯ. ಅದೇನು ರೇರ್ ಅಲ್ಲಬಿಡಿ ಎಲ್ಲಾರ ಅನುಭವದ ಮಾತು. ಒಂದು ವಿಧದಲ್ಲಿ ನಾವೆಲ್ಲ ಈ 'ರೇ' ರಾಜ್ಯದ ವಿಹಾರಿಗಳೇ.

ನೋಡಿ, ಗೊತ್ತಿದ್ದರೆ, ತಿಳಿದಿದ್ದರೆ, ಆಗಿದ್ದರೆ, ಹೋಗಿದ್ದರೆ, ಎಂಬುವು ಆಗಾಗ ಈ ಸಾಮ್ರಾಜ್ಯದಲ್ಲಿ ಬಳಕೆಯಾಗುವ ಶಬ್ದಗಳು. ಅಲ್ಲಿ ಬೇಕಾದ ಹಾಗೆ ಬೇಕಾದದ್ದನ್ನು ಹೊರಳಿಸಿಕೊಳ್ಳಲಿಕ್ಕೆ ಸ್ಟೇರಿಂಗ್ ಇದೆ

ನನ್ನೊಬ್ಬ ಗೆಳೆಯ ನಾಲ್ಕೈದು ಸಲ ಬಿ.ಎ. ಪರೀಕ್ಷೆಗೆ ಡಿಕ್ಕಿ ಹೊಡೆದು ಹಣೆ ಜಜ್ಜಿಕೊಂಡರೂ ಅವನ 'ರೇ' ಗಳಿಗೆ ಬರಗಾಲವೇ ಬರಲಿಲ್ಲ. ಮೊದಲನೇ ಸಲ ನಾಪಾಸಾದಾಗ ಹೇಳಿದಾ 'ನನ್ನ ಮೈಯಲ್ಲಿ ಆರಾಮ ಇದ್ದಿದ್ದರೆ ಫಸ್ಟ್‌ಕ್ಲಾಸ್ ಬರ್ತಿದ್ದೆ.' ಎರಡು—ಮೂರು... ನಾಲ್ಕು ರೇ ಗಳು ಉರುಳಿದವು. ಐದನೇ ಸಲ ಡ್ರಾಪ್ ತೆಗೆದುಕೊಂಡ ಆ ಸಲದ ಪರೀಕ್ಷೆಯ



ಪೇಪರ ಇಷ್ಟು ಈಜಿ ಇರತಾವೆ ಅಂತ ಮೊದಲೇ ತಿಳಿದಿದ್ದರೆ ಡಿಸ್ಟಿಂಕ್ಷನ್ ಹೊಡೆಯಬಹುದಿತ್ತು.

ಪ್ರಶ್ನೆ ಪತ್ರಿಕೆಗಳನ್ನು ನೋಡಿ, ಜಿಗಿದಾಡುತ್ತ ಬಂದು, 'ಓಹ. ಇಷ್ಟು ಪೇಪರ್ ಈಜಿ ಇರತಾವೆ ಅಂತಾ ಮೊದಲೇ ತಿಳಿದಿದ್ದರೆ, ಏನು ಅಂತೀರಾ ಡಿಸ್ಟಿಂಕ್ಶನ್ ಹೊಡೆಯಬಹುದಿತ್ತು. ಹೀಗೇ ಅವನ ಡಿಗ್ರಿ ಅವಾಂತರ ಬರೀ ರೇ ದಲ್ಲಿಯೇ ಮುಕ್ತಾಯವಾಯಿತು ಅನ್ನಿ.

ಈಗ ನನ್ನ ರೇ ರಾಜ್ಯದ ವಿಷಯ ಏನೂ ಅಂತೀರಾ? ಅದೇ ಸ್ವಾಮಿ ಮೊದಲೇ ತಿಳಿದಿದ್ದರೆ... ಅಂದ ಹಾಗೆ ನನ್ನವಳೇನಾದರೂ ಇದರ ಸುಳುಹು ಹತ್ತೀತು. ಛೇ, ಛೇ ನಾನೇನು ಅಂಥಾ ಎಚ್. ಪಿ. ಅಲ್ಲಾ ಬಿಡಿ. ಗೊತ್ತಾದ್ರೆ ಆಗ್ಲಿ. ಹಾಗೆ ಕೇಳಿದರೆ ಇದು ಐಡಿಯಲ್ ಹಸ್ಬಂಡನ ಕ್ವಾಲಿಫಿಕೇಶನ್

ಈಗಲೂ ಅವಳೆದುರೇ ಹೇಳ್ತೀನಿಬಿಡಿ. ಮದುವೆಯಾಗದೆ ಇದಿದ್ದರೆ ಎಷ್ಟು ಚೆನ್ನಾಗಿತ್ತು ಅಂತಾ. ಅದೇನೋ ನಿಜ. ಮದುವೆ ಆದ ಮೇಲೆ ಎಲ್ಲಾರೂ ಹೇಳೊ ಮಾತು ಇದು. ಮೂರನೇ ದರ್ಜೆಯ ಡಬ್ಬಿ ಏರಿದ ಹಾಗೆ. ಒಳಗಡೆ ಕುಳಿತವರು ಹತ್ತಬೇಡಿ, ಇಲ್ಲಿ ಸ್ಥಳ ಇಲ್ಲ ಅನ್ನೋದು ಹೊರಗಡೆ ಇದ್ದೋರು ಅದರಲ್ಲೇ ಸ್ವಲ್ಪ ಸ್ಥಳ ಬಿಡಿ ಅನ್ನೋದು ಒಂದು ವೇಳೆ ಅವರಿಗೂ ಅಲ್ಲಿ ಸ್ಥಳ ಸಿಕ್ಕರೆ ಸಾಕು. ಒಳಗಿದ್ದವರ ಅಲಾಪವನ್ನೇ ಮುಂದುವರಿಸುತ್ತಾರಲ್ಲ ಹಾಗೆ.

ಹೇಗೋ ನನ್ನ ಮದುವೆ ಸಮಾಚಾರ ಪತ್ತೆ ಹಚ್ಚಿದ್ದ ನನ್ನೊಬ್ಬ ಗೆಳೆಯ ಬರೆದಿದ್ದ. ಕಂಗ್ರ್ಯಾಚುಲೇಷನ್ಸ್ ಫಾರ್ ಸರಂಡರಿಂಗ್ ಇಂಡಿಪೆಂಡೆನ್ಸ್ (ಸ್ವಾತಂತ್ರ್ಯವನ್ನು ಹಸ್ತಾಂತರಗೊಳಿಸಿದ್ದಕ್ಕೆ ಶುಭಾಶಯಗಳು) ನಿಜ ಈಗ ಅರ್ಥ ಅಗ್ತಾ ಇದೆ. ನೆತ್ತಿಗೇರಿದ ನಿಶಾ ಇಳಿದ ಮೇಲೆ ಅಲ್ಲವೇ?

ಮದುವೆಯಾದ ಮೇಲೆ ಎಲ್ಲೀದು ಬಂತು ಸ್ವಾತಂತ್ರ್ಯ. ಕರಿಮಣಿ—ಸರಪಳಿ ಗಂಟುಬಿದ್ದಂತೆ. ಆಫೀಸ್ ಬಿಡೊದ್ದೊಂದೆ ತಡ ಲಗಾಮು ಹಾಕಿದ ಕುದುರೆಯಂತೆ ನೇರವಾಗಿ ಮನೆಗೆ ಬರಬೇಕು ಮಡದಿ ಮಕ್ಕಳ ಯೋಗಕ್ಷೇಮಕೇಳಿಕೊಬೇಕು. ಕಿರಾಣಿ ಸಾಮಾನಕ್ಕೆ ಕೈಚೀಲ ಹಿಡಿದುಕೊಂಡು ಅಂಗಡಿ ಅಂಗಡಿ ಅಲೆಬೇಕು ಹೀಗೆ ಸಂಸಾರ ಚಕ್ರ ತಿರುಗಿದಂತೆ ದಿನ ಉರುಳಿ ಬೆಳಗು ಹರೀತು ಅಂದರೆ ಮತ್ತೆ ಅಫೀಸಿಗೆ ಸಾಗು ಹಾಕೋ 'ಬಲಿ ಕುರಿ — ಉಂದ್ರೆ ಮನೆ ಬಾಸ್‌ನಿಂದ ಪಾರಾಗಿ ಆಫೀಸ್ ಬಾಯಿಗೆ ಬೀಳೋದು. ಒಂದು ಊದೋದು ಇನ್ನೊಂದು ಬಾರಿಸೋದು.

ಮದ್ಯೆಗಿಂತ ಮುಂಚಿನ ಮಜಾನೇ ಮಜಾ ನೋಡಿ. ಕೈ, ಕಾಲು, ಕಣ್ಣು ತಮಗ ಬೇಕಾದ ಹಾಗೆ ಕೆಲಸ ಮಾಡ್ತಾ ಇದ್ದುವು. ಏನ ಮಾರ್ನಿಂಗ್ ಷೋ, ನೈಟ್ ಷೋ. ಎಷ್ಟು ಸಲ ಹೋಟೆಲ್. ಯಾವುದಕ್ಕೂ ಲೆಕ್ಕ ಇರಲಿಲ್ಲ. ಸ್ವೇಚ್ಛೆಯಿಂದ ಹೀಗೆ ತಿರುಗ್ತಾ ಇರೋ ನನ್ನ —ಇವಳು— ಇವಳ ಅಪ್ಪ (ಅಂದರೆ ನನ್ನ ಮಾವ ಬರೀ ಹೆಸರಿಗೆ, ಅರ್ಥಕ್ಕಲ್ಲ) ಪ್ರೇಮದ 'ಖೆಡ್ಡಾ' ಪ್ರಯೋಗದಿಂದ ಬಲಿಹಾಕಿದ್ರು. ಇಲ್ಲದಿದ್ದರೆ...

ಒಂದು ದೃಷ್ಟಿಯಿಂದ ನಿಜಾ ನಾನು ಶುದ್ಧ ಮಂಕು. ಈ ಸಂಸಾರ ಸಾಗರದಾಗ ನನ್ನವಳೆಂಬ ಗಾಳಕ್ಕೆ ಸಿಕ್ಕಿಸಿದ ಪ್ರಣಯದ ಆಮಿಷಕ್ಕೆ ಬಾಯಿಬಿಟ್ಟು ಸಿಕ್ಕುಬಿದ್ದೆ. ನನಗೇನು ಗೊತ್ತಿತ್ತು ಹೇಳಿ ಈ ಎಲ್ಲ ಮಾಯಾಜಾಲ. ನಾನು ಅರಿತ ಪ್ರೇಮದ ಚಲ್ಲಾಟ ಬರಿ ಸಿನೇಮಾದಲ್ಲಿ ನೋಡಿದ್ದು, ಕಾದಂಬರಿಯಲ್ಲಿ ಓದಿದ್ದು.

ಅದೆಂಥ ಹುಮ್ಮಸಾ - ಸೆಳವು - ಕನಸು. ನಾನೂ ಬಯಸಿದೆ. ತುಂಬ ಬೆಳದಿಂಗಳ ರಾತ್ರಿಯಲ್ಲಿ ಕೆರೆಯಲ್ಲಿ ನಾವ ತೇಲಿಬಿಟ್ಟು ನಲ್ಲೆಯೊಂದಿಗೆ ನೌಕಾವಿಹಾರ ಮಾಡಬೇಕು ಅನ್ನೋದು. ಒಮ್ಮೆಲೆ ನೆನಪಾಯಿತು. ನಮ್ಮೂರ ಕೆರೆಯ ಕೆಸರಿನಲ್ಲಿ ಹಾಯಾಗಿ ಯಾನಮಾಡೋವು ಎಮ್ಮೆ ಕೋಣ ಅನ್ನೋದು. ಇರಲಿ, ಪಾಣಿಗ್ರಹಣ (ಅಲ್ಲಿಯ ಕೆಸರು, ನೀರು ಅಲ್ಲ) ಮಾಡಿದ್ದಾಯಿತೆಂದು. ಅವಳಿಗೆ ಕೆರೆ ದಂಡೆಗೆ ರಾತ್ರಿ ಬರಲು ಹೇಳಿದೆ. ಅವಳು ನಸುನಕ್ಕು—

"ಜೀವನಾ ಕಾದಂಬರಿ ಸಿನೇಮಾ ಅಲ್ಲಾ, ತಿಳೀತೆ? ಬನ್ನಿ ಬೇಗ ಮನೆಗೆ ಹೋಗುವಾ. ನಿಮ್ಮೊಂದಿಗೆ ಇಷ್ಟು ಹೊತ್ತು ತಿರುಗಿದ್ದು ನೋಡಿದರೆ ನಮ್ಮಪ್ಪ ಚಟ್ನಿ ಮಾಡ್ತಾನೆ" ಅನ್ನಬೇಕೆ ಆ ಅರಸಿ

ಅದ್ಹ್ಯಾಗೋ ಅವಳಪ್ಪನಿಗೆ ನಮ್ಮ ರೋಮಾಂಸಿನ ಸುಳಹು ಹತ್ತಬೇಕೆ? ಆದರೆ ನಾನ್ಯ

ಬಿಡಬೇಕಲ್ಲ. ಹಿಂದಿ ಚಲಚಿತ್ರದ ನಾಯಕನ ಹಾಗೆ ಹತ್ತಾರು ವಿಪತ್ತುಗಳಿಂದ ಪಾರಾಗಿ, ಮಾವನ ಕಣ್ಣಿಗೂ ಮಣ್ಣೆರಚಿ, ಹನುಮಪ್ಪನ ಗುಡಿಯೊಳಗೆ ನಲ್ಲೆಯ ಕೊರಳಿಗೆ ಮಂಗಳ ಸೂತ್ರ ಬಿಗಿದು, ಬ್ಯಾಂಡು, ಬಜಂತ್ರಿ ಕಲಿಯವರ ಅಂಗಡಿ ಮುಂದೆ ... ಮನೆಗೆ ಮರಳಿ ಮದ್ವೆ ಶಾಸ್ತ್ರ ಮುಗಿಸಿದ್ದಾಯಿತು ಆಮೇಲೆ ಬರಬೇಕೆ ಮಾವ ಅನ್ನೋ ಅಂಥ ಮಹಾಪ್ರಾಣ--"ಇದೇನು ಅಳಿಯಂದಿರು ನನಗೂ ಒಂದು ಮಾತು ತಿಳಿಸಿದ್ದರೇ, ನಾನು ಬಂದು ಅಕ್ಕಿಕಾಳು ಹಾಕ್ತಿದ್ದೆ. ವರದಕ್ಷಿಣೆ ಇಲ್ಲಾ ಅಂದಿದ್ದರೇ" ಎಂದು ದೇಶಾವರಿ ನಗೆ ಬೀರುತ್ತಾ, ಕಾಲರ ಸರಿಪಡಿಸಿಕೊಳ್ಳಹತ್ತಿದರು. ತಂದೆಯ ನಗುವಿನಲ್ಲಿ ಮಗಳು ನಗೆ ಬೆರಸಿದಾಗ ಗೊತ್ತಾಯಿತು ಅವರ ಪ್ಲಾಟ್ ವರದಕ್ಷಿಣೆ ಹಾರಿಸೋ ಗತ್ತು.

ಆಮೇಲೆ ಗೊತ್ತಾಯಿತು ಸ್ವಾಮಿ ಸಿನೇಮಾದ ಹೀರೊ ಆಗಲಿಕ್ಕೆ ಹೋಗಿ ಇದೇನು

ನನಗೂ ಒಂದು ಮಾತು ತಿಳಿಸಿದ್ದರೇ! ನಾನೂ ಬಂದು ಅಕ್ಕೀಕಾಳು ಹಾಕ್ತಿದ್ದೆ

ಮಾಡಿಬಿಟ್ಟೆ ಅಂತಾ. ಇದೆಲ್ಲಾ ಮೊದಲೇ ತಿಳಿದಿದ್ದರೆ...

ಇದೇ ನೋಡಿ ನನ್ನ 'ರೇ' ರಾಜ್ಯದ ಮೊದಲನೆಯ ಅಗಸಿ. ಅದರೊಳಗಿಂದ ಸಂಸಾರವೆಂಬ ಚಕ್ಕಡಿಗೆ ಅವಳ-ನನ್ನ [ಎಮ್ಮೆ, ಕೋಣ] ಕಟ್ಟ ಬಿಗಿದದ್ದಾಯಿತು. ಎಮ್ಮೆ ಒಂದು ಕಡೆ ಕೋಣ ಒಂದು ಕಡೆ ಎಳೀತಾ ಎಳೀತಾ ದಾರಿ ಸಾಗಿತ್ತು.

ಮದ್ವೆ ಆದ ಮರುದಿನ ನನ್ನ ಕೋಣೆಯೇ ಮನೆಯಾಗಿ ಮಾರ್ಪಾಡಾಯಿತು. ಅದರ ಮುಖ (ನನ್ನ ಮುಖಾನೂ) ಕೂಡ ಬದಲಿಯಾಯಿತು. 'ಬಾಳಿಗೆ ಉಳಿತಾಯವೆ ಬೆಳಗು' ಬೋರ್ಡುಗಳು ತೂಗಾಡಿದವು......

ಅಂದು ನನ್ನ ಹೃದಯದ ಥರ್ಮಾಮೀಟರಿನಲ್ಲಿ ಪ್ರೇಮ ೧೦೪—೧೦೫ ಡಿಗ್ರಿ ವರೆಗೂ ಏರಿತ್ತು. ಹಿತಕರವಾದ ತಂಗಾಳಿ, ಆಹ್ಲಾದಕರವಾದ ಬೆಳದಿಂಗಳು, ಕಿಟಕಿಯಿಂದ ತೂರಿ—ಬರುತ್ತಿರುವದನ್ನು ನೋಡುತ್ತಾ ನಲ್ಲೆಯೊಡನೆ ಲಲ್ಲೆಗರೆ-ಸಿಕ್ಕ ಸಿಕ್ಕಲ್ಲಿ ಅಲೆಯುದಲೆ ಎಂಬ ನನ್ನ ಯಾವುದೋ ಪ್ರಕಟನೆಗೆ ಅಸ್ವೀಕೃತವಾಗಿ ಮರಳಿ ಬಂದ ಕವನದ ಸಾಲನ್ನು ಸ್ಮರಿಸಿಕೊಂಡು ನಿ...ವಿ...ಬಾರೆ ಇಲ್ಲಿ, ಎಂದು ಬಾಯ್ತುಂಬ ಪ್ರೀತಿ ತುಂಬಿಕೊಂಡು ಕರೆದೆ. ಆದರೇನು? ಅವಳು ಅಲ್ಲಿಗೆ ಬರೋದರಲ್ಲಿ ಮೋಡ ಕವಿದು ಚಂದ್ರ ಮಸುಕುಮುಸುಕಾಗಿದ್ದ.

ಅವಳು ಭರ ಭರನೆ ಬಂದವಳೆ ನನ್ನ ಕೈ-ಹಿಡಿದು ಕಿಟಕಿಯಿಂದ ಆ ಶೀತಲ ಚಂದ್ರನಿಂ—ದಲೂ, ದೂರ ಕರೆದುಕೊಂಡು ಹೋಗಿ 'ಇದೋ ನೋಡಿ ಈ ಟೇಬಲ್ ಮೇಲೆ ಇರುವ ಈ ಪಟ್ಟೀನಾ' -ಎಂದು ಚೇರ ಮೇಲೆ ಕೂಡಿಸಿದಳು. [ಸಿಟ್ಟು ಸೆಡವು ಬರಲಿಲ್ಲವೇ ? ಎನ್ನುತ್ತೀರಾ? ಪ್ರಣಯದ ನಂತರ ಮದ್ವೆಯಾದರೆ ಇದೇ ಪಾಡು ಸ್ವಾಮಿ] ಮೂಗಿನ ಕುದುರೆಗೆ ಚಾಳೀಸಿನ ಲಗಾಮು ಹಾಕಿ ಕಣ್ಣರಳಿಸಿ ನೋಡಿದೆ. ಪಟ್ಟಿಯ ಮೇಲೆ ದಪ್ಪಕ್ಷರದಲ್ಲಿ ಹೀಗೆ ಬರೆದಿತ್ತು

ಉಳಿತಾಯ ಯೋಜನೆ:-

೧] ನಾಳೆನಿಂದ ಸಿಗರೇಟ್ ಬಂದ್.

೨] ಹೋಟಲಿನ ಚಹಾ ತಿನಿಸು ಬಂದ್ (ಆಫೀಸಿಗೆ ಹೋದಾಗ ಲಂಚ್‌ಟೈಂನಲ್ಲಿ ಒಂದು ಕಪ್ ಚಹಾ ಸ್ಯಾಂಕ್ಶನ್)

೩] ಎರಡು ತಿಂಗಳಿಗೆ ಒಂದು ಸಿನೇಮಾ. ಅದೂ ಒಳ್ಳೆಯ ಪಿಕ್ಚರ್ ಬಂದಿದ್ದರೇ ಮಾತ್ರ.

೪) ಮಾರ್ಕೆಟ್ಟಿಗೆ ಬಸ್ಸಿನಲ್ಲಿ ಹೋಗೋದು ಇನ್ನು ಕಡಿಮೆ. (ಮನೆಯ ಹತ್ತಿರಾ ಇದೆ ವ್ಯಾಯಾಮ ಆಗುತ್ತದೆ.)

೫) ಕಥೆ-ಕವನ ಬರೆದರೂ ಕೂಡ, ಒಮ್ಮೆ ಬರೆಯಬೇಕು. ಅಂದರೆ ಹತ್ತಾರು ಸಲ ಗೀಚಿ, ಹಾಳೆ ಹಾಳು ಮಾಡಬಾರದು. ಫೇರ್ ಹಾಗೂ ರಫ್ ಒಂದೇ ಆಗಿರಬೇಕು.

ಫೈವ ಕಮಾಂಡಮೆಂಟ್ಸ್ ಓದತಾ ಹೋದಂತೆಲ್ಲ ಉಸಿರು ಹಂತಹಂತವಾಗಿ ಗಂಟಲಲ್ಲಿ ಸಿಗ್ತಾ ಹೋಯ್ತು, ಹತ್ತಿರದಲ್ಲಿಯೇ ಇದ್ದ ಒಂದು ಗ್ಲಾಸ್ ತಣ್ಣೀರನ್ನು ಗಟಗಟನೆ ಕುಡಿದು 'ಇದೇನೇ!' ಎಂದು ಪ್ರಶ್ನಿಸಿದೆ

ಅವಳು ಮುಗುಳ್ನಗೆಯನ್ನುಮಂಥ ಮೋಹಿನಿ (ಮಾರಕ) ಅಸ್ತ್ರ ಬಿಟ್ಟು, ಮುಂಗುರುಳು ನೇವರಿಸುತ್ತ 'ಹೌದು ಡಿಯರ್'' ಎಂದು ಉಸುರಿದಳು.

"ಹಾಳಾಯ್ತು ಡಿಯರ್ ಅಲ್ಲ ಡೆವಿಲ್, ಅದ್ಯಾಗೆ ಸಿಗರೇಟ್ ಬಿಡೋದು ? ನಾ ಬಿಟ್ಟೇನೆಂದರೂ ಅದು ಬಿಡಬೇಕಲ್ಲ ಹೋಟೆಲ್ ಚಹಾ ಕಡಿಮೆ ಮಾಡಬಹುದು. ಆದ್ರೆ ತಿಂಗಳಿಗೆ ನಾಲ್ಕು ಸಿನೇಮಾ ನೋಡೋನು ಎರಡು ತಿಂಗಳಿಗೆ ಒಂದೇ. ಅದೂ ಹೋಗಲಿ, ನನ್ನ ಕಥೆ. ಕವನಕ್ಕೆ ಹಾಕಿದಲ್ಲೇ ಅಕ್ಯಾಯ್'' ಎಂದು ಬಡಬಡಿಸಿ ಚಿತ್ತ ನೆತ್ತಿಗೇರಿಸಿಕೊಂಡು ಕ್ಷಣ ಹೊತ್ತು ಸಮಾಧಿಸ್ಥನಾದೆ, ಆಮೇಲೆ

ನೋಡಿ ಈ ಪಟ್ಟೀನಾ

ಅವಳನ್ನು ಕರೆದು 'ಏನೇ, ಬಿ.ಎ.ದಲ್ಲಿ ನಿನ್ನ ವಿಷಯ ''ಏನಿತ್ತು ?''ಎಂದು ಕೇಳಿದೆ ಅಚ್ಚರಿಯ ದನಿಯಲ್ಲಿ ಅದೇ ಎತ್ತರದಲ್ಲಿ ಅವಳೂ ಕೇಳಿದಳು. 'ಯಾಕೆ?'

"ಹೇಳು-ಅಷ್ಟು ನಿನ್ನ ಕೆಲಸ "

"ಎಕನಾಮಿಕ್ಸ- ಇದೇನು ಹೊಸದಾಗಿ ವಧು ಪರೀಕ್ಷೆ ಮಾಡುವ ಹಾಗಿದೆಯಲ್ಲ ಎಲ್ಲಾ ನೆನಪು ಹಾರಿದೆಯೇ?''

"ಹೂಂ, ಆದ್ಕೆ ನೀ ಹಾಗಿರೋದು ಆ ಹಾಳು ಎಕಾನಾಮಿಕ್ಸ್- ಅರ್ಥ ಇಲ್ಲದ ಶಾಸ್ತ್ರ ಯಾಕ ತೆಗೆದುಕೊಂಡೆ. ಸುಲಿದ ಬಾಳೆ ಹಣ್ಣಿನಂಥ ಕನ್ನಡ ತೆಗೆದುಕೊಂಡಿದ್ದರೆ"-ನಾನು ಗೋಗರದೆ. ಅವಳು ನಕ್ಕಳು. ಪ್ರೇಮದ ಟ್ರೈಲ್ ದಿವಸವೇ ತಿಳಿಯಲಿಲ್ಲ ಅವಳ ವಿಷಯ ಎಕಾನಾಮಿಕ್ಸ್ ಅನ್ನೋದು.

ಮನೆಯಲ್ಲಿ ಯಾವಾಗಲೂ ಎಕಾನಾಮಿಕ್ ಡ್ರೈವ್ (ಆರ್ಥಿಕ ಚಳುವಳಿ) ಇದ್ದೇ ಇರುತ್ತದೆ. ಪ್ರೇಮಕ್ಕೂ ಇದರ ಶಾಖ ತಗಲಬೇಕೇ? ನಾ ಬಿಟ್ಟೇನೆ? ಮುತ್ತಿಗೂ ಮುಗ್ಗಟ್ಟು ಯಾಕೆ?- ಅಂದ ಹಾಗ ಎಕಾನಾಮಿ ಡ್ರೈವ್ ಎಂದಾಗ ನೆನಪಾಯಿತು ನೋಡಿ ಮೊದಲನೇ ಸಲ ಅವಳು ತವರು ಮನೆಗೆ ಹೋಗಿದ್ದಳು. ತಿಳೀತೆ ಯಾಕೆ? ದ್ವಿದಳ ತ್ರಿದಳವಾಗುವ ಸಮಯ. ನೀನಿಲ್ಲದ ಮನೆ ಮನ ಧೂಳ ಅನ್ನೋ ಹಾಗೆ ಆಗಿತ್ತು ನನ್ನ ಪರಿಸ್ಥಿತಿ ಲೆಕ್ಕಣಿ ಎತ್ತಿ ಸ್ಫೂರ್ತಿಯ ಶಾಯಿಯಲ್ಲಿ ... ಕಾವ್ಯ ಸಮಾಧಿಗೇರಿ ಹತ್ತು ಪುಟದ ... ಬರೆದು ಹಾಕಿದೆ. ಎರಡೇ ದಿನಗಳಲ್ಲಿ ... ಉತ್ತರ ಬಂತು. ಒಕ್ಕಣೀ ಹೀಗಿತ್ತು

ಪ್ರಿಪದೇ

ಶಿ. ಸಾ. ನ ಗಳು (ಪ್ರಾರಂಭವೇ ಅರ್ಥವಾಗಲಿಲ್ಲ. ಶಿ. ಸಾ. ನ ಅಂದರೆ ಶಿರಸಾಷ್ಟಾಂಗ ನಮಸ್ಕಾರ ಆಗಿರಬೇಕು. ಪ್ರಿ ಪ. ದೇ ಅಂದ್ರೇನು? ಕನ್ನಡ ಛಂದಸ್ಸಿನಲ್ಲಿ ಮಾತ್ರ ತ್ರಿಪದಿ ಅನ್ನೋದು ಬಂದಿದೆ. ಆದ್ರೆ ಈ ಹೊಸ

ಕುರುಡ ಗಂಡನಿಗೆ

ಬೀದಿಯಲಿ ನಡವ ಹೆಣ್ಣುಗಳತ್ತ ಕುಹಕ
ನೋಟ ಬೀರಲು ನಿಮಗದೇಕಿಷ್ಟು ತವಕ?
ಮತ್ತೊಮ್ಮೆ ನೋಡಿದರೆ,
ಹೆಚ್ಚು ಮಾತಾಡಿದರೆ
ಕಿತ್ತುಕೊಳ್ಳುವೆ ನಾನು ನಿಮ್ಮ ಕನ್ನಡಕ!

-ಎಸ್. ದಿವಾಕರ್

ಪ್ರಿಪದೇ ಎಲ್ಲಿಯದು? ಎಷ್ಟೋ ಹೊತ್ತು ತಲೆ ತುರಿಸಿಕೊಂಡ ಏಕಾನಾವಿ ಡ್ರ... ಪರದಾಡಿದಾಗ ಹೊಳೆಯಿತು. ಅದು ಪ್ರಿಯ ಪತಿದೇವರಿಗೆ ಎಂದು ಇರಬೇಕು. ಓಲೆ ಮುಂದು ವರೆಯಿತು.) ನಿಮ್ಮ ಹತ್ತು ಪುಟದ ಓಲೆ ಓದಿದೆ. ಆ ಹತ್ತು ಪುಟದ ಭಾವವನ್ನು ಒಂದೇ ಪುಟದಲ್ಲಿ ಬರೆಯಬಹುದಿತ್ತಲ್ಲ. ವ್ಯರ್ಥ ಹಾಳೆ, ಮಸಿ, ಸಮಯ, ಹಾಳು ಅಲ್ಲವೇ? ಅದು ಹ್ಯಾಗೆ ಅಂತೀರಾ? ನಿಮ್ಮ ಐದು ಸಾಲಿನ ಭಾವ ನನ್ನು ನಾನು ಒಂದೇ ಸಾಲಿನಲ್ಲಿ ಬರೆದು ತೋರಿಸುತ್ತೇನೆ.:

ನೀವು ಬರೆದದ್ದು:

ಅಂದು ನಿನ್ನನ್ನು ರೈಲಿನಲ್ಲಿ ಹತ್ತಿಸಿದೆ. ಗಾರ್ಡ ಸೀಟಿ ಊದಿ ಹಸಿರು ನಿಶಾನೆ ತೋರಿಸಿದ. ಎಂಜಿನ್ ನನ್ನ ಹೃದಯವನ್ನೇ ಕಲ್ಲಣಿಸು ವಂತೆ ಕಿರುಚಿ ಮುಂದೆ ಸರಿಯಿತು. 'ಝುಕ್ ಬಕ್' ವೇಗ ಗತಿ ಹಿಡಿದಾಗ ರೈಲು ಪ್ಲ್ಯಾಟ ಫಾರಂ ದಾಟಿತ್ತು. ಸಿಗ್ನಲ್ ಕಂಬ ಕಣ್ಮರೆಯಾಯಿತು. ನನ್ನ ಕಣ್ಣಲ್ಲಿ ಹೊಗೆ ತುಂಬಿ ನಿನ್ನನ್ನು ಕರೆದುಕೊಂಡು ಹೋಯಿತು. ನಿರ್ದಯ ರೈಲು. ನೋಡಿ ನಾನಾಗಿದ್ದರೆ ಹೀಗೆ ಬರೆಯುತ್ತಿದ್ದೆ.

ಅಂದು ನಿನ್ನನ್ನು ಕರೆದುಕೊಂಡು ಕಿರುಚುತ್ತ ನನ್ನ ಕಣ್ಣಲ್ಲಿ ಹೊಗೆ ತೂರುತ್ತ ಓಡಿತು ನಿರ್ದಯ ರೈಲು. 'ಇಷ್ಟು ಬರೆದಿದ್ದರೆ ಸಾಕಿತ್ತು ಅಲ್ಲವೇ? ಇರಲಿ, ಮುಂದಿನ ಓಲೆ ಗದ್ಯವಾಗಿರದೆ ಸಾನೆಟ್ ತರಹದ ಪದ್ಯ ರೂಪದಲ್ಲಿರಲಿ. ನಿಮ್ಮ ಏಕಾಕಿತನದ ಅರಿವು ನನಗಿದೆ. ಆದರೇನು?

ನಿಮ್ಮ 'ಸು'

ಹುಂ 'ಮಾ' ಒಂದಕ್ಷರ ಉಳಿತಾಯ ಮಾಡಿದಳು. ನಿನಗಿರುವ ಅರಿವು ಮೊದಲು ನನಗೆ ಇದ್ದಿದ್ದರೇ...

ಒಂದು ವರುಷ ಉರುಳಿರಬೇಕು-'ಮುದ್ದನ' ನಗು ಅಳು ಮನೆತುಂಬಿ. ಅವನು ನಗುತ್ತಾ ಇದ್ದರೇ ನಮ್ಮಿಬ್ಬರಿಗೂ ಚನ್ನು. ಇಲ್ಲದಿದ್ದರೇ-

"ಏನ ಮಾಡ್ತಿ-ಸ್ವಲ್ಪ-ಕರೆದುಕೊಳ್ಳಬಾರದೇ ಮುದ್ದನ್ನ"

'ನೀವೇನು ಮಾಡ್ತೀರಿ ಈವಾಗ?'

'ನಾಯೇನಾದರೂ ಮಾಡಲಿ, ನೀ ಮೊದಲು ಕರೆದುಕೋ'

"ನನ್ಗೆ ಕೆಲಸಾ ಇದೆ ನೀವೇನ್ ಮಾಡ್ತೀರಾ?"

'ಕಥೆ ಬರೀತಾ ಇದ್ದೀನೆ'

'ಹಾಳಾಯ್ತು ನಿಮ್ಮ ಕಥೆ ಆ ಮೇಲೆ ಬರೀ ಬಾರದೆ.?

'ಏ ಹೆಚ್ಚಿಗೆ ಬಾಯಿಬಿಡಬೇಡ. ಕೂಸಿನ್ನ ಕರೆದುಕೊಳ್ಳೋದು ನಿನ್ನ ಕೆಲಸಾ ನನ್ನದಲ್ಲ.'

'ಮುದ್ದಾ ನಿಮ್ಮ ಮಗಾನೂ ಹೌದು. ಕರಕೊಳ್ಳಬಾರದೆ'

—ನಮ್ಮಿಬ್ಬರ ಈ ವಾಗ್ವಾದ ಕೇಳುತ್ತ, ...ದ್ದ ಒಮ್ಮೆ ನನ್ನ ಮುಖ, ಇನ್ನೊಮ್ಮೆ

ಥೂ, ಎಲ್ಲಾ ಹಾಳಾಯ್ತು

ಅವಳ ಮುಖ ನೋಡಾ, ಕುಳಿತ. ಅಳೋದು ... ಅಷ್ಟು ಆ ಕೋಪ ಕಥೆಗೆ ಸೊನ್ನ ...

ಮುದ್ದನ ಪ್ರಲಾಪ ಎಂಥೆಂಥಾ ಸಮಯದಲ್ಲಿ ಎಂಥೆಂಥಾ ಸುಖಗಳಿಗೆಯಲ್ಲಿ ಅಟಾಟಾಂಬು ಚೆಲ್ಲುತ್ತದೆ ಅಂತೀರಾ?

ಅವತ್ತು ಎಂಥಾ ರೋಮ್ಯಾಂಟಿಕ್ ಸನ್ನಿವೇಶ. ಅವಳು ಮದುವೆಯ ಹೊಸತರಲ್ಲಿ ನಾನು ಕೊಡಿಸಿದ ನೈಲಾನ್ ಸೀರೆ ಉಟ್ಟುಕೊಂಡಿದ್ದಳು. ಮುಡಿ ತುಂಬಿದ ಮಲ್ಲಿಗೆ ಗಮಗಮಿಸುತ್ತಿತ್ತು. ಬಾರೇ ಅಂತಾ ಕರೆಯೂದೊಂದೇ ತಡಾ ಅಂದು ಹತ್ತಿರ ಬಂದೇ ಬಿಡಬೇಕ?

ಒಮ್ಮೆ ಮೆಲ್ಲಗೆ ಹೊರಳಿ ತೊಟ್ಟಿಲತ್ತ ನೋಡಿದೆ. ಮುದ್ದಾ ಗಾಢ ನಿದ್ದೆಯಲ್ಲಿದ್ದ. ಇನ್ನೊಂದು ಅರ್ಧ ಗಂಟೆ ಹೀಗೇ ಮಲಗಲಿ ಸ್ವಾಮಿ ಎಂದು ನಾಸ್ತಿಕನಾಗಿದ್ದರೂ ದೇವರನ್ನು ಬೇಡಿಕೊಂಡೆ.

ಅವಳು ನನ್ನ ಹತ್ತಿರ ಬಂದವಳೇ "ಮುದ್ದಾ ಎದ್ದರೇ" ಎಂದು ಮದುಮಗಳಂತೆ ನಾಚಿ ಕೇಳಿದಳು.

"ಇಲ್ಲ ಬಾ ಅವನಿಗೆ ಗಾಢ ನಿದ್ರೆ ಹತ್ತಿದೆ."

-ಇನ್ನೂ ನಾನು ಸೆಂಟೆನ್ಸ್ ಪೂರ್ತಿ ಮುಗಿಸಿದ್ದೆನೋ ಇಲ್ಲೋ ತೊಟ್ಟಿಲು ಚಟ್‌ಪಟ್ ಎಂದು ಸದ್ದು ಮಾಡಿತು—ಕುಮಾರ ಕಂಠೀರವನ ಪದಾಘಾತಕ್ಕೆ.

ನಮಗೋ ನಾಲಿಗೆ ಕಚ್ಚಿಕೊಂಡಂತಾಯಿತು. ಆಚೆ ಹೊರಳಿ ನೋಡಿದೆವು. ಮತ್ತೆ ಮಲಗಿದ ಮಹಾನುಭಾವ. ಸಮಾಧಾನದ ನಿಟ್ಟುಸಿರು ಹೋಯಿತಾದರೂ ರೋಮಾಂಚಿನ ಕಲ್ಲಿದ್ದಿಲು ಹೊತ್ತೋಕೆ ತಡವಾಯಿತು ಅನ್ನಿ.

ಮೌನ ಮುರಿದು ಅವಳೇ ಮಾತಿಗೆ ಆರಂಭಿಸಿದಳು,

"ಏನೂ ಅಂದ್ರೆ"

"ಏನು" ನಾನು ಕೇಳಿದೆ.

"ನನ್ನ ಮೇಲೆ ಕೋಪವೇ? ನಾ ಸಿಡುಕಿನವಳಿದ್ದರೂ ನಿಮ್ಮನ್ನು ತುಂಬಾ... ನಿಮಗೆ ನನ್ನ ಕೈ ಹಿಡಿಬಾರದಿತ್ತು ಅನಿಸುತ್ತದೆಯೋ?..."

-ಓ ಅವಳ ಆ ನುಡಿ ಎಷ್ಟೊಂದು ಮಧುರ. ಅವರ್ಣನೀಯ ವಾತಾವರಣ. ಅವಳ ಕಣ್ಣಂಚಿನಲ್ಲಿ ಮಿಡಿದ ಅಶ್ರುಗಳನ್ನು ಒರೆಸಲು ಹೋಗಿದ್ದೆ. ಒಮ್ಮೆಲೆ ಕೈಕಾಲು ಜಾಡಿಸುತ್ತ ಎದ್ದ ಮುದ್ದ. ಪಟ್ಟಕ್ಕೇ ಮುಟ್ಟಿತ್ತು ಅವನ ರಾಗ ಪ್ರಲಾಪ.

"ಥೂ ಎಲ್ಲಾ ಹಾಳಾತು"-ತಲೆ ಮೇಲೆ ಕೈ ಹೊತ್ತುಕೊಂಡು ಕುಳಿತೆ. ಅವಳು ಕಿಲ ಕಿಲ ನಗುತ್ತ ತೊಟ್ಟಿಲಲ್ಲಿ ಎದ್ದು ಕುಳಿತ ಮುದ್ದನನ್ನು ಎತ್ತಿಕೊಂಡಳು. ಏನೋ ಅನಾಹುತ ಆದವನಂತೆ ಕಿರುಚಿದ ಅವನು ಈಗ ನನ್ನನ್ನು ಕಂಡು ತ್ರಿಕಾಲ ಜ್ಞಾನಿಯಂತೆ ನಗಹತ್ತಿದ್ದ. ನನಗೂ ನಗೆ ಬಂತು. ಅವಳಿಗೆ ಹೇಳಿದೆ,

"ನೀನೇ ನನ್ನ ಕೈ ಹಿಡಿಬಾರದಿತ್ತು ಅನಿಸ್ತದೆಯೇ? ಎಂದು ಕೇಳಿದೆಯಲ್ಲ ಕೈಹಿಡಿಯೋದು ಅಷ್ಟೇ ಅಲ್ಲ, ಪ್ರೀತಿ ಅವಿಷಕ್ಕೂ ಮದುವೆ ಬೇಡಾ ಬಲಿಗೂ ಜೀಳಬಾರದಿತ್ತೆಂಬುದು ಮೊದಲೇ ತಿಳಿದಿದ್ದರೇ..."

× × ×

ನಿಮ್ಮ ಸೌಂದರ್ಯ ಮತ್ತು
ಮೋಹಕತೆ ಹೊಸ
ವರ್ಷದಲ್ಲಿಯೂ ದೀಪಾವಳಿಯಂತೆ
ಉಜ್ವಲವಾಗಿರಲಿ
ಎಂದು ನಾವು ಕೋರುತ್ತೇವೆ.

ಶ್ರೀ ರಾಮಕೃಷ್ಣ ಆಯಿಲ್ ಮಿಲ್ಸ್
ಬಂದರ್ • ಮಂಗಳೂರು

ಅನಿತಾ ಟಾಯಿಲೆಟ್ ಸೋಪು, ಮೋನಾ
ಸ್ಯಾಂಡಲ್ ಸೋಪು, ಕಸ್ತೂರಿ ಬಾರ್ ಸೋಪು,
ಮೇನಕಾ ಹೇರ್ ಆಯಿಲ್ಸ್ — ಇವುಗಳ ತಯಾರಕರು

ತಪ್ಪಿದ ತಾಳ

— [illegible]

ಗೋಪುರದ ಗಡಿಯಾರ ಮೂರು ಬಡಿಯಿತು. ವೈದೇಹಿಯು ಎದೆಯೂ ಡಬ ಡಬ ಹೊಡೆದುಕೊಂಡಿತು. ಇನ್ನೊಂದು ಗಂಟೆಯಲ್ಲಿ ಬೆಳಿಗ್ಗೆ ತಾನು ಫೋನಿನಲ್ಲಿ ಕೇಳಿದ ಪ್ರಕಾರ ಪ್ರೊ. ರಾಜನ್ ಬಂದು ಬಿಡುತ್ತಾರೆ. ಅವರೊಡನೆ ಹೇಗೆ ಮಾತಾಡುವದು? ತನ್ನ ಜೀವನದಲ್ಲಿ ಎಂದೂ ಅನುಭವಿಸದ ಹೆದರಿಕೆ ಅವಳನ್ನು ಸೆರೆ ಹಿಡಿದಿತ್ತು.

ಅಪ್ಪಾ...ಪ್ಪಾ...ಪ್ಪಾ...

ಹತ್ತು ತಿಂಗಳ ಮಗು ಮಧು ತನ್ನ ಪಾಡಿಗೆ ತಾನು ಕಾರ್ಪೆಟ್ಟಿನ ಮೇಲೆ ಕಟ್ಟಿಗೆಯ ಕುದುರೆಯೊಡನೆ ಆಡಿಕೊಂಡಿತ್ತು. ಹಾಲು ಬಣ್ಣದ ಮಗುವಿನ ತೊದಲು ನುಡಿ ಕೇಳಿ ಹೃದಯ ಹಿಂಡಿದಂತಾಯಿತು ಅಪ್ಪಾ...ಪ್ಪಾ ಎಂದಾಗ ಎತ್ತಿ ಮುದ್ದಾಡುವ ತಂದೆಯಿರಲಿಲ್ಲ. ಮಗುವಿನ ಅಚ್ಚ ಬಿಳಿಯ ಬಣ್ಣ ನೋಡಿ ಆನಂದಿಸುವ ಸೌಭಾಗ್ಯ ತನ್ನದಿರಲಿಲ್ಲ.

ಪಕ್ಕದ ಮನೆಯ ಮಾಯಾ ಬಹೆನ್‌ಜಿಯ ಮನೆಗೆ ಆಗ್ರಾದಿಂದ ಬಂದ ಅವರ ಅತ್ತಿಗೆ ಅಂದು ಬೆಳಿಗ್ಗೆ ಮಧುವನ್ನು ನೋಡಿ "ನಿಮ್ಮ ಮಗು ಎಷ್ಟೊಂದು ಬೆಳ್ಳಗಿದೆಯಲ್ಲಾ" ಎಂದು ಹಿಂದಿಯಲ್ಲಿ ಹೇಳಿದ ಮಾತು ಇನ್ನೂ ಕಿವಿಯಲ್ಲಿ ಗುಸುಗುನಿಸುತ್ತಿತ್ತು. ಆದರೆ ಪಾಪ! ಮಗುವಿನ ಆ ಬಿಳಿಯ ಬಣ್ಣದ ಹಿಂದೆ ಎಷ್ಟೊಂದು ಕರಿ ನೆನಪುಗಳು ತನ್ನ ಜೀವನವನ್ನು ಹಿಂಡಿದ್ದವು ಎಂದು ಆಕೆಗೆ ಏನು ಗೊತ್ತು...? ...?

* * *

ಗೆಳತಿಯರ ಗುಂಪು ಕ್ಯಾಂಟೀನಿನತ್ತ ಸಾಗಿತ್ತು. ಬಯಾಲಜಿ ಲೆಬೊರೆಟರಿಯ ಹತ್ತಿರ ಪ್ರ್ಯಾಕ್ಟಿಕಲ್ಸಗಾಗಿ ಕಾಯ್ದು ನಿಂತಿದ್ದ ಬಿ. ಎಸ್. ಸಿ. ಹುಡುಗರ ಕೀಟಲೆ ಪ್ರಾರಂಭವಾಯಿತು.

" Man is a social animal ಗುಂಪು ಹೊರಟಿತು. ನೋಡೋ ಕ್ಯಾಂಟೀನಿಗೆ" ಎಂದ ಒಬ್ಬ.

"ಓಹೋಹೋ. ಮಂಗ ಮಾನವನ ಮಂತ್ರಜ್ಞ ಅನ್ನೊ. ಡಾರ್ವಿನ್ನನ ಸಿದ್ಧಾಂತದ ದೃಷ್ಟಾಂತದ ಗುಂಪಿಗೆ ಇನ್ನೂ ಪ್ರ್ಯಾಕ್ಟಿಕಲ್ಸ್ ಪ್ರಾರಂಭ ಆಗಿಲ್ಲವೇನೊ...?"

ಸೋಶಿಯಾಲಜಿ ವಿದ್ಯಾರ್ಥಿನಿಯರ ಗುಂಪಿನಲ್ಲೇ ದಿಟ್ಟೆಯಾದ ಮರ್ಸಿ ಡಿಸೋಜಾ ತಾನೂ ಪ್ರತಿಯಾಗಿ ಟೀಕಿಸಿದಳು.

"ಪ್ರತಿದಿನ ಕ್ಯಾಂಟೀನಿಗೆ ತಾವಿಬ್ಬರೂ ಅವರ ಬಿಲ್ ಅವರೇ ಕೊಟ್ಟು ಡಚ್ಚ್ ಸಿಸ್ಟಮ್ ಮಾಡತಾರಂತಲ್ಲ. Sociologyಯ ಈ ಮಹಿಳಾಮಣಿಯರು?" ಮತ್ತೊಬ್ಬ ಕೆಣಕಿದ.

"ಇಲ್ಲ ಬಿಡೋ ಇವೊತ್ತು ಡಚ್. ಸಿಸ್ಟಮ್ ಇಲ್ಲಾ ಅಂತಾ ಕಾಣತದೆ. ಭರ್ಜರಿ ಹೊಸ ಸೀರೆ ನೋಡಿದರೆ Birth day ಪಾರ್ಟಿ ಅಂತಾ ಅನ್ನಿಸೋದಿಲ್ಲವೇನೋ...?" ಹುಡುಗಿಯರ ಗುಂಪಿನಲ್ಲಿ ವೈದೇಹಿ ಉಟ್ಟಿದ್ದ ಕೆಂಪು ಬಣ್ಣದ ಜರಿ ಹೂವಿನ ಕಾಂಜೀವರಂ ಸೀರೆ ನೋಡಿ ಕನ್ನಡಕ ಧರಿಸಿದ ಹುಡುಗ ಹೇಳಿದ.

"ಯಾರಿಗೆ ಗೊತ್ತೊ ಶಾಮ್? ಎಂಗೇಜಮೆಂಟ್ ಪಾರ್ಟಿ ಇದ್ದರೂ ಇರಬಹುದಲ್ಲ. ಅಂದ ಹಾಗೇ ಆ ಸೋಶಿಯಾಲಜಿ ಪ್ರೊಫೆಸರ್ ರಾಜನ್ ಎಲ್ಲಿ ಹೋದನೋ? ಇವರ ತಂದೆಗೂ ಅವರಿಗೂ ಇರೋ ಸ್ನೇಹ ನೋಡಿದರೆ ಮುಂದುಕ ಗಾಳ ಹಾಕತಾನೇ ಅಂತಾ ತಿಳಿದಿದ್ದೆನಲ್ಲ. ಅಥವಾ ನಮಗೇ ಗೊತ್ತಿಲ್ಲದ ಹಾಗೆ ಎಂಗೇಜಮೆಂಟ ಆಯಿತೊ..." ಮತ್ತೆ ಮೊದಲು ಕೀಟಲೆ ಎಬ್ಬಿಸಿದ ಗುಂಗುರುಗೂದಲಿನ ಹುಡುಗನೇ ತಮಾಷೆಮಾಡಿದ.

"ಯಾಕೇರೀ...ನನ್ನದೇನಾದರೂ ಆಕಸ್ಮಾತ್ ಎಂಗೇಜಮೆಂಟ್ ಆಗಿದ್ದರೆ ನೇಣು ಹಾಕ್ಕೊಳ್ಳತೀರಾ?" ವೈದೇಹಿ ಮರುಸವಾಲು ಹಾಕಿದ್ದಳು.

"ಇಲ್ಲಾ ನಾವೆಲ್ಲ ಒಟ್ಟಿಗೆ ಫಾಲಿಡಾಲ್ ಕುಡೀತೀವಿ ಸುರಸುಂದರೀ..." ಎಂದು ಹುಡುಗರ ಗುಂಪು ನಕ್ಕಾಗ ಹುಡುಗಿಯರೂ ನಕ್ಕು ಮುಂದೆ ಸಾಗಿ ಕ್ಯಾಂಟೀನ್ ಸೇರಿದರು.

ಎಲ್ಲರಿಗೂ ದೋಸೆ ಜಾಮೂನು ಹೇಳಿದ್ದಾಯಿತು.

"ನಿಜ ಹೇಳೇ ವೈದೇಹಿ. ಇವೊತ್ತು ಹುಟ್ಟಿದ ಹಬ್ಬಾನೋ, ನಿಶ್ಚಿತಾರ್ಥದ ಸಂಭ್ರಮಾನೊ...?" ಸುಶೀಲಾ ದುಂಬಾಲು ಬಿದ್ದಳು.

"ಯಾರ ಜೊತೆ ಎಂಗೇಜಮೆಂಟ್?? ಖಂಡಿತಾ ನನ್ನ ಹುಟ್ಟಿದ ಹಬ್ಬ ಅಲ್ಲವೇನೇ. ಆದರೆ ಎಷ್ಟನೇ ಹುಟ್ಟಿದ ಹಬ್ಬ ಅಂತಾ ಕೇಳಬೇಡ ಹಾಂ ಸುಶೀ" ವೈದೇಹಿ ಪ್ರಶ್ನೆಯನ್ನು ಅಡ್ಡತಿರುವಿದಳು.

"ಅಲ್ಲ ಕಣೆ ವೈದೇಹಿ ಈಗ ಎರಡನೇ ಟರ್ಮಿನಲ್ಲಿ ಸೋಶಿಯಾಲಜಿ ಬದಲು ಇಂಗ್ಲಿಷ್‌ಗೆ ಯಾಕೆ ಬದಲು ಮಾಡಿದೆ ಹೇಳು? ನಿನ್ನ ಆ ರಾಜನ್ ಪ್ರೊಫೆಸರು ಕಾಲೇಜು ಬಿಟ್ಟು ಬೊಂಬಾಯಿಗೆ ಹೋದ ತಕ್ಷಣ ವೈರಾಗ್ಯ ಬಂದು ಸೋಶಿಯಾಲಜಿ ಬೇಡವಾಯಿತೇ. ಅಥವಾ ಇಂಗ್ಲಿಷ್‌ಗೆ ಬಂದ ಹೊಸ ಪ್ರೊಫೆಸರ್ ರಾವ್ ಮೇಲೆ ಮನಸ್ಸಾಯಿತೊ...." ಗೀತಾಳ ವಾದಸರಣಿ ಬೇರೆಯೇ ಆಗಿತ್ತು.

"ನಿನ್ನ ತಲೆ. ರಾವ್‌ಗೆ ನಾಲ್ಕು ಮಕ್ಕಳಿವೆ ಕಣೇ. ಅವರ ಹೆಂಡತಿ ನಮ್ಮ ತಾಯಿಯ ಊರಿನವರೇ. ಒಂದೇ ಓಣಿಯಲ್ಲಿದ್ದವರು."

"ನೋಡಮ್ಮ ವೈದೇಹಿ ವಿಷಯ ಬದಲಿಸಬೇಡ. ಹಾಗಿದ್ದರೆ ಪ್ರೊ. ರಾಜನ್ ಹೋದ ತತ್‌ಕ್ಷಣ ನೀನೇಕೆ ಇಂಗ್ಲಿಷ್ ಮೇಜರಿಗೆ ಬದಲಾಯಿಸಿದೆ ಹೇಳು?" ಗೀತಾಳ ಪ್ರಶ್ನೆಯನ್ನೇ ಎತ್ತಿ ಮರ್ಸಿ ಕೇಳಿದಳು.

"ನನಗೇನೋ ಇಂಗ್ಲಿಷ್ ಲಿಟರೇಚರ್ ತುಂಬಾ ಇಷ್ಟ. ಓದಬೇಕು ಅನ್ನಿಸಿತು ಬದಲು ಮಾಡಿದೆ. ನಿಮ್ಮ ರಾಜನ್ ಪೀರಿಯಡ್ಡಿನಲ್ಲೂ ಒಂದೆರಡು ಸಲ ಜೇನ್ ಆಸ್ಟಿನ್, ಆಸ್ಕರ್ ವೈಲ್ಡ ಓದಿ ಸಿಕ್ಕಿ ಹಾಕ್ಕೊಂಡು ಬಯ್ಸಿಕೊಂಡದ್ದು ನೆನಪಿಲ್ಲವೇನೇ ನಿನಗೆ!" ವೈದೇಹಿ ತನ್ನನ್ನು ಸಮರ್ಥಿಸಿಕೊಂಡಳು.

"ಅಬ್ಬ. ಅದು ಹುಸಿ ಕೋಪ ಅಲ್ಲವಾ ಗೀತಾ? ವೈದೇಹಿ ತಂದೆ—ರಾಜನ್ ಒಬ್ಬರನ್ನೊಬ್ಬರು ಬಿಟ್ಟಿರತಾನೇ ಇರಲಿಲ್ಲ. ನಿತ್ಯ ಕಾಲೇಜು ಮುಗಿದ ತಕ್ಷಣ ಒಟ್ಟಿಗೇ ಮನೆಗೆ ಹೋಗುತ್ತಿದ್ದರು. ಒಟ್ಟಿಗೆ ಬರುತ್ತಿದ್ದರು. ನಿಜ ಹೇಳೇ ವೈದೇಹಿ...." ಸುಶೀಲೆ ಕೆದಕಿದಳು.

"ನಿಮಗೆಲ್ಲ ಮಾಡೋದಕ್ಕೆ ಕೆಲಸವಿಲ್ಲ. ಅದಕ್ಕೇ ಹೀಗಾಡ್ತೀರಿ ನಮ್ಮನೇ, ಅವರ ರೂಮು ಒಂದೇ ಎಕ್ಸಟೆನ್ಶನ್ನಿನಲ್ಲಿ ಇದ್ದದ್ದರಿಂದ ಒಟ್ಟಿಗೇ ಬರುತ್ತಿದ್ದರು. ಆ ನಿಮ್ಮ ರಾಜನ್ ಸಿಗರೇಟು ಭಕ್ತ ನೋಡು. ನನಗೆ ಸಿಗರೇಟು ಸೇದೋವರನ್ನು ಕಂಡರೆ ಆಗೋದಿಲ್ಲಮ್ಮ." ವೈದೇಹಿ ಹೇಳುತ್ತಿದ್ದಂತೆ ಇದು ವರೆಗೆ ಬಾಯಿ ತೆರೆಯದಿದ್ದ ಮೈಥಿಲಿಯ ಕಣ್ಣಲ್ಲಿ ತುಂಟತನದ ನಗೆ ಮಿನುಗಿತು.

"ನಾನ್ ಶೊಲ್ಲಿಟ್ಟುಮಾ? ಪೊಯ್ ಶೊಲ್ಲರಿಯಾ?"

"ಸುಮ್ಮೆ ಇರಡಿ ಮೈಥಿಲಿ."

ವೈದೇಹಿ ಮೈಥಿಲಿಯರ ತಮಿಳು ಸಂಭಾಷಣೆ ಉಳಿದವರಿಗೆ ಪೂರ್ತಿ ಅರ್ಥವಾಗಲಿಲ್ಲ.

"ಇರಲಿ ಬಿಡು. ಇಂದಲ್ಲ ನಾಳೆ ನಿನ್ನ ಗುಟ್ಟು ರಟ್ಟಾಗುತ್ತಲ್ಲ. ಮಾತೆತ್ತಿದರೆ 'ನಿಮ್ಮ ರಾಜನ್' ಅಂತೆ...." ಎನ್ನುತ್ತ ಗೆಳತಿಯರೆಲ್ಲ ತಿಂದು ತಿನ್ನಲಾರಂಭಿಸಿದರು.

ವೈದೇಹಿಯು ಗುಟ್ಟು ಗೊತ್ತಿದ್ದದ್ದು ಮೈಥಿಲಿಗೆ ಒಬ್ಬಳಿಗೇ

ಪ್ರೊ. ರಾಜನ್ ಜೊತೆ ವೈದೇಹಿಯ ಮದುವೆ ನಿಶ್ಚಿತವಾಗಿತ್ತು. ಅವಳ ತಂದೆ ತಮ್ಮ ಸಹೋದ್ಯೋಗಿ ರಾಜನ್‌ನನ್ನು ಅಳಿಯನನ್ನಾಗಿ

ಮಾಡಿಕೊಳ್ಳಲು ಸಾಕಷ್ಟು ಪ್ರಯತ್ನ ಮಾಡಿದ್ದರು.

ರಾಜನ್ ಸುಸ್ವಭಾವಿಯಾದ ಪ್ರೇಮಲ ಸ್ವಭಾವದ ಗಂಭೀರ ತರುಣ. ಬಣ್ಣ ಸ್ವಲ್ಪ ಕಪ್ಪಾದರೂ ಮುಖದಲ್ಲಿ ಬುದ್ಧಿವಂತಿಕೆಯ ತೇಜಸ್ಸಿತ್ತು. ಆದರೆ ಅಲ್ಲಿ ಗೆಲುವಿರಲಿಲ್ಲ. ಏನೋ ಒಂದು ತರದ ನಿರ್ಲಿಪ್ತ ಭಾವ. ವಯ

ಸ್ಸಿಗೂ ಮೀರಿದ ಆ ಗಾಂಭೀರ್ಯದ ಹಿಂದೆ ಏನೋ ನೋವು ತುಂಬಿದಂತಿತ್ತು.

ಮೂವತ್ತು ಮೀರಿದರೂ ರಾಜನ್ ಮದುವೆಯ ಯೋಚನೆ ಮಾಡಿರಲಿಲ್ಲ ಹಲವಾರು ಬಾರಿ ವೈದೇಹಿಯ ತಂದೆ ಮಗಳನ್ನು ಮದುವೆಯಾಗಲು ಕೇಳಿದರೂ ತಾನು ಆಜನ್ಮ ಬ್ರಹ್ಮಚಾರಿಯಾಗಿ ಉಳಿಯುವ ನಿರ್ಧಾರವನ್ನು ರಾಜನ್ ತಿಳಿಸಿದ್ದರು.

ಕೊನೆಗೂ ವೈದೇಹಿಯ ತಂದೆಯ ಹಟವೇ ಗೆದ್ದಿತ್ತು. ರಾಜನ್ ಮುಂಬಯಿಯ ಭವನ್ಸ ಕಾಲೇಜಿಗೆ ಹೋದ ಮೇಲೆಯೂ ಪತ್ರವ್ಯವಹಾರ ಮಾಡಿ ಆಕಾಶವಾಣಿಯ ಕನ್ನಡ ವಿಭಾಗದ ಜೋಶಿಯವರ ಮೂಲಕ ಪ್ರಯತ್ನಿಸಿ ರಾಜನ್ ಮನವೊಲಿಸಿ ಮದುವೆಗೆ ಒಪ್ಪಿಸಿದ್ದರು.

ಈ ನಿಶ್ಚಿತಾರ್ಥದ ಸುದ್ದಿ ವೈದೇಹಿಯ ಗೆಳತಿ ಮೈಥಿಲಿಗಲ್ಲದೆ ಇನ್ನಾವ ಗೆಳತಿಯರಿಗೂ ಗೊತ್ತಿರಲಿಲ್ಲ. ಮುಂದೆ ಡಿಸೆಂಬರಿನಲ್ಲಿ ಮದುವೆ ನಡೆದಾಗ ಅಷ್ಟೊಂದು ದಿನ ಗುಟ್ಟು ರಟ್ಟು ಮಾಡದಿದ್ದ ಮೈಥಿಲಿಯ ಬಗೆಗೂ ಉಳಿದವರಿಗೆಲ್ಲ ಆಶ್ಚರ್ಯವೇ. ಜ್ಯೂನಿಯರ್ ಬಿ. ಎ. ಪರೀಕ್ಷೆ ಮುಗಿದ ನಂತರ ವೈದೇಹಿ ಮುಂಬಯಿಗೆ ಹೊರಟು ಹೋದಳು. ಮನೆಯಲ್ಲೇ ಓದಿ ಮರುವರುಷ ಪರೀಕ್ಷೆಗೆ ಕುಳಿತು ಬಿ. ಎ. ಮುಗಿಸಿಕೊಂಡಳು.

ಇನ್ನೂ ಇಬ್ಬರು ಹೆಣ್ಣುಮಕ್ಕಳ ಮದುವೆಯ ಹೊಣೆಯಿದ್ದ ತಂದೆಗೆ ಹಿರಿಯ ಮಗಳ ಮದುವೆಯಾದುದು ದೊಡ್ಡ ಭಾರವಿಳಿದಂತಾಗಿತ್ತು.

ಅರೆಮನಸ್ಸಿನಿಂದ ಮದುವೆಗೆ ಒಪ್ಪಿದರೂ ವೈದೇಹಿಯ ಜೀವನದಲ್ಲಿ ಸಂತಸದ ಹೊನಲು ಹರಿದಿತ್ತು. ಮುಂಬೈಯಂತಹ ಬೃಹತ್ ನಗರದಲ್ಲಿ ಗ್ರಾಂಟ್ ರೋಡಿನಲ್ಲ ಸಾಕಷ್ಟು ಪ್ರಶಸ್ತವಾದ ಎರಡು ರೂಮಿನ ಮನೆಯೊಂದನ್ನು ರಾಜನ್ ದೊರಕಿಸಿಕೊಂಡಿದ್ದರು.

ರಾಜನ್ ಎಷ್ಟೇ ಗಂಭೀರ ಸ್ವಭಾವದವನಾದರೂ, ಮುಖದಲ್ಲಿ ಔದಾಸೀನ್ಯ ಪ್ರತಿಬಿಂಬಿಸಿದ್ದರೂ ಹೆಂಡತಿಯ ಮೇಲೆ ಅಚ್ಚುಮೆಚ್ಚು ವೈದೇಹಿಯ ಬಗೆಗೆ ಆದರ ಗೌರವ ಅವರ ಪ್ರತಿಯೊಂದು ನಡೆನುಡಿಯಲ್ಲಿಯೂ ಎದ್ದು ಕಾಣುತ್ತಿತ್ತು. ಪ್ರತಿನಿತ್ಯ ಕಾಲೇಜು ಮುಗಿದ ತಕ್ಷಣ ಮನೆಗೆ ಬಂದು ಬೀಚಿನತ್ತಲೋ, ಕಮಲಾ ನೆಹರೂ ಪಾರ್ಕಿನ ಕಡೆಗೋ, ಚೌಪಾಟಿಗೋ ವಾಕಿಂಗ್ ಕರೆದೊಯ್ಯದಿರುತ್ತಿರಲಿಲ್ಲ. ಅಂತಹ ಪ್ರೇಮಲ ಸ್ವಭಾವದ ಪತಿಯಿದ್ದರೂ ಅವರ ಬಗೆಗೆ ವೈದೇಹಿಗೆ ಏಕೋ ತುಂಬು ಮನಸ್ಸಿನ ಒಲವಿರಲಿಲ್ಲ.

ವರುಷಗಳುರುಳಿದವು. ವೈದೇಹಿಗೆ ಜೀವನದಲ್ಲಿ ಏನೋ ಕೊರತೆ ಕಾಣತೊಡಗಿತು. ಮದುವೆಯಾಗಿ ಐದು ವರುಷಗಳಾದರೂ ತಾಯ್ತನದ ಹಂಬಲು ತುಂಬಿ ಬರಲಿಲ್ಲ. ಮೂರು ಸಲ ಗರ್ಭ ನಿಂತು ಮೂರು ತಿಂಗಳು ಮುಗಿಯುವದರೊಳಗಾಗಿ ಹೋಗಿಬಿಡುತ್ತಿತ್ತು.

ಮನೆಯಲ್ಲಿ ಮಕ್ಕಳ ಉಲಿವಿರಲಿಲ್ಲ. ಗಂಡನಾನಾದರೋ ಬುದ್ಧಿ ಜೀವಿ. ಸದಾ ತನ್ನ ಡಾಕ್ಟರೇಟನ ವ್ಯಾಸಂಗದಲ್ಲಿಯೇ ತೊಡಗಿರುತ್ತಿದ್ದರು. ಅವರ ಮಾತೂ ಮಿತವಾಗಿತ್ತು ತನ್ನ ಬಗೆಗೆ ಅವರಿಗೆ ಗೌರವ ಆದರಗಳಿದ್ದುವೇ ಹೊರತು ತಾನು ಸಾಹಿತ್ಯದಲ್ಲಿ ಹಿಡಿದ ಉತ್ಕಟ ಪ್ರೇಮವಿರಲಿಲ್ಲ ಬರಬರುತ್ತ ಬಾಳು ನೀರಸವಾಗತೊಡಗಿತ್ತು. ರಾಜನ್ ತನಗೆ ಯಾವುದಕ್ಕೂ ಕೊರತೆ ಮಾಡಿರಲಿಲ್ಲ. ಬೇಕಾದರೆ ಎಮ್.ಎ. ಮಾಡು ಇಲ್ಲವೆ ಯಾವುದಾದರೂ ಕೆಲಸ ಹಿಡಿ ಎಂದೆಲ್ಲ ಹೇಳಿದರೂ ತನಗೆ ಯಾವುದರಲ್ಲಿಯೂ ಉತ್ಸಾಹವಿರಲಿಲ್ಲ.

ಅಂದೊಮ್ಮೆ ನರಿಮನ್ ಪಾಯಿಂಟಿನಲ್ಲಿ ಕುಳಿತು ಸಾಗರದ ಗರ್ಭದಲ್ಲಿ ಮುಳುಗುವ ಸೂರ್ಯನನ್ನು ನೋಡುತ್ತ ಆ ರಮಣೀಯ ದೃಶ್ಯದ ಸೌಂದರ್ಯವನ್ನು ಆಸ್ವಾದಿಸುತ್ತಿದ್ದಾಗ ಅವರ ಮಾತು ಕೇಳಿ ತನ್ನ ಬಾಳಿನ ಉತ್ಸಾಹವೂ ಎಂದೆಂದಿಗೂ ಮುಳುಗಿ ಹೋದಂತೆ ಎನಿಸಿತು.

ಅಂದಿನಿಂದಲೂ ಗಂಡನ ಸಿಗರೇಟಿನ ಚಟದ ವಿಷಯದಲ್ಲಿ ವೈದೇಹಿಗೆ ತೀರ ಅಸಹನೆಯಿತ್ತು. ಅದರಿಂದಾಗಿ ಅವರ ಸಾಮೀಪ್ಯ ಸಹ ಬೇಡವೆನ್ನಿಸುತ್ತಿತ್ತು. ಅದೊಂದು ವಿಷಯದಲ್ಲಿ ಮಾತ್ರ ತನ್ನ ಮಾತಿಗೆ ಬೆಲೆಯೀಯುತ್ತಿರಲಿಲ್ಲ. ಮುಖಭಂಗವಾದಂತಾಗಿತ್ತು ವೈದೇಹಿಗೆ.

ಅಂದು ಸಂಜೆಗೆಂಪಿನ ರಮಣೀಯ ಬೆಳಕಿನಲ್ಲಿ ಗಂಡನ ಮುಖ ನೋಡುತ್ತ ಹೇಳಿದಳು,

"ನಿಮಗೆ ಇದೊಂದು ವಿಷಯದಲ್ಲಿ ಇಷ್ಟೇಕೆ ಹಟ ಹೇಳಿ? ನನ್ನ ಮಾತಿಗೆ, ಭಾವನೆಗೆ ಬೆಲೆಯೇ ಇಲ್ಲವೆ? ಸಿಗರೇಟು ಸೇದಿ ಸೇದಿ ಕೆಳಗಿನ ತುಟಿ ಒಂದು ಥರಾ ಬಿಳುಪು ಹತ್ತಿದವರ ಹಾಗೆ ಕಾಣ್ತಾ ಇದೆ."

"ಸಿಗರೇಟಿನ ಚಟ್ಟಕ್ಕೆ ಆ ಚಿಕ್ಕವು ಹೋಗೋದಿಲ್ಲ ವೈದೇಹಿ. ಅದು ನನಗೆ ಹಿರಿಯರಿಂದ ಬಂದ ಶಾಪ. ನಮ್ಮಜ್ಜನಿಗೆ, ನಮ್ಮ ಚಿಕ್ಕಪ್ಪನಿಗೆ ತೊನ್ನಿನ ರೋಗ ಇತ್ತು. ಮುಂದೆ ನನ್ನ ಮಕ್ಕಳಿಗೂ ಈ ಶಾಪ ತಪ್ಪದಿರಲಿ ಅಂತಾನೇ ನಾವು ಮಕ್ಕಳನ್ನು ಪಡೆಯಬಾರದು. ಅಂತಾ ನಿರ್ಧರಿಸಿದ್ದೆ. ನನ್ನ ಮೈ ಮೇಲೆ ಸಹ ಒಂದು ಚಿಕ್ಕದಾದ ಬಿಳೀ ಗುರುತಿದೆ. ಅದಕ್ಕೆ ಇಷ್ಟೊಂದು ಸಲ ಎಣ್ಣೆ ಇಟ್ಟು ಸ್ನಾನ ಮಾಡಿ ನೀನು ಅಂತಾ ನೀ ಹೇಳಿದಾಗಲೂ ನಾನು ಒಪ್ಪುತಾ ಇರಲಿಲ್ಲ......"

ರಾಜನ್ ಹೇಳಿದ್ದು ಕಟು ಸತ್ಯ.

"ನೀವು ಇಷ್ಟೊಂದು ಮೋಸಗಾರರು ಅಂತಾ ಗೊತ್ತಿರಲಿಲ್ಲ ನನಗೆ. ಇಂಥ ರೋಗ ಇರೋವರು ಮದುವೆ ಏಕೆ ಮಾಡಿಕೊಳ್ಳಬೇಕಾಗಿತ್ತು. ಒಂದು ಹೆಣ್ಣಿನ ಕುತ್ತಿಗೆ ಕೊಯ್ಯೋದಕ್ಕೆ?" ವೈದೇಹಿಯ ಅಂಗಾಂಗವೆಲ್ಲ ಉರಿದಿತ್ತು.

"ನಾನು ಬೇಕೆಂದೇ ಮೋಸ ಮಾಡಲಿಲ್ಲ ವೈದೇಹಿ. ನಿಮ್ಮ ತಂದೆಗೆ ನಾನು ತಿಳಿಸಿಯೇ ಇದ್ದೆ. ಅದು ಅನುವಂಶಿಕವಾಗಲಾರದು ಎಂದು ಅವರ ಅಭಿಪ್ರಾಯ. ನಿನಗೂ ಅವರು ತಿಳಿಸಿರಬಹುದು ಎಂದೇ ನಂಬಿದ್ದೆ."

ಈದೀಗ ಇಡೀ ಜಗತ್ತೇ ತನ್ನ ವೈರಿಯಾಗಿದೆ ಎಂದೆನಿಸಿತು ವೈದೇಹಿಗೆ. ತನ್ನ ಪಿಪಾಸೆಯ ಫಲವಾಗಿ ಆರು ಮಕ್ಕಳಿಗೆ ಜನ್ಮವಿತ್ತು, ತನ್ನ ಮದುವೆ ಮಾಡುವ ಶಕ್ತಿ ಇಲ್ಲದೆ ತೊನ್ನು ರೋಗಿಗೆ ತನ್ನನ್ನು ಕೊಟ್ಟು ತನ್ನನ್ನು ಬಲಿ ತೆಗೆದುಕೊಂಡ ತಂದೆಯ ಬಗೆಗೂ ತೀವ್ರ ದ್ವೇಷ ಬಂದಿತು.

ಅಂದಿನಿಂದಲೇ ವೈದೇಹಿಯ ಬಾಳಿನಲ್ಲಿ ಅಪಸ್ವರ ಹೊರಟಿತು. ಸಣ್ಣ ಶಾಪದ ಮಕ್ಕಳು ತನಗೆ ಹುಟ್ಟದಿದ್ದುದೇ ಒಂದು ಭಾಗ್ಯ ಎನಿಸಿತು. ಗಂಡ ಹೆಂಡಿರಲ್ಲಿ ಈಗ ಎಳ್ಳಷ್ಟೂ ಅನ್ಯೋನ್ಯವಿರಲಿಲ್ಲ. ತನ್ನ ಅಪ್ಪುಗೆಯೀಗ ಒಡೆದ ಮನಸ್ಸಿನ ಹೆಂಡತಿಗೆ ಮುಳ್ಳಿನಂತೆ ಎನಿಸುತ್ತದೆ ಎಂದರಿತ ರಾಜನ್ ಅವಳಿಂದ ದೂರವೇ ಉಳಿದುಬಿಟ್ಟನು. ಸಮಾಜದ ಕಣ್ಣಿಗೆ ಅಸಹ್ಯವಾಗಿ ತಮ್ಮ ಬಾಳಿನ ಬಿರುಕು ಕಾಣಬಾರದೆಂದು ಗಂಡಹೆಂಡಿರ ದೇಹ ಸಂಬಂಧ ಕಡಿದು ಹೋಗಿದ್ದರೂ ಒಂದೇ ಮನೆಯಲ್ಲಿ ವಾಸವಾಗಿದ್ದರು.

ವೈದೇಹಿಯ ಬಾಳು ಯಾಂತ್ರಿಕವಾಗಿತ್ತು; ನೀರಸವಾಗಿತ್ತು. ಆಗಾಗ ರೇಡಿಯೋದಲ್ಲಿ ಕನ್ನಡ ಕಾರ್ಯಕ್ರಮಗಳಲ್ಲಿ ಪಾತ್ರವಹಿಸಲು ಅವಕಾಶ ಸಿಕ್ಕು ಅದಿಷ್ಟೇ ಸಮಯ ತನ್ನ ಮನಸ್ಸಿನ ದುಗುಡವನ್ನು ಕಳೆಯಲು ಸಾಧ್ಯವಾಗುತ್ತಿತ್ತು. ಮುಂಬೈ ಕನ್ನಡಿಗರ ಕನ್ನಡ ಸಂಘದ ಕಾರ್ಯಕ್ರಮಗಳಿಗೂ ರಾಜನ್ ತಪ್ಪದೆ ಕರೆದೊಯ್ಯುತ್ತಿದ್ದರು.

"ಹೌದು ರಾಜನ್, ನಿಮ್ಮ ಪತ್ನಿಗೆ ನಾಟಕದಲ್ಲಿ ತುಂಬಾ ಆಸಕ್ತಿ ಇದೆಯಂತಲ್ಲ? ಜೋಶಿ ಹೇಳುತ್ತಿದ್ದರು. ಈ ಸಲದ ನಾಟಕೋತ್ಸವದಲ್ಲಿ ಜುಟ್ಟಪ್ಪನವರ 'ರಕ್ತಾಕ್ಷಿ'ಯನ್ನು ಆಡಬೇಕು ಅಂತಿದ್ದೀವಿ. ಅವರಿಗೆ ಭಾಗವಹಿಸೋದಕ್ಕೆ ಅವಕಾಶ ಕೊಡಿ" ಎಂದು ಆ ಗುಂಪಿನ ಶ್ರೀಯನ್ ಹೇಳಿದಾಗ ಹೆಂಡತಿಯ ಮನಸ್ಸಿನ ಅಳಲನ್ನು ಅರಿತ ರಾಜನ್ ತಾವೇ ಒಪ್ಪಿಗೆ ಕೊಟ್ಟರು. ಹೆಂಡತಿಯ ಮನಸ್ಸು ಇಂಥ ಕಾರ್ಯಕ್ರಮಗಳಿಂದಲಾದರೂ ನೆಮ್ಮದಿಯಿಂದಿದ್ದರೆ ಸಾಕು ಎನ್ನಿಸಿತ್ತು.

ಶ್ರೀಯನ್ ಪರಿಚಯ ವೈದೇಹಿಗೆ ಈಗಾಗಲೇ ರೇಡಿಯೋ ಮೂಲಕ ಆಗಿತ್ತು. ಎರಡು

ಹಯವದನಾ ಬಾಯಿಯವರು

ಹಯವದನಾ ಬಾಯಿಯವರು
ಕಣ್ಣಿಗೆ ಸೆರಗಿಕ್ಕಿ
ಅಳಲು ಬಿಕ್ಕಿ ಬಿಕ್ಕಿ
ಪರಲೋಕದ ಪತಿಯೇಕೋ
ಕನಸಿನಲ್ಲಿ ಬಂದು "ಇಕೋ
ನಾನು ಸತ್ತೆ, ನಿನಗೆ ಬಿಕೋ"
ಎಂದರು ಮುತ್ತಿಕ್ಕಿ!

–ಎಸ್. ದಿವಾಕರ್

ಮೂರು ನಾಟಕಗಳಲ್ಲಿ ಒಟ್ಟಿಗೇ ಅಭಿನಯಿಸುವ ಅವಕಾಶ ಸಿಕ್ಕಿತ್ತು. ಮುಂಬೈಯಲ್ಲಿ ಒಬ್ಬ ಕನ್ನಡಿಗ ಇನ್ನೊಬ್ಬ ಕನ್ನಡಿಗನಲ್ಲಿ ತೋರುವ ಆತ್ಮೀಯತೆ ಕೇಳಬೇಕೆ? ಶ್ರೀಯನ್-ರಾಜನ್-ವೈದೇಹಿ ತೀರ ಆತ್ಮೀಯರಾದರು.

ಶ್ರೀಯನ್ ಮೂವತ್ತೈದು ಮೀರಿದರೂ ಮದುವೆಯಾಗಿರಲಿಲ್ಲ. ಆಕರ್ಷಕ ವ್ಯಕ್ತಿತ್ವದ ಆಜಾನುಬಾಹು. ರಿಜರ್ವ ಬ್ಯಾಂಕಿನಲ್ಲಿ ಕೈತುಂಬ ಸಂಬಳ ಬಂದರೂ ಮದುವೆಯ ಗೋಜಿಗೆ ಹೋಗಿರಲಿಲ್ಲ. ತಾನು ಕಾಲೇಜಿನಲ್ಲಿದ್ದಾಗ ತಾನು ಪ್ರೀತಿಸಿದ ಹುಡುಗಿ ತನಗೆ ಕೈಕೊಟ್ಟು ಬೇರೆಯವನನ್ನು ಮದುವೆಯಾದಾಗ ಹೆಣ್ಣಿನ ಬಗೆಗೆ ತಿರಸ್ಕಾರ ಬಂದು ಸ್ತ್ರೀದ್ವೇಷಿಯಾಗಿದ್ದರು.

'ರಕ್ತಾಕ್ಷಿ'ಯ ರಿಹರ್ಸಲ್‌ಗೆ ಕೆ. ಸಿ. ಕಾಲೇಜಿನ ಒಂದು ಹಾಲ್ ಸಿಕ್ಕಿತ್ತು. ನಾಟಕದ ಡೈರೆಕ್ಟರ್ ಪ್ರೊ. ದೇಸಾಯಿ ಸಂಜೆ ಏಳರ ನಂತರ ರಿಹರ್ಸಲ್ ನಡೆಸಲು ಅನುಕೂಲ ಮಾಡಿಕೊಟ್ಟಿದ್ದರು. ಅವರ ಮಗಳು ವೀಣಾ ರುದ್ರಾಂಬೆಯ ಪಾತ್ರ ವಹಿಸುತ್ತಿದ್ದಳು. ಚೆಲುವಾಂಬೆಯ ಪಾತ್ರದಲ್ಲಿ ವೈದೇಹಿ, ನಿಂಬಯ್ಯನ ಪಾತ್ರದಲ್ಲಿ ಶ್ರೀಯನ್ ತುಂಬ ಕಲಾತ್ಮಕವಾಗಿ, ಭಾವಪೂರ್ಣವಾಗಿ ಅಭಿನಯಿಸುತ್ತಿದ್ದರು.

ನಾಟಕದಲ್ಲಿ ಅಷ್ಟೊಂದು ಅಭಿರುಚಿ ಇಲ್ಲದ ರಾಜನ್ ರಾತ್ರಿ ೯ರ ವರೆಗೆ ಯುನಿವರ್ಸಿಟಿ ಲೈಬ್ರರಿಯಲ್ಲಿದ್ದು ನಂತರ ರಿಹರ್ಸಲ್ ಮುಗಿದ ನಂತರ ಹೆಂಡತಿಯನ್ನು ಕರೆದುಕೊಂಡು ಹೋಗುತ್ತಿದ್ದರು. ರಿಹರ್ಸಲ್‌ಗೆ ಮೊದಲು ಕೂಡ ಗ್ರ್ಯಾಂಟ್ ರೋಡಿನಿಂದ ಚರ್ಚಗೇಟ ವರೆಗೆ ವೈದೇಹಿ ಬರುವ ವೇಳೆಗೆ ಕಾಯ್ದು ನಿಂತು ಅವಳನ್ನು ಕೆ. ಸಿ. ಕಾಲೇಜಿಗೆ ಬಿಟ್ಟು ತಾನು ಲೈಬ್ರರಿಗೆ ಹೋಗುತ್ತಿದ್ದರು. ನಾಟಕದ ರಿಹರ್ಸಲ್ ಎರಡು ತಿಂಗಳ ವರೆಗೆ ನಡೆಯಿತು. ಈ ವೇಳೆಗೆ ಶ್ರೀಯನ್-ವೈದೇಹಿಯರಲ್ಲಿ ಸಲಿಗೆ ಸಖ್ಯ ಬೆಳೆದು ಬಂದಿತ್ತು. ತಾನು ಮದುವೆಯಾದ ಹೆಂಗಸು, ಪರಪುರುಷನಲ್ಲಿ ಅನುರಕ್ತಳಾಗಬಾರದು ಎಂದು ವಿವೇಕ ಎಚ್ಚರಿಸಿದರೂ ಸೇಡಿನ ಭಾವನೆ ವಿವೇಕವನ್ನು ಮೆಟ್ಟಿ ನಿಂತಿತ್ತು. ಅವಳ ಭಾವನೆಯಲ್ಲೀಗ ಗಂಡ-ತಂದೆ ಇಬ್ಬರೂ ತನಗೆ ಅನ್ಯಾಯ ಬಗೆದ ದ್ರೋಹಿಗಳು. ತಂದೆಯ ಮನೆಯ ಸಂಬಂಧವನ್ನೀಗ ಪೂರ್ತಿ ಕಡಿದುಕೊಂಡಂತೇ ಆಗಿತ್ತು. ಹೆಣ್ತನದ ಹಂಬಲನ್ನು ತೀರಿಸಿಕೊಳ್ಳಲು ಸೇಡಿನ ಭಾವನೆ ಅವಕಾಶ ನೀಡಿತ್ತು. ಮನಸ್ಸಿನ ತುಮುಲ ಒಮ್ಮೊಮ್ಮೆ ಅವಳನ್ನು ವಿಹ್ವಲಳನ್ನಾಗಿ ಮಾಡುತ್ತಿತ್ತು. ತನ್ನ ಅಧೋಗತಿಯನ್ನು ಬಿಂಬಿಸುವ ಸಾಂಕೇತಿಕವೋ ಎಂಬಂತೆ ತಾನು ಚೆಲುವಾಂಬೆಯ ಪಾತ್ರ ಮಾಡಬೇಕಾಗಿತ್ತು. ಮೈದುನನೊಡನೆ ಸಹಕರಿಸಿ ಗಂಡನನ್ನು ಕೊಂದು ಮೈದುನನನ್ನೇ ಮದುವೆಯಾದ ಹ್ಯಾಮ್ಲೆಟ್‌ನ ತಾಯಿ ಹೃದಯಹೀನೆ ಗಟ್ರೂಡ್‌ಳಂತಹ ಪಾತ್ರ ಚೆಲುವಾಂಬೆಯದು. ನಿಜ ಜೀವನದಲ್ಲಿಯೂ ತಾನೂ ಅದೇ ಅಧೋಗತಿಗೆ ಇಳಿದಿದ್ದೇನೆ. ಇದರ ಕೊನೆ ಹೇಗೆ....? ಹೇಗೆ...?

ನಿಂಬಯ್ಯನ ಪಾತ್ರದಲ್ಲಿ ಶ್ರೀಯನ್ :

"ಪ್ರಿಯೆ ಎನಿತು ದಿನ ಗುಟ್ಟಾಗಿ ಜೀವಿಪೆವು? ಒಂದಿಲ್ಲವೊಂದು ದಿನ ಬಯಲಾಗದಿರದು ನಮ್ಮೀರ್ವರೊಲ್ಮೆವೇಟಂ. ಆಗೆಮ್ಮ ಗತಿಯೇನು?" ಎಂದಾಗ,

ಚೆಲುವಾಂಬೆಯ ಪಾತ್ರದಲ್ಲಿ ತಾನು :

"ಪ್ರಿಯನೇ,

ನೀನೆಳಸಿದಂತಕ್ಕೆ ದೋಣಿಯಲಿ ಕುಳಿತಾಯ್ತು ದೋಣಿ ಕೇಲುತ್ತಿಹುದು. ಅದು ಮುಳುಗದಂದದಿ ನೋಡಿಕೊಳ್ಳುವು

ದೆನ್ನು, ಕರ್ತವ್ಯ" ಎಂದು ನುಡಿದಾಗ ವೈದೇಹಿಯ ಧ್ವನಿಯಲ್ಲಿ ಪ್ರತಿ ರಿಹರ್ಸಲ್ಲಿಯೂ ನಡುಕ ವಿರುತ್ತಿತ್ತು. ತಾನು ಮಾಡುತ್ತಿರುವುದು ಸರಿಯೆ ?

ಮನಸ್ಸಿನ ದ್ವಂದ್ವದ ಈ ತೊಳಲಾಟದಲ್ಲಿರುವಾಗಲೇ ನಾಟಕದ ಪ್ರದರ್ಶನ ಮುಗಿದು ಹೋಯಿತು. ಇನ್ನು ಮತ್ತೆ ಅದೇ ಶೂನ್ಯ. ತನ್ನ ಜೀವನದಲ್ಲಿ. ಶ್ರೀಯನ್ ಒಡನಾಟವಿಲ್ಲ. ಶ್ರೀಯನ್‌ನ ಕೊಂಕಣಿ ಭಾಷೆ ಕಲಿತು ನಾಟಕದ ಗುಂಪಿನಲ್ಲಿದ್ದ ಇನ್ನಿಬ್ಬರು ಕೊಂಕಣಿಗರನ್ನು ಕೊಂಕಣಿಯಲ್ಲಿ ಹಾಸ್ಯ ಮಾಡಿ ಹೊತ್ತು ಕಳೆಯುತ್ತಿದ್ದ ವೈದೇಹಿಗೆ ನಾಟಕ ಮುಗಿದು ಹೋದುದರಿಂದ ಏನೋ ಕಳೆದುಕೊಂಡಂತಾಗಿ ತೀರ ನಿರುತ್ಸಾಹವೆನಿಸಿತ್ತು ಜೀವನದಲ್ಲಿ.

ಅಷ್ಟೊಂದು ಅಲ್ಪಾವಧಿಯಲ್ಲಿಯೇ ಶ್ರೀಯನ್ ವೈದೇಹಿಯರಲ್ಲಿ ನಿಕಟ ಪರಿಚಯ ಬೆಳೆದು ತನ್ನ ಹೃದಯದ ಆಳಲನ್ನು ತೋಡಿಕೊಂಡು ತನ್ನ ತಂದೆ ತನಗೆ ಬಗೆದ ಅನ್ಯಾಯವನ್ನು, ನಿಜ ಸಂಗತಿ ತಿಳಿಸದೆ ಗಂಡ ತನಗೆ ಮಾಡಿದ ಮೋಸವನ್ನು ಹೇಳಿದಾಗ ಶ್ರೀಯನ್ ಸಾಂತ್ವನ ಹೇಳಿದ್ದ. ಈಗ ನಾಟಕ ಮುಗಿದ ಮೇಲೆಯೂ ಹಲವಾರು ಸಲ ಮನೆಗೆ ಬಂದು ವೈದೇಹಿಯೊಡನೆ ತಾಸೆರಡು ತಾಸು ಹರಟೆ ಹೊಡೆಯುತ್ತಲೇ ಇದ್ದ. ಪಕ್ಕದ ಮನೆಯ ಸಿಂಧಿ ಮುದುಕ ಕೇಸ್ವಾನಿ ಈ ಬಗೆಗೆ ಸೂಚನೆ ಕೊಟ್ಟಾಗಲೂ ರಾಜನ್ ಅದನ್ನು ಕಿವಿಗೆ ಹಾಕಿಕೊಳ್ಳದೆ-Oh come, don't be a rubber-neck" ಎಂದು ಹೇಳಿ ಎಂದಿನಂತೆ ಲೈಬ್ರರಿಯ ಓದು ಮುಗಿದ ನಂತರ ಒಂಬತ್ತು ಗಂಟೆಯ ನಂತರವೇ ಬರುತ್ತಿದ್ದರು.

ಶನಿವಾರದ ಒಂದು ರಾತ್ರಿ ವೈದೇಹಿ ಸೂಟ್ ಕೇಸಿನಲ್ಲಿ ಬಟ್ಟೆ ತುಂಬುತ್ತಿದ್ದಾಗ—

"ಎಲ್ಲಿಗೋ ಪ್ರಯಾಣ ಹೊರಟಂತಿದೆಯಲ್ಲ ವೈದೇಹಿ. ಎಲ್ಲಿಗೆಂದು ಕೇಳಬಹುದೇ ?"

"ಕೇಳಿ ಅದಕ್ಕೇನು? ರಕ್ತಾಕ್ಷಿ ನಾಟಕದ ಗುಂಪಿನ ಕೆಲವರು ನಾಳೆ ಪಾಂಚಗಣಿಗೆ ಪಿಕ್‌ನಿಕ್‌ಗೆ ಹೋಗುತ್ತೇವೆ. ಎಲ್ಲರಿಗೂ ಎರಡು ದಿನ ಆಫೀಸಿಗೆ ರಜೆ ಇದೆ."

"ಸೋಮವಾರ ತಿರುಗಿ ಬರುತ್ತೀರಾ!"

"ಹೌದು"

"ನಿನಗೇನೂ ಹೋಗೋದಕ್ಕೆ ಬೇಡ ಅನ್ನಿರಲಿಲ್ಲ. ಆದರೆ ಕರ್ಟಸಿ ಸಲುವಾಗಿಯಾದರೂ ಒಂದು ಮಾತು ನನ್ನನ್ನು ಕೇಳಬಹುದಿತ್ತಲ್ಲ" ರಾಜನ್ ಧ್ವನಿಯಲ್ಲಿ ನೋವಿತ್ತು.

"ಹೋ ಹೌದಲ್ಲ. ಮೋಸವೋ ಕಪಟವೋ ಅಗ್ನಿಸಾಕ್ಷಿಯಾಗಿ ಕೈ ಹಿಡಿದಿದ್ದೀರಿ. ನಿಮ್ಮನ್ನ ಕೇಳದೆ ಹೋದರೆ ಹೇಗಾದೀತು ?"

ಹೆಂಡತಿಯ ವ್ಯಂಗ್ಯ ರಾಜನ್‌ಗೆ ಹಿಡಿಸಲಿಲ್ಲ. ಹೆಚ್ಚು ಮಾತು ಬೆಳೆಸದೆ ದೀಪವಾರಿಸಿ ನಿದ್ದೆ ಹೋದರು.

ಪಾಂಚಗಣಿಯಲ್ಲಿ ಮನಬಂದಷ್ಟು ಚಲ್ಲಾಟವಾಡಿ ವೈದೇಹಿ ಮನೆಗೆ ಮರಳಿದಾಗ ಬಾಗಿಲಿಗೆ ಬೀಗವಿತ್ತು. ಕೇಸ್ವಾನಿಯ ಹೆಂಡತಿ ಕೀಲಿ ಕೈ ಕೊಟ್ಟಳು. ಅವಳ ನೋಟದಲ್ಲಿ ಕುಹಕದ ಪ್ರಶ್ನಾರ್ಥಕ [illegible]. ಅವಳೊಂದೂ ಮರು ಮಾತಾಡದೆ ಬಾಗಿಲು ತೆಗೆದಾಗ ಮೇಜಿನ ಮೇಲೆ ರಾಜನ್ ಚೀಟಿಯಿತ್ತು.

"ವೈದೇಹಿ,

ಪಾಂಚಗಣಿಗೆ ನಾಟಕದ ಗುಂಪೇ ಹೊರಡುತ್ತದೆ ಎಂದು ಸುಳ್ಳು ಹೇಳುವ ಕಾರಣವಿರಲಿಲ್ಲ. ನಿನ್ನೆ ಕಾನೆ ಪ್ರೊ, ದೇಸಾಯಿ ಸಿಕ್ಕಿದ್ದರು. ಅವರು ಪಾಂಚಗಣಿಯ ಸುದ್ದಿಯನ್ನೇ ಎತ್ತಲಿಲ್ಲ. ಹೋಗುತ್ತಿದ್ದುದು ನೀನು-ಶ್ರೀಯನ್



ಭಾಷಣ

ಏನಿದೀ ಬಿರುಗಾಳಿ ಸುರಿಮಳೆ
ಏಕ ರೀತಿಯ ನರ್ತನ
ನೆರೆದ ಸಭೆಯಿಂದೆದ್ದು ಕೂಗುವು-
ದೇನು ಕೇಳಿರಿ ಈ ಜನ !
"ಗೋಡೆ ಜಾರಿತು ಮಾಡು ಹಾರಿತು
ಸಾಕು ನಿಲ್ಲಿಸೂ ಭಾಷಣ !"

-ಎಸ್. ದಿವಾಕರ್

ಇಬ್ಬರೇ ಎಂದು ಗೊತ್ತಿತ್ತು. ನನ್ನ ನಿನ್ನ ಕದಡಿದ ಮನಸ್ಸುಗಳು ತಿಳಿಯಾಗಲಾರವು. ಅದಕ್ಕೆಂದೇ ಶ್ರೀಯನ್ ಜೊತೆ ನಿನ್ನ ಅನ್ಯೋನ್ಯವನ್ನು ಗುರುತಿಸಿದರೂ ನಾನು ಬೇಕೆಂದೇ ಅರಿಯದವನಂತಿದ್ದೆ. ನಾನೇ ಹೇಳಬೇಕು ಎಂದಿದ್ದ ನಿನ್ನ ದಾರಿಯನ್ನು ನೀನೇ ಕೈಕೊಂಡಿದ್ದೀಯೆ.

ನಾಳೆ ನಾನು ಆಗ್ರಾಕ್ಕೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಟೂರಿಗೆ ಹೋಗುವೆ. ಬರುವುದು ಸುಮಾರು ಹದಿನೈದು ದಿನಗಳಾಗಬಹುದು. ಶ್ರೀಯನ್ ಜೊತೆ ಯಾವ ಅಭ್ಯಂತರವೂ ಇಲ್ಲದೆ ಮದುವೆ ಮಾಡಿಕೊ.

ನಿನ್ನ ಬಾಳು ಸುಖವಾಗಲಿ. ನನ್ನ ಮನ ನೊಂದಿದೆ. ನನ್ನ ಶಾಪ ತಟ್ಟಬಹುದು ಎಂದು ನೀನೇನೂ ಹಿಂದಡಿಯಿಡುವದು ಬೇಡ. ನನ್ನ ಶಾಪ ತಟ್ಟಲಾರದು. ಅದೆಲ್ಲ ಹುಚ್ಚು ಭಾವನೆ. ಮುಂದೆಂದಾದರೂ ನನ್ನ ಸಹಾಯ ಬೇಕಿದ್ದಲ್ಲಿ ತಿಳಿಸು. ತುಂಬು ಹೃದಯದಿಂದ ಗೆಳೆಯನಂತೆ ಬಂದು ನೆರವಾಗುವೆ.

ಶ್ರೀಯನ್‌ಗೆ ನನ್ನ ಅಭಿನಂದನೆ ತಿಳಿಸು.

ಇತಿ

ರಾಜನ್"

ಚೀಟಿಯನ್ನೋದುತ್ತಿದ್ದಂತೆ ವೈದೇಹಿಯ ಕಣ್ಣು ತುಂಬಿಬಂದವು. ರಾಜನ್ ಎಂದಿಗೂ ಉದಾರ ಹೃದಯಿ. ಅವರಿಗೆ ಅನ್ಯಾಯ ಮಾಡಲು ತನಗೇ ಅಳುಕು.

ಆದರೇನು ? ಒಮ್ಮೆ ಅಡಿ ಮುಂದೆ ಇಟ್ಟಾಯಿತು. ಹಿಂದೆಗೆಯುವ ಹಾಗಿರಲಿಲ್ಲ.

ತಂದೆ — ತಾಯಿಯವರ ಸಂಬಂಧವನ್ನು ಎಂದೋ ಕಡಿದುಕೊಂಡುದರಿಂದ ಈಗ ಯಾರ ಆತಂಕವೂ ಇರಲಿಲ್ಲ. ತಾನು ಮಾಡಿದ್ದು ಸರಿಯೋ ತಪ್ಪೋ-ಶ್ರೀಯನ್ ಮದುವೆಯಾಗಿ ದಾದರಿಗೆ ವೈದೇಹಿ ಸಂಭ್ರಮದಿಂದಲೇ ಬಂದಳು.

ಅಂತೂ ಜೀವನ ತಾನು ಊಹಿಸಿದಷ್ಟು ನೀರಸವಾಗಿರಲಿಲ್ಲ. ಶ್ರೀಯನ್‌ನಂತಹ ರಸಿಕ ಪತಿಯ ಜೊತೆ ದಿನಗಳುರುಳಿದುದು ಗೊತ್ತಾಗಲಿಲ್ಲ. ಮದುವೆಯಾಗಿ ಒಂದು ವರುಷ ಕಳೆಯುವದರೊಳಗೆ ವೈದೇಹಿ ತಾಯಿಯಾದಳು. ಆರುವರುಷಗಳ ಹಂಬಲು ತುಂಬಿ ಬಂದಿತ್ತು.

ಗಂಡು ಮಗುವಿನ ಮುದ್ದು ಮುಖ ನೋಡಿ ಹೃದಯ ಹೆಮ್ಮೆಯಿಂದ ಬಿಗಿಯಿತು. ಶ್ರೀಯನ್ ತರಹವೇ ಮುದ್ದಾದ ಗುಂಗುರು ಗೂದಲಿನ ಗಂಡು ಮಗು ಅಬ್ಬಾ ಮಗು— ಎಷ್ಟೊಂದು ಬೆಳ್ಳಗೆ...!! ಗುಲಾಬಿ! ಕೂದಲು ಗುಂಗುರಾದರೂ ಕೆಂಗೂದಲು!! ಮಗುವಿಗೆ ಮೂರು ತಿಂಗಳಾದಾಗ ಬೆನ್ನಿನ ಮೇಲೆ ಚಿಕ್ಕದೊಂದು ಬಿಳಿಯ ಚಿಕ್ಕೆ ! ವೈದೇಹಿ ಹೌಹಾರಿದಳು. ರಾಜನ್ ತರಹವೇ ಬೆನ್ನಿನ ಮೇಲೆ ತೊನ್ನು! ಎಡದ ಅಂಗಾಲಿಗೂ ಬಿಳುಪು! ಮಗುವಿನ ಬಣ್ಣ ಹರ್ಷಪಡುವ ಬಿಳಿಯ ಬಣ್ಣವಲ್ಲ. ತನ್ನ ಮಗು 'ಅಲ್ಬಿನೋ' ತನ್ನ ಮೊದಲಿನ ಗಂಡನ ರೋಗ ಈ ಮಗುವಿಗೆ. ಇಳಿದು ಬಂದಿವೆ. ಅದೂ ಅಲ್ಲದೆ ಮುಖದ ಮಾಟ ಮೂಗು ರಾಜನ್ ತರಹನೆ? ಇವೆ! ಎಂತಹ ವಿಚಿತ್ರ ಸತ್ಯ...

ವೈದೇಹಿಯ ಜೀವನದಲ್ಲಿ ಮತ್ತೆ ಕಪ್ಪು ಛಾಯೆ ಮುಸುಗಿತು. ಅಷ್ಟೊಂದು ವರುಷ ಮಕ್ಕಳಿಲ್ಲದೆ ಹಂಬಲಿಸಿ, ತಮ್ಮಿಬ್ಬರನ್ನು ಒಂದುಗೂಡಿಸಲು ಮಗುವೊಂದಿಲ್ಲದೆ ರಾಜನ್‌ನಿಂದ ಅಷ್ಟೊಂದು ನಿರಾಯಾಸವಾಗಿ ಬೇರೆಯಾದರೆ, ಮರು ಮದುವೆಯಾದಾಗ ಅವರ ಆನುವಂಶಿಕ ರೋಗದ ಶಾಪ ತಟ್ಟಿತ್ತು! ಎಂತಹ ಕಟುಸತ್ಯ!

ಮಗು ಹುಟ್ಟುವ ಮೊದಲೇ ಇತ್ತೀಚೆಗೆ ವೈದೇಹಿಗೂ ಶ್ರೀಯನ್‌ಗೂ ಆಗಾಗ ಅಲ್ಪಸ್ವಲ್ಪ ವಿರಸ ಪ್ರಾರಂಭವಾಗಿತ್ತು. ಆದೀಗ ಮಗು ಹುಟ್ಟಿದ ಮೇಲೆ ಅದು ಬೆಳೆಯುತ್ತಿದ್ದಂತೆ ಅವರಲ್ಲಿನ ಒಡಕು ಕೊರಕಲಾಗಿತ್ತು. ಬಿಳಿಯ ಹಲ್ಲಿಯ ಬಣ್ಣದ ಆ ಮಗುವನ್ನು ಶ್ರೀಯನ್ ಕೈ ಮುಟ್ಟಿ ಎತ್ತಿರಲಿಲ್ಲ. ಅದನ್ನು ಕಂಡರೆ, ಆತನಿಗೆ ತೀವ್ರತಮವಾದ ಅಸಹ್ಯ ಬರುತ್ತಿತ್ತು.

ತನ್ನನ್ನು ಗೌರವಿಸಿ ಪೂಜಿಸಿದ ರಾಜನ್ ಭಾವನೆಗೆ ಬೆಲೆಕೊಡದೆ ಅವರನ್ನು ತಿರಸ್ಕರಿಸಿ ಕಡೆಗಣಿಸಿದ್ದಳು. ವಿಧಿ ತನಗೆ ಒಳ್ಳೆಯ ಪಾಠ ಕಲಿಸಿತ್ತು. ತಾನೊಲಿದು ಮದುವೆಯಾದ ಶ್ರೀಯನ್ ತನ್ನ ಭಾವನೆಗಳನ್ನು ಒದ್ದು ಹಾಕಿದ್ದ. ಪ್ರಣಯದ ಕಾವು ಆರಿದ ಮೇಲೆ ಶ್ರೀಯನ್ ಮತ್ತೆ ಮೊದಲಿನ ಸ್ವಚ್ಛಂದ ಜೀವನವನ್ನರಸಿ ತನ್ನಿಂದ ದೂರವಾಗತೊಡಗಿದ. ಹತ್ತು ಗಂಟೆಯ ಮೇಲೆ ಮನೆಗೆ ಬರತೊಡಗಿದ. ಮನೆಯಲ್ಲಿ ರಾತ್ರಿಯ ಊಟವನ್ನು ಕೂಡ ಮಾಡುತ್ತಿರಲಿಲ್ಲ. ವೈದೇಹಿಯೊಡನೆ ಮೊದಲಿನಂತೆ ಮನಬಿಚ್ಚಿ ಮಾತಾಡುತ್ತಿರಲಿಲ್ಲ. ಮೊದಲಿನಂತೆ ಅವಳ ಸೌಂದರ್ಯದ ಬಗೆಗೆ ಮೆಚ್ಚುಗೆ ಸೂಚಿಸುವ ಮಾತಿರಲಿಲ್ಲ. ತೊನ್ನುರೋಗಿಯಾದ ಮಗುವಿಗೆ ಜನ್ಮವಿತ್ತದ್ದು ಅವನ ದೃಷ್ಟಿಯಲ್ಲಿ ಮಹಾಪರಾಧವಾಗಿತ್ತು. ತನಗರಿವಿಲ್ಲದಂತೆಯೇ ವೈದೇಹಿಗೂ ಅಪರಾಧಿನಿಯ ಭಾವ ಮೈಗೂಡಿ ಬಂದು ಸಾಧ್ಯವಾದಷ್ಟೂ ಶ್ರೀಯನ್ ಕಣ್ಣಿನಿಂದ ಮಗುವನ್ನು ದೂರವಿಡಲು ನೋಡುತ್ತಿದ್ದಳು.

"ಇದೇಕೆ ಹೀಗಾಯಿತು? ನಿಮ್ಮ ವಂಶದಲ್ಲಿ ಯಾರಿಗಾದರೂ ಈ ರೋಗವಿತ್ತೇ?" ಬಹಳ ದಿನಗಳಿಂದ ಕೇಳಬೇಕೆಂದಿದ್ದ ಪ್ರಶ್ನೆಯನ್ನು ಅಳುಕುತ್ತಲೇ ವೈದೇಹಿ ಕೇಳಿದಾಗ ಶ್ರೀಯನ್,

"Shut up ಕೈ ಹಿಡಿದ ಗಂಡನನ್ನ ಅಷ್ಟೊಂದು ಸಲೀಸಾಗಿ ಬಿಡುವ ನಿನಗೆ ಒಂದು ಶೀಲವಿದೆಯೇ? ಯಾರ ಮಗುವೊ ಏನೊ...." ಎಂದಾಗ ಆತನ ಈ ಹೊಸ ಆಕ್ಷೇಪಣೆ ಕೇಳಿ ವೈದೇಹಿ ತತ್ತರಿಸಿ ಹೋಗಿದ್ದಳು.

"ನೀವೇನು ಮಾತಾಡ್ತಾ ಇದ್ದೀರಿ ಅನ್ನೋದು ನಿಮಗೆ ಗೊತ್ತಿದೆಯೇನು?"

"ಗೊತ್ತಿಲ್ಲದೆ ಏನು? ನಿನ್ನ ಮಗುವಿಗೆ ರಾಜನ್ ರೋಗ, ಆತನದೇ ಮುಖದ ಮಾಟ, ಮೂಗು ಇರಬೇಕಾದರೆ ಈಗಲೂ ನಿನಗೆ ಆತನಿಗೆ ಸಂಬಂಧ ಇಲ್ಲ ಅಂತಾ ಹೇಗೆ ಹೇಳೋಕಾಗತದೆ?"

ತಾನು ಯಾರನ್ನೋ ಪ್ರೀತಿಸಿ ತನ್ನಿಂದ ದೂರ ಹೋಗಬೇಕೆಂದೇ ಹೊಸದೊಂದು ಆಕ್ಷೇಪಣೆ ಹುಡುಕಿ ನೆವ ಒಡ್ಡುತ್ತಿದ್ದಾನೆ ಶ್ರೀಯನ್ ಎಂದು ಕಂಡು ಹಿಡಿಯಲು ವೈದೇಹಿಗೆ ತಡ ಹಿಡಿಯಲಿಲ್ಲ. ಆತನ ಹೊಸ ಹುಡುಗಿ ಯಾರಿರಬಹುದು...? ಮರುದಿನವೇ ಆತನ ಆಫೀಸಿನಲ್ಲಿ ಕೆಲಸ ಮಾಡುತ್ತಿರುವ ಸಾರಸ್ವತ ಹುಡುಗಿ ವತ್ಸಲಾ ಅವನೊಡನೆ ಮನೆಗೆ ಬಂದಾಗ ಅವಳ ಸಂಶಯಕ್ಕೆ ಉತ್ತರ ಸಿಕ್ಕಿತ್ತು. ತನ್ನ ಜೀವನದಲ್ಲಿ ಹುಳಿ ಹಿಂಡಿದ ಆ ಬೆಡಗಿನ ವಯ್ಯಾರಿಯನ್ನು ತಿರಸ್ಕಾರದಿಂದಲೇ ಕಂಡು ವೈದೇಹಿ ಮಾತಾಡಲೇ ಇಲ್ಲ.

ತನ್ನ ಅತಿಥಿಗೆ ಅವಮರ್ಯಾದೆ ಮಾಡಿದಳೆಂದು ಶ್ರೀಯನ್ ಕೋಪ ಇನ್ನೂ ಏರಿತು. ಅದಾದ ಎರಡು ದಿನಕ್ಕೆ ಒಂದು ಶನಿವಾರ ಸಂಜೆ ಶ್ರೀಯನ್ ಊರಿಗೆ ಹೊರಡುವ ಸಿದ್ಧತೆಯಲ್ಲಿದ್ದಾಗ,

"ಊರಿಗೆ ಹೊರಟಿದ್ದೀರಾ? ಎಲ್ಲಿಗೆ ಎಂದು ಕೇಳಬಹುದೇ?"

"ಕೇಳಲ್ಲ. ಪಾಂಚಗಣಿಗೆ ಹೋಗತೇನೆ. ಯಾರ ಜೊತೆ ಎಂದೂ ಹೇಳಬೇಕೇನು? ವತ್ಸಲಾ ಜೊತೆ ಅಂದು ಅವಳು ಮನೆಗೆ ಬಂದಾಗ ಮುಖ ಬಿಗಿದುಕೊಂಡಿದ್ದೆಯಲ್ಲ ಅದೇ ವತ್ಸಲಾ ಜೊತೆ"

"ಆ ವಯ್ಯಾರಿಯ ಜೊತೆ ಚೆಲ್ಲಾಟವಾಡೋದಕ್ಕೊ..."

"Shut up ವೈದೇಹಿ. ಒಂದು ಹೆಣ್ಣಿನ ಬಗ್ಗೆ ಇನ್ನೊಬ್ಬ ಹೆಣ್ಣು ತೋರಿಸುವ ಸ್ವಾಭಾವಿಕ ಪ್ರತಿಕ್ರಿಯೆ ನೀನು ತೋರಿಸಿದರೂ ಅವಳು

ಸಂತಾನ ಯೋಜನೆ

ಓಗೊಡಲು ಸಂತಾನ ಯೋಜನೆಯ
ಕರೆಗೆ
ಆಮೇಲೆ ತುಟ್ಟಿಯಾಗುವುದಂತೆ ಹೆರಿಗೆ
ಬಾಣಂತಿಗಿಂತ ಬರಿ ಬಂಜೆಯೇ ಮೇಲು
ಎಲ್ಲೆಲ್ಲು ಉಕ್ಕಿ ಹರಿಯುವುದಂತೆ ಹಾಲು!

— ಎಸ್. ದಿವಾಕರ್

ಎಂತಹ ಬುದ್ಧಿ ಜೀವಿ, ವಿಶಾಲ ಮನಸ್ಸಿನವಳು ಅಂತಾ ನಿನಗೇನು ಗೊತ್ತು? ಮತ್ತೆ ನಿನಗೂ ರಾಜನ್‌ಗೂ ಸಂಬಂಧ ಇರಬಹುದು ಅದಕ್ಕೇ ಬಿಳುಪು ರೋಗದ ಮಗು ಹುಟ್ಟಿದೆ ಎಂದು ನಾನು ಹೇಳಿದಾಗ ಇನ್ನಾರಾದರೂ ಸಾಮಾನ್ಯ ಚೆಲ್ಲಾಟದ ಹುಡುಗಿಯಾಗಿದ್ದರೆ ನಿನ್ನ ಬಗ್ಗೆ ಇನ್ನೂ ದ್ವೇಷ ಹೆಚ್ಚುವಂತೆ ಮಾಡುತ್ತಿದ್ದಳು. ಈ ಹುಡುಗಿ.

'ಹೆಣ್ಣೆಂದರೆ ಅಷ್ಟೊಂದು ಕೀಳಾಗಿ ನೋಡಬೇಡಿ. ಇದರಲ್ಲಿ ವೈದೇಹಿಯ ಶೀಲದ ಪ್ರಶ್ನೆಯೇ ಇಲ್ಲ. ಪಾಪ ಅದು ಅವರ ಪೂರ್ವಜನ್ಮದ ಗ್ರಹಚಾರ. ನಮ್ಮ Biology ಶಾಸ್ತ್ರದ ಪ್ರಕಾರ ಈ ತರಹ ಮೊದಲಿನ ಗಂಡನ ಗುಣ ಅವಗುಣಗಳನ್ನು ಎರಡನೆಯ ಗಂಡನ ಮಕ್ಕಳು ಪಡೆದುಕೊಂಡು ಹುಟ್ಟುವದಕ್ಕೆ ನಾವು Telegony ಎಂದು ಹೇಳುತ್ತೇವೆ ಗೊತ್ತಾ? [illegible] ವಿಚಿತ್ರ ಸತ್ಯ. ಪಾಪ ಈಗ ಅವರ ಮೇಲೆ ನಿಮಗೆ ತಿರಸ್ಕಾರ ಬಂದಿದೆ ಅಂತಾ ಅವರ ಶೀಲವನ್ನು ಕಾಸಿಗೆ ಹರಾಜು ಮಾಡಬೇಡಿ...' ಅಂತಾ ಹೇಳಿದಳು. ವತ್ಸಲಾ ಹೀಗೆ ಹೇಳಿದಾಗಿನಿಂದ ಅವಳ ಮೇಲೆ ನನಗೆ ಗೌರವ ಇಮ್ಮಡಿಯಾಗಿದೆ. ನಾಳೆ ಪಾಂಚಗಣಿಗೆ ಅವರ ಮನೆಯವರೆಲ್ಲ ಹೋಗುತ್ತಾರೆ. ನಾನೂ ಹೋಗುತ್ತೇನೆ ಅಷ್ಟೆ".

"ಏನೂ ಸಂಬಂಧವಿಲ್ಲದವರಂತೆ ನೀವು ಹೋದರೆ ನಾನೇನು ಮಾಡಲಿ......?"

"ಏಕೆ ನೀನೊಬ್ಬಳೇ ಏನು? ಇದ್ದಾನಲ್ಲ ನಿನ್ನ ಮುದ್ದುಗುವರ? ನಿನ್ನ albino..."

ವೈದೇಹಿಯ ಮುಖಕ್ಕೆ ಯಾರೋ ಬಲವಾಗಿ ಏಟು ಕೊಟ್ಟಂತಾಯಿತು. ಶ್ರೀಯನ್ ಈಗ ಹೃದಯಹೀನ ಪಶುವಿನಂತೆ ವರ್ತಿಸಿದರೂ ಅವನನ್ನು ದಂಡಿಸುವ ಅಧಿಕಾರವಿಲ್ಲ. ತನಗೆ. ಅಂದು ರಾಜನ್ ಭಾವನೆಗೆ ಒಂದು ಕವಡೆಯ ಬೆಲೆ ಕೊಡದೆ ತಾನೂ ಧಿಕ್ಕರಿಸಿ ಪಾಂಚಗಣಿಗೆ ಹೊರಟುಹೋಗಿರಲಿಲ್ಲವೆ?

ಅಂದು ಪಾಂಚಗಣಿಗೆ ಹೋಗುತ್ತೇನೆ ಎಂದು ಹೇಳಿದ ಶ್ರೀಯನ್ ಮರಳಿ ಬರಲಿಲ್ಲ. ಹತ್ತು ದಿನದ ನಂತರ ಆಫೀಸಿಗೆ ಹೋಗಿ ವಿಚಾರಿಸಿದಾಗ ಶ್ರೀಯನ್ ರಾಜೀನಾಮೆ ಕೊಟ್ಟು ದಿಲ್ಲಿಗೆ ಬೇರಾವುದೋ ಕೆಲಸ ಹಿಡಿದು ಹೊರಟುಹೋದ ಸುದ್ದಿಯನ್ನು ಅದೇ ವತ್ಸಲಾ ಹೇಳಿದ್ದಳು.

ಮುಂಬೈಯಂತಹ ಬೃಹತ್ ನಗರದಲ್ಲಿ ತಾನು ಏಕಾಕಿ. ಯಾರ ಸಹಾಯ ಕೋರಬೇಕು. ಮಗುವನ್ನೂ ಕಟ್ಟಿಕೊಂಡು? ಹೊಟ್ಟೆ ಹೊರೆಯಲು ಒಂದು ಉದ್ಯೋಗವಾದರೂ ಬೇಡವೆ? ತಂದೆಯ ಮನೆಗೆ ತಿರುಗಿ ಹೋಗಲು ಆತ್ಮಾಭಿಮಾನ ಬಿಡಲಿಲ್ಲ.

ಕೊನೆಗುಳಿದದ್ದು ಒಂದೇ ಉಪಾಯ. ತಾನು ಮಾಡಿದ ತಪ್ಪಿಗಾಗಿ ತಾನೇ ಸೋಲೊಪ್ಪಬೇಕಾಗಿ ಬಂತು. ನಿರ್ವಾಹವಿಲ್ಲದೆ ರಾಜನ್‌ಗೆ ಇರುವ ಪರಿಸ್ಥಿತಿ ತಿಳಿಸಿ ಸಹಾಯ ಕೋರಬೇಕೆಂದು ಅಂದು ಬೆಳಿಗ್ಗೆ ಕಾಲೇಜಿಗೆ ಫೋನ್ ಮಾಡಿದಾಗ ಮಧ್ಯಾಹ್ನ ನಾಲ್ಕಕ್ಕೆ ಬರುವೆ. ಎಂದು ಅವರು ಮಾರುತ್ತರ ಕೊಟ್ಟಿದ್ದರು. ಅವರ ಧ್ವನಿಯಲ್ಲಿ ಮಾರ್ದವತೆ ಸೌಹಾರ್ದತೆ ಮಾಸಿರಲಿಲ್ಲ. ಅವರ ದೊಡ್ಡತನದ ಅರಿವಾಗಿ ವೈದೇಹಿಗೆ ಹೃದಯ ತುಂಬಿ ಬಂದಿತ್ತು.

"ಅಪ್ಪಪ್ಪಾ......"

ಮತ್ತೆ ಮಗುವಿನ ತೊದಲು ನುಡಿ ಕೇಳಿ ವೈದೇಹಿ ನೆನಪಿನ ಸುಳಿಯಿಂದ ಹೊರಬಂದಳು. ಆಗಲೇ ನಾಲ್ಕೂವರೆ. ಇನ್ನೇನು ರಾಜನ್ ಬಂದು ಬಿಡುತ್ತಾರೆ ಅವರ ಜೊತೆ ಏನು ಮಾತಾಡುವದು? ಹೇಗೆ ಪ್ರಾರಂಭಿಸಬೇಕು? ಅವರಿಗೆ ಅನ್ಯಾಯ ಮಾಡಿದ ತನಗೆ ಮುಖ ಕೊಟ್ಟು ಮಾತಾಡುವ ಧೈರ್ಯವಿದೆಯೆ......

ಕಾರಿಡಾರಿನಲ್ಲಿ ಬೂಟಿನ ಶಬ್ದ ಕೇಳಿ ವೈದೇಹಿಯ ಮುಖ ಬೆವರಿತು.

ಮಗು 'ಅಪ್ಪಪ್ಪ...' ಎನ್ನುವದನ್ನು, ಬರ್ಲಿನ ಕಾಲ್ ಜೆಲ್ "ಟ್ರನ್ ನ್'..." ಎನ್ನುವದಕ್ಕೂ ಸರಿಹೋಯಿತು!

ಸಾಂಕ್ರಾಮಿಕ ಸೀಮೋಲ್ಲಂಘನ

— ಶ್ರೀರಂಗ

ಲೇಖನದ ಹೆಸರು ಬಾಯಿ ತುಂಬುವಷ್ಟು ದೊಡ್ಡದಾಯಿತು. ಕ್ಷಮಿಸಬೇಕು. ತಪ್ಪು ನನ್ನದಲ್ಲ. ವಿಷಯವೇ ಅಷ್ಟೊಂದು ಘನವಾದುದೆಂದ ಮೇಲೆ ಲೇಖಕನು ನಿರುಪಾಯನಾಗಿದ್ದಾನೆ. ಆದರೂ ಪದಸಮುಚ್ಚಯವು ಉಚ್ಚಾರಕ್ಕೆ ಕಠಿಣವಾದಷ್ಟು ಅರ್ಥದ ದೃಷ್ಟಿಯಿಂದ ಕಠಿಣವಿಲ್ಲ ಎಂದು ನನ್ನ ಸೂಚನೆ. 'ಸಿಮೋಲ್ಲಂಘನ' ಎಂಬುದು ಹಿಂದುವಿಗೆ ಗೊತ್ತಿದ್ದುದೆ; 'ಸಾಂಕ್ರಾಮಿಕ' ಎಂದರೆ ಒಬ್ಬರಿಂದ ಒಬ್ಬರಿಗೆ ಹಿಡಿದುಕೊಳ್ಳುವಂತಹದು ಎಂಬುದು ಎಲ್ಲರಿಗಲ್ಲದಿದ್ದರೂ ಅನೇಕರಿಗೆ ಗೊತ್ತಿರಬಹುದಾಗಿದೆ. ಇಂದು ನಮ್ಮ ದೇಶದಲ್ಲಿ ಕ್ರಮೇಣ ಪಕ್ಷದಿಂದ ಪಕ್ಷಕ್ಕೆ, ರಾಜ್ಯದಿಂದ ರಾಜ್ಯಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಪಸರಿಸುತ್ತಿರುವ ಒಂದು ಪ್ರವೃತ್ತಿ ಸೀಮೆಯ ಈ ಕಡೆಯಿಂದ ಆ ಕಡೆಗೆ ಉಲ್ಲಂಘಿಸುವ, ದಾಟುವ ಪ್ರವೃತ್ತಿಯ ಬಗ್ಗೆ ನಾನು ಈಗ ಬರೆಯಬೇಕೆಂದಿರುವುದು.

ಸೀಮೋಲ್ಲಂಘನವು ಮಹತ್ವದ ವಿಷಯ ಎಂದು ನಾನು ಹೇಳುವುದಕ್ಕೆ ಕಾರಣವಿದೆ. ಯಾಕೆಂದರೆ ಇದು ಸಾಮಾನ್ಯರಿಗೆ ಸಂಬಂಧಿಸಿದ್ದಲ್ಲ. ಹಾಗೆ ನೋಡಿದರೆ ನಮ್ಮ ಹಿಂದಿನ ಇತಿಹಾಸ–ಪರಂಪರೆಯಲ್ಲಿ ವೀರಕ್ಷತ್ರಿಯರಿಗೇ ಇದು ಶಕ್ಯವಿದ್ದಿತು. ಪ್ರತಿವರ್ಷ ಇಂತಹದೊಂದು ಶುಭಮುಹೂರ್ತದಲ್ಲಿ ರಾಜನು ತನ್ನ ರಾಜ್ಯದ ಸೀಮೆಯನ್ನು ದಾಟಿ ಇನ್ನೊಂದು ರಾಜ್ಯದ ಮೇಲೆ ಯಾತ್ರೆಯನ್ನು ಹೊರಡಿಸಬೇಕು ಎಂದು ಸ್ಮೃತಿಶಾಸ್ತ್ರಗಳು ರಾಜಧರ್ಮದಲ್ಲಿಯೆ ಹೇಳಿವೆ. ಆಗಿನ ಕಾಲದಲ್ಲಿ ಇದು ಸುಲಭವಾಗಿದ್ದಿತು ಒಂದು ದೃಷ್ಟಿಯಿಂದ; ಯಾಕೆಂದರೆ, ಭಾರತದಲ್ಲಿ ನೂರಾರುಗಟ್ಟಲೆ ರಾಜ್ಯಗಳಿದ್ದವು. ಈಗ ದುರ್ದೈವದಿಂದ ಭಾರತವು ಏಕಸತ್ತೆಯ ರಾಜ್ಯವಾಗಿದೆ. ಆದುದರಿಂದ ಇಂದಿನ ಕ್ಷತ್ರಿಯ ವೀರರಿಗೆ ಸೀಮೋಲ್ಲಂಘನವು ಸುಲಭವಾಗಿಲ್ಲ. ಹೀಗಿದ್ದರೂ ಇಂದು ಸಿಮೋಲ್ಲಂಘನ ನಡೆದಿದೆಯಲ್ಲದ ದೇಶದ ತುಂಬ ಸಾಂಕ್ರಾಮಿಕವಾಗಿ ಹಬ್ಬುತ್ತಲಿದೆ ಎಂದರೆ ಇಂದಿನ ನಮ್ಮ ಕ್ಷತ್ರಿಯರ ಎಂದರೆ ರಾಜಕೀಯ ಅಧಿಕಾರಕ್ಕೆ ತಮ್ಮ ಜೀವನವನ್ನು ಮೀಸಲಿಟ್ಟ ಮುಂದಾಳು ವೀರರ ಶಕ್ತಿ ಎಷ್ಟು ಅತರ್ಕ್ಯವಾಗಿ ಶ್ರೇಷ್ಠವಾಗಿದೆ ಎಂದು ಹೇಳುವ ಅಗತ್ಯವಿಲ್ಲ.

ಮೊದಲು ಒಂದು ಮಾತನ್ನು ಸ್ಪಷ್ಟವಾಗಿ ತಿಳಿದುಕೊಳ್ಳೋಣ. ಅಧಿಕಾರಕ್ಕಾಗಿ ಪಕ್ಷಾಂತರ ಮಾಡುವುದು ಕ್ಷುಲ್ಲಕ ಮನೋವೃತ್ತಿ ಎಂದು ತಪ್ಪು ತಿಳಿದುಕೊಳ್ಳುವುದು ಬೇಡ. ರಾಜ್ಯವನ್ನು ನಡೆಸುವುದು ಕ್ಷತ್ರಿಯ ಧರ್ಮ, ರಾಜಕೀಯ ಅಧಿಕಾರವನ್ನು ವಹಿಸುವುದು ರಾಜಕೀಯ ಮುಂದಾಳಿನ ಧರ್ಮ. ಸ್ವಧರ್ಮ ಸಂಪಾಲನೆಯು ಕರ್ತವ್ಯವಾಗಿದೆ. ಇಂದು ಕರ್ತವ್ಯ ಸಾಧನೆಗಾಗಿ, ದೇಶದ ಹಿತಕ್ಕಾಗಿ ನಮ್ಮ ರಾಜಕೀಯ ಮುಂದಾಳುಗಳು ಪಕ್ಷಾಂತರವನ್ನೇ ಮಾಡುತ್ತಲಿದ್ದಾರೆ ಎಂಬುದನ್ನು ಮರೆಯದಿರೋಣ. ಇಲ್ಲವಾದರೆ ಹೊಲಮನೆ ಮಾರುಗಳನ್ನೆಲ್ಲ ಮಾರಿಕೊಂಡು ಚುನಾವಣೆಯಲ್ಲಿ ಹೋರಾಡುವ ಅಗತ್ಯವೇನು? 'ಸ್ವಧರ್ಮೇ ನಿಧನಂ ಶ್ರೇಯಃ' ಎಂಬ ವೀರೋಚಿತ ಧ್ಯೇಯದಿಂದ ಚುನಾವಣೆಯ ರಣಾಂಗಣಕ್ಕಿಳಿದವರು. ಚುನಾವಣೆಯನ್ನು ಗೆದ್ದವರು ಮಂತ್ರಿಗಳಾಗದಿದ್ದಲ್ಲಿ ಪರಿಶ್ರಮ ವ್ಯರ್ಥವಲ್ಲವೆ? ಆದುದರಿಂದ ಇಂದಿನ ಕಾಲದಲ್ಲಿ ಚುನಾವಣೆಯೆ ವಿಜಯ ಯಾತ್ರೆ, ಚುನಾವಣೆಯ ತರುವಾಯ ವಿಜಯದಶಮಿ.

ಆಶ್ಚರ್ಯದ ಮಾತೆಂದರೆ ನಮ್ಮ ಸಂಪ್ರದಾಯವನ್ನು ಅರಿಯದೆಯೆ ನಾವು ಈ ನಮ್ಮ ರಾಜಕೀಯ ವೀರರನ್ನು ನಿಂದಿಸುತ್ತಿದ್ದೇವೆ. ಸೀಮೋಲ್ಲಂಘನವು ನಮ್ಮ ಶಾಸ್ತ್ರಗಳು ವಿಧಿಸುವ ಕರ್ತವ್ಯ ಎಂದು ಮೇಲೆ ಹೇಳಿದೆಯಷ್ಟೆ? ಅದರಂತೆ ನಮ್ಮ ಇತಿಹಾಸ ಪರಂಪರೆಯಲ್ಲಿಯೂ ದೃಷ್ಟಾಂತಗಳಿವೆ. ರಾಮಾಯಣಕಾಲದ ದೃಷ್ಟಾಂತವನ್ನೇ ತೆಗೆದುಕೊಳ್ಳೋಣ. ಅಲ್ಲಿ ಒಂದು ರಾಮ ಪಕ್ಷ, ಒಂದು ರಾವಣ–ಪಕ್ಷ; ವಿಭೀಷಣನು ರಾವಣನ ತಮ್ಮ, ರಾವಣನ ಪಕ್ಷದವ. ಆದರೆ ಅವನು 'ಸೀಮೋಲ್ಲಂಘನ' (crossing the floor) ಮಾಡಿದನಲ್ಲದೆ ತಾನೇ ಸಿಂಹಾಸನವನ್ನೇರಿದ. ಎಂದರೆ ಅಧಿಕಾರಕ್ಕಾಗಿ ಪಕ್ಷಾಂತರ ಮಾಡುವುದು ನಮ್ಮ ಸನಾತನ ಸಂಪ್ರದಾಯ ಎನ್ನಬಹುದು.

ನಿಜವಿದ್ದ ಮಾತೆಂದರೆ 'ಪಕ್ಷಾಂತರ'ವು ನಿಸರ್ಗದ ನಿಯಮಗಳಲ್ಲಿ ಒಂದಾಗಿದೆ. ಪತಂಗಗಳನ್ನೂ ಪಕ್ಷಾಂತರವನ್ನು ಮಾಡುವ ಚಂದ್ರನಿರುವಾಗ ವರ್ಷದಲ್ಲಿ ಒಂದೆರಡು ಸಲ ಮಾತ್ರ ನಾವು ಮಾಡಿದರ ತಪ್ಪೇನು?

ಇದಲ್ಲದೆ ಇನ್ನೂ ಒಂದು ಮಹತ್ವದ ವಿಷಯ ಇದರಲ್ಲಿ ಅಡಕವಾಗಿದೆ. ನಮ್ಮದು ಪ್ರಜಾಪ್ರಭುತ್ವದ–ಎಂದರೆ ಡೆಮಾಕ್ರಸಿಯ–ಪದ್ಧತಿ. ಬಹುಮತದ ಅಭೀಷ್ಟದಂತೆ ನಡೆಸುವುದು ಪ್ರಜಾಪ್ರಭುತ್ವದ ವೈಶಿಷ್ಟ್ಯ; ಅದರಂತೆಯೇ ಇಂದು ಅಲ್ಪಸಂಖ್ಯಾಕವಾದ ಪಕ್ಷಕ್ಕೆ ಮುಂದೆ ಬಹುಸಂಖ್ಯಾಕ ಪಕ್ಷವಾಗುವ ಅವಕಾಶ ಮತ್ತು ಸ್ವಾತಂತ್ರ್ಯ ಇರುವುದು ಪ್ರಜಾಪ್ರಭುತ್ವದ ಇನ್ನೊಂದು ವೈಶಿಷ್ಟ್ಯ. ನಮ್ಮಲ್ಲಿ ಪ್ರಜಾಪ್ರಭುತ್ವವು ಶಾಂತತೆಯ ಶಕ್ತಿಯಾಗಿದೆ ಎನ್ನುವುದಕ್ಕೆ ನಮ್ಮ ರಾಜಕೀಯ ಪಕ್ಷಗಳಿಗೆ ಬಹುಸಂಖ್ಯಾಕ ಪಕ್ಷವಾಗಲು ಇರುವ ಹೆಚ್ಚಿನ ಅವಕಾಶ ಮತ್ತು ಸ್ವಾತಂತ್ರ್ಯವೆ ಸಾಕ್ಷಿ. ಇಂದು ನನ್ನ ಪಕ್ಷಕ್ಕೆ ಬಹುಮತವಿಲ್ಲದಿದ್ದರೆ ನಾಳೆ ಇನ್ನೊಂದು ಪಕ್ಷದವರನ್ನು ಸೇರಿಸಿಕೊಂಡು ಬಹುಮತವನ್ನು ಪಡೆದುಕೊಳ್ಳುತ್ತೇನೆ. ನನ್ನ ಅನುಕೂಲದ ಪ್ರಕಾರ ಬೇಕಾದವರೊಡನೆ ಕೂಡಿಕೊಂಡು ಬಹುಮತವನ್ನು ಗಳಿಸಿಕೊಳ್ಳಬಲ್ಲೆ.

ಈಗ ಕೆಲವರಿಗೆ ಒಂದು ಸಂಶಯ ಬರಬಹುದು. ಅಧಿಕಾರವನ್ನು ಪಡೆಯುವುದೆ ಉದ್ದೇಶವಾಗಿದ್ದರೆ ಬೇರೆ ಬೇರೆ ಪಕ್ಷಗಳ ಅಗತ್ಯವೇನು? ಒಂದು ರಾಜಕೀಯ ಪಕ್ಷವೆಂದರೆ ಅದಕ್ಕೊಂದು ವಿಶಿಷ್ಟ ಧ್ಯೇಯ, ಆರ್ಥಿಕ ಧೋರಣೆ ಮುಂತಾದ್ದು ಇರಬೇಕಲ್ಲವೆ? ಹೀಗಿರುವಾಗ ಒಂದು ಶರ್ಟನ್ನು ಕಳೆದು ಇನ್ನೊಂದು ಶರ್ಟನ್ನು ತೊಡುವಷ್ಟು ಸುಲಭವಾಗಿ ಒಂದು ಪಕ್ಷವನ್ನು ಬಿಟ್ಟು ಇನ್ನೊಂದು ಪಕ್ಷವನ್ನು ಸೇರಬಹುದೆ? ಅನುಭವ ಇಲ್ಲದವರಿಗೆ ಇಂತಹ ಸಂಶಯಗಳು ಬರಬಹುದಾಗಿದೆ. ಆದರೆ ತುಸು ವಿಚಾರ ಮಾಡಿ ನೋಡಿದಲ್ಲಿ ಇಂತಹ ಸಂಶಯಕ್ಕೆ ಆಸ್ಪದವೇ ಇಲ್ಲ ಎಂಬುದು ಸ್ಪಷ್ಟವಾಗುವುದು. ಮೇಲೆ ಹೇಳಿದ ಶರ್ಟಿನ ದೃಷ್ಟಾಂತವನ್ನೇ ತೆಗೆದುಕೊಳ್ಳೋಣ. ಶರ್ಟನ್ನು ತೊಡುವ ಉದ್ದೇಶವೇನು? ಮೈ ಮುಚ್ಚಬೇಕೆಂದೆ? ಅಂದ ಕಾಣಬೇಕೆಂದೆ? ಬೆಚ್ಚಗಿರಬೇಕೆಂದೆ? ಅನೇಕ ಅಗತ್ಯಗಳ ತೃಪ್ತಿಗಾಗಿ ಶರ್ಟನ್ನು ತೊಡುವುದು. ಅವುಗಳಲ್ಲಿ ಯಾವುದೆ ಅಗತ್ಯದ ತೃಪ್ತಿಯಾಗಲಿಲ್ಲವೆಂದರೆ? ಇನ್ನೊಂದು ಶರ್ಟನ್ನು ತೊಡುವುದು! ಅಗತ್ಯಗಳ ತೃಪ್ತಿ ಮುಖ್ಯ, ಶರ್ಟ ಮುಖ್ಯವಲ್ಲ. ಅದರಂತೆಯೇ ಒಂದು ಪಕ್ಷದ ಸದಸ್ಯನಾಗುವುದು ಯಾಕೆ? ಅಲ್ಲಿಯೂ ಕೆಲವು ಅಗತ್ಯಗಳ ತೃಪ್ತಿಯಾಗಬೇಕಿರುವುದು; ಪಕ್ಷವು ಮುಖ್ಯವಲ್ಲ, ಅಗತ್ಯ–ಸಂತೃಪ್ತಿ ಮುಖ್ಯ. ಆ ವಿಶಾಲ ದೃಷ್ಟಿ ನಮ್ಮ ಮುಂದಾಳುಗಳಿಗಿದೆ. ಇದಲ್ಲದೆ ಸ್ವಾರ್ಥವನ್ನು ಪೂರ್ತಿ ಬಿಟ್ಟುಕೊಡುವುದು ಅನೇಕ ವರ್ಷಗಳ ಅಭ್ಯಾಸವಾಗಿದೆ. ಈಗ 'ಸ್ವಾರ್ಥ' ಎಂಬ ಕಲ್ಪನೆ ಕೂಡ ಕೆಲವು ಹಿರಿಯ ಮುಂದಾಳುಗಳಿಗಿಲ್ಲ. ತನ್ನದೆಂಬುದು ಯಾವುದೂ ಇಲ್ಲದಾಗ 'ತನ್ನ ತತ್ತ್ವ' [illegible]ವೆ

'ತನ್ನ ಪಕ್ಷ' ಎಂಬ ಸಂಕುಚಿತ ಭಾವನೆಗೆ ಅವಕಾಶವೆಲ್ಲಿ?

ಈ ಪಕ್ಷಾಂತರ ಇಲ್ಲವೆ ಸೀಮೋಲ್ಲಂಘನ ವ್ಯವಹಾರದ ವಿರುದ್ಧವಾಗಿ ಅನೇಕ ಕಡೆಗಳಿಂದ ಅಪಪ್ರಚಾರ ನಡೆದುದರಿಂದ ಈ ಲೇಖನದಲ್ಲಿ ಆಗಾಗ ವಾಚಕರಿಗೆ ಎಚ್ಚರಿಕೆಯನ್ನು ಕೊಡ ಲಾಗುತ್ತಿದೆ. ಅಂತಹದೊಂದು ಎಚ್ಚರವನ್ನು ಈಗ ಕೊಡುತ್ತಿದ್ದೇನೆ. ಅಧಿಕಾರದ ದುರಾಸೆ ಯಿಂದ ಪಕ್ಷಾಂತರ ಮಾಡುವುದು ಬುದ್ಧಿವಂತಿ ಕೆಯು, ಇಲ್ಲವೆ ಗೌರವದ ಲಕ್ಷಣವಲ್ಲ ಎಂಬುಂ- ದೊಂದು ಅಪಪ್ರಚಾರದ ಮಾತನ್ನು ನೀವು ಕೇಳಿರಬಹುದು. ವಿಚಾರ ಮಾಡಿ ನೋಡಿರಿ, ಪಕ್ಷಾಂತರವು ಬುದ್ಧಿವಂತಿಕೆಯ ಲಕ್ಷಣವಲ್ಲವೆ? ಯಾವ ಸಮಯಕ್ಕೆ ಯಾವ ಪಕ್ಷವನ್ನು ಸೇರಿ ದರೆ ಧ್ಯೇಯಸಿದ್ಧಿಯಾದೀತು ಎಂದು ಮುಂದಾ ಲೋಚನೆಯಿಂದ ಸರಿಯಾಗಿ ತಿಳಿದುಕೊಳ್ಳುವ ಬುದ್ಧಿವಂತಿಕೆ ಎಷ್ಟು ಜನರಿಗಿದೆ? ಇನ್ನು ಗೌರ ವದ ಮಾತು. ಪಕ್ಷಾಂತರದಿಂದಲೆ ವ್ಯಕ್ತಿಯು ತನ್ನ ಗೌರವವನ್ನು ವ್ಯಕ್ತಪಡಿಸುವಾಗ ಪಕ್ಷಾಂ- ತರದಲ್ಲಿ ಗೌರವವಿಲ್ಲ ಎನ್ನಬಹುದೆ? ಈಗಿದ್ದ ಪಕ್ಷದಲ್ಲಿ ನನಗೆ ಗೌರವವಿಲ್ಲ ಎಂಬುದನ್ನು ಕಂಡು, ಇನ್ನೊಂದು ಪಕ್ಷವನ್ನು ಸೇರಿ ನನ್ನ ಗೌರವ ವನ್ನು ನಾನು ಪ್ರದರ್ಶಿಸುತ್ತೇನೆ! ನಾನು ತಮ್ಮ ಪಕ್ಷಕ್ಕೆ ಸೇರಬೇಕು, ತಮ್ಮ ಪಕ್ಷಕ್ಕೆ ಸೇರಬೇಕು ಎಂದು ಬೇರೆ ಬೇರೆ ಪಕ್ಷಗಳು ನನಗಾಗಿ ಸ್ಪರ್ಧಿ ಸುವಾಗ ಪಕ್ಷಾಂತರದಿಂದ ನನ್ನ ಗೌರವ ಕಳೆ ಯುವುದು ಎಂದು ಯಾವ ಬುದ್ಧಿವಂತನು ವಾದಿಸುವನು? ಒಂದು ವೇಳೆ ಹಾಗೆ ವಾದಿಸಿ ತನ್ನ ಹಟವನ್ನು ಅವನು ಸಾಧಿಸಲೇಬೇಕೆಂದು ನಿಶ್ಚಯಿಸಿದರೆ ತತ್‌ಕ್ಷಣ ಅವನ ಪಕ್ಷ ವನ್ನು ಬಿಟ್ಟು ಇನ್ನೊಂದು ಪಕ್ಷವನ್ನು ಸೇರಿ ಕೊಳ್ಳುವೆನು ನಾನು. ಆಗ ತನ್ನ ಪಕ್ಷದ ಒಬ್ಬ ಸದಸ್ಯನನ್ನು ಕಳೆದುಕೊಂಡುದು ಮಾತ್ರ ಅವನ ಬುದ್ಧಿವಂತಿಕೆಯ ಪರಿಣಾಮವಾಗುವುದು.

ನಿಜವಿದ್ದ ಮಾತೆಂದರೆ ಪಕ್ಷಾಂತರವೆಂಬು ದರಲ್ಲಿ ಒಂದು ಘನವಾದ ಲೋಕಸಂಗ್ರಹ ಕಾರ್ಯದ ತತ್ತ್ವ ಅಡಕವಾಗಿದೆ. 'ಲೋಕ ಸಂಗ್ರಹ' ಎಂದು ಬುದ್ಧಿಪೂರ್ವಕವಾಗಿ ಹೇಳು ತ್ತಿದ್ದೇನೆ. ಪರಮಾತ್ಮನು ಹೇಳಿಲ್ಲವೆ, ಲೋಕ ಸಂಗ್ರಹಕ್ಕಾಗಿ ತಾನು ಬೇರೆ ಬೇರೆ ಅವತಾರ- ಗಳನ್ನು ತಾಳುವನು ಎಂದು ? ನಮ್ಮ ಹಿತ ಕ್ಕಾಗಿ ನಮ್ಮ ರಾಜಕೀಯ ಮುಂದಾಳು ಕೂಡ ಬೇರೆ ಬೇರೆ ಅವತಾರದಂತೆ ಬೇರೆ ಬೇರೆ ಪಕ್ಷಾಂ- ತರವನ್ನು ಮಾಡುವನು. ಜನರ ಹಿತಕ್ಕಾಗಿ ಹಣ ತೊಟ್ಟು, ಪರಿಶ್ರಮದಿಂದ ಚುನಾವಣೆ ಯನ್ನು ಗೆದ್ದು ಜನರಿಗಾಗಿ ಒಳ್ಳೆಯ ಕೆಲಸ ಮಾಡದಿದ್ದರೆ ಪ್ರಯೋಜನವೇನು? ಕೆಲಸವನ್ನು ಮಾಡುವುದಾದಲ್ಲಿ ಅಧಿಕಾರವಿರಬೇಕಲ್ಲ! ಆದುದ ರಿಂದ ಅಧಿಕಾರಪದವನ್ನು ಪಡೆಯುವುದು ಅನಿವಾರ್ಯವಾಗುವುದು. ಹೀಗಿರುವಾಗ ಅಧಿಕಾರ ಪದಕ್ಕೆ ಅವಕಾಶವನ್ನು ಒದಗಿಸದ ಪಕ್ಷದಲ್ಲಿ ಉಳಿದುಕೊಂಡರೆ ಏನು ಸಾಧಿಸಿದಂತಾಯಿತು? ಆದ್ದರಿಂದ ಪಕ್ಷವನ್ನು ಬಿಟ್ಟು ಅಗತ್ಯವಿದ್ದರೆ ಮುರಿದು ಕೂಡ ಅಧಿಕಾರವನ್ನು ಸ್ವೀಕರಿಸು ವುದು ನ್ಯಾಯ್ಯ.

ಹಿಂದಿನ ಕಾಲದ ಸೀಮೋಲ್ಲಂಘನವೆಂದರೆ ಇಂದಿನ ಕಾಲದ ಪಕ್ಷಾಂತರ ಎಂದು ಮೇಲೆಯೇ ಹೇಳಿದ್ದೇನೆ ಇತಿಹಾಸ-ಪರಂಪರೆಯಲ್ಲಿ ಸೀಮೋ ಲ್ಲಂಘನವು ರಾಜನ ಕರ್ತವ್ಯವಾಗಿತ್ತು. ಆ ಮಾತಿನ ಮಹತ್ವವನ್ನು ನಾವು ತಿಳಿದುಕೊಳ್ಳ ಬೇಕು. 'ಮಾರ್ಗಶೀರ್ಷೇ ಶುಭೇ ಮಾಸೆ' ಮುಂತಾಗಿ ರಾಜನು ಸೀಮೋಲ್ಲಂಘನವನ್ನು ಪ್ರತಿವರ್ಷ ಒಂದು ನಿಶ್ಚಿತ ಸಮಯಕ್ಕೆ ಮಾಡ ಬೇಕು ಎಂದು ಶಾಸ್ತ್ರಗಳು ಹೇಳುತ್ತಿದ್ದವು. ಶಸ್ತ್ರಾಸ್ತ್ರಗಳ ಪೂಜೆಯನ್ನು ಮಾಡಿ ವಿಜಯ ಯಾತ್ರೆಗೆ ರಾಜನು ಹೊರಡುತ್ತಿದ್ದನು. ಯಾಕೆ? ಅದರ ಉದ್ದೇಶವೇನು? ಉದ್ದೇಶವಿಷ್ಟೆ. ಪ್ರಜೆಗಳ ರಕ್ಷಣೆಯನ್ನು ಮಾಡುವುದು ರಾಜನ ಕರ್ತವ್ಯ ಆ ಕೆಲಸಕ್ಕೆ ಅವನು ಯಾವಾಗಲೂ ಸನ್ನದ್ಧ ನಾಗಿರಬೇಕು. ಒಮ್ಮೆ ಶತ್ರುಗಳು ದಾಳಿ ಮಾಡಿ ದರೆಂದು ತಿಳಿಯೋಣ, ಆಗ ಶಸ್ತ್ರಗಳು ತುಕ್ಕು ಹಿಡಿದಿದ್ದರೆ? ಅದಕ್ಕಾಗಿ ವರ್ಷಕ್ಕೊಮ್ಮೆ— ಯಾದರೂ ಅವನ್ನು ಹೊರಗೆ ತೆಗೆದು ಹಸನ ಮಾಡಬೇಕು; ಅದರಂತೆ ಸೈನ್ಯಕ್ಕೂ ಅಭ್ಯಾಸ- ವರ್ಷಕ್ಕೊಮ್ಮೆಯಾದರೂ- ಅಗತ್ಯ. ಇದೇ ತತ್ತ್ವದ ಮೇಲೆ ಇಂದಿನ ಪಕ್ಷಾಂತರವನ್ನು ನಾವು ನಿಲ್ಲಿಸಬೇಕಾಗಿದೆ. ಅಕಸ್ಮಾತ್ತಾಗಿ ಸರ ಕಾರ(ಮಂತ್ರಿಮಂಡಳ)ವನ್ನು ಉರುಳಿಸುವ- ಅಗತ್ಯ ಕಂಡಿತೆನ್ನೋಣ. ಆಗ ನಮ್ಮ ಸಿದ್ಧತೆ ಇಲ್ಲದಿದ್ದರೆ? ಅದಕ್ಕಾಗಿ ಆಗಾಗ ಪಕ್ಷಾಂತರದಿಂದ ಮಂತ್ರಿಮಂಡಳಗಳನ್ನು ಉರುಳಿಸುವ ಅಭ್ಯಾಸ ಅಗತ್ಯ. ಹಿಂದಿನ ಕಾಲದ ರಾಜನಿಗೆ ಜೀವಮಾನದ ವರೆಗೂ ರಾಜಪದವಿ ಇದ್ದುದರಿಂದ ವರ್ಷಕ್ಕೊಮ್ಮೆ ಸೀಮೋಲ್ಲಂಘನದ ಅಭ್ಯಾಸ ಸಾಕಾಗುತ್ತಿತ್ತು. ಆದರೆ- ಪಾಪ!- ಇಂದಿನ ನಮ್ಮ ರಾಜರ ಅಧಿಕಾ ರದ ಅವಧಿ ಕೇವಲ ಐದು ವರ್ಷಗಳ ಪರ್ಯಂತ. ಆದುದರಿಂದ ತಿಂಗಳಿಗೊಮ್ಮೆ ಸೀಮೋಲ್ಲಂಘನದ ಅಭ್ಯಾಸವನ್ನು ಮಾಡಿದರೂ ಸಾಲದು. ಇದೇ ಕಾರಣಕ್ಕಾಗಿ- ಶಸ್ತ್ರಾಸ್ತ್ರ ತುಕ್ಕು ಹಿಡಿಯ ಬಾರದು ಎಂಬ ತತ್ತ್ವಕ್ಕನುಸಾರವಾಗಿ- ವರ್ಷ ದುದ್ದಕ್ಕೂ ಬೈಗಳನ್ನೂ ಬೆದರಿಕೆಗಳನ್ನೂ ಜಾರಿ ಯಲ್ಲಿ ಇಡಲೇಬೇಕಾಗುವುದು. [illegible] ಯಾವ ಪಕ್ಷವನ್ನು [illegible] ಭರವಸೆ ಇಲ್ಲದ್ದಕ್ಕೆ ತನ್ನದನ್ನು ಸೇರಿಸಿ ಎಲ್ಲ ಪಕ್ಷಗಳನ್ನೂ ಅಷ್ಟೇ ಆಸಕ್ತಿಯಿಂದ ನೋಡ ಬೇಕಾಗುವುದು. ನಾಗರಿಕರ ಹಿತದ ಮುಂದೆ ಒಣ ಸೌಜನ್ಯಕ್ಕೆ ಬೆಲೆ ಇರುವುದೆ? ಇದಲ್ಲದೆ ಒಮ್ಮೆ ಬಿಟ್ಟುಕೊಟ್ಟ ಪಕ್ಷವನ್ನೆ ಇನ್ನೊಮ್ಮೆ ಕೂಡಿ ಕೊಳ್ಳುವ ಪ್ರಸಂಗವೂ ಬರಬಹುದಾದ್ದರಿಂದ ತನ್ನ ದೂಷಣೆಗಳನ್ನು ಯಾರೂ ನಂಬದಂತಹ ಅತಿಶಯೋಕ್ತಿಯಿಂದ ವ್ಯಕ್ತಪಡಿಸುವ ಬುದ್ಧಿ ವಂತಿಕೆಯೂ ಇಂದಿನ ನಮ್ಮ ರಾಜರಿಗೆ ಅಗತ್ಯ ವಿದೆ. ಕೊನೆಯದಾಗಿ, ಇಡಿಯ ಜೀವಮಾನ ಒಂದೇ ಪಕ್ಷದಲ್ಲಿದ್ದುಕೊಂಡು ಕೂಪಮಂಡೂಕ ವೃತ್ತಿಯುವರಾಗದೆ ಕಾಲಕಾಲಕ್ಕೆ ಬೇರೆ ಬೇರೆ ಪಕ್ಷಗಳ ಸಾಕ್ಷಾದನುಭವದಿಂದ ಈ ನಮ್ಮ ರಾಜರು ಅತ್ಯಂತ ವಿಶಾಲಹೃದಯುದವರಾಗುತ್ತಾರೆ.

ನಮ್ಮ ದೇಶದ ರಾಜಕೀಯದಲ್ಲಿ ತಾತ್ಕಾಲಿಕ ವಾಗಿ, ಕ್ಷಣಿಕವಾಗಿ ತಲೆ ಎತ್ತಿದ ಈ ಪಕ್ಷಾಂತ ರಕ್ಕೆ ಒಂದು ಶ್ರೇಷ್ಠ ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಸ್ಥಾನ ದೊರೆಯುವಷ್ಟು ಮಹ ತ್ತ್ವವನ್ನು ಕೊಡಬೇಕೆ- ಎಂದು ಕೆಲವರಿಗೆ ಉಚಿತಾನುಚಿತದ ಸಂಶಯ ಬರಬಹುದಾಗಿದೆ. ಆ ಸಂಶಯವು ಇದುವರೆಗೆ ಬರೆದದ್ದನ್ನು ಓದಿಯೂ ನಿವಾರಣೆಯಾಗಿರದಿದ್ದರೆ ಅವರಿಗಾಗಿ ಹೇಳುವೆ, ಕೇಳಿರಿ. ಈ ಪ್ರಶ್ನೆ ತಾತ್ಕಾಲಿಕ, ಕ್ಷಣಿಕ ಎಂದು ತಿಳಿಯಕೂಡದು; ಇಷ್ಟೆ ಅಲ್ಲದೆ, ಇದರ ಮಹತ್ತ್ವವನ್ನೂ ಅಗತ್ಯವನ್ನೂ ತಿಳಿದು ಕೊಂಡು ನಾವಾಗಿಯೆ ಇದು ನಮ್ಮಲ್ಲಿ ಶಾಶ್ವತ ವಾಗಿ ಹಿಂದೆ ಹೇಳಿದಂತೆ ನಮ್ಮ ರಾಜಕೀಯದಲ್ಲಿ ವಿಶಾಲಹೃದಯತೆ ಮೊದಲಾದ ಒಳ್ಳೆಯ ಗುಣ ಗಳಿಗೆ ಅವಕಾಶವನ್ನು ಮಾಡಿಕೊಡಲಿ. ಇದಲ್ಲದೆ 'ವಿಶೇಷ ಸಂಚಿಕೆ' ಎಂಬುದರಲ್ಲಿ ಮಡಿವಂತಿಕೆ ಇದೆಯೆ? ಅದೂ ಹೋಗಲಿ ದೀಪಾವಳಿಗೆ ಸಂಬಂಧಿಸಿದ ವಿಶೇಷ ಸಂಚಿಕೆ. ದೀಪಾವಳಿ ಎನ್ನುವುದು ಬಲಿಯನ್ನು ವಾಮನನು ಮೆಟ್ಟಿದ ಕತೆಯ ಸಂದರ್ಭವಾಗಿದೆ. ಆ ಕತೆಯಿಂದ

ಕಣ್ಣುಗಳಲ್ಲಿ ಆ ಕಾಂತಿ...

ಕಾಣಿಕೆಗಳನ್ನು ಕೊಟ್ಟಾಗ ನಮ್ಮ ಪ್ರೀತಿಪಾತ್ರರಾದವರ ಕಣ್ಣುಗಳಲ್ಲಿ ಆ ವಿಶೇಷ ಕಾಂತಿ ಮೂಡುವುದು.
ವಿಶೇಷ ಸಂದರ್ಭಗಳಲ್ಲಿ ಕಾಣಿಕೆಗಳನ್ನು ಕೊಡಲೇಬೇಕಲ್ಲವೆ? ಆದರೆ ನಮ್ಮ ಪ್ರೀತಿಯನ್ನು ವ್ಯಕ್ತಪಡಿಸಲು
ಇನ್ನೊಂದು ಒಳ್ಳೆಯ ಕ್ರಮವಿದೆ ಎಂಬುದನ್ನು ನಾವು ಮರೆಯಬಾರದು.
ಬ್ಯಾಂಕ್ ಆಫ್ ಇಂಡಿಯಾದಲ್ಲಿ ತೆರೆದ ಸೇವಿಂಗ್ಸ್ ಬ್ಯಾಂಕ್ ಖಾತೆಯ ರೂಪದಲ್ಲಿ ನಿಮ್ಮ ಕಾಣಿಕೆಯನ್ನು
ಕೊಡಿರಿ. ನಿಮ್ಮ ಈ ಪ್ರೇಮಪೂರ್ಣ ಕಾಣಿಕೆ ಅಧಿಕ ಉಪಯುಕ್ತವಾಗುವುದು, ಅಧಿಕ ಕಾಲ ಉಳಿಯುವುದು.

ದಿ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್.

ಟಿ. ಡಿ. ಕನ್ಸಾರಾ, ಜನರಲ್ ಮ್ಯಾನೇಜರ್

RAAS/8/94 KAN



ನಾವು ಕಲಿಯುವ ನೀತಿಪಾಠವೇನು? ವಾಮನನು ಒಂದು ಹೆಜ್ಜೆಯನ್ನು ಆಕಾಶದಲ್ಲಿ, ಒಂದನ್ನು ಭೂಮಿಯಲ್ಲಿ, ಮೂರನೆಯದನ್ನು ಪಾತಾಳದಲ್ಲಿ ಮೆಟ್ಟಿ ನಿಂತಂತೆ ನಾವು ಕೂಡ ನಮ್ಮ 'ಹೆಜ್ಜೆ'ಗಳನ್ನ ಬೇರೆ ಬೇರೆ 'ಸ್ಥಾನ' [ಪಕ್ಷ]ದಲ್ಲಿಟ್ಟುಕೊಂಡು ನಿಲ್ಲಬೇಕು, ಹಾಗೆ ಮಾಡಿದರೇನೆ ಇನ್ನೊಬ್ಬರನು ಮೆಟ್ಟಿ ನಿಲ್ಲಬಹುದು – ಎಂದೇ ಅಲ್ಲವೆ? ಅಜ್ಞಾನದ ಕತ್ತಲೆಯನ್ನ ಓಡಿಸುವ ದೀಪಗಳಂತೆ ಇಂತಹ ವಿಶೇಷ ಸಂಚಿಕೆಯ ಲೇಖನಗಳಾಗಿರಬೇಕು. ಅಷ್ಟೊಂದು ಪ್ರಕಾಶಮಾನವಾದ, [ಕಾಗದವು ಸುರಕ್ಷಿತವಾಗಿಯೂ] ಉಜ್ವಲವಾಗಿರುವಂತಹ ಶೈಲಿ ನನಗಿಲ್ಲ ಎಂಬುದೆ ನನ್ನ ದುಃಖವಲ್ಲದೆ ಇಂತಹ ಸಂದರ್ಭದಲ್ಲಿ ಇಂತಹ ವಿಷಯಕ್ಕೆ ಸಂಬಂಧಿಸಿಯೇ ಲೇಖನಗಳಿರಬೇಕು ಎಂದು ನನ್ನ ಹಟ ಕಥಾಸ್ತು- ಎಂದರೆ ಆ ಕಥೆ ಇಷ್ಟಕ್ಕೆ ಸಾಕು.

ಇಂದು ನಮ್ಮ ವಿಚಾರಪದ್ಧತಿಯಲ್ಲಿಯ ಮುಖ್ಯ ದೋಷವೆಂದರೆ ನಾವು ಶಬ್ದಕ್ಕೆ ಮೋಸ ಹೋಗುತ್ತಿದ್ದೇವೆ ಆ ಶಬ್ದ ಯಾವುದು? 'ಪಕ್ಷಾಂತರ' ಎನ್ನುವುದು ನಾಲ್ಕು ಜನರು ಸಾರ್ಥಕವಾಗಿ ಒಂದೆಡೆ ಸೇರಿದರೆ ಅದು ಪಕ್ಷ. ಆದ್ದರಿಂದ ಈ ವಿಷಯವೆ ತಾತ್ಕಾಲಿಕ, ಕ್ಷಣಿಕ ಎಂದು ತಿಳಿಯುತ್ತೇವೆ ಒಮ್ಮೊಮ್ಮೆ ಅದೇನೊ ಕಸ ಗುಡಿಸುವಂತಹ ಕೆಲಸ ಎಂಬಂತೆ ಅದನ್ನು ಅಲಂಕಾರಿಕವಾಗಿ ಇಂಗ್ಲಿಶ್‌ದಲ್ಲಿ 'crossing the floor' ಎನ್ನುತ್ತೇವೆ ಈ ಪದಪ್ರಯೋಗಗಳೆ ತಪ್ಪು ಎಂಬುದನ್ನು ಸ್ಪಷ್ಟವಾಗಿ ಸೂಚಿಸಲು ನಾವು ಪ್ರಾರಂಭದಲ್ಲಿಯೆ 'ಸೀಮೋಲ್ಲಂಘನ' ಎಂಬ ಪದವನ್ನು ಬಳಸಿದ್ದೇವೆ ವರ್ಷವರ್ಷಕ್ಕೊಮ್ಮೆ ಸೂರ್ಯನು ಸೀಮೋಲ್ಲಂಘನ[ಸಂಕ್ರಮಣ]ವನ್ನು ಮಾಡುತ್ತಾನೆ ಗೊತ್ತಿದೆಯೆ? ಯಾಕೆ? ಜಗತ್ತಿನಲ್ಲಿ ಮಳೆ ಚಳಿ ಬಿಸಿಲುಗಳ ಸುವ್ಯವಸ್ಥೆ ಆಗಬೇಕು ಎಂಬುದಕ್ಕಾಗಿ. ನಮ್ಮ ರಾಜಕೀಯ ವೀರರೂ ಅದೇ ತತ್ವದ ಮೇಲೆ ಇಂದಿನ ಸೀಮೋಲ್ಲಂಘನಗಳನ್ನ ಮಾಡುತ್ತಾರೆ ಇದೇ ದೆ. ಇದು ಶೌರ್ಯದ ಮಾತು, ಬುದ್ಧಿವಂತಿಕೆಯ ಕೆಲಸ ಇದಕ್ಕೆ ನಿಜವಾದ ಗೌರವ ಸಿಗಬೇಕು. ಇಲ್ಲವಾದರೆ, ಲಕ್ಷ್ಮಣನು ಹಾಕಿದ ರೇಖಾಸೀಮೆಯನ್ನು ಉಲ್ಲಂಘಿಸಿ ಇತ್ತ ರಾವಣನ ಪಕ್ಷವನ್ನು ಸೇರದೆ, ಇತ್ತ ರಾಮನ ಪಕ್ಷದಲ್ಲಿ ಸಂಶಯಕ್ಕೆ ಗುರಿಯಾದ ಸೀತಾದೇವಿಯ ಅವಸ್ಥೆಯಾಗುವುದು ಇನ್ನೊಂದು ದೃಷ್ಟಿಯಿಂದ ನೋಡಿದಲ್ಲಿ ಇದು 'ಪಕ್ಷಾಂತರ'ವೆ ಅಲ್ಲ ಪಕ್ಷಾಂತರ ಎನ್ನುವಾಗ ಒಂದು ಪಕ್ಷದಿಂದ ಇನ್ನೊಂದು ಪಕ್ಷ ಎಂಬ ಅರ್ಥವಿದೆ ಆದರೆ ನಿಜವಾಗಿ ಇದರಲ್ಲಿ ಕೇವಲ ತನ್ನ ಹಿತದ ದೃಷ್ಟಿ ಇರುವುದಲ್ಲದೆ ಪಕ್ಷದ ಸಂಬಂಧವೆ ಇರುವುದಿಲ್ಲ ಎಂದ ಮೇಲೆ 'ಪಕ್ಷಾಂತರ' ಎಂತಹದು?

ಕೊನೆಯದಾಗಿ, ಒಂದು ಮಾತನ್ನು ಲಕ್ಷ್ಯದಲ್ಲಿಡೋಣ. ಪಕ್ಷಾಂತರ ಎಂಬ ಹೆಸರನ್ನಿಟ್ಟರೂ ಅಡ್ಡಿ ಇಲ್ಲ; ಆದರೆ ಅದೊಂದು ಪಾಪ ಇಲ್ಲವೆ ಮಹಾಪರಾಧ ಎಂದು ತಿಳಿಯುವ ತಪ್ಪನ್ನು ಮಾಡುವುದು ಅಗತ್ಯವಿದೆಯೆ? ಯುಗ ಬದಲಾದಂತೆ ವೇಷ ರೂಪಗಳನ್ನ ಬದಲಾಯಿಸುವ ದೇವನು ನಮ್ಮ ಸಂಪ್ರದಾಯದಲ್ಲಿರುವಾಗ ಕಾಲಕ್ಕೆ ತಕ್ಕಂತೆ ರಾಜಕಾರಣಿಗಳೂ ರೂಪ–ವೇಷಗಳನ್ನು ಬದಲಾಯಿಸಬಹುದಲ್ಲ? ರಾಜ್ಯದ ಲಾಭಕ್ಕಾಗಿ ವಿಭೀಷಣನು, ಮೋಕ್ಷದ ಲಾಭಕ್ಕಾಗಿ ವಿದುರನು ಜೀವಮಾನದ ಸಂಬಂಧಗಳನ್ನು ತೊರೆದು ಹಾಕಿ ಪಕ್ಷಾಂತರವನ್ನು ಮಾಡಿದ್ದು ಪಾಪವೆ? ಅಪರಾಧವೆ? ಹೋಗಲಿ ಆ ತತ್ವ, ಈ ತತ್ವ ಎಡ ಬಲ ಎಂದು ಯಾವಯಾವುದೋ ಆರ್ಥಿಕ-ರಾಜಕೀಯ ಭೇದಗಳನ್ನ ಕಲ್ಪಿಸಿ, ದೇಶದ ಐಕ್ಯಕ್ಕೆ ಧಕ್ಕೆ ತರುವಂತೆ ನೂರಾರು ಪಕ್ಷಗಳನ್ನು ರಚಿಸುವುದು ಒಳ್ಳೆಯದೆ ಇಲ್ಲವೆ ಒಂದು ಸರ್ವಸಮ್ಮತ, ಶಾಶ್ವತ ಧ್ಯೇಯವನ್ನಿಟ್ಟುಕೊಂಡು ಎಲ್ಲರನ್ನ ಒಂದುಗೂಡಿಸುವುದು ಒಳ್ಳೆಯದು ಅಧಿಕಾರ ಬೇಕು, ಮಂತ್ರಿಪದ ಬೇಕು ಎಂಬುದು ಪ್ರತಿಯೊಬ್ಬನಿಗೆ ಇಷ್ಟವಾದ; ಆದರಂತೆ ಮಾನವ ಸ್ವಭಾವದ ದೃಷ್ಟಿಯಿಂದ ಅದು ತ್ರಿಕಾಲಾಬಾಧಿತವೆನ್ನಿಸಬಹುದಾದ ಧ್ಯೇಯ ಇದನ್ನೊಪ್ಪಿಕೊಂಡು ಇಡೀ ದೇಶದ ತುಂಬ ಒಂದೇ ಪಕ್ಷವನ್ನು ಸ್ಥಾಪಿಸಬಹುದಲ್ಲ?

ನೀವು ತಪ್ಪು ತಿಳಿದುಕೊಳ್ಳದಿದ್ದರೆ ಒಂದು ವಿಷಯವನ್ನ ನಿಮ್ಮ ಲಕ್ಷ್ಯಕ್ಕೆ ತರಬಯಸುತ್ತೇನೆ. ಇನ್ನೊಬ್ಬನನ್ನು ಒಂದು ದೋಷಕ್ಕಾಗಿ ಟೀಕಿಸುವಾಗ ಅದೇ ದೋಷ ನಮ್ಮಲ್ಲಿ ಇರಕೂಡದು ಎಂಬುದನ್ನು ನೀವೂ ಒಪ್ಪುವಿರಲ್ಲವೆ? ಹಾಗೆ ಪಕ್ಷಾಂತರವು ತಪ್ಪು ಎನ್ನಬೇಡಿರಿ, ಅದಕ್ಕಾಗಿ ಯಾರನ್ನೂ ಟೀಕಿಸಬೇಡಿರಿ. ಇನ್ನೂ ತಿಳಿಯಲಿಲ್ಲವೆ? ಬಾಯಿಬಿಟ್ಟು ಸ್ಪಷ್ಟವಾಗಿಯೆ ಹೇಳಬೇಕೆ? ಹಾಗಿದ್ದರೆ ಕೇಳಿರಿ. ಆ ತಪ್ಪನ್ನ ನೀವೂ ಮಾಡಿದ್ದೀರಿ. ರಾಜಕಾರಣಿಗಳಿಗಿಂತ ಮುಂಚಿತ ಮಾಡಿದ್ದೀರಿ- ಸಾರ್ವತ್ರಿಕ ಚುನಾವಣೆಗಳಲ್ಲಿ. ಇದುವರೆಗೂ ವರ್ಷಾನುವರ್ಷ ಒಂದೇ ಪಕ್ಷಕ್ಕೆ ಮತವನ್ನು ಕೊಡುತ್ತಿದ್ದ ನೀವು ಈಗ ಪಕ್ಷಾಂತರವನ್ನು ಮಾಡಿ ಬೇರೆ ಪಕ್ಷಗಳಿಗೆ ನಿಮ್ಮ ಮತವನ್ನು ಕೊಟ್ಟಿರುವಿರಲ್ಲವೆ? ನಿಮ್ಮ ಪ್ರತಿನಿಧಿಗಳಿಗೆ ನೀವೇ ಮಾದರಿ. ನೀವು ತೋರಿಸಿದ ಹೊಸ ದಾರಿಯಲ್ಲಿಯೆ ಅವರೂ ಹೆಜ್ಜೆಯನ್ನಿಟ್ಟರು, ತಪ್ಪೇನು? ಇದಲ್ಲದೆ ಚುನಾವಣೆಯಲ್ಲಿ ಮತವನ್ನು ಕೊಡುವಾಗ 'ಇವನ ಪಕ್ಷ ಇಂತಹದು' ಇಲ್ಲವೆ 'ಇವನು ಈ ಪಕ್ಷದಲ್ಲಿಯೆ ಉಳಿಯಲಿ' ಎಂಬ ಕಾರಣಕ್ಕಾಗಿ ಮತವನ್ನು ಕೊಟ್ಟವರು ಎಷ್ಟು ಜನ? ವೈಯಕ್ತಿಕ ಕಾರಣಗಳಿಗಾಗಿ ನೀವು ಮತವನ್ನು ಕೊಟ್ಟಿರುವಿರಿ. ತಾನು ಏನ ಮಾಡಿದರೂ ನಿಮ್ಮ ಒಪ್ಪಿಗೆ. ಆದ್ದರಿಂದ ಮುಂದೆ ಏನು ಮಾಡಿದರೂ ನಿಮ್ಮ ಒಪ್ಪಿಗೆ ಸಿಗುವುದು ಎಂದು ಆ ಬಡಪಾಯಿ ಹುರಿಯಾಳು. ಯಾಕೆ ತಿಳಿಯಬಾರದು?

ನಮ್ಮ ಸುದೈವ, ಹಾಗೆ ತಿಳಿದ ಬುದ್ಧಿವಂತ ಪ್ರತಿನಿಧಿಗಳು ಇದ್ದರೆಂಬುದು; ನಾವು ಹಾಕಿಕೊಟ್ಟ ಮಾದರಿಯನ್ನೆ ಪಾಲಿಸುತ್ತಿದ್ದಾರೆ ಎಂಬುದು. ನಮ್ಮ ಪ್ರತಿನಿಧಿಗಳ ನಿಜವಾದ ಪ್ರತಿನಿಧಿತ್ವ ಇಂದಿನ ಅವರ ನಡೆವಳಿಕೆ ನಮ್ಮಿಂದಲೆ ಸಂಕ್ರಮಿಸಿ ಅಂಟಿಕೊಂಡ ಅಭ್ಯಾಸದ ಫಲ

'ಸಾಂಕೇತಿಕ ಶೀರ್ಷಿಕೆ ...' ಎಂಬ ಹಣೆಬರಹ ಈ ಲೇಖನಕ್ಕೆ ಸಾರ್ಥಕ ಎಂದು ಒಪ್ಪುತ್ತೀರಲ್ಲ!

ದೀಪಾವಳಿ ಸಂಭ್ರಮ!

ದೀಪಾವಳಿ ದಿನವೇ ತೂಟ್ಟೊ ಹಾಲಿಲ್ಲ ಮಾಡಿಬಿಡ್ತು ಕಟ್ಟದನ

★

ಸಂತೋಷ ಸಂಭ್ರಮದಿ ನಲಿದಿರಲಿ ನಾಡು
ಕಾಣುತಿದೆ ನೋಡಲ್ಲಿ ಮತ್ತಿತರ ಗೂಡು
ಜಗವೆಲ್ಲ ತೆಗಳಿದರೂ ಬದಲಿಲ್ಲ ನೋಡು
ಸ್ವಾರ್ಥ ಹೇಸಿಗೆಗಳ ಗೊಬ್ಬರದ ಜೋಡು

— ಕೃ. ರಾ. ಸಾಮಿ

'ಕಷ್ಟಕಾಲ, ಈ ಸಲ ಒಂದೇ ದೀಪ ಹಚ್ಚು ಸಾಕು' ಅಂತ ಹೇಳಿದ್ರು ನಮ್ಮ ಯಜಮಾನ್ರು.

"ನನ್ನ ಹೆಂಡತಿ ಮಗಳು ಇಬ್ರೂ ಹೊರಗಡೆ ಕೂತುಬಿಟ್ಟದಾರೆ ಒಳ್ಳೇ ಸಮಯಕ್ಕೆ ಬಂದಿರಿ ಅಳಿಮಯ್ಯಾ."

ಸರಕು ಸಾಗಾಟದಲ್ಲಿ ಪ್ರಗತಿಯ ಮುನ್ನಡೆ!

ಭರದಿಂದ ಸಾಗುವ ರಾಷ್ಟ್ರದ
ಆರ್ಥಿಕ ಅಭಿವೃದ್ಧಿಯಲ್ಲಿ
"ರಸ್ತೆ ಸಾರಿಗೆ" ಯು
ಅತ್ಯಂತ ಮಹತ್ವದ ಪಾತ್ರವನ್ನು
ನಿರ್ವಹಿಸುತ್ತದೆ

ದೀಪಾವಳಿಯು
ಸರ್ವರಿಗೂ
ಸುಖಪ್ರದವಾಗಲಿ!

ರಾಷ್ಟ್ರದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ
ಸರಕುಗಳನ್ನು ಮಿತವ್ಯಯವಾಗಿಯೂ ತೀವ್ರವಾಗಿಯೂ
ಹಾಗೂ ಸುರಕ್ಷಿತವಾಗಿಯೂ ಸಾಗಿಸಲು ಈಗ ಶಕ್ಯವಾಗಿದೆ

H. O.
Khaskhar Lan
Thana



ಕಾಳೇಜ ಟ್ರಾನ್ಸಪೋರ್ಟ ಸರ್ವೀಸ್

Phone: 5915

ಒಡೆಯರು.
ರಘುನಾಥ ವಿ. ಕಾ
ಬಿ. ಕಾವ

೬೩-೬೫, ಡಾ. ಮಹೇಶ್ವರಿ ರೋಡ,
ಮುಂಬಯಿ-೯

ಫೋನ ನಂ. { 338514 &
333812

ಈ ಕೆಳಗಿನವುಗಳಿಗೆ ಟ್ರಾನ್ಸಪೋರ್ಟ ಕಂಟ್ರಾಕ್ಟರರು:
ಮೆ|| ಹಿಂದುಸ್ತಾನ ಲಿವರ ಲಿ.,
ಮೆ|| ಬರ್ಮಾಶೆಲ್ ಕಂಪನಿ ಲಿ.,
ಮೆ|| ಮೆಟಲ್ ಬಾಕ್ಸ ಕಂ. ಲಿ.,

ಕಾಳೇಜ ಟ್ರಾನ್ಸಪೋರ್ಟ ಸರ್ವೀಸ

ಮುಂಬಯಿಯಿಂದ

ಸಾಬೂನುಗಳು, ಚಹಾ, ಟಾಯಲೆಟರೀಜ ಹಾಗೂ ಪೆಟ್ರೋಲಿಯಂ ಪದಾರ್ಥಗಳ
ಬಹುಭಾರವಾದ ಸರಕುಗಳನ್ನು ದಕ್ಷಿಣದ ಪ್ರಮುಖ ನಗರಗಳಿಗೆ ಹಾಗೂ
ಮಹಾರಾಷ್ಟ್ರದಲ್ಲಿಯ ಚಿಕ್ಕ ಹಾಗೂ ದೊಡ್ಡ ನಗರಗಳಿಗೆ ಪ್ರತಿದಿನವೂ
ಸಾಗಿಸುತ್ತ ತನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸುತ್ತದೆ.

(ಸವಿ ಸ್ಮೃತಿಕಥನ)

ಧಾರವಾಡದಲ್ಲಿ ದೀಪಾವಳಿ

— ಎನ್ಕೆ —

ಯಾಕೆ, ಹುಬ್ಬಳ್ಳಿಯಲ್ಲಿ ದೀಪಾವಳಿ ಇಲ್ಲವೇನು?- ಅಂತ ಕೇಳಬಹುದು ನೀವು. ಇಲ್ಲ ಅಂತ ಯಾರಂತಾರೆ? ಆದರೆ ನನಗೆ ಬಣ್ಣಿಸಬೇಕಾಗಿರುವುದು ಧಾರವಾಡದ ದೀಪಾವಳಿಯ ನನ್ನ ಸವಿ ನೆನಪುಗಳನ್ನು.

ಆಗಿನ್ನೂ ನನ್ನದು ಬಾಲಿಶ ಬುದ್ಧಿ. ಅಳಿಯತನ ನನ್ನದೇ ಎಂದು ಭಾವಿಸೀರಿ ಮತ್ತೆ! ನಮ್ಮ ಹಿರಿಯಣ್ಣನದು. ನಾನಿನ್ನೂ 'ಲೋವರ್ ಸೆಕಂಡರಿ' ವಿದ್ಯಾರ್ಥಿ. ನನ್ನ ವಿಚಾರಶಕ್ತಿಯೂ ಲೋವರ್ ಮಟ್ಟದ್ದೇ. ಆಗಿನ ಧಾರವಾಡಕ್ಕೂ ಈಗಿನ ಧಾರವಾಡಕ್ಕೂ ಬೇಕಾದಷ್ಟು ಅಂತರ! ಆಗ ಒಂದು ಟಾಂಗಾದಲ್ಲಿ ಮೂರು ಜನ ಕುಳಿತು ಊರೊಳಗಿನ ಹಳೇ ತಾಲೂಕು ಕಚೇರಿ ಗಲ್ಲಿಗೆ ಎರಡಾಣೆ ಕೊಟ್ಟರೆ ಈಗ ಸಾಮಾನಿಲ್ಲದೆ ಒಬ್ಬರೇ ಕೂತು ಎಮ್ಮಿಕೆರೆಗೆ ಇಳಿದರೆ ಒಂದು ರೂಪಾಯಿ ಕೊಡುವ ಪ್ರಸಂಗವೂ ಉಂಟು, ರಾತ್ರಿ ಪ್ಯಾಸಿಂಜರ್ ಗೆ- ಒಂದಿಷ್ಟು ಮಳೆ ಹತ್ತಿದ್ದರೆ. ಇಷ್ಟರ ಮೇಲಿಂದಲೆ ಆಗಿನ ಸುಭಿಕ್ಷ ಕಾಲದ ಕಲ್ಪನೆ ನಿಮಗೆ ಬರಬಹುದು. ಆಗಿನ ಧಾರವಾಡದ ಮನೆಗಳು ಇನ್ನೂ ಅಂದಿನ ಕುರುಹಾಗಿ ಇಂದಿನ RCC ಕಟ್ಟಡಗಳ ಸಾಲಿನಲ್ಲಿ ಒಂದೊಂದೆ ಉಳಿದುಕೊಂಡಿವೆ, ಕರಿಹಂಚಿನ ಕುರುಹುಗಳಾಗಿ.

ಈಗಿನ ಹಾಗೆ ಆಗಿನ್ನೂ ಧಾರವಾಡದ ರಾಯಲ್ ಬೀದಿಗಳು ಟಾರ್ ಆಗಿರಲಿಲ್ಲ ಈಗ ಟಾರ್ ಆಗಿಯೂ ಮಳೆಗಾಲದಲ್ಲಿ ರೋಡ್ ಎಲ್ಲಾ ರಾಡಿಯಾದರೆ ಆಗ ಟಾರ್ ಇಲ್ಲದ ಕೆಂಪು ನೆಲವೆಲ್ಲ ಮಳೆಯಿಂದ ಒಕುಳಿಯಂತಾಗಿ ಒಂದು ಬಗೆಯ ಮಂಗಲ ಕಳೆಯನ್ನು ತಂದುಕೊಡುತ್ತಿತ್ತು, ನಮ್ಮ ಮೈಗೆ, ಬಟ್ಟೆಗೆ. ಆಗ ಧಾರವಾಡದ ಕೆಂಪು ನೆಲ ನನಗೊಂದು ಮೋಹಕ ವಿಷಯವೆ ಆಗಿತ್ತು. ಎರೆ ಮಣ್ಣಿನ ಒಂದು ಚಿಕ್ಕ ಊರಲ್ಲಿದ್ದ ನನಗೆ ಧಾರವಾಡವೆಂದರೆ ಒಂದು ಮಹಾ ನಗರವೆಂಬ ಮೋಹಕ ವಸ್ತುವಾಗಿತ್ತು. ಧಾರವಾಡಕ್ಕೆ ಹೋಗಿ ಬರುವುದು ಎಂದರೆ ದಿಲ್ಲಿಗೆ ಹೋಗಿ ಬಂದುದಕ್ಕಿಂದ ಕಡಿಮೆ ಎಂದೇನೂ ನನಗೆ ಎನಿಸುತ್ತಿರಲಿಲ್ಲ. ಧಾರವಾಡದ ಕೆಂಪು ನೆಲದಲ್ಲೆಲ್ಲಾ ಅಲೆದಾಟ ನನ್ನ ಪಾದಪದ್ಮಗಳ ಕೆಂಪು ಗುರುತನ್ನು ನನ್ನೂರಿನ ಗಾಂಪ ಗೆಳೆಯರಿಗೆ ಅಭಿಮಾನದಿಂದ ತೋರಿಸುವೆ- 'ನೋಡಿರೋ ಧಾರವಾಡದ ನೆಲ ಹ್ಯಾಗಿದೆ?' ಅಂತ.

ನಮ್ಮ ಹಿರಿಯಣ್ಣನ ಅಳಿಯತನಕ್ಕೆ ಹೋಗಿ ಬರುವ ಮುಂಚೆಯೂ ನಾನು ಒಂದೆರಡು ಸಲ ಧಾರವಾಡಕ್ಕೆ ಬಂದದ್ದುಂಟು. ಒಮ್ಮೆ ಧಾರವಾಡಕ್ಕೆ ಬಂದುಹೋದರ ಆಯಿತು, ನನ್ನೂರಿನ ಗಾಂಪ ಗೆಳೆಯರ ಮುಂದೆ ಧಾರವಾಡ ಪುರಾಣವನ್ನು ಬಿಚ್ಚುವೆ.

'ಧಾರವಾಡ ಹುಬ್ಬಳ್ಳಿಯೊಳಗ ನಳದ ನೀರಂತಲ್ಲೊ?'' ನನ್ನ ಮಿತ್ರ ಅಚ್ಚರಿಯ ಬೆರಳನ್ನು ಮೂಗಿನ ಮೇಲಿರಿಸಿ ಕೇಳುವ.

'ಹೌದು ನಮ್ಮೂರಾಗ ಭಾವೀ ನೀರು ಎಳೆಯೋ ಹಾಂಗ ಅಂತ ಮಾಡೀ ಏನು?' ಎಂದು ನನ್ನ ಬಿಗುಮಾನದ ಉತ್ತರ.

'ಧಾರವಾಡದಾಗ ಈಗ ರಸ್ತೇದ ತುಂಬೆಲ್ಲಾ ಇಲೆಕ್ಟ್ರಿಕ್- ಪಟ ಬಂದು ಬಿಟ್ಟೈದ. ರಾತ್ರಿ ಸುದ್ದಾ ಕೈಯಾಗ ಕಂದೀಲು ಇಲ್ಲದೆ ರಸ್ತೇದ ತುಂಬ ಓಡ್ಯಾಡಬಹುದು'' ಎಂದು ನಾನು ಹೇಳಿದಾಗ ವಿದ್ಯುದ್ದೀಪಕ್ಕೆ ಕುರುಡಾಗಿದ್ದ ನನ್ನ ಮಿತ್ರರು ಬಾಯ್ತೆರೆದು ಕೇಳಬೇಕು.

'ಧಾರವಾಡದಾಗ ಇನ್ನೂ ಏನೇನು ನೋಡಿದ್ಯೊ?'

'ಎಲ್ಕ್ಯೋ ದಿ ವ್ಯೆಟ ಅಂತ ಸಿನೇಮಾ ನೋಡಿದೆ. ಸಾಲಿ ಹುಡುಗರಿಗೆ ಅಂತ ನೆಲಕ್ಕೆ ಒಂದಾಣೆ ಇತ್ತು ಶ್ರೀರಾಮ ಸಿನೇಮಾ! ಆ ಮ್ಯಾಲೆ ಕರ್ನಾಟಕ ಕಾಲೇಜ ನೋಡಿ ಬಂದ್ವಿ. ನಮ್ಮ ಅಣ್ಣಾ ಮ್ಯಾಟ್ರಿಕ್ ಪರೀಕ್ಷಾಕ್ಕೆ ಅಲ್ಲೇ ಹೋಗಿದ್ದ ನಾವೂ ಸುದ್ದಾ ನಾಳೆ ಅಲ್ಲೇ ಹೋಗೋದು ಮ್ಯಾಟ್ರಿಕ್‌ಗೆ ಪರೀಕ್ಷಾದ ನಂಬರು, ಜಾಗಾ ಹುಡಕಲಿಕ್ಕೇ ಮೂರು ದಿವಸ ಬೇಕು ನೋಡು. ಮೊದಲ ರೇಲ್ವೆ ಹೆಡ್ ಆಫೀಸ್ ಇತ್ತು, ಕರ್ನಾಟಕ ಕಾಲೇಜು'

'ಅಲ್ಲೊ ತ್ರಿಕುಟೇಶ್ವರ ಗುಡಿ ಹಾಂಗ ಅದನ್ನೂ ಜಕಣಾಚಾರು ಕಟ್ಟಿಸ್ಯಾರೇನು?' ನನ್ನ ಗಾಂಪ ಗೆಳೆಯನ ಮಾತಿಗೆ ನಾನು ನಕ್ಕಿದ್ದೆ.

ಇಷ್ಟೆಲ್ಲಾ ಯಾಕೆ ಹೇಳಲಿಕ್ಕೆ ಬಂದೆ ಅಂದರೆ ಧಾರವಾಡದ ನೆಲ ಯಾವಾಗಿನಿಂದಲೂ ನನಗೊಂದು ಲೋಹಚುಂಬಕವಾಗಿತ್ತು ಅನ್ನೋದನ್ನ ಒತ್ತಿ, ಎತ್ತಿ ಹೇಳೋದಕ್ಕೆ.

ನನಗಿನ್ನೂ ನೆನಪಿದೆ. ಅಳಿಯತನಕ್ಕೆ ನಾವೆಲ್ಲಾ ಗಂಡಿನ ಬೀಗರು ಸಂಜೆ ಹೊತ್ತಿಗೆ ಧಾರವಾಡದ ರೈಲು ನಿಲ್ದಾಣ ತಲುಪಿದಾಗ ಹೆಣ್ಣಿನ ಬೀಗರು ನಮ್ಮನ್ನು ಸ್ವಾಗತಿಸಲು ಬಂದಿದ್ದರು. ನಮ್ಮ ಹಿರಿಯಣ್ಣ ಅಳಿಯ ದೇವರು! ಯಾವ ದೇವರಿಗೂ ಕಡಿಮೆಯವನಲ್ಲ ಎಂಬ ಹಾಗೆ ಮಾನ ಮರ್ಯಾದೆ. ನಾವೆಲ್ಲಾ ಮೂರು ಟಾಂಗಾದಲ್ಲಿ ಭರ್ತಿ ಆದೆವು. ಎಮ್ಮೆ ಕೆರೆಯ ದಂಡೆಗುಂಟ ಹಾಕಿದ ಬೇಲಿಯ ಕಲ್ಲುಗಳನ್ನು ದಾಟುತ್ತ ಟಾಂಗಾವಾಲಾ ತನ್ನ ಬಾರಕೋಲ ಬೆತ್ತವನ್ನು ಗಾಲಿಯ ಕಡ್ಡಿಗಳಿಗೆ ಹಿಡಿದು ಬಾಜಾ ಮಾಡಿ 'ಬಾಜೂ' ಮಾಡಿಕೊಳ್ಳುತ್ತ ಅರ್ಭಟೆಯಿಂದ ಕುದುರೆ ಓಡಿಸಿದ್ದ. ಈಗಿನ ಹಾಗೆ ರೇಶನ್ ಕುದುರೆಗಳಾಗಿರಲಿಲ್ಲ ಅವು ಮಸ್ತಾಗಿದ್ದವು.

ದತ್ತಾತ್ರೇಯ ಗುಡಿಯ ಹಿಂದಿನ ಮೂರಂತಸ್ತಿನ ಪಾಠಶಾಲೆ ಭೂಗೋಲ ಪಾಠದ

ನ್ಯೂಯಾರ್ಕಿನ ಗಗನಚುಂಬಿ ಗ್ಯಾಲರಿಗಳನ್ನು ನೆನಪಿಗೆ ತಂದಿತ್ತು. ಈಗಿನ ಗಾಂಧೀಚೌಕ ಕೂಟಕ್ಕೆ ಗ್ಯಾಸ್ ಕಟ್ಟೆ ಇತ್ತು. ಆದರೆ ವಿದ್ಯುತ್ ಪ್ರವೇಶವಾಗಿ ಅದು ನಿಷ್ಪ್ರಯೋಜಕವಾಗಿ ಮುಂಚಿನ ಸ್ಮಾರಕವಾಗಿ ಕಂಗೊಳಿಸುತ್ತಿತ್ತು.

ಧಾರವಾಡದ ದೀಪಾವಳಿ! ಅಳಿಯತನ! ಪ ಊರೂ ಹೊತ್ತು ಮನೆಯಲ್ಲಿ ಬೈಯಿಸಿಕೊಳ್ಳುತ್ತಿದ್ದ ನನಗೆ ಸಹ ಕೂತಲ್ಲಿ ಮಣೆ ನಿಂತಲ್ಲಿ ನೀರು ಬೀಗರ ಮನೆಯಲ್ಲಿ ನಾನೂ ಅರ್ಧ ಅಳಿಯನೇ ಆಗಿದ್ದೆ. ಹೊಸತಾಗಿ ಮನೆಗೆ ಬಂದ ಅತ್ತಿಗೆ ಒಂದು ಹೊಸ asset ಎನಿಸಿತ್ತು ನನಗೆ. ನಮ್ಮ ಅತ್ತಿಗೆಯಂತೂ ಕೈಯಲ್ಲಿ ಕಪ್ಪು-ಬಸಿ ಹಿಡಿದು ತಂದೇ ನನ್ನನ್ನೂ ಎಬ್ಬಿಸುತ್ತಿದ್ದರು.

ಅಂದು ನರಕ ಚತುರ್ದಶಿ ಮೊದಲೇ ಧಾರವಾಡದ ಚಳಿ ಅಂತಹದರಲ್ಲಿ ನಸುಕಿನಲ್ಲಿ ಏಳುವ ದೆಂದರೆ ಮೈಗೆ ಮುಳ್ಳು. 'ಬೋದ (ನಮ್ಮ ಅತ್ತಿಗೆಯ ತಮ್ಮ) ನಂತೂ ಹಾಕಿದ ಮುಸುಕನ್ನು ತೆರೆದಿರಲಿಲ್ಲ ಮನೆಯ ಆಚಾರ್ಯರು ಬಂದು 'ಏಳಪಾ ಸೂರ್ಯವಂಶೀ' ಎಂದು ಮುಸುಕು ಎಳೆದಾಗ ಮುಖಕಮಲವನ್ನು ಕೈಗಳಿಂದ ಉಜ್ಜಿಕೊಳ್ಳುತ್ತ ಮತ್ತೆ ಮಗ್ಗಲಾಗಿ ಬಿದ್ದುಕೊಂಡ.

'ಏಳೋ ಡೊಣಗಾತಿ' ಬೋದನ ತಂದೆಯೂ ಬಂದು ಅಬ್ಬರಿಸಿದರು. ಆದರೆ ಅವರು ನಾನು ಎದ್ದಿರುವದನ್ನು ನೋಡಿಯೆ ತಮ್ಮ ಪುತ್ರನಿಗೆ ಪುಷ್ಪಾರ್ಚನೆ ಮಾಡಿದ್ದು. ಇಲ್ಲದಿದ್ದರೆ ಬೀಗರ ಹುಡುಗನಿಗೆ. ಅದೂ ಗಂಡಿನ ಬೀಗರ ಹುಡುಗನಿಗೆ, 'ತಸ್ತಿ' ಕೊಡುವುದೆಂದರೆ?

ಎಲ್ಲರೂ ಆರತಿಗೆ ಕುಳಿತೆವು ನಾಲ್ಕು ಬೊಟ್ಟಿನ ನೀಲಬಣ್ಣದ ಭಂಜರಿ ಜರದ ಟೊಪ್ಪಿಗೆ ನಾನು ಧರಿಸಿದ್ದೆ. ನಾನು ಜರದ ಟೊಪ್ಪಿಗೆ ಹಾಕಿದುದನ್ನು ನೋಡಿ ಬೋದ ತಾನೂ ತನ್ನದನ್ನು ಹೊರತೆಗೆದ ಆರತಿಯಲ್ಲಿ ಹಾಕುವದಕ್ಕೆಂದು ನನ್ನಣ್ಣಾ ನನ್ನ ಕೈಯಲ್ಲಿ ಒಂದು ರೂಪಾಯಿ ಹದಿನಾರಾಣೆ ಬೆಳ್ಳಿಯ ನಾಣ್ಯ-ಕೊಟ್ಟಿದ್ದ. ಆ ಮೇಲೆ ಬೋದನ ತಂದೆಯೂ ಆರತಿತಟ್ಟೆಯಲ್ಲಿ ಹಾಕುವದಕ್ಕೆಂದು ಅಂತಹದೇ ಇನ್ನೊಂದು ರೂಪಾಯಿ ಕೊಟ್ಟಿದ್ದರು ಜೊತೆಗೆ ಒಂದು ಅಡಿಕೆಯ ಬೆಟ್ಟ ನಮ್ಮ ಅತ್ತಿಗೆ ಆಕೆಯ ತಂಗಿ ರತ್ನಾ ಇಬ್ಬರೂ ನಮಗೆಲ್ಲ ಒಬ್ಬೊಬ್ಬರಿಗೇ ಆರತಿ ಬೆಳಗುತ್ತ ಬಂದರು. ನಮ್ಮ ಅತ್ತಿಗೆಯೊ ಆರತಿಯ ಹಾಡು ಹೇಳುವಲ್ಲಿ ಮಗ್ನರಾಗಿದ್ದರು ನನ್ನ ಬಳಿ ತಟ್ಟೆ ಬರುತ್ತಲೆ ಯಾರೂ ನೋಡದ ಹಾಗೆ ನಾನು ಬರಿ ಅಡಿಕೆ ಬೆಟ್ಟ ಹಾಕಿ ಗುಮ್ಮನಂತೆ ಕುಳಿತುಬಿಟ್ಟೆ ರತ್ನಾ ನನ್ನ ಕಳ್ಳತನ ಕಂಡುಕೊಂಡಳು. ಆದರೆ ಕಳ್ಳನನ್ನು ಹಿಡಿದು ಕೊಡಲಿಕ್ಕೆ ಯಾಕೋ ಸಂಕೋಚ; ತುಂಟ ನಗೆಯೊಂದನ್ನು ಬೀರಿದಳು ಬೋದನನ್ನು ನೋಡಿದಳು ಆತನೂ ಬರಿ ಅಡಿಕೆ ಬೆಟ್ಟವನ್ನೇ ಹಾಕಿಬಿಡಬೇಕೆ? ಅತ್ತಿಗೆಯ ಹಾಡು ಮುಗಿಯುವುದಕ್ಕೂ ಬೋದ ತಟ್ಟೆಯೊಳಗ ಬೆಟ್ಟ ಹಾಕುವದಕ್ಕೂ ಸರಿಹೋಯಿತು ಅತ್ತಿಗೆ ತಮ್ಮನ ಕಳ್ಳತನ ನೋಡಿ-'ಯೇ ತುಂಟಾ; ಸುಮ್ಮನ ಹಾಕು ರೂಪಾಯಿ ತಾಟನ್ಯಾಗ' ಎಂದರು. ರತ್ನಾ ಮತ್ತೊಮ್ಮೆ ಕಳ್ಳನೋಟ ಬೀರಿದಳು ನನ್ನತ್ತ ಮೊದ್ದುಬೋದ ಪೆಚ್ಚುಮುಖ ಮಾಡಿಕೊಂಡು ಎರಡೂ ರೂಪಾಯಿ ತಾಟಿನಲ್ಲಿ ಹಾಕಿದ

ಅಭ್ಯಂಜನವಾಯಿತು ಉಪಹಾರಕ್ಕೆ ಅಣಿಯಾಗಿತ್ತು. ರಂಗವಲ್ಲಿ, ಗಂಧದ ಕಡ್ಡಿ ಉಪಹಾರಕ್ಕೆ ಒಂದು ಹೊಸ ಶೋಭೆ ತಂದಿದ್ದವು ಮನೆದಣಿಯ ಉಪಹಾರ ಮುಗಿಸಿದೆವು ಅದರೇನು? ನೆರಮನೆಯ ನಾಯಿಕರ ಆಮಂತ್ರಣ. ಅವರ ಮನೆಯಲ್ಲೂ ಕಂಠಮಟ. ಅಂದು ಬೆಳಗಿನ ಹತ್ತು ಗಂಟೆಯವರೆಗೆಂದರೆ ಐದಾರು ಕಡೆ ಉಪಹಾರದ ಆಮಂತ್ರಣ

'ಬೋದ, ಫರಾಳ ಎಲ್ಲಾ ಜೀರ್ಣ ಆಗಬೇಕಾದರ ಹತ್ತು ಮೈಲಾದರೂ ವಾಕಿಂಗ್ ಆಗಬೇಕು ನೋಡು' ಎಂದು ಬೋದನನ್ನು ಬಲವಂತದಿಂದ ಹೊರ-ಹೊರಡಿಸಿದೆ ಬೋದನದು ಒಂದಿಷ್ಟು ಸ್ಥೂಲ ಕಾಯ. ಮೊದಲೇ ಅವನಿಗೆ ಕಾಲು ಕಿತ್ತುವುದೆಂದರೆ ಬೇಸರ.

'ಹಾಂಗ ರತ್ನಾನ ಕೈಯಾಗ ಸಂಪಿಗೆ ಹೂ, ಶಾವಂತಿಗೆ ಹೂ ಕೊಟ್ಟು ಕಳಿಸು' ಅಂತ ಅತ್ತಿಗೆ ಬೋದನ ಕೈಯಲ್ಲಿ ಒಂದು ರೂಪಾಯಿ ಹಚ್ಚಿ ರತ್ನಾನನ್ನು ಜೊತೆಗೆ ಕಳಿಸಿದರು ನನ್ನ ಜೊತೆಗೆ ಬರಲು ರತ್ನಾಗೆ ಸಂಕೋಚ ಆಕೆಯೊಡನೆ ಹೋಗಲು ನನಗೂ ಸಂಕೋಚ ಆದರೂ ಒಳಗೊಳಗೇ ಏನೋ ಚಪಲ, ಜೊತೆಗೇ ಹೋಗಬೇಕು ಅಂತ.

ಬೋದನಿಗೆ ಯಾವುದೇ ಸಾಮಾನು ತರುವುದಕ್ಕೂ ಕಮೀಶನ್ ಬೇಕೇಬೇಕು. ಬೀದಿಯ ಕೂಟಿಗೆ ಬಾಳೂಕಾಕಾನ ಹೋಟ್ಲು.

'ಚೀರ್ ಮುರಿಸಿಗೊಂಡು ಬರೋಣು ಬಾ' ಎಂದು ಬೋದ ನನ್ನನ್ನು ಹೋಟೆಲ್‌ಗೆ ಬೀರೆ ಎಳೆದ ರತ್ನಾ ಬೀದಿಯಲ್ಲೇ ನಿಂತುಬಿಟ್ಟಳು.

'ಅರ್ಲಿ ಬಾರ್ಲೇ, ನಿನಗ ಇ ಬೇಕೋ ಬ್ಯಾಡೊ ಮತ್ತ?' ರತ್ನಾ ನನ್ನ ಮುಂದೆ ಮೋಹಕನ ನಡೆಸಬಾರದು ಎಂದೋ ಏನೋ ಸುಮ್ಮನೆ ಒಳಗೆ ಬಂದು ಕೂತಳು.

'ಮೂರು ಉಪ್ಪಿಟ್ಟು ಕೊಡ್ರಿ!'

'ಮಾರಾಯಾ! ನೀರು ಕುಡಿಯೋದಕ್ಕೂ ಸ್ಥಳವಿಲ್ಲದ ಹಾಗೆ ಫರಾಳ ನುಂಗಿ ಮತ್ತೆ ಈಗ ಉಪ್ಪಿಟ್ಟು!'

'ನನಗ ಬಾಳೂಕಾಕಾನ ಉಪ್ಪಿಟ್ಟು ಜೀಲದಿದ್ದರ ಗಾಡೀನೇ ಸಾಗೂದಿಲ್ಲ', ಎಂದು ಆಪ್ತತೆಯಿಂದ ಮಾತಾಡಿದ ಬೋದ. ನನಗೆ ತಿನ್ನುವುದು ಸಾಧ್ಯವೇ ಇಲ್ಲ ಎಂದೆ ರತ್ನಾ ಮೂಗು ಮುರಿದುಬಿಟ್ಟಳು. ಬೋದ ಮಾತ್ರ ಒಂದು ಉಪ್ಪಿಟ್ಟು ಒಂದು ಚಹಾ ಹಾಕಿ ಚಿಲ್ಲರೆ ತೆಗೆದುಕೊಂಡು ಮುನ್ನಡೆದ

'ಕಾಲೇಜ ವರೆಗೂ ಹೋಗಿಬರೋಣು ಬೋದ' ಎಂದು ಒತ್ತಾಯಪಡಿಸಿದೆ. ಧಾರವಾಡದ ಕೆಂಪು ಮಣ್ಣಿನಲ್ಲಿ ಓಡಾಡುವ ಸಂಭ್ರಮವೇ ಸಂಭ್ರಮ ನನಗೆ.

'ರತ್ನಾ ನೀನೂ ಬರ್ತೀಯೇನು?' ಬೋದ ತಂಗಿಯನ್ನು ಕೇಳಿದ ಆಕೆಗೆ ಏನು ಹೇಳಬೇಕೆನ್ನೋದು ತಿಳಿಯಲಿಲ್ಲ ಒಳಗಿನ ಧ್ವನಿ ಹೂಂ ಎನ್ನಬೇಕು ಎನ್ನುತ್ತಿರಬೇಕು. ಮನೆಯಲ್ಲಿ ಪರವಾನಿಗೆ ಕೇಳಿಲ್ಲವೆಂದು ಭಯವಾಗುತ್ತಿರಬೇಕು. ಯಾಕೋ ನನ್ನ ಆಗಿನ ಬಾಲಬುದ್ಧಿಗೆ ಆಕೆಯೂ ನಮ್ಮ ಜೊತೆಗೆ ಬರಲಿ ಎಂದೆನಿಸುತ್ತಿತ್ತು. ನನಗೂ ಬಾಯಿ ಬಿಟ್ಟು ಮಾತನಾಡುವದಕ್ಕೆ ಸಂಕೋಚ.

'ಎಡ್ವರ್ಡ ಪಾರ್ಕಿನ ತನಕಾ ಹೋಗಿ ಬರೂಣಪಾ ಹಂಗಾರ! ಹಾವೇರಿಯ ನ್ಯಾಯ ಮಾಡಿದಳು ರತ್ನಾ. ಪಾರ್ಕಿನ ಮಗ್ಗಲದ ದೊಡ್ಡ

ಅಡಮುಟ್ಟ

ಒದು-ವಿದ್ಯೆಗಳಿಗೊದ್ದಾಡದೆಯಿ
ಕಿತದಿ ಮಾಡುವಂಥದ ಮುಟ್ಟ
ಪದವಿ-ಪ್ರಶಸ್ತಿಯ ಮಾತಂತಿರಲಿ
ಗಿಟ್ಟಿಸಿದನು ಮಂತ್ರಿಯು ಪಟ್ಟ!

— ಎಂ. ಅಕಬರ ಅಲಿ

ಉತ್ಸವದ ದಿನಗಳಿಗಾಗಿ
ಮಿಗಿಲಾದ ಕೊಡುಗೆ
ಇಂದೇ
ನ್ಯಾಷನಲ್
ಎಕ್ಕೋ
ರೇಡಿಯೊ ಕೊಳ್ಳಿರಿ
ಪಿಟಿ—1503
9 ಟ್ರಾನ್ಸಿಸ್ಟರ್‌ಗಳು
ಮತ್ತು ಡಯೋಡ್‌ಗಳು.
3 ಬ್ಯಾಂಡ್‌ಗಳು. ರೂ. 365·00
ಎಂಜಿಟಿ—1504
13 ಟ್ರಾನ್ಸಿಸ್ಟರ್‌ಗಳು
ಮತ್ತು ಡಯೋಡ್‌ಗಳು.
4 ಬ್ಯಾಂಡ್‌ಗಳು.
ಎಸಿ/ಬ್ಯಾಟರಿ. ರೂ. 541·00
ಯು—1513. 5 ವಾಲ್ವ್‌ಗಳು.
3 ಬ್ಯಾಂಡ್‌ಗಳು. ಎಸಿ/ಡಿಸಿ.
ರೂ. 298·00
ಯು—819
5 ವಾಲ್ವ್‌ಗಳು, 3 ಬ್ಯಾಂಡ್‌ಗಳು.
ಎಸಿ/ಡಿಸಿ. ರೂ. 303·00
ಎ—1512
6 ವಾಲ್ವ್‌ಗಳು, 3 ಬ್ಯಾಂಡ್‌ಗಳು.
ಎಸಿ. ರೂ. 365·00
ಎ—1514
6 ವಾಲ್ವ್‌ಗಳು, 4 ಬ್ಯಾಂಡ್‌ಗಳು
ಎಸಿ. ರೂ. 415·00
ಎ—786
6 ವಾಲ್ವ್‌ಗಳು, 5 ಬ್ಯಾಂಡ್‌ಗಳು.
ಎಸಿ. ರೂ. 668·00
ಬಿಟಿ—1500
9 ಟ್ರಾನ್ಸಿಸ್ಟರ್‌ಗಳು
ಮತ್ತು ಡಯೋಡ್‌ಗಳು,
3 ಬ್ಯಾಂಡ್‌ಗಳು,
ಬ್ಯಾಟರಿ. ರೂ. 328·00
ಬಿಟಿ—1506. 9 ಟ್ರಾನ್ಸಿಸ್ಟರ್‌ಗಳು
ಮತ್ತು ಡಯೋಡ್‌ಗಳು.
4 ಬ್ಯಾಂಡ್‌ಗಳು,
ಬ್ಯಾಟರಿ. ರೂ. 415·00
ಮತ್ತು Kleertone ಕ್ಲಿಯರ್‌ಟೋನ್ ಗೃಹೋಪಕರಣಗಳ ಮೇಲೆ 10% ರಿಯಾಯಿತಿ ಪಡೆಯಿರಿ
ಇಂದೇ ನ್ಯಾಷನಲ್-ಎಕ್ಕೋ ಕೊಳ್ಳಿರಿ. ಆ ಮೇಲೆ, ಕ್ಲಿಯರ್‌ಟೋನ್ ಗೃಹೋಪಕರಣಗಳನ್ನು ವಿಶೇಷವಾದ 10% ರಿಯಾಯಿತಿಯ ಬೆಲೆಗೆ ಕೊಳ್ಳಿರಿ.
ಇಸ್ತ್ರಿ ಪೆಟ್ಟಿಗೆಗಳು, ರೂ. 17·50 ಮತ್ತು ಹೆಚ್ಚು
ಟೋಸ್ಟರ್‌ಗಳು ರೂ. 24·00 ಮತ್ತು ಹೆಚ್ಚು
ಕೆಟಲ್‌ಗಳು ರೂ. 44·00 ಮತ್ತು ಹೆಚ್ಚು
ಕಾಫಿ ಪರ್ಕೊಲೇಟರ್ ರೂ. 70·00
ಹಾಟ್ ಪ್ಲೇಟ್‌ಗಳು ರೂ. 125·00 ಮತ್ತು ಹೆಚ್ಚು
ಗಡಿಯಾರಗಳು ರೂ. 63·00 ಮತ್ತು ಹೆಚ್ಚು
ಡೋರ್ ಬೆಲ್ ರೂ. 4·50
ಮ್ಯೂಸಿಕಲ್ ಡೋರ್ ಚೈಮ್ ರೂ. 42·50
ಟೀ ಟ್ರಾಲಿ ರೂ. 95·00
ಬೇಕಿಂಗ್ ಅವನ್ ರೂ. 85·00
NATIONAL EKCO
ಮಿಕ್ಸರ್-ಕಮ್ ಗ್ರೈಂಡರ್ ರೂ. 198·00
ವಾಟರ್ ಬಾಯ್ಲರ್‌ಗಳು ರೂ. 230·00 ಮತ್ತು ಹೆಚ್ಚು
ಮತ್ತು — ಇನ್ನೂ ಅನೇಕ ವಸ್ತುಗಳಿವೆ
GRA ಜನರಲ್ ರೇಡಿಯೋ ಅಂಡ್ ಅಪ್ಲಯನ್ಸಸ್ ಲಿಮಿಟೆಡ್
ಬೊಂಬಾಯಿ – ಕಲ್ಕತ್ತ – ಮದರಾಸು – ದೆಹಲಿ
ಬೆಂಗಳೂರು – ಸಿಕಂದರಾಬಾದ್ – ಪಾಟ್ನ
(ಬೆಲೆಗಳಲ್ಲಿ ಎಕ್ಸೈಸ್ ಡ್ಯೂಟಿ ಸೇರಿದೆ. ತೆರಿಗೆಗಳು ಪ್ರತ್ಯೇಕ.)
ಇಂದೇ ನಿಮ್ಮ ನ್ಯಾಷನಲ್-ಎಕ್ಕೋ ವ್ಯಾಪಾರಿಯನ್ನು ಸಂದರ್ಶಿಸಿರಿ!
NE. 160 KN

ಗಟಾರದ ದಂಡೆ ಹಿಡಿದು ನಡೆದಿದ್ದ ಬೋದ, ಆಚೆಗೆ ಬೆಳೆದ ಆಲದ ಮರದ ಬೀಳಲು ಹಿಡಿದ 'ಎಲ್ಲೋ ಧಿ ಮೈಟ್ಸ್' ಎಂದವನೇ ಜೀಕ ಹೊಡೆದು ಆಚೆಯ ದಂಡೆಗೆ ಜಿಗಿದ. ರತ್ನ ಗಾಬರಿಗೊಂಡಳು.

'ಹೀಂಗೆಲ್ಲಾ ಮಾಡಬ್ಯಾಡೋ ಬೋದಣ್ಣ' ಎಂದು ಅಂಗಲಾಚಿದಳು.

'ಹಾಂಗಾರ ನಮ್ಮ ಜೋಡಿ [illegible] ಹೌದಲ್ಲೊ ಕಾಲೇಜ ತನಕಾ? ಇಲ್ಲಿಬಿದ್ದರ ನೋಡು ಮತ್ತ ಜೋತು ಬೀ[illegible] ಹೆದರಿಸಿದ ಬೋದಣ್ಣನ ಕರಾರಿಗೆ ಕೋಮಲ ಹೃದಯದ ರತ್ನ ಒಪ್ಪದೆ ನಿರ್ವಾಹವೆ ಇರಲಿಲ್ಲ.

'ಹಾಂಗಾರ ಲಗೂನ ಬರೋಣ. ಬರೂ ಮುಂದಾದದರೂ ಹೂ ಕೊಡಿಸು ಮತ್ತ'. ತನಗೆ ತಾನೇ ಸಮಾಧಾನ ಹಚ್ಚಿಕೊಂಡು ನಮ್ಮೊಡನೆ ಬರಲಿಕ್ಕೆ ಒಪ್ಪಿಕೊಂಡಳು ರತ್ನ.

ಇಕ್ಕೆಲದ ಸಾಲ್ಮರಗಳ ನೆರಳಿನಲ್ಲಿ ಮೂವರೂ ಕಾಲೇಜಿನತ್ತ ನಡೆದೆವು. ರತ್ನ ಯಾವಾಗಲೂ ಬೋದನನ್ನೇ ನಡುವೆ ಮಾಡುವಳು. ನಾನೇನಾದರೂ ನಗೆಯಮಾತಾಡಿದರೆ ತನ್ನೊಳಗೇ ತಾನೇ ನಗುವಳು! ದಾರಿಯ ಏರಿಗೊಮ್ಮೆ ಬೋದ ಉಶ್ ಎಂದು ಚಾಟಿ, ಕಟ್ಟೆ ಕಂಡಲ್ಲೆಲ್ಲಾ ಕುಳಿತುಬಿಡುವ. ಕಾಲೇಜಿನ ಮಹಡಿ ಏರುವ ವರೆಗಂತೂ ಬೋದ ತೇಕಾಡತೊಡಗಿದ. ಮೆಟ್ಟಿಲು ಇಳಿಯುವಾಗ ಮಾತ್ರ ಹಿಂಬದಿಯ ಒಂದು ಮೂಲೆಯಲ್ಲಿ ಸ್ಕ್ರೂ ಆಕಾರದ ಸೋಪಾನಗಳನ್ನಿಳಿದು ಬರುವವರೆಗಂತೂ ಬೋದ ಬವಳಿ ಹತ್ತಿ ಬೀಳುವಂತಾಗಿದ್ದ.

ಕಾಲೇಜಿನ ಗೇಟಿಗೆ ಬಂದೆವು. ಬೋದ ಎಲ್ಲೋ ಕಣ್ಮರೆಯಾಗಿದ್ದ, ಆಚೆಯ ಕಂಟಿಯ ಮರೆಯಲ್ಲಿ. ರತ್ನಾ ಒಬ್ಬಳೇ, ಆಚೆಗೆ ಮುಖ ಮಾಡಿದ್ದಳು.

ಗೌಳಿಯ ಉಪದೇಶ



"ನೀನಿನ್ನು ಹಾಲಿನಲಿ ನೀರು ಬೆರಸಲೆ ಬೇಡ,
ಹಾಲನೇ ನೀರೊಳಗೆ ಬೆರಸೊ ಮಗನೆ;
ಗೊಣಗುವ ಗಿರಾಕಿಗಾಮೇಲೆ ಗಟ್ಟಿಸಿ ಹೇಳು
'ನೀರು ಬೆರಸಿಲ್ಲೆ'ಂದು, ಸತ್ಯವನ್ನೇ!"

—ಎಂ. ಅಕಬರ ಅಲಿ

'ಹೊತ್ತಾಯಿತಲ್ಲೇನು?'

'ಹೂಂ' ಎಂಬ ಒಂದಕ್ಷರದ ಉತ್ತರ ಕೊಡಬೇಕಾಗಿದ್ದರೆ ಬೆಮೆತು ಹೋದಂತಿತ್ತು ರತ್ನ.

ಬೋದ ಅಷ್ಟು ದೂರದಿಂದ ಬರುತ್ತಿದ್ದ. ನಾವಿಬ್ಬರೂ ಆತ ಬರುವುದನ್ನೇ ನೋಡುತ್ತಿದ್ದೆವು.

ಎಲ್ಲಿಂದಲೊ 'ಧಡಲ್' ಎಂದು ಶಬ್ದ! ರತ್ನ 'ಅಯ್ಯೊ' ಎಂದು ಬೆಚ್ಚಿಬಿದ್ದವಳು ನನ್ನೊಡನೆ ಇಷ್ಟೊಂದು ಪರಕೀಯವಾಗಿ ನಡೆದುಕೊಂಡವಳು ನನ್ನ ಮಗ್ಗುಲಿಗೇ ಬಂದಿದ್ದಳು.

'ಅಷ್ಟ್ಯಾಕ ಗಾಬರಿ ಆಗತೀದಿ? ಮಧ್ಯಾನ್ಹ ಹನ್ನೆರಡು ಗಂಟೇದ ತೋಫು ಅಲ್ಲೇನು ಅದು!'

ಪ್ರತಿ ದಿನವೂ ಮಧ್ಯಾನ್ಹ ಹನ್ನೆರಡು ಗಂಟೆಗೆ ತೋಫು ಹಾರುತ್ತಿದ್ದುದು ಧಾರವಾಡದ ವೈಶಿಷ್ಟ್ಯವಾಗಿತ್ತು. ಮನೆ ಮುಟ್ಟಿದಾಗ ನಮ್ಮ ಮೂವರ ಪಾಲಿನ ಬೈಗುಳ ಪ್ರಸಾದವನ್ನು ರತ್ನಾ ಒಬ್ಬಳೇ ಸ್ವೀಕರಿಸಬೇಕಾಯಿತು.

ಅಳಿಯತನದ ಸಡಗರ, ಸಪ್ತಾಹವೇ ನಡೆದಂತಿತ್ತು. ಪ್ರತಿ ದಿನವೂ ಉಪಹಾರದಲ್ಲಿ ವೈವಿಧ್ಯ, ಊಟದಲ್ಲಿ ವೈವಿಧ್ಯ! ಬೆಳ್ಳಿಯ ತಾಟು, ಬೆಳ್ಳಿಯ ಥಾಲಿ! ನಿತ್ಯವೂ ರಂಗೋಲಿ ಊದಿನಕಡ್ಡಿ.

ಬೇಸರ ಬಂದಾಗ ತುತೂರಿ ಬಾಯಿಯ ಗ್ರಾಮೊಫೋನ್! ಬಾಲಗಂಧರ್ವನ ಹಾಡು! ನಡುನಡುವೆ ಹಿರಿಯರಿಲ್ಲದಾಗ ನಾನೂ ಬೋದ ಕೂಡಿ ಬಗೆ ಬಗೆಯ ನಗೆಯನ್ನು ತೋರಿಸುವ ರೆಕಾರ್ಡ್ ಹಾಕಿ ನಲಿದಾಡುತ್ತಿದ್ದೆವು.

ಅಂಗಡಿಗಳ ಲಕ್ಷ್ಮೀ ಪೂಜೆ ಬೋದನಿಗೆ ದೊಡ್ಡ ಆಕರ್ಷಣೆ. ಅವರ ತಂದೆಗೆ ಅನೇಕ ಕಡೆಗಳಿಂದ ಆಮಂತ್ರಣ. ಪ್ರಸಾದ, ಪಾನಸುಪಾರಿಗಳಿಗಾಗಿ ಬೋದ ಒಂದು ಕೈಚೀಲವನ್ನೆ ಮಾಡಿದ್ದ. ಅಂಗಡಿಗಳ ಅಲಂಕಾರ, ಬಣ್ಣಬಣ್ಣದ ದೀಪಗಳನ್ನು ನೋಡಲೆಂದು ನಮ್ಮ ಅತ್ತಿಗೆ, ರತ್ನಾ ಅವರೂ ಅನುಸರಿಸಿದ್ದರು.

ಧಾರವಾಡದ ದೀಪಾವಳಿಯ ವೈಶಿಷ್ಟ್ಯ ಪಗಡೆಯ ಆಟವಿಲ್ಲದೆ ಪೂರ್ಣವಾಗಲಾರದು. ಭಾವಬಿದಿಗೆ-ಅಕ್ಕನ ತದಿಗೆಗಳ ವರೆಗೂ ಸಿಹಿಯುಂಡು ಬಾಯ್ ಕಟ್ಟಿದಾಗ ಅಮ್ಮನ ಚವತಿಯ ವ್ಯಂಜನಊಟ ವೈವಿಧ್ಯವನ್ನು ನೀಡುತ್ತದೆ. ಅಂದಿನ ರಾತ್ರಿ ಭರ್ತಿ ಪಗಡೆಯ ಆಟ! ಆ ಕಡೆ ಮಹಿಳೆಯರು, ಈ ಕಡೆ ಮಹನೀಯರು. ನಮ್ಮ ಅತ್ತಿಗೆಯ ಅಜ್ಜ ಕಾಯಿ ಬಿಡುವಲ್ಲಿ ಎತ್ತಿದ ಕೈ; ಇತ್ತ ಮಹಿಳೆಯರ ಪಕ್ಷದಲ್ಲಿ ನಮ್ಮ ಅತ್ತಿಗೆಯ ಸೋದರತ್ತೆ (ಗಂಗಾಭಾಗೀರಥಿ Short form ಗಂ. ಭಾ.) ಸುಂದರಕ್ಕ ಅಷ್ಟೇ ಹಿರಿಯ ಹುದ್ದರಿ.

ಮಧ್ಯರಾತ್ರಿ ಆಯಿತು. ಮಹಿಳೆಯರ ಪಕ್ಷಕ್ಕೆ ಕೈ ಹತ್ತಿ [illegible] ಕಾಯಿಗಳು [illegible] ಗಂಡಸರ ಪಕ್ಷದಲ್ಲಿ ಒಂದೂ ಕೈ ಹತ್ತಿರಲಿಲ್ಲ. ಹೀಗಾಗಿ ಕೊನೆಗೆ ಒಂದೇ ಕೈ ಹತ್ತಿದಾಗ ದೆವ್ವ ಎದ್ದಿತು! ಮಾಡುವುದೇನು? ಗಂಡಸರು ಸೋತರು. ಸುಂದರಕ್ಕನ [illegible] [illegible] ಇಲ್ಲ ನನ್ನ ಅತ್ತಿಗೆ [illegible] [illegible] ಮುಖ ನೋಡಿ ಮುಗುಳ್ನಗೆ ನಕ್ಕರು. ರತ್ನಾ ನನ್ನ

ಮುಖ ನೋಡುವುದಕ್ಕಿಂತ ತನ್ನ ಮುಖದಲ್ಲೇ ಸಾನುಭೂತಿಯ ನೋಟ ಬೀರಿದಳು.

ಎರಡನೆಯ ಆಟಕ್ಕೆ ಮೊದಲಾಯಿತು. ನಮ್ಮ ಅತ್ತಿಗೆಯ ಅಜ್ಜ ಸುಂದರಕ್ಕ ಜೋಡಿಸಿ ಕವಡೆ ಒಗೆಯುವುದಕ್ಕೆ ಆಕ್ಷೇಪವೆತ್ತಿ ಮಹಾರಂಭಾಟ ಆರಂಭಿಸಿಬಿಟ್ಟಳು. ಆಟಕ್ಕೆ ಕಾವೇರಿ, ಬಿಸಿ ಏರಿ ಪಗಡಿಯ ಪಟ್ಟೆ ಹಿಡಿದು ಅಜ್ಜ ಕಿತ್ತು ಬಿಸಾಡಿ ಬಿಟ್ಟರು. ನಮ್ಮ ಅತ್ತಿಗೆಯ ತಂದೆ ವಾತಾವರಣವನ್ನು ಶಾಂತಗೊಳಿಸಿದರು. ಮಧ್ಯಂತರವಾಗಿ ಚಹಾ, ಅವಲಕ್ಕಿಯ ಡಬರಿ-ಪರಾತಗಳು ಕಾಣಿಸಿಕೊಂಡವು.

ಕೊನೆಯ ಆಟದಲ್ಲಿ ನನ್ನ ಕೈಯಿಂದ ಒಂದು ದೋನಿ ಬಿದ್ದಿದ್ದರೆ ಸಾಕು, ಗಂಡಸರೇ ಗೆದ್ದು ಬಿಡುತ್ತಿದ್ದರು. ಆದರೇನು? ದಗ್ಧಹಸ್ತ! ಮುಂದೆ ರತ್ನಾ ತನ್ನ ಕೈಯಿಂದ ಒಂದು ದಶಾ ಹಾಕಿಬಿಟ್ಟಿದ್ದರೆ ವಿಜಯಲಕ್ಷ್ಮಿ ಮತ್ತೆ ಮಹಿಳೆಯರಿಗೇ ಒಲಿಯಬಹುದಿತ್ತು. ಆದರೆ ಯಾಕೋ ಏನೋ ರತ್ನಾ ಬೇಕೆಂದೇ ನನಗಾಗಿ ತಾನೂ ಫಾಶಿ ಹಾಕುವುದಕ್ಕೆ ತಪ್ಪಿದಂತೆ ತೋರಿತು. ಸುಂದರಕ್ಕ ಪಗಡೆಯಿಂದಲೆ ಆಕೆಯ ತಲೆಗೆ ಬಿಸಿದಳು. ಆದರೂ ರತ್ನಾ ಕರ್ಣನ ತ್ಯಾಗದ ತೃಪ್ತಿಭಾವದಿಂದ ಸುಮ್ಮನಿದ್ದಂತೆ ಕಂಡಬಂತು.

ಅಳಿಯತನವೆಲ್ಲಾ ಅಮೋಘಾಗ್ರವಾಗಿ ವೈಭವದಿಂದ ನಡೆಯಿತು. ಧಾರವಾಡದ ದೀಪಾವಳಿಯ ವೈಶಿಷ್ಟ್ಯ, ಸವಿ ಸ್ಮೃತಿ ಇಷ್ಟಕ್ಕೇ ಮುಗಿಯಲಿಲ್ಲ. ಹಾಗಾದರೆ? ಊಹಿಸಿ ನೋಡೋಣ?

ಈ ಪಗಡೆಯ ಆಟ ಇದರ ಹಿಂದಿನ ಆ ತೋಫಿನ ಶಬ್ದ, ಅದರ ಮುಂಚಿನ ಸಹಪ್ರವಾಸ, ಆ ಮುಂಚಿನ ನನ್ನ ಅರತಿಯ ಕಾಲದ ಕಳ್ಳನ ಇವೆಲ್ಲವೂ ವಿಕ್ರಮೋರ್ವಶೀಯರ ಅಂಕುರಕ್ಕೆ ಭೂಮಿಕೆಯಾದವು ಎಂದರೆ ನಂಬುತ್ತೀರಲ್ಲವೆ?

ನಮ್ಮ ಗ್ರಾಹಕರಿಗೆ ದೀಪಾವಳಿಯ ಶುಭಾಶಯಗಳು !
ಪ್ಲೇಡೇ 12.50-16.50
ಬಾಸ್ಟರ್ 5.95-6.95
ಡಯಾನಾ 13.95-18.95
ಮಕ್ಕಳ ಚಟುವಟಿಕೆಯ ಭರದಿಂದಾಗುವ ಸವೆತವನ್ನು ತಡೆಯುವಂತೆಯೇ ರಚಿಸಲ್ಪಟ್ಟಿವೆ
ದಿನನಿತ್ಯ–ಶಾಲೆಗೆ ಹೋಗುವಾಗ, ಆಟ ಆಡುವಾಗ, ಸ್ಥಿರತೆಯೊಡನೆ ಆರಾಮದ ಆನಂದವನ್ನೂ ಒದಗಿಸಲು ಅದ್ವಿತೀಯವಾದುವುಗಳು. ಬೆರಳುಗಳಿಗೆ ಸಾಕಷ್ಟು ಅವಕಾಶ ನೀಡುವಷ್ಟು ಮುಂಭಾಗ, ಹದಮಾಡಿದ ಮೃದುವಾದ ಚರ್ಮ, ಅಂದಚೆಂದಗಳುಳ್ಳ ಬಾಟಾ ಮಾದರಿಗಳು. ಅಚ್ಚುಕಟ್ಟಾಗಿ ಹೊಂದಿಕೆಯಾಗುವ ಮತ್ತು ದೀರ್ಘ ಬಾಳಿಕೆ ಬರುವ ಹಿಮ್ಮಡಿ ಮತ್ತು ಸೋಲ್. ಈ ಮಾದರಿಗಳು ಬೇಗಬೇಗನೆ ಬಿಕರಿಯಾಗುವಂಥವುಗಳು— ಈ ದಿನವೇ ನಿಮ್ಮ ಮಕ್ಕಳಿಗಾಗಿ ಒಂದೊಂದು ಜತೆ ಕೊಂಡು ಕೊಳ್ಳಿರಿ.
Bata
ಮೀರಾ 12.50-14.50
ಛಾಂಪಿಯನ್ 12.50-14.50
ಸೂಪರ್ ಟಫ್ 13.95-19.95

ಕಾಳ್ಗಿಚ್ಚು ಭುಗಿಲೆಂದಿತು

ದ. ಲ. ಕಿರೂರ

ಟಿಕ್...ಟಕ್...ಟಕ್...ಟಕ್.. ಟಕ್ ಟಕ್ ಟಕ್

ತನ್ನ ಶಯ್ಯಾಗಾರದ ಕಿಟಕಿಯ ಕಾಜಿನ ಮೇಲೆ ಯಾರೊ ನುಡಿಸುತ್ತಿದ್ದ ಸದ್ದು ಕೇಳಿ ಕಾದಂಬರಿ ವಾಚನದಲ್ಲಿ ಮಗ್ನಳಾಗಿದ್ದ ಸರಿತಾ ಬೆಚ್ಚಿದಳು. ನಾಯಕ-ನಾಯಿಕೆಯರ ಪ್ರಣಯ ಸನ್ನಿವೇಶದ ರಸಾಸ್ವಾದನೆಗೆ ಇದೆಲ್ಲಿಯ ಆತಂಕ ಎಂದು ಆಕೆ ಹುಬ್ಬೇರಿಸಿ, ತೆರೆದ ಕಾದಂಬರಿಯನ್ನು ಹಾಗೆ ಎದೆಯ ಮೇಲಿರಿಸಿಕೊಂಡು ಬಲಮುಂಗೈಯಲ್ಲಿಯ ವಾಚನ್ನು ನೋಡಿದಳು. ಹನ್ನೊಂಧಕ್ಕೆ ಐದು ನಿಮಿಷಗಳಿದ್ದವು. ತನ್ನ ಪತಿಯ ಹಿಂತಿರುಗಿದ್ದರೆ ತನ್ನ ಹೆಸರು ಹಿಡಿದೇ ಕೂಗುತ್ತಿದ್ದರಲ್ಲ, ಬಾಗಿಲು ತೆರೆಯುಲು ಎಂದು ಧೇನಿಸುತ್ತ ಹಾಗೇ ತದೇಕಚಿತ್ತದಿಂದ ಕಿವಿ ನಿಮಿರಿಸಿ ಬಿದ್ದುಕೊಂಡಳು.

ಮತ್ತೆ ಅದೇ ಟಕ್...ಟಕ್ ಸದ್ದು. ಬೆನ್ನ ಹಿಂದೆಯ

"ಸರಿತಾ. ನಾನು ಸುಹಾಸ. ತುಸು ಈ ಕಿಟಕಿಯನ್ನೇ ತೆರೆ ಒಳಗೆ ಬರಗೊಡು." ಎಂಬ ಮೆಲುದನಿಯ ಮಾತುಗಳು ಕೇಳಿ ಬಂದವು.

ವಿದ್ಯುದಾಘಾತವಾದಂತೆ ಸರಿತಾ ಮಂಚದಿಂದ ಪುಟಿದೆದ್ದು, ಕಿಟಕಿಯ ವರೆಗೆ ಹೋಗಿ ಕಾಜಿಗೆ ಕಿವಿಯಿಟ್ಟು,

"ಯಾರು? ಬಾಬಾಸಾಹೇಬ ಈ ನಡು ರಾತ್ರಿಯಲ್ಲಿ ಎಲ್ಲಿಂದ?" ಎಂದು ಅಷ್ಟೆ ಪಿಸು ದನಿಯಲ್ಲಿ ಉಸುರಿದಳು.

"ಹೌದು, ಬಾಬಾಸಾಹೇಬನೆ ನಾನು- ತುಸು ಬಾಗಿಲು ತೆರೆ"

"ಎಲ್ಲಿಯೊ ಜೇಲಿನಲ್ಲಿ ಇದ್ದೀ ಎಂದೂ, ಜೇಲು ಬೋಡೆ ಜಿಗಿದು ತಲೆತಪ್ಪಿಸಿಕೊಂಡಿರುವಿಯೆಂದೂ ಕೇಳಿದ್ದೇನೆ ಈಗ ಎಲ್ಲಿಂದ ಉದಯವಾದೆ?"

"ಹೊರಗಿನ ಕೊರೆಯುವ ಚಳಿಯಲ್ಲಿ ನಿಂತೇ ಉತ್ತರ ಕೊಡಲೆ? ಆಗದು. ಒಳಗೆ ಬಂದ ಮೇಲೆ ನಿನ್ನ ಪ್ರಶ್ನೆಗಳಿಗೆ ಉತ್ತರ ಸಿಕ್ಕರೂ ಸಿಕ್ಕೀತು."

ಕಿಟಕಿಯ ಬಾಗಿಲನ್ನು ತೆರೆದು ಆತನನ್ನು ಒಳಗೆ ಕರೆದ ಕೊಳ್ಳಬೇಕೆಂದು ನಿರ್ಧರಿಸಿದ ಸರಿತಾ ಬೋಲ್ಟುಗಳು ತುಸು ಕೂಡ ಕಿರಚದಂತೆ ಕೆಳಗಿಳಿಸಿ ಬಾಗಿಲು ತೆರೆದಳು.

ತಕ್ಷಣ ಸುಹಾಸ ಕ್ರೀಡಾಪಟುವಿನ ಚಾಪಲ್ಯದಿಂದ ಒಳಗೆ ತೂರಿ ಬಂದ. ಸರಿತಾ ಮತ್ತೆ ಬಾಗಿಲನ್ನು ಮುಚ್ಚಿದಳು. ಸುಹಾಸ ಅಲ್ಲಿಯ ಇದ್ದ ಕುರ್ಚಿಯ ಮೇಲೆ ಕುಳಿತುಕೊಂಡು ಹಸಗಳನ್ನು ಚನ್ನಾಗಿ ಉಜ್ಜಿ ಮೋರೆಯ ಮೇಲೆ ಬಿಸಿಯಾದ ಕೈಗಳನ್ನು ಎಳೆದುಕೊಂಡ ಕುರುಚಲು ಗಡ್ಡ ಟಿಕಿ ಕೊಂಡ ಒಳಗಿನ ಬೆಚ್ಚನ್ನ ಹವೆಯಿಂದ ಆತನ ಮನಸ್ಸು ಪ್ರಸನ್ನವಾದಂತಿತ್ತು ಕುಳಿತಲ್ಲಿಯೆ. ಆತನ ಕಣ್ಣುಗಳು ಇಡೀ ಕೋಣೆಯನ್ನು ಪರೀಕ್ಷಿಸುತ್ತಿದ್ದವು.

"ವಾಹವಾ! ಕ್ರಾಂತಿವೀರ, ಇರುಳ ಹೊಂಟ ಕಳ್ಳನ ಹಾಗೆ ಕಿಟಕಿಯಿಂದ ಬಂದೆಯಲ್ಲ ಅದೂ ಪೋಲೀಸ ಇನ್ಸ್‌ಪೆಕ್ಟರರ ಮನೆಗೆ..."

"ಸರಿತಾ, ಅಲ್ಲಿಯೇ ಇರುವದು ಮೋಜು. ಇಂಥ ಸುರಕ್ಷಿತ ಸ್ಥಳ ನನಗೆ ಬೇರೆ ಇನ್ನೊಂದು ಸಿಗಲಾರದು. ಕಂಡೆಯಾ" ಎಂದ ಆತ.

"ಕಳೆದ ವರ್ಷವೇ ಮುಂಬಯಿಯಲ್ಲಿಯ ಬಂಧನ ಸತ್ರದಲ್ಲಿ ನಿನ್ನನ್ನೂ ಹಿಡಿದುಕೊಂಡು ಅದೆಲ್ಲಿಗೊ ಒಯ್ದರು ಎಂದು ಪ್ರಸಿದ್ಧವಾಗಿತ್ತು"

"ಮಾಡು ಇಲ್ಲವೆ ಮಡಿ ಗಾಂಧೀಜಿ ಆ ಸಂದೇಶ ಇತ್ತರು, ಮುಂಬಯಿಯ ಆ ವಿರಾಟ್ ಸಭೆಯಲ್ಲಿ. ನಾವು ಏನನ್ನಾದರೂ ಮಾಡಿ ತೋರಿಸಬೇಕು ಅನ್ನುವಷ್ಟರಲ್ಲಿ ಈ ಬ್ರಿಟಿಶ ಸರಕಾರವು ನಮ್ಮನ್ನೆಲ್ಲ ಬಂಧಿಸಿ ಕಾರಾಗೃಹಕ್ಕೆ ಅಟ್ಟಿತು. ಇಂದು ಅಕ್ಟೋಬರ ೯ ಅಲ್ಲವೆ. ಗಾಂಧಿತಾತನ ಆ ದಿವ್ಯ ಸಂದೇಶ ದೊರೆತು ಸರಿಯಾಗಿ ಹದಿನಾಲ್ಕು ತಿಂಗಳುಗಳಾದವು"

"ಹೌದು. ಆದರೆ ಈಗ ನಮ್ಮ ಚಳವಳಿಗಾರರು ಮಾಡುತ್ತಲೂ ಇದ್ದಾರೆ. ಮಡಿಯುತ್ತಲೂ ಇದ್ದಾರೆ. ಚುಕ್ಕಾಣಿಯಿಲ್ಲದ ಹಡಗದಂತೆ ಸಾಗಿದೆ ಚಳವಳಿ ಒಂದೇ ವರ್ಷದಲ್ಲಿ ಅದೆಷ್ಟು ಸ್ಟೇಶನ್ ಸುಟ್ಟರು, ಸರಕಾರಿ ಹಣ ದೋಚಿದರು, ಗುಂಡಿಗೂ ಆಹುತಿಯಾದರು."

"ಕ್ರಾಂತಿ ಇದು, ಸರಿತಾ. ಕ್ರಾಂತಿ. ಸ್ವಾತಂತ್ರ್ಯ ಸಂಪಾದನೆಗಾಗಿ, ಆಂಗ್ಲರನ್ನು ಇಲ್ಲಿಂದ ಹೊಡೆದೋಡಿಸುವದಕ್ಕಾಗಿ ನಡೆದಿರುವ ೪೨ ರ ಕ್ರಾಂತಿ ಇದು"

"ಗುರಿಯಿನ್ನೂ ಬಹುದೂರ ಆಗಲಿ ಆ ಕ್ರಾಂತಿ ಕಿಚ್ಚಿಗೆ ಹುಲ್ಲು ಹಾಕುವದಕ್ಕೆ ನೀನೂ ಒಬ್ಬ ಬಂದು ಸೇರಿಕೊಂಡಂತಾಯಿತಲ್ಲ. ಇನ್ನೇನು ನಮ್ಮವರಿಗೆ ನಿದ್ದೆ ಕೂಡ ಇಲ್ಲದಂತಾಗುವದು."

"ಏನ ಬರಿ ಮಾತನ್ನೆ ಪ್ರಾರಂಭಿಸಿಬಿಟ್ಟೆಯಲ್ಲ ಎಷ್ಟೊಂದು ದಿನಕ್ಕೆ ಅತಿಥಿ ಮನೆಗೆ ಬಂದಿದ್ದಾನೆ. ಒಂದು ಕಪ್ಪು ಚಹವಾದರೂ ಸಿಕ್ಕೀತೇ?"

"ಚಹವೇಕೆ ಅಡಿಗೆಯೆ ಇದೆ ಊಟ ಮುಗಿಸಬಹುದಲ್ಲ"

"ಇಲ್ಲ, ಊಟಕ್ಕೆ ಈಗ ಸಮಯವಿಲ್ಲ. ಇಲ್ಲಿಯ ವರೆಗೆ ಬಂದಿದ್ದೆ; ನಿನ್ನನ್ನು ನೋಡಿಕೊಂಡು ಹೋಗೋಣ ಎಂದು ಬಂದೆ."

"ತಡೆ ಹಾಗಾದರೆ" ಎಂದು ಸರಿತಾ ಸರ ಕ್ಕನೆ ಅ ... ಯ ... ಒಂದು ಲೋಟಾ ತುಂಬ ಹಾಲನ್ನು ತಂದಳು ಬೆಳ್ಳಿಯ ಲೋಟಾದಲ್ಲಿದ್ದ ಆ ಹದಬೆಚ್ಚನ್ನ ಹಾಲಿನಲ್ಲಿ ಕೇಶರದ ಎಸಳುಗಳು ತೇಲುತ್ತಿದ್ದವು

"ಹಂ! ಹಂ! ಇದು ಸಾಹೇಬರ ಪಾಲಿನ ಹಾಲೆಂದು ತೋರುತ್ತದೆ. ಚಹ ಕೇಳಿದರೆ ಹಾಲೇ ದೊರೆಯಿತಲ್ಲ! ನಮ್ಮ ದೈವವೇ ದೈವ..." ಎಂದು ಬಾಯಿ ಚಪ್ಪರಿಸುತ್ತ ಹಾಲನ್ನು ಕುಡಿಯತೊಡಗಿದ.

ಸರಿತಾ ಮಂಚಕ್ಕೆ ಒರಗಿ ನಿಂತುಕೊಂಡೇ ಸುಹಾಸನನ್ನು ನಿರುಕಿಸುತ್ತಿದ್ದಳು. ಯಾರ ಹೆಸರನ್ನು ಕೇಳಿದರೆ ಪೋಲೀಸರ, ಸುಪರಿಂಟೆಂಡೆಂಟರ ಎದೆ ಝಲ್ಲೆನ್ನುತ್ತಿದೆಯೊ ಆ ಬಾಬಾಸಾಹೇಬನೇ ಈತ! ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ ಪ್ರಾಧ್ಯಾಪಕನಾಗಿ ಎರಡೇ ವರ್ಷ ದುಡಿದು ರಾಷ್ಟ್ರಪಿತನ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಸಮರದಲ್ಲಿ ಧುಮುಕಿದ ಡಾ. ಸುಹಾಸನೇ ಈತ! ಈಗ ನೋಡಿದವರಾರೂ ಈತನನ್ನು ಬಾಬಾಸಾಹೇಬನೆಂದಾಗಲಿ, ಡಾ. ಸುಹಾಸನೆಂದಾಗಲಿ ಗುರುತಿಸುವಂತಿರಲಿಲ್ಲ. ಖಾದಿ ಕರಿ ನಿಕ್ಕರು, ಅರೆತೋಳಿನ ಶರ್ಟಿನ ಮೇಲೊಂದು ಅಲ್ಲಲ್ಲಿ ತೂತು ಬಿದ್ದ ಚಾಕಲೇಟ ಜಾಕೀಟು. ತಲೆಗೊಂದು ಸ್ಕಾರ್ಫ. ಕಾಲುಗಳಿಗೆ—ಕಾಲುಚೀಲ ಇಲ್ಲದ ಬರಿ ಬೂಟುಗಳು. ಆದರೆ ಆತನ ಕಣ್ಣುಗಳಲ್ಲಿಯ ತೇಜ ಮಾತ್ರ ಈ ವ್ಯಕ್ತಿಯೆ ಬಾಬಾಸಾಹೇಬ ಇದ್ದಾನೆ ಎಂದು ಸಾರಿಹೇಳುವಂತಿತ್ತು.

"ಈಗ ಎಲ್ಲಿಂದ ಬಂದೆ? ಮೊನ್ನೆ ರವಿವಾರದ ಪತ್ರಿಕೆ ನಿನಗೆ ನೋಡಲು ಸಿಕ್ಕಿತ್ತೆ?"

"ಹೊ! ಕಾಗವಾಡದಲ್ಲಿ ನೋಡಲು ಸಿಕ್ಕಿತು. ಯಾಕೆ? ಏನು ವಿಶೇಷ ಇತ್ತು ಅದರಲ್ಲಿ ಕಥೆ ಚೆನ್ನಾಗಿತ್ತೆ?"

"ನೀನೂ ಒಂದು ಪ್ರಾಣಿ. ಅದಲ್ಲ ನಾನು ಹೇಳಬೇಕಂದಿದ್ದು. ಮುಖಪುಟದಲ್ಲಿಯ ಸುದ್ದಿ. ನಿನ್ನ ಸುದ್ದಿ ನೋಡಿದೆಯಾ ಎಂದು ಕೇಳಿದ್ದು"

"ಅದೇನು ಇದ್ದದ್ದೇ ಮೈಯಾಂಡು ಹೋಗಿದೆ ನಮಗೆ. ನನ್ನ ತಲೆಗೆ ಈ ಕೆಂಪು ಮೋತಿಯವರು ಎಷ್ಟೆಷ್ಟು ಬೆಲೆ ಕೊಡಲು ಸಿದ್ಧರಿದ್ದಾರೆ ಎಂಬುದನ್ನು ನಾವೂ ಮೋಜಿನಿಂದ ನೋಡುತ್ತಿರುತ್ತೇವೆ ಪಾಪ! ಅವರೇನ ಮಾಡಿಯಾರು."

" ನಿನ್ನ ತಲೆಗಂತೂ ಎರಡು ಸಾವಿರ ರೂ.ಗಳನ್ನು ಇಟ್ಟಿದ್ದಾರಲ್ಲ "

" ಅಂತೇ ನಾನು ಹೀಗೆ ತಲೆತಪ್ಪಿಸಿಕೊಂಡು ಅಲೆದಾಡುತ್ತಿದ್ದೇನೆ ಯಾಕೆ, ಸರಿತಾ. ನನ್ನ ಈ ಬೆಲೆ ಬಹಳ ಕಡಿಮೆಯಾಗಲಿಲ್ಲವೆ ? ಪಾಪ, ನನ್ನನ್ನು ಹಿಡಿದುಕೊಟ್ಟವರಿಗಾದರೂ ನಾಲ್ಕಾರು ವರ್ಷಗಳ ಸುಖೀಜೀವನ ನಡೆಸುವಷ್ಟಾದರೂ ಪಾರಿತೋಷಕ ಇಡಬಾರದೆ ಈ ಬ್ರಿಟಿಶ ಸರಕಾರ!"

"ಅಂತೂ ಸರಕಾರಿ ಅತಿಥಿಗಳಲ್ಲಿ ಈಗ ನಿನ್ನ ದರ್ಜೆ ಏರಿದೆ ಅನ್ನು. ಈಗ ಇನ್ನೇನು ನಿನ್ನ ಕಾರ್ಯಕ್ರ"

"ಯಾಕೆ, ನಿನ್ನ ಪತಿಗೆ ಹೇಳಿ ನನ್ನನ್ನ ಮತ್ತೆ ಸೆರೆಮನೆಗೆ ಕಳಿಸಬೇಕೆಂದಿದ್ದೀಯಾ? ಪಾದರಸದಂತಿರುವ ನನ್ನನ್ನು ಹಿಡಿಯಲು ಯಾರಿಗೂ ಸಾಧ್ಯವಿಲ್ಲ ಗೊತ್ತೆ?"

" ಹಾಗಲ್ಲ ಸುಹಾಸ, ನಿನ್ನ ತ್ಯಾಗ, ಈ ಹೋರಾಟ ಏತಕ್ಕಾಗಿ ಎಂಬುದನ್ನು ಅರಿಯದಷ್ಟು ನಾನು ಮೂರ್ಖಳೆ ? ನಿನಗೇ ನನ್ನಿಂದ ಏನಾದರೂ ಉಪಕಾರವಾದೀತೇನೊ ಎಂಬ ಆಸೆಯಿಂದ ಕೇಳಿದೆ ಅಷ್ಟೆ "

"ಸರಿ ಸುಮ್ಮನೆ ಕುಳಿತಿದ್ದರೆ, ನಾನೂ ಉಳಿದ ಧುರೀಣರಂತೆ ಜೇಲಿನ ನಾಲ್ಕು ಗೋಡೆಗಳಲ್ಲಿ

ನಾಯಕರು - ನೀರು

ನೀರಿದ್ದ ನಾಯಕರು ಅಂದು ಹರಿಸಲು ಬೆವರು
ಬಂಜೆ ನೆಲವೂ ಭಾರಿ ಬೆಳೆ ಕೊಟ್ಟಿತು :
ಇಂದು ನಾಯಕರಲ್ಲಿ ನೀರಿಲ್ಲವೆಂತಲೇ
ನಮ್ಮೆರೆಯ ನೆಲ ಬಿರುಕು ಬಿಡುತಲಿಹುದು !

—ಎಂ. ಅಕಬರ ಅಲಿ

ರೊಟ್ಟಿ ಕಡಿಯುತ್ತ ಕುಳಿತಿರಬಹುದಾಗಿತ್ತು. ಆದರೆ ಅದು ನನ್ನ ಸ್ವಭಾವವಲ್ಲ. ಆರು ಅಳತ್ತರದ ಜೇಲುಗೋಡೆಯನ್ನೇ ದಾಟ ಜಿಗಿದು ಬಂದಿದ್ದೇನೆ ನಮ್ಮ ಇಲ್ಲಿಯ ಜನರಿಗೆ ಮಾರ್ಗದರ್ಶನ ನೀಡಲೆಂದು. ನಿಮ್ಮ ಸಾಹೇಬರು ಚಳವಳಿಯಲ್ಲಿ ಇನ್‌ಸ್ಪೆಕ್ಟರರಂತೂ ಆದರು. ಇನ್ನೊಂದು ಡಿ. ವಾಯ್ ಎಸ್ ಪಿ ಆಗುವ ಹಂಚಿಕೆ ಹಾಕುತ್ತಿದ್ದಾರೆ."

"ಅವರದು ನಡದೇ ಇದೆ ಉದ್ಯೋಗ, ಹೊಟ್ಟೆಯ ಪಾಡಿಗಾಗಿ. ನಿನ್ನಷ್ಟು ಧೈರ್ಯವಂತರಲ್ಲ ನೋಡು ಅವರು. ನಿಮ್ಮ ಹಾಸ್ಟೆಲ್ ಕ್ಲಬ್ಬಿನಲ್ಲಿ ವಾರಾನ್ನಕ್ಕಾಗಿ ಇದ್ದುಕೊಂಡು ಕಲಿತು ಇಲ್ಲಿಗೆ ಬಂದು ಮುಟ್ಟಿದ್ದಾರೆ. ಪಾಲಿಗೆ ದು ಪಂಚಾಮೃತ"

"ನೀನೂ ಅವರ ಪಾಲಿಗೆ ಬಂದಿದ್ದು ಪಂಚಾಮೃತವೆ ? ನಮ್ಮ ಕ್ರಾಂತಿಕಾರರ ಗುಂಪಿನಲ್ಲಿರಬೇಕಾದ ನೀನು ಈ ಪೋಲೀಸ ಇನ್‌ಸ್ಪೆಕ್ಟರನ ಮನೆಯಲ್ಲಿ ಬಂದು ಬಿದ್ದಿರುವೆ."

"ಹೋಗಲಿ ಬಿಡು ಸುಹಾಸ. ಗತಂ ನ ಶೋಚಯೇತ್. ನಿನ್ನ ಮುಂದಿನ ಕಾರ್ಯಕ್ರಮವೇನು ?"

"ಹಗಲಿನಲ್ಲಿಯಂತೂ ನಾನು ಹೊರಗೆ ಅಡ್ಡಾಡುವಂತಿಲ್ಲ. ಹಂ! ಆದರೂ ಅಲ್ಲಲ್ಲಿ ಸುಳಿದಾಡಬೇಕಾಗುತ್ತದೆ ಅನ್ನು. ಈಗ ಮೊದಲು ಊರಿಗೆ ಹೋಗಿ ತಾಯ್ತಂದೆಗಳನ್ನೂ ಕೈಹಿಡಿದಾಕೆಯನ್ನೂ ಕಂಡನಂತರ ಮುಂದಿನ ವಿಚಾರ"

"ಇದಕ್ಕೆಂದೇ ನಾನು ಇಷ್ಟು ಪೀಡಿಸಿ ಕೇಳಿದ್ದು. ಇಂಥ ರಾತ್ರಿಯಲ್ಲಿ ನಿಮ್ಮ ಊರಿಗೆ ಎರಡು ಹರದಾರಿ ನಡೆದುಕೊಂಡೇ ಹೋಗುವಿಯಾ ? ಬೇಡ. ಹೋಗಬೇಡ."

" ನಿಮ್ಮಲ್ಲಿ ಸೈಕಲ್ ಇದ್ದರೆ ಕೊಡು. ಬೆಳಗಾಗುವದರೊಳಗೆ ಹೋಗಬಂದು ಸೈಕಲ ತಿರುಗಿ ಮುಟ್ಟಿಸಿ ನನ್ನ ದಾರಿ ಕಂಡುಕೊಳ್ಳುತ್ತೇನೆ "

"ನಿಮ್ಮ ಊರಿಗೆ ಹೋದರೆ ಮತ್ತೆ ನಿನ ಜೇಲಿನದಾರಿ ಕಾಣುವುದೇ ಸರಿ. ನಿಮ್ಮ ಮ... ಈಗ ಅಲ್ಲಿ ಪೋಲೀಸರ ಅಜ್ಞಗಾವಲು ... ನೀನು ನಿನ್ನ ಮನೆಗೆ ಬರುತ್ತೀ ಎಂದು ಪೋಲೀಸರಿಗೆ ಗೊತ್ತು."

"ಹೀಗೋ. ಹಾಗಾದರೆ ನಾನು ಹೋಗಿ ಬರಲೇಬೇಕು. ಅಂದ ಹಾಗೆ ನಿಮ್ಮಲ್ಲಿ ಒಬ್ಬ ಪೋಲೀಸ ರಾತ್ರಿ ಮಲಗಲು ಬರುತ್ತಿದ್ದನಲ್ಲ ಆತನ ಸೈಕಲ್ ಇಲ್ಲವೆ ?"

"ಇಂದು ಶೀಗೀ ಹುಣ್ಣಿವೆ. ಕಂಠಪೂರ್ತಿ ಕುಡಿದು ಬಂದು ವ್ಹರಾಂಡಾದಲ್ಲಿ ಬಿದ್ದಿದ್ದಾನೆ. ಆತ ಇಂದು ಸೈಕಲ್ ತಂದಿಲ್ಲ."

" ಸುಳ್ಳು, ನಾನಿಂದು ಊರಿಗೆ ಹೋಗಲೇಬೇಕು ತಾಯ್ತಂದೆಗಳ ಆಶೀರ್ವಾದ ಪಡೆದುಕೊಂಡೇ ಮುಂದಿನ ಕೆಲಸ "

"ಸುಳ್ಳು. ಹಿರಿಯರ ಆಶೀರ್ವಾದಕ್ಕಿಂತ ಇನ್ನೂ ಬಲವತ್ತರವಾದ ಕಾರಣ ಇರಲೇಬೇಕು. ಆದರೂ ಇನ್ನೂ ನಾಲ್ಕಾರು ದಿನ ನೀನು ನಿಮ್ಮೂರಿಗೆ ಹೋಗದಿರುವದೇ ಕ್ಷೇಮ "

"ಯಾಕೆ ಕಾಡುತ್ತೀಯೆ? ಹೌದು ರಮೆಯ ಸಲುವಾಗಿಯೇ ಹೋಗುತ್ತಿದ್ದೇನೆ ಆಯಿತೆ? ಇನ್ನಾದರೂ ಹೋಗಗೊಡು "

"ನಾನೆಲ್ಲಿ ಕಟ್ಟಿ ಹಾಕಿದ್ದೇನೆ......' ಎಂದು ಸರಿತಾ ತುಟಿಯಲ್ಲೇ ನಕ್ಕು ಹುಬ್ಬು ಹಾರಿಸಿದಳು. ಸ್ವಾತಂತ್ರ್ಯಯೋಧನನ್ನು ಹಿಡದೆಳೆಯುತ್ತಿದ್ದ ಆಕರ್ಷಣ ಶಕ್ತಿಯನ್ನು ಆಕೆ ಸರಿಯಾಗಿ ಊಹಿಸಿದ್ದಳು

"ಈಗ ನೀನು ಧಾವಿಸಿ ಹೋದರೂ ರಮೆಯ ಭೆಟ್ಟಿ ಆಗುವಂತಿಲ್ಲ."

"ಅದನ್ನೆಲ್ಲ ನೀನು ಚಿಂತಿಸಬೇಕಾಗಿಲ್ಲ. ಬಾಬಾಸಾಹೇಬನಿಗೆ ಅಸಾಧ್ಯವಾದುದೇನೂ ಇಲ್ಲ. ನೀನು ಇಂಥ ಮಾತುಗಳಿಂದ ನನ್ನನ್ನು ಹೆದರಿಸಿ ಪ್ರಯೋಜನವಿಲ್ಲ."

"ಇಲ್ಲಿ ಕೇಳ್ರಿ, ಇಂದು ಬೆಳಿಗ್ಗೆ ನಮ್ಮವರೇ ತಿಮ್ಮಯ್ಯರ ವರೆಗೆ ಹೋಗಿ ಎಲ್ಲ ರೀತಿ ಬಂದೋಬಸ್ತು ಮಾಡಿ ಬಂದಿದ್ದಾರ"

"ಹಾಗಿದ್ದರ ಈಗ ನಿಮ್ಮ ಸಾಹೇಬ ಎಲ್ಲಿ?"

"ಹು! ಶಾಂತನಾಗು. ಈಗ ಸಂಜೆಗೆ ಇಲ್ಲಿಯ ರೇಲ್ವೆ ನಿಲ್ದಾಣಕ್ಕೆ ಹೋದವರು ಇನ್ನೂ ಬಂದಿಲ್ಲ."

"ಅಂತೂ ವಾಸನ ಬಡಿದಿದ ಅನ್ನು."

"ಏನು ಅದು! ನಿಲ್ದಾಣಕ್ಕೆ ಗಂಡಾಂತರ ಇದೆಯ!"

"ನನಗೇನು ಗೊತ್ತು. ನಾನಂತೂ ಹೊರಟೆ ಬಾಗಿಲು ಹಾಕಿಕೊ" ಎಂದು ಕಿಟಕಿಯತ್ತ ಹೊರಟ

"ಆಹಹಾ! ಬಂಟ! ನಾಲ್ಕು ದಿನ ಹೆಂಡತಿಯನ್ನು ಮರೆಯಲಿಕ್ಕಾಗದವ, ಕ್ರಾಂತಿವೀರನಂತೆ ಯಾರು ಕೊಟ್ಟರೂ ಬಿರುದು"

ಸುಹಾಸ ಸರ್ರನೇ ಹಿಂತಿರುಗಿದ ಬಂದು ಸರಿತಾಳ ಎದುರಿಗೇ ನಿಂತು.

"ನಾವೂ ಉಪ್ಪುಂಡ ಮಾನವರು. ಹೆಂಡತಿಯ ಭೆಟ್ಟಿಗೆ ಹೋಗುತ್ತಿದ್ದೇನಷ್ಟೆ."

"ಯಾರು ಇಲ್ಲವೆಂದರು. ಆದರೂ ಜೀವದ ಪರಿವೆಯಿಲ್ಲದೆ ಇಂದೇ ಹೋಗಬೇಕಾದ ಅಗತ್ಯ ಏನು ಅಂತ. ನಾಲ್ಕಾರು ದಿನ ಬಿಟ್ಟು ಪೋಲೀಸ ಕಾವಲು ತೆಗೆದ ನಂತರ ಹೋದರಾಗದೆ?"

"ನಾಲ್ಕಾರು ದಿನ ಇಲ್ಲಿಯೆ ಸುಳಿದಾಡಿ ವ್ಯರ್ಥ ಕಾಲಹರಣ ಮಾಡಬೇಕೆ! ಆಗದು ಇಂದೇ ರಮೆಯ ಭೆಟ್ಟಿ."

"ಇಷ್ಟು ಆತುರನಾಗುವ ಸ್ಥಿತಿ ಬಂತೆ ಸುಹಾಸ! ಸ್ತ್ರೀ ದೇಹದ ಆಕರ್ಷಣ ಇಷ್ಟೊಂದೇ ನಿನ್ನ ಮೇಲೆ! ಈ ಪೋಲೀಸರು ಒಡ್ಡಿದ ಜಾಲದಲ್ಲಿ ನೀನಾಗಿ ಹೋಗಿ ಹಾರಿಕೊಳ್ಳದಿರು ಸುಹಾಸ. ರಮೆ ನನಗೆ ತಂಗಿಯ ಸಮಾನ ನೀನು ಆಕೆಯನ್ನು ಇಂದು ತಲಪುವದು ಸಾಧ್ಯವಿಲ್ಲ. ಅಷ್ಟು ದೂರ ಕೂಡ ನೀನು ಹೋಗಬೇಕಾಗಿಲ್ಲ ಇಗೊ ಇಲ್ಲಿ ಆಕೆಯ ಬದಲು ನಾನಿದ್ದೇನೆ. ನಿನ್ನ ಕಾಮೋನ್ಮಾದಕ್ಕೆ ಬಲಿಯಾಗಲು. ನಿನ್ನಂಥವನನ್ನು ಜೇಲಿನಿಂದ ಹೊರಗಿಡಲು ಇದೇನೂ ಮಹಾ ತ್ಯಾಗವಾಗಲಾರದು. ನಾನು ನಿನ್ನವಳೇ..." ಎಂದು ಸರಿತಾ ಮೈನಿಮಿರಿಸಿ. ಎದೆಯುಬ್ಬಿಸಿ ಕಣ್ಮುಚ್ಚಿ ಆತನ ಎದುರಿಗೆ ನಿಂತಳು

ಒಂದು ಕ್ಷಣ ಸುಹಾಸ ಸರಿತೆಯನ್ನು ಎವೆಯಿಕ್ಕದೆ ನೋಡಿದ ಒಂದರೆಕ್ಷಣ ಧೃತರಾಷ್ಟ್ರನ ಆವೇಶದಿಂದ ಆಕೆಯನ್ನು ಬಿಗಿದಪ್ಪಿದ ಮರಕ್ಷಣದಲ್ಲಿ ಆತನ ದೇಹ ಆಕೆಯ ಪಾದಕ್ಕೆರಗಿ ಬಿದ್ದಿತ್ತು

"ತಂಗೀ, ನೀನಿಂದು ನನ್ನ ಕಣ್ಣು ತೆರೆದೆ ನಿನ್ನಂಥ ಸತಿಯರು ಇನ್ನೂ ಭಾರತದಲ್ಲಿ ಇರುವದರಿಂದಲೇ ನಮ್ಮ ದೇಶ ಸ್ವಾತಂತ್ರ್ಯದ ಕನಸು ಕಾಣುತ್ತಿದೆ. ಧನ್ಯ ಸರಿತಾ! ಆದರೆ ಎದೆಯಲ್ಲಿ

ಹಬ್ಬಿದ ಈ ಕಾಳ್ಗಿಚ್ಚು ಭುಗಿಲ್ಲೆನ್ನದೆ ಉಳಿಯಲಾರದು...ಉಳಿಯಲಾರದು"

ನಿಶ್ಶಬ್ದ, ನೀರವ.

ಸರಿತಾ, ಕಣ್ಣು ಬಿಟ್ಟು ನೋಡುವದರೊಳಗಾಗಿ ಸುಹಾಸ ಬಂದ ದಾರಿಯಿಂದಲೇ ಮಾಯವಾಗಿದ್ದ. ಮಂದಹಾಸವೊಂದು ಆಕೆಯ ತುಟಿಗಳ ಮೇಲೆ ತೇಲಿಬಂತು! ತನ್ನ ವಿಜಯಕ್ಕಾಗಿಯೊ,! ಸುಹಾಸನನ್ನು ಗಂಡಾಂತರದಿಂದ ಪಾರು ಮಾಡಿದ್ದಕ್ಕಾಗಿಯೊ! ಯಾರು ಬಲ್ಲರು!

× × ×

ನರಗುಂದ ಬಂಡಾಯ ಮರೆತವರು ನಾವಲ್ಲ

ಪರವೊಂತಿನಾಗ ನೆನದೇವ! ಬಾಬಾಸಾಹೇಬ

ಬರುವಂಥ ವರವ ಕೇಳೇವ ||

ರೇಲ್ವೆ ನಿಲ್ದಾಣದ ಪ್ಲಾಟಫಾರ್ಮಿನ ಒಂದು ತುದಿಗೆ ಏಳೆಂಟು ಜನ ಈ ಮೇಲಿನ ಹಾಡು ಹಾಡಿಕೊಳ್ಳುತ್ತ, ಕಿಚ್ಚು ಕಾಸಿಕೊಳ್ಳುತ್ತ ಕುಳಿತುಕೊಂಡಿದ್ದರು ಹಳ್ಳಿಗರಂತೆ ಕಾಣುವ ಅವರೆಲ್ಲರೂ ಕಂಬಳಿಗಳನ್ನು ಹೊದ್ದುಕೊಂಡು ಕೈಗಳನ್ನಷ್ಟೆ ಚಾಚಿ ಚಳಿಯನ್ನು ಹೊಡೆದೋಡಿಸುವವರಂತೆ ಬೆಂಕಿ ಕಾಸಿಕೊಳ್ಳುತ್ತಿದ್ದರು. ಇವರ ಹಾಡಿನ ದನಿ ಕೇಳಿ ಪೋಲೀಸರು ಒಬ್ಬೊಬ್ಬರೇ ರೇಲ್ವೆ ಸ್ಟೇಶನ್ ಮಾಸ್ತರನ ಕಚೇರಿಯ ಕಡೆಯಿಂದ ಈ ಹಳ್ಳಿಗರಿದ್ದ ಕಡೆಗೆ ಬರತೊಡಗಿದರು.

"ಏ ಹಳ್ಳಿ, ಏನರೆಲೆ ಇದು. ಬೆಂಕಿ ಹೊತ್ತಿಸೀರಿ ಇಲ್ಲಿ" ಎಂದು ಒಬ್ಬ ಪೋಲೀಸ ಕೇಳಿದ.

"ಚಳಿ ಐತಿ ಸಾಹೇಬರೇ, ಮತ್ತೇನು ಮಾಡೂಣು. ಗಾಡೀ ಬರಾಕ ಇನ್ನೂ ಮೂರು ತಾಸು ಹೊತ್ತೈತರಿ- ಅದಕ್ಕ ಅಷ್ಟು ಕಿಚ್ಚು ಮಾಡಿದಿವರಿ."

"ಇಲ್ಲಿ ಯಾಕ ಪ್ಲಾಟಫಾರ್ಮ ಮ್ಯಾಲೆ? ಹೊರಗ ಕುಂತ ಕಾಸಿಗೋ ಬೇಕಿತ್ತು. ಏಳರೆಲೆ ಇಲ್ಲಿಂದ"

"ಇನ್ನೆಲ್ಲಿಂದ ಹೋಗೋದು ಬಿಡ್ರಿ ಸರದಾರರ"

"ಇಷ್ಟ್ಯಾಕ ಅಕಳ್ಯ ತಂದೀರಲೆ?"

"ಇಲ್ಲೇ ಬಿಟ್ಟ ಹೋಕ್ಕವೇಳ್ರಿ. ನಿಮಗಾದರೂ ಬೇಕಲ್ಲರಿ"

"ಮಗನೆ ಸರಕಾರದವರು ನಮಗ ಉಣ್ಣೆ ನಿಲುವಂಗಿ ಕೊಟ್ಟಾರ, ಕಾಣೂದಿಲ್ಲೇನು"

'ಆದರೂ ಬೇಕಾಗತಾವ ಬಿಡಿರಿ..." ಎನ್ನುವಷ್ಟರಲ್ಲಿ ಯಾರೊ ನಾಲ್ಕೆಂಟು ಗಳ ಕಬ್ಬು, ಒಂದು ಕೈಚೀಲ ಆ ಕಿಚ್ಚಿನ ಸಮೀಪದಲ್ಲಿ ಎಸೆದರು.

"ತಿನ್ನರೆಲೆ ಕಬ್ಬು, ಚಳಿ ಓಡಿ ಹೋಗತೈತಿ. ಕೈಚೀಲದಾಗ ಸೇಂಗಾ ಅದಾವ ನೋಡಲೆ ಕಾಳ್ಯಾ, ಹಸೀ ಸೇಂಗಾ, ಹಾಕ ಕಿಚ್ಚಿನಾಗ

ದೀಪಾವಳಿಯ
ಶುಭ ದಿನಗಳಲ್ಲಿ
ಸಂಪತ್ ಸಮೃದ್ಧಿಯ
ಜ್ಯೋತಿಯು ಬೆಳಗುತ್ತಿರಲಿ!
ನೀವು ಸದಾ ಸಮೃದ್ಧಿಶಾಲಿಗಳಾಗಿರಲು ಸಹಾಯ ನೀಡುವ
ದಿ ಬ್ಯಾಂಕ್ ಆಫ್ ಬರೋಡಾ ಲಿಮಿಟೆಡ್
(ಸ್ಥಾಪನೆ:1908) ರಿಜಿಸ್ಟರ್ಡ್ ಆಫೀಸು: ಮಾಂಡ್ವಿ, ಬರೋಡಾ
ಭಾರತದಲ್ಲಿ ಮತ್ತು ವಿದೇಶಗಳಲ್ಲಿ 300 ಕ್ಕಿಂತಲೂ ಹೆಚ್ಚು ಶಾಖೆಗಳಿವೆ
Shilpi BB 16/67 KAN

ಸುಟ್ಟು ತಿನ್ನಾಕರಂತ" ಎಂದು ಆ ವ್ಯಕ್ತಿ ನುಡಿದ

" ಇನ್ನಾ ಯಾರಲ ? ಇನ್ನೊಬ್ಬವ ಬಂದ ನಲ್ಲ "

"ಇವನಂ. ಬಾಬ್ಯಾ"

"ಬಾಬಾಸಾಹೇಬ ಏನಲೆ ಮತ್ತ"

"ಅಲ್ಲೋಳ್ರಿ. ಇವ ಸಾಹಿಬ್ಯಾ."

"ಮತ್ಯಾ ಅದನ್ನ ಅಂತೀರಲ್ಲ."

"ಹೋಗಲಿ ಬಿಡರಿ ಸರದಾರರ. ಕರೀರಿ ನಿಮ್ಮ ಮಂದಿನ್ನ ಥಂಡ್ಯಾಗ ಅಲ್ಲೆ ಸಟದು ಹೋಗ್ತಿ ಕ ಹತ್ತಾರ ಅಷ್ಟು ಕಿಚ್ಚು ಕಾಸಿಕೊಂಡು ಸುಟ್ಟ ಸೇಂಗಾ ತಿಂದು ತುಸು ಆರಾಮ ಆಗರಿ"

ಆ ಪೋಲೀಸನ ಕೂಗು ಹಾಕುವದೇ ತಡ. ಉಳಿದ ಒಂಭತ್ತು ಜನ ಪೋಲೀಸರು ಬಂದು ಈ ಹಳ್ಳಿಗರನ್ನು ಕೂಡಿಕೊಂಡರು. ಹಳ್ಳಿಗರು ಕಿಚ್ಚಿನಿಂದ ಹಿರಿಹಿರಿದು ಸೇಂಗಾ ಬುಡ್ಡಿಗಳನ್ನು ತಿಕ್ಕಿ ತಿಕ್ಕಿ ಕಾಳುಗಳನ್ನು ಪೋಲೀಸರಿಗೆ ತಿನ್ನಲಿಕ್ಕೆ ಕೊಡುತ್ತಿದ್ದರು. ಅರೆಬೆಂದ ಹಾಲುಗಾಳುಗಳನ್ನು ಪೋಲೀಸರು ಬಾಯಿಚಪ್ಪರಿಸುತ್ತ ಧ್ವಂಸ ಮಾಡುತ್ತಿದ್ದರು

"ಅರೆ, ಸಾಹೇಬ ಅಲ್ಲಿ ಕೂತಾನೊ ಸ್ಟೇಶನ ಮಾಸ್ತರ ಆಫೀಸಿನಾಗ ಎಲ್ಲ್ಯಾರೆ ನೋಡಿ ಗೀಡ್ಯಾನು"

"ಇಲ್ಲಿಯೇ ಇದಾನ್ರಿ ಸಾಹೇಬ" ಎಂದ ಹಳ್ಳಿಗ

"ನಿಮ್ಮ ಸಾಹಿಬ್ಯಾ ಅಲ್ಲೋ. ನಮ್ಮ ಸಾಹೇಬ ಚಹ ಶಡ್ಡಿಗೋತ ಕುಂತಾನ. ನಿಮ್ಮ ಸಾಹಿಬ್ಯಾ ಎಲ್ಲಲೆ? ಕಾಣೂದಿಲ್ಲ ಏನಿದು ದಗಾ?"

"ಎಲ್ಲಿ ದಗಾರಿ ಅಲ್ಲೆ ನಿಂತಾನ ನೋಡ್ರಿ. ಚೊಣ್ಣ ವಾರಿಮಾಡಿಕೊಂಡು" ಎಂದು ಇನ್ನೊಬ್ಬ ಹಳ್ಳಿಗ ಸಮೀಪದ ಮೋಟು ಮರದ ಕಡೆಗೆ ಬೆರಳು ತೋರಿಸಿದ

ಪೋಲೀಸರ ಧ್ವಂಸ ಕಾರ್ಯ ಸಾಗಿಯೇ ಇತ್ತು ಹಳ್ಳಿಗರೂ ಪ್ರೀತಿಯಿಂದ ಸೇಂಗಾ ಕಾಳುಗಳನ್ನು ಸುಲಿದು ಕೊಡುತ್ತಿದ್ದರು

ಹೀಗೇ ಒಂದೈದು ನಿಮಿಷ ನಡೆದಿರಬಹುದು. ನಿಲ್ದಾಣವೆಲ್ಲ ಮೌನ ನಿದ್ರೆಯಲ್ಲಿದ್ದಂತಿತ್ತು. ಅಷ್ಟರಲ್ಲಿ ಸ್ಟೇಶನ್ ಮಾಸ್ತರರ ಕಚೇರಿಯ ಕಡೆಯಿಂದ ಸಿಳ್ಳಿನ ದನಿ ಕೇಳಿ ಬಂತು. ಒಳಗಿದ್ದ ಫೌಜದಾರ ಇನ್ಸ್ಪೆಕ್ಟರ ಇಬ್ಬರೂ ಹೊರಗೆ ಧಾವಿಸಿದರು ಅಸಿ ಸ್ಟೇಶನ್ ಮಾಸ್ತರ ಹೆದರಿ ಹೌಹಾರಿ ತನ್ನ ಕೋಣೆಯ ಬಾಗಿಲು ಹಾಕಿಕೊಂಡು ಬಿಟ್ಟ ಎವೆಯಿಕ್ಕುವಷ್ಟರಲ್ಲೇ ದಾಂಡಿಗರಿಬ್ಬರು ಫೌಜದಾರ. ಇನ್ಸ್ಪೆಕ್ಟರರ ಬೆನ್ನ ಮೇಲೆ ಹಾರಿ ಅವರನ್ನು ನಿಶ್ಶಸ್ತ್ರಗೊಳಿಸಿ ಹೆಡಮುರಿಗೆ ಬಿಗಿದು ಮತ್ತೊಮ್ಮೆ ಸಿಳ್ಳು ಹಾಕಿದರು

ಈ ಎರಡನೆ ಸಿಳ್ಳಿನ ದನಿಗೆ ಸೇಂಗಾಕ್ಕಾಗಿ ಕೈಚಾಚಿದ್ದ ಪೋಲೀಸರ ಕೈಗಳನ್ನೆ ಆ ಹಳ್ಳಿಗರು ಹಿಡಿದೆಳೆದು ನೆಲಕ್ಕೆ ಮೆಟ್ಟಿ ತಮ್ಮ ಕಂಬಳಿಗಳಿಂದಲೇ ಅವರನ್ನು ಮುಸುಕೀ ಬಿಗಿದರು. ಪ್ರತಿಭಟಿಸಬೇಕು ಎನ್ನುವ ವಿಚಾರ ಪೋಲೀಸರ ತಲೆಯಲ್ಲಿ ಹೊಳೆಯುವದರೊಳಗಾಗಿ ಇಷ್ಟೆಲ್ಲ ನಡೆದು ಹೋಗಿತ್ತು

'ಬಾಬಾ ಸಾಹೇಬಕೀ ಜಯ' ಎಂದು ಗರ್ಜಿಸುತ್ತ ಈ ಹಳ್ಳಿಗರು ಸ್ಟೇಶನ್ ಮಾಸ್ತರನ ಕಚೇರಿಯತ್ತ ಧಾವಿಸಿದರು. ಒಬ್ಬನು ಈ ಕಂಗಾಲಾದ ಪೋಲೀಸರನ್ನು ಕಾಯಲು ನಿಂತಿದ್ದ.

ಇಂದಿನ ಬೆಳೆ-ಕಳೆ

ಎಷ್ಟು ಹಣಗಿದರೂ ಜವಾರಿ ಬೆಳೆ ಬರುತಿಲ್ಲ,
ಹೈಬ್ರಿಡ್ಡ ಹುಚ್ಚೆದ್ದು ಬೆಳೆವುದಲ್ಲ;
ಎಲ್ಲೆಲ್ಲು ಹದಿನಾಲ್ಕು ಕ್ಯಾರೆಟ್ಟು, ರೋಲ್ಡಗೋಲ್ಡು
ಇವುಗಳದೆ ದರ್ಬಾರ, ಪವನದಲ್ಲ!

— ಎಂ. ಅಕಬರ ಅಲಿ

ಮುಂದೆ ಹತ್ತು ನಿಮಿಷಗಳಲ್ಲಿ ಸ್ಟೇಶನ್ನಿನ ಇಡೀ ಕಟ್ಟಡ ಉರಿಯ ಹತ್ತಿತ್ತು ಗೋಣಿಕೆ ಹೊಡೆಯುತ್ತಿದ ಪೋರ್ಟರರು ಈ ಗದ್ದಲಕ್ಕೆ ಎದ್ದು ಬೊಬ್ಬೆಯಿಕ್ಕುವಷ್ಟರಲ್ಲಿ ಹತ್ತಾರು ವ್ಯಕ್ತಿಗಳು ಬೆಳದಿಂಗಳಿನ ಮುಬ್ಬುಗತ್ತಲಿನಲ್ಲಿ ಕರಗಿ ಹೋದವು. ಸುತ್ತಲಿನ ಜನ ಬಂದು ನೆರೆದಾಗ ಈ ಹೆಡಮುರಿಗೆ ಬಿಗಿಸಿಕೊಂಡು ಬಿದ್ದಿದ್ದ ಫೌಜದಾರ ಇನ್ಸ್ಪೆಕ್ಟರ ಹಾಗೂ ಪೋಲೀಸರು ಕಂಡುಬಂದರು. ಸ್ಟೇಶನ್ ಮಾಸ್ತರನೂ ಬಂದು ಈ ದುರ್ಘಟನೆಯನ್ನು ನೋಡಿ ತನ್ನ ಅಸಿಸ್ಟಂಟನನ್ನು ಗದರುತ್ತ ಪೋಲೀಸ ಠಾಣೆಗೆ ಕಟ್ಟುಗಳನ್ನು ಬಿಚ್ಚಿಸಿದ.

"ನಿಮ್ಮ ಸ್ಟೇಶನ್ ಪಾಳಿ ನಾಳಿಗೆ ಅಂತ ಇತ್ತಲ್ಲರಿ. ಹ್ಯಾಂಡಬಿಲ್ಲಿನ್ಯಾಗ" ಎಂದು ಚೀರಿದ ಇನ್ಸ್ಪೆಕ್ಟರ.

"ನೀವೇ ನೋಡತೀರಲ್ಲರಿ ಸಾಹೇಬರ, ನಾಳಿನದು ಇಂದೇ ಆಗಿಹೋಯಿತು" ಎಂದು ಅಳುತ್ತ ಉತ್ತರಿಸಿದ.

"ಬದ್ ಮಾಷ್, ಬದ್ ಮಾಷರು ಎಲ್ಲ ಹತ್ತು ಮಂದಿ ಇದ್ದು ಏನು ಮಾಡಿದಿರಲೇ? ಎಲ್ಲಿ ಅವ ನಿಮ್ಮ ಬಂದೂಕ? ಹೊಡದು ಹಾಕಲಿಕ್ಕೆ ಆಗಲಿಲ್ಲ ಅವರ್ನ" ಎಂದು ಹಸಿದ ಹುಲಿಯಂತೆ ಇನ್ಸ್ಪೆಕ್ಟರ ಪೋಲೀಸರ ಮೇಲೆ ಹರಿಹಾಯ್ದ.

ಅಗ್ನಿನಾರಾಯಣನ ಜ್ವಾಲೆಗಳು ಮೇಲು ಮೇಲಕ್ಕೇರುತ್ತಿದ್ದವು. ಎಲ್ಲರೂ ನಿಬ್ಬೆರಗಾಗಿ ಲಂಕಾದಹನವನ್ನು ನೋಡುತ್ತ ನಿಂತಿದ್ದರು.

× × ×

ಮರುದಿನ ಪತ್ರಿಕೆಯಲ್ಲಿ ಸುದ್ದಿಯೊಂದು ಪ್ರಕಟವಾಗಿತ್ತು.

"ನಿನ್ನೆ ಮಧ್ಯರಾತ್ರಿಯ ನಂತರ...ರೇಲ್ವೆ ನಿಲ್ದಾಣವನ್ನು ಚಳವಳಿಗಾರರು ಸುಟ್ಟು ಹಾಕಿದ್ದಾರೆಂದು ತಿಳಿಯುತ್ತದೆ ಫೌಜದಾರರು, ಇನ್ಸ್ಪೆಕ್ಟರರು ಹಾಗೂ ಹತ್ತು ಜನ ಪೋಲೀಸರನ್ನು ಹೆಡಮುರಿಗೆ ಕಟ್ಟಿ ಚಳವಳಿಗಾರರು ಈ ಕೃತ್ಯವನ್ನು ಎಸಗಿದ್ದಾರೆ. ಪೋಲೀಸರ ಹತ್ತು ಬಂದೂಕುಗಳನ್ನೂ ಇಬ್ಬರು ಅಧಿಕಾರಿಗಳ ಪಿಸ್ತೂಲುಗಳನ್ನೂ ಕ್ರಾಂತಿಕಾರರು ಅಪಹರಿಸಿದ್ದಾರೆ. ಬಂದವರು ಆರೆಂಟು ಜನ ಮಾತ್ರ ಇದ್ದರೆಂದು ತಿಳಿಯುತ್ತದೆ ಅವರೆಲ್ಲ ಫರಾರಿಯಾಗಿದ್ದಾರೆ

"ಈ ಸ್ಟೇಶನ್ ಸುಟ್ಟು ಹಾಕಿದ ಪದ್ಧತಿಯನ್ನು ನೋಡಿದರೆ ಕ್ರಾಂತಿಕಾರ ಬಾಬಾ ಸಾಹೇಬನ ಕೈವಾಡ ಅದರಲ್ಲಿ ಇದೆಯೆಂದು ಹೇಳಬಹುದಾಗಿದೆ"

ಚಹ ಹೀರುತ್ತ ಪತ್ರಿಕೆ ಓದುತ್ತ ಕುಳಿತಿದ್ದ ಇನ್ಸ್ಪೆಕ್ಟರ.

"ಲುಚ್ಚೇರು. ಏನೇನಾದರೂ ಬರೀತಾರ. ಬಾಬಾ ಸಾಹೇಬ ಬಂದಾನಂತ" ಎಂದು ಕಪ್ಪನ್ನು ಟೇಜಿನ ಮೇಲೆ ಗಟ್ಟಿಸಿದರು.

"ಬಾಬಾ ಸಾಹೇಬ" ಎಂದು ಅರಚಿ ಆತನ ಕೈಯಲ್ಲಿದ್ದ ಪತ್ರಿಕೆಯನ್ನು ಕಸಿದುಕೊಂಡು ಓದಿ ನಿಟ್ಟುಸಿರಿಟ್ಟಳು.

ಆಕೆಯ ಬಾಯಿಂದ ಒಂದೇ ವಾಕ್ಯ ಹೊರಬಿದ್ದಿತು.

"ಕಾಳ್ ಚಪ್ಪ ಹೀಗೆ ಭುಗಿಲ್ಲೆಂದಿತು!"

ಉಜ್ವಲ ಹಬ್ಬಕ್ಕೆ
ಉತ್ತಮ ಕಾಣಿಕೆ!



ನಿಮ್ಮ ಕುಟುಂಬದವರಿಗೆಲ್ಲ ಕರೋನಾ ಪಾದರಕ್ಷೆಗಳನ್ನು ಕೊಳ್ಳಿರಿ!
ಕರೋನಾ ಪಾದರಕ್ಷೆಗಳು ಬಹಳ ಸುಖಕರವಾಗಿರುತ್ತವೆ. ಬಾಳಿಕೆ ಬರುತ್ತವೆ,
ುತ್ತು ನೋಡಲು ಬಹಳ ಅಂದವಾಗಿರುತ್ತವೆ. ಅವುಗಳ ಬೆಲೆ ಕೂಡ
ಿನುಗೆ ಅನುಕೂಲವಾಗಿರುತ್ತದೆ. ನಾನಾ ಆಕರ್ಷಕ ಆಕಾರಗಳ ಮತ್ತು
’ ವರಿಗಳ ಮೆಟ್ಟುಗಳಲ್ಲಿ ಮತ್ತು ‘ಶೂ’ಗಳಲ್ಲಿ ನಿಮಗೆ ಬೇಕಾದದ್ದನ್ನು ಆರಿಸಿರಿ.

Carona
ಕರೋನಾ ಪಾದರಕ್ಷೆಗಳು

ವಾಕ್‌ವೆಲ್
ರೂ. 29·85
ತರಿಗಗಳು ಪ್ರತ್ಯೇಕ

ಏರ್‌ಕೂಲ್
ರೂ. 10·95
ತರಿಗಗಳು ಪ್ರತ್ಯೇಕ

ಸ್ನೀಕರ್
ರೂ. 4·70
ತರಿಗಗಳು ಪ್ರತ್ಯೇಕ

ಕರೋನಾ ಪಾದರಕ್ಷೆಗಳು ಬೇಗನೆ ಸವೆಯುವುದಿಲ್ಲ. ಅವು ದೀರ್ಘ ಕಾಲ ಬಾಳಿಕೆ ಬರುತ್ತವೆ!

ಕರೋನಾ ಸಾಹು ಕಂ.ಲಿ. ರಿಜಿಸ್ಟರ್ಡ್ ಆಫೀಸ್: 221, ಡಾ. ದಾದಾಭಾಯಿ ನವರೋಜಿ ರೋಡ್, ಬೊಂಬಾಯಿ.

CS. 62 KN

ಹರ್ಷನ ರತ್ನಾವಳಿ....

೪

ನಿರೂಪಣೆ : ಪಿ. ಆರ್. ಪಿ. * ಕಲೆ : ಟಿ. ಕೆ. ರಾವ್

ಕೌಶಾಂಬಿಯಲ್ಲಿ ವಸಂತೋತ್ಸವ. ಮಕರಂದೋದ್ಯಾನದಲ್ಲಿ ಮದನನ ಪೂಜೆ. ರಾಣಿ ವಾಸವದತ್ತೆ ಅರಸು ಉದಯನನನ್ನು ಸುಖಾಸನದಲ್ಲಿ ಕುಳ್ಳಿರಿಸಿ ಹೂ ಗಂಧಗಳನ್ನರ್ಪಿಸಿ ಪೂಜಿಸು-

ಆತನೇ ತನ್ನ ಪತಿಯಾಗಲಿದ್ದವನೆಂದು ತಿಳಿದ ಆಕೆ ವಿರಹಪೀಡಿತಳಾಗಿ ಆತನ ಚಿತ್ರವನ್ನು ಚಿತ್ರಿಸುತ್ತಾಳೆ ಸಾಗರಿಕೆಯ ಗೆಳತಿ ಸುಸಂಗತೆ. "ಮದನನೊಂದಿಗೆ ರತಿಯನ್ನು ಚಿತ್ರಿಸುವೆ"

ತನ್ನೊಡನಿದ್ದ ಮೇಧಾವಿನಿ ಸಾರಿಕೆಯನ್ನು ಹುಡುಕಹೊರಟಾಗ ಸಾಗರಿಕೆಗೆ ಕದಳೀಗೃಹದಲ್ಲಿ ಬಿಟ್ಟು ಬಂದ ಚಿತ್ರಫಲಕದ ನೆನಪಾಗುತ್ತದೆ. ಅಷ್ಟರೊಳಗೆ ರಾಜನು ವಿದೂಷಕನೊಂದಿಗೆ ಅಲ್ಲಿಗೆ ಬಂದಿರುವ. ಆತನಿಗೆ ತನ್ನೊಡನೆ ಚಿತ್ರಿತವಾಗಿದ್ದ ಸುಂದರಿಯನ್ನು ನೋಡಿ ಉತ್ಸುಕತೆ.

ಸುಸಂಗತೆ ಸಾಗರಿಕೆಯರಿಬ್ಬರೂ ಕದಳೀಗೃಹಕ್ಕೆ ಬರುವರು. ಉದಯನ ಆಕೆಯ ಕೈಹಿಡಿದು ಇನ್ನೇನು ಮಾತನಾಡಬೇಕೆನ್ನುವದರೊಳಗೆ ವಸಂತಕನು "ಇವಳು ಇನ್ನೊಬ್ಬ ವಾಸವದತ್ತೆ" ಎನ್ನುವ. ಸಾಗರಿಕೆ ಅಂಜಿ ಅಲ್ಲಿಂದ ತೆರಳುವಳು. ಇದೇ ಸಮಯಕ್ಕೆ ರಾಣಿ ವಾಸವದತ್ತೆ ಅರಸನನ್ನು ಹುಡುಕುತ್ತ ಅಲ್ಲಿಗೆ ಬರುವಳು. ವಸಂತಕನ ಕೈಯಲ್ಲಿದ್ದ ಚಿತ್ರಫಲಕ ಕಾಂಚನಮಾಲೆಗೆ ಸಿಕ್ಕುವದು. ರಾಣಿಯು ಅದನ್ನು ನೋಡಿ ಸಿಟ್ಟಿನಿಂದ "ಆರ್ಯಪುತ್ರ ಇದನ್ನಾರು ಚಿತ್ರಿಸಿದರು?" ಎಂದು ಕೇಳುತ್ತಾಳೆ.

ವಿದೂಷಕ ವಸಂತಕ ರಾಜನ ನೆರವಿಗೆ ಬಂದ— "ನನ್ನ ಪ್ರಿಯ ಗೆಳೆಯನು ಚಿತ್ರಕಲೆಯ ತನ್ನ ಜ್ಞಾನವನ್ನಿಲ್ಲಿ ತೋರಿದ್ದಾನೆ. ಬೇರೇನೂ ಸಂಶಯ ಬೇಡ" ಎನ್ನುವ. ರಾಣಿಯು ದುಗುಡವನ್ನು ಕಡಿಮೆ ಮಾಡಿದರೂ ತಲೆನೋವೆಂದು ಅಲ್ಲಿಂದ ಹೊರಟು ಹೋಗುವಳು.

ವಸಂತಕ ಕಾಂಚನಮಾಲೆಯರು ಸಾಗರಿಕ ಹಾಗು ಅರಸನ ಮಿಲನಕ್ಕಾಗಿ ಉಪಾಯ ಮಾಡಿರುತ್ತಾರೆ. ರಾಣಿಗೆ ಅದು ತಿಳಿದು ಅಲ್ಲಿಗೆ ಬರುತ್ತಾಳೆ ವಾಸವದತ್ತೆಯೆಂದು ತಿಳಿಯದೆಯೆ ಅರಸು ಅವಳೊಡನೆ ಸಲ್ಲಾಪಕ್ಕೆಳಸುವ. ರಾಣಿ ಅವಗುಂಠನ ತೆಗೆದು ತನ್ನ ನಿಜರೂಪ ತೋರಿ ಕೋಪದಿಂದ "ಸಾಗರಿಕೆಗಾಗಿ ಪ ನಸೋತ ನಿಮಗೆ ಎಲ್ಲರೂ ಸಾಗರಿಕೆಯರಂತೆ ಕಾಣುವರಲ್ಲವೆ?" ಎನ್ನುವಳು "ದೇವಿ, ಶಾಂತಳಾಗು" ಎಂದು ರಾಜನು ಬಿನ್ನಯಿಸಿದರೂ ಆಕೆ ಸಿಟ್ಟಿನಿಂದ ಹೋಗಿ ಬಿಡುವಳು.

ರಾಣಿಯ ಕೋಪಕ್ಕಂಜಿದ ಸಾಗರಿಕೆ ಉರುಲು ಹಾಕಿಕೊಳ್ಳಲುತೊಡಗಿರುತ್ತಾಳೆ. ಅದನ್ನು ನೋಡಿದ ವಿದೂಷಕನು "ವಾಸವದತ್ತೆ ಉರುಲು ಹಾಕಿಕೊಳ್ಳುತ್ತಿದ್ದಾಳೆ, ರಕ್ಷಿಸಿ" ಎಂದು ಚೀರುವ. ರಾಜನು ಪಾಶವನ್ನು ತೆಗೆದೊಗೆದು ಆಕೆಯನ್ನು ಗುರುತಿಸಿ "ಪ್ರಿಯೆ. ಸಾಗರಿಕೆ, ಇಂತಹ ಸಾಹಸ ಮಾಡದಿರು" ಎಂದು ಸಾಂತ್ವನೆ ನೀಡಿ ಅಪ್ಪಿಕೊಳ್ಳುವ

ರಾಜನ ಮೇಲೆ ಕೋಪಿಸಿಕೊಂಡು ಹೋಗಿದ್ದ ವಾಸವದತ್ತೆ ಕ್ಷಮೆ ಕೇಳಲು ಮರಳಿಬಂದಾಗ ಇದೆಲ್ಲ ಕಾಣಿಸುವದು. ಆಕೆ ಸಾಗರಿಕೆಯನ್ನು ಬಂಧಿಸಿಡಲು ಅಜ್ಞಾಪಿಸುವಳು.

ಸಿಂಹಳ ರಾಜನ ಮಂತ್ರಿ ವಸುಭೂತಿಯು "ರತ್ನಾವಲಿಯು ಸಮುದ್ರದಲ್ಲಿ ಕಳೆದು ಹೋದಳೆಂದು" ಕಣ್ಣೀರು ಸುರಿಸುವ ವಾಸವದತ್ತೆ ತನ್ನ ಮಾವನ ಮಗಳಿಗೆ ಹೀಗಾಯಿತೇ ಎಂದು ದುಃಖಿಸುತ್ತಿರುವಾಗ ಅರಮನೆಗೆ ಬೆಂಕಿ ಬಿದ್ದ ವಿಷಯ ತಿಳಿವುದು.

"ಆರ್ಯಪುತ್ರ, ಸಾಗರಿಕೆಯು ಒಳಗೆ ಬಂಧಿತಳಾಗಿದ್ದಾಳೆ ಅವಳನ್ನು ರಕ್ಷಿಸಬೇಕು" ಎಂದು ವಾಸವದತ್ತೆಯೆನ್ನುತ್ತಲೆ ರಾಜನು ಅವಳನ್ನು ಪಾರುಮಾಡಲು ಓಡುವ. ಅವನ ಹಿಂದೆ ಎಲ್ಲರೂ ಸಾಗುವರು.

ಇಂದ್ರಜಾಲಿಕನ ಮಾಯೆಯಿಂದ ಹುಟ್ಟಿದ ಬೆಂಕಿ ಆರುವದು. ಸಾಗರಿಕೆಯನ್ನು ರಾಜನು ಸಮೀಪಿಸುವ. ಅಲ್ಲಿಗೆ ಬಂದ ವಸುಭೂತಿ ಆಕೆಯೇ ರತ್ನಾವಲಿಯೆಂದು ಗುರುತಿಸುವ. ಮಂತ್ರಿ ಯೌಗಂಧರಾಯಣನು ರಾಜನ ಅಭ್ಯುದಯಕ್ಕಾಗಿ ಇದೆಲ್ಲ ತಂತ್ರ ಮಾಡಿದ್ದೆನೆನ್ನುತ್ತಾನಾಗ. ವಾಸವದತ್ತೆಯು ರತ್ನಾವಲಿಯ ಪಾಣಿಗ್ರಹಣಕ್ಕೆ ರಾಜನನ್ನು ಕೇಳಿಕೊಳ್ಳುವಳು.

ಪ್ರತಿಯೋರ್ವ ಗ್ರಾಹಕ ನಮಗೆ ಮಹಾರಾಜ



ನಮ್ಮೊಡನೆ ವ್ಯವಹರಿಸುವ ವ್ಯಕ್ತಿ ನಮಗೆ ಕೇವಲ ಗ್ರಾಹಕನಲ್ಲ. ಬ್ಯಾಂಕಿಂಗ್ ಸಂಸ್ಥೆಯಲ್ಲಿ ಮಾನವೀಯ ಸಂಬಂಧಕ್ಕಿರುವ ಪ್ರಾಮುಖ್ಯವನ್ನು ಬಲ್ಲ ನಾವು ನಮ್ಮ ಗ್ರಾಹಕರನ್ನು ಎಲ್ಲಕ್ಕಿಂತಲೂ ನಾವು ಹೆಚ್ಚೆಂದು ಬಗೆದಿದ್ದೇವೆ.

ವ್ಯಕ್ತಿಗೆ ಹೇಗೋ ಹಾಗೆ ಸಿಂಡಿಕೇಟ ಬಾಂಕಿಗೆ ತನ್ನದೇ ಆದ ವ್ಯಕ್ತಿತ್ವವಿದೆ. ಸ್ನೇಹಮಯ, ಸೇವಾನಿಷ್ಠ, ವಿಶ್ವಾಸಪೂರ್ಣ ತುಂಬ ಗುಣವಿಶೇಷಗಳಿಂದ ಕೂಡಿದ ತನ್ನ ವ್ಯಕ್ತಿತ್ವದಿಂದ ಈ ಬ್ಯಾಂಕು ರಾಜಮಹಾರಾಜರಿಂದ ತನ್ನ ತೀರಾ ಕಿರಿಯ ಠೇವಣಿದಾರನವರೆಗೆ ಎಲ್ಲರನ್ನೂ ಸಮಾನರೀತಿಯಲ್ಲಿ ನೋಡಿಕೊಳ್ಳುತ್ತದೆ. ಸೇವೆಯ ಉತ್ಕೃಷ್ಟತೆಯಿಂದ ಸಿಂಡಿಕೇಟು ಅವರೆಲ್ಲರನ್ನು ರಾಜರಂತೆ ಬಗೆಯುತ್ತದೆ. ಸಿಂಡಿಕೇಟನ ಗುಣವೇ ಆದರ ಹತ್ತುಲಕ್ಷಕ್ಕೂ ಮಿಕ್ಕಿರುವ ಖಾತೆಗಳಿಗೆ ಕಾರಣವಾಗಿದೆ.

ನಮ್ಮ ವ್ಯವಹಾರ ಮಾತ್ರ ವಿಶೆ! ನಮ್ಮಲ್ಲಿ ಬ್ಯಾಂಕ್ ಖಾತೆಯನ್ನು ತೆರೆಯಲು ಯಾವೊಬ್ಬಾತನೂ ನಮಗೆ ಕಿರಿಯನಲ್ಲ. ನಮ್ಮ ಬಾಗಿಲನ್ನು ಹೊಕ್ಕುವ ಎಲ್ಲಾ ಗ್ರಾಹಕರೂ ನಮ್ಮಿಂದ ರಾಜಮರ್ಯಾದೆ ಪಡೆಯಬಲ್ಲವರಾಗಿದ್ದಾರೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ ಲಿಮಿಟೆಡ್

ರಜಿಸ್ಟರ್ಡ್ ಆಫೀಸು : ಮಣಿಪಾಲ, (ಮೈಸೂರು ರಾಜ್ಯ)

ಪ್ರಜಾಸತ್ತಾತ್ಮಕ ಸಮಾಜವಾದ

— ಕುಣಿಗಲ್ ಶ್ರೀನಿವಾಸಶಾಸ್ತ್ರಿ

ಸ್ವತಂತ್ರ ಭಾರತವನ್ನು ಪ್ರಗತಿಪಥದಲ್ಲಿ ನಡೆಸಲು ಎಷ್ಟೋ ಮಾರ್ಗಗಳಿದ್ದುವು. ರಾಷ್ಟ್ರನಾಯಕರು ವಿದೇಶೀಯರ ಸಿದ್ಧಾಂತಗಳನ್ನೂ ಅವುಗಳನ್ನು ಅನುಷ್ಠಾನಕ್ಕೆ ತಂದ ವಿಧಾನವನ್ನೂ ಚೆನ್ನಾಗಿ ಅಭ್ಯಾಸ ಮಾಡಿದ್ದರು. ಆದರೆ ಅವರು ಪಾಶ್ಚಾತ್ಯ ತತ್ತ್ವಗಳನ್ನು ಅಂಧ ಶ್ರದ್ಧೆಯಿಂದ ಭಾರತದಲ್ಲಿ ಪ್ರಚಾರ ಮಾಡಲು ಹಿಂಜರಿದರು. ಕಾರಣ, ಅವು ಭಾರತೀಯರ ಜೀವನ ಮೌಲ್ಯಗಳಿಗೆ ಹೊಂದಿಕೊಳ್ಳುತ್ತಿರಲಿಲ್ಲ. ಆದ್ದರಿಂದ ವಿದೇಶೀಯರ ರಾಜಕೀಯ, ಆರ್ಥಿಕ, ಸಾಮಾಜಿಕ ತತ್ತ್ವಗಳಲ್ಲಿನ ಶ್ರೇಷ್ಠಾಂಶಗಳನ್ನು ಹೊರತೆಗೆದು ಅವನ್ನು ಭಾರತೀಯರ ಸಾಂಪ್ರದಾಯಿಕ ಜೀವನದಲ್ಲಿ ಸಮರಸವಾಗಿ ಬೆರಸಿ ತನ್ಮೂಲಕ ಭಾರತವು ತನ್ನದೇ ಆದ ವಿಶಿಷ್ಟ ಸಿದ್ಧಾಂತವೊಂದನ್ನು ಅನುಸರಿಸುವಂತೆ ಮಾಡಿದರು. ಹೀಗೆ ರೂಪಿಸಿದ ಸಿದ್ಧಾಂತವೇ "ಪ್ರಜಾಸತ್ತಾತ್ಮಕ ಸಮಾಜವಾದ." ಮಹಾತ್ಮ ಗಾಂಧಿ, ಪಂಡಿತ ನೆಹ್ರು ಇದರ ರೂವಾರಿಗಳು. ಪ್ರಜಾಸತ್ತೆ ಮತ್ತು ಸಮಾಜವಾದ ಮೇಲ್ನೋಟಕ್ಕೆ ಎರಡು ವಿಭಿನ್ನ ರಾಜಕೀಯ ತತ್ತ್ವಗಳು. ಒಂದು ರಾಜಕೀಯ ಸ್ವಾತಂತ್ರ್ಯವನ್ನು ಎತ್ತಿಹಿಡಿದರೆ ಮತ್ತೊಂದು ಆರ್ಥಿಕ ನ್ಯಾಯವನ್ನು ಎತ್ತಿಹಿಡಿಯುತ್ತದೆ. ಸಮಾಜವಾದದಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕೆ ಮಹತ್ವ ಕಡಿಮೆ. ವ್ಯಕ್ತಿಯ ಸ್ಥಾನ ಗೌಣ. ಪ್ರತ್ಯೇಕವಾಗಿ ನೋಡಿದರೆ ಪ್ರಜಾಸತ್ತೆಯಾಗಲೀ ಸಮಾಜವಾದವಾಗಲೀ ನಮ್ಮನ್ನು ತೃಪ್ತಿಪಡಿಸಲಾರವು. ಎರಡರಲ್ಲೂ ಕೊರತೆಯಿದೆ. ಆದುದರಿಂದ ಎರಡರ ಮಧುರ ಮಿಲನದಿಂದ ನಮಗೊಂದು ಹೊಸ ತತ್ತ್ವ ದೊರೆತು ನಮ್ಮ ಗುರಿಯನ್ನು ತಲುಪಲು ಬೇಗನೆ ಸಾಧ್ಯವಾಗಬಹುದು ಎಂಬುದು ನಮ್ಮವರ ನಂಬಿಕೆ.

ಪ್ರಜಾಸತ್ತೆಯಲ್ಲಿ ಮುಖ್ಯವಾಗಿ ತಮ್ಮ ಕಲ್ಯಾಣದ ಮೂಲ ಯಾವುದು ಎಂದು ತಿಳಿವಳಿಕೆಯುಳ್ಳ ಪ್ರಜೆಗಳಿರಬೇಕು. ಪ್ರಜೆಗಳಿಂದ ಆಯ್ಕೆಯಾದ ಪ್ರತಿನಿಧಿಗಳು ನಿಷ್ಠರೂ ನಿಸ್ವಾರ್ಥಿಗಳೂ ಕಾರ್ಯತತ್ಪರರೂ ಆಗಿರಬೇಕು. ಬಹುಮತವು ನಿರ್ಧರಿಸಿದ ನೀತಿಯನ್ನು ಸುಬುದ್ಧಿಯಿಂದ ಅನುಷ್ಠಾನಕ್ಕೆ ತರಬೇಕು. ಇದರಂತೆ ಸಮಾಜವಾದದಲ್ಲಿ ಮುಖ್ಯವಾಗಿ ಉತ್ಪನ್ನ ಸಾಧನಗಳು ರಾಷ್ಟ್ರದ ಒಡೆತನಕ್ಕೆ ಸೇರಬೇಕು. ಅವುಗಳನ್ನು ದಕ್ಷತೆಯಿಂದ ನೋಡಿಕೊಂಡು ಬಂದಂತಹ ಉತ್ಪನ್ನವನ್ನು ಸೂಕ್ತ ರೀತಿಯಲ್ಲಿ ಹಂಚಬೇಕು. ಪಟ್ಟಭದ್ರ ಹಿತಗಳ ಮತ್ತು ಖಾಸಗಿ ಉದ್ದಿಮೆದಾರರ ಕೈಯಲ್ಲಿರುವುದಕ್ಕಿಂತ ರಾಷ್ಟ್ರದ ಕೈಯ್ಯಲ್ಲಿ ದಕ್ಷತೆ, ನಿಷ್ಠೆ, ನ್ಯಾಯ ಹೆಚ್ಚು. ಲಾಭಕೋರತನವಿಲ್ಲ. ಹೀಗೆ ಎರಡು ಭಿನ್ನ ಸಿದ್ಧಾಂತಗಳನ್ನು ಹೊಸೆದು 'ಪ್ರಜಾಸತ್ತಾತ್ಮಕ ಸಮಾಜವಾದ' ಮಾಡಿದಾಗ ಅದಕ್ಕೆ ನಾವು ಯಾವ ಅರ್ಥವನ್ನು ಕೊಡಬಹುದು? ಇಂತಹ ವಿನೂತನ ಸಿದ್ಧಾಂತವನ್ನು ಜಗತ್ತಿನಲ್ಲಿ ಯಾರಾದರೂ ಅನುಸರಿಸಿರುವರೆ? ಇದು ಭಾರತದಲ್ಲಿ ಯಶಸ್ವಿಯಾಗಬಲ್ಲುದೆ? ಈ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವುದು ಕಷ್ಟಸಾಧ್ಯವಾದುದು.

ಪ್ರಜಾಸತ್ತಾತ್ಮಕ ಸಮಾಜಕ್ಕೆ ಸ್ಪಷ್ಟವೂ ನಿರ್ದಿಷ್ಟವೂ ಆದ ವಿವರಣೆ ನೀಡುವುದು ಕಷ್ಟ. ಇದೊಂದು ಜೀವಂತ ಸಿದ್ಧಾಂತವಾಗಿದ್ದು ಸಮಯ, ಸನ್ನಿವೇಶ, ಧ್ಯೇಯೋದ್ದೇಶಗಳಿಗೆ

ಆಹಾರ ಸಮಸ್ಯೆಗೆ ಪರಿಹಾರ !

ಡಿನ್ನರ್ ಪಾರ್ಟಿಯ ಮೇಲೆ ಕಣ್ಣಿಡುತ
ಪ್ರಮುಖವರೇಣ್ಯರು ಸಭೆ ಸೇರಿ
ಕಂಡುಹಿಡಿದರಾಹಾರ ಸಮಸ್ಯೆಯ
ಪರಿಹರಿಸುವ ಸುಲಭದ ದಾರಿ !

— ಎಂ. ಅಕಬರ ಅಲಿ

ಅನುಗುಣವಾಗಿ ಹೊಂದಿಕೊಂಡು ಹೋಗತಕ್ಕ ಚೈತನ್ಯವುಳ್ಳದ್ದು. ಇದರಲ್ಲಿ ಪ್ರಜಾಸತ್ತೆ, ವ್ಯಕ್ತಿಗೌರವ ಮತ್ತು ಸಾಮಾಜಿಕ ನ್ಯಾಯಗಳು ಕಂಡುಬರುತ್ತವೆ. ಇಂತಹ ಮೌಲ್ಯಗಳುಳ್ಳ ತತ್ತ್ವಾನುಷ್ಠಾನ ಮಾಡಿ ನೂತನ ಸಮಾಜ ಸ್ಥಾಪನೆಗೆ ಮೊದಲ ಹೆಜ್ಜೆ ಇಡುವುದು ಎಂದರೆ ಬಡತನದ ನಿರ್ಮೂಲನ. ಬಡತನದ ನಿವಾರಣೆ ಎಂದರೆ ನಿರಂತರವಾಗಿ ಮುಂದುವರೆಯುತ್ತಿರುವಂತಹ ಆರ್ಥಿಕಾಭಿವೃದ್ಧಿ ಯೋಜನೆಗಳನ್ನು ಮಾಡಿ ತನ್ಮೂಲಕ ಕೃಷಿ ಮತ್ತು ಔದ್ಯಮಿಕ ರಂಗಗಳಲ್ಲಿ ಉತ್ಪನ್ನವನ್ನು ಹೆಚ್ಚು ಮಾಡುವುದು. ಈ ಪರಿವರ್ತನೆಯು ಬಹುಜನರ ಇಚ್ಛೆಯಂತೆ, ಶಾಂತ ರೀತಿಯಲ್ಲಿ ರಚನಾತ್ಮಕ ವಿಧಾನಗಳ ಮೂಲಕ ನಡೆಯಬೇಕು. ಆದುದರಿಂದ ಭಾರತದ ಈ ಹೊಸ ಸಿದ್ಧಾಂತದಲ್ಲಿ ಹಿಂಸೆ, ದ್ವೇಷ, ನಿಂದೆಯ ಭಾಷೆಗವಕಾಶವಿಲ್ಲ. ಬದಲಾಗಿ ಪ್ರಚಾರ, ಶಿಕ್ಷಣ, ಪರಿವರ್ತನೆ, ತ್ಯಾಗ ಇವುಗಳು ಪ್ರಧಾನ ಶಬ್ದಗಳಾಗಿವೆ. ಇದರ ಬಗ್ಗೆ ಸ್ಪಷ್ಟೀಕರಣ ನೀಡಿದ ನೆಹ್ರು ಈ ರೀತಿ ಹೇಳಿದ್ದಾರೆ: "ಇದನ್ನು ನಾವು ನಮ್ಮದೇ ಆದ ಮಾರ್ಗದಲ್ಲಿ ಮಾಡಬೇಕು. ಇದು ಯಾವಾಗಲೂ ಜನತೆಯನ್ನು ತನ್ನೊಡನೆ ನಡೆಸಿಕೊಂಡು ಹೋಗಬೇಕು. ಇದರಲ್ಲಿ ಮೊದಲು ಭೀತಿ ವ್ಯಕ್ತಪಡಿಸಿದ, ದ್ವೇಷಿಸಿದ ಜನರನ್ನು ಸಹ ಸೇರಿಸಿಕೊಳ್ಳಬೇಕು."

ಪ್ರಜಾಸತ್ತಾತ್ಮಕ ಸಮಾಜವಾದದ ಲಕ್ಷಣಗಳನ್ನು ನೋಡಿದರೆ ಮುಖ್ಯವಾಗಿ ಐದು ಲಕ್ಷಣಗಳು ಎದ್ದು ಕಾಣುತ್ತವೆ.

ಮೊದಲನೆಯದಾಗಿ ಈ ಸಿದ್ಧಾಂತವು ಗಡಸು ತತ್ತ್ವವಲ್ಲ. ಮಾರ್ಕ್ಸ್ ಮತ್ತು ಲೆನಿನ್‌ಗಳಿಗಿಂತ ಗಾಂಧಿ ಮತ್ತು ನೆಹರುಗಳೇ ಇದರ ಪ್ರೇರಕ ಶಕ್ತಿಗಳು. ಇದು ಹಠವಾದವಲ್ಲ, ಪ್ರಗತಿಶೀಲ ತತ್ತ್ವ.

ಎರಡನೆಯದಾಗಿ ಸಮಾಜದ ಪ್ರತಿ ಸದಸ್ಯನಿಗೂ ಇರುವ ಗೌರವ ಪ್ರತಿಷ್ಠೆಗಳನ್ನು ಮಾನ್ಯ ಮಾಡುವುದು. ಇದರ ಬಗ್ಗೆ ಮಹಾತ್ಮರು ಹೀಗೆಂದಿದ್ದಾರೆ: "ಸಮಾಜವಾದ ಎಂಬ ಶಬ್ದ ಸುಂದರವಾದದ್ದು. ನನಗೆ ತಿಳಿದಮಟ್ಟಿಗೆ ಸಮಾಜವಾದದಲ್ಲಿ ಸಮಾಜದ ಎಲ್ಲ ವ್ಯಕ್ತಿಗಳೂ ಸರಿಸಮಾನರು—ಯಾರೂ ಕಡಿಮೆ ಇಲ್ಲ, ಯಾರೂ ಹೆಚ್ಚಿಲ್ಲ. ಇದರಲ್ಲಿ ರೈತ- ರಾಜ, ಬಡವ- ಬಲ್ಲಿದ, ಮಾಲಿಕ- ನೌಕರ ಎಲ್ಲರೂ ಒಂದೇ. ಇಲ್ಲಿರುವುದು ಒಂದು ಬಗೆಯ ಅದ್ವೈತ". ನೆಹ್ರು ಹೇಳಿದಂತೆ ಈ ದೇಶದ ಸಮಾಜವಾದದ ಗುರಿಯು ಪೂರ್ಣವಾಗಿ ವಿಕಾಸಗೊಂಡಿರುವ ವ್ಯಕ್ತಿಯ ಸೃಷ್ಟಿಯಾಗಿದೆ. ಇದು ಆರ್ಥಿಕ ಸೂತ್ರವಲ್ಲ; ಒಂದು ಜೀವನ ಆಧಾರ.

ಮೂರನೆಯದಾಗಿ ನವಸಿದ್ಧಾಂತದಲ್ಲಿ ಹಿಂಸೆ ಅಥವಾ ವಿಧ್ವಂಸಕ ಕೃತಿಗಳಿಗಾಗಲೀ ವರ್ಗ ಯುದ್ಧಕ್ಕಾಗಲೀ ಅವಕಾಶವಿಲ್ಲ. "ಸಮಾಜವಾದವು ಸ್ಫಟಿಕದಂತೆ ಶುಭ್ರವಾದುದು. ಅದರ ಸಾಧನೆಗೆ ಸ್ಫಟಿಕದಷ್ಟೇ ಶುದ್ಧವಾದ ಮಾರ್ಗ ಬೇಕು" ಎಂದಿದ್ದಾರೆ ಬಾಪು.

ನಾಲ್ಕನೆಯದಾಗಿ ಎಲ್ಲವನ್ನೂ ರಾಷ್ಟ್ರೀಕರಣ ಮಾಡಬೇಕೆಂಬ ವಾದ ಈ ತತ್ತ್ವದಲ್ಲಿಲ್ಲ. ಇದು ಮಿಶ್ರ ಆರ್ಥಿಕ ನೀತಿ, ವಿಕೇಂದ್ರೀಕರಣ ಮತ್ತು

ಸಹಕಾರೀ ಸಂಘಗಳಿಗೆ ಪ್ರಾಶಸ್ತ್ಯ ನೀಯುತ್ತದೆ. ಒಂದು ಬಗೆಯ 'ಸಾಮಾಜಿಕ ನಿಯಂತ್ರಣ' ವಿರಬೇಕೇ ವಿನಾ 'ರಾಷ್ಟ್ರೀಕರಣವಲ್ಲ ಎಂದು ಆಗಾಗ್ಗೆ ದೇಶನಾಯಕರು ಎಚ್ಚರಿಸುತ್ತಲೇ ಇದ್ದಾರೆ. ಇದನ್ನು ಭಾರತ ಸರಕಾರವು ಅನುಸರಿಸುತ್ತಿರುವ 'ವಿವೇಚನಾತ್ಮಕ ಸಮಾಜೀಕರಣ' ನೀತಿ ಎನ್ನಬಹುದು ಎರಡು ಭಿನ್ನ ದೃಷ್ಟಿಗಳಲ್ಲಿ ಇದು ಸುವರ್ಣ ಮಾಧ್ಯಮವಾಗಿದೆ. "ಪ್ರತಿವ್ಯಕ್ತಿಯೂ ಸಮಪ್ರಮಾಣದ ಆಸ್ತಿ ಹೊಂದಿದ್ದರೆ ಮಾತ್ರ ಸಮಾಜವಾದದ ಆದರ್ಶಕ್ಕೆ ತೀರ ಹತ್ತಿರ ಬರಲು ಸಾಧ್ಯ. ಸರಕಾರವೇ ಎಲ್ಲ ಸಂಪತ್ತಿನ ಯಜಮಾನ ಆದ ಮಾತ್ರಕ್ಕೇ ಇದು ಸಾಧ್ಯವಾಗದು" ಎಂದು ಪ್ರೊ. ಆರ್ಥರ್ ಲೂಯಿಸ್ ಹೇಳುತ್ತಾರೆ.

ಐದನೆಯದಾಗಿ ಭಾರತದ ಸಮಾಜವಾದವು ಸರ್ವಾಧಿಕಾರೀ ತತ್ತ್ವವನ್ನು ಅಂಗೀಕರಿಸುವುದಿಲ್ಲ. ಅದರ ಘೋಷಿತ ಧೋರಣೆಯ ಪ್ರಕಾರ ಭಾರತವು ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯ. "ಎಲ್ಲ ಪ್ರಜೆಗಳಿಗೂ ಅದು ರಾಜಕೀಯ, ಆರ್ಥಿಕ, ಸಾಮಾಜಿಕ ನ್ಯಾಯವನ್ನೂ; ವಿಚಾರ, ಮಂಡನೆ, ನಂಬಿಕೆ, ಅನುಸರಣೆ, ಪೂಜಾಸ್ವಾತಂತ್ರ್ಯವನ್ನೂ; ಸಮಾನ ಗೌರವ ಮತ್ತು ಅವಕಾಶವನ್ನೂ; ಸಹೋದರ ಭಾವವನ್ನೂ; ರಾಷ್ಟ್ರದ ಸಮಗ್ರತೆ ಮತ್ತು ವ್ಯಕ್ತಿ ಗೌರವವನ್ನು" ದೊರಕಿಸಿಕೊಡಲು ಕಂಕಣಬದ್ಧವಾಗಿದೆ.

ವ್ಯಾಪಕವಾದ ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನು ಪ್ರಜಾಸತ್ತಾತ್ಮಕ ವಿಧಾನಗಳಿಂದ ಕಾರ್ಯರೂಪಕ್ಕೆ ತಂದು ಅದರ ಮೂಲಕ ಸಮಾಜವಾದೀ ಸಮಾಜವನ್ನು ರಚಿಸುವ ಪ್ರಯೋಗವನ್ನು ಕೈಕೊಂಡಿರುವುದು ಜಗತ್ತಿನಲ್ಲಿ ಭಾರತವೊಂದೇ ದೇಶ ಎಂದರೆ ನಮ್ಮವರ ದೂರದೃಷ್ಟಿಗೆ ಇದಕ್ಕಿಂತ ಮಿಗಿಲಾದ ಉದಾಹರಣೆ ಬೇಕೆ? ಇದೇ ದಾರಿಯಲ್ಲಿ ನಡೆಯಲು ಏಷಿಯಾ ಹಾಗೂ ಆಫ್ರಿಕದ ಹಲವು ನೂತನ ರಾಷ್ಟ್ರಗಳು ಬಯಸುತ್ತಿರುವುದರಲ್ಲಿ ಈ ಹೊಸ ಸಿದ್ಧಾಂತದ ಮಹತ್ವವನ್ನು ಅರಿಯಬಹುದಾಗಿದೆ

ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಾಗಿನಿಂದ ಇಲ್ಲಿಯವರೆಗೂ ಸಾಧಿಸಿರುವುದನ್ನು ಕಂಡರೆ 'ಹೆಮ್ಮೆ' ಪಡಲಾರೆವಾದರೂ 'ಸಮಾಧಾನದ ನಿಟ್ಟುಸಿರ'ನ್ನು ಬಿಡಬಹುದು ಮಂದ ಪ್ರಗತಿಗೆ ಜನತೆಯ ಅಸಹಕಾರ, ಅಜ್ಞಾನ, ಸರಕಾರೀ ಅಧಿಕಾರಿಗಳ ಕ್ಷುಲ್ಲಕ ದರ್ಪಿಷ್ಟ ಮನೋಭಾವ ಸರಕಾರದಲ್ಲಿ ಸಾಕಷ್ಟು ಬಿಗಿ ಇಲ್ಲದ್ದು ಕಾರಣಗಳಾಗಿವೆ. ಗಾಂಧೀಜಿಯ 'ರಾಮರಾಜ್ಯ'ದ ಕಲ್ಪನೆ ಕನಸಾಗಿಯೇ ಉಳಿದಿದೆ ಪ್ರಜಾಸತ್ತಾತ್ಮಕ ಸಮಾಜವಾದವು ಯಶಸ್ವಿಯಾಗದೆಂಬ ಭೀತಿ ನಮಗೆ ಬೇಕಿಲ್ಲ. ಅದು ಸಫಲವಾಗಬೇಕಾದರೆ ಏನು ಮಾಡಬೇಕು ಎಂಬುದರ ಕಡೆಗೆ ಲಕ್ಷ್ಯ ಕೊಡೋಣ.

ಪ್ರಜಾಸತ್ತಾತ್ಮಕ ಸಮಾಜದ ಯಶಸ್ಸಿಗೆ ಬೇಕಾದದ್ದು ರಾಷ್ಟ್ರೀಯ ಚಾರಿತ್ರ್ಯ, ದೇಶಭಕ್ತಿ, ದಕ್ಷತೆ, ಸದ್ಭಾವನೆ, ತ್ಯಾಗಬುದ್ಧಿ. ಇಷ್ಟಾದರೂ ಅಂತಿಮ ಪರಿಣಾಮ ಹೇಳಲಾಗದು ಆದರ್ಶವು ಸಫಲವಾದರೆ ದೇಶವು ಐಶ್ವರ್ಯದ, ಸುಖದ ಸಂತೃಪ್ತಿಯಲ್ಲಿ ನಿದ್ರಿಸಬಹುದು. ಆದರೆ ಇದರ ಹಿಂದೆ ಬರುವ ಅಶಾಂತಿ, ಸ್ವಾರ್ಥ, ನಿರ್ಲಕ್ಷ್ಯ, ಕಾತರ ಇವುಗಳನ್ನು ಸಕಾಲದಲ್ಲಿ ನಿವಾರಿಸದೆ ಇದ್ದರೆ ಭಾರತದಲ್ಲಿ "ದೇವರು, ಮೋಕ್ಷ, ಯೋಗ, ತಪಸ್ಸು. ವೇದಗಳು ಮತ್ತು ಉಪನಿಷತ್ತುಗಳು ಎಲ್ಲವೂ ಅಡಗೂಲಜ್ಜಿಯ ಕಥೆ"ಯಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ ಆರ್ಷೇಯವಾದ ಬದುಕಿನಲ್ಲಿ ಸುಖಭೋಗವನ್ನು ಸಮರಸವಾಗಿ ಬೆರೆಸುವುದು ಕಠಿಣವೇನಲ್ಲ. ಒಮ್ಮೆ ಬಾಪೂಜಿಯವರ ವಾಣಿಯನ್ನು ಆಲಿಸಿದರೆ ಸಾಕು, ಸ್ವಪ್ನಸದೃಶವಾದ ಪ್ರಜಾಸತ್ತಾತ್ಮಕ ಸಮಾಜವಾದ ಸಿದ್ಧಿಸಿದಂತೆಯೇ ಸರಿ.

"ನನ್ನ ನಲ್ಮೆಯ ದೀಪಾವಳಿ"

-ವಿಜಯಲಕ್ಷ್ಮಿ (ವಂದನಾ)

ಮಾನ್ಯ ಕರ್ಮವೀರ !

ನಿಮಗೆ ವಂದನಾಳ

ವಂದನೆಗಳು....ಕ್ಷಮಿಸಿ ಸಾರ್ !

I am sorry ಛೆ ! ಛೆ! ಈ ಇಂಗ್ಲಿಷ್ ಬೇರೆ ನನ್ನ ಕನ್ನಡಕ್ಕೆ ಕನ್ನ ಹಾಕಲು ಬರುತ್ತಿದೆ.. ಒಟ್ಟಿನಲ್ಲಿ ನಾನು ಹೇಳಬಯಸೋದು ಇಷ್ಟ.. ಇನ್ನೇನೂ ಇಲ್ಲ, ಮೊದಲಲ್ಲೇ ವಂದನಾ ಅಂತ ಹೇಳಿ ಕೆನ್ನೆಗೆ ಹೊಡೆದುಕೊಂಡೆ. ನಾನು ವಂದನಾ ಅಲ್ಲ, ವಿಜಯಲಕ್ಷ್ಮಿ! ನನ್ನ ಹೆಸರನ್ನು ವಂದನಾ ಎಂದು ಅನೇಕ ಚಿತ್ರಪ್ರೇಮಿಗಳು ಬಲ್ಲರು. ಆದರೆ ಅದು ನನ್ನ ಬೆಳ್ಳಿ ತೆರೆಯ ಎರವಲು ಹೆಸರು. ಇದು ಸಾಕಷ್ಟು ಪ್ರಚಲಿತವಾಗಿರೋದರಿಂದ ಈಗ ನಾನು ನನ್ನ ಹುಟ್ಟು ಹೆಸರು ವಿಜಯಲಕ್ಷ್ಮಿ ಎಂದು ಮತ್ತೆ ಮತ್ತೆ ಹೇಳಿ ಡಂಗುರ ಹೊಡೆಸಬೇಕಾಗಿದೆ.

ಈ ವಿಜಯಲಕ್ಷ್ಮಿ ಬರಹಗಾರಳಲ್ಲ. ಕೊಟ್ಟ ಪಾತ್ರಗಳನ್ನು ನಿಷ್ಠೆಯಿಂದ ಮಾಡುವುದನ್ನಷ್ಟೇ ಬಲ್ಲ ನಟಿ. ಪ್ರಚಾರ ಪ್ರಸಿದ್ಧಿಗಳ ಹುಚ್ಚು ಹೆಚ್ಚಾಗಿಲ್ಲದ, ಬಂದದ್ದರಲ್ಲಿ ತೃಪ್ತಿಪಡುವ ಅಲ್ಪ ಸಂತೋಷಿ. ಈ ಲೇಖನವನ್ನು ಬರೆಯುತ್ತಿರುವ ಉದ್ದೇಶ್ಯವೂ ಅಷ್ಟ.

ನನಗೀಗ ಲೇಖನ ಬರೆಯುವಷ್ಟು ಪುರುಸೊತ್ತಿಲ್ಲ. ಏಕೆಂದರೆ ಇಲ್ಲದ ಭಾರ ನನ್ನ ತಲೆಯ ಮೇಲೆಯೇ ಇದೆ. ಅದು "ಕರ್ಮವೀರ"ನಿಗೆ ಗೊತ್ತಿರುವುದೇ, ನಾನು ಚಿತ್ರ ತಯಾರಿಕೆಯ ದೊಡ್ಡ ಜವಾಬ್ದಾರಿಯನ್ನು ತಲೆಯ ಮೇಲೆ ಹೊತ್ತಿದ್ದೇನೆ. ಈ ಭಾರ ಹೊತ್ತ ತಲೆಯಲ್ಲಿ ಬೇರೆ ಯಾವ ಭಾರಕ್ಕೂ ಎಡೆ ಇಲ್ಲ. ಆದರೆ "ಕರ್ಮವೀರ"ನ ಕೋರಿಕೆಗೆ ಎಂದೂ ಮಾನ್ಯತೆ ಇದ್ದೇ ಇದೆ. ಆದ್ದರಿಂದ ಈ ಲೇಖನ ಬರೆಯುತ್ತಿದ್ದೇನೆ.

ನನ್ನ ಅಭಿಪ್ರಾಯದಲ್ಲಿ "ದೀಪಾವಳಿ ಒಂದು ವಿಶಿಷ್ಟ ಹಿಂದೂ ಹಬ್ಬ. ಈ ಹಬ್ಬದ ಹೆಗ್ಗುರುತು ದೀಪಗಳ ಗುಂಪು. ದೀಪ ಕತ್ತಲಿನ ಶತ್ರು. ಅಂತೆಯೇ ಕತ್ತಲು ಆವರಿಸಿದ ಬಾಳಿನಲ್ಲಿ ಹೊಸ ಚೈತನ್ಯದ ಬೆಳಕು ಮೂಡಿಸಲು ಈ ಹಬ್ಬ ಬರುತ್ತದೆಂದರೆ ಉತ್ಪ್ರೇಕ್ಷೆ ಅಲ್ಲ. ಮನೆ ಮನೆಯಲ್ಲೂ ದೀಪದ ಸಾಲು ಮಂದಿ ಮಂದಿಗೂ ಸಂತೋಷದ ಪಾಲು. ಇದು ಈ ಹಬ್ಬದಲ್ಲಿ ಕಂಡುಬರುವ ಒಂದು ಪ್ರತ್ಯೇಕತೆ.

ಈ ಸಂತೋಷದ ಹಬ್ಬವನ್ನು ನಾನು ಸಡಗರದಿಂದ ಆಚರಿಸುತ್ತೇನೆ. ಆ ದಿನದ ಮಟ್ಟಿಗೆ ನನ್ನ ಎಲ್ಲ ಹೊರಗಿನ ಚಟುವಟಿಕೆಗಳಿಗೂ ಪೂರ್ಣವಿರಾಮ. ಅಮ್ಮ ! ದೇವರು ! ಮನೆ ! ಅಣ್ಣ, ತಮ್ಮ ಹಾಗೂ ಮಕ್ಕಳು (ನನ್ನವುಗಳಲ್ಲ !) ಇವರೊಂದಿಗೆ "ದೀಪಾವಳಿ"ಯನ್ನು ಆಚರಿಸುತ್ತೇನೆ. ಈ ದಿನದ ಮಹತ್ವ ನಿಶ್ಚಯ ಮಟ್ಟಿಗಿದೆ ಎಂದರೆ ನನಗೆ ಲಕ್ಷ ರೂಪಾಯಿ ಆದಾಯವಿದ್ದರೂ ಬದಿಗೊತ್ತಿ ಈ ಹಬ್ಬವನ್ನು ಮನೆಯಲ್ಲಿ ಆಚರಿಸುತ್ತೇನೆ.

ಕಾಲ್‌ಷೀಟ್ ಅವಧಿಗೆ ಅಭ್ಯಾಸವಾಗಿ ಹೋಗಿರುವ ಈ ದೇಹಕ್ಕೆ ಬೆಳಿಗ್ಗೆ ಎಷ್ಟು ಹೊತ್ತಿಗೆ ಅಂದರೆ ಅಷ್ಟು ಹೊತ್ತಿಗೆ ಏಳುವುದು ಕಷ್ಟದ ಪ್ರಯತ್ನವಲ್ಲ.

ಬೆಳಗಿನ ಝಾವ ಮೂಡಲಲ್ಲಿ ರವಿ ಬರುವ ಮುನ್ನ ಮನೆಯಲ್ಲಿ ಎಲ್ಲರೂ ಸ್ನಾನ (ಅಭ್ಯಂಗನ) ಮುಗಿಸಿದ ಮೇಲೆ ದೇವರಿಗೆ ಪೂಜೆ ಸಲ್ಲಿಸಿ, ಕಾಫಿ ಹಾಗೂ ಉಪಾಹಾರ ಸೇವಿಸಿ ಗಾನ ನರ್ತನಗಳಲ್ಲಿ ತಲ್ಲೀನಳಾದರೆ ಸಂಜೆ ಯಾವಾಗ ಬರುವುದೋ ಗೊತ್ತೇ ಆಗದು. ಅಂತೂ ಸೂರ್ಯ ಮುಳುಗುವುದೇ ತಡ ಬಣ್ಣ ಬಣ್ಣದ ಮತಾಪು, ಹೂಬಾಣ, ಆಕಾಶಬಾಣ, ಭೂಚಕ್ರ ಮೊದಲಾದವುಗಳಿಂದ ಮನೆಯಲ್ಲೆಲ್ಲ ಸಂಭ್ರಮದ ಆರಂಭ. ಢಂ ಢ್ ಢಮಾರ್ ! ಎಂದು ಪಟಾಕಿಗಳ ಶಬ್ದ. ನನಗೂ ಮಕ್ಕಳೊಂದಿಗೆ ಆಟವಾಡುವ ಹುಡುಗು ಬುದ್ಧಿ. ಎಲ್ಲ ಹುಡುಗರೊಂದಿಗೆ ಸೇರಿ ಎಲ್ಲ ಬಗೆಯ ಹುಡುಗಾಟವನ್ನೂ ಆಡುತ್ತೇನೆ. ಈ ಹುಡುಗಾಟ ಮೇರೆ ಮೀರಿ ಕೈ ಸುಟ್ಟುಕೊಂಡಾಗ, ಅಮ್ಮನಿಂದ ಪ್ರೀತಿಯ ಬೈಗುಳು. ಸೀರೆ ಗೀರೆ ಸುಟ್ಟುಕೊಂಡರೆ ಗುಮ್ಮಾರ. ಈ ಮಧ್ಯದಲ್ಲಿ ಯಾರಾದರೂ ನಿರ್ಮಾಪಕರು ಬಂದರಾಗಲೀ, ನಿರ್ದೇಶಕರು ಬಂದರಾಗಲೀ, ವ್ಯವಹಾರದ ವಿಷಯ ಬಿಟ್ಟು ಬಾಕಿ ಎಲ್ಲ ವಿಷಯಗಳನ್ನೂ ಮಾತನಾಡುತ್ತೇನೆ. ಅವರಿಗೂ ಸಿಹಿ ಕೊಟ್ಟು ನಾನೂ ಸ್ವೀಕರಿಸುತ್ತೇನೆ. ನನ್ನ ಜೊತೆಯ ನಟಿಯರೂ ನನಗಾಗಿ ನಮ್ಮ ಮನೆಗೆ ಬರುತ್ತಾರೆ. ನಾನು ಅವರೊಂದಿಗೆ ಹರಟೆ ಕೊಚ್ಚಿ ಹೂಬಾಣಗಳ ಲೀಲೆಯಾಡಿ ಹೊಟ್ಟೆ ತುಂಬ ನಗುತ್ತೇವೆ.

ರಾತ್ರಿ ಸರಿಹೊತ್ತಿನವರೆಗೂ ಇದೇ ಕ್ರೀಡೆಯಲ್ಲಿ ನಿರತಳಾದಾಗ ಅಮ್ಮ ಎಚ್ಚರಿಸುತ್ತಾರೆ "ಇವೊತ್ತಾದರೂ ಸ್ವಲ್ಪ ವಿಶ್ರಾಂತಿ ತೊಗೋಳೆ ನಾಳೆಯಿಂದ ಇದ್ದೇ ಇದೆ, ಚಕ್ರದ ಹಾಗೆ ಸುತ್ತೋದು" ಎಂದು. ಆಗ ನನ್ನ ತಂಗಿ, ಈಗೀಗ ಚಿತ್ರಗಳಲ್ಲಿ ಅಭಿನಯಿಸಿ ಚಿತ್ರರಂಗದಲ್ಲಿ ಅಡಿ ಇಡುತ್ತಿರುವ ಸರಸ್ವತಿ "ದಿನವೂ

ವಂದನಾ

ಹಮ್ಮಿಕ್ಕೆ ದೀಪಾವಳಿ ಮಾಡಿಸೋ ಹಾಗಾಗಲಿ... ಭಾವನ ಜೊತೇಲಿ" ಎಂದು ಕೆಣಕುತ್ತಾಳೆ.

ಆಗ ನನಗೆ ನನ್ನ ವಯಸ್ಸು, ಹಾಗೂ ನನ್ನ ಅವಿವಾಹಿತ ಜೀವನ ಇವುಗಳ ಬಗ್ಗೆ ನೆನಪು ಮೂಡುತ್ತದೆ. ಹೌದು ! ಕರ್ತವ್ಯ ಬೇಕಾದ ಹಾಗಿದೆ ಎನಿಸುತ್ತದೆ. ಮತ್ತೆ ಕರ್ತವ್ಯದ ಕಹಳೆ ಮೊಳಗಿ ನನ್ನಲ್ಲಿ ನವ ಚೇತನ ಧಾರೆ ಎರೆಯುತ್ತದೆ. ಸರಿ ನಾಳಿನ ಸಂಗ್ರಾಮಕ್ಕೆ ಸಿದ್ಧ.

ನನ್ನ ಎಲ್ಲ ಯೋಚನೆಗಳನ್ನೂ ಮರೆಸಿ ನನ್ನ ಮನಸ್ಸನ್ನು ಮರೆಸುವ ದೀಪಾವಳಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಅದರೊಂದಿಗೆ ಈ ನನ್ನ "ದೀಪಾವಳಿ"ಯ ಬಗ್ಗೆ ವಿಚಾರಿಸಿದ "ಕರ್ಮವೀರ"ನಿಗೂ, ಆತನ ವಾಚಕ ವೃಂದಕ್ಕೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

"ನಾನು ಬಯಸುವ ದೀಪಾವಳಿ"

–ಕಲ್ಯಾಣ್‌ಕುಮಾರ್

ಕಲ್ಯಾಣ್ ಕುಮಾರ್

ಅಂದು ದೀಪಾವಳಿ. ಯಾವ ಉತ್ಸಾಹವೂ ಇಲ್ಲದ ನಾನು, ನನ್ನ ಗೆಳೆಯನ ಮನೆಯಿಂದ ಹೊರಗೆ ಕಾಲಿಟ್ಟೆ....ಬೀದಿಯಲ್ಲಿ ಹಬ್ಬದ ಸಡಗರ ಹೇಳತೀರದು. ಮುಂಬೈ ನಗರ ಜ್ಯೋತಿರ್ಮಯವಾಗಿತ್ತು. ಅವರಿಗೆಲ್ಲಾ.... "ದೀಪಾವಳಿ" ನಾಡಹಬ್ಬದಂತೆ. ಹುಡುಗರು ಮತಾಪು ಹಚ್ಚಿ ಆನಂದದಿಂದ ನಕ್ಕು ನಲಿಯುತ್ತಿದ್ದರೆ .... ಹೊಸದಾಗಿ ಮದುವೆಯಾದ ಯುವಕ ತನ್ನ ಹೆಂಡತಿಯ ಕಣ್ಣುಗಳಲ್ಲಿ ಬೆಳಗುವ ಮತಾಪು ನೋಡಿ, ಮೈಮರೆಯುತ್ತಿದ್ದಾನೆ. ಹೂ ಬಾಣಕ್ಕಿಂತಲೂ ಹೆಂಡತಿಯ ನಗುವೇ ಅವನಿಗೆ ಹಿತವಾಗಿದೆಯೇನೋ! ಸಾಲಾಗಿ ಹಚ್ಚಿಟ್ಟಿರುವ ಹೂಬಾಣಗಳನ್ನು ಗಮನಿಸಿದೆ. ಹೆಂಡತಿಯನ್ನೇ ನೋಡುತ್ತಿದ್ದ ಅವನನ್ನು ನೋಡಿ ನನಗೆ ನಗೆ ಬಂತು.

ಬೀದಿಯಲ್ಲಿ ಆ ಜನರ ಸಂದಣಿಯಲ್ಲಿ ಒಬ್ಬನೇ ನಡೆದುಹೋಗುತ್ತಿದ್ದೆ. ಎಲ್ಲಿಗೆ..? ನನಗೇ ಗೊತ್ತಿಲ್ಲ. ನನ್ನವರು ಯಾರಿದ್ದಾರೆ ಇಲ್ಲಿ....! ಉಹುಂ....ಯಾರೂ ಇಲ್ಲ....ನನ್ನವರು, ನನ್ನ ಮನೆ ಎಲ್ಲವನ್ನೂ ಬಿಟ್ಟು.... "ನಟ"ನಾಗಬೇಕೆಂಬ ಮಹದಾಕಾಂಕ್ಷೆಯಿಂದ ಜನ್ಮಸ್ಥಳವನ್ನು ಬಿಟ್ಟು..ಕಾಣದ ಈ ದೇಶದಲ್ಲಿ "ಅದೃಷ್ಟ"ದ ಮೀನಿಗಾಗಿ, "ಪ್ರಯತ್ನ"ವೆಂಬ ಬಲೆ ಬೀಸಿ ಕೂತಿದ್ದೇನೆ. ನಿಟ್ಟುಸಿರು ಬಿಟ್ಟು ಸುತ್ತಲೂ ದಿಟ್ಟಿಸಿದೆ.

ಎಲ್ಲರಲ್ಲೂ ನಗು, ಎಲ್ಲರ ಮುಖದಲ್ಲೂ ಯಾವುದೋ ತೃಪ್ತಿ..ಸಮೃದ್ಧಿ.

ನನಗೆ ನಗುವಿಲ್ಲ....ತೃಪ್ತಿ ಇಲ್ಲ....ತೀರದ ಬಯಕೆಯೊಂದಿಗೆ; ಬಾಡಿ ಬೆಂಡಾಗಿ ನಡೆಯುತ್ತಿದ್ದೇನೆ.

ಮನೆ ಮನೆಯಲ್ಲೂ ದೀಪಾವಳಿ
ನನ್ನ ಮನದಲ್ಲಿ ಶೋಕಾವಳಿ
ಭವಿಷ್ಯದ ಪ್ರಶ್ನಾವಳಿ ???

ನಮ್ಮ ಮನೆಯಲ್ಲಿನ ದೀಪಾವಳಿ ನೆನಪಿಗೆ ಬಂತು.......ಅದು ಎಂಥಾ ಸಡಗರ!!.. ಉತ್ಸಾಹ !!! ಬೆಳಗ್ಗೆ ಛಳಿಯಲ್ಲಿ ಬಿಸಿ ಬಿಸಿ ಎಣ್ಣೆಸ್ನಾನ ... ಮತಾಪುಗಳನ್ನು ಹಚ್ಚಿ.... ಪಟಾಕಿಗಳನ್ನು ಸರ ಸರವಾಗಿ ಹಚ್ಚಿ, ಅದಕ್ಕಿಂತಲೂ ಹೆಚ್ಚಾಗಿ ನಾವು ಸದ್ದು ಮಾಡುತ್ತಾ ಕೇಕೆ ಹಾಕಿ ನಗುವುದು. ನಂತರ ವಿಧ ವಿಧವಾದ ತಿಂಡಿಗಳು. ಮಧ್ಯಾಹ್ನ ಹಬ್ಬದ ಊಟ. ನಂತರ ತಾಯಿಯ ಮಡಿಲಲ್ಲಿ ತಲೆ ಇಟ್ಟು ತುಸು ನಿದ್ದೆ ಮಾಡುವುದು. ನನಗೆ ಅರಿವಿಲ್ಲದೆಯೇ ಕಣ್ಣಲ್ಲಿ ನೀರು ಬಂತು.

ಹೊಟ್ಟೆ ಮೆಲ್ಲನೆ ಹೇಳಿತು "ನನಗೆ ಹಸಿವು" ನಾನು ಗದ್ದರಿಸಿದೆ "ತೆಪ್ಪಗಿರು." ಆದರೂ ನಿಮಿಷ ನಿಮಿಷಕ್ಕೂ ಹೊಟ್ಟೆಯ ಕೂಗು ಹೆಚ್ಚಾಯಿತು. ನೀರು ಕುಡಿದೆ. ನನ್ನ ಹೊಟ್ಟೆ ಅಲ್ಪ ಸಂತೋಷಿ. ನೀರು ಕುಡಿದೊಡನೆ ಸುಮ್ಮನಾಯಿತು.

"ಅದೋ ರಾಜ್ ಕಪೂರ್....ಅದೋ ದೇವಾನಂದ್....ಅದೋ ದಿಲೀಪ್...." ದೊಡ್ಡ ಕಾರಲ್ಲಿ ಯಾರಾದ್ರೂ ಹೋಗಲಿ, ರಸಿಕರ ಕಣ್ಣಿಗೆ ಅವರು ತಮ್ಮ ಅಭಿಮಾನ ನಕ್ಷತ್ರವೇನೋ ಎಂಬ ಅನುಮಾನ.

ಓಹ್! ರಸಿಕರಿಗೆ ತಮ್ಮ ಮೆಚ್ಚಿನ ನಟರೆಂದರೇ....ಎಷ್ಟು ಅಭಿಮಾನ....ಪ್ರೇಮ.

"ನಾನು ಅಲೆಗಳನ್ನು ನೋಡುತ್ತಾ ನಿಂತೆ.. ನಾನು ಖಂಡಿತ "ನಟ"ನಾಗಲೇಬೇಕು. ಜನರ ಅಭಿಮಾನ ಸಂಪಾದಿಸಿ, ಚಿತ್ರ ಜಗತ್ತಿನಲ್ಲಿ ನನಗಾಗಿ ಒಂದು ಸ್ಥಾನ ಗಳಿಸುವವರೆಗೂ ನನಗೆ ದೀಪಾವಳಿ ಬೇಡ.

ಹಾಗೆಂದು ಹದಿಮೂರು ವರ್ಷಗಳ ಹಿಂದೆ, ಮುಂಬೈನಗರ ಬೀಚಿನಲ್ಲಿ ನಿಂತು..ಉದಯಿಸುತ್ತಿರುವ ಸೂರ್ಯನ ಮುಂದೆ ನಾನು ಶಪಥ ಮಾಡಿಕೊಂಡಿದ್ದೆ.

ನನ್ನ ಆಸೆ ಫಲಿಸಿತು. "ನಟಶೇಖರ"ನಾಗಿ ಜನರ ಹೃದಯ ಗೆದ್ದೆ. ಅವರ ಅಭಿಮಾನ ಸಂಪಾದಿಸಿದೆ. ಚಿತ್ರರಂಗದಲ್ಲಿ ..ನನಗೆ ಪ್ರಮುಖ ಸ್ಥಾನ ದೊರೆಯಿತು, ಚಿತ್ರ ರಸಿಕರ ಪ್ರೀತಿ, ಬೆಂಬಲದಿಂದ.

ದೀಪಾವಳಿ ಬಂತು. ನನ್ನ ಬಯಕೆಯಂತೆ "ನಟ"ನಾದ ನಾನು ಸಂಭ್ರಮದಿಂದಲೇ ಹಬ್ಬವನ್ನಾಚರಿಸಿದೆ. ನಕ್ಕು ನಲಿದೆ. ಹೆಂಡತಿಯೊಡನೆ ..ದೊಡ್ಡ ಕಾರಿನಲ್ಲಿ ಕುಳಿತು, ಸಮುದ್ರ ತೀರಕ್ಕೆ ಹೋಗಿಬಂದೆ. ಆ ರಾತ್ರಿ ನಾನು ನನ್ನ "ಏರ್ ಕಂಡಿಶನ್ಡ್ ರೂಮಿನಲ್ಲಿ" ಮೆತ್ತನೆಯ ಎಂ. ಎಂ. ಫಾಂ ಹಾಸಿಗೆಯಲ್ಲಿ ಮಲಗಿದೆ. ಆದರೆ ಏಕೋ ನನಗೆ ಈ ದೀಪಾವಳಿ..ತೃಪ್ತಿ ನೀಡಲಿಲ್ಲ. ಯಾವುದೋ ತೀರದ ಬಯಕೆ ಹೃದಯದ ಮೂಲೆಯಲ್ಲಿ ನಿಂತು ಕೂಗಿತು..., "ನಾನು ಬಯಸಿದ ದೀಪಾವಳಿ ಇದು ಅಲ್ಲ"..ಮತ್ತೆ.. ಯಾವುದು? ಪ್ರಶ್ನೆಗೆ ಉತ್ತರ ಸಿಗಲೇ ಇಲ್ಲ.

ಮರಳಿ ಬಂತು ದೀಪಾವಳಿ....ಎಲ್ಲವೂ ಮಾಮೂಲು. ಅಭ್ಯಾಸ ಕ್ರಮದಂತೆ ನಡೆಯಿತು. ನನಗೆ ಉತ್ಸಾಹ ಕುಗ್ಗಿತ್ತು. ನನ್ನನ್ನು ನಾನೇ ಪ್ರಶ್ನಿಸಿಕೊಂಡೆ. "ನನಗೇಕೆ ಹೀಗಾಗಿದೆ?....ನಾನು ಬಯಸುವ ದೀಪಾವಳಿ ಯಾವುದು?? ಹೇಗಿರಬೇಕು?" ಉಹುಂ–ನನಗೆ ಅರ್ಥವಾಗಲೇ ಇಲ್ಲ.

ಹೊಸ ಬಟ್ಟೆಗಳ ಕಟ್ಟು ನನ್ನನ್ನು ನೋಡಿ ನಗುತ್ತಿದೆ, ಸಿಹಿ ತಿಂಡಿಗಳ ಸಾಲು, ನನಗಾಗಿ ಕಾದು ಕುಳಿತಿವೆ.

ನನ್ನವಳ ಬಯಕೆಯಂತೆ, ನಾನೂ ಎಣ್ಣೆಸ್ನಾನಮಾಡಿ, ಹೊಸಬಟ್ಟೆಯುಟ್ಟು, ಸಿಹಿ ತಿಂದು, ಸ್ನೇಹಿತರೊಡನೆ ಸುತ್ತಿ, ಸಂಜೆ ಬೇಗ ಮನೆಗೆ ಬಂದು ಸೇರಿದೆ. ನನ್ನಾಕೆ ದೀಪಗಳ ಸಾಲು ಬೆಳಗಿಸುತ್ತಿದ್ದಳು. ಅವಳು ಬೆಳ್ಳಿಯ ದೊಡ್ಡ ದೀಪವನ್ನು ಬೆಳಗಿಸಿದಾಗ ನಾನು ಆ ದೀಪವನ್ನೇ ನೋಡುತ್ತಾ ಕುಳಿತೆ....

ಬೆಳ್ಳಿಯ ದೊಡ್ಡ ದೀಪ. ದೀಪದ ಬಲಗಡೆ ..ತಾಯಿ ಚಾಮುಂಡಾಂಬಿಕೆಯ ಭವ್ಯ

ದೀಪಾವಳಿಯ ಹಾರ್ದಿಕ ಅಭಿನಂದನೆಗಳೊಂದಿಗೆ

ತ್ತೈಲ ಚಿತ್ರ. ಎಡಗಡೆ ನಟರಾಜ ಮೂರ್ತಿ.

ತುಸು ದೂರದಲ್ಲಿ ವೇದಿಕೆಯ ಮೇಲೆ ನಮ್ಮ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ನಗು ನಗುತ್ತಾ ಕುಳಿತಿದ್ದಾರೆ. ಓಹ್! ಎಂಥಾ ಅಪೂರ್ವ ದೃಶ್ಯ!!!

ಅವರ ಅಕ್ಕಪಕ್ಕದಲ್ಲಿ........

ಕನ್ನಡ ಸಾಹಿತ್ಯ ರತ್ನಗಳು,
ಕನ್ನಡ ಕಲಾವಿದರು.
ಕನ್ನಡ ನಾಡಿಗಾಗಿ ದುಡಿಯುತ್ತಿರುವ ಕಚ್ಚೆದೆಯ ಕನ್ನಡಿಗರು.
ಕನ್ನಡ ಚಿತ್ರರಂಗದ ಪ್ರಮುಖ ವ್ಯಕ್ತಿಗಳು. ನನ್ನ ಹೃದಯದಲ್ಲಿ ಆನಂದ ತಾಂಡವ.
ಕನ್ನಡ ಚಿತ್ರಕ್ಕೆ ಬಂಗಾರದ ಪದಕ.
ಕನ್ನಡ ಶ್ರೇಷ್ಠ ಕಥೆಗೆ ಬಹುಮಾನ,
ಆ ಲೇಖಕರಿಗೆ ಅಪಾರ ಸನ್ಮಾನ, ಕೈ ತುಂಬಾ ಹಣ.
ಕನ್ನಡ ಕಲಾವಿದರಿಗೆ ಅತಿ ಶ್ರೇಷ್ಠ ಅಭಿನಯಕ್ಕೆ—ಅಪೂರ್ವ ಬಹುಮಾನ.

ಶ್ರೇಷ್ಠ ರಂಗವೆಂದು ನಾಡಿಗೆ ಹೆಮ್ಮೆ ತಂದಿದೆ........ಎಂದು ಕನ್ನಡ ಕಲಾರಂಗದ ಬಗ್ಗೆ, ಎಲ್ಲಿ ನೋಡಿದರೂ, ಮಾತು, ನಗು.. ಸಂತೋಷ....ಸಂಭ್ರಮ.

ಸಂತೋಷದಿಂದ ಕಣ್ಣಲ್ಲಿ ನೀರು ತುಂಬಿತು. ಇದು ಎಂಥಾ ಸುದಿನ. ಜೀವನದಲ್ಲಿ ಮರೆಯಲಾರದ ಮಹಾದಿನ, ಚರಿತ್ರೆಯಲ್ಲಿ ಬರೆಯಬೇಕಾದ ಸುವರ್ಣ ದಿನ.

ನನ್ನ ಹೃದಯದಲ್ಲಿ ಅಡಗಿ ಕುಳಿತಿದ್ದ ಬಯಕೆ ನಗು ನಗುತ್ತಾ ಹೊರಕ್ಕೆ ಬಂದು ನಿಂತು ಹೇಳಿತು.. "ಕಲ್ಯಾಣ್! ಇದೇ ನೋಡು ದೀಪಾವಳಿ, ನೀನು ಬಯಸಿದ ದೀಪಾವಳಿ. ಕನ್ನಡ ಚಿತ್ರರಂಗವನ್ನು, ಪ್ರಪಂಚವೇ ಒಮ್ಮೆ ನೋಡುವಂತೆ ಮಾಡಿದ ಈ ದಿನವೇ ನಿಜವಾದ ದೀಪಾವಳಿ, ಆನಂದಾವಳಿ.

ಕನ್ನಡ ಕಲಾವಿದನಾಗಿ,
ಕನ್ನಡ ನಿರ್ಮಾಪಕನಾಗಿ,
ಕನ್ನಡ ನಿರ್ದೇಶಕನಾಗಿ,
ಕನ್ನಡ ನಾಡಿನ ಓರ್ವ ಪ್ರಜೆಯಾಗಿ,
ನೀನು ಬಯಸುವ ದೀಪಾವಳಿ."

"ಹೌದು....ಇದೇ ನಾನು ಬಯಸುವ ದೀಪಾವಳಿ," ಮೆಲ್ಲನೆ ಹೇಳಿದೆ.

"ಯಾವುದೂ!"

ಬೆಚ್ಚಿ ಕಣ್ಣು ತೆರೆದೆ. ಆ ದೊಡ್ಡ ದೀಪ ಬೆಳಗುತ್ತಿತ್ತು, ಶಾಂತವಾಗಿ..ನಾನು ಆ ಬೆಳಕಿನಲ್ಲಿ ನೋಡಿದ ದೃಶ್ಯ? ಅದು ಮಾಯವಾಗಿತ್ತು. ನನ್ನ ಮಡದಿ ಕೈಯ್ಯಲ್ಲಿ ದೀಪಗಳ ಪ್ರಣತಿಗಳನ್ನು ಹಿಡಿದು ನಿಂತಿದ್ದಾಳೆ.

"ನನ್ನೋ ಕನಸು....ಅಲ್ಲ ನನ್ನ ಬಯಕೆ, ಖಂಡಿತ ಒಂದಲ್ಲ ಒಂದು ದಿನ ನೆರವೇರುತ್ತೆ..ಎಂಬುದಕ್ಕೆ ನನಗೀ ದೀಪಾವಳಿ ನಂಬಿಕೆ ನೀಡಿತು....ಹೌದು ನನ್ನ ಬಯಕೆ ಫಲಿಸುತ್ತೆ." ನಿರ್ಧಾರವಾಗಿ ನುಡಿದೆ........

ದೂರದಲ್ಲಿರುವ ದೇವಾಲಯದಿಂದ ಗಂಟೆಗಳ ಮಂಗಳನಾದ ಕೇಳಿಸಿತು.

ಜ್ಞಾನ ದೀಪದ ದೀಪಾವಳಿ

— ಆರ್. ಸುದರ್ಶನಂ

ಸುದರ್ಶನಂ

ದೀಪಾವಳಿ ಹಬ್ಬಗಳ ರಾಜ. ಕತ್ತಲೆಗೂ ಬೆಳಕಿಗೂ ಹೋರಾಟ ನಡೆದು ಬೆಳಕು ಗೆಲ್ಲುವುದು. ಇದು ಸತ್ಯ ಮತ್ತು ಅಸತ್ಯದ ಹೋರಾಟವೆಂದರೂ ಸಲ್ಲುತ್ತದೆ. ಈ ಸತ್ಯ ವಿಜಯದ ಸಂಕೇತವೇ ದೀಪಾವಳಿ ಹಬ್ಬ ಎಂದು ನನ್ನ ಹಿರಿಯರು ಹೇಳುತ್ತಿದ್ದರು. ಅದಕ್ಕೇ ಈ ದೀಪಾವಳಿ ಎಂದರೆ ನನಗೆ ಎಲ್ಲಿಲ್ಲದ ಸಂಭ್ರಮ. ನಾನು ದೇವರಲ್ಲಿ ದೃಢವಾದ ನಂಬಿಕೆ ಇಟ್ಟಿದ್ದೇನೆ. ಅವನ ಆಜ್ಞೆ ಇಲ್ಲದೆ ತೃಣವೂ ಚಲಿಸದು. ಅವನ ಕೃಪೆ ನಮಗಿರಬೇಕಾದರೆ ನಾವು ಸತ್ಯವಾಗಿ ನಡೆದುಕೊಳ್ಳಬೇಕು. ಇದನ್ನು ನಾನು ನನ್ನ ಅನುಭವದಿಂದ ಕಂಡುಕೊಂಡಿದ್ದೇನೆ.

ನಾನು ಮೊದಲೇ ಹೇಳಿದಂತೆ ಈ ಬೆಳಕು ಕತ್ತಲಿನ ಹೋರಾಟವನ್ನು ನಾವು ನಿತ್ಯವೂ ನೋಡುತ್ತಲೇ ಇದ್ದರೂ ಕತ್ತಲಲ್ಲೇ ಇರುತ್ತೇವೆಂಬುದು ಒಂದು ವಿಚಿತ್ರ ಸತ್ಯ. ಚಿತ್ರರಂಗದಲ್ಲಿ ನಾವು ಈ ಬಗೆಯ ವಿಚಿತ್ರ ಸತ್ಯಗಳನ್ನು ಕಣ್ಣು ಮುಚ್ಚಾಲೆಯನ್ನು ನಾನಾ ವಿಧವಾಗಿ, ನಾನಾ ರೂಪಗಳಲ್ಲಿ, ನಾನಾ ರಂಗುಗಳಲ್ಲಿ ಕಾಣುತ್ತೇವೆ.

ನಮ್ಮ ಚಿತ್ರ ನಿರ್ಮಾಪಕರಲ್ಲನೇಕರು ಸತ್ಯವಾಗಿ ನಡೆದುಕೊಳ್ಳುತ್ತೇವೆಂದೇ ಪ್ರಮಾಣವಚನ ಸ್ವೀಕಾರಮಾಡಿ ಚಿತ್ರತಯಾರಿಕೆಯಲ್ಲಿ ತೊಡಗುತ್ತಾರೆ. ಆದರೆ ಅವರ ಸುತ್ತ ಮುತ್ತ ಸೈತಾನದ ಸಂತಾನವೇ ಸುಳಿದಾಡಿ ಅವರ ವಿವೇಕ ಹಾಗೂ ಕ್ರಿಯಾಶಕ್ತಿಯನ್ನು ನಷ್ಟಗೊಳಿಸುತ್ತದೆ. ಕಾಮಿನಿ-ಕಾಂಚನ ಅವರನ್ನು ತಮ್ಮ ಮಾಯಾಬಜಾರ್‌ನಲ್ಲಿ ಮರುಳು ಮಾಡಿಬಿಡುತ್ತವೆ. ಇದರಿಂದ ಅವರು ಮುಕ್ತರಾಗಬೇಕಾದರೆ ಅವರ ಚಿತ್ತಸ್ಥೈರ್ಯ ವಿಪುಲವಾಗಿರಬೇಕು. ಚಿತ್ರತಯಾರಿಕೆ ಎಂದರೆ ಒಂದು ಘೋರವಾದ ತಪಸ್ಸೆಂದರೂ ಒಪ್ಪುತ್ತದೆ. ಹಿಂದೆ ಮಹಾ ತಪಸ್ವಿಗಳು ಕಠಿಣ ತಪಸ್ಸನ್ನಾಚರಿಸುತ್ತಿದ್ದಾಗ ದೇವೇಂದ್ರ, ರಂಭಾ, ಊರ್ವಶಿ, ಮೇನಕ ಮೊದಲಾದ ಅಪ್ಸರೆಯರನ್ನು ಕಳುಹಿಸಿ ತಪೋಭಂಗ ಮಾಡುತ್ತಿದ್ದನಂತೆ. ಹಾಗೆಯೇ ಚಿತ್ರತಯಾರಿಕೆಗೆ ತೊಡಗುವ ನಿರ್ಮಾಪಕನ ಮನಸ್ಸನ್ನು ಪರೀಕ್ಷೆಮಾಡಲು ನಾನಾ ವಿಧವಾದ ರಸಘಟ್ಟಗಳು. ಈ ಘಟ್ಟಗಳಲ್ಲಿ ಸೋತವನು ಚಿತ್ರ ಬಿಡುಗಡೆಯಾದಾಗ ಅದರ ದುಷ್ಪರಿಣಾಮವನ್ನು ಎದುರಿಸುತ್ತಾನೆ ಆದ್ದರಿಂದ ನನ್ನ ತೀರ್ಮಾನದಲ್ಲಿ ಚಿತ್ರ ತಯಾರಕನಿಂದ ಹಿಡಿದು ಅದಕ್ಕೆ (ಚಿತ್ರಕ್ಕೆ) ಸಂಬಂಧಿಸಿದ ಎಲ್ಲ ವರ್ಗದವರೂ ಚಿತ್ತಶುದ್ಧಿಯಿಂದ ಕೆಲಸ ಮಾಡಿದರೆ ಪರಿಣಾಮ ಒಳ್ಳೆಯದೇ ಆಗುತ್ತದೆ.

ಮಹಾವೈಣಿಕ ರಾವಣಾಸುರ ತನ್ನ ತಾಯಿಯ ಶಿವಪೂಜೆಗಾಗಿ ಆತ್ಮಲಿಂಗವನ್ನು ತರಲು ಹೋಗಿ ಕೈಲಾಸವನ್ನೇ ಅಲ್ಲಾಡಿಸಿ ಪಾರ್ವತಿಯನ್ನೇ ಭಯಗೊಳಿಸಿ, ಕೊನೆಗೆ ರುದ್ರನ ಅವಲೀಲೆಗೆ ಒಳಗಾಗಿ ಬೆಳ್ಳಿಬೆಟ್ಟದ ಅಡಿಯಲ್ಲಿ ಸಿಕ್ಕಿಕೊಂಡು ತನ್ನ ಹೃದಯದ ರುದ್ರವೀಣೆಯಿಂದ ಶಿವನನ್ನು ಒಲಿಸಿಕೊಂಡು ಆತ್ಮಲಿಂಗವನ್ನು ಪಡೆದ. ಆದರೂ ಆತ್ಮಲಿಂಗ ಆತನಿಗೆ ದಕ್ಕಲಿಲ್ಲ. ಹೀಗೆಯೇ ನಿರ್ಮಾಪಕ ಏನೋ ಸಾಧಿಸುತ್ತೇನೆಂದು ಹೊರಟು ಏನೂ ಸಾಧಿಸದೆಯೇ ಮೋರೆ ತಪ್ಪರಲ್ಲಿ ತೃಪ್ತಿಗೊಳ್ಳಬೇಕಾಗುತ್ತದೆ.

ನನ್ನ ಚಿತ್ರರಂಗದ ಎರಡು ದಶಕಗಳ ಅನುಭವದಲ್ಲಿ ಬೆಳಕಿಗಾಗಿ ಹಂಬಲಿಸುವ ಅನೇಕ ನಿರ್ಮಾಪಕರನ್ನು ಕಂಡಿದ್ದೇನೆ. ಅವರ ಬೆಳಕನ್ನು ಕಂಡು ನಿಜವಾದ ದೀಪಾವಳಿಯನ್ನು ಆಚರಿಸಿದವರನ್ನು ಬಹಳ ಕಡಿಮೆ ಸಂಖ್ಯೆಯಲ್ಲಿ ಕಂಡಿದ್ದೇನೆ. ಜ್ಞಾನ ದೀಪದ ದೀಪಾವಳಿ ಚಿತ್ರರಂಗದಲ್ಲಿ ತೀರ ದುರ್ಲಭ. ಆ ದೀಪಕ್ಕಾಗಿ, ಆ ದೀಪಾವಳಿಗಾಗಿ ಹಗಲಿರುಳೂ ಹಂಬಲಿಸುವುದೇ ನನ್ನ ತಪಸ್ಸಾಗಿದೆ. ಆ ಜ್ಯೋತಿ ನನ್ನ ಮನಸ್ಸನ್ನು ಬೆಳಗಲಿ, ನಾನು ಜ್ಞಾನದೀಪದ ದೀಪಾವಳಿಯನ್ನು ಆಚರಿಸುವಂತಾಗಲಿ ಎಂಬುದೇ ಭಗವಂತನಲ್ಲಿ ನನ್ನ ಬೇಡಿಕೆ.

ನನ್ನ ಕನಸಿನ ದೀಪಾವಳಿ

-ದೊರೈರಾಜ್

ದೀಪಾವಳಿಯ ದಿನ ಮುಂಜಾವಿಗೇ ಎದ್ದು ಮಂಗಳಸ್ನಾನ ಮುಗಿಸಿ, ಉತ್ತಮವಾದ ಉಡುಪು ಧರಿಸಿ, ದೇವರಿಗೆ ನಮಸ್ಕರಿಸಿ, ಇಷ್ಟ ಬಂದಷ್ಟು ಪಟಾಕಿ ಸುಟ್ಟು, ಹಿಗ್ಗಿ ನಲಿಯುತ್ತಿದ್ದ ಬಾಲ್ಯವೇ ನನಗೆ ಸದಾ ನೆನಪಿಗೆ ಬರುತ್ತದೆ. ನಿಷ್ಕಪಟವಾದ ಆ ಎಳೆ ಮನಸ್ಸಿನಲ್ಲಿ ಎಳೆವಯಸ್ಸಿಗೆ ತಕ್ಕ ಮುಗ್ಧ ಭಾವನೆಗಳು ಮೂಡುತ್ತಿದ್ದವು. ಬಣ್ಣ ಬಣ್ಣದ ಮತಾಪು, ಹೂಬಾಣಗಳನ್ನು ಹಚ್ಚುವಾಗ ಯಾವುದೋ ಬಣ್ಣಬಣ್ಣದ ನಕ್ಷತ್ರಲೋಕದಲ್ಲಿ ವಿಹರಿಸುತ್ತಾ ಅಪ್ಸರೆಯರಂಥ ಎಳೆಯ ಗೆಳೆಯರ ಕೂಡ ಕುಣಿದಾಡುವ ಯಕ್ಷಲೋಕವನ್ನು ಕಾಣುತ್ತಿದ್ದೆ. ಆ ಕನಸನ್ನು ದಿಟವಾಗಿಸಬೇಕೆಂಬ ಹುಚ್ಚುಬಯಕೆ ನನ್ನನ್ನು ಕಲ್ಪನಾಲೋಕಕ್ಕೆ ಕರದೊಯ್ಯುತ್ತಿತ್ತು. ಅಜ್ಜ ಹೇಳುವ ಕತೆಯಿಂದ ಹಿಡಿದು ಶಾಲೆಯ ಉಪಾಧ್ಯಾಯರು ಹೇಳುವ ಕತೆಯವರೆಗೆ ಎಲ್ಲ ಕತೆಗಳನ್ನೂ ಮನಸ್ಸಿನಲ್ಲಿ ಕಲ್ಪಿಸಿಕೊಂಡು ಅದಕ್ಕೆ ನಿಜವಾದ ರೂಪ ಕೊಡುವುದು ಹೇಗೆ? ಎಂದೇ ಯಾವಾಗಲೂ ಯೋಚಿಸುತ್ತಿದ್ದೆ. ಇದು ಎಷ್ಟು ಮಹತ್ವದ ಯೋಚನೆ? ಎಂಥಾ ಕಲ್ಪನಾವಿಲಾಸ? ಎಂಬುದು ಹಿರಿಯನಾದ ಮೇಲೆ, ಹಾಗೂ ನಾನು ಕಲರಂಗಕ್ಕೆ ಕಾಲಿಟ್ಟ ಮೇಲೆ ಅರ್ಥವಾಯಿತು.

ನಿಜವಾಗಿಯೂ ಆ ಕಲ್ಪನಾವಿಲಾಸ ವಿಕಾಸವಾಗಿ ನನ್ನನು ಛಾಯಾಗ್ರಾಹಕನಾಗಿಸಿದ್ದರ ಅತಿಶಯವಲ್ಲ.

ಕವಿ ಮತ್ತು ನಿರ್ದೇಶಕರ ಕನಸುಗಳನ್ನು ಅಂದವಾಗಿ ಕೃತಿಗಿಳಿಸುವ ಕಲೆ ಛಾಯಾಗ್ರಾಹಕನದು. ಛಾಯಾಗ್ರಹಣಕ್ಕೆ ಯೋಗ್ಯವಾದ ಸೂಕ್ಷ್ಮಾತಿಸೂಕ್ಷ್ಮವಾದ ಒಳಗಣ್ಣು ಅತ್ಯಗತ್ಯ. ನನಗೆ ಈ ಬಗ್ಗೆ ಯೋಚನೆ ಮಾಡಿದಾಗಲೆಲ್ಲ ದೀಪಾವಳಿಯ ಸವಿನೆನಪು ಮೂಡುತ್ತದೆ.

"ಧರಣಿ ಮಂಡಳ ಮಧ್ಯದೊಳಗೆ
ಮೆರೆಯುತಿಹ ಕರ್ನಾಟದೇಶದೋಳ್
ಇರುವ ಕಾಳಿಂಗನೆಂಬ ಗೊಲ್ಲನ
ಪರಿಯು ನಾನೆಂತು ಪೇಳಲಿ"

ಎಂಬ ಗೋವಿನ ಕಥೆಯನ್ನು ಕೇಳುವಾಗ ಗೋವು "ಅಮ್ಮಗಳಿರಾ, ಅಕ್ಕಗಳಿರಾ, ನಮ್ಮ ತಾಯ್ ಒಡಹುಟ್ಟುಗಳಿರಾ," ಎಂದು ತನ್ನ ಬಂಧು ವರ್ಗವನ್ನು ಸಂಬೋಧಿಸಿ ತನ್ನ ತಬ್ಬಲಿ ಕಂದನನ್ನು ಚೆನ್ನಾಗಿ ನೋಡಿಕೊಳ್ಳಿರೆಂದು ಬೇಡಿಕೊಳ್ಳುವಾಗ ಹಾಗೂ ದುಷ್ಟ ವ್ಯಾಘ್ರನಿಗೆ ತನ್ನನ್ನು ಒಪ್ಪಿಸಿಕೊಳ್ಳುವ ದೃಶ್ಯಗಳನ್ನು ನೆನೆದಾಗ, ಹಾಗೂ "ಕುಣಿಯೋಣು ಬಾರ....ಕುಣಿಯೋಣು ಬಾ" ಎಂದು ಹಾಡಿದಾಗ ನನ್ನನ್ನು ನಾನು ಮರೆತು ಇಂಥ ದೃಶ್ಯಗಳನ್ನು ಎಂದೂ ಅಳಿಯದಂತೆ ಚಿತ್ರೀಕರಿಸಬೇಕೆಂದುಕೊಂಡಿದ್ದೆ.

ದೊರೈರಾಜ್

ಧರ್ಮಕರ್ಮ ಸಂಯೋಗವೆಂದು ಬಲ್ಲವರು ಹೇಳಿದಂತೆ ನನ್ನ ಪ್ರವೃತ್ತಿ ನಾನು ಆಶಿಸಿದ ವೃತ್ತಿಗೆ ಪ್ರೇರಕವಾಗಿತ್ತು. ನಾನು "ಸೋದರಿ" ಚಿತ್ರದಿಂದ ಈಗ ಬಿಡುಗಡೆಯಾಗಿರುವ "ರಾಜದುರ್ಗದ ರಹಸ್ಯ"ದವರೆಗೆ ಸುಮಾರು ಮೂವತ್ತು ಚಿತ್ರಗಳಿಗೂ ಮೇಲಾಗಿ ಛಾಯಾಗ್ರಾಹಕನಾಗಿ ಕೆಲಸ ಮಾಡಿದ್ದೇನೆ. ಇವೆಲ್ಲಕ್ಕೂ ಪ್ರೇರಣೆ ನನ್ನ ಎಳೆದಿನಗಳ ದೀಪಾವಳಿಯ ಕನಸುಗಳು.

ಕನಸುಗಳನ್ನು ಕೃತಿಗಿಳಿಸುವ ಕಲೆಯಲ್ಲಿ ನನ್ನ ಅನುಭವ ಪಕ್ವವಾದಂತೆಲ್ಲ ನಮ್ಮ ನಾಡಿನ ಹಿರಿಯ ಕವಿಗಳ ಕೃತಿಗಳನ್ನು ತೆರೆಯ ಮೇಲೆ ಕಾಣಿಸಬೇಕೆಂಬ ಹಂಬಲ ಹೆಚ್ಚಾಗುತ್ತಿದೆ. "ಬಂಗಾರಿ," "ಚಂದವಳ್ಳಿಯ ತೋಟ," "ಕರುಣೆಯೇ ಕುಟುಂಬದ ಕಣ್ಣು," ಕುಲವಧು" "ಸಂಧ್ಯಾರಾಗ" ಮೊದಲಾದವುಗಳನ್ನು ತೆರೆಗಾಣಿಸಿದಂತೆ ರನ್ನನ "ಗದಾಯುದ್ಧ" ಕುಮಾರವ್ಯಾಸನ "ಭಾರತ" ಮೊದಲಾದ ಕೃತಿಗಳನ್ನು ತೆರೆಗಾಣಿಸಿದ ಮಹಾದಿನವೇ ನನ್ನ ಜೀವನದಲ್ಲಿ ದೀಪಾವಳಿ.



ದೀಪಾವಳಿಯು ನಮ್ಮೆಲ್ಲ ಗ್ರಾಹಕರಿಗೂ ಇಷ್ಟಮಿತ್ರರಿಗೂ ಶುಭದಾಯಕವಾಗಲಿ

CARNATIC
COFFEE
COMPANY

DAVANGERE CITY

ದಣಿದ ಮನಕ್ಕೆ ತೃಪ್ತತೆ
ಶುಭ ಪ್ರಸಂಗಕ್ಕೆ ಸಂತೃಪ್ತತೆ

ಸಿ. ಸಿ. ಸಿ. ಕಾಫಿ

ಸುವಾಸನೆ—ಸುರುಚಿ—ಪರಿಶುದ್ಧತೆ
ಲೋಕಪ್ರಿಯತೆಗೆ ಇನ್ನೊಂದು ಹೆಸರು
ನಿಮ್ಮ ಹಣಕ್ಕೆ ಯೋಗ್ಯ ಮಾಲು

ರಾಜ್ಯದಲ್ಲಿಯ ಎಲ್ಲ ಜನತಾಬಝಾರ-
ಗಳಲ್ಲಿಯೂ ದೊರೆಯುತ್ತಿದೆ.

ಕರ್ನಾಟಕ ಕಾಫಿ ಕಂಪನಿ
ಶ್ರೀನಿವಾಸ ಕೃಪಾ
ದಾವಣಗೆರೆ ಸಿಟಿ

A Happy New Year to all our Patrons



ಕನ್ನಡ ಚಿತ್ರರಂಗದಲ್ಲಿ ದೀಪಾವಳಿ

— ಎಚ್. ಕೆ. ವಿಜಯನಾರಸಿಂಹ

ಚಿತ್ರರಂಗ ಈಗ ಅತ್ಯಂತ ವೇಗದಲ್ಲಿ ಪ್ರಗತಿ ಸಾಧಿಸುತ್ತಿದೆ. ಹಾಲಿವುಡ್ಡಿನಲ್ಲಿ ಇತ್ತೀಚೆಗೆ ಒಂದು ಚಿತ್ರ ತಯಾರಾಗುತ್ತಿದೆಯಂತೆ. ಆ ಚಿತ್ರದ ಸಂಭಾಷಣೆ, ಗೀತೆ ಹಾಗೂ ಸಂಗೀತ ಸಂಪ್ರದಾಯವನ್ನು ಐದು ಬಗೆಯಲ್ಲಿ ಕೇಳಬಹುದು. ಇಂಗ್ಲಿಷ್, ಸ್ಪ್ಯಾನಿಷ್, ರುಮೇನಿಯನ್, ಫ್ರೆಂಚ್, ಹಾಗೂ ಚೈನೀಸ್ ಭಾಷೆಗಳಲ್ಲಿ ಈ ಚಿತ್ರದ ಪ್ರತ್ಯೇಕ ಅವತರಣಿಕೆಗಳನ್ನು ಕೇವಲ ಗುಂಡಿಗಳನ್ನು ಅದುಮುವುದರಿಂದ ನೋಡಬಹುದು. ಈ ವಿಶಿಷ್ಟ ವೈಜ್ಞಾನಿಕ ಸಂಶೋಧನೆಯ ಫಲವಾಗಿ ಆಯಾ ಭಾಷೆಯ ಜನರು ಆಯಾ ಭಾಷೆಯ ಚಿತ್ರವನ್ನು ನೋಡಬಹುದು.

ಇದರಲ್ಲಿ ಒಂದು ಅಂಶ ಸ್ಪಷ್ಟವಾಗುತ್ತದೆ. ಚಿತ್ರ ನಿರ್ಮಾಣದಲ್ಲಿ ಯಂತ್ರ ತಂತ್ರಗಳಿಗೆ ಎಷ್ಟು ಪ್ರಾಧಾನ್ಯತೆ ಇದೆ ಎಂಬುದು.

ಯಂತ್ರ ಹಾಗೂ ತಂತ್ರಗಳ ನಡುವೆ ಸಿಕ್ಕಿ "ಅಪ್ಪಚ್ಚಿ" ಯಾಗಿರುವ ಭಾಷೆಯಲ್ಲಿ ಸತ್ವ ಎಷ್ಟರಮಟ್ಟಿಗಿದ್ದೀತು? ಆದರೆ ಭಾಷೆಯ ಮೂಲಕ ಹೇಳಲಾಗದುದನ್ನು ಭಾವಗಳ ಮೂಲಕ ಪ್ರಕಟಿಸುವುದು, ಪ್ರತಿಮಾ ಸೃಷ್ಟಿಯಿಂದ ನಿರೂಪಿಸುವುದು, ಸಾಂಕೇತಿಕ ಉಪಮೆಗಳಿಂದ ಸೂಚಿಸುವುದು ಹೆಚ್ಚು ಗುಣಮೌಲ್ಯಗಳನ್ನು ಗಳಿಸುವುದು. ಮೌನಗೊಂಬೆಯಾಟದಿಂದ ಮೊದಲಾದ ಮೂಕಿ ಚಿತ್ರ ಮಾತು ಕಲಿತು ಬಲಿತ ಮೇಲೆ ಈಗ ಮೌನವನ್ನು ಮತ್ತೆ ಬಯಸುತ್ತಿವೆ. ಮಾತಿಲ್ಲದೆ ತಯಾರಾದ ಚಿತ್ರಗಳೂ ಇವೆ. ಗೀತೆಗಳಿಲ್ಲದೆ ತಯಾರಾದ ಚಿತ್ರಗಳೂ ಹೇರಳವಾಗಿವೆ.

ಈ ಅಂಶಗಳನ್ನು ಅಧ್ಯಯನ ಮಾಡಿದರೆ ಚಿತ್ರಕ್ಕೆ ಸಾಹಿತ್ಯ ಗೌಣ ಎಂದು ತಿಳಿದು ಬರುತ್ತದೆ. ಚಿತ್ರ ಸಾಹಿತ್ಯ ಕತೆಯಲ್ಲಿನ ವ್ಯಕ್ತಿಗಳ ಭಾವ ಪ್ರಕಟನೆಗೆ ಸಹಾಯಕವಾಗಿದ್ದರೆ ಸಾಕು. ಆದರೆ ಚಿತ್ರದ ಕಥಾವಸ್ತುವನ್ನು ಅನುಸರಿಸಿ ಚಿತ್ರ ಸಾಹಿತ್ಯದ ಬಗ್ಗೆ ನಿರ್ಧರಿಸಬೇಕಾಗುತ್ತದೆ. ಒಬ್ಬ ಸಾಹಿತಿಯ ಜೀವನ ಚರಿತ್ರೆಯನ್ನು ಚಿತ್ರಿಸುವಾಗ ಸಾಹಿತ್ಯವೇ ಇಲ್ಲದ ಚಿತ್ರವನ್ನು ತಯಾರಿಸಿದರೆ ಆಭಾಸವಾಗುತ್ತದೆ. ಮಹಾಕವಿಯೋರ್ವನ ಚಿತ್ರದಲ್ಲಿ ಆತನ ಕೃತಿಗಳ ನಾಮಸ್ಮರಣೆ ಮಾಡಿದರೆ ಸಾಲದು. ಕೃತಿಯಲ್ಲಿನ ತಿರುಳನ್ನು ಹೇಳಬೇಕಾಗುತ್ತದೆ. ದೇಶ, ಕಾಲ, ವರ್ತಮಾನಕ್ಕೆ ತಕ್ಕ ಸಾಹಿತ್ಯ ಸೃಷ್ಟಿಸಬೇಕಾಗುತ್ತದೆ.

ನಮ್ಮ ಕನ್ನಡ ಚಿತ್ರಗಳಲ್ಲಿ ಭಾಷಾ ಪ್ರಕಟನೆ ಹೆಚ್ಚಾಗಿ ಸಂಭಾಷಣೆ ಹಾಗೂ ಗೀತೆಗಳ ಮೂಲಕವೇ ನಡೆಯುತ್ತಿದೆ. ಚಿತ್ರ ಸಾಹಿತಿಯೇ ಅನೇಕ ಚಿತ್ರಗಳ ಹಿನ್ನೆಲೆಯ ನಾಯಕ. ಉದ್ದನೆಯ ಸಂಭಾಷಣೆ ಬರೆಯುವವನು ಉದ್ದಾಮಸಾಹಿತಿ, ಅರ್ಥವಿಲ್ಲದ ಗೀತೆ ಬರೆಯುವವನು ಅದ್ವಿತೀಯ ಕವಿ, ಎನ್ನುವ ದುಷ್ಟ ಕಲ್ಪನೆ ಪ್ರಬಲವಾಗುತ್ತಿದೆ. ಇದು ಪ್ರೇಕ್ಷಕರ ತಪ್ಪಲ್ಲ, ನಿರ್ಮಾಪಕರು ಹಾಗೂ ನಿರ್ದೇಶಕರು ಚಿತ್ರಸಾಹಿತಿಯನ್ನು ಉಪಯೋಗಿಸಿಕೊಳ್ಳುವ ಅನೀತಿಯ ನಿದರ್ಶನವೆನ್ನಬಹುದು. ಪ್ರೇಕ್ಷಕರ ನಾಡಿಯನ್ನು ಹಿಡಿದು ನೋಡಿದವರಂತೆ ನುಡಿಯುವ ಈ ಮಹಾನುಭಾವರು ಲೇಖಕನ ಕ್ರಿಯಾಶಕ್ತಿಯ ಮೇಲೆ ಗದಾಪ್ರಹಾರ ಮಾಡುವರು. ಇವರ ಕೈಗೊಂಬೆಯಾದ ಲೇಖಕ ತನ್ನತನವನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾನೆ. ಹೀಗಾಗಿ ಉತ್ತಮ ಸಾಹಿತ್ಯ ರಚನೆಯನ್ನು ನಿರೀಕ್ಷಿಸುವಂತಿರುವುದಿಲ್ಲ.

ಉತ್ತಮ ಸಾಹಿತ್ಯಕ್ಕೆ ಪ್ರೋತ್ಸಾಹ ಕೂಡ ದೊರೆಯುತ್ತಿಲ್ಲವೆಂದರೆ ಉತ್ಪ್ರೇಕ್ಷೆಯಲ್ಲ. ಈಗ ಹಲವಾರು ವರ್ಷಗಳ ಹಿಂದೆ ತಯಾರಾದ "ವಿಚಿತ್ರ ಪ್ರಪಂಚ" ಚಿತ್ರದಲ್ಲಿ ಕವಿವರ ಬೇಂದ್ರೆಯವರ ಕವನಗಳಿದ್ದರೂ ಚಿತ್ರ ಯಶಸ್ವಿಯಾಗಲಿಲ್ಲ. ಇತ್ತೀಚೆಗೆ ಬಿಡುಗಡೆಯಾದ "ಸುಬ್ಬಾ ಶಾಸ್ತ್ರಿ" ಚಿತ್ರದಲ್ಲಿ ಉತ್ತಮ ಸಾಹಿತಿ ಎ. ಎನ್. ಮೂರ್ತಿರಾಯರ ಸಂಭಾಷಣೆ ಹಾಗೂ ಶ್ರೇಷ್ಠ ಕವಿ ಪು. ತಿ. ನರಸಿಂಹಾಚಾರ್ಯರ ಗೀತೆಗಳಿದ್ದರೂ ಚಿತ್ರಕ್ಕೆ ಆರ್ಥಿಕ ಯಶಸ್ಸು ದೊರೆಯದಾದುದು ವಿಷಾದನೀಯ-ವಿಚಾರನೀಯ.

ಭಡವ

ಬಾಲ ಗುಂಡಾಡಿಸುತ ಕಾಲ ಬಳಿ ಸುಳಿಯುತ್ತ
ತುಣುಕು ರೊಟ್ಟಿಗೆ ತೃಪ್ತಿಪಟ್ಟುಕೊಳ್ಳುವ;
'ನಾಯಿತನ'ವಿದ್ದರೂ 'ನಾಯಿಮನ' ಇವಗಿಲ್ಲ;
ಸಂಧಿ ಸಾಧಿಸಿ ಕೈಯ ಕೊಡುವ—ಭಡವ!

— ಎಂ. ಅಕಬರ ಅಲಿ

ಲಂಗು ಲಗಾಮಿಲ್ಲ

ವ್ಯಾಪಾರೀ ದೃಷ್ಟಿಯಿಂದ ಸೃಷ್ಟಿಯಾಗುವ ಮಾಮೂಲಿ ಚಿತ್ರ ಸಾಹಿತ್ಯದಲ್ಲಿ ಕಾವ್ಯಗುಣ ಶಿಥಿಲವಾಗಿರುತ್ತದೆ. ಉತ್ತಮ ಕಾವ್ಯಗುಣ ಸಂಪನ್ನವಾದ ಛಂದೋಬದ್ಧವಾದ ಗೀತೆಯಾಗಲೀ, ಸತ್ವಪೂರ್ಣ ಸಾಹಿತ್ಯಾತ್ಮಕ ಸಂಭಾಷಣೆಗಳಾಗಲೀ ಕೇವಲ ಉತ್ತಮ ತರಗತಿಯ ಪ್ರೇಕ್ಷಕರಿಗೆ ಮೀಸಲಾಗಿ ಕೊನೆಯ ತರಗತಿಯವನಿಗೆ ಎಟುಕದ ರಸಫಲವಾಗುತ್ತವೆಂಬ ಶಂಕೆಯಿಂದ ನಿರ್ಮಾಪಕರು ಚಿತ್ರ ಸಾಹಿತಿಯನ್ನು ಕಾಗದದ ಹೂವಾಗಿಸುತ್ತಾರೆ. ವ್ಯಾಪಾರೀ ಸಾಹಿತ್ಯವನ್ನಷ್ಟೇ ಹೊಸೆಯಬಲ್ಲ ಯಾಂತ್ರಿಕ ಸಾಹಿತಿ ವ್ಯಾಕರಣ, ಛಂದಸ್ಸು, ಅಲಂಕಾರ ಶಾಸ್ತ್ರಗಳ ಬಗ್ಗೆ ಅಜ್ಞನಾಗಿದ್ದರೂ ಸಾಗುತ್ತದೆ. ಅವನ ಸಾಹಿತ್ಯಕ್ಕೆ ಯಾವ ಕಟ್ಟುನಿಟ್ಟು ಇರುವುದಿಲ್ಲ. ಅವನ ರಚನಾತ್ಮಕ ಶಕ್ತಿಯನ್ನು ಕುಂಠಿತಗೊಳಿಸುವ ಹಿನ್ನೆಲೆಯಲ್ಲಿ ಸಾಹಿತಿ ರಂಗಸಜ್ಜಿಕೆಯ ಅಲಂಕಾರಿಕ ವಸ್ತುವಿನಂತೆ ಕಾಣಿಸಿಕೊಳ್ಳುತ್ತಾನೆ.

ಕನ್ನಡ ಚಿತ್ರ ದೀಪಾವಳಿ

ಕನ್ನಡ ಚಿತ್ರರಂಗ ಈಗೀಗ ಹೆಚ್ಚು ಪ್ರಗತಿ ಶೀಲವಾಗುವ ಸಲ್ಲಕ್ಷಣಗಳು ಕಂಡು ಬರುತ್ತಿವೆ. ಈ ವರ್ಷವಲ್ಲಿ ಬಿಡುಗಡೆಯಾದ ಉತ್ತಮ ಚಿತ್ರಗಳಲ್ಲೊಂದಾದ "ಬೆಳ್ಳಿ ಮೋಡ" ಈ ಶುಭಸೂಚನೆಗೆ ನಾಂದಿಯಾಗಿದೆ.

ಕಾಲವ್ಮನ ಪುರಾಣಕ್ಕೆ ಪ್ರೋತ್ಸಾಹ ಕಮ್ಮಿಯಾಗುತ್ತಿದೆ.

ಉತ್ತಮ ಸಾಹಿತಿಗಳಾದ ತ. ರಾ. ಸು. ತ್ರಿವೇಣಿ, ಕೃಷ್ಣಮೂರ್ತಿ ಪುರಾಣಿಕ, ಚದುರಂಗ ಮೊದಲಾದವರ ಕಾದಂಬರಿಗಳು ಚಿತ್ರೀಕರಣವಾಗುತ್ತಿವೆ.

ಶಿವರಾಮ ಕಾರಂತರ "ಚೋಮನ ದುಡಿ" ಅಲ್ಲ — "ಬೆಟ್ಟದ ಜೀವ" ವರ್ಣ ಚಿತ್ರವಾಗಿ ನಿರ್ಮಾಣವಾಗಲಿದೆ.

ಈ ಚಿತ್ರಗಳ ನಿರ್ಮಾಣ ನಿಜಕ್ಕೂ ಕನ್ನಡ ಚಿತ್ರರಂಗದ ಜಾಗೃತಿಯ ಕುರುಹಾಗಿದೆ.

ಕನ್ನಡ ಚಿತ್ರರಂಗದಲ್ಲಿ ನವಚೈತನ್ಯದ ಆಶಾದಾಯಕ ವಾತಾವರಣ ಉಂಟಾಗಿದೆ. "ಮಿಸ್. ಲೀಲಾವತಿ" ಫ್ರಾಂಕ್‌ಫರ್ಟಿನ ಏಷ್ಯನ್ ಚಿತ್ರೋತ್ಸವದಲ್ಲಿ ಪಾಲುಗೊಂಡಿದೆ.

ಕನ್ನಡ ಚಿತ್ರರಂಗ ಇದೇ ರೀತಿ ಪ್ರಗತಿಯ ಪಾಂಚಜನ್ಯವನ್ನು ದಿಸೆ ದಿಸೆಯಲ್ಲೂ ಮೊಳಗಿಸಿ ಕನ್ನಡ ಚಿತ್ರಗಳನ್ನು ಇತರರು ಅನುಸರಿಸುವಂತಾದಾಗ ಕನ್ನಡ ಚಿತ್ರ ದೀಪಾವಳಿಯನ್ನು ಚಿರನೂತನವಾಗಿ ಆಚರಿಸಿ ನಲಿದಾಡೋಣ.

'ನಾವು ಸಮ ನಿಮಗೆ'—ಆಗ ದೀಪಾವಳಿ

— ಎಂ. ಆರ್. ವಿಟ್ಠಲ್

ಎಂ. ಆರ್. ವಿಟ್ಠಲ

ಮುಂಬೈ ನಗರದ ಸಮುದ್ರ ತೀರದಲ್ಲಿ [illegible] ಸಭೆಯೊಂದು ಸೇರಿತ್ತು. ಆ ಜನಸಾಗರಕ್ಕೆ [illegible] ಭಾಷಣಕ್ಕೂ ಇರುತ್ತಿರಲಿಲ್ಲ. ಅದು ಮಹಾತ್ಮಾ ಗಾಂಧೀಜಿಯವರ ಜನಾಕರ್ಷಣೆಯಾಗಿತ್ತು. ಬಾಪೂಜೀ ಅವರು ಆ [illegible] ದೀಪಾವಳಿ ಮುನ್ನಾದಿನ ದೀಪಾವಳಿ ಸಂದೇಶ ನೀಡಿದ್ದರು. ದೀಪಾವಳಿಯ ಮಹತ್ವವನ್ನು ಕುರಿತು ನುಡಿದ ಬಾಪೂಜೀ ಅವರು ದೀಪಾವಳಿಗಾಗಿ ಹಣವನ್ನು ಸುಡುವುದು ಅರ್ಥಹೀನವೆಂದು ನುಡಿದಿದ್ದರು. ಪರದೇಶಗಳಿಂದ ತರಿಸಿಕೊಳ್ಳಲಾಗುತ್ತಿದ್ದ ಪಟಾಕಿ, ಮತಾಪು ಮುಂತಾದವುಗಳಿಂದ ಅವರಿಗೆ (ವಿದೇಶೀಯರಿಗೆ) ವಿಶೇಷ ಹಣ ತೆತ್ತು ಭಾರತದ ಹಣವನ್ನು ಅಜ್ಞಾನದ ಅಗ್ನಿಕುಂಡದಲ್ಲಿ ಹೋಮ ಮಾಡುವುದು ಖಂಡನೀಯ ಎಂದಿದ್ದರು.

ಈ ಮಾತನ್ನು ಕೇಳಿದ ನನ್ನ ಪುಟ್ಟ ಮಗಳು [illegible] ನನಗೆ ಬಂದವಳೇ ದೀಪಾವಳಿಗಾಗಿ ಕೊಳ್ಳಬೇಕೆಂದು ಪಟ್ಟಿಹಾಕಿಕೊಂಡಿದ್ದ ಪಟಾಕಿ, ಮತಾಪು, ಹೂಬಾಣಗಳ ಕಾಗದವನ್ನು ಸೀಳಿ ಹಾಕಿದಳು. ಅವಳು ಚಿಕ್ಕ ಮಗು. ಹಾಗೆ ಮಾಡಿದಳೆಂದು ಅದಕ್ಕೆ ನಾವು ಮಹತ್ವ ಕೊಡದೆ ಬೇರೆ ಪಟ್ಟಿ ಹಾಕಲಿದ್ದಾಗ ನಾಲ್ಕು ವರುಷದ ಬಾಲೆ ಹೇಳಿದಳು "ಬಾಪೂಜೀ ಹೇಳಿದ ಮಾತನ್ನು ನೀವು ಕೇಳಲಿಲ್ಲವೆ? ಪಟಾಕಿ ಗಿಟಾಕಿ ಇನ್ನು ಮೇಲೆ ನಮ್ಮ ಮನೆಗೆ ತರಕೂಡದು. ನಮ್ಮ ದುಡ್ಡನ್ನು ಹಾಳು ಮಾಡಬಾರದು" ಎಂದು. ಇದನ್ನು ಕೇಳಿ ನಾವು ಕನ್ನಿಗೆ ಹಾಕಿಕೊಂಡೆವು.

ಅಂದಿನಿಂದ ಇಂದಿನವರೆಗೆ ನಮ್ಮ ಮನೆಗಳಲ್ಲಿ ಇದೇ ಆದರ್ಶ. ನಾವು ದೀಪಾವಳಿಗಾಗಿ ಆಚರಿಸಬೇಕಾದ ಎಲ್ಲ ಆಚರಣೆಗಳನ್ನು ಇಟ್ಟುಕೊಂಡಿದ್ದರೂ ಪಟಾಕಿ ಮೊದಲಾದವುಗಳಿಗೆ ಹಣ ಪೋಲುಮಾಡುವುದಿಲ್ಲ.

ಈ ಧ್ಯೇಯ ನನಗೆ ಮಾರ್ಗದರ್ಶಿಯಾಗಿದೆ. ನಾನು ಚಿತ್ರರಂಗದಲ್ಲೂ ಇದೇ ಆದರ್ಶವನ್ನು ಬೇರೊಂದು ವಿಧದಲ್ಲಿ ಪಾಲಿಸಲು ಯತ್ನಿಸುತ್ತಿದ್ದೇನೆ. ಅಂದರೆ, ನನ್ನ ದೃಷ್ಟಿಯಲ್ಲಿ ದುಂದು ಚಿತ್ರನಿರ್ಮಾಪಕರು ಎಂದರೆ ದೀಪಾವಳಿಯಲ್ಲಿ ಯದ್ವಾತದ್ವಾ ಹಣವನ್ನು ಪಟಾಕಿ ಮತಾಪುಗಳ ಮೋಜಿಗೆ ಸುರಿದು ಮಾರನೆಯ ದಿನ ಮನೆಯಲ್ಲಿ ಒಲೆಗೆ ಕಟ್ಟಿಗೆ ತರಲು ಕಾಸಿಲ್ಲವೆಂದು ತಲೆ ಕೆರೆದುಕೊಳ್ಳುವರ ಸಾಮ್ಯ ಕಂಡುಬರುತ್ತದೆ.

ನಮ್ಮ ಹಿತೈಷಿ ಚಳುವಳಿಗಾರರು ಕನ್ನಡ ಚಿತ್ರೋದ್ಧಾರಕ್ಕಾಗಿ ಮುಂದೆ ಬಂದಿರುವುದು ಸ್ತುತ್ಯವಾಗಿದೆ. ಆದರೆ ಅವರು ನಿರ್ಮಾಪಕರನ್ನು ಇಂಥ ಚಿತ್ರ ಮಾಡಿ, ಅಂಥ ಚಿತ್ರ ಮಾಡಿ ಎಂದು ಸೂಚಿಸುವ ಬದಲು, ಇಂಥಾ ಚಿತ್ರವನ್ನೇ ನೋಡಿ ಎಂದು ಪ್ರೇಕ್ಷಕರನ್ನು ನಿರ್ದೇಶಿಸಬೇಕು. "ಕಟ್ಟ" (ಅನುವಾದ...... ಇತ್ಯಾದಿ) ಚಿತ್ರಗಳಿಗೆ ಪ್ರೋತ್ಸಾಹ ಕೊಡದಿದ್ದರೆ ಒಳ್ಳೆಯ ಚಿತ್ರಗಳು ತಲೆ ಎತ್ತಲೇಬೇಕು. ಕೇರಳದಲ್ಲಾಗಲೀ, ಆಂಧ್ರದಲ್ಲಾಗಲೀ ಈ ಬಗೆಯ ಚಳುವಳಿ ಇಲ್ಲದೆಯೇ ಜನತೆ ಜಾಗೃತವಾಯಿತು.

ಬೆಳಕು ಯಾವ ದಿಕ್ಕಿನಿಂದ ಬಂದರೂ ಸ್ವಾಗತಾರ್ಹವೇ. ಆದ್ದರಿಂದ ನಾವು ಈಗ ಬಂಗಾಲಿಗಳ ಆದರ್ಶವನ್ನು ಅನುಸರಿಸೋಣ. ಬಂಗಾಲಿಗಳು ಉನ್ನತ ಅಭಿರುಚಿಯ ಉತ್ತಮ ಚಿತ್ರಗಳನ್ನೇ ಪ್ರೋತ್ಸಾಹಿಸುತ್ತಾರೆ. ನೀಚ ಅಭಿರುಚಿಯ ಸಂತೃಪ್ತಿಗಾಗಿ ಕೆಳಮಟ್ಟದ [illegible] ಚಿತ್ರಗಳನ್ನೂ ನೋಡುತ್ತಾರೆ.

ಕನ್ನಡ ಚಿತ್ರರಂಗ ಬಹಳ ಬೇಗ ಸುಧಾರಿತವಾಗಿ ಉತ್ತಮ ಅಭಿರುಚಿಯ ಆದರ್ಶ ಚಿತ್ರ[illegible] ನಮ್ಮ ಸಂಸ್ಕೃತಿಯ ಔನ್ನತ್ಯದ ದ್ಯೋತಕವಾಗಿ ಒಂದೊಂದು ಚಿತ್ರವೂ ಚಿತ್ರರತ್ನವಾಗಿ ಯಾವತ್ತೂ ಬಾಳುವಂತೆ, "ಹಿಗ್ಗಿನಲಿ ತಲೆ ಎತ್ತಿ ಜಗದ ಯುವರ ಕೂಟದಲಿ ನಾವು ಸಮ ನಿಮಗೆಂದು ನಿಲ್ಲುವಂತೆ" ನಿರ್ಮಾಣವಾಗುವ ಕಾಲ ಬಂದಾಗಲೇ ನನಗೆ ದೀಪಾವಳಿ—ದಿನ ದಿನವೂ ದೀಪಾವಳಿ.

For all your Requirements

WISH YOU A HAPPY DEEPAVALI

- Stationery
- Fountain Pens,
- Drawing, Engineering
- Artist Materials
- Paper, Account Books

etc. etc.

CONTACT ALWAYS:

LINDNER & CO.,
HIGH CLASS STATIONERS

Chickpet
BANGALORE-2

5- , Brigade Road
BANGALORE-1

H. O. PHONE: 22293 ● BR. PHONE: 24667

★ ಸವಿತಾ

ಸುರೇಖಾ ★

ಕುಲುಕುಲು
ನಗೆಯ
ಕುಸುರಿನ
ಬೆಳಕು →

ಗತ ಬಯಸುವ ಜ್ಯೋತಿ ಕುಂಜ

ಶಶಿಕಪೂರ ★



ಕಾರಿರುಳಿನಲ್ಲೊಂದು
ಕೋರೈಸುವ ಕಿಡಿ→

ೀನಾಕ್ಷಿ

ಜೀವನ
ನೌಕೆಗೆ
ಗೋಪುರ
←ದೀಪ

★ ಲತಾ

ದೇವದೇವನಿಗೆ ಭಕ್ತಿಯ ಆರತಿ

★ ಎಂ. ವಿ. ರಾಜಮ್ಮ

ಸಂಧ್ಯಾ ಸಮಯದಿ ನಂದಾದೀಪ

★ ಜಯಂತಿ



← “ವೃಂದಾವನವೇ ಎನ್ನ ಮನಮಂದಿರವು...”

ಶೈಲಶ್ರೀ

ನಿರೀಕ್ಷೆಗೆ ನಿಲುಕದ ಕಾಂತಿಯ ಬುಗ್ಗೆ

★ ಭಾರತಿ

ನಿತ್ಯ ನಿರಾಡಂಬರ ಭಕ್ತಿಯ ಸೊಡರು

★ ಚಂದ್ರಕಲಾ

ಜೀವನಗನಸಿನ ಆಶಾ ತಾರೆ →

ಚಿತ್ರರಂಗದಲ್ಲಿ ನೃತ್ಯ

— ಕೃಷ್ಣಕುಮಾರ್

ಚಿತ್ರರಂಗ ರಂಗುರಂಗಿನ ಮಾಯಾ ಬಜಾರ್. ದೂರದಿಂದ ನೋಡುವವರಿಗೆ ನಾನಾ ಆಕರ್ಷಣೆಗಳು. ನೂರೆಂಟು ಕಲ್ಪನೆಯ ಸ್ವಪ್ನಗಳು ನಿಜವಾದ ಭ್ರಮೆ. ನಾನು ಚಿತ್ರರಂಗವನ್ನು ಪ್ರವೇಶಿಸುವ ಮೊದಲು ಚಿತ್ರಗಳನ್ನು ನೋಡುತ್ತಿದ್ದಾಗ ಹುಚ್ಚು ಹುಚ್ಚು ಕಲ್ಪನೆಗಳನ್ನು ಮಾಡಿಕೊಂಡು ಕುಣಿದಾಡಿಬಿಡುತ್ತಿದ್ದೆ. ನಾನು ಚಿತ್ರರಂಗವನ್ನು ಪ್ರವೇಶಿಸಿದರೆ ನಾಟ್ಯವೆಂದರೆ ಅರಿಯದ ನೃತ್ಯ ನಿರ್ದೇಶಕರಿಗೆಲ್ಲ ತಕ್ಕ ಪಾಠ ಕಲಿಸಬೇಕೆಂಬುದು ನನ್ನ ಬಯಕೆಯಾಗಿತ್ತು. ಚಿತ್ರರಂಗದ ನೃತ್ಯ ನಿರ್ದೇಶಕರಿಗೆ ನೃತ್ಯಕಲೆಯೇ ಗೊತ್ತಿಲ್ಲವೆಂಬ ದೃಢ ವಿಶ್ವಾಸವೂ ನನಗಿತ್ತು. ಏಕೆಂದರೆ, ಚಿತ್ರಗಳಲ್ಲಿ ನೃತ್ಯ ಕಲೆ ಹೆಸರಿಗೆ ಮಾತ್ರ ಎನಿಸಿತ್ತು. ಹಾಗೂ "ಚಿತ್ರ ನಿರ್ದೇಶನ................." ಎಂಬ ಟೈಟಲ್ ಕಾರ್ಡ್ ನೋಡಿದಾಗ ನಗು ಬರುತ್ತಿತ್ತು.

ಕೃಷ್ಣಕುಮಾರ ತಾರೆ ಕೃಷ್ಣಕುಮಾರಿಗೆ ನೃತ್ಯ ನಿರ್ದೇಶನ ನೀಡುತ್ತಿರುವರು

ನೃತ್ಯ ಕಲೆಯನ್ನು ಶ್ರಮವಹಿಸಿ, ದೇಹ ಸವೆಸಿ ಕಲಿತ ನಾನು ರಂಗಭೂಮಿಯಲ್ಲಿ ನನ್ನ ಕಲೆಯ ಸೊಬಗನ್ನು ಪ್ರದರ್ಶಿಸಿ ಮೆಚ್ಚುಗೆ ಗಳಿಸಿದೆ.

ಬಳಿಕ ದೈವಸಂಕಲ್ಪದ ಪ್ರಕಾರ ನಾನು ಚಿತ್ರರಂಗವನ್ನು ಪ್ರವೇಶಿಸುವ ಯೋಗ ಬಂದೊದಗಿತು. ನಾನು ಚಿತ್ರರಂಗದ ಹೊಸಲಲ್ಲಿ ಕಾಲಿಟ್ಟಾಗ ನನ್ನ ಕನ್ನಡ ಬಂಧುಗಳು ಸಾದರ ಸ್ವಾಗತ ನೀಡಿ ಬರಮಾಡಿಕೊಂಡರು. ನನಗೂ ಹಲವಾರು ಅವಕಾಶಗಳು ಅಲ್ಲಲ್ಲಿ ಬರತೊಡಗಿದವು.

ಆದರೆ ನಾನು ಬರಬರುತ್ತ ನಿರುತ್ಸಾಹ ಹೊಂದುವ ವಾತಾವರಣ ಒಡನೆಯೇ ಉಂಟಾಯಿತು. ಇದಕ್ಕೆ ಕಾರಣವೇನೆಂದು ನಾನು ಯೋಚಿಸುತ್ತಿದ್ದಾಗ ನನ್ನ ಮಿತ್ರರೂ ಚಿತ್ರರಂಗದ ಹಿತೈಷಿಗಳು ತಿಳಿಸಿದರು. "ನೀವು ಉತ್ತಮ ನೃತ್ಯ ಕಲಾವಿದರು. ನಿಮಲ್ಲಿ ವಿದ್ಯೆ ಇದೆಯೇ ವಿನಃ ಅದನ್ನು ಚಿತ್ರರಂಗಕ್ಕೆ ಬಳಸಿಕೊಳ್ಳುವ ಗುಟ್ಟು ಗೊತ್ತಿಲ್ಲ ಎಂದು ಚಿತ್ರರಂಗದಲ್ಲಿ ಮಾತನಾಡಿಕೊಳ್ಳುತ್ತಾರೆ" ಎಂದು. ಇದು ನನಗೆ ನಿಜಕ್ಕೂ ಮಾರ್ಗದರ್ಶನ ಮಾಡಿತು. ನಾನು ಶಾಸ್ತ್ರೋಕ್ತವಾಗಿ ನಡೆದುಕೊಂಡರೆ ಚಿತ್ರರಂಗ ನನ್ನನ್ನು ಹುಂಬನನ್ನಾಗಿ ಮಾಡಿಬಿಡುತ್ತದೆಂಬ ಭಯವುಂಟಾಯಿತು. ಚಿತ್ರರಂಗಕ್ಕೆ ಹೇಗೆ ಹೊಂದಿಹೋಗುವುದು ಎಂದು ಯೋಚಿಸಿ, ಆಧುನಿಕ ಚಿತ್ರಗಳ ಪಂಥವನ್ನು ಅನುಸರಿಸಿ ನೃತ್ಯ ಸಂಯೋಜನೆಯಲ್ಲಿ ಮಾರ್ಪಾಟು ಮಾಡತೊಡಗಿದೆ. ನಿರ್ಮಾಪಕರು ನಿರ್ದೇಶಕರು ಬಯಸಿದ್ದಕ್ಕೂ ಹೆಚ್ಚಾಗಿ ಭಾವ ಭಂಗಿಗಳನ್ನು ಸಂಯೋಜಿಸತೊಡಗಿದೆ. ಇದರಿಂದ ನನ್ನನ್ನು ಚಿತ್ರ ನಿರ್ಮಾಪಕರು ಮೆಚ್ಚಿಕೊಂಡರು. ನನಗೆ ಹೆಚ್ಚು ಹೆಚ್ಚು ಅವಕಾಶಗಳು ಬಂದವು. ಜನಪ್ರಿಯತೆಯೂ ಹೆಚ್ಚಾಯಿತು.

ಆದರೆ ನನಗೆ ಶಾಸ್ತ್ರೋಕ್ತ ನೃತ್ಯ ಪದ್ಧತಿಯಲ್ಲೇ ಒಲವು ಹೆಚ್ಚು. ಆದ್ದರಿಂದ ನಾನು ನೃತ್ಯ ನಿರ್ದೇಶನ ನೀಡುವ ಚಿತ್ರಗಳಲ್ಲಿ ಒಂದಾದರೂ ಶಾಸ್ತ್ರೋಕ್ತ ಪದ್ಧತಿಯ ನೃತ್ಯವನ್ನು ನಿರ್ದೇಶಿಸಿರುತ್ತೇನೆ. ಈ ನನ್ನ ಬಯಕೆ ಸ್ವಲ್ಪ ಮಟ್ಟಿಗೆ ಈಡೇರಿರುವುದು "ಇದೇ ಮಹಾ ಸುದಿನ" (ಭರತನಾಟ್ಯ) "ದುಡ್ಡೇ ದೊಡ್ಡಪ್ಪ" (ಯಕ್ಷಗಾನ) "ಎಮ್ಮೆ ತಮ್ಮಣ್ಣ" ಚಿತ್ರದಲ್ಲಿ ರಾಧಾಕೃಷ್ಣ ನೃತ್ಯ. "ಗಂಗೆ–ಗೌರಿ"ಯಲ್ಲಿ ನಾರದಿ ನೃತ್ಯ. ತೆಲುಗು ಚಿತ್ರ " ಚಿಲುಕ ಗೋರಂಕ " ಎಂಬುದರಲ್ಲಿ ಮಣಿಪುರಿ ಹಾಗೂ ಕೂಚುಪುಡಿ ನೃತ್ಯ. ಇತ್ತೀಚೆಗೆ ಬಿಡುಗಡೆಯಾಗಿರುವ "ಬೀದಿ ಬಸವಣ್ಣ" ಚಿತ್ರದಲ್ಲಿ "ಏಕಾಂತದಲ್ಲಿ ಮಾತಾಡೆ ಬಂದೆ ನಾನು" ಎಂಬ ಗೀತೆಗೆ ಅಳವಡಿಸಿರುವ ನೃತ್ಯ.

ನನ್ನ ಅಭಿರುಚಿಗೆ ತಕ್ಕಂತೆ ಚಿತ್ರದಲ್ಲಿ ಒಂದಾದರೂ ಶಾಸ್ತ್ರೀಯ ಪದ್ಧತಿಯ ನೃತ್ಯವನ್ನು ಸಂಯೋಜಿಸಲು ತಮ್ಮ ಚಿತ್ರದಲ್ಲಿ ಅವಕಾಶ ಮಾಡಿಕೊಡುವ ನಿರ್ಮಾಪಕ ಬಿ. ಆರ್. ಪಂತುಲು ಅವರಿಗೆ ನಾನು ಯಾವಾಗಲೂ ಋಣಿ.

ನಾನು ಚಿತ್ರರಂಗದಲ್ಲಿದ್ದರೂ ಶಾಸ್ತ್ರೀಯ ನೃತ್ಯವನ್ನು ದಿನವೂ ಬಿಡದೆ ಅಭ್ಯಾಸ ಮಾಡುವುದರಿಂದ ಅಲ್ಲದೆ ನನ್ನ ಶಿಷ್ಯೆಯರಿಗೆ ಶಿಕ್ಷಣ ಕೊಡುವುದರಿಂದ ಚಿತ್ರರಂಗದ ಆಧುನಿಕ ಸೋಂಕು ತಟ್ಟುವುದಿಲ್ಲ.

ಕ್ಯಾಮರಾ ಕೋನಗಳಿಗೆ, ನರ್ತಿಸುವ ಕಲಾವಿದರ ಪ್ರತಿಭೆ ಹಾಗೂ ಆಕರ್ಷಣೆಗಳಿಗೆ ತಕ್ಕಂತೆ, ನಿರ್ದೇಶಕರ ಇಲ್ಲವೆ ನಿರ್ಮಾಪಕರ 'ಖಾಯಷ್'ಗಳಿಗೆ ತಕ್ಕಂತೆ ಅಶಾಸ್ತ್ರೀಯ, ಅವ್ಯಸ್ಥಿತ, ಅಶ್ಲೀಲ ಭಾವ–ಭಂಗಿಗಳನ್ನು ನಾನು ವಿಧಿಯಿಲ್ಲದೆ ಸಂಯೋಜಿಸಬೇಕಾಗಿಬರುತ್ತದೆ. ಚಿತ್ರರಂಗ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತದೆ. ಆದರೆ ಸತ್ವಪರೀಕ್ಷೆ ಮಾಡುತ್ತದೆ. ಕಲಾವಿದನಿಗೆ ಸರಿಯಾದ ಪ್ರತಿಭೆ ಇಲ್ಲವಾದರೆ ಎಷ್ಟೇ ವಿದ್ಯೆ ಇದ್ದರೂ ವ್ಯರ್ಥ.

ಈ ತಂತ್ರವನ್ನು ಅರ್ಥಮಾಡಿಕೊಂಡ ಮೇಲೆ ನಾನು ರಾಜ ಕಪೂರ್, ತಾರೆ ಹೇಮಮಾಲಿನಿ, ಪ್ರಸಿದ್ಧ ತಾರೆ ಜಯಲಲಿತ, ರಾಜಾ ಸುಲೋಚನ ಮೊದಲಾದವರಿಗೆ ಶಿಕ್ಷಕನಾಗಲು ಸಾಧ್ಯವಾಯಿತು.

ನನ್ನ ಇಂದಿನ ಅಭ್ಯುದಯಕ್ಕೆ ನಮ್ಮ ಪತ್ರಕರ್ತರು, ನಿರ್ಮಾಪಕರು ಕಾರಣ. ಇದಕ್ಕೆ ನಾನು ಆ ನನ್ನ ಸನ್ಮಿತ್ರರಿಗೆಲ್ಲ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುತ್ತೇನೆ.

ನನಗೀಗ ತಮಿಳು, ಹಿಂದಿ, ಓಡಿಯಾ ಚಿತ್ರರಂಗಗಳಿಂದ ಆಹ್ವಾನ ಬರುತ್ತಿದೆಯಾದರೂ ನಾನು ನನ್ನ ಕನ್ನಡ ಚಿತ್ರರಂಗಕ್ಕೇ ಮೊದಲ ಮಾನ್ಯತೆ ಕೊಡುತ್ತೇನೆ.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

[ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಸಹಾಯಕ ಸಂಸ್ಥೆ]

ಪ್ರಧಾನ ಕಛೇರಿ: ಬೆಂಗಳೂರು - ೯

"ಭವಿಷ್ಯದ ಸುಖ ಸಂತೋಷಗಳಿಗಾಗಿ"
ಕ್ರಮವಾದ ಉಳಿತಾಯಗಳ ಫಲಕ್ಕಾಗಿ

ಉಳಿಸಿ ಕೆಳಕಂಡವುಗಳಲ್ಲಿ ಕೂಡಿಡಿ

ಸೇವಿಂಗ್ಸ್ ಬ್ಯಾಂಕ್ ಖಾತೆ—ಬಡ್ಡಿ ಸಾಲಿಯಾನ 4 %

- ಚೆಕ್ ಪುಸ್ತಕದ ಸೌಲಭ್ಯದೊಡನೆ. ಕನಿಷ್ಠ 50/- ರೂಪಾಯಿ ಬಾಕಿ ನಿಂತಿರಬೇಕು, ವರ್ಷಕ್ಕೆ 120 ವಿತ್ ಡ್ರಾವಲ್‌ಗಳು
- ಚೆಕ್ಕು ಪುಸ್ತಕದ ಸೌಲಭ್ಯವಿಲ್ಲದೆ, ಕನಿಷ್ಠ 5/- ರೂಪಾಯಿ ಬಾಕಿ ನಿಂತಿರಬೇಕು, ವಿತ್ ಡ್ರಾವಲ್ ಫಾರಮ್ಮುಗಳಿಂದ ವ್ಯವಹಾರ.

ಮೈನರುಗಳೂ ಅನಕ್ಷರಸ್ತರೂ ಖಾತೆಯನ್ನು ತೆರೆಯಬಹುದು,

ಕ್ಯುಮುಲೇಟಿವ್ ಡಿಪಾಜಿಟ್—
ಬಡ್ಡಿ ಸಾಲಿಯಾನ $5\frac{1}{4}$% ರಿಂದ 7%

- ತಿಂಗಳಿಗೆ ರೂ. 5/- ರಿಂದ ರೂ. 100/- 6 ವರ್ಷಗಳಲ್ಲಿ 120 ತಿಂಗಳವರೆವಿಗೆ ಅಂಗೀಕರಿಸಲಾಗುವುದು.

ಟರ್ಮ್ ಡಿಪಾಜಿಟ್‌ಗಳು— 15 ರಿಂದ 90 ದಿನಗಳು
ಬಡ್ಡಿ ಸಾಲಿಯಾನಾ $1\frac{1}{2}$% ರಿಂದ 3% ವರೆವಿಗೆ

- 91 ದಿನಗಳಿಗೆ ಮತ್ತು ಮೀರಿ 5 ವರ್ಷಗಳ ವರೆವಿಗೆ ಸಾಲಿಯಾನ ಬಡ್ಡಿ $4\frac{5}{8}$% ರಿಂದ $7\frac{1}{4}$% ವರೆವಿಗೆ

ಎಸ್. ಬಾಲಕೃಷ್ಣನ್, ಜನರಲ್ ಮ್ಯಾನೇಜರ್

ದೀಪಾವಳಿಯು ನಮ್ಮೆಲ್ಲರಿಗೂ ಸುಖಸಮೃದ್ಧಿ ಕೊಡಲಿ !

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ

ನಿಮ್ಮ ಕಚೇರಿ, ಹಾಟೆಲು ಹಾಗೂ ಗೃಹಾಲಂಕಾರಕ್ಕೆ

ಬೇಕಾಗುವ

ಅತ್ಯಾಧುನಿಕ

ಕಪಾಟು, ಕುರ್ಚಿ, ತಿರುಗುವ ಸ್ಟೂಲು, ರ್‍ಯಾಕು,
ಕ್ಯಾಶಬಾಕ್ಸ್, ಡ್ರೆಸ್ಸಿಂಗ ಕಪಾಟು, ಪಲ್ಲಂಗು,
ಮಕ್ಕಳ ತೊಟ್ಟಿಲು, 'S' ಮಾರ್ಕ ಕುರ್ಚಿ.
ಆಧುನಿಕ ಪದ್ಧತಿಯ ಬರೆಯುವ ಟೇಬಲ್ಲು
ಗಲ್ಲಾ ಟೇಬಲ್ಲು ಇತ್ಯಾದಿ

ಉಕ್ಕಿನ ತಯಾರಿಕೆಗಳಿಗಾಗಿ ಇಂದೇ ಸಂದರ್ಶಿಸಿರಿ

ಕಚೇರಿ: ಸಿದ್ಧೇಶ್ವರ ನಿಲಯ, ಸ್ಟೇಶನ್ ರಸ್ತೆ, ಹುಬ್ಬಳ್ಳಿ ಫೋನ: 3693



'ಸಂಗಮ'

ಇಂಜನಿಯರಿಂಗ ವರ್ಕ್ಸ

ಗೋಕುಲ ರಸ್ತೆ, ಉದ್ಯಮ ನಗರ, ಹುಬ್ಬಳ್ಳಿ ಫೋನ: 4009





ನಮ್ಮೆಲ್ಲ ಗ್ರಾಹಕರಿಗೆ
ದೀಪಾವಳಿಯ
ಶುಭಾಶಯಗಳು

ಮಧುರ ಸುವಾಸನೆಗೆ

- ★ ಪುಷ್ಪಾಂಜಲಿ ಅಗರಬತ್ತಿ
- ★ ಓಣಂ ಅಗರ್ ಬತ್ತಿ
- ★ ರಂಗೋಲಿ ಅಗರಬತ್ತಿ

ತಯಾರಕರು : ದಿ ನ್ಯಾಶನಲ್ ಫ್ಲ್ಯಾಗ್ ಪರ್‌ಫ್ಯೂಮರಿ ವರ್ಕ್ಸ್ ಪೋ. ಬಿ. ನಂ. 4 ಚಿಂತಾಮಣಿ (ಮೈಸೂರು ಸ್ಟೇಟ್)
ಬ್ರ್ಯಾಂಚ್ ಪಿ. ಬಿ. ನಂ. 641, ಬೆಂಗಳೂರು –3

ಹೋಮಿಯೋಪತಿಯಲ್ಲಿ ಜಯಗಳಿಸಿರಿ

ಅಂಚೆ ಶಿಕ್ಷಣ: ಅಖಿಲ ಕರ್ನಾಟಕದಲ್ಲಿಯೇ ಹೋಮಿಯೋಪತಿ ವೈದ್ಯ ಶಾಸ್ತ್ರವನ್ನು ಅತಿ ದಕ್ಷತೆ ವಿಸ್ತೃತವಾಗಿ ಬೋಧಿಸುತ್ತಿರುವ ಅದ್ವಿತೀಯ ಸಂಸ್ಥೆ ಕನ್ನಡ ಭಾಷೆಯಲ್ಲಿಯೇ ಅಂಚೆ ಮೂಲಕ ಇದನ್ನು ಕಲಿತು ಡಾಕ್ಟರರಾಗಬಹುದು ಇದುವರೆಗೂ ಸಾವಿರಾರು ಮಂದಿ ನಮ್ಮ ಸಂಸ್ಥೆಯಲ್ಲಿ ಶಿಕ್ಷಣ ಪಡೆದವರು ಯಶಸ್ವಿಯಾಗಿ ವೈದ್ಯ ವೃತ್ತಿಯನ್ನು ನಡೆಸುತ್ತಿದ್ದಾರೆ

ಕ್ರಮ ಶಿಕ್ಷಣ ತರಗತಿಗಳು:- ನಾಲ್ಕೂವರೆ ವರ್ಷಗಳ ಕ್ರಮ ಶಿಕ್ಷಣ ತರಗತಿಗಳು ಇದೀಗ ಪ್ರಾರಂಭವಾಗಿವೆ S. S. L. C. ಉತ್ತೀರ್ಣರಾದವರು ಸೇರಲರ್ಹರು ಸೂಚಿ ಪತ್ರಕ್ಕೆ ಒಂದು ರೂಪಾಯಿ M. O. ಮಾಡಿರಿ

ಪ್ರತ್ಯಕ್ಷ ತರಬೇತಿ ತರಗತಿ:- ಅಂಚೆ ಮೂಲಕ ಹೋಮಿಯೋಪತಿ ಕಲಿತವರಿಗೆ 15 ದಿವಸಗಳು ನೇರವಾಗಿ ಶಿಕ್ಷಣ ಕೊಡಲಾಗುವದು. 19 ನೇ ತರಬೇತಿ ತರಗತಿ ಇದೇ ವರ್ಷ ಡಿಸೆಂಬರ್ 16 ರಿಂದ 30 ರ ವರೆಗೂ ನಡೆಯುವದು ಹೆಚ್ಚಿನ ವಿವರಗಳಿಗೆ ಬರೆಯಿರಿ

ಆಸ್ಪತ್ರೆ:- ಪ್ರತ್ಯಕ್ಷ ತರಬೇತಿ ತರಗತಿಗೆ ಹಾಜರಾದವರಿಂದ ನಮ್ಮ ಸಂಸ್ಥೆಯ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಚಿಕಿತ್ಸೆ ಮಾಡಿಸಲಾಗುವದು ಈ ಬಗೆಯ ಸುಲಭ ಮತ್ತಾವುದೇ ಸಂಸ್ಥೆಯಲ್ಲಿ ಇರುವುದಿಲ್ಲ.

ನಮ್ಮಲ್ಲಿ ಶಿಕ್ಷಣ ಪಡೆದು ನೀವೂ ಒಬ್ಬ ಉನ್ನತ ಡಾಕ್ಟರರಾಗಿರಿ ಹಳ್ಳಿಗಳಲ್ಲಿ ವೈದ್ಯರ ಕೊರತೆ ನೀಗಿಸಿ ದೇಶಸೇವೆ ಮಾಡಿ ಹೋಮಿಯೋಪತಿಗೆ ಸಂಬಂಧಿಸಿದ ಸಕಲ ವಿವರಗಳಿಗೂ ನಮ್ಮೊಂದಿಗೆ ವ್ಯವಹರಿಸಿರಿ

★ ದೀಪಾವಳಿಯ ಶುಭಾಶಯಗಳು ★

ಬಂಧು ಮಾಸ ಪತ್ರಿಕೆ:- ಹೋಮಿಯೋಪಥಿ ಜ್ಞಾನವನ್ನು ಅಧಿಕರಿಸಿಕೊಳ್ಳಲು ಉತ್ತಮ ಮಾರ್ಗದರ್ಶಿನಿ ಪ್ರತಿ ಮಾಸವೂ ವಿನೂತನ ಬಗೆಯ ಲೇಖನಗಳು

ವಾರ್ಷಿಕ ಚಂದಾ 5 ರೂ. ಮಾತ್ರ

ಪುಸ್ತಕಗಳು:- (ಕನ್ನಡಕ್ಕೆ ಅನುವಾದಿಸಲ್ಪಟ್ಟವುಗಳು)

	ಕ್ರಯ	ಅಂಚೆ ವೆಚ್ಚ
ಲೀಡರ್ಸ್ ಇನ್ ಹೋಮಿಯೋಪಥಿ ರಪ್ಟಿಕ್ಸ್	10.00	2.00
ಡಾ. ಹಾನಿಮನ್‌ರ ಆರ್ಗನಾನ್ ಆಫ್ ಮೆಡಿಸನ್ —	7.50	1.00
ಜೀವ ರಸಾಯನ ಶಾಸ್ತ್ರ—	5.00	1.00
ತಾಯಿದ್ರವಗಳ ಗುಣಧರ್ಮ ಶಾಸ್ತ್ರ-	2.00	0.75
ತಲೆನೋವು ಮತ್ತು ಚಿಕಿತ್ಸೆ	0.50	0.25

ಔಷಧಗಳು:— ನಮ್ಮಲ್ಲಿ ಹೋಮಿಯೋಪತಿಯ ತಾಯಿದ್ರವಗಳು ದ್ರವ ಮಾತ್ರೆಗಳು ಜೀವರಸಾಯನ ಲವಣಗಳು, ಟಾನಿಕ್‌ಗಳು ಅಲ್ಲದೆ ಎಕ್ಸಾನಾಮಿಕ್ ಹೋಮಿಯೋ ಫಾರ್ಮಸಿಯ ವಿಶೇಷ ತಯಾರಿಕೆಗಳೆಲ್ಲವೂ ಸುಯೋಗ್ಯ ಕ್ರಯಕ್ಕೆ ಲಭಿಸುವವು ಹೋಮಿಯೋಪತಿ ವೈದ್ಯರಿಗೆ ಮಾತ್ರ ಉಚಿತವಾಗಿ ಕ್ರಯಪಟ್ಟಿ ಕಳುಹಿಸಲಾಗುವದು

ಡೈರೆಕ್ಟರ್
ಕರ್ನಾಟಕ ಹೋಮಿಯೋಪತಿ ಕಾಲೇಜ್
508, 8 ನೇ ಮೇನ್ ರಸ್ತೆ 9 ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು 3

ನಮ್ಮ ಪ್ರೋತ್ಸಾಹಕರೆಲ್ಲರಿಗೂ ದೀಪಾವಳಿಯ
ಶುಭಾಶಯಗಳನ್ನು ಕೋರುತ್ತೇವೆ

ದಯವಿಟ್ಟು ಭೇಟಿಕೊಡಿ

ಕಬ್ಬನ್‌ಪಾರ್ಕ್ ರೆಸ್ಟೋರೆಂಟ್

Cubbonpark Restaurant

ಟೆಲಿಫೋನ್: 72813

- ಶುಚಿ, ರುಚಿಯಾದ ಹಾಗೂ ಆರೋಗ್ಯಕರವಾದ ಪುಷ್ಟಿದಾಯಕ ತಿಂಡಿ ತೀರ್ಥಗಳಿಗೆ
- ಪ್ರತಿದಿನದ ಮನವನ್ನಾಕರ್ಷಿಸುವ ಕಾಫೀ ಮತ್ತು ಟೀ ಇತ್ಯಾದಿ ಪಾನೀಯಗಳಿಗೆ
- ಕಾರುಗಳಲ್ಲಿ ಬರತಕ್ಕವರಿಗೆ ಅವರಿದ್ದೆಡೆಯಲ್ಲೇ ಸಪ್ಲೈ ಮಾಡುವ ವ್ಯವಸ್ಥೆ ಏರ್ಪಡಿಸಿದೆ
- ಸಮಾರಂಭಗಳು ಮತ್ತು ಟೀ ಪಾರ್ಟಿಗಳಿಗೆ ಮುಂಚಿತವಾಗಿ ತಿಳಿಸಿದಲ್ಲಿ ಕೇಟರಿಂಗ್ ವ್ಯವಸ್ಥೆ ಮಾಡಲಾಗುವುದು.

ಸಾರ್ವಜನಿಕರ ತೃಪ್ತಿಯೇ ನಮ್ಮ ಧ್ಯೇಯ

ಪ್ರೊ: ಪಿ ಶಂಕರನಾರಾಯಣರಾವ್

ದೀಪಾವಳಿಯ ಶುಭ ಚಿಂತನೆ



ರೂಪಾ

ಇಂಜಿನಿಯರಿಂಗ
ಕಾರ್ಪೊರೇಶನ್

ಉದ್ಯಮ ನಗರ
ಕೊಲ್ಹಾಪೂರ

೫ ೬, ೭, ೮ ಎಚ್. ಪಿ. ಹಾರಿಝಾಂಟಲ್
೫ ಎಚ್. ಪಿ. ವರ್ಟಿಕಲ್

ಸರಕಾರದಿಂದ ತಗಾಯಿ ಸಾಲದ ಮೇಲೆ ಮಂಜೂರಾಗಿದೆ

ಪ್ರತಿ ಒಮ್ಮೆ ಬಂದಾಗ ಭೇಟಿಕೊಡಿ:-

ಶುಭ ಸುದ್ದಿ ನಮ್ಮ ಮೂಲಕ ಬಾರಾಬತಿ ರ್‍ಯಾಪಲ್

೧ ಜೋರೆಗೌಡ್ ೨ ನೇ ಬಹುಮಾನ ೨೭,೫೦೦
೨. ಮಾಣಿಕ್ಯರಾಜು ಸಪ್ಲಾಯರ್ ೪ ನೇ ೧೪ ೭೫೦

ಬಾರಾಬತಿ ರ್‍ಯಾಪಲ್ ಮೂಲಕ ಈ ದೀಪಾವಳಿ ಶುಭ ಮುಹೂರ್ತದಲ್ಲಿ ನಿಮ್ಮ ಕುಟುಂಬದವರು ಎಲ್ಲಾ ಲಾಟರಿ ಟಿಕೆಟ್ ಗಳನ್ನು ಕೊಂಡು ದೇಶ ಸೇವೆ ಮಾಡಿರಿ.

ಪ್ರತಿ ೪ ತಿಂಗಳಿಗೊಮ್ಮೆ ನಡೆಯುವ
ಲಾಟರಿ ಟಿಕೇಟಗಳು

ಲಾಟರಿ ಹೆಸರು	ಟಿಕೇಟ ೧ ಕ್ಕೆ	ಪ್ರಥಮ ಬಹುಮಾನ
ಬಾರಾಬತಿ ರ್‍ಯಾಪಲ್	೧ ೦೦	೧ ೧೦.೦೦೦
ಕೆ. ಸಿ. ಚಾರೀಟಿಸ್	೧ ೦೦	೧ ೧೫ ೦೦೦
ಡಿ. ಬಿ ಚಾರೀಟಿಸ್	೨.೦೦	೮೦ ೦೦೦
ರೆಡ್ ಕ್ರಾಸ್	೧.೦೦	೫೦%

ಇಂದೇ ಕೆಳಕಂಡ ವಿಳಾಸಕ್ಕೆ M O ಅಥವಾ I P O ಮುಖಾಂತರ ಮೊಬಲಗಿನ ಜೊತೆಗೆ ೧೫ ಪೈಸಾ ಹೆಚ್ಚಾಗಿ ಕಳಿಸಿ ಟಿಕೆಟ ಪಡೆಯಿರಿ ಏಜೆನ್ಸಿ ನಿಯಮಗಳಿಗೆ ಬರೆಯಿರಿ

Sri Rama Distributors
Ramakrishna Lodge
Phone;- 74730 Room No. 4
S C. Road, BANGALORE-9.

ತಂತಿ : " ಸುಖನಿವಾಸ " ಫೋನ : 646

ನೀವು ಮಿರಜನ್ನು ಸಂದರ್ಶಿಸಿದಾಗ
ಇಳಿದುಕೊಳ್ಳಲು ಯೋಗ್ಯವಾದ ಸ್ಥಳ

ಸುಖನಿವಾಸ

ಊಟ ಮತ್ತು ವಸತಿಗೃಹ

(— ಸ್ಟೇಶನ್ ರೋಡ, ಮಿರಜ —)

ನೀವು ಪಡೆಯಲು ಇಚ್ಛಿಸುವ ಎಲ್ಲಾ ವಿಧದ ಸೌಕರ್ಯಗಳನ್ನು ಹೊಂದಿದ

ದೀಪಾವಳಿಯ ಶುಭಾಶಯಗಳು

ದೇಹಪುಷ್ಟಿ ಲೇಹ (ಮಕರಧ್ವಜ ಮಿಶ್ರಿತ)

450 ಗ್ರಾಂ. ರೂ. 10-00 225 ಗ್ರಾಂ. ರೂ. 5-25

ಶರೀರದ ಉಷ್ಣತೆ, ಸ್ವಪ್ನಾವಸ್ಥೆ, ಸೊಂಟ ನೋವು, ಕೈಕಾಲು ಬಿಚ್ಚುವದು, ಅಶಕ್ತತೆ, ಒಳಜ್ವರ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿ ಉಂಟುಮಾಡುವದು, ಮಾನಸಿಕ ಮತ್ತು ಕಾಯಶಕ್ತಿ ಹೆಚ್ಚಿಸುವದು.

ಕಸ್ತೂರಿ ಮಿಶ್ರಣ ದಶಮೂಲ

660 ಮಿ. ಲಿ. ರೂ. 7-50 220 ಮಿ. ಲಿ. ರೂ. 3-00

ಬಾಣಂತಿಯರ ಪ್ರಸವಾಯಾಸವನ್ನು ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸಿ ಗತಶಕ್ತಿಯನ್ನು ಪುನರುದ್ದೀಪಿಸಿ ರಕ್ತಧಾತುವು ಅಭಿವೃದ್ಧಿಯಾಗಿ ಶಿಶುವಿಗೂ ಬೇಕಾದಷ್ಟು ಹಾಲು ಸಿಕ್ಕುವಂತೆ ಮಾಡುವ ದಿವ್ಯ ಔಷಧಿ.

ಎಂ. ಗಣಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ಮಂಗಳೂರು-1

ಪೋಸ್ಟ್ ಮುಖಾಂತರ ಔಷಧಿ ಬೇಕಾದವರು ಅಡ್ವಾನ್ಸ್ ರೂಪಾಯಿ 3-00 ನ್ನು M. O. ಮೂಲಕ ಕಳಿಸಬೇಕು.

— ಔಷಧಿ ಸಿಗುವ ಸ್ಥಳ —

1 ನ್ಯೂ ಕೆನರಾ ಜನರಲ್ ಸ್ಟೋರ್ಸ್
ವ್ಹಿಕ್ಟೋರಿಯಾ ಗಾರ್ಡನ್ ರೋಡ್, ಬೈಖಳಾ-ಮುಂಬಯಿ
2 ಕೆನರಾ ಸ್ಟೋರ್ಸ್
352, ಭಂಡಾರ್ಕಾರ್ ರೋಡ್, ಮಾತುಂಗಾ-ಮುಂಬಯಿ

Deepavali Greetings

SRINIVAS BROTHERS

CAR STREET

Grams: **ACTIVE** *P.B.No.* **130** *Phone*: **3449**

MANGALORE-1

Distributors for Mysore State for–

SESHASAYEE
PAPER & BOARDS LTD.
Pallipalayam (Selam Dist.)

Agents for South Kanara for–

- △ BAMBOO BRAND PAPERS
- △ TITAGHUR PAPERS
- △ J.B.A. PRINTING INKS
- △ JAYKAY TYPEWRITERS
- △ BRIL WRITING INKS

ಬಟ್ಟೆಗಳ ಬಗ್ಗೆ ಒಂದು ಮಾತು...

ಆಧುನಿಕ ಮಾದರಿಯ ಉಡುಪುಗಳನ್ನು ನೋಡಿದಾಗ ಕೇವಲ ಅವು 'ಫ್ಯಾಶನ್'ಗಾಗಿ ಅಂದರೆ ಅಸಮಂಜಸವಾಗದೇ ಇರದು. ಅದರ ನೈಜತೆಯನ್ನು ಪರಿಶೀಲಿಸಿದಾಗ ಅವು ಇಂದಿನ ವಾತಾವರಣಕ್ಕೆ ಅನುಗುಣವೂ, ಆವಶ್ಯಕವೂ ಆಗಿವೆ ಎಂಬ ಅರಿವು ಬಾರದೇ ಇರದು. ಕೇವಲ ಹತ್ತಿಯ ಬಟ್ಟೆಗಳನ್ನಷ್ಟೇ ತೊಡುವ ಕಾಲ ಒಂದಿತ್ತು. ಅಲ್ಲಿಂದ ಶಿಲ್ಕ, ಉಲನ್, ಟೆರಿಲೀನ್, ಟೆರೀನ್, ಟೆರಿಕಾಟ್, ಇತ್ಯಾದಿ ವಸ್ತ್ರಗಳ ವರ್ಗೀಕರಣವಾಯಿತು. ಸ್ತ್ರೀಯರಿಗಾಗಲೀ, ಪುರುಷರಿಗಾಗಲೀ ಇವು ಧರಿಸಲು ಅತಿ ಹಗುರು–ಸುಂದರ–ಸೊಗಸಾಗಿರುವವಲ್ಲದೇ, ಸ್ವಚ್ಛಗೊಳಿಸಲು ಅತಿ ಸುಲಭ ಆದರೆ ಅವುಗಳನ್ನು ಕೊಳ್ಳುವಾಗ ಮಾತ್ರ ಕೃತ್ರಿಮತೆಗೆ ಮಾರು ಹೋಗದೇ ಜಾಣರಾಗಿ ಆಯ್ಕೆ ಮಾಡಿರಿ !"

ಉದಯ

ವಿಕ್ಟೋರಿಯಾ ರೋಡ್
ಹುಬ್ಬಳ್ಳಿ. ಫೋನ 4003

'ಟೆರಿಕಾಟ್ ◊ ಕಾಟನ್ ◊ ಟೆರಿಲಿನ್'

— ವಸ್ತ್ರಗಳ ಆಧುನಿಕ ಕೇಂದ್ರ —

ನಮ್ಮ ಗ್ರಾಹಕರಿಗೆ ದೀಪಾವಳಿಯ ಅಭಿನಂದನೆಗಳು !

EXPRESS SERVICES

ರೈಲು ಪ್ರಯಾಣಿಕರಿಗೆ ಪ್ರಯಾಸವಿಲ್ಲದ ಪ್ರವಾಸ ಸೌಕರ್ಯ

ಹರಿಹರ— ಉಡುಪಿ ಮತ್ತು ಉಡುಪಿ—ಹರಿಹರ ಸರ್ವೀಸ್‌ಗಳ ನೇರ ಸಾರಿಗೆಯ ವ್ಯವಸ್ಥೆ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಉಡುಪಿ. ಕುಂದಾಪುರ ಕಡೆಗಳಿಂದ ಬೊಂಬಾಯಿ, ಪೂನಾ, ಬೆಳಗಾವಿ. ಗೋವಾ ಧಾರವಾಡ, ಹುಬ್ಬಳ್ಳಿ ಕಡೆಗೆ ಹೋಗುವವರಿಗೂ ಮತ್ತು ಬೊಂಬಾಯಿ, ಪೂನಾ ಕಡೆಗಳಿಂದ ಬರುವ ರೇಲ್ವೆ ಪ್ರಯಾಣಿಕರ ಸೌಕರ್ಯಕ್ಕಾಗಿ ಎಲ್ಲಿಯೂ ಬದಲಾವಣೆ ಮಾಡದೆ, ನೇರವಾಗಿ ಹರಿಹರದಿಂದ ಉಡುಪಿಗೂ ಮತ್ತು ಉಡುಪಿಯಿಂದ ಹೊರಟವರಿಗೆ ಸೀದಾ ಹರಿಹರಕ್ಕೆ ಟ್ರೈನ್ ಟೈಮಿಗೆ ಅನುಕೂಲವಾಗಿ ತಲುಪುವಂತೆ ಏರ್ಪಾಡು ಮಾಡಿರುತ್ತದೆ.

ಈ ಮೋಟಾರ್ ಸಾರಿಗೆಯ ಅನುಕೂಲತೆ ಸೌಲಭ್ಯವನ್ನು ಪ್ರಯಾಣಿಕ ಮಹಾಜನರು ಸದುಪಯೋಗ ಮಾಡಿಕೊಂಡು ನಮ್ಮನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಸುತ್ತೇವೆ.

ವ್ಯವಸ್ಥಾಪಕರು
Huthesha Motor Services

ದೀಪಾವಳಿ
ಶುಭಾಶಯಗಳು

ಶಾರದಾ ಪ್ರೆಸ್

ಮಾಲಕರು : ದಿ. ಮಂಗಳೂರ ಟ್ರೇಡಿಂಗ್
ಎಸೊಸಿಯೇಶನ್ (ಪ್ರಾ. ವೇಟ್) ಲಿಮಿಟೆಡ್

ಮುದ್ರಕರು ಹಾಗೂ ಪ್ರಕಾಶಕರು

ರಥಬೀದಿ, ಮಂಗಳೂರು–೧

ದೀಪಾವಳಿಯ ಶುಭಾಶಯಗಳು

ದಿ ಸಿ. ಕೆ. ಎಂ. ಎಸ್. ಲಿ.,

ಶಿವಮೊಗಾ

ಬೊಂಬಾಯಿ - ಪೂನಾ ಹುಬ್ಬಳ್ಳಿ ಕಡೆಯಿಂದ ಬರುವ ದಕ್ಷಿಣ ಕನ್ನಡ ಜಿಲ್ಲೆಯ ಪ್ರಯಾಣಿಕರು ಕುಂದಾಪುರ, ಕೋಟೇಶ್ವರ, ಸಾಲಿಗ್ರಾಮ, ಸಾಸ್ತಾನ, ಬ್ರಹ್ಮಾವರ, ಭದ್ರಗಿರಿ, ಉಡುಪಿಗೆ ಹೋಗುವವರು ಹರಿಹರದಿಂದ ಮೊದಲನೇ ಬಸ್ಸಿನಲ್ಲಿ ಬಂದು ಶಿವಮೊಗ್ಗಾದಿಂದಾ 10–20a.m.ನ ಬಸ್ಸಿನಲ್ಲಿ ಸುಖಕರವಾದ ಪ್ರಯಾಣವನು ಎಲ್ಲಿಯೂ ಬದಲಾವಣೆಯಿಲ್ಲದೆ ಮಾಡಿ ನಿರಾಯಾಸವಾಗಿ ತಮ್ಮ ತಮ್ಮ ಸ್ಥಳಗಳನ್ನು ಸಂಜೆಯ 5 ಘಂಟೆಯೊಳಗಾಗಿ ಸೇರಬಹುದು. ಪ್ರಯಾಣಿಕರು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ

ವಿನಂತಿ

* ಜೋಗ—ಮಂಗಳೂರು (ಎಕ್ಸಪ್ರೆಸ್)
* ಹರಿಹರ—ಆಗುಂಬೆ
* ಶಿವಮೊಗ್ಗಾ—ಶೃಂಗೇರಿ
* ಆಗುಂಬೆ—ಹರಿಹರ
* ಶಿವಮೊಗ್ಗಾ—ಕುಂದಾಪೂರ—ಭದ್ರಗಿರಿ
* ಶಿವಮೊಗ್ಗಾ—ತೀರ್ಥಹಳ್ಳಿ—ಕುಂದಾಪುರ—ಉಡುಪಿ
* ಶಿವಮೊಗ್ಗಾ—ಧರ್ಮಸ್ಥಳ—ಮಂಗಳೂರು
* ಶಿವಮೊಗ್ಗಾ—ಹರಿಹರ—ದಾವಣಗೆರೆ
* ಶಿವಮೊಗ್ಗಾ—ಭಟ್ಕಳ
* ಸಾಗರ—ಆನವಟ್ಟಿ
* ಸಾಗರ—ಎಣ್ಣೆಹೊಳೆ

—ವ್ಯವಸ್ಥಾಪಕರು.

A HAPPY AND PROSPEROUS DEEPAVALI

FOR ALL YOUR REQUIREMENTS IN GLASS & FURNITURE WORKS PLEASE VISIT



Dealers in: WINDOW GLASSES, DECORATED PLYWOOD, HARDBOARDS, PARTICLE BOARDS
TRIPLEX GLASS FOR MOTOR CARS & TRUCKS, Mfrs. OF MIRRORS ETC, IMPORT

The only reliable shop for prompt execution at moderate rates

PLEASE VISIT ONCE AND BE SATISFIED WITH FINE FINISH

Phone : 2848

Best Compliments from: **M/s K. T. BHUTE GLASS INDUSTRIES**
BHUTE GLASS TRADERS

Pan Bazar Cross Road
HUBLI

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ

ನಿಮ್ಮ ಪ್ರೀತಿ ವಿಶ್ವಾಸದ

THE TARANATH RASOUSHADHI WORKS (PRIVATE) LTD. CHICKMAGALUR

ಪರಿಚಯ ಗುರುತು

ಇಂದಿನ ಪೀಳಿಗೆಗೆ ಅವಶ್ಯಕ ಪೌಷ್ಟಿಕಗಳು

ಧಾತುಪುಷ್ಟಿಲೇಹ

ಮಾನವ ಶರೀರದ ರಸರಕ್ತಾದಿ ಸಪ್ತ ಧಾತು ವರ್ಧಕ. ಶಾರೀರಿಕ ಮಾನಸಿಕ ಅಶಕ್ತತೆಗಳನ್ನು ದೂರಮಾಡಿ ಶರೀರದ ಅಂಗಾಂಗಗಳಿಗೆ ಪುಷ್ಟಿ ಶಕ್ತಿ ಕೊಟ್ಟು ಸುಂದರ ರೂಪ ಕೊಡುತ್ತದೆ.

ಇದರಲ್ಲಿ ಮಕರಧ್ವಜ, ಅಭ್ರಕ ಲೋಹ ಭಸ್ಮಾದಿಗಳೂ ಸೇರಿವೆ.

ಅಶ್ವಗಂಧಾವಲೇಹ

ನಿಶ್ಶಕ್ತಿ. ಕೃಶತೆ, ಅತಿದಣಿವು, ನಿರುತ್ಸಾಹ, ನಿದ್ರಾನಾಶ, ಮೈಕೈ ನೋವು, ಅಕಾರಣ ಸೊರಗು ಹತ್ತುವದು. ಇತ್ಯಾದಿ ದೂರಪಡಿಸಿ, ಸಂಸಾರದಲ್ಲಿ ಆನಂದ, ಉತ್ಸಾಹವಿತ್ತು ನರಗಳ ಶಕ್ತಿವರ್ಧಿಸಿ ಪ್ರಕೃತಿಯನ್ನು ಸುದೃಢಪಡಿಸಲು ಶ್ರೇಷ್ಠ ಪೌಷ್ಟಿಕ.

ಚ್ಯವನಪ್ರಾಶ

ಉತ್ತಮ ಶಕ್ತಿ, ಬುದ್ಧಿ, ಸ್ಮೃತಿ ಕಾಂತಿ ಉಲ್ಲಾಸವರ್ಧಕ ಸಪ್ತಧಾತು ... ಕೋಶದ ವಿಕಾರ, ಹಳೇ ದಮ್ಮು, ... ವಾರ್ಧಕ್ಯ ದೂರಮಾಡಿ ಪುನ... ವಾಗಿ ಪ್ರಾಚೀನಕಾಲದಿಂದ ... ಸಿದ ಆಯುರ್ವೇದೀಯ ಉತ್ತಮ ಪೌಷ್ಟಿಕ.

— ತಯಾರಕರು —

ತಾರಾನಾಥ ರಸೌಷಧಿ ವರ್ಕ್ಸ್ (ಪ್ರೈ) ಲಿಮಿಟೆಡ್ ಚಿಕ್ಕಮಗಳೂರ

ನಮ್ಮ ಗ್ರಾಹಕರಿಗೂ ಹಿತೈಷಿಗಳಿಗೂ ದೀಪಾವಳಿಯ ಶುಭಾಶಯಗಳು

— ದೀಪಾವಳಿಯು ಸರ್ವರಿಗೂ ಮಂಗಲಕರವಾಗಲಿ —

ಅಖಂಡ ಕರ್ನಾಟಕದಲ್ಲಿ ಜನಾನುರಾಗ ಪಡೆದು ಉತ್ಕೃಷ್ಟವೆಂದು ಹೆಸರುಗಳಿಸಿದ

ಎ. ರಹಮಾನ ಬೀಡಿಗಳು

ನಿಮ್ಮ ಸೇವಸಿಗೆ ಉತ್ತಮವಾಗಿವೆ ಅಲ್ಲದೆ ನಮ್ಮೆಲ್ಲ ಗ್ರಾಹಕರೂ ಆದರಿಂದ ನೀಡುವ ಹೆಚ್ಚಿನ ಪ್ರೋತ್ಸಾಹವನ್ನು ಕೋರುತ್ತೇವೆ.

— ಕಾರಖಾನೆಗಳು —

ಧಾರವಾಡ ◈ ಹುಬ್ಬಳ್ಳಿ ◈ ರಾಣೇಬೆನ್ನೂರ

— ತಯಾರಕರು —

ಎಚ್. ಎಂ. ದಾಸನಕೊಪ್ಪ ಆ್ಯಂಡ ಸನ್ಸ

ಧಾರವಾಡ

ಹೊಸ ದೀಪಾವಳಿಯು ನಾಡಿನ ಸರ್ವಾಂಗೀಣ ಪ್ರಗತಿಗೆ ತನ್ನ ಪ್ರಕಾಶವನ್ನು ಬೀರಲಿ!

Tel } SHIVASHANKAR OR SHAMANURCO

Phones { Mils : 434 · Office : 116 · Res : 42

ಶ್ರೀ ಕಲ್ಲೇಶ್ವರ ಇಂಡಸ್ಟ್ರೀಸ್

ಅಕ್ಕಿ ಮತ್ತು ಬೇಳೆ ಗಿರಣಿ ಮಾಲೀಕರು

ಹಾಗೂ

ಎಲ್ಲಾ ನಮೂನೆಯ ಬೇಳೆಗಳ ತಯಾರಕರು

ದಾವಣಗೆರೆ

- ಪಾರ್ಟನರ್ -

ಶ್ಯಾಮನೂರು ಶಿವಶಂಕರಪ್ಪ

ಶ್ಯಾಮನೂರು ಕಲ್ಲೇಶಪ್ಪ

ಎಲ್ಲಾ ಬಗೆಯ ಭತ್ತವನ್ನು ನ್ಯಾಯವಾದ ಬೆಲೆಯಲ್ಲಿ ಅಕ್ಕಿ ಮಾಡಿಕೊಡುತ್ತೇವೆ.

ಇಂದೇ ನಮ್ಮ ಗಿರಣಿಗೆ ಸಂದರ್ಶಿಸಿರಿ.

ದೀಪಾವಳಿಯ ಶುಭಾಶಯಗಳು

ದಾವಣಗೆರೆ ತಾಲ್ಲೂಕ್ ಕೃಷಿ ಉತ್ಪನ್ನ ಸಾಮಾನುಗಳ ಮಾರಾಟದ ಸಹಕಾರ ಸಂಘ ಲಿಮಿಟೆಡ್

ಪೋಸ್ಟ್‌ಬಾಕ್ಸ್ ನಂ : 68 ಫೋನ್ : 278

ದಾವಣಗೆರೆ ಸಿಟಿ

ಗೊಬ್ಬರ, ಕಬ್ಬಿಣ, ಸಿಮೆಂಟ್ ಮುಂತಾದ ಮಾಲುಗಳ ಮಾರಾಟಗಾರರು. ಮತ್ತು ಕೃಷಿ ಉತ್ಪನ್ನ ಮಾಲುಗಳ ದಲ್ಲಾಲರು.

ಅಧಿಕ ಉತ್ಪಾದನೆಗೆ ಖ್ಯಾತಿ ಹೊಂದಿರುವ

ಹಾಗೂ

ಸಹಸ್ರಾರು ರೈತಭಾಂಧವರು ಉಪಯೋಗಿಸಿ ಮನಗಂಡಿರುವ

'ಶಿವ' ಗುರ್ತಿನ ಮಿಶ್ರಣ ಗೊಬ್ಬರಗಳ ತಯಾರಕರು

ಸಹಕಾರಿ ಕ್ಷೇತ್ರದ ಸದೃಢ ಸಂಸ್ಥೆ—ಇಂದೇ ಭೇಟಿಕೊಡಿ

ನಮ್ಮ ಗ್ರಾಹಕರಿಗೆ ದೀಪಾವಳಿಯ ಅಭಿನಂದನೆಗಳು

PHONE : 13 ನಿಮ್ಮ ಊರಿನ ಪ್ರಮುಖ ಕಿರಾಣಿ ಅಂಗಡಿಕಾರರಲ್ಲಿ GRAMS: PAISONS

ಪ್ರಖ್ಯಾತನಾದ ಪೈಸನ್ಸ್ ಕಾಫಿ

ಏಅರಟಾಯಿಟ್ ಟಿನ್ನುಗಳಲ್ಲಿ ದೊರೆಯುತ್ತದೆ

8, 11 ಕೆ. ಜಿ. ಗಳ ಮತ್ತು **100** ಗ್ರಾಮ್ಸುಗಳಲ್ಲಿ **1** ಕೆ. ಜಿ. **2** ಕೆ. ಜಿ. ಗಳಲ್ಲಿ ಗಾಳಿ ಸೋಂಕದ ಪೊಲಿಥಿನ್ ಕವರುಗಳಲ್ಲಿಯೂ ದೊರೆಯುತ್ತವೆ.

PAISONS COFFEE

MANUFACTURING COMPANY (Regd

P. O. Box No. 13

CHIKMAGALUR

Phone : 348 P. B. No. 20

VIJAYA TRADERS

AUTOMOBILE SPECIALISTS

B. H. ROAD **SHIMOGA**

Dealers

Genuine **PERKINS P6** Parts, **S.R.M.T.** Auto parts, **EXIDE** Batteries, **PAYEN** Gaskets, **SUPER SEAL** Oil seals, **HEPOLITE** Piston & Rings, **LOCK HEED** Brake parts, **CAREX** Auto parts, **DONFLEX & LUK** clutch Discs etc.

BANGALORE BRANCH: PHONE : **22890**

AT 18, 19, JAYACHAMARAJ ROAD
BANGALORE-2

ನಮ್ಮ ಗ್ರಾಹಕವೃಂದಕ್ಕೆಲ್ಲ ದೀಪಾವಳಿಯು ಸುಖಪ್ರದವಾಗಲಿ !

Triveni Handloom Work

ICHALKARANJI (Kolhapur)

ಅಲ್ಪಾವಧಿಯಲ್ಲಿಯೇ
ಕನ್ನಡನಾಡಿನ ಮನೆಮಾತಾಗಿರುವ

ತ್ರಿವೇಣಿ ಪತ್ತಲಗಳು

ನಯನ-ಮನೋಹರವಾದ ಗ್ಯಾರಂಟಿ ಬಣ್ಣದ
ಭರಪೂರ ಉದ್ದಳತೆಯ
80X80 60X60, 80X60 ರ
ಪೇನ ಪತ್ತಲಗಳ ಸ್ಪೆಶಾಲಿಸ್ಟರು

ತ್ರಿವೇಣಿ ಹ್ಯಾಂಡಲೂಮ್ ವರ್ಕ್

ಈಚಲಕರಂಜಿ (ಜಿ. ಕೊಲ್ಹಾಪೂರ)

ದೀಪಾವಳಿಯ ಶುಭಾಶಯಗಳು

ಮಲ್ಲೇಶ್ವರಂದಲ್ಲಿ "ಮನೆಮಾತಾಗಿರುವ"
ಉತ್ಕೃಷ್ಟ ಸುಸಜ್ಜಿತ ಊಟಉಪಹಾರಗೃಹ

ಹೋಟೆಲ್ ಗಾಯಿತ್ರಿ

8ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರ 3

ನಗರದ ಮಧ್ಯವರ್ತಿ ಪ್ರದೇಶದಲ್ಲಿದೆ
ಆತ್ಮೀಯ ಸತ್ಕಾರವನ್ನು ಸವಿಯಲು
ಇಂದೇ ಭೇಟಿ ಕೊಡಿ

ವ್ಯವಸ್ಥಾಪಕರು

ಈ ದೀಪಾವಳಿಯ ಶುಭಸಮಯದಲ್ಲಿ ನಮ್ಮೆಲ್ಲ ಗ್ರಾಹಕರಿಗೂ ಹಿತಚಿಂತಕರಿಗೂ ಸುಖ-ಸಮೃದ್ಧಿ ದೊರಕಲಿ !

ನಮ್ಮ ವಿಶೇಷ ಪ್ರಸಿದ್ಧ ಉತ್ಪಾದನೆಗಳು

- ಯುನಿವರ್ಸಲ್ ಬೆಂಚ್ ರೇಡಿಯಲ್ ಡ್ರಿಲ್ಲಿಂಗ ಮತ್ತು ಮಿಲ್ಲಿಂಗ್ ಮಶಿನ್ (೩/೪ ಇಂಚು ಕ್ಯಾಪ್ಯಾಸಿಟಿ)
- ೩ತ್ರಿ ಇಂಚು ಪ್ರಕಾಶ ಸೆಂಟರ ಲೇಥ
- ಗ್ರೀಸ್ ಗನ್ನ
- ಸರಫೇಸ ಗ್ರೈಂಡಿಂಗ್ ಮಶಿನ್
- ಹೇವಿ ಡ್ಯೂಟಿ ಪಂಚಿಂಗ ಮಶಿನ್

ಪ್ರಕಾಶ ಹೋಮ ಇಂಡಸ್ಟ್ರೀಜ

೩, ಇಂಡಿಪೆಂಡೆನ್ಸ ರೋಡ
ಕಾಂಟೋನ್‌ಮೆಂಟ
ಬೆಳಗಾವಿ

ದೀಪಾವಳಿಯ ಶುಭಾಶಯಗಳು

ತಂತಿ :- ಫೋಟೋ ಹೌಸ್ ಫೋನ :- 3353 EXTN

ಪ್ರಭಾತ ಫೋಟೋ ಆರ್ಟ ಸ್ಟುಡಿಯೊ

ಟ್ರಾಯಕಲರ್ ಪ್ರೊಸೆಸ್ಸಿಂಗ್ ಸೆಂಟರ
ದಾಜಿಬಾನ ಪೇಟ—ಹುಬ್ಬಳ್ಳಿ

ನಮ್ಮಲ್ಲಿ

ಟ್ರಾಯಕಲರ್, ಟೆಕ್ನಿಕಲರ್, ಲೈನ & ಹಾಫ್‌ಟೋನ (ಪಡಿಯಚ್ಚು) ಬ್ಲಾಕುಗಳನ್ನು ಅತ್ಯುತ್ತಮವಾಗಿ ಅತಿಯೋಗ್ಯ ಬೆಲೆಗೆ ವೇಳೆಗೆ ಸರಿಯಾಗಿ ತಯಾರಿಸಿಕೊಡುತ್ತೇವೆ.

ಇಂದೇ ಸಂದರ್ಶಿಸಿರಿ

ದೀಪಾವಳಿಯ ಹಾರ್ದಿಕ ಶುಭಾಶಯಗಳು !

"ಧಾರವಾಡ" ಆಯಿಲ್ ಕೂಲ್ಡ ಆರ್ಕವೆಲ್ಡಿಂಗ ಟ್ರಾನ್ಸಫಾರ್ಮರಗಳು ೧೫೦, ೨೦೦, ೨೫೦, ೩೦೦ ಮತ್ತು ೪೦೦ ಆ್ಯಂಪುಗಳ ಸೈಜುಗಳಲ್ಲಿ

ತಯಾರಿ ಸಂಗ್ರಹದಿಂದ ಲಭ್ಯವಿದೆ ಇಲ್ಲವೆ ೮-೧೦ ದಿನಗಳಲ್ಲಿ ಪೂರೈಸಲಾಗುವದು !

ಧಾರವಾಡ ಆರ್ಕವೆಲ್ಡಿಂಗ ಟ್ರಾನ್ಸಫಾರ್ಮರಗಳು

— ಹೊಸ ಮಾಡಲ್‌ಗಳು ಇಳಿಸಿದ ಬೆಲೆಗಳಲ್ಲಿ —



ISS 1851 (Part 1)/1961ಕ್ಕೆ ಅನುವರ್ತಿಸಿ ಸಿದ್ಧಗೊಳಿಸಲಾಗಿದು ಉತ್ಪಾದನಾ ನೂತನತೆಯ ಸಂಬಂಧದಲ್ಲಿ ಒಂದು ವರ್ಷದ ಗ್ಯಾರಂಟಿಯನ್ನು ಕೊಡಲಾಗುತ್ತದೆ. ಅವುಗಳು ಡಿ.ಜಿ.ಎಸ್.ಡಿ. ಯವರಿಂದ ಸ್ವೀಕೃತವಾಗಿದ್ದು, ಸಂರಕ್ಷಣೆ ಖಾತೆ, ಸರಕಾರಿ ಪೋಲಿಟೆಕ್ನಿಕ್, ಕೈಕಸಬು ತರಬೇತಿ ಕೇಂದ್ರಗಳು, ಕೊಲ್ಪಿರೀಸ್, ರಾಷ್ಟ್ರೀಯ ಸಣ್ಣಉದ್ದಿಮೆಗಳ ಕಾರ್ಪೋರೇಶನ್ ಮತ್ತು ಹಲವಾರು ಸಣ್ಣಪ್ರಮಾಣದ ಉದ್ದಿಮೆಗಳಿಗೆ ಪೂರೈಸಲಾಗುತ್ತದೆ.

ತಯಾರಕರು :

ದಿ ಧಾರವಾಡ ಇಲೆಕ್ಟ್ರಿಕಲ್ ಇಂಡಸ್ಟ್ರೀಜ ಲಿ., ಧಾರವಾಡ

ದೀಪಾವಳಿಯ ಶುಭಾಶಯಗಳು

ಪ್ರತಿ ಗೃಹಿಣಿಯ ಆಯ್ಕೆ

೧. ರುಚಿಕರವಾದ ಭಕ್ಷ್ಯ ಭೋಜ್ಯಗಳನು ತಯಾರಿಸಲು ವಿಟಮಿನ್ ಎ. ಡಿ. ಗಳಿಂದ ಕೂಡಿದ **'ರವಿ ವನಸ್ಪತಿ'** ಉತ್ತಮವಾಮದು.

೨ ವಿವಿಧ ರುಚಿಯ ತಿಂಡಿ ತಿನಸುಗಳ ಸುಲಭ ತಯಾರಿಕೆಗೂ ಮತ್ತು ಉಳಿತಾಯಕ್ಕೂ **'ಬೃಂದಾವನ'** ರಿಫೈನ್ಡ್ ಆಯಿಲ್ ಅತ್ಯುತ್ತಮವಾದುದು

೩ ಅಲ್ಪ ಶ್ರಮದಿಂದ ಅತ್ಯುಜ್ವಲ ಬಟ್ಟೆಗಳ ಹೊಳವೆಗೆ **'ಆರ್. ಎಚ್. ರವರ ಸಾಬೂನಿನ'** ಉಪಯೋಗವೇ ಮುಖ್ಯ ಕಾರಣ.

ತಯಾರಕರು

ರವಿ ವೆಜಿಟೇಬಲ್ ಆಯಿಲ್ ಇಂಡಸ್ಟ್ರೀಸ್, ದಾವಣಗೆರೆ

ದೀಪಾವಳಿಯ ಶುಭಾಶಯಗಳು

ಶ್ರೀ ವೆಂಕಟೇಶ ಭವನ

ಬಿ. ಹೆಚ್.ರೋಡ್, ಭದ್ರಾವತಿ

ಶ್ರೀ ದುರ್ಗಾ ಲಾಡ್ಜ್

ಬಿ. ಹೆಚ್. ರೋಡ್ ಶಿವಮೊಗ್ಗ

ಅತ್ಯುತ್ತಮ ಕಾಫಿ, ತಿಂಡಿ, ಮತ್ತು ಊಟ ಹಾಗೂ ವಸತಿಗೆ ಹೆಸರಾಂತ ಹೋಟೆಲ್

ಪ್ರೊ : ಎಸ್. ಅಡಿಗ

ಪ್ರೊಪ್ರೈಟರ್ಸ್
ರೆಸ್ಟೋರೆಂಟ್ ವಿಭಾಗ : ಎಸ್. ಅಡಿಗ
ಬೋರ್ಡಿಂಗ್ ವಿಭಾಗ : ಎಸ್. ವಿ. ಭಟ್

With Best Compliments from:

CANARA JEWELLERS

Hampanakatta, MANGALORE

Phone: 6030

Airconditioned Show-Room

PALKE INDUSTRIES

Ganapathi High School Road,

MANGALORE

Phone: 5544

Manufacturers of

FURNITURES

Steel and Wood

Palke's SOFA - CUM - BED

M. B. TEXTILE CENTRE

HAMPANKATTA

MANGALORE

Phone: 4721

we wish you Happy Deepavali

ದೇಸಾಯಿ ಮತ್ತು ಕಂಪನಿ, ಹುಬ್ಬಳ್ಳಿ

ಶಾಖೆಗಳು:

ಬೆಳಗಾವಿ ಮತ್ತು ವಿಜಾಪೂರ

ಅಧಿಕೃತ ಡೀಲರರು:

ಮ್ಯಾಸ್ಸಿ–ಫರ್ಗುಸನ್ ಟ್ರ್ಯಾಕ್ಟರುಗಳು

ಹಾಗೂ ಉಪಕರಣಗಳು

ವರ್ದಿಂಗ್ಟನ್ ಸಿಂಪ್ಸನ್ ಮೊನೊಬ್ಲಾಕ್

ಇಲೆಕ್ಟ್ರಿಕ್ ಪಂಪ ಸೆಟ್‌ಗಳು

ಮೋಟಾರ ಟಾಯರ, ಟ್ಯೂಬ ಬ್ಯಾಟರಿ

ಹಾಗೂ ಬಿಡಿ ಭಾಗಗಳ ಸಂಗ್ರಾಹಕರು

ಸಾಯಕಲ್‌ಗಳು ಹಾಗೂ

ಬಿಡಿ ಭಾಗಗಳ ಡೀಲರರು

ಬರ್ಮಾಶೆಲ್ ಬರಶೇನದ ಏಜಂಟರು

Deepavali Greetings From:

DESAI AND COMPANY

HUBLI, BELGAUM

and BIJAPUR

ದೀಪಾವಳಿಯು ಸರ್ವರಿಗೂ

ಮಂಗಲದಾಯಕವಾಗಲಿ !

ಜನಸಂಖ್ಯೆ ಹೆಚ್ಚುತ್ತಿದೆ, ಅದರಂತೆ ಹೆಚ್ಚು ಆಹಾರವನ್ನೂ ಬೆಳೆಯಬೇಕು ಈ ಸಮಸ್ಯೆಗೆ ಪರಿಹಾರವೆಂದರೆ ಜಿ.ಇ.ಎಫ್. ಪಂಪ್‌ಸೆಟ್ಟು



ಮಳೆನೀರಿಗಾಗಿಯೇ ಕಾದು ನಿರಾಶೆ ಹೊಂದುವ ಕಾಲ ಆಗಿಹೋಯಿತು. ಈಗ ಜಿ.ಇ.ಎಫ್. ಪಂಪ್‌ಸೆಟ್ಟು ಬೇಕಾದಷ್ಟು ನೀರನ್ನು ಬೇಕಾದಾಗ ಸರಬರಾಜು ಮಾಡುತ್ತದೆ. ಆದುದರಿಂದ ಒಳ್ಳೆಯ ಫಸಲನ್ನು ಬೆಳೆದು ಮನೆಮಂದಿಗೆಲ್ಲಾ ಆಹಾರವನ್ನು ಒದಗಿಸಬಹುದು.

ಜಿ.ಇ.ಎಫ್. ಪಂಪ್‌ಸೆಟ್ಟನ್ನು ನಡೆಸುವುದು ಸುಲಭ ಮತ್ತು ಮಿತವ್ಯಯಕರ ಅದರ ರಚನೆ ಬಲವಾಗಿರುವುದರಿಂದ ಯಾವ ತೊಂದರೆಯೂ ಇಲ್ಲದೆ ದೀರ್ಘಕಾಲ ಬಾಳಿಕೆ ಬರುತ್ತವೆ.

GEF

ತಯಾರಕರು:

ಗವರ್ನ್‌ಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ

ಮೈಸೂರು ರೋಡ್, ಬೆಂಗಳೂರು-26.

ಸೋಲ್ ಡಿಸ್ಟ್ರಿಬ್ಯೂಟರುಗಳು:

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

ಪೋಸ್ಟ್ ಬ್ಯಾಗ್ ನಂ. 3, ಮೈಸೂರು ರೋಡ್, ಬೆಂಗಳೂರು-26

m

THE MYSORE IRON AND STEEL LIMITED. BHADRAVATI

The following SPECIAL QUALITY STEELS are manufactured by us technical Collaboration with

M/s. Bohlers of Austria

1. Unalloyed case hardening steels	EN 2, EN 32, EN 32C, EN 3
2. Unalloyed steels for hardening and tempering and Tools	EN 4, EN 5, EN 6, EN 8, EN 9, EN 42, EN 43, & EN 44.
3. Alloyed (Manganese and Chromium grades) steels for case hardening	15 Cr. 5, 16 Mn. Cr 5, 20 Mn. Cr. 5, 25 Cr Mo 40.
4. Spring Steels	46 Mn 7, EN 45, EN 46, EN 45A
5. Free cutting steels	

Sections: (all in millimetres)
Round: 40, 42, 50, 52, 53, 60, 63, 70, 73, 80, 83.
Square: 40 to 49, 50 to 55, 80 to 85
Billets: 50 to 54, 60 to 70.
Blooms: 100, 120, 125.

WISH YOU
A HAPPY DEEPAVALI

MANUFACTURERS OF:

PURE CHARCOAL PIG IRON, C. I. Pipes and Specials, C. I. Spun Pipes, Chamundi Brand Portland and Slag Cement, Mild Steel Sections such as Rounds, flats and squares, Cast Steel castings such as C. S. ridge bearings, C. S. wheels and Manganese steel castings of all description and sizes, Ferro-alloys like Ferro-silicon, Ferro chrome (High Carbon), Ferro-manganese (High carbon and low carbon), Silico-Manganese, Steel Structures-Trusses

ENQUIRIES SOLICITED

ಬೆಳಗಾವಿಗೆ ಬಂದಾಗ ತಪ್ಪದೇ ಸಂದರ್ಶಿಸಿರಿ.....

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ

★

ಪ್ರೊಪ್ರಾಯಿಟರ್
ವ್ಹಿ.ಎನ್.ಪೈ

'ಸುವರ್ಣ ಮಂದಿರ'
ಖಡೇ ಬಝಾರ,
ಫೋನ ನಂ. ೨೮೨

★

'ಸುಖ ನಿವಾಸ'
ಸೆಂಟ್ರಲ್ ಬಸ್‌ಸ್ಟ್ಯಾಂಡ
ಫೋನ ನಂ. ೬೫೬

'ಕೃಷ್ಣಾ ಕೆಫೆ'
ಬೋರ್ಡಿಂಗ್
ಮತ್ತು ಲಾಜಿಂಗ್
ಖಡೇ ಬಝಾರ
ಫೋನ ನಂ. ೧೬೦

'ಹೊಟೆಲ್ ಸುವರ್ಣ ಮಂದಿರ'
ಲಾಜಿಂಗ್-ಬೋರ್ಡಿಂಗ್
Airy Rooms with attached bath
ಬಿಚ್ಚು ಬಿಲ್ಡಿಂಗ್ :: ಖಡೇ ಬಝಾರ
ಫೋನ ನಂ. ೧೦೩೨

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ

Tel : BANTVALKAR Phone : 393 Res : 297

ಬಿ. ಜನಾರ್ಧನ ಪ್ರಭು
ವರ್ತಕರು ಕಮೀಶನ್ ಏಜಂಟರು ಹಾಗು ಸಾರಿಗೆ ಕಂಟ್ರಾಕ್ಟರರು
ಸಂತೆಪೇಟೆ....ಹಾಸನ....(ಮೈಸೂರು ರಾಜ್ಯ)

ಗೀತಾ ಲಾರೀ ಟ್ರಾನ್ಸಪೋರ್ಟ
ಮಂಗಳೂರ-ಮುಂಬಯಿ ನಡುವೆ ನೇರ ಸರ್ವೀಸ್
ಗೋವಾ-ಬೆಂಗಳೂರ ನಡುವೆ ನೇರ ಸರ್ವೀಸ್
ಡೀಲರರು : ಸೋವರಿನ್ ಬ್ರ್ಯಾಂಡ ಹಂಚುಗಳು

Tel : BANTVALKAR Phone : 393 Res : 297

B. Janardhan Prabhu
Merchant & Transport Contractor
Santhepet : HASSAN

GEETHA Lorry Transport
Direct Services Between Mysore, Maharashtra, Andhra Kerala & Madras States
Dealers in 'SOVEREIGN' Brand Roofing Tiles

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ!

ತ್ರಿವೇಣಿ ಕ್ಲಾಥ ಸ್ಟೋರ

ದಾಜಿಬಾನ ಪೇಟ, ಹುಬ್ಬಳ್ಳಿ.

ನವನಾಗರಿಕತೆಗೆ ಒಪ್ಪುವ ಮನಮೋಹಕ ಸೀರೆಗಳ ಮತ್ತು ಬಟ್ಟೆಯ ವ್ಯಾಪಾರಿಗಳು

ಪ್ರೊ : M. ಜಾಬಿ, S. ಜರತಾರಫುರ & ಕಂಪನಿ
ಜವಳಿಸಾಲ, ಹುಬ್ಬಳ್ಳಿ

ದೀಪಾವಳಿಯ ಶುಭಾಶಯಗಳು

ಮಫತಲಾಲ ಗ್ರುಪ್

ಪ್ರತಿಯೊಂದು ಜಿಲ್ಲೆಯಲ್ಲಿ ನಮ್ಮ ಆರ್ಡರ್ ಕ್ಯಾನ್‌ವ್ಹಾಸ್ ಮಾಡಲು
ಕಮೀಶನ್ ಮೇಲೆ ಏಜೆಂಟರು ಬೇಕಾಗಿದ್ದಾರೆ !

ವಿವರಗಳಿಗೆ ಇಂದೇ 15 ಪೈಸೆ ಸ್ಟ್ಯಾಂಪಿಟ್ಟು ಬರೆಯಿರಿ !

ಕ್ಲಿಕ್ & ಕಂಪನಿ
Phone : 73307

2 ರೆಸಿಡೆನ್ಸಿ ರೋಡ್
ಬೆಂಗಳೂರು-25

ನಮ್ಮ ಮಾನ್ಯ ಪ್ರೋತ್ಸಾಹಕರಿಗೂ
ಹಿತೈಷಿಗಳಿಗೂ, ಸ್ನೇಹಿತರಿಗೂ
ದೀಪಾವಳಿ ಶುಭಾಶಯಗಳನ್ನು
ಕೋರುವರು !

GREENLINE MOTORS

SHIVAJI NAGAR, BELGAUM

DISTRIBUTORS FOR

DODGE—FIAT
VIKING TEMPO—VESPA
COMMERCIAL 3 WHEELERS

PHONES: 502 Show Room
702 Workshop
792 Extn. Parts Depot, Fort Road
2930 Branch HUBLI

DODGE
TRUCK

With

NEW
6—354 20 HP

BIG ECONOMY

STURDY
HEAVY
DEPENDABLE
POWERFULL

We
Wish
You
All
a



DIESEL ENGINE

Happy Deepavali

ATTRACTIVE HIRE—PURCHASE FACILITY

3—WHEELER TEMPO & VESPA
4—WHEELER TEMPO VIKING

IDEAL FOR: **STAFF CAR—DELIVERY VAN—STATION WAGON**
AMBULANCE—OMNI BUS—AUTORIKSHA—PICK-UP OIL TANKER

ದೀಪಾವಳಿಯ ಹಾರ್ದಿಕ ಅಭಿನಂದನೆಗಳೊಂದಿಗೆ



IAEC Aturia

SUBMERSIBLE ELECTRIC PUMP

helps solve water supply problem

Made of materials carefully chosen and appropriately varnished on the outside, IAEC ATURIA submersible pump resists corrosion and gives long service. Its compact size and robust construction make IAEC ATURIA an ideal pump for tunnels, tanks, reservoirs and masonry wells.

Capacity: 2 to 600 imp. G.P.M. and heads upto 1000 feet

Ratings: Suitable for wells 3′ and above

I.A.E.C.

Sold and serviced by

I.A.E.C. (MYSORE) PRIVATE LIMITED

54-55, Silver Jubilee Park Road, Bangalore City

Grams: "AGRICOLA" Telephone: 22245

A Happy Diwali to all our Patrons!

HOUSE WIVES *Delight*

Guaranteed Quality

"CROWN" & "SUN"

PURE ALUMINIUM THE CROWN

MYSORE PREMIER METAL FACTORY

DISTRIBUTORS:

KESHAVLAL & Co.

71, Narashimba Raja Road
BANGALORE-2

Grams: "ALUBRASCO" Phone: 23027

ನಂಬಿಕೆಯ ಚಿಕಿತ್ಸೆಯಿಂದ ನವಯೌವನ ಸಾಧ್ಯ!

ಇದಕ್ಕೆ ಹುಬ್ಬಳ್ಳಿಯಲ್ಲಿಯೇ ನಮ್ಮ ೪೦ ವರ್ಷಗಳಲ್ಲಿ ನಿರಾಶರಾದ ಸಾವಿರಾರು ಲೈಂಗಿಕ ರೋಗಗಳು ಗುಣಹೊಂದಿದ್ದೇ ಸಾಕ್ಷಿ. ತಾರುಣ್ಯಾವಸ್ಥೆಯಲ್ಲಿ ಸಫಲತೆ ಪಡೆಯಬೇಕಾದ ತರುಣರು ಅಜ್ಞಾನ ಮತ್ತು ದುಶ್ಚಟಗಳಿಂದ ತಾರುಣ್ಯ ಕಳೆದುಕೊಂಡು ಜಿಗುಪ್ಸೆ ಹೊಂದುತ್ತಾರೆ. ಇದಕ್ಕೆ ಆಂತರಿಕ ಹಾಗೂ ಬಹಿರಂಗ ೧೦–೧೨ ಪ್ರಕಾರದ ಯುನಾನಿ ಚಿಕಿತ್ಸೆಗಳು ಯೌವನ ಜೀವನಕ್ಕೆ ಸಫಲತೆ ಸಾಧ್ಯ. ತಾರುಣ್ಯ ನಾಶ, ನರಗಳ ದೌರ್ಬಲ್ಯ, ಅಕಾಲಮುಪ್ಪು, ಸ್ವಪ್ನಾವಸ್ಥೆ, ಧಾತು ಕ್ಷೀಣತೆ, ಮೂತ್ರದೋಷ, ರಕ್ತದೋಷ, ಮತ್ತು ಸ್ತ್ರೀಯರ ಎಲ್ಲ ಗುಪ್ತರೋಗಗಳನ್ನು ಗುಣಪಡಿಸುತ್ತೇವೆ. ಗುಪ್ತರೋಗದ ಚಿಕಿತ್ಸೆಯನ್ನು ರಹಸ್ಯವಾಗಿಡಲಾಗುವದು.

ವಿ. ಸೂ.—ಪರಸ್ಥಳಕರು ತಮ್ಮ ರೋಗದ ವಿವರ ತಿಳಿಸಿದರೆ ಔಷಧ ವ್ಹಿ. ಪಿ. ಮೂಲಕ ಕಳಿಸಲಾಗುವದು. ಉತ್ತರಕ್ಕೆ ೧೫ ಪೈಸೆ ಅಂಚೆ ತಿಕೀಟು ಇಟ್ಟಿರಬೇಕು.

ತಮ್ಮ ಆತ್ಮವಿಶ್ವಾಸಕ್ಕಾಗಿ

ಗುಣ ಹೊಂದಿದವರಿಂದ ಸತ್ಯಸಂಗತಿ ತಿಳಿಯಬಹುದು, ಮತ್ತು ಗುಣಹೊಂದಿ ಬರೆದುಕೊಟ್ಟ ಅಸಲಿ ಪ್ರಮಾಣ ಪತ್ರಗಳನ್ನು ನೋಡಬಹುದು. ನಮ್ಮ ಔಷಧದಲ್ಲಿ ಅನಿಷ್ಟಕಾರಕ ದ್ರವ್ಯಗಳು ಇರುವದಿಲ್ಲ.

ವ್ಯಾಧಿಗಳಲ್ಲಿ ಹೆಚ್ಚು ತ್ರಾಸಿನದು ಅಂದರೆ

ಮೂಲವ್ಯಾಧಿ

ಇದಕ್ಕೆ ೪೦ ವರ್ಷಗಳ ಅನುಭವಸಿದ್ಧ ಔಷಧ

ಮುಲಾದಿ
(Regd.)

ಇದು ಸರಕಾರದಲ್ಲಿ ರಜಿಸ್ಟರ್ ಆಗಿದೆ. ಆಪರೇಶನ್ ಇಲ್ಲ. ೨೦ ದಿನಗಳ ಪೂರ್ತಿ ಟ್ಯೂಬಿಗೆ ೧೦ ರೂ. ಅರ್ಧ ಹಣ ಮುಂಗಡ ಕಳಿಸಿದರೆ ವ್ಹಿ. ಪಿ. ಮಾಡಲಾಗುವದು.

(ಹೊಟ್ಟೆಯೊಳಗೆ ಕೊಡುವ ಔಷಧಕ್ಕೆ ಚಾರ್ಜ ಬೇರೆ).

ಭೆಟ್ಟಿಯ ವೇಳೆ—
ಮುಂ. ೯ ರಿಂದ ಮ. ೧ ಮತ್ತು
ಸಂಜೆ ೫ ರಿಂದ ರಾತ್ರಿ ೯ ರ ವರೆಗೆ.
ಫೋನ್ ನಂ. 2801

"ನವಜೀವನ ಡಿಸ್ಪೆನ್ಸರಿ"

ಡಾ. ಕೆ. ಎ. ಶೇಖ
ಮರಾಠಾಗಲ್ಲಿ ಹುಬ್ಬಳ್ಳಿ
(ಹುಣಸಿಗಿಡದ ಎದುರಿಗೆ ಅಟ್ಟದ ಮೇಲೆ)

ಕರ್ನಾಟಕ ಪ್ರಮುಖ ಕೇಂದ್ರಗಳಲ್ಲಿ



ಬೇಗನೆ ಬರಲಿದೆ!

ಶ್ರೀಕಾಂತ & ಶ್ರೀಕಾಂತ ಎಂಟರಪ್ರೈಸಸ್ ರವರ

ಮನಸ್ಸಿದ್ದರೆ ಮಾರ್ಗ

ತಾರಾಗಣ :— ರಾಜಕುಮಾರ, ರಾಜಾಶಂಕರ, ಜಯಂತಿ
ಅಶ್ವಥ್ ಮತ್ತು ನರಸಿಂಹರಾಜು

ಸಂಗೀತ ನಿರ್ದೇಶನ:
M. R. ವಿಠ್ಠಲ

ಸರ್ವರಿಗೂ ದೀಪಾವಳಿಯ ನಮ ಶುಭಾಶಯಗಳು

(ರಾಜಶ್ರೀ ಪಿಕ್ಚರ್ಸ್, ಹುಬ್ಬಳ್ಳಿ ರಿಲೀಜ)

Deepavali Greetings.....

SHAH STATIONERY MART

Dealers in:

- **PAPERS** AND
- **WEDDING & INVITATION CARDS**

221, AVENUE ROAD,
BANGALORE-2
Phone: **70114**

◆

DISTRIBUTORS:
RAINBOW PRINTING INKS

Deepavali Greetings to All the Dealers & Consumers

ALWAYS INSIST ON

NAYAK'S Products

DRINKS:
Coffee, Ragi malt, Kashayas

◆

CONDIMENTS:
Sambar, Rasam, Gharammasala, Chutni, Happalams and Pappa-ams

TOPS IN QUALITY

NAYAK INDUSTRIES
Nayak Bldgs., Car Street Cross Road
MANGALORE—S. India

SOLE DISTRIBUTORS:
H. MADHAVA NAYAK & Co.,
MANGALORE-1

ನಮ್ಮೆಲ್ಲ ಗ್ರಾಹಕರಿಗೆ ದೀಪಾವಳಿ ಸುಖಪ್ರದವಾಗಲಿ !

ಸೊಬಗಿನ ಬೀಡಾದ ಮೈಸೂರಿನ ಅತ್ಯುನ್ನತವಾದ ಬೆಟ್ಟಗಳಲ್ಲಿ
ಬೆಳೆದ ಮತ್ತು ಫ್ಯಾಕ್ಟರಿಯಲ್ಲಿ ಆಧುನಿಕ ರೀತಿಯಲ್ಲಿ
ಪ್ಯಾಕ್ ಮಾಡಲ್ಪಟ್ಟ ಪರಿಶುದ್ಧ ಹಾಗೂ
ಸರ್ವೋತ್ಕೃಷ್ಟ

ಮೈಸೂರು ಟೀ

M. T. S.

ಪಾರ್ಕಿನಿಂದ ಗ್ರಾಹಕರಿಗೆ ಪೂರೈಸಲು
ಅಭಿಮಾನ ಪಡುತ್ತೇವೆ.
ಇದು ನಮ್ಮ ಪ್ರಗತಿಯುದ್ಯೋತಕ

ಎಮ್. ಟಿ. ಎಸ್.

ಗೋಲ್ಡ್ ಮೆಡಲ್ ಟೀ

Tel : MYSORETEAS Phone : 33

THE MYSORE TEA SUPPLIES CO.
(Regd.)
AGENTS & EXPORTERS, CHILMAGALUR
(Mysore State)

ನಮ್ಮೆಲ್ಲ ಗ್ರಾಹಕರಿಗೆ ದೀಪಾವಳಿಯ
ಶುಭಾಶಯುಗಳ !

ನಮ್ಮಲ್ಲಿ
ಕನ್ನಡ, ಇಂಗ್ಲೀಷ, ಹಿಂದೀ ಅಕ್ಷರಗಳು
ತಯಾರಾಗುತ್ತವೆ.

ಮತ್ತು ಸಕಾಲದಲ್ಲಿ ಒದಗಿಸುತ್ತೇವೆ.
ಒಮ್ಮೆ ಆರ್ಡರ ಕೊಟ್ಟು ಪ್ರೋತ್ಸಾಹಿಸಿರಿ

ಬೆಂಗಳೂರು ಟೈಪ್ ಫೌಂಡ್ರಿ

ಸ್ಥಾಪನೆ: 1934
ಅರಳೇಪೇಟೆ, ಬೆಂಗಳೂರು-೨

ದೀಪಾವಳಿಯ ಶುಭಾಶಯುಗಳು

ಹ್ಯಾಂಡ್‌ಲೂಮ್ ಹೌಸ್
ಕೈಮಗ್ಗದ ಬಟ್ಟೆಗಳ ಭಂಡಾರ

ಒಂದೇ ವಸ್ತ್ರಾಗಾರದಲ್ಲಿ ಅನೇಕ
ವಿಧವಾದ ಹಾಗೂ ಆರಿಸಲ್ಪಟ್ಟ
ಅತ್ಯಂತ ಶ್ರೇಷ್ಠ ಸೀರೆಗಳು,
ಗೃಹೋಪಯೋಗಿ ಬಟ್ಟೆ ಹಾಗೂ
ಅಲಂಕರಣ ಬಟ್ಟೆಗಳು : ಅಲ್ಲದೆ
ಷರ್ಟುಗಳು, ಫ್ರಾಕುಗಳು,
ಉಡುಪುಗಳು ಮುಂತಾದವು.

ಹ್ಯಾಂಡಲೂಮ್ ಹೌಸ್
ಜಯಚಾಮರಾಜ ರೋಡ್
(ಟೌನ್‌ಹಾಲ್ ಎದುರು)
ಬೆಂಗಳೂರು-2 ಫೋನ್ : 7340

ದೀಪಾವಳಿಯ ಶುಭಾಶಯಗಳು....

ಬೆಳಗಾವಿಯಲ್ಲಿ ಆಹ್ಲಾದವನ್ನೀಯುವ

ಏಕಮೇವ ಹೋಟೆಲ

(ಆದರೆ ಮಿತವಾದ ದರಗಳು)

'ಸತ್ಕಾರ'

ವಸತಿ, ಭೋಜನ ಉಪಹಾರ, ತಂಪಾದ ಪಾನೀಯಗಳು

ಮಾರುತಿಗಲ್ಲಿ, ಬೆಳಗಾವಿ. ಫೋನ್ : 545

ಗ್ರಾಮೀಣ·ನಾರಿನ ಉದ್ಯಮ

ರಾಸ್ಪಾಡರ್

ಕತ್ತಾಳೆ ಪಟ್ಟೆಗಳನ್ನು ಕೆರೆದು
ನಾರು ತೆಗೆಯುವ ಹೊಸಯಂತ್ರಕ್ಕೆ
ರಾಸ್ಪಾಡರ್ ಎನ್ನುವರು.ಗ್ರಾಮೀಣ
ನಾರಿನ ಉದ್ಯಮದಲ್ಲಿ ಹೊಸ ಕ್ರಾಂತಿ
ಯನ್ನು ಈ ಚಿಕ್ಕ ಯಂತ್ರ ತಂದಿದೆ.

ರಾಸ್ಪಾಡರ್ ಯಂತ್ರವು ಸುಮಾರು
1500 ಹಸಿ ಕತ್ತಾಳೆ ಪಟ್ಟೆಗಳಿಂದ
25 ರಿಂದ 30 ಕೆ.ಜಿ. ನಾರನ್ನು
ಎಂಟು ಗಂಟೆಗಳಲ್ಲಿ ತೆಗೆಯುವ
ಸಾಮರ್ಥ್ಯವನ್ನು ಪಡೆದಿದೆ.

ಇದರ ಬೆಲೆ
ಕೇವಲ **500** ರೂ.



ಮೈಸೂರು ರಾಜ್ಯ ಖಾದಿ-ಗ್ರಾಮೋದ್ಯೋಗ ಮಂಡಲ

ದೀಪಾವಳಿಯು ನಮ್ಮೆಲ್ಲ ಗ್ರಾಹಕರಿಗೂ ಇಷ್ಟಮಿತ್ರರಿಗೂ ಶುಭದಾಯಕವಾಗಲಿ

ಹಾಸನಕ್ಕೆ ಆಗಮಿಸಿದಾಗ ಮರೆಯದೆ ಸಂದರ್ಶಿಸಿರಿ !

ಹೋಟೆಲ್ ಉಡ್‌ಲ್ಯಾಂಡ್ಸ್

Phone : 323

ಶ್ರೇಷ್ಠ ತರಗತಿಯ

ಊಟ, ಉಪಹಾರ ಮತ್ತು

ವಸತಿಗೃಹ

(ಕಾರ್ ಪಾರ್ಕಿಂಗ್ ವ್ಯವಸ್ಥೆ ಇದೆ !)

ಬಿ. ಎಂ. ರೋಡ್ — ಹಾಸನ

ಹೋಟೆಲ್ ಸುಧಾ

Phone : 385

ನೂತನವಾಗಿ ಪ್ರಾರಂಭವಾಗಿದೆ !

ಊಟ, ಉಪಹಾರ ಮತ್ತು

ವಸತಿಗೃಹ

ಸಂತೆಪೇಟೆ — ಹಾಸನ

ಚನ್ನರಾಯಪಟ್ಟಣಕ್ಕೆ

ಆಗಮಿಸಿದಾಗ ಸಂದರ್ಶಿಸಿರಿ!

ಬಸ್‌ಸ್ಟ್ಯಾಂಡ್

ಹೋಟೆಲ್

ಉತ್ತಮ ದರ್ಜೆಯ

ಊಟ ಮತ್ತು

ಫಲಾಹಾರ ಮಂದಿರ

ಮಾಲೀಕರು

K. S. ಬದ್ರಿನಾರಾಯಣರಾವ್ ಆ್ಯಂಡ್ ಬ್ರದರ್ ಮತ್ತು
B. ಸರ್ವೋತ್ತಮರಾವ್, ಹಾಸನ

ಸರ್ವರಿಗೂ ದೀಪಾವಳಿಯು ಸುಖದಾಯಕವಾಗಲಿ

ಹುಬಳಿ ಆಪ್ಟೀಸಿಯನ್ಸ

ದುರ್ಗದ–ಬೈಲ **ಹುಬ್ಬಳ್ಳಿ—೨೦**

ಫೋನ ನಂ ೨೪೧೦

ತಯಾರಕರು :

- ಕಂಚುಗಳ ಲೆನ್ಸ್‌ಗಳು
- ಕನ್ನಡಕಗಳ ಫ್ರೇಮುಗಳು

ಪೂರೈಕೆಗಾರರು:

- ಚಾನ್ಸ ಕ್ರೂಕ್ಸ ಲೆನ್ಸಗಳು (ಇಂಗ್ಲೀಷ) ಶ್ರೇಷ್ಠವಾದ ಸನ್-ಗ್ಲಾಸುಗಳು
- ಔರ ನಿವ್ರೋಫನ್ (ಜರ್ಮನ) ಆ್ಯಂಟಿಗ್ಲೇರ್ ಗ್ಲಾಸುಗಳು
- ಬೆಸ್ಟ-ಲೈಟ ಫೋಟೋಕ್ರಾಮಿಕ್ (U.S.A.) (ಸ್ಪೆಕ್ಟ್ಯ-ಕಮ್ ಗಾಗಲ್ ಲೆನ್ಸಗಳು)

ವೈಶಿಷ್ಟ್ಯತೆ

೧ ಸೂರ್ಯ ಬೆಳಕಿನಲ್ಲಿ ಪ್ರಕಾಶಹೀನವಾಗುತ್ತದೆ.
೨ ಸೂರ್ಯ ಬೆಳಕಿಲ್ಲದ ವೇಳೆಯಲ್ಲಿ ಸ್ವಚ್ಛ ಕಾಣಿಸುತದೆ ಇಲ್ಲವೇ ಸೂರ್ಯಾಸ್ತ ನಂತರ ಕಾಣಿಸುತ್ತದೆ.
೩ ಯಾವುದೇ ತರಹದ ಪಾವರದ ಅಗತ್ಯದಲ್ಲಿ— ವರ್ಣಸಾಮ್ಯ

ಕಾರಖಾನೆ ಉದ್ದಿಮೆನಗರ, ಹುಬ್ಬಳ್ಳಿ

ಫೋನ: ೨೫೭೩

ವಿ.ಸೂ: ನಮ್ಮ ತಜ್ಞ ಡಾಕ್ಟರರಿಂದ ನೇತ್ರ ಪರೀಕ್ಷೆ ಉಚಿತ ವೇಳೆ ಸಂ. ೬ ರಿಂದ ರಾತ್ರಿ ೮ ರ ವರೆಗೆ

IDEAL

ತ್ರಿವರ್ಣ (Tri-Colour Blocks)

ಪಡಿಯಚ್ಚುಗಳನ್ನು ತಯಾರಿಸುವ ಸಂಸ್ಥೆ !

ಕಳೆದ ಮೂವತ್ತು ವರ್ಷಗಳಿಂದ—

ಸಂಯುಕ್ತ ಕರ್ನಾಟಕ, ಕರ್ಮವೀರ ಮತ್ತು ಉಳಿದ **ಪತ್ರಿಕೆಗಳಿಗೆ** ಹಾಗು ಇತರ **ಸಂಸ್ಥೆಗಳಿಗೆ 'ಪಡಿಯಚ್ಚು'**ಗಳನ್ನು ತಯಾರಿಸಿ ಕೊಡುತ್ತ ಬಂದಿದೇವೆ.

ಈ ಪತ್ರಿಕೆಯಲ್ಲಿ ಕೊನೆಯ ಪುಟದಲ್ಲಿ ಪ್ರಸಿದ್ಧವಾದ ಮೈಸೂರ ಸರಕಾರದ ರೇಶ್ಮಿ ಕಾರಖಾನೆಯ ತ್ರಿವರ್ಣ (Tri-Colour Blocks) ಪಡಿಯಚ್ಚು ನಾವೇ ತಯಾರಿಸಿದೇವೆ, ಪ್ರತಿ ವಾರವೂ 'ಕರ್ಮವೀರ'ದ ಮುಖಪುಟದ ತ್ರಿವರ್ಣ 'ಪಡಿಯಚ್ಚು ನಮ್ಮದೇ ಇರುವದು !

ಐಡಿಯಲ್ ಫೋಟೋ ಝಿಂಕೋ ವರ್ಕ್ಸ

ಸಂಯುಕ್ತ ಕರ್ನಾಟಕ ಕಂಪೌಂಡ, ಹುಬ್ಬಳ್ಳಿ

ಪ್ರೊ. : ಎಮ್ ವಿ. ಘಾಟಕ

ದೀಪಾವಳಿ ಸರ್ವರಿಗೂ ಸುಖಪ್ರದವಾಗಲಿ

ಹುಬ್ಬಳ್ಳಿಯಲ್ಲಿ ★ ★ ★

ಶಾಂತ ಪರಿಸರದಲ್ಲಿ ಸುಖವಸತಿಗಾಗಿ

ಹುಬ್ಬಳ್ಳಿ ವುಡ್‌ಲ್ಯಾಂಡ್ಸ

ಬೋರ್ಡಿಂಗ, ಲಾಜಿಂಗ್ — ಕೇಶವಾಪೂರ ರಸ್ತೆ

- ದೊಡ್ಡ ಆವಾರದಲ್ಲಿ ಪುಷ್ಪೋದ್ಯಾನದ ಮಧ್ಯೆ
- ಆಧುನಿಕ ಸಾಕರ ಪೂರ್ಣವಾಗಿದೆ
- ಪ್ರತಿ ಕೋಣೆಗೂ ಸ್ನಾನದ ಮನೆ
- ದಿನವೆಲ್ಲ ಬಿಸಿನೀರು ತಣ್ಣೀರು ಪೂರೈಕೆ
- ಎಲ್ಲ ಕೋಣೆಗಳಿಗೂ ಟೆಲಿಫೋನ್

ಫೋನ್ 2247 ತಂತಿ Woodlands



ದೀಪಾವಳಿ ಎಲ್ಲರಿಗೂ ಶುಭಕರವಾಗಲಿ !

ಆರು ದಶಕಗಳ ಮಹತ್ವದ ಸಾಧನೆ !

ಸ್ಥಾಪನೆ : ೧೯೦೬

ಮಂಗಳೂರು
ಪಿ. ವಿ. ಎಸ್. ಬೀಡಿಗಳು

(ಪುತ್ತು ಸೇಟ್)

ದೀಪಾವಳಿಯ ಶುಭಾಶಯಗಳು!

ಭಾರತದ ವಿವಿಧ ಪ್ರದೇಶಗಳಲ್ಲಿ ವಾಸಿಸುವ ಜನರ ಅಭಿರುಚಿಗೆ ಅನುಗುಣವಾಗಿ ತಯಾರಿಸಲ್ಪಡುವ

ಪಿ. ವಿ. ಎಸ್. ಬೀಡಿಗಳು

ಇಂದಿಗೆ ವಿದೇಶಗಳಲ್ಲೂ ಖ್ಯಾತಿಗಳಿಸಿವೆ

ತಯಾರಕರು ;
ಪಿ. ವಿ. ಎಸ್. ಬೀಡೀಸ್ ಪ್ರೈವೇಟ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್ :
ಕೊಡಿಯಾಲಬೈಲ್ — ಮಂಗಳೂರು-೧

ಈ ದೀಪಾವಳಿಯಿಂದ ನಿಮಗೆ ಸುಖವಾಗಲಿ

ಚರ್ಮ ರೋಗ

ಬಿಳಿಯ ತೊನ್ನು, ಕಜ್ಜಿ, ತುರಿ, ಇಸಬು, ವ್ರಣ, ಮುಖದ ಮಡಿಮೆ, ಮುಂತಾದ ಚರ್ಮರೋಗಗಳು ನಿಮ್ಮನ್ನು ಬಹುಕಾಲ ಬಾದಿಸಿದ್ದರೆ ಇತರ ಚಿಕಿತ್ಸೆಗಳಿಂದ ನಿರಾಶರಾಗಿದ್ದರೆ ಇಲ್ಲಿ ಗುಣ ಪಡೆಯಿರಿ.

ಸಹಸ್ರಾರು ಮಂದಿ ನರಳಿ ನಿರಾಶರಾದವರು ಗುಣಹೊಂದಿದ್ದಾರೆ

ವಿವರಗಳಿಗೆ ಬರೆಯಿರಿ

ಕೃಪಾ ಹೋಮಿಯೋಪಥಿಸ್ಟ್ಸ

31 ಸಿಟಿ ಮಾರ್ಕೆಟ್ ಮಹಡಿ ಬೆಂಗಳೂರು—2 ಫೋ. ನಂ. **70654**

ದೀಪಾವಳಿಯ ಶುಭಾಶಯಗಳು



ಭದ್ರಾವತಿಯ ಶ್ರೇಷ್ಠ ದರ್ಜೆಯ ಚಿತ್ರಮಂದಿರ

ಜೈಶ್ರೀ ಟಾಕೀಸ್

ಜನ್ನಾಪೂರ ಭದ್ರಾವತಿ

ಪ್ರೊ : ಕೆ. ಎಂ. ಜವರಯ್ಯ ಅಂಡ ಸನ್ಸ

ಕನ್ನಡ ಸಾಹಿತ್ಯಕ್ಕೆ

ರಜತೋತ್ಸವವನ್ನು ಆಚರಿಸುತ್ತಿರುವ

ಭದ್ರಾ ಕೋಆಪರೇಟಿವ್ ಸ್ಟೋರ್ಸ್

ಭದ್ರಾವತಿ

ದೀಪಾವಳಿಯ ಶುಭದಿನದಂದು ಸಲ್ಲಿಸುವ

ಸಹಕಾರ

ಭದ್ರಾ ಕೋಆಪರೇಟಿವ್ ಸ್ಟೋರ್ಸ್ ಲಿ., ಭದ್ರಾವತಿ

ವೆಂಕಟೇಶ ಕ್ಲಾಥ್ ಸ್ಟೋರ್ಸ್, ಹುಬ್ಬಳ್ಳಿ

ದೀಪಾವಳಿಯ ಶುಭಾಶಯಗಳು

- ಸರ್ವೋತ್ಕೃಷ್ಟ
- ಮನಮೆಚ್ಚಿಗೆ
- ಯೋಗ್ಯ ಬೆಲೆ

ಟೆರಲಿನ್, ನಾಯಲನ್, ಚಿಕನ್ ವಾಯಿಲ್. ವಾಶ & ವೇರ ಮತ್ತು ಇತರ ವಿವಿಧ ಬಟ್ಟೆಗಳು. ಇಲಕಲ್ ಸೀರೆ ಪ್ರಿಂಟ ವಸ್ತ್ರಗಳು ಹಾಗೂ ನಮ್ಮಲ್ಲಿಯೇ ತಯಾರಿಸಿದ ಮನ ಮೆಚ್ಚಿಗೆಯ ಉಡುಪುಗಳು ಯೋಗ್ಯ ಬೆಲೆಗೆ ಸಿಗುತ್ತವೆ.

ಇಂದೇ ಸಂದರ್ಶಿಸಿರಿ !

ಬಿನ್ನಿ ಮಿಲ್ಲಿನ ಅಧಿಕೃತ ವ್ಯಾಪಾರಿಗಳು

ದಾಜಿಬಾನ ಪೇಟೆ, ಹುಬ್ಬಳ್ಳಿ

ಫೋನ ನಂ—2772

ದೀಪಾವಳಿಯ ಶುಭೇಚ್ಛೆಗಳು !

ಭಿಡೆ ಆ್ಯಂಡ್ ಸನ್ಸ ಪ್ರೈ. ಲಿ.

ಶಿವಾಜಿ ನಗರ :: ಸಾಂಗಲಿ

ನಾವು ಸಿಮೆಂಟ ಪಾಯಿಪ್‌ಗಳ "ಯಂತ್ರ ಸಾಮುಗ್ರಿ" ತಯಾರ ಮಾಡುತ್ತೇವೆ. ೪ ಇಂಚಿನಿಂದ ೪೮ ಇಂಚ್ ಸಾಯಿಜಿನವರೆಗೆ ಪಾಯಿಪಗಳನ್ನು ನೀವು ತಯಾರಿಸಬಹುದು. ನೀರಿನ ಸರಬರಾಜು, ನಿಂತನೀರಿನ ಸ್ವಚ್ಛತೆಗಾಗಿ ಇನ್ನಿತರ ಕೆಲಸಗಳಿಗೆ ಉಪಯೋಗವಾಗುತ್ತವೆ. ಈಗ್ಗೆ ಇಂಥ ಪಾಯಿಪಗಳು ಅತ್ಯಂತ ಅವಶ್ಯವಿರುತ್ತವೆ. ಈ ನಿಮಿತ್ತಕ್ಕಾಗಿ ನಮ್ಮ ಯಂತ್ರಸಾಮುಗ್ರಿಗಳಿಂದ ಸಿಮೆಂಟ ಪಾಯಿಪ್ ತಯಾರಿಸುವ ಉದ್ಯೋಗವನ್ನು ಆರಂಭಿಸಿರಿ. ನಿಮ್ಮ ಪ್ರಯತ್ನಕ್ಕೆ ಯಶ ದೊರೆಯಲೆಂದು ನಮ್ಮ ದೀಪಾವಳಿಯ ಶುಭೇಚ್ಛೆಗಳು.

JAYAMANI ENTERPRISES

Telephones Deodorizing and Fragrance Service

109, Pillanna Gardens. BANGALORE-5

Telephone Deodorizing and Fragrance Service is being felt necessity by the Telephone users to protect themselves from infections diseases, to keep the phones tidy and cleaning and to feel pleasantness while using the phones.

Since three years, we are attending the Telephone Services hygienically in the Banks, Companies, Factories Govt. Offices and their residences throughout Bangalore City and suburbs. using the medicated and Perfumed lints based on the chemical formula of Eminent Research Scholars. Our services are much appreciated by our customers and the Public.

Have you availed our Services yet. If not. please write to us for free demonstration and trial service.

ORGANIZING SUPERVISORS AT ALL CITIES ARE WANTED

The interested persons with local influence, canvassing capacity, talents, spirit and enthusiasm, only need to contact the Manager.

Wish you all a Happy Deepavali

Enquire for your Requirements in TILES, TIMBER & Packing Cases

with

BHARATHI TILE FACTORY and SAW MILLS, HASSAN

Phone { OFFICE: **217** / RES **438**   TELE: **"BHARATHI"**

WISH YOU ALL A HAPPY DEEPAVALI

CONTINENTAL SHIPPING & CLEARING AGENCY

13/14. SECOND LINE BEACH. **MADRAS-1**

WISH YOU ALL A HAPPY DEEPAVALI

TO BE OF BETTER SERVICE.

WE HAVE PLEASURE IN ANNOUNCING THE OPENING OF OUR BRANCH AT

92. III CROSS.
SRIRAMPURAM.
BANGALORE-21

For Prompt & efficient Service, IMPORTERS & EXPORTERS may kindly contact our resident Representative

(ON THE APPROVED LIST OF LEADING BANKS)

ಕೆನರಾ ಬ್ಯಾಂಕಿನಲ್ಲಿ ಹಣ ಉಳಿಸಿ
ಸುಖ ಸಮೃದ್ಧಿಯ
ದೀಪ ಬೆಳಗಿಸಿರಿ !

ಇದೀಗ ದೀಪೋತ್ಸವದ ಸಮಯ. ಎಲ್ಲರೂ ಕಲೆತು ಆನಂದ ಪಡುವ ಸಂದರ್ಭ. ಜೀವನವು ಆನಂದಮಯವಾಗಿರಲು ಭದ್ರತೆ ಇರಬೇಕು. ಉತ್ಸವದ ದಿನಗಳಿಗಾಗಿ, ಭವಿಷ್ಯಕ್ಕಾಗಿ— ಕೆನರಾ ಬ್ಯಾಂಕಿನಲ್ಲಿ ಸೇವಿಂಗ್ಸ್ ಖಾತೆಯನ್ನು ತೆರೆದು ಇಂದೂ. ಎಂದೆಂದೂ ಹಣ ಉಳಿಸಿರಿ. ಈ ದೀಪಾವಳಿಯೂ ನಿಮಗೆ ಸುಖ ಸಮೃದ್ಧಿಯನ್ನುಂಟುಮಾಡಲೆಂದು ಕೆನರಾ ಬ್ಯಾಂಕು ಹಾರೈಸುತ್ತದೆ. ನೆಮ್ಮದಿಯ ನಂದಾದೀಪ ಸದಾ ಜ್ವಲಿಸುತ್ತಿರುವಂತೆ ಮಾಡಲು ಕೆನರಾ ಬ್ಯಾಂಕು ನಿಮಗೆ ನೆರವಾಗುವುದು.

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಲೈಟ್‌ಹೌಸ್ ಹಿಲ್, ಮಂಗಳೂರು.
ಆಡಳಿತ ಆಫೀಸು : 112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು.

ಆಧನ ಸಂಪತ್ತುಗಳು 123 ಕೋಟಿಗಿಂತಲೂ ಅಧಿಕ
240 ಕ್ಕಿಂತಲೂ ಹೆಚ್ಚು ಶಾಖೆಗಳು
ಜಗತ್ತಿನಾದ್ಯಂತ ಪ್ರತಿನಿಧಿಗಳು

SISTA'S CB-30 KAN

ನೂತನ ವರ್ಷಾಭಿನಂದನೆಗಳು

○ ಫಿಲ್ಮ ಕಂಪನಿ
○ ಗರಬಾಪಾರ್ಟಿ
○ ಶಾಲೆ ಗದರಿಂಗ

ನಾಟಕಗಳಿಗೆ ಬೇಕಾಗುವ
...ಸಾಮಾನುಗಳು

○ ನಾಟಕ ಡ್ರೆಸ್ ○ ... ಪೌಂಚೆ
○ ದಾಡಿ ಮೀಶೆ ○ ... ರಿಮುಕ ಖಡ್ಗ
○ ಸ್ತ್ರೀಪುರುಷರ ಟೋಪಣ ○ ಎಲ್ಲನಮೂನೆಯ ಪಗಡಿಗಳು
ಗಂಗಾವನ: ದೇವಮಂದಿರ ..., ವಸ್ತ್ರ-ಜರಿಮುಕುಟ
ಜರಿಹಾರ-ಪಗಡಿ ವಗೈರೆ

ಭಾರತದ ಆದ್ಯ ವೇಷ ಭೂಷಾಕಾರರು

ಓಧವಜಿ ಮೂಲಜಿ ಡ್ರೆಸ್‌ವಾಲಾ
ಭೂಲೇಶ್ವರ. ಮುಂಬಯಿ-2

ಗಂಗಾವನದ ಆರ್ಡರಿನೊಂದಿಗೆ ಈ ಕಟಿಂಗ ಕಳಿಸುವವರಿಗೆ
೬೪% ಕಮೀಶನ್

ಇಂಗ್ಲೀಷ, ಹಿಂದಿ ಬೆಲೆ ಸೂಚಿ ಕೇಳಿರಿ. ಫೋನ್ : 23359

ತಮ್ಮ ಬೇಡಿಕೆಯ ೨೫%ಮುಂಗಡ ಕಳಿಸಬೇಕು.

Wish you a Happy Dipavali

TYPERITERS CALCULATORS AND ADDING MACHINES

Please Contact us for HALDA Typewriters in different sizes, FACIT Calculators and Adding Machine and JAYRAY Portable Typewriters

HANGAL AUTOMOBILES, HUBLI

Distributors :

For Halda Typewriters, Facit Calculators and Adding Machines and Jaykay Portable Typewriters

Telephone No- : **3274** Telegrams , **FAIRDEAL**

ದೀಪಾವಳಿಯ ಶುಭಾಶಯಗಳು

(ಸ್ಥಾಪನೆ: ೧೯೨೫)

ರಬ್ಬರ್ ಮೊಹರುಗಳಿಗೆ
ಭೇಟಿ ಕೊಡಿ,
ಅಥವಾ
ಬರೆಯಿರಿ



ಸ್ಥಾಪನೆ: ೧೯೨೫
ಯಜಮಾನ್ ಗುಜ್ಜಾರಪ್ಪ ಅಂಡ್ ಸನ್ಸ್

ರಬ್ಬರ್ ಮೊಹರುಗಳಿಗೆ
ಭೇಟಿ ಕೊಡಿ
ಅಥವಾ ಬರೆಯಿರಿ,

ಯಜಮಾನ್ ಗುಜ್ಜಾರಪ್ಪ ಆಂಡ್ ಸನ್

ಬಳೇಪೇಟೆ, ಬೆಂಗಳೂರು—೨

ನಮ್ಮೆಲ್ಲ ಗ್ರಾಹಕರಿಗೆ ದೀಪಾವಳಿಯ ಶುಭಾಶಯಗಳು

ಫೋನ : 71801 ಸ್ಥಾಪನೆ : 1933
ಟೆಲಿಗ್ರಾಮ್ಸ್ : 'ವೆಸ್ಟನ್ಯೂಜ'

ಖರೀದಿ ಹಾಗೂ ಮಾರಾಟ

ರದ್ದಿ ಕಾಗದ ವ್ಯಾಪಾರಿಗಳು

ಶ್ರೀ ಸತ್ಯನಾರಾಯಣ ಸ್ಟೋರ್ಸ್

ನಂ. 16 ಸ್ಪ್ರಿಂಗ ಬಜಾರ ನ್ಯೂ ಮಾರ್ಕೆಟ್
ಬೆಂಗಳೂರ—2 ಪೋಸ್ಟ್ ಬಾಕ್ಸ್ ನಂ : 677

ನಮ್ಮ ಗ್ರಾಹಕರಿಗೆಲ್ಲ
ಸುಖದಾಯಕ ದೀಪಾವಳಿ
ಶುಭಾಶಯಗಳು

Happy Deepavali
to all our Patrons!

ನಿಮ್ಮ ಘನತೆಗೆ
ಅವಶ್ಯವಾದದ್ದು

ಶ್ರೀರಾಮ
ಸಿಲ್ಕ್ಸ

ಟೆರೀನ್

ಸೂಟಿಂಗ್
ನೋಡಲು ದಬೂತಿ
ಆದರೆ
ಬೆಲೆ ಮಿತವಾಗಿದೆ

ಅಂದಕ್ಕೆ ಅನುಕೂಲಕ್ಕೆ
ತಕ್ಕ ವಿವಿಧ
ನಮೂನೆಯಲ್ಲಿವೆ

ಹಂಚಿಕೆದಾರರು :
ಟೆರಿಲೀನ್ ಟ್ರೇಡರ್ಸ್
೧೩೪, ಅವೆನ್ಯೂ ರಸ್ತೆ, ಬೆಂಗಳೂರ-೨

ಮಾರಾಟದ ಏಜೆಂಟರು ;
ಶಾಂತಿ ಏಜನ್ಸೀಜ
ಚಿಕ್ಕ ಪೇಟೆ, ಬೆಂಗಳೂರ-೨

A Compliments
to your personality

Shree RAM
SILKS

TERENE

SUITINGS

EXPENSIVE IN LOOK
but
MODERATELY PRICED
in
A WIDE VARIETY
for
STILE & COMFORTS

Distributors:
Terylene Traders
134. Avenue Road
BANGALORE-2

Selling Agents :
Shanthi Agencies
Chickpet,
BANGALORE-2

ಸರ್ವರಿಗೂ ದೀಪಾವಳಿ ಶುಭಾಶಯಗಳು

ಬೆಂಗಳೂರು ನಗರದಲ್ಲಿ
ಮನೆ ವಾತಾವರಣದ
ಏಕೈಕ ಭೋಜನ ಗೃಹ

ಪರಶುರಾಮ ಬೋರ್ಡಿಂಗ ಹೋಂ

ಬೋರ್ಡಿಂಗ್ ಲಾಡ್ಜಿಂಗ್ ಮತ್ತು ಟ್ರಾವಲ್

ಏಜಂಟರು:

1ನೇ ಕ್ರಾಸ್. ಗಾಂಧಿ ನಗರ, ಬೆಂಗಳೂರು-9

ಫೋನ: 27104 ಮಾಲೀಕರು: ಆರ್. ಎಸ್. ಮರಾಠೆ

ನಿಮ್ಮ ಸರಕುಗಳ ಸಾಗಾಟಕ್ಕೆ ವಿಚಾರವೇ ?

ಶಿವಮೊಗ್ಗಾ ಜಿಲ್ಲೆಯ— ಶಿಕಾರಿಪೂರ, ಶಿರಾಳಕೊಪ್ಪ,ಸೊರಬ.
ಆನವಟ್ಟಿ ಮೊದಲಾದೆಡೆಗಳಲ್ಲಿ—
ಕ್ಲಿಪ್ತ ಸಮಯಕ್ಕೆ, ಯೋಗ್ಯ ಬೆಲೆಯಲ್ಲಿ,
ಯೋಗ್ಯ ಸಂರಕ್ಷಣೆಯೊಂದಿಗೆ, ಸರಕು ಸಾಗಾಟಕ್ಕೆ—

ಶ್ರೀ ಕೊಟ್ಟುರೇಶ್ವರ ಲಾರಿ ಟ್ರಾನ್ಸಪೋರ್ಟ

ಇಸ್ಲಾಮ್‌ಪೇಟೆ — ದಾವಣಗೆರೆ ಸಿಟಿ
ಇವರನ್ನು ಸಂಪರ್ಕಿಸಿರಿ—

ಸರ್ವರಿಗೂ ದೀಪಾವಳಿಯ ಶುಭಾಶಯಗಳು

ಸ್ತ್ರೀಯರ ಬೆಡಗು-ಸೌಂದರ್ಯ ಅವರ ಉಡುಪುಗಳಲ್ಲಿದೆ
ನವನಾಗರಿಕತೆಗೆ ಒಪ್ಪುವ ನವಕೋಮಲಾಂಗಿಯರ ಮನಮೋಹಕ

● ಶೀರೆಗಳು ಹಾಗೂ ಪತ್ತಲಗಳು ●

ಡಾಯಮಂಡ್ ಟೆಕ್ಸಟಾಯಿಲ್ ವರ್ಕ್ಸ

ಫೋನ್ ನಂ. ೯೭

ಈಚಲಕರಂಜಿ (ಜಿಲ್ಲಾ: ಕೊಲ್ಹಾಪುರ)

Diamond Textile Works
Ichalkaranji (*Kolhapur*)

ಪಕ್ಕಾಬಣ್ಣ. ಭರಪೂರ ಉದ್ದಗಲ, ೮೦ ನಂಬರಿನ ಹೊಸ
ಡಿಜಾಯಿನಗಳ ನಮ್ಮ ಪತ್ತಲಗಳು ಎಲ್ಲೆಡೆ ಕೀರ್ತಿಪಡೆದಿವೆ.

ದೀಪಾವಳಿಯ ಅಭಿನಂದನೆಗಳು

ನಮ್ಮೆಲ್ಲ ಗ್ರಾಹಕರಿಗೂ ಹಿತೈಷಿಗಳಿಗೂ ದೀಪಾವಳಿಯು ಶುಭದಾಯಕವಾಗಲಿ

ಬಿ. ಡಿ. ಘೋಡಕೆ ಆ್ಯಂಡ ಸನ್ಸ

ರಾಯಿಸ್ ಮಿಲ್ಲ, ಹುಬ್ಬಳ್ಳಿ



ರಾಯಿಸ್ ಮಿಲ್
- ಗಟ್ಟಿಮುಟ್ಟಾದ ರಚನೆ
- ಮೈಸೂರ ರಾಜ್ಯದಲ್ಲಿಯ ಕೋ-ಆಪ್. ಸೊಸೈಟಿಗಳಿಗೆ ಸಪ್ಲಾಯ ಆದಂಥವು.
- ಕರ್ನಾಟಕ ಮಹಾರಾಷ್ಟ್ರಗಳಲ್ಲಿ ಪ್ರಸಿದ್ಧ ಹೊಂದಿವೆ.
- ತ್ವರಿತ ಡಿಲೆವ್ಹರಿ ಕೊಡಲಾಗುವದು
- ಲೇಟೆಸ್ಟ್ ಮಾಡಲ್ ಇಂಪ್ರೂವ್ಹಡ ರಾಯಿಸ್ ಮಿಲ್



ಅವಲಕ್ಕಿ ಮಶಿನ್, ಅಗ್ರಿಕಲ್ಚರ ಇಂಪ್ಲೆಮೆಂಟ್ಸ,
ಪ್ಯಾಡಿ ಡ್ರಾಯರ, ರಾಯಿಸ್ ಮಿಲ್ಲ ಮತ್ತು ಮಶಿನರಿ
ಸ್ಪೇರ ಪಾರ್ಟುಗಳ ತಯಾರಕರು

- ಪ್ಯಾಡಿ ಡ್ರಾಯರ
- ಭತ್ತ ವ ಕುಚಕಲ ಭತ್ತ
- ತೊಗರಿ ವ ಕಡ್ಲಿ ವಗೈರೆಗಳಿಗೆ ಅತೀವ ಅವಶ್ಯ

ಹೆಚ್ಚಿನ ವಿಷಯಕ್ಕೆ ವಿಚಾರಿಸಿರಿ:

ಮಾ॥ ಬಿ. ಡಿ. ಘೋಡಕೆ ಮತ್ತು ಸನ್ಸ

ಅಯೋಧ್ಯಾ ರೋಡ, ಹಳೇಹುಬ್ಬಳ್ಳಿ, ಹುಬ್ಬಳ್ಳಿ (Mysore State) (S. C. Rly.) ಫೋನ್: 3748

ನೋವೇ?
2 ಅನಾಸಿನ್‌ನಿಂದ ಶೀಘ್ರ ಉಪಶಮನ

ಮೈಕೈನೋವು ಒಂದೇ ಆಗಿ ಬರುವುದಿಲ್ಲ. ಆದರೊಡನೆ ಬೇರೆ ತೊಂದರೆಗಳೂ ಕಾಣಿಸಿಕೊಳ್ಳುತ್ತವೆ...ಮಾನಸಿಕ ಉದ್ವೇಗ, ನಿರುತ್ಸಾಹ ಮತ್ತು ದಣಿವು. ಇವೆಲ್ಲ ನಿಮ್ಮ ನೋವನ್ನು ಇನ್ನಷ್ಟು ಹೆಚ್ಚಿಸುತ್ತವೆ ಮತ್ತು ಮನಸ್ಸಿಗೆ ತುಂಬ ಕಳವಳವನ್ನುಂಟುಮಾಡುತ್ತವೆ. ಅಂಥ ಪರಿಸ್ಥಿತಿಯಲ್ಲಿ ಕೂಡಲೇ 2 ಅನಾಸಿನ್ ತೆಗೆದುಕೊಳ್ಳಿರಿ. ಅದು ಹೇಗೆ ಶೀಘ್ರವಾಗಿ 4 ವಿಧಗಳಲ್ಲಿ ಪರಿಣಾಮವನ್ನುಂಟುಮಾಡುತ್ತದೆ ನೋಡಿರಿ:

1. ಅನಾಸಿನ್ ನೋವನ್ನು ಉಪಶಮನಗೊಳಿಸುತ್ತದೆ–ಬಲು ಬೇಗ
2. ಅನಾಸಿನ್ ದಣಿವನ್ನು ಹೋಗಲಾಡಿಸುತ್ತದೆ–ಬಲು ಬೇಗ
3. ಅನಾಸಿನ್ ನಿರುತ್ಸಾಹವನ್ನು ದೂರಗೊಳಿಸುತ್ತದೆ–ಬಲು ಬೇಗ
4. ಅನಾಸಿನ್ ಮಾನಸಿಕ ಉದ್ವೇಗವನ್ನು ನಿವಾರಿಸುತ್ತದೆ–ಬಲು ಬೇಗ

ಇದಕ್ಕೆ ಕಾರಣವೇನೆಂದರೆ, ಡಾಕ್ಟರುಗಳ ಕೌಶಲಪೂರ್ಣ ಪ್ರಿಸ್ಕ್ರಿಪ್ಶನ್‌ನಂತೆ ಅನಾಸಿನ್ ಔಷಧಿಗಳ ಒಂದು ಸಂಯೋಜನೆಯಾಗಿದೆ. ನಮ್ಮ ದೇಶದಲ್ಲಿ ಹೆಚ್ಚು ಜನರು ನೋವನ್ನು ನಿವಾರಿಸುವ ಬೇರೆ ಯಾವ ಔಷಧಿಗಿಂತಲೂ ಹೆಚ್ಚಾಗಿ ಅನಾಸಿನ್ ತೆಗೆದುಕೊಳ್ಳುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಇನ್ನೊಮ್ಮೆ ಮೈಕೈನೋವು ಉಂಟಾದರೆ ಅನಾಸಿನ್ ಸೇವಿಸಿರಿ. ಅನಾಸಿನ್ ತಲೆನೋವು, ಶೀತ, ಫ್ಲೂ, ಮತ್ತು ಹಲ್ಲುನೋವು–ಇವನ್ನೂ ಉಪಶಮನಗೊಳಿಸುತ್ತದೆ. ಆದ್ದರಿಂದ, ಅನಾಸಿನ್‌ನ್ನು ಯಾವಾಗಲೂ ಬಳಿಯಲ್ಲಿಟ್ಟುಕೊಳ್ಳಿರಿ.

ಯಾವಾಗಲೂ ಅನಾಸಿನ್‌ನ್ನೇ ಕೊಳ್ಳಿರಿ.

ಅನಾಸಿನ್



ಬಹಳ ಒಳ್ಳೆಯದು
ಏಕೆಂದರೆ ಅದು 4 ವಿಧಗಳಲ್ಲ
ಪರಿಣಾಮವನ್ನುಂಟುಮಾಡುತ್ತದೆ

Regd. user: Geoffrey Manners & Co. Ltd.

ದೀಪಾವಳಿಯ ಶುಭಾಶಯಗಳೊಂದಿಗೆ....

ಬಾರಾಬತಿ ಸ್ಟೇಡಿಯಂ ಕಟಕ

ರೂ. 1 ಕ್ಕೆ ರೂ. ಗಳು 1,10,000 ಗೆಲ್ಲಿರಿ

“ಬಾರಾಬತಿ ರಾಫಲ್”

(ಒರಿಸ್ಸಾ ಸರಕಾರದಿಂದ ಮಾನ್ಯತೆ ಪಡೆದಿದೆ)

ಟಿಕೆಟ್ 1 ಕ್ಕೆ ರೂ. 1–00 ಅಥವಾ 15 ಟಿಕೆಟ್ ಗಳ ಪುಸ್ತಕ 1 ಕ್ಕೆ ರೂ. 10–00

ಕ್ಲೋಸಿಂಗ್ : 15–11–67 ಡ್ರಾಯಿಂಗ್ : 16–12–67

1 ಪ್ರಥಮ ಬಹುಮಾನ ರೂ. 1,10,000 * 2 ದ್ವಿತೀಯ ಬಹುಮಾನ ರೂ. 27,500
3 ತೃತೀಯ ಬಹುಮಾನ ರೂ 13,750 ಹಾಗೂ 999 ಇತರ ಬಹುಮಾನಗಳಿವೆ.

ಅಂಚೆ ಮೂಲಕ ಟಿಕೆಟ್ ಬಯಸುವವರು ಟಿಕೆಟ್ ಬೆಲೆಯೊಂದಿಗೆ ೧೫ ಪೈಸೆ ಹೆಚ್ಚಾಗಿ ಸೇರಿಸಿ ಮನಿಯಾರ್ಡರ್ ಮೂಲಕ ಹಣ ಕಳುಹಿಸಿರಿ.

ಇಡಿ ಭಾರತದಲ್ಲಿಯೇ ಅಧಿಕ ಪ್ರಮಾಣದಲ್ಲಿ ರ್ಯಾಫಲ್ ಟಿಕೆಟ್‌ಗಳನ್ನು ಮಾರಾಟ ಮಾಡುವ ಏಕಮಾತ್ರ ಸುವ್ಯವಸ್ಥಿತ ಸಂಸ್ಥೆ

ಮನೋರಂಜನ್ ಎಂಟರ್‌ಪ್ರೈಸಸ್

ನಂ. 30 5ನೇ ಮೇಯಿನ್ (ಜಗದೇವ ಹಾಸ್ಟೆಲ್ ಸಮೀಪ)
ಗಾಂಧಿ ನಗರ, ಬೆಂಗಳೂರು -9

ನೆನಪಿನಲ್ಲಿಡಿ “ಮನೋರಂಜನ್” ನಿಮ್ಮ ಪಾಲಿಗೆ ಭಾಗ ಸ್ನೇಹಿತ

ದೀಪಾವಳಿಯ ಶುಭಾಶಯಗಳು

ನಮ್ಮ ಗ್ರಾಹಕರಿಗೆ ದೀಪಾವಳಿಯು ಶುಭದಾಯಕವಾಗಲಿ !

ಇದೀಗ ಪ್ರಕಟವಾಗಿವೆ

೧]	ಮೈಸೂರು ಈಡು (ವತ್ತಿ) ದಾರರ ಕಾಯದೆ ೧೯೬೧ ನಿಯಮಗಳು ೧೯೬೬	೧—೫೦
೨]	ಮೈಸೂರು ಸಾವಕಾರಿ ಕಾಯದೆ ೧೯೬೧ ಮತ್ತು ನಿಯಮಗಳು. ೧೯೬೫	೧—೭೫
೩]	ಮೈಸೂರು ಪೋಲೀಸು ಕಾಯಿದೆ. ” (ಹೊಸ ಆವೃತ್ತಿ)	೪—೦೦
೪]	ಮೈಸೂರು ಪೋಲೀಸ ರೂಲ್ಸ ”	೧—೦೦
೫]	ಇಂಡಿಯನ್ ಪೀನಲ್ ಕೋಡ. (೨ ನೇ ಮುದ್ರಣ) ”	೪—೫೦
೬]	ಇಂಡಿಯನ್ ಎವ್ಹಿಡೆನ್ಸ ಆ್ಯಕ್ಟ.	೩—೨೫

ಪೋಸ್ಟೇಜ್ ಪ್ರತ್ಯೇಕ-

ಕ್ರಿಮಿನಲ್ ಪ್ರೊಸಿಜರ ಕೋಡ ಮೈಸೂರು
ತಿದ್ದುಪಡೆ ಸಹಿತ ಅಚ್ಚಿನಲ್ಲಿ

Phone —8123

ಆಕಳವಾಡಿ ಬುಕ್ಕ ಡಿಪೋ ಧಾರವಾಡ

ದಿ ವೈಶ್ಯ ಬ್ಯಾಂಕ್ ಲಿಮಿಟೆಡ್

ಸ್ಥಾಪಿತ: 1930 — — ಷೆಡ್ಯೂಲ್ಡ ಬ್ಯಾಂಕ್

ರಿಜಿಸ್ಟರ್ಡ ಕಛೇರಿ

ಅವೆನ್ಯೂ ರಸ್ತೆ — — — — — — ಬೆಂಗಳೂರು ಸಿಟಿ

ಅಧ್ಯಕ್ಷರು: ಶ್ರೀ ಯಾದಾಳಂ ಎಸ್. ಗೋಪಾಲ ಕೃಷ್ಣಶೆಟ್ಟಿ

ಎಲ್ಲ ಸೌಲಭ್ಯಗಳನ್ನೀಡುವ ಸಕಲರ ಬ್ಯಾಂಕ್

ಉಳಿತಾಯಗಳ ಮೇಲೆ ಲಾಭದಾಯಕವಿರಲು ಹೆಚ್ಚು ಬಡ್ಡಿದರಗಳ ಆಕರ್ಷಕ ಯೋಜನೆಗಳಿವೆ.

ಫಿಕ್ಸೆಡ್ ಡಿಪಾಜಿಟ್‌ಗಳು	ಕ್ಯುಮುಲೇಟಿವ್ ಡಿಪಾಜಿಟ್‌ಗಳು	ವಿಶೇಷ ಸೇವಿಂಗ್ಸ್ ಡಿಪಾಜಿಟ್‌ಗಳು
ಬಡ್ಡಿ ಸಾಲಿಯಾನ	ಬಡ್ಡಿ ಸಾಲಿಯಾನ	ಬಡ್ಡಿ ದಿನದ ಉಳಿಕೆ ಮೇಲೆ
7.75% ವರೆವಿಗೆ	7.81% ವರೆಗೆ	5%

ನಮ್ಮ ಪ್ರಗತಿ ಡಿಪಾಜಿಟ್ ಯೋಜನೆ ಯು ನಿಮ್ಮ ಹಣವು ಬೇಗ ವೃದ್ಧಿಯಾಗಲು ಸಹಾಯ ಮಾಡುವುದು.
ನಿಮ್ಮ ಮನೆಗೇ ಬಂದು ಕಂತುಗಳನ್ನು ತೆಗೆದುಕೊಳ್ಳುತ್ತೇವೆ.
ಹೆಚ್ಚಿನ ವಿವರಗಳನ್ನು ನಮ್ಮ ಯಾವುದೇ ಕಚೇರಿಯಿಂದ ಪಡೆಯಬಹುದು.

ಜೆ. ಸೂರ್ಯನಾರಾಯಣ ಚೆಟ್ಟಿ
ಜನರಲ್ ಮ್ಯಾನೇಜರ್

ಈ ಶುಭ ದೀಪಾವಳಿ ದಿನ ನಮ್ಮ ಎಲ್ಲ
ಪೋಷಕರಿಗೂ ಹೃತ್ಪೂರ್ವಕ ಶುಭಾಶಯಗಳು.

ರಾಜೇಶ್ ಟೆಕ್ಸ್ಟೈಲ್ ಮಿಲ್ಸ್ ಲಿ., ಬೊಂಬಾಯಿ

ಮತ್ತು

ದಿ ರೋಹಿತ್ ಮಿಲ್ಸ್ ಲಿಮಿಟೆಡ್, ಅಹಮದಾಬಾದ್

ಅತ್ಯಂತ ಆಧುನಿಕವಾದ ಹಾಗೂ ಎಲ್ಲ ಅಭಿರುಚಿಗಳನ್ನು
ಪೂರೈಸುವ ಶ್ರೇಷ್ಠ ಹತ್ತಿಬಟ್ಟೆ ತಯಾರಕರು

- ಪ್ರಿಂಟಾದ ಸ್ಯಾನ್‌ಫೊರೈಸ್ಡ್ ಪಾಪ್ಲಿನ್‌ಗಳು
- ಸೂಟಿಂಗ್‌ಗಳು—ವಾಷ್ ಅಂಡ್ ವೇರ್,
- ಪ್ರಿಂಟಾದ ಸೂಟಿಂಗ್‌ಗಳು—ವಾಷ್ ಅಂಡ್ ವೇರ್
- ಬಣ್ಣದ ಹಾಗೂ ಬ್ಲೀಚ್ ಆದ ಪಾಪ್ಲಿನ್‌ಗಳು—
  ವಾಷ್ ಅಂಡ್ ವೇರ್
- ಸ್ಕ್ರೀನ್ ಪ್ರಿಂಟ್ ವಾಯಿಲ್‌ಗಳು ಮತ್ತು
  ಸೀರೆಗಳು

ದಯವಿಟ್ಟು ನಮ್ಮ ಸಂಪರ್ಕ ಪಡೆಯಿರಿ:

ಕೇ ಪೀ ಸೀ ಇನ್‌ವೆಸ್ಟ್‌ಮೆಂಟ್ಸ್

ದಿಬ್ಬೂರ್ ನಿವಾಸ್, ಡಿ. ಎಸ್. ಲೇನ್, ಚಿಕ್ಕಪೇಟೆ, ಬೆಂಗಳೂರು-೨

ಮೈಸೂರು ರಾಜ್ಯ ಹಾಗೂ ರಾಯಲಸೀಮೆ ಏಜಂಟರು

ದೀಪಾವಳಿಯ ಶುಭಾಶಯಗಳು

ಮೂವತ್ತು ಮಾರ್ಕಿನ ಬೀಡಿಗಳು

ದಿ ಭಾರತ ಬೀಡಿ ವರ್ಕ್ಸ್, (ರಿಜಿಸ್ಟರ್ಡ) ಕಾರ್ಕಳ [ದ. ಕ.]

ಕ ಶಿಕ್ಷಣ ಟ್ರಸ್ಟಿನ ಒಡೆತನದ ಈ ಪತ್ರಿಕೆಯನ್ನು ಹುಬ್ಬಳ್ಳಿಯಲ್ಲಿ ಕೊಪ್ಪೀಕರ ಬೀದಿಯಲ್ಲಿರುವ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ
. ಜಿ. ಗುತ್ತಲ ಅವರು ಮುದ್ರಿಸಿ ಅಲ್ಲಿ ಮತ್ತು ಬೆಂಗಳೂರು ರೆಸಿಡೆನ್ಸಿ ರೋಡಿನಲ್ಲಿರುವ ಸಂಯುಕ್ತ ಕರ್ನಾಟಕ ಕಾರ್ಯಾಲಯದಲ್ಲಿ ಪ್ರಕಟಿಸಿದರು.

KARMAVEER 3-11-67 Licence No. 38 Licensed to post without prepayment
Registered with the Registrar of News Papers of India under No. 3558/57 Regd. No.